ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ

ಕೆ. ಮಹೇಶ

ಮಾರ್ಗದರ್ಶಕರು

ಡಾ. ಕೆ.ಎಂ. ಸುರೇಶ್

ನಿರ್ದೇಶಕರು

ವಸ್ತುಸಂಗ್ರಹಾಲಯ ವಿಭಾಗ

ವಸ್ತುಸಂಗ್ರಹಾಲಯ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೨

ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು

ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕ

ಕೆ. ಮಹೇಶ್

ಮಾರ್ಗದರ್ಶಕರು

ಡಾ. ಕೆ.ಎಂ.ಸುರೇಶ್

ನಿರ್ದೇಶಕರು

ವಸ್ತುಸಂಗ್ರಹಾಲಯ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ವಸ್ತುಸಂಗ್ರಹಾಲಯ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೨



ಕೃಷ್ಣದೇವರಾಯ ವಿಗ್ರಹ, ಅನಂತಶಯನಗುಡಿ

ದೃಢೀಕರಣ ಪತ್ರ

ಶ್ರೀ ಕೆ.ಮಹೇಶ್ ಇವರು 'ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ವಸ್ತುಸಂಗ್ರಹಾಲಯ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೨೮.೧೨.೨೦೦೨
ಸ್ಥಳ : ವಿದ್ಯಾರಣ್ಯ

(ಡಾ. ಕೆ.ಎಂ.ಸುರೇಶ್)
ಮಾರ್ಗದರ್ಶಕರು
ನಿರ್ದೇಶಕರು
ವಸ್ತುಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪ್ರಮಾಣ ಪತ್ರ

'ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಕೆ.ಎಂ.ಸುರೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ವಸ್ತುಸಂಗ್ರಹಾಲಯ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೮.೧೨.೨೦೦೨

(ಕೆ. ಮಹೇಶ್)

ಸಂಶೋಧಕ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ, ಕುಲಸಚಿವರಾದ ಡಾ.ಕೆ.ವಿ.ನಾರಾಯಣ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಡಾ. ಕರಿಗೌಡ ಬೀಚನಹಳ್ಳಿ ಮತ್ತು ಹಿಂದಿನ ಕುಲಪತಿಗಳಾಗಿದ್ದ ಡಾ. ಎಂ.ಎಂ.ಕಲಬುರ್ಗಿ, ಕುಲಸಚಿವರಾಗಿದ್ದ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಅಧ್ಯಯನಾಂಗದ ನಿರ್ದೇಶಕರಾಗಿದ್ದ ಶ್ರೀ ಬಾಲಸುಬ್ರಹ್ಮಣ್ಯ, ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನನ್ನಲ್ಲಿ ಸಂಶೋಧನಾ ಪ್ರವೃತ್ತಿ ಬೆಳಸಿ ಅಧ್ಯಯನದಲ್ಲಿ ತೊಡಗುವಂತೆ ಮಾಡಿ ಪ್ರಬಂಧದ ರಚನೆಯ ಪ್ರತಿಹಂತದಲ್ಲೂ ಸೂಕ್ತ ಸಲಹೆಗಳನ್ನು ನೀಡಿ ಪ್ರೋತ್ಸಾಹಿಸಿ ಮಾರ್ಗದರ್ಶನ ಮಾಡಿದ ಡಾ. ಕೆ.ಎಂ.ಸುರೇಶ ಅವರಿಗೆ ನಾನು ಚಿರಋಣಿ.

ಅಧ್ಯಯನಕ್ಕೆ ಪ್ರೋತ್ಸಾಹ ನೀಡಿದ ಡಾ. ದೇವರಕೊಂಡಾರೆಡ್ಡಿ, ಡಾ. ಚೆನ್ನಸ್ವಾಮಿ ಸೋಸಲೆ, ವೆಂಕಟಪ್ಪ ಗಿರಿಯಪ್ಪ ಅವರಿಗೆ, ಅಧ್ಯಯನದ ಸಂದರ್ಭದಲ್ಲಿ ಹಸ್ತಪ್ರತಿಯನ್ನು ಗಮನಿಸಿ ಕೆಲವು ಸಲಹೆ ಸೂಚನೆಗಳನ್ನು ನೀಡಿದ ಡಾ. ಎ.ಚೆನ್ನಪ್ಪ, ಡಾ. ಎಂ.ನಾಗರಾಜ್, ಡಾ. ವಿ.ಸಿ.ಮಾರುತಿ, ಡಾ. ಜಿ.ಉಮೇಶ, ಸಿ.ಅಜ್ಜಪ್ಪ ಅವರಿಗೆ,

ಪ್ರೀತಿ ವಿಶ್ವಾಸ ತೋರಿದ ಯು.ಮಲ್ಲಿಕಾರ್ಜುನ, ಎಂ.ಕೊಟ್ರೇಶ್, ಕೆ.ಆರ್.ಜೆ. ರಾಜಕುಮಾರ್, ಬಿ.ಎ.ರಾಜಕುಮಾರ್, ಕರಿಸಿದ್ಧನಗೌಡ, ಯರಿಸ್ವಾಮಿ, ಶಿವಕುಮಾರ, ಗ್ಯಾನಪ್ಪ ಬಡಿಗೇರ ಅವರಿಗೆ,

ಆತ್ಮೀಯ ಗೆಳೆಯರಾದ ಜಾಜಿ ದೇವೇಂದ್ರಪ್ಪ, ಯು.ಜಯಣ್ಣ, ಸಣ್ಣಪಾಪಯ್ಯ, ಸತೀಶ್ ಪಾಟೀಲ, ಕೆ. ಸತೀಶ, ಬದ್ರಿ, ಶಿವಪುತ್ರ, ಶಿವಾನಂದ, ಗೋವರ್ಧನರೆಡ್ಡಿ, ಮೆಹಬೂಬ್ ಬಾಷ, ಖಾಸಿಂಪೀರ್, ಕಾಳೀಪ್ರಸಾದ, ಶ್ರೀನಿವಾಸ್, ಟಿ.ಬಸವರಾಜ, ಎಚ್.ಎಂ.ಬಸವರಾಜ, ಸುಭಾಷ್ ದೊಡ್ಡಮನಿ, ರಾಘು, ಸಿದ್ಧರಾಮೇಶ, ಚಂದ್ರು, ನಿಸಾರ್ ಅವರಿಗೆ, ಅನೇಕ ಸಂದರ್ಭಗಳಲ್ಲಿ ಆರ್ಥಿಕ ನೆರವು ನೀಡಿದ ರಾಘವೇಂದ್ರಶೆಟ್ಟಿ, ಜಯರಾಮ್, ಶಿವರಾಜ್, ಅಕ್ಬರ್, ರಾಮಸ್ವಾಮಿ, ಸತ್ಯನಾರಾಯಣ, ಬಸವನಗೌಡ ಅವರಿಗೆ,

ಅಧ್ಯಯನಕ್ಕೆ ಅನುಕೂಲವಾಗಲು ಕ್ಷೇತ್ರಕಾರ್ಯದಲ್ಲಿ ಅನೇಕ ಮಾಹಿತಿಗಳನ್ನು ನೀಡಿದ ಎಲ್ಲಾ ದೇವಾಲಯಗಳ ಅರ್ಚಕವರ್ಗ ಮತ್ತು ದೇವಾಲಯದ ಮಂಡಳಿ ಅವರಿಗೆ, ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯ ಮೈಸೂರು, ಮಿಥಿಕ್ ಸೊಸೈಟಿ, ಐ.ಸಿ.ಎಚ್.ಆರ್. ಮತ್ತು ಕನ್ನಡ ವಿಶ್ವವಿದ್ಯಾಲಯ ಗ್ರಂಥಾಲಯದ ಸಿಬ್ಬಂದಿಯವರಿಗೆ,

ನಾನು ಇಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಲು ಕಾರಣರಾದ ನನ್ನ ತಂದೆತಾಯಿಗಳಿಗೆ, ವಿದ್ಯಾಭ್ಯಾಸದ ಪ್ರತಿಹಂತದಲ್ಲಿ ಪ್ರೋತ್ಸಾಹಿಸಿ ಸಾಕಿ ಸಲುಹಿದ ನನ್ನ ದೊಡ್ಡಪ್ಪನವರಿಗೆ, ನನ್ನನ್ನು ಹೊತ್ತು ಬೆಳೆಸಿದ ನನ್ನ ಅಜ್ಜನವರಿಗೆ, ಅಧ್ಯಯನಕ್ಕೆ ಅನೇಕ ರೀತಿಯಲ್ಲಿ ಸಹಕರಿಸಿದ ಅಣ್ಣ ಅತ್ತಿಗೆ ಹಾಗೂ ಸಹೋದರಿಯರಾದ ಅಂಬಿಕಾ, ಸುಪ್ರಿಯ, ವಿಶಾಲಾಕ್ಷಿ ಹಾಗೂ ಸಹೋದರನಾದ ಸುನೀಲ್ ಕುಮಾರ್ ಅವರಿಗೆ, ನನ್ನ ನಲ್ಮೆಯ ಗೆಳತಿ ನಿಸರ್ಗ ಅವರಿಗೆ, ಬಂಧುಗಳಿಗಿಂತಲೂ ಹೆಚ್ಚಿನ ಪ್ರೀತಿ ವಿಶ್ವಾಸ ತೋರಿದ ಅಕ್ಕನವರಾದ ಲೀಲಾವತಿ ದೀಪಕ್ ಮತ್ತು ಬೆಳಗಲ್ ಯಂಕಪ್ಪ ಮನೆಯವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ.

ಆರಂಭದಿಂದಲೂ ನನ್ನ ಬರವಣಿಗೆಯನ್ನು ಗಮನಿಸಿ ಸೂಕ್ತ ಸಲಹೆಗಳನ್ನು ನೀಡಿ ಕೊನೆಯಲ್ಲಿ ಕರಡು ಪ್ರತಿಯನ್ನು ಪರಿಶೀಲಿಸಿದ ಡಾ. ಎಸ್.ವೈ.ಸೋಮಶೇಖರ್ ಅವರಿಗೆ, ವಿಶ್ವವಿದ್ಯಾಲಯದ ಗ್ರಂಥಪಾಲಕರು ಮತ್ತು ಸಿಬ್ಬಂದಿವರ್ಗವರಿಗೆ, ನಮ್ಮ ವಿಭಾಗದ ಎಂ.ವಾಗೀಶ, ಸೋಮನಾಥ ಕುಡಿತಿನಿ, ಕಾಶಿ ವಿಶ್ವನಾಥ, ನೆರಗಲ್ಲಪ್ಪ, ರಮೇಶ್, ಓಬಯ್ಯ ಅವರಿಗೆ,

ಸುಂದರವಾಗಿ ಅಕ್ಷರಗಳನ್ನು ಸಂಯೋಜನೆ ಮಾಡಿದ ರಚನಾ ಗ್ರಾಫಿಕ್ಸ್ ಅವರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನೆರವಾದ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಕೆ.ಮಹೇಶ್
ಸಂಶೋಧಕ

ಪರಿವಿಡಿ

೧. ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವಿಧಾನ ೧ - ೧೧

ಈವರೆಗಿನ ಅಧ್ಯಯನಗಳ ಸಮೀಕ್ಷೆ

೨. ಚಾರಿತ್ರಿಕ ಹಿನ್ನೆಲೆ ೧೨ - ೪೩

ವಿಜಯನಗರ ಸಾಮ್ರಾಜ್ಯ

ಕೃಷ್ಣದೇವರಾಯನ ಆಳ್ವಿಕೆ

೩. ವೈಷ್ಣವ ಧರ್ಮ ೪೪ - ೬೯

ಹುಟ್ಟು, ಬೆಳವಣಿಗೆ

ವೈಷ್ಣವ ಧರ್ಮ ಮತ್ತು ಕೃಷ್ಣದೇವರಾಯ

ಭಕ್ತಿಪಂಥದ ಸುಧಾರಕರು

ಧರ್ಮ ಸಮನ್ವಯ

೪. ವೈಷ್ಣವ ದೇವಾಲಯಗಳು ೭೦ - ೧೫೯

ಉಗಮ, ಬೆಳವಣಿಗೆ

ವಾಸ್ತುಶೈಲಿ

ನಿರ್ಮಾಣ

ಜೀರ್ಣೋದ್ಧಾರ

೫. ವೈಷ್ಣವ ದೇವಾಲಯಗಳ ಸಾಂಸ್ಕೃತಿಕ ಚಿತ್ರಣ ೧೬೦ - ೨೨೬

ಸಾಮಾಜಿಕ ಸ್ಥಿತಿ

ಆರ್ಥಿಕ ಸ್ಥಿತಿ

ಧಾರ್ಮಿಕ ಸ್ಥಿತಿ

ಸಾಂಸ್ಕೃತಿಕ ಸ್ಥಿತಿ


೬. ಸಮಾರೋಪ ೨೨೭ - ೨೩೧

ಅನುಬಂಧ ೨೩೨ - ೨೪೩

ಪಾರಿಭಾಷಿಕ ಪದಗಳು

ಗ್ರಂಥಋಣ

❑ ❑



ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರದ ಪ್ರದೇಶಗಳು

೧. ಶ್ರೀರಂಗಂ
೨. ಕೊಮ್ಮೂರು
೩. ಕಾಂಜೀಪುರಂ
೪. ಅಣ್ಣಿಯೂರು
೫. ತಿರುಪತಿ
೬. ಬೇಲೂರು
೭. ಹೆಬ್ರಿ
೮. ತ್ಯಾಗರ್ತಿ ಅಗ್ರಹಾರ
೯. ಶಿರಗುಪ್ಪಿ
೧೦. ನಾಗೇನಹಳ್ಳಿ
೧೧. ಅನಂತಶಯನಗುಡಿ
೧೨. ಹಂಪಿ
೧೩. ಕೆಸರಟ್ಟಿ
೧೪. ರಾಮಗಡ
೧೫. ಆದವಾನಿ
೧೬. ಶ್ರೀರಂಗಾಪುರಂ
೧೭. ಅಹೋಬಿಲಂ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವಿಧಾನ

೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವಿಧಾನ

ದೇವಾಲಯಗಳು ನಾಡಿನ ಸಾಂಸ್ಕೃತಿಕ ಕೇಂದ್ರಗಳು. ಒಂದು ಸಂಸ್ಕೃತಿಯ ಚರಿತ್ರೆಯಲ್ಲಿ ದೇವಾಲಯಗಳ ಪಾತ್ರ ಅತ್ಯಂತ ಮಹತ್ವದ್ದಾಗಿರುತ್ತದೆ. ಪ್ರಾಚೀನ ಮಾನವರು ತಮ್ಮ ಬದುಕಿನ ಕೆಲವು ಆಯಾಮಗಳಲ್ಲಿ ದೈವನಂಬಿಕೆಯನ್ನು ಒಂದು ಅವಿಭಾಜ್ಯ ಅಂಗವೆಂದು ಸ್ವೀಕರಿಸಿದ್ದರು. ದೇವರು ಇರುವ ಧಾರ್ಮಿಕ ಕಟ್ಟಡವನ್ನು ದೇವಾಲಯವೆಂದು ಸಮುದಾಯಗಳು ಕರೆದುಕೊಂಡಿವೆ. ಭಾರತದಂತಹ ವೈವಿಧ್ಯಮಯ ಸಮುದಾಯಗಳಿರುವ ಭೌಗೋಳಿಕ ಪರಿಸರದಲ್ಲಿ ಅನೇಕ ಧರ್ಮಗಳಿವೆ. ಅಂತೆಯೇ ಆಯಾ ಧರ್ಮಗಳಿಗೇ ದೇವಾಲಯಗಳಿವೆ. ಇದರಿಂದ ದೇವಾಲಯಗಳಿಗೆ ಅತ್ಯಂತ ಮಹತ್ವವಿದೆ. ಪ್ರಾಚೀನ, ಅರ್ವಾಚೀನ ಕಾಲದಲ್ಲಿ ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರಲಿಲ್ಲ. ಬದಲಾಗಿ ಅವು ಸಾಮಾಜಿಕ ಜೀವನದ ಅಂಗಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಅವು ಸಾಮಾಜಿಕ ಸಂಸ್ಥೆಗಳಾಗಿ ಜನತೆಗೆ ಶಿಕ್ಷಣನೀಡುವಲ್ಲಿ ಮಹತ್ತರ ಪಾತ್ರವಹಿಸಿದ್ದವು. ಆ ಮೂಲಕ ಜನತೆಯನ್ನು ಒಂದೆಡೆ ಸೇರಿಸಿ ಧರ್ಮಪ್ರಸಾರ ಮಾಡುತ್ತಿದ್ದುದನ್ನು ತಿಳಿಯಬಹುದು. ದೇವಾಲಯಗಳಲ್ಲಿ ಕಲೆಯನ್ನು ಉನ್ನತ ಮಟ್ಟದಲ್ಲಿ ಬೆಳೆಸಿರುವುದಕ್ಕೆ ಅನೇಕ ಶಾಸನಗಳು, ಗ್ರಂಥಗಳು ಆಧಾರವನ್ನು ಒದಗಿಸುತ್ತವೆ. ದೇವಾಲಯಗಳಲ್ಲಿ ಸಂಗೀತ, ನೃತ್ಯ ಮುಂತಾದ ಕಲೆಗಳು ಜನ್ಮ ತಳೆದಿವೆ. ಅದೇ ರೀತಿ ದೇವಾಲಯಗಳು ವಾಸ್ತುಶಾಸ್ತ್ರ, ಮೂರ್ತಿಶಿಲ್ಪಗಳ ಬೆಳವಣಿಗೆಯ ಕೇಂದ್ರಗಳಾಗಿ ಕಾರ್ಯನಿರ್ವಹಿಸಿರುವುದನ್ನು ತಿಳಿಯಬಹುದಾಗಿದೆ.

ಪ್ರಾಚೀನ ಸಂಸ್ಕೃತಿಯನ್ನು ತಿಳಿಸುವ ದೇವಾಲಯಗಳು ಪುರಾತನ ಚರಿತ್ರೆಯ ಮೂಲ ಮಾತೃಕೆಗಳಾಗಿವೆ. ಈ ಪಳೆಯುಳಿಕೆಗಳಿಂದ ನಮ್ಮ ಪ್ರಾಚೀನ ಸಂಸ್ಕೃತಿಯ ವೈವಿಧ್ಯತೆಯ ಆಯಾಮಗಳನ್ನು ತಿಳಿಯಲು ಸಾಧ್ಯವಿದೆ. ಮಾನವರು ಈ ಪ್ರಕೃತಿಯಲ್ಲಿ ಕಂಡುಬಂದ ಹಲವಾರು ವಿಸ್ಮಯಗಳಿಗೆ ತವಕಗೊಂಡರು. ಈ ತವಕವನ್ನು ಆತಂಕದಿಂದ ಎದುರಿಸುವಾಗ ಅವರ ಕಲ್ಪನೆಗೆ ಭಯ ಮತ್ತು ಭಕ್ತಿಗಳ ನೆಲೆಯು ಆರಂಭವಾಯಿತು. ಈ ಭಯ ಮತ್ತು ಭಕ್ತಿಯ ನೆಲೆಯಲ್ಲಿ ರೂಪು ತಳೆದ ದೇವರು ಮತ್ತು ಅದಕ್ಕೆ ಬೇಕಾದ ಒಂದು ನೆಲೆಯನ್ನು ಕಂಡುಕೊಂಡರು.

ಆ ನೆಲೆಗಳೇ ಇಂದು ದೇವಾಲಯಗಳೆನಿಸಿಕೊಂಡಿವೆ. ಹೀಗೆ ಹುಟ್ಟಿ ಬೆಳೆದ ದೇವಾಲಯಗಳು ಕಾಲಕ್ರಮೇಣ ಬಗೆಬಗೆಯ ವಿನ್ಯಾಸಗಳಿಂದ ವೈವಿಧ್ಯಮಯ ಆಕಾರ ಪಡೆದುದನ್ನು ನಮ್ಮ ಸಂಸ್ಕೃತಿಯ ವಿಕಾಸವೆಂದು ಕರೆಯಲಾಗುತ್ತಿದೆ. ಇಂತಹ ಸಾಂಸ್ಕೃತಿಕ ವಿಚಾರಗಳ ವಿಶ್ಲೇಷಣೆಗೆ ತೊಡಗಿದಾಗ ದೇವಾಲಯಗಳು ಮೂಲ ಆಕರಗಳಾಗಿ ಅಂದಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಷಯಗಳನ್ನು ಬಿಚ್ಚಿಡುವಲ್ಲಿ ಬಹು ಮಹತ್ವದ ಪಾತ್ರ ವಹಿಸುತ್ತವೆ.

ಧರ್ಮ ಮತ್ತು ದೇವಾಲಯಗಳ ಸಂಬಂಧ ಅವಿನಾಭಾವವಾದುದು. ಇವೆರೆಡು ತಾದ್ಯಾತ್ಮ ಸಂಬಂಧ ಪಡೆದಿವೆ. ಧರ್ಮ ಬೆಳೆದಂತೆ ದೇವಾಲಯಗಳು ಬೆಳೆದಿವೆಯೆಂಬುದನ್ನು ಅಲ್ಲಗಳೆಯಲಾಗದು. ಭಾರತೀಯ ಪರಿಸರದಲ್ಲಿ ಧರ್ಮ ಮತ್ತು ದೇವಾಲಯಗಳ ಬೆಳವಣಿಗೆಯ ಚರಿತ್ರೆಯನ್ನು ಗಮನಿಸಿದರೆ ಈ ಅಂಶ ಸ್ಪಷ್ಟವಾಗುತ್ತದೆ. ಕಾರಣ ಒಂದೊಂದು ಧರ್ಮಕ್ಕೆ ಒಂದೊಂದು ದೇವಾಲಯ ನಿರ್ಮಾಣವಾಗುವ ರೂಢಿಯು ಆರಂಭವಾಯಿತು. ಈ ಹಿನ್ನೆಲೆಯಿಂದ ನಾಡಿನಲ್ಲಿ ಬೆಳೆದ ಶೈವ, ವೈಷ್ಣವ, ಜೈನ, ಬೌದ್ಧ, ಇಸ್ಲಾಂ ಮುಂತಾದ ಧರ್ಮಗಳಿಗೆ ಭದ್ರವಾದ ನೆಲೆಗಳು ಎಂಬಂತೆ ಆಲಯಗಳು ನಿರ್ಮಾಣಗೊಂಡವು. ಆಯಾ ದೇವಾಲಯಗಳಿಗೆ ತಮ್ಮದೇ ಆದಂತಹ ಧರ್ಮದ ದೇವರು ಹಾಗೂ ಸಮುದಾಯ (ಜನಾಂಗ) ಇರುವುದು ಇತಿಹಾಸದುದ್ದಕ್ಕೂ ಗಮನಿಸಿ, ದೇವಾಲಯಗಳ ಚಾರಿತ್ರಿಕ, ಸಾಂಸ್ಕೃತಿಕ ಸಂಗತಿಗಳನ್ನು ಅಧ್ಯಯನ ಮಾಡುವಲ್ಲಿ ಒಂದು ನಾಡಿನ ಸಂಸ್ಕೃತಿಯನ್ನು ಅರಿಯಬಹುದು. ಭಾರತದಾದ್ಯಂತ ಅದರಲ್ಲೂ ಕರ್ನಾಟಕ, ಆಂಧ್ರವನ್ನೊಳಗೊಂಡ ದಕ್ಷಿಣ ಭಾರತದಲ್ಲಿ ವೈಷ್ಣವ ಧರ್ಮ ತನ್ನದೇ ಆದಂತಹ ವೈಶಿಷ್ಟ್ಯಗಳೊಂದಿಗೆ ಅಸ್ತಿತ್ವವನ್ನು ಪಡೆದುಕೊಂಡು ಸಾಮಾಜಿಕ ಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರಿತ್ತು. ಇದನ್ನು ನಾಡಿನಾದ್ಯಂತ ದೊರೆಯುವ ವೈಷ್ಣವ ದೇವಾಲಯಗಳಿಂದ ಗುರುತಿಸಬಹುದು.

ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತದ ಮಧ್ಯಕಾಲೀನ ಯುಗದಲ್ಲಿ ರಾಜಕೀಯ ಮತ್ತು ಧಾರ್ಮಿಕ ಸಂಘರ್ಷಗಳು ಏರ್ಪಟ್ಟವು. ಈ ಮತಸಂಘರ್ಷಗಳ ಅವಧಿಯಲ್ಲಿ ಮಧ್ಯಕಾಲೀನ ಯುಗದ ಜನಜೀವನದಲ್ಲಿ ಮಹತ್ತರ ಬದಲಾವಣೆಗಳಾದವು. ಈ ಸಂದರ್ಭದಲ್ಲಿ ಧರ್ಮ - ಧರ್ಮಗಳ ನಡುವೆ ಸಂಘರ್ಷ, ಕಲಹಗಳು ಏರ್ಪಟ್ಟವು. ಕ್ರಿ.ಶ. ೧೪ನೆಯ ಶತಮಾನದ ಪೂರ್ವಾರ್ಧದಲ್ಲಿ 'ಯವನರು' ವಾಯುವ್ಯದಿಂದ ಧಾಳಿಯನ್ನು ಆರಂಭಿಸಿದರು. ಈ ದಾಳಿಯನ್ನು ಎದುರಿಸುವಲ್ಲಿ ದಕ್ಷಿಣ ಭಾರತದ ರಾಜರು ವಿಫಲಗೊಂಡ ಸಂದರ್ಭದಲ್ಲಿ ಕ್ಲಿಷ್ಟಕರವಾದ ಪರಿಸ್ಥಿತಿಯನ್ನು ನಿಭಾಯಿಸಲೆಂದೇ ಸಮರ್ಥ ಎದುರಾಳಿಯಂತೆ, ವಿಜಯನಗರ ಸಾಮ್ರಾಜ್ಯ 'ಹಿಂದೂ' ಧರ್ಮದ ರಕ್ಷಣೆಗೆ ಕಂಕಣಬದ್ಧವಾಗಿ ದಕ್ಷಿಣ ಭಾರತದಲ್ಲಿ ಭದ್ರವಾದ ನೆಲೆಯನ್ನು ಕಂಡುಕೊಂಡಿತು.

ಹಂಪಿಯನ್ನು ರಾಜಕೀಯ ಕೇಂದ್ರ ಸ್ಥಾನವನ್ನಾಗಿ ಆಯ್ದುಕೊಂಡು ಈ ಸಾಮ್ರಾಜ್ಯದ ಆಳ್ವಿಕೆಯನ್ನು ಆರಂಭಿಸಿದ ಅರಸರಲ್ಲಿ ಸಂಗಮ, ಸಾಳ್ವ, ತುಳುವ ಮತ್ತು ಅರವೀಡು ಎಂಬ ನಾಲ್ಕು ರಾಜವಂಶಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ ತುಳುವವಂಶ ಕೃಷ್ಣದೇವರಾಯನಿಂದಾಗಿ ಪ್ರಸಿದ್ಧಿಯನ್ನು ಪಡೆದಿದೆ. ಈತನ ಆಳ್ವಿಕೆಯ ಸಮಯದಲ್ಲಿ ಸಾಮ್ರಾಜ್ಯ ವಿಸ್ತರಣೆಯ ಜೊತೆಜೊತೆಯಲ್ಲೇ ಧರ್ಮ ಪ್ರಸಾರ, ಕಲೆ - ಸಾಹಿತ್ಯ - ಸಂಸ್ಕೃತಿಗಳ ಉನ್ನತಿಕೆಯೂ

ಕಂಡುಬಂದಿತು. ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಧರ್ಮವು ಆಸ್ಥಾನದ ಧರ್ಮವಾಗಿರುವಂತೆ, ಕೃಷ್ಣದೇವರಾಯನ ಕಾಲದಲ್ಲಿ ಶ್ರೀ ವೈಷ್ಣವ ಧರ್ಮವು ಆಸ್ಥಾನದ ಧರ್ಮವಾಗಿತ್ತು. ವಿಜಯನಗರ ಸಾಮ್ರಾಜ್ಯದ ಆರಂಭದ ಅರಸರು ಶೈವಧರ್ಮದ ಅನುಯಾಯಿಗಳಾಗಿದ್ದರು. ಅಂದು ಶೈವಧರ್ಮವೇ ರಾಜಧರ್ಮವಾಗಿತ್ತು. ಆದರೆ ಮುಂದೆ ಶ್ರೀವೈಷ್ಣವ ಧರ್ಮ ಹೊರನಾಡಿನಿಂದ ಪ್ರಸಾರಗೊಂಡು ಕೃಷ್ಣದೇವರಾಯನ ಆಡಳಿತದಲ್ಲಿ ವಿಜಯನಗರದ ರಾಜಧರ್ಮವಾಗಿ ಬೆಳೆಯಿತು. ಈ ಧರ್ಮ ರಾಜ್ಯದಲ್ಲಿ ನೆಲೆಗೊಂಡ ಮೇಲೆ ಅನೇಕರು ವೈಷ್ಣವ ಧರ್ಮಾವಲಂಬಿಗಳಾದರು. ಇದರೊಂದಿಗೆ ಅನೇಕ ವೈಷ್ಣವ ದೇವಾಲಯಗಳು ನಿರ್ಮಾಣವಾದವು. ಜೊತೆಗೆ ಹಳೆಯ ದೇವಾಲಯಗಳು ಜೀರ್ಣೋದ್ಧಾರಗೊಂಡವು. ರಾಜಶಾಹಿಯ ಪ್ರೋತ್ಸಾಹದ ಫಲವಾಗಿ ದೇವಾಲಯಗಳಿಗೆ ದೊರೆತ ಅಪಾರ ದಾನದತ್ತಿಗಳಿಂದ ಧರ್ಮಪ್ರಸಾರ ಕಾರ್ಯ ಪ್ರಬಲವಾಯಿತು. ಹೀಗೆ ವೈಷ್ಣವ ಧರ್ಮ ಸಮಾಜದಲ್ಲಿ ಪ್ರಮುಖವಾಗಿ ಬೆಳೆಯಿತು. ದೇವಾಲಯಗಳು ಕೇವಲ ಅರಸರಿಂದ ಮಾತ್ರವಲ್ಲದೇ, ಜನಸಾಮಾನ್ಯರಿಂದಲೂ ನಿರ್ಮಾಣಗೊಂಡವು. ಈ ಹಿನ್ನಲೆಯಲ್ಲಿ ವಿಜಯನಗರ ಕಾಲದಲ್ಲಿ ದೇವಾಲಯಗಳು ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡು ಅಂದಿನ ಸಮಾಜದ ಸಾಂಸ್ಕೃತಿಕ ಪರಿಸರದ ಪ್ರತಿನಿಧಿಗಳಾಗಿ ಗೋಚರಿಸುತ್ತವೆ. ಕಾರಣ ಆಯಾ ಕಾಲದ ಜನ - ಜೀವನದ ಧಾರ್ಮಿಕ ಕನ್ನಡಿಯಂತೆ ಗೋಚರಿಸುತ್ತಿರುವ ದೇವಾಲಯಗಳು ಅಂದಂದಿನ ಸಾಮಾಜಿಕ, ಆರ್ಥಿಕ, ರಾಜಕೀಯ ಇತಿಹಾಸವನ್ನು ಹೊರಚೆಲ್ಲುತ್ತವೆ. ಹೀಗಾಗಿ ಗತಕಾಲದ ಚರಿತ್ರೆ ತಿಳಿಯುವಲ್ಲಿ ಮೂಲ ಆಕರವಾಗಿರುವ ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳ ಕುರಿತಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಈವರೆಗಿನ ಅಧ್ಯಯನದ ಸಮೀಕ್ಷೆ

ಶಾಸನಗಳು, ಸಾಹಿತ್ಯ ಕೃತಿಗಳು, ವಿದೇಶೀ ಪ್ರವಾಸಿಗರ ಬರವಣಿಗೆಗಳು ಹಾಗೂ ಇನ್ನಿತರ ಆಕರಗಳ ಮೂಲಕ ಕಂಡುಬಂದಿರುವ ದೇವಾಲಯಗಳ ಬಗೆಗೆ ಮಾಹಿತಿ ರೂಪದಲ್ಲಿ ವಿವರಣೆಗಳನ್ನು ತಿಳಿಸಿಕೊಡುವ ಅಧ್ಯಯನಗಳು ನಡೆದಿವೆ. ಆದರೆ ಅವುಗಳು ಪಡೆದುಕೊಂಡಿರುವ ಭೌಗೋಳಿಕ ವ್ಯಾಪ್ತಿ, ಒಳಗೊಂಡಿರುವ ಸಾಂಸ್ಕೃತಿಕ ಮಹತ್ವ, ವಾಸ್ತುಶಿಲ್ಪ, ಮೂರ್ತಿಶಿಲ್ಪದ ವೈಶಿಷ್ಟ್ಯಗಳನ್ನು ಅನುಲಕ್ಷಿಸಿ ವಿಶ್ಲೇಷಿಸುವ ಅಧ್ಯಯನಗಳು ಬಹುಶಃ ನಡೆದಿಲ್ಲವೆಂದು ಹೇಳಬಹುದು. ಎಂ.ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'[೧] ಎಂಬ ಸಂಶೋಧನಾ ಪ್ರಬಂಧದಲ್ಲಿ ಪ್ರಾಸ್ತಾವಿಕವೆಂಬಂತೆ ದೇವಾಲಯಗಳ ಕುರಿತಾದ ಅಧ್ಯಯನ ನಡೆದಿದೆ. ಅಲ್ಲದೇ ಕೆಲವು ನಿಯತಕಾಲಿಕೆಗಳು, ಅಭಿನಂದನಾಗ್ರಂಥಗಳು ಮತ್ತು ಸ್ಮರಣಸಂಚಿಕೆಗಳಲ್ಲಿ ಬಿಡಿ ಬಿಡಿಯಾದ ಸಾಂದರ್ಭಿಕ ಲೇಖನಗಳು ಮಾತ್ರ ಬಂದಿವೆ. ಆದರೆ ಕನ್ನಡದಲ್ಲಿ ದೇವಾಲಯಗಳ ಕುರಿತಾಗಿ ಸಮಗ್ರವಾದ ಅಧ್ಯಯನ ನಡೆದಿಲ್ಲ. ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳನ್ನು ಕುರಿತಂತೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಶಿಲ್ಪಸೂತ್ರಗಳು, ಆಗಮಗಳು, ಮಯಮತ, ಮಾನಸಾರದಂತಹ ಗ್ರಂಥಗಳು ಪ್ರಾಚೀನವಾಗಿವೆ. ಅಲ್ಲದೆ, ೧೯ನೆಯ ಶತಮಾನದ ಮಧ್ಯಯುಗೀನ ಕಾಲದಿಂದಲೂ ಭಾರತೀಯ ದೇವಾಲಯಗಳನ್ನು ಕುರಿತ ಅಧ್ಯಯನ ಮತ್ತು ಅದರ ಫಲವಾಗಿ ಬಂದಂತಹ ಗ್ರಂಥಗಳು ದೇವಾಲಯಗಳ ಇತಿಹಾಸ ಅಧ್ಯಯನಕಾರರ ಗಮನವನ್ನು ಸೆಳೆದಿವೆ.

ಇವುಗಳೆಲ್ಲವು ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಿಗೆ ಕೇಂದ್ರಿಕೃತವಾಗಿವೆ. ಜೇಮ್ಸ್ ಫರ್ಗ್ಯೂಸನ್, ಹೆನ್ರಿಕಸೆನ್ಸ್, ಇ.ಬಿ.ಹ್ಯಾವೆಲ್, ಸ್ಟೆಲ್ಲಾ ಕ್ರಾಮರಿಷ್ ಮುಂತಾದ ಪಾಶ್ಚಾತ್ಯ ವಿದ್ವಾಂಸರು ಮತ್ತು ಭಾರತೀಯ ವಿದ್ವಾಂಸರುಗಳಾದ ಸಿ.ಶಿವರಾಮಮೂರ್ತಿ, ಓ.ಸಿ.ಗಂಗೋಲಿ, ಪಿ.ಕೆ.ಅಚಾರ್ಯ, ಎನ್.ವೆಂಕಟರಮಣಯ್ಯ, ಪಿ.ಎನ್.ಬೋಸ್, ಎಸ್.ಅಗರವಾಲ, ಟಿ.ವಿ.ಮಹಾಲಿಂಗಂ, ಕೆ.ವಿ.ಸೌಂದರರಾಜನ್, ಕೆ.ಆರ್.ಶ್ರೀನಿವಾಸನ್ ಮುಂತಾದವರು ದೇವಾಲಯಗಳ ಸಾಂಸ್ಕೃತಿಕ ಪರಿಸರ ಕುರಿತಾದ ಕೆಲವು ಅಧ್ಯಯನಗಳನ್ನು ಮಾಡಿದ್ದಾರೆ. ಈ ಎಲ್ಲಾ ಅಧ್ಯಯನಗಳಲ್ಲಿ ಮುಖ್ಯವಾಗಿ ದೇವಾಲಯಗಳ ಧಾರ್ಮಿಕ ಮತ್ತು ಸಾಂಸ್ಕೃತಿಕ, ವಾಸ್ತುಶಿಲ್ಪದ ಮಹತ್ವ ಕುರಿತು ವ್ಯಾಪಕವಾದ ಅಧ್ಯಯನ ನಡೆದಿರುವುದು ಕಂಡುಬರುತ್ತದೆ. ಅಲ್ಲದೇ ಸೌಂದರ್ಯ ಮೀಮಾಂಸಾಶಾಸ್ತ್ರಗಳ ಹಿನ್ನೆಲೆಯಲ್ಲಿ ವಾಸ್ತುಶಿಲ್ಪದ ಕುರಿತು ಅಧ್ಯಯನ ನಡೆದಿರುವುದು ಕಂಡುಬರುತ್ತದೆ. ಧಾರ್ಮಿಕ ಉದ್ದೇಶಗಳಿಗಾಗಿ ರಚನೆಗೊಂಡ ದೇವಾಲಯಗಳು ಆಯಾ ಕಾಲದಲ್ಲಿ ಅಭ್ಯುದಯ ಪಡೆದ ಧರ್ಮಗಳ ಪ್ರತೀಕಗಳಾಗಿ ನಿಂತು, ವಿವಿಧ ವಿಷಯಗಳನ್ನು ಅರಿತುಕೊಳ್ಳುವ ಮಾಧ್ಯಮವಾಗಿರುವುದನ್ನು ವಿವರವಾಗಿ ಹೇಳುವ ಅಧ್ಯಯನಗಳು ನಡೆದಿಲ್ಲ. ಛಾಯಾ ಚಿತ್ರಗಳ ಮೂಲಕ ದೇವಸ್ಥಾನದ ಹೆಸರು, ಕಟ್ಟಿದ ಕಾಲ, ರಾಜಮನೆತನ ಮುಂತಾದ ವಿವರ ಹೇಳುವ, ದೇವಸ್ಥಾನದ ರೂಪು ರೇಷೆ ತಿಳಿಸುವ ಕೃತಿಗಳು ಹೊರಬಂದಿದ್ದು, ಇವುಗಳು ಸಂಶೋಧನಾಧ್ಯಯನ ಕೈಗೊಳ್ಳುವವರಿಗೆ ಸಹಕಾರಿಯಾಗುವುದಿಲ್ಲ.

ಕರ್ನಾಟಕದಲ್ಲಿ ದೇವಾಲಯಗಳನ್ನು ಕುರಿತು ನಡೆದ ಅಧ್ಯಯನಗಳಲ್ಲಿ ಬಿ.ವೆಂಕೋಬರಾಯರ 'ಮೈಸೂರು ದೇಶದ ವಾಸ್ತುಶಿಲ್ಪ'[೨] ಎಂಬ ಗ್ರಂಥವು ಮೈಸೂರು ಪ್ರದೇಶದ ದೇವಾಲಯಗಳ ಕುರಿತಾದ ಪರಿಚಯಾತ್ಮಕ ಕೃತಿಯಾಗಿದೆ. ಈ ಗ್ರಂಥ ಆಗಿನ ಮೈಸೂರು ರಾಜ್ಯದ ಭೌಗೋಳಿಕ ವ್ಯಾಪ್ತಿಗೆ ಅನ್ವಯಿಸಿ ನೋಡಿದಾಗ ಕೆಲವು ಮಹತ್ವದ ಮಾಹಿತಿಯನ್ನು ನೀಡುತ್ತದೆ. ಪ್ರಾದೇಶಿಕವಾಗಿ ಮೈಸೂರಿನ ದೇವಾಲಯಗಳ ವಾಸ್ತುಶಿಲ್ಪಕಲೆಯನ್ನು ಪರಿಚಯಿಸುತ್ತದೆ.

ಶಿವರಾಮಕಾರಂತರು ಬರೆದ 'ಭಾರತೀಯ ಶಿಲ್ಪ'[೩]ಗ್ರಂಥವು ಶಿಲ್ಪಿಗಳ ಬಗೆಗೆ ಕನ್ನಡದಲ್ಲಿ ದೊರೆಯುವ ಪ್ರಮುಖ ಆಕರಗ್ರಂಥವಾಗಿದೆ. ಈ ಗ್ರಂಥದಲ್ಲಿ ಪ್ರಾಚೀನ ಕಾಲದಿಂದ ಮಧ್ಯಕಾಲೀನ ಸಾಮ್ರಾಜ್ಯಗಳವರೆಗೆ ಶಿಲ್ಪಕಲೆಯು ಬೆಳೆದು ಬಂದ ಬಗೆಯನ್ನು ಸಂಪೂರ್ಣವಾಗಿ ವಿವರಿಸುತ್ತ, ಸಾಂದರ್ಭಿಕವಾಗಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಬಗೆಗೆ ಸೂಚ್ಯವಾಗಿ ವಿವರಣೆ ನೀಡಿದ್ದಾರೆ. ಇವರ ಇನ್ನೊಂದು ಗ್ರಂಥವಾದ 'ಚಿತ್ರಶಿಲ್ಪ ಮತ್ತು ಕಲೆಗಳು' ಇದು ಮೂರು ಉಪನ್ಯಾಸಗಳ ಪುಸ್ತಕ ರೂಪವಾಗಿದ್ದು, ಭಾರತೀಯ ವಾಸ್ತುಶಿಲ್ಪದ ವ್ಯಾಪ್ತಿಯಲ್ಲಿ ವಾಸ್ತುಶಿಲ್ಪದ ಹುಟ್ಟು ಮತ್ತು ಬೆಳವಣಿಗೆಗಳ ಬಗೆಗೆ ಸಂಕ್ಷಿಪ್ತವಾಗಿ ಇದರಲ್ಲಿ ವಿವರಿಸಿದ್ದಾರೆ.

ಆಸೂರಿ ಶ್ರೀನಿವಾಸ ಅಯ್ಯಂಗಾರ್ ಅವರು 'ಭರತಖಂಡದ ದೇವಾಲಯಗಳು'[೪] ಎಂಬ ಗ್ರಂಥದಲ್ಲಿ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ತಲಪ್ರಮಾಣ ನಿಯಮಗಳ ಬಗ್ಗೆ ವಾಸ್ತುಗ್ರಂಥಗಳ ಆಧಾರದ ಮೇಲೆ ಸೂಕ್ತ ಉಲ್ಲೇಖ ಮತ್ತು ರೇಖಾಚಿತ್ರಗಳ ಸಹಿತ ರಚಿಸಿರುವ ಗ್ರಂಥವಾಗಿದೆ. ಇದು ಭಾರತೀಯ ಆಗಮಗಳ ಹಿನ್ನೆಲೆಯಲ್ಲಿ ದೇವಾಲಯಗಳಲ್ಲಿ ಅಭಿವ್ಯಕ್ತವಾದ ಸಂಪ್ರದಾಯನಿಷ್ಠ ಅಭಿಪ್ರಾಯವನ್ನು ಗಮನಿಸಬಹುದು.

ಎಸ್.ಕೆ.ರಾಮಚಂದ್ರರಾಯರ 'ಭಾರತೀಯ ದೇವಾಲಯ ನೆಲೆ - ಹಿನ್ನೆಲೆ'[೫] ಗ್ರಂಥದಲ್ಲಿ ದೇವಾಲಯಗಳು ಸಿಂಧೂ ನಾಗರೀಕತೆಯಿಂದ ಮೊದಲುಗೊಂಡು, ಅವು ಮುಂದೆ ಪಡೆದ ಕಲ್ಪನೆ, ಬೆಳವಣಿಗೆ, ಸಮಾಧಿ, ಚೈತ್ಯ, ಸ್ತೂಪಗಳು ಭಾರತೀಯ ದೇವಾಲಯಗಳ ಹಿನ್ನೆಲೆಯಲ್ಲಿ ಗಳಿಸಿರುವ ಪಾತ್ರ, ಪ್ರಕೃತಿ ಪೂಜೆ ಇತ್ಯಾದಿಗಳ ಪರಿಚಯಾತ್ಮಕ ಗ್ರಂಥವಾಗಿದೆ.

ಎಂ. ಚಿದಾನಂದಮೂರ್ತಿ ಅವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'[೬] ಎಂಬ ಸಂಶೋಧನಾತ್ಮಕ ಪ್ರಬಂಧದಲ್ಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಷಯಗಳ ಜೊತೆಗೆ ಸಾಂಸ್ಕೃತಿಕ ದೃಷ್ಟಿಕೋನದಿಂದ ಕೆಲವು ವಿಷಯಗಳನ್ನು ವಿಶ್ಲೇಷಿಸಿದ್ದಾರೆ. ದೇವಾಲಯಗಳನ್ನು ಕುರಿತೇ ಒಂದು ಪ್ರತ್ಯೇಕ ಅಧ್ಯಾಯವನ್ನು ಹಾಕಿಕೊಂಡು ಅವುಗಳ ಸಾಂಸ್ಕೃತಿಕ ಮಹತ್ವವನ್ನು ಕುರಿತು ಚರ್ಚಿಸಿದ್ದಾರೆ. ಆದರೆ ಈ ಅಧ್ಯಯನವು ಕ್ರಿ.ಶ. ೪೫೦ ರಿಂದ ಕ್ರಿ.ಶ. ೧೧೫೦ರ ವರೆಗಿನ ಕನ್ನಡ ಶಾಸನಗಳ ಅಧ್ಯಯನ ಕಾಲಮಿತಿಗೆ ಒಳಪಟ್ಟ ಕೃತಿಯಾಗಿದೆ.

ಇವುಗಳಲ್ಲದೆ 'ಕರ್ನಾಟಕದ ಪರಂಪರೆ'[೭] ಮತ್ತು 'ಕರ್ನಾಟಕದ ಚರಿತ್ರೆ'[೮] ಯಂತಹ ಗ್ರಂಥಗಳಲ್ಲಿ ಕರ್ನಾಟಕದ ವಾಸ್ತುಶಿಲ್ಪವನ್ನು ಕುರಿತ ಪ್ರಬುದ್ಧ ಲೇಖನಗಳು ಪ್ರಕಟವಾಗಿವೆ. ಹಲವು ಅಭಿನಂದನಾ ಗ್ರಂಥ ಮತ್ತು ವಿಶೇಷ ಸ್ಮರಣ ಸಂಚಿಕೆಗಳಲ್ಲಿ ಕರ್ನಾಟಕದ ವಾಸ್ತುಶಿಲ್ಪ, ಶಿಲ್ಪಕಲೆಗಳಿಗೆ ಮಾತ್ರ ಅಧ್ಯಯನವು ಸೀಮಿತವಾಗಿದೆ. ದೇವಾಲಯಗಳ ವಾಸ್ತುಶಿಲ್ಪವನ್ನು ಕುರಿತು ಅನೇಕ ಸಂಶೋಧನಾ ಗ್ರಂಥಗಳು ಪ್ರಕಟಗೊಂಡಿವೆ. ಪ್ರಕಟವಾಗದಿರುವ ನಿಬಂಧಗಳೂ ಇವೆ. ಇವುಗಳೆಲ್ಲವೂ ಹೆಚ್ಚಾಗಿ ಆಂಗ್ಲಭಾಷೆಯಲ್ಲಿಯೇ ಇರುವುದನ್ನು ಗಮನಿಸಿದಾಗ ದೇವಾಲಯಗಳನ್ನು ಕುರಿತ ಕನ್ನಡ ಭಾಷೆಯ ಸಂಶೋಧನಾ ಗ್ರಂಥಗಳ ಕೊರತೆ ಎದ್ದುಕಾಣುತ್ತದೆ.

ಶಾಸನಗಳನ್ನೇ ಪ್ರಧಾನ ಆಕರಗಳನ್ನಾಗಿ ಸ್ವೀಕರಿಸಿ ಕೆ.ಇಸ್ಮಾಯಿಲ್ ಅವರು ನಡೆಸಿದ ಸಂಶೋಧನೆಯ ಫಲವಾದ 'Karnataka Temples'[೯] ಗ್ರಂಥವು ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ದೇವಾಲಯಗಳ ಪಾತ್ರವನ್ನು ಕುರಿತಂತೆ ಚರ್ಚಿಸಿದ್ದಾರೆ. ಇಲ್ಲಿ ಕ್ರಿ.ಶ. ೭೫೦ ರಿಂದ ೧೩೦೦ರ ವರೆಗಿನ ಕಾಲವ್ಯಾಪ್ತಿಗೆ ಮಿತಗೊಳಿಸಿಕೊಂಡು ಅಧ್ಯಯನ ನಡೆಸಿದ ಸಂಶೋಧನಾ ಪ್ರಬಂಧವಾಗಿದೆ. ಈ ಗ್ರಂಥಗಳಲ್ಲಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಸಂಬಂಧಿಸಿದಂತೆ ಪರಿಚಯಾತ್ಮಕವಾದ ಮಾರ್ಗದರ್ಶಕ ವಿಷಯಗಳ ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ.

ವಿಜಯನಗರ ಸಾಮ್ರಾಜ್ಯದ ಕುರಿತು ಇದುವರೆಗೆ ಅನೇಕ ಕೃತಿಗಳು ಪ್ರಕಟಗೊಂಡಿದ್ದರೂ ಅವುಗಳಲ್ಲಿ ಹೆಚ್ಚಿನ ಕೃತಿಗಳು ಆಂಗ್ಲ ಭಾಷೆಯಲ್ಲಿ ರಚನೆಗೊಂಡಿವೆ. ಇವುಗಳಲ್ಲಿ ಹಲವು ಗ್ರಂಥಗಳು ಬೇರೆ ಬೇರೆ ಅಧ್ಯಯನದ ದೃಷ್ಟಿಕೋನವನ್ನು ಇಟ್ಟುಕೊಂಡು ಕೈಗೊಂಡಿರುವ ಗ್ರಂಥಗಳಾಗಿವೆ. ಅದರಲ್ಲಿ ರಾಜಕೀಯ ಚಿತ್ರಣ, ಧಾರ್ಮಿಕ ಚಿತ್ರಣ, ದೇವಾಲಯದ ವಾಸ್ತು ವಿಶೇಷವನ್ನು ಕುರಿತಾಗಿ ಅಧ್ಯಯನ ಮಾಡಿರುವುದು, ಒಂದು ರಾಜಮನೆತನದ ಒಬ್ಬ ಪ್ರಸಿದ್ಧ ಅರಸನನ್ನು ಕುರಿತ ಅವನ ಜೀವನ ಚರಿತ್ರೆಯನ್ನು ವಿಶ್ಲೇಷಿಸಿರುವ ಅಧ್ಯಯನ, ಒಂದು ಸಾಂಸ್ಕೃತಿಕ ಪರಿಸರವನ್ನಿಟ್ಟುಕೊಂಡು ರಚಿಸಿರುವ ಗ್ರಂಥ, ಮೂರ್ತಿ ಶಿಲ್ಪಕಲೆಗಳನ್ನು ಮುಖ್ಯವಾಗಿ ಸಿದ್ಧಪಡಿಸಿದ ಗ್ರಂಥ, ಜಿಲ್ಲೆಯಲ್ಲಿನ ಹಲವು ದೇವಾಲಯಗಳನ್ನು ಕುರಿತಂತೆ ರಚಿಸಿರುವ ಗ್ರಂಥ, ಇಡೀ ರಾಜ್ಯವನ್ನು ಅಧ್ಯಯನ ವ್ಯಾಪ್ತಿಗೆ

ಸೇರಿಸಿಕೊಂಡು ಅಲ್ಲಿನ ಎಲ್ಲಾ ದೇವಾಲಯಗಳನ್ನು ಕುರಿತು ಸಮಗ್ರವಾಗಿ ಅಧ್ಯಯನ ಮಾಡಿದ ನಿಬಂಧ, ಗ್ರಂಥಗಳು ಮುಂತಾದವು ವಿಜಯನಗರದ ಇತಿಹಾಸವನ್ನು ತಿಳಿಯಪಡಿಸುವಲ್ಲಿ ಸಹಕಾರಿಯಾಗುತ್ತವೆ. ಇವುಗಳೆಲ್ಲವು ಅಂದಿನ ಸಮಕಾಲೀನ ಚಾರಿತ್ರಿಕ, ಸಾಂಸ್ಕೃತಿಕ ಚಿತ್ರಣವನ್ನು ನೀಡುವ ಮಹತ್ವವಾದ ಗ್ರಂಥಗಳಾಗಿವೆ. ಇವುಗಳಲ್ಲಿ :

ಅನಿತಾವರ್ಗಿಸ್ ಅವರ 'Religious Traditions at Vijayanagara',[೧೦] ಅನ್ನೆ, ಎಲ್. ಡೆಲ್ಲಾಪಿಕೋಲಾ ಮತ್ತು ಇತರರು ರಚಿಸಿರುವ 'The Ramachandra Temple at Vijayanagara',[೧೧] ಭಾರ್ಗವಿ ಶಿವಯ್ಯ ಅವರ 'Krishnadevaraya his life and achievements',[೧೨] ವಿ.ಜಿ.ಜಯಂತಿ ಅವರ 'Hampi a Cultural study',[೧೩] ಕೆ.ರೆಡ್ಡೆಪ್ಪ 'Vijayanagara Temples',[೧೪] ಕೊಂದುರಿ ಸರೋಜಿನಿ ಅವರ 'Religion in Vijayanagara Empire',[೧೫] ಕೆ.ಎಂ.ಸುರೇಶ್ ಅವರ 'Sculptural Art of Hampi',[೧೬] ಬಿ.ಎ.ಸಾಲೆತೊರೆ ಅವರ 'Vijayanagara Art',[೧೭] ಎಸ್.ರಾಜಶೇಖರ ಅವರ 'Karnataka Architecture',[೧೮] ಸಿ.ಎಸ್.ಪಾಟೀಲ್ ಅವರ 'Temples of Bellary and Raichur District'[೧೯] ಮುಂತಾದ ಗ್ರಂಥಗಳಲ್ಲಿ ನಿಬಂಧಕಾರರು ತಮ್ಮದೇ ಆದ ವ್ಯಾಪ್ತಿಯಲ್ಲಿ ವಿಜಯನಗರದ ಹಲವು ಮುಖಗಳನ್ನು ಕುರಿತು ಸೂಕ್ಷ್ಮವಾಗಿ ಅಧ್ಯಯನ ಕೈಗೊಂಡು ವಿಶ್ಲೇಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಂಡುಬರುವ ಒಂದು ಮಹತ್ವವಾದ ಕೃತಿಯೆಂದರೆ ಎನ್.ಶಿವರುದ್ರಸ್ವಾಮಿ ಅವರು ಬರೆದಿರುವ 'Vijayanagara Temples in Karanataka'[೨೦] ಎಂಬ ಗ್ರಂಥದಲ್ಲಿ ಇಡೀ ಕರ್ನಾಟಕದಲ್ಲಿರುವ ವಿಜಯನಗರದ ದೇವಾಲಯಗಳನ್ನು ಕುರಿತು ಅವುಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ, ದೇವಾಲಯಗಳ ವಿಶ್ಲೇಷಣೆ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿದ ಗ್ರಂಥವಾಗಿದೆ. ಈ ಗ್ರಂಥದಲ್ಲಿ ವಾಸ್ತುಶಿಲ್ಪಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಾಗಿದೆ. ಇದು ವಿಜಯನಗರ ಕಾಲದ ದೇವಾಲಯಗಳ ಲಕ್ಷಣಗಳನ್ನು ತಿಳಿಸುವ ಪ್ರಮುಖ ಗ್ರಂಥ.

ವಿಜಯನಗರದ ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು ರಚಿತವಾದ ಹಲವು ಗ್ರಂಥಗಳಿವೆ. ಬಾ.ರಾ.ಗೋಪಾಲ ಅವರ 'ವಿಜಯನಗರದ ವಾಸ್ತುಶಿಲ್ಪ',[೨೧] ಸಿಂದಿಗಿ ರಾಜಶೇಖರ ಅವರ 'ಕರ್ನಾಟಕದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ',[೨೨] ರಮಾನಂದ ಅವರ 'ವಿಜಯನಗರ ಕಾಲದ ಶಾಸನಗಳು ಸಾಂಸ್ಕೃತಿಕ ಅಧ್ಯಯನ',[೨೩] ಎಸ್.ಎಸ್.ಸಜ್ಜನ ಅವರ 'ವಿಜಯನಗರ ಕಾಲದ ಜಾತ್ರೆ ಮತ್ತು ಉತ್ಸವಗಳು'[೨೪] ಪ್ರಮುಖವಾಗಿ ಕನ್ನಡದಲ್ಲಿ ರಚಿಸಿರುವ ಗ್ರಂಥಗಳಾಗಿವೆ.

ಪ್ರಾಚೀನ ಕಾಲದಿಂದಲೂ ಮಾನವರ ಜನಜೀವನದಲ್ಲಿ ಮುಖ್ಯ ಸಂಗತಿಗಳಾಗಿ ಸಂಸ್ಕೃತಿಯಲ್ಲಿ ಪ್ರಮುಖ ಪಾತ್ರವಹಿಸಿದ ದೇವಾಲಯಗಳ ಶಿಲ್ಪಕಲೆ, ವಾಸ್ತುಶಿಲ್ಪ ಕುರಿತಾದ ಅಧ್ಯಯನವನ್ನು ಗಮನಿಸಲಾಗಿದೆ. ಆದರೆ ಸಂಸ್ಕೃತಿಯ ರೂಪುಗಳನ್ನು ತನ್ನಲ್ಲಿ ಒಳಗುಮಾಡಿಕೊಂಡಿರುವ ಕೆಲವು ಸಾಂಸ್ಕೃತಿಕ ಚರಿತ್ರೆಯ ಅಂಶಗಳ ಕಡೆಗೆ ಕನ್ನಡದ ಮಟ್ಟಿಗೆ ಅಷ್ಟಾಗಿ ಅಧ್ಯಯನಗಳು ನಡೆದಿಲ್ಲವೆಂಬುದನ್ನು ಗಮನಿಸಿ ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ದೇವಾಲಯಗಳು ಈ ನಾಡಿನ ಸಂಸ್ಕೃತಿಯ ದ್ಯೋತಕಗಳಾಗಿವೆ. ಈ ದೃಷ್ಟಿಯಿಂದ ಕನ್ನಡ ನಾಡಿನಲ್ಲಿ ದೇವಾಲಯಗಳಿಗೆ ಪ್ರಮುಖಸ್ಥಾನವಿದೆ. ದೇವಾಲಯಗಳು ಕೇವಲ ಕಟ್ಟಡಗಳಾಗಿರದೇ ಗೋಪುರ, ಅಧಿಷ್ಠಾನ, ಪ್ರಾಂಗಣ, ಶಿಖರ, ದೇವಾಲಯದ ಸುತ್ತಣ ವ್ಯಾಪ್ತಿ ಕಲಾತ್ಮಕತೆಯ ಕೇಂದ್ರವಾಗಿರುತ್ತದೆ. ವಾಸ್ತುಶಿಲ್ಪ, ಮೂರ್ತಿಶಿಲ್ಪಗಳಿಂದ ಸೂಕ್ಷ್ಮವಾಗಿ ಕೆತ್ತನೆಗೊಂಡಿರುತ್ತದೆ. ಇಂತಹ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪವನ್ನು ಕುರಿತಾದ ಅಧ್ಯಯನಗಳೇ ಹೆಚ್ಚಾಗಿ ಇಲ್ಲಿಯವರೆಗೆ ಬಂದಿವೆ. ಅದು ಆಂಗ್ಲಭಾಷೆಯಲ್ಲಿಯೇ ಅಧಿಕ.

ಈ ದೃಷ್ಟಿಯಿಂದ ದೇವಾಲಯಗಳ ವಾಸ್ತು ಮತ್ತು ಮೂರ್ತಿಶಿಲ್ಪಗಳ ಅಧ್ಯಯನಕ್ಕೆ ಹೊರತಾದ ಸಾಂಸ್ಕೃತಿಕ ಅಧ್ಯಯನ ಆಗಬೇಕಿದೆ. ಸಮಕಾಲೀನ ಸಂದರ್ಭದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ವ್ಯವಸ್ಥೆ, ಧಾರ್ಮಿಕತೆಯ ವಿವಿಧ ಮಗ್ಗುಲುಗಳನ್ನು ಒಂದಲ್ಲ ಒಂದು ಬಗೆಯಲ್ಲಿ ದೇವಾಲಯಗಳು ಚಿತ್ರಿಸುತ್ತವೆ. ಕಾರಣ ಇಂತಹ ಅಧ್ಯಯನದ ಅಗತ್ಯವಿದೆ. ಇದನ್ನು ಗಮನಿಸಿಕೊಂಡು ಅಂತಹ ಕೊರತೆಯನ್ನು ತುಂಬುವ ಒಂದು ಪ್ರಯತ್ನವೇ ಈ 'ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು' ಎಂಬ ಪ್ರಬಂಧವಾಗಿದೆ. ಈ ವಿಷಯದ ಆಯ್ಕೆಯು ವಿಜಯನಗರ ಸಾಮ್ರಾಜ್ಯದ ತುಳುವ ರಾಜಮನೆತನಕ್ಕೆ ಸಂಬಂಧಿಸಿದ ಕೃಷ್ಣದೇವರಾಯನ ಕಾಲಕ್ಕೆ ಸೀಮಿತಪಡಿಸಲಾಗಿದೆ. ನನ್ನ ಅಧ್ಯಯನವು ಈ ಕೆಳಗಿನ ಅಂಶಗಳ ಮೇಲೆ ಕೇಂದ್ರೀಕೃತವಾಗಿದೆ.

೧. ಅರಸನ ರಾಜಕೀಯ ಚರಿತ್ರೆ

೨. ಅರಸನ ಕಾಲವ್ಯಾಪ್ತಿ

೩. ವೈಷ್ಣವ ಧರ್ಮ

೪. ವೈಷ್ಣವ ದೇವಾಲಯಗಳು

೫. ವೈಷ್ಣವ ದೇವಾಲಯಗಳ ಸಾಂಸ್ಕೃತಿಕ ಚಿತ್ರಣ

ಈ ಪ್ರಮುಖ ಅಂಶಗಳನ್ನು ಒಳಗುಮಾಡಿಕೊಂಡು, ಪ್ರಸ್ತುತ ಅಧ್ಯಯನದ ವಿಶ್ಲೇಷಣೆಯು ನಡೆಯುತ್ತದೆ. ವಿಜಯನಗರ ಸಾಮ್ರಾಜ್ಯದ ತುಳುವ ವಂಶದ ಕೃಷ್ಣದೇವರಾಯನ ಕಾಲದ ರಾಜಕೀಯ ಸಂದರ್ಭ ಮತ್ತು ಸಮಕಾಲೀನ ಅವಧಿಯಲ್ಲಿ ರಾಯನು ನಡೆಸಿದ ಆಡಳಿತ, ಇತರ ಅರಸರೊಂದಿಗಿನ ಬಾಂಧವ್ಯ ಹಾಗೂ ವೈರತ್ವ, ಅದರಂತೆ ಆಡಳಿತದಲ್ಲಿ ಇವನ ಘನತೆ ಮತ್ತು ಕೈಗೊಂಡ ರಾಜಕೀಯ ಸಾಧನೆಗಳ ಕುರಿತಾದ ರಾಜಕೀಯ ಚರಿತ್ರೆಯನ್ನು ಹೇಳುವುದು ಮುಖ್ಯವಾಗುತ್ತದೆ. ಅಂತೆಯೇ ಕೃಷ್ಣದೇವರಾಯನು ತನ್ನ ಕಾಲಾವಧಿಯಲ್ಲಿ ವೈಷ್ಣವ ಧರ್ಮವನ್ನು ಇಡೀ ರಾಜ್ಯದ ರಾಜಧರ್ಮವನ್ನಾಗಿ ಮಾಡಿದ್ದು ಮಹತ್ವದ ಸಂಗತಿ. ಈ ಹಿಂದೆ ತಮ್ಮ ಪೂರ್ವಮನೆತನಗಳು ಶೈವಧರ್ಮವನ್ನು ಅನುಸರಿಸಿದ್ದವು. ಅದು ಅಂದು ರಾಜಧರ್ಮವಾಗಿತ್ತು. ಆದರೆ ಅದಕ್ಕೆ ಪರ್ಯಾಯವೆಂಬಂತೆ ಕೃಷ್ಣದೇವರಾಯ ವೈಷ್ಣವ ಧರ್ಮವನ್ನು ಪರಿಚಯಿಸಿದ ರೀತಿ? ಅಲ್ಲದೇ, ಸಮಕಾಲೀನ ಸಂದರ್ಭದಲ್ಲಿ ಸಾಮಾಜಿಕರು ಆ ಧರ್ಮವನ್ನು ಸ್ವೀಕರಿಸಿ ನೆಚ್ಚಿಕೊಂಡ ಬಗೆ? ಭವ್ಯ ವೈಷ್ಣವ ದೇವಾಲಯಗಳ ನಿರ್ಮಾಣಕ್ಕೆ ದೊರೆತ ಪ್ರೋತ್ಸಾಹ ಎಂಥದ್ದು? ಜೊತೆಗೆ ಈ ದೇವಾಲಯಗಳು ಸಮಸ್ತ ನಾಗರೀಕರ ಸಾಮಾಜಿಕ,

ಆರ್ಥಿಕ, ಸಾಂಸ್ಕೃತಿಕ ಕೇಂದ್ರಗಳಾಗಿ ನಿರ್ವಹಿಸಿದ ಪಾತ್ರ ಎಂಥದ್ದು? ಎಂಬ ಪ್ರಶ್ನೆಗಳಿಗೆ ಈ ಪ್ರಬಂಧವು ಉತ್ತರಿಸುತ್ತದೆ.

ಮೇಲಿನ ಕೆಲವು ಮಹತ್ವದ ಚರ್ಚೆಯೊಂದಿಗೆ, ವಿಜಯನಗರದ ಕಾಲದಲ್ಲಿ ವೈಷ್ಣವ ಧರ್ಮ ಮತ್ತು ಅದು ಪಡೆದುಕೊಂಡ ಸ್ಥಾನ, ಆ ಮೂಲಕ ಆ ಧರ್ಮಕ್ಕೆ ಸಂಬಂಧಿಸಿದ ದೇವಾಲಯಗಳು ನಿರ್ಮಾಣವಾದದ್ದು ಮುಖ್ಯ. ಒಂದು ನಾಡಿನ ಸಂಸ್ಕೃತಿಗೆ ಯಾವೊಂದು ನಿರ್ದಿಷ್ಟ ಧರ್ಮವೇ ಮುಖ್ಯವೆಂದಿನಿಸಲಾರದು. ಬದಲಾಗಿ ಆ ನಾಡಿಗೆ ಒಳಿತನ್ನು ಬಯಸುವ, ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಯಾವುದೇ ಧರ್ಮ ಜನಜೀವನದಲ್ಲಿ ಆಪ್ಯಾಯಮಾನವಾಗಿ ಬೆಳೆಯುತ್ತದೆ. ಅದರಂತೆ ವೈಷ್ಣವ ಧರ್ಮವೂ ಇಲ್ಲಿ ಬೆಳೆಯಿತೆನ್ನಬಹುದು. ರಾಜಾಶ್ರಯ ದಲ್ಲಿಯೇ ಧರ್ಮ ಮತ್ತು ಧರ್ಮಕ್ಕೆ ಸಂಬಂಧಿಸಿದ ಇತರೆ ಸಂಗತಿಗಳು ಬೆಳೆದಿವೆಯೆಂಬುದನ್ನು ಚರಿತ್ರೆಯುದ್ದಕ್ಕೂ ತಿಳಿದುಬರುತ್ತದೆ. ರಾಜಾಶ್ರಯದಿಂದ ಆಯಾ ಕಾಲದ ಅರಸರ ಮನೋಧರ್ಮ, ಅಭಿರುಚಿಯನ್ನಾಧರಿಸಿ ದೇವಾಲಯಗಳೂ ಬೆಳೆದಿವೆ. ಅವರ ಕಲಾಪ್ರೋತ್ಸಾಹದಿಂದ ನಾಡಿನ ಸಾಂಸ್ಕೃತಿಕ ಚಹರೆಗಳು ಸಮೃದ್ಧಿಗೊಂಡಿವೆ. ಆ ಮೂಲಕ ನಾಡಿನ ಸಂಸ್ಕೃತಿಯೂ ಶ್ರೀಮಂತಗೊಂಡಿದೆ.

ಹೀಗೆ ಕೃಷ್ಣದೇವರಾಯನ ಕಾಲದಲ್ಲಿಯೂ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ಸ್ಥಿತ್ಯಂತರಗಳುಂಟಾದವು. ಈ ಸ್ಥಿತ್ಯಂತರಗಳ ನಡುವೆಯೇ ವೈಷ್ಣವ ಧರ್ಮ ತನ್ನ ಕಾರ್ಯಚಟುವಟಿಕೆಯಿಂದ ಸ್ಥಿರವಾಗುತ್ತಲಿತ್ತು. ಈ ಸ್ಥಿರಗೊಳ್ಳುವಿಕೆಯ ಅವಧಿಯಲ್ಲಿಯೇ ಅನೇಕ ವೈಷ್ಣವ ದೇವಾಲಯಗಳು ನಿರ್ಮಾಣವಾಗಿರುವುದು ತಿಳಿಯುತ್ತದೆ. ಅಲ್ಲದೇ ಅರಸರ ವಿಜಯೋತ್ಸವ, ಕೌಟುಂಬಿಕ ಕಾರಣಗಳು, ವ್ಯಕ್ತಿಗತ ಮನೋಭಿಲಾಷೆ, ರಾಜಪರಿವಾರದವರ, ಅಧಿಕಾರವರ್ಗದವರ, ರಾಜ್ಯವಿಸ್ತಾರದಂತಹ ವಿಶೇಷ ಸಂದರ್ಭ ಗಳಲ್ಲಿಯೂ ದೇವಾಲಯಗಳು ನಿರ್ಮಾಣಗೊಂಡಿವೆ.

ಈ ಎಲ್ಲ ಹಿನ್ನೆಲೆಯೊಂದಿಗೆ 'ಕೃಷ್ಣದೇವಾರಾಯನ ಕಾಲದ ವೈಷ್ಣವ ದೇವಾಲಯಗಳ' ಬಗೆಗೆ ಒಂದು ಸಾಂಸ್ಕೃತಿಕ ನೋಟವನ್ನು ನೀಡುವುದು ತುಂಬಾ ಅವಶ್ಯಕತೆಯಿದೆ. ಈ ಅವಶ್ಯಕತೆಯ ಪೂರೈಕೆಯ ಪ್ರಮುಖ ಉದ್ದೇಶದಿಂದ ಈ ವಿಷಯವನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ವ್ಯಾಪ್ತಿ

'ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು' ಎಂಬ ಶೀರ್ಷಿಕೆ ಈ ಪ್ರಬಂಧಕ್ಕಿದೆ. ಈ ಅಧ್ಯಯನ ಕೃಷ್ಣದೇವರಾಯನ ರಾಜಕೀಯ ಆಡಳಿತದ ಕಾಲವಾದ ಕ್ರಿ.ಶ. ೧೫೦೯ ರಿಂದ ಕ್ರಿ.ಶ. ೧೫೩೦ ರವರೆಗಿನ ಅವಧಿಯೇ ಈ ಪ್ರಬಂಧದ ಚೌಕಟ್ಟಿಗೆ ಒಳಪಟ್ಟಿದೆ. ಅಲ್ಲದೇ ಕೃಷ್ಣದೇವರಾಯನ ಕಾಲದಲ್ಲಿ ಕರ್ನಾಟಕದಲ್ಲಿ ನಿರ್ಮಾಣವಾದ ದೇವಾಲಯಗಳಲ್ಲದೇ ಅವನ ಕಾಲದಲ್ಲಿ ದಾನದತ್ತಿ ಪಡೆದ ದೇವಾಲಯಗಳು, ಜೀರ್ಣೋದ್ಧಾರಗೊಂಡ ದೇವಾಲಯಗಳನ್ನು ಗಮನಿಸಲಾಗಿದೆ. ಅಲ್ಲದೇ ಕೃಷ್ಣದೇವರಾಯನು ತನ್ನ ಯುದ್ಧದ ಸಂದರ್ಭದಲ್ಲಿ ರಾಜ್ಯವನ್ನು ಇತರೆ ಹೊರ ರಾಜ್ಯಗಳವರೆಗೂ ವಿಸ್ತರಿಸಿದ್ದನು. ಇಂದಿನ ರಾಜಕೀಯ ಭೌಗೋಳಿಕ ಗಡಿಯನ್ನು ಅನುಲಕ್ಷಿಸಿ

ತಮಿಳುನಾಡಿನ ಕಂಚಿಯ ವರದರಾಜ ದೇವಾಲಯ, ಶ್ರೀರಂಗಂನ ರಂಗನಾಥ ದೇವಾಲಯ, ಅಣ್ಣಿಯೂರಿನ ವರದರಾಜ ಪೆರುಮಾಳ್ ದೇವಾಲಯಗಳನ್ನು ಆಯ್ದುಕೊಳ್ಳಲಾಗಿದೆ. ಆಂಧ್ರಪ್ರದೇಶದ ಕೊಮ್ಮೂರಿನ ಪ್ರಸನ್ನಕೇಶವ ಪೆರುಮಾಳ್ ದೇವಾಲಯ, ಅಹೋಬಿಲಂನ ನರಸಿಂಹದೇವಾಲಯ, ತಿರುಪತಿಯ ವೆಂಕಟೇಶ್ವರ ದೇವಾಲಯ, ಶ್ರೀರಂಗಾಪುರಂನ ಶ್ರೀರಂಗನಾಥ ದೇವಾಲಯ, ಆದವಾನಿಯ ಪ್ರಸನ್ನರಾಮ ದೇವಾಲಯಗಳನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ.

ಈ ಅಧ್ಯಯನವು ಕರ್ನಾಟಕದ ದೇವಾಲಯಗಳಿಗೆ ಅಷ್ಟೇ ಅಲ್ಲದೆ ಕೆಲವು ಶಾಸನಗಳ ಉಲ್ಲೇಖ ಹಾಗೂ ಮಾಹಿತಿ ನಿರ್ದೇಶನದಂತೆ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ದೊರೆಯುವ ಕೃಷ್ಣದೇವರಾಯನ ಕಾಲದ ಕೆಲವು ದೇವಾಲಯಗಳನ್ನು ಸಂದರ್ಶಿಸಿ, ಕ್ಷೇತ್ರಕಾರ್ಯದ ಮೂಲಕ ವಿವರಗಳನ್ನು ಪಡೆದು ಅಲ್ಲಿಯ ದೇವಾಲಯಗಳನ್ನು ಅಧ್ಯಯನಕ್ಕೆ ಒಲಪಡಿಸಿಕೊಳ್ಳಲಾಗಿದೆ. ಅಲ್ಲದೇ ಸಾಂಸ್ಕೃತಿಕ ವಿವರಗಳನ್ನು ದಾನ - ದತ್ತಿಯ ಸಂದರ್ಭಗಳನ್ನು ವಿವರಿಸುವಾಗ ತಮಿಳುನಾಡು, ಆಂಧ್ರದ ಅನೇಕ ದೇವಾಲಯಗಳನ್ನು (ಶಾಸನಗಳಲ್ಲಿ ಉಕ್ತವಾಗಿರುವುವು) ಅಧ್ಯಯನದಲ್ಲಿ ಉದಾಹರಿಸಲಾಗಿದೆ. ಭೌಗೋಳಿಕ ಪರಿಸರದ ಅತಿವ್ಯಾಪ್ತಿ, ಕಾಲದ ಮಿತಿ ಮತ್ತು ಅಧ್ಯಯನದ ವಿಸ್ತಾರವನ್ನು ಗಮನಿಸಿಕೊಂಡು ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣ, ಜೀರ್ಣೋದ್ಧಾರವಾದ ಹೊರರಾಜ್ಯದಲ್ಲಿರುವ ಸಮಗ್ರ ದೇವಾಲಯಗಳನ್ನು ಈ ಅಧ್ಯಯನದಲ್ಲಿ ನೋಡಲಾಗಿಲ್ಲ.

ವಿಧಾನ

'ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು' ಎಂಬ ಈ ಪ್ರಬಂಧದಲ್ಲಿ ಮುಖ್ಯವಾಗಿ ಶಾಸನಗಳು ಕೆಲವು ಸಂದರ್ಭ ಗ್ರಂಥಗಳು ಹಾಗೂ ಕ್ಷೇತ್ರಕಾರ್ಯವನ್ನು ಅವಲಂಬಿಸಿ ಅಧ್ಯಯನ ಮಾಡಲಾಗಿದೆ. ಅಲ್ಲದೇ ವಿದೇಶಿ ಪ್ರವಾಸಿಗರ ಬರವಣಿಗೆಗಳನ್ನು ಗಮನಿಸಲಾಗಿದೆ. ಇದಕ್ಕೆ ಪೂರಕವೆಂಬಂತೆ ತೆಲುಗು ಸಾಹಿತ್ಯ ಕೃತಿಗಳನ್ನು ಬಳಸಿಕೊಳ್ಳಲಾಗಿದೆ. ಶಾಸನಗಳು ಐತಿಹಾಸಿಕವಾಗಿ ಅತ್ಯಮೂಲ್ಯ ಲಿಖಿತ ದಾಖಲೆಗಳಾಗಿವೆ. ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಅಲ್ಲದೇ ಇತ್ಯಾದಿ ಯಾವುದೇ ವಿಷಯಕ್ಕೆ ಲಿಖಿತ ದಾಖಲೆಗಳೇ ಪ್ರಧಾನವಾಗುತ್ತವೆ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಶಾಸನಗಳೇ ಮೂಲ ಆಕರಗಳಾಗಿವೆ. ಶಾಸನಗಳು ಆ ಕಾಲದ ಪ್ರಮುಖ ದಾಖಲೆಗಳು ಅವುಗಳಿಂದ ತಿಳಿದುಬರುವ ಮಾಹಿತಿಯು ಬಹಳಷ್ಟು ಚದುರಿದ ಹಾಗೂ ಬಿಡಿ ಮಾಹಿತಿಗಳೇ ಆದರೂ ಅವುಗಳನ್ನು ಒಂದು ಚೌಕಟ್ಟಿನಲ್ಲಿ ಪರಿಶೀಲಿಸಿದಾಗ ವಾಸ್ತು ಮತ್ತು ಅಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳನ್ನು ವಿಶ್ಲೇಷಿಸಲು ನೆರವಾಗುತ್ತವೆ. ಇಲ್ಲಿ ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳ ಮತ್ತು ಆಳ್ವಿಕೆಯ ಪ್ರಸ್ತಾಪವನ್ನು ಹೊಂದಿರುವ ಶಾಸನಗಳನ್ನು ಹೆಚ್ಚಿಗೆ ಮೂಲ ದಾಖಲೆಯಾಗಿ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ಸಮಕಾಲೀನ ಶಾಸನಗಳ ಹಿನ್ನೆಲೆಯಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳು, ಜೀರ್ಣೋದ್ಧಾರ ಹೊಂದಿದ ದೇವಾಲಯಗಳು, ದಾನದತ್ತಿಯನ್ನು ಪಡೆದ ದೇವಾಲಯಗಳು ಮತ್ತು ಅವುಗಳೆಲ್ಲವುಗಳಿಗೆ ದೊರೆತ ದಾನದತ್ತಿಗಳ ಪರಿಚಯ ಮಾಡಿಕೊಳ್ಳುವಾಗ ತಿಳಿದುಬರುವ ಸಾಂಸ್ಕೃತಿಕ ಮಹತ್ವವನ್ನು

ವಿಶ್ಲೇಷಿಸಲಾಗಿದೆ. ಈ ಕಾಲದ ಎಲ್ಲಾ ಶಾಸನಗಳನ್ನು ಸಂಗ್ರಹಿಸಿ ಅವುಗಳಲ್ಲಿರುವ ವಿಷಯಗಳ ಬಗ್ಗೆ ಪ್ರಪತ್ರವನ್ನು ಸಿದ್ಧಪಡಿಸಿ, ಅದರಲ್ಲಿ ಶಾಸನದ ಹೆಸರು, ಕಾಲ, ರಾಜ್ಯ, ಗ್ರಂಥ, ದೇವಾಲಯದ ಹೆಸರು, ನಿರ್ಮಾಣ, ಜೀರ್ಣೋದ್ಧಾರ, ದಾನದತ್ತಿ, ವಸ್ತುಗಳು, ಗ್ರಾಮಗಳು, ದಾನ ನೀಡಿರುವವರು, ಯಾರ ಒಳಿತಿಗಾಗಿ, ಶಾಸನ ಕವಿ ಇತರೆ ವಿವರಗಳನ್ನೊಳಗೊಂಡ ವಿವರವನ್ನು ಭರ್ತಿ ಮಾಡಿಕೊಳ್ಳಲಾಯಿತು. ಇದಲ್ಲದೆ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣ ಮತ್ತು ಜೀರ್ಣೋದ್ಧಾರ ಪಡೆದ ದೇವಾಲಯಗಳ ಪಟ್ಟಿಯೊಂದನ್ನು ತಯಾರಿಸಿಕೊಳ್ಳಲಾಯಿತು. ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಯಿಂದ ದೇವಾಲಯಗಳ ಬಗ್ಗೆ ಮಾಹಿತಿಯನ್ನು ಪಡೆದು ಕ್ಷೇತ್ರಕಾರ್ಯ ಮಾಡಬೇಕಾದ ಸ್ಥಳಗಳನ್ನು ಖಚಿತಪಡಿಸಿಕೊಳ್ಳಲಾಯಿತು. ದೇವಾಲಯದ ಹೆಸರು, ತಾಲೂಕು, ಜಿಲ್ಲೆ, ಅಕ್ಷಾಂಶ, ರೇಖಾಂಶ, ಸ್ಥಳ ನಿರ್ದೇಶನ, ದಿಕ್ಕು, ಕಾಲಮಾನ, ರಾಜವಂಶ, ಶೈಲಿ, ಸ್ಮಾರಕದ ವಿವರ, ಮೂರ್ತಿಶಿಲ್ಪಗಳು, ಛಾಯಾಚಿತ್ರ ವಿವರ, ಶಾಸನಗಳು, ಶಾಸನೋಕ್ತ ವಿಷಯ, ನಕ್ಷೆ ಇತರ ವಿವರಗಳನ್ನೊಳಗೊಂಡ ಪ್ರಪತ್ರವೊಂದನ್ನು ಸಿದ್ಧಪಡಿಸಿಕೊಂಡು ದೇವಾಲಯವಿರುವ ಸ್ಥಳಕ್ಕೆ ಹೋಗಿ ಅದನ್ನು ಭರ್ತಿಮಾಡಿಕೊಂಡು, ಜೊತೆಗೆ ಛಾಯಾಚಿತ್ರ ಗಳನ್ನು ತೆಗೆದುಕೊಳ್ಳಲಾಗಿದೆ.

ಅಲ್ಲದೆ ಈ ಮುಂಚೆ ಇದ್ದ ಕೆಲವು ದೇವಾಲಯಗಳ ರೇಖಾಚಿತ್ರಗಳನ್ನು ಬಳಸಿಕೊಂಡು, ಇನ್ನೂ ಕೆಲವು ದೇವಾಲಯಗಳ ರೇಖಾಚಿತ್ರಗಳನ್ನು ತಯಾರಿಸಲಾಗಿದೆ. ಈ ಮೊದಲು ಪ್ರಕಟಿತ ಗ್ರಂಥಗಳಿಂದ ಸಂಗ್ರಹಿಸಲಾದ ಟಿಪ್ಪಣಿ ಇತ್ಯಾದಿ ಮಾಹಿತಿಗಳನ್ನು ತಾತ್ವಿಕವಾಗಿ ವಿಶ್ಲೇಷಿಸಿ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಕ್ಷೇತ್ರ ಪರಿವೀಕ್ಷಣಾ ಕಾಲದಲ್ಲಿ ತೆಗೆದ ಛಾಯಾಚಿತ್ರಗಳು ಈ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಹೀಗೆ ಶಾಸನಗಳ ಆಧಾರದ ಮೇಲೆ ದೇವಾಲಯಗಳನ್ನು ಗುರುತಿಸಲು ಪ್ರಯತ್ನಿಸಲಾಗಿ ಅವುಗಳ ಹರವು ವಿಸ್ತಾರವಾಗಿರುವುದು ಕಂಡುಬಂದಿದೆ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪೂರಕ ಸಾಮಗ್ರಿಯೆಂದು ಪರಿಗಣಿಸಿ ಅರಸ, ರಾಜವಂಶ ಮತ್ತು ಸಾಮ್ರಾಜ್ಯದ ಮೇಲೆ ಬರೆದಿರಬಹುದಾದ ಚಾರಿತ್ರಿಕ ಗ್ರಂಥಗಳಲ್ಲದೆ ವಾಸ್ತು ಮತ್ತು ಮೂರ್ತಿಶಿಲ್ಪಗಳನ್ನು ಆಧಾರವಾಗಿಟ್ಟುಕೊಂಡು ರಚಿತವಾದ ಗ್ರಂಥಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಹೀಗೆ ಇವೆಲ್ಲವುಗಳ ಆಧಾರದ ಮೇಲೆ ಈ ಮಹಾಪ್ರಬಂಧವನ್ನು ರಚಿಸಲಾಗಿದೆ. ಪ್ರಬಂಧದಲ್ಲಿ ಆಯಾಯ ದೇವಾಲಯಗಳ ವಿಶ್ಲೇಷಣೆಯ ನಂತರ ಇದಕ್ಕೆ ಸಂಬಂಧಿಸಿದಂತೆ ನಕ್ಷೆ, ಛಾಯಾಚಿತ್ರ, ಚಿತ್ರಗಳನ್ನು ನೀಡಲಾಗಿದೆ. ಹಾಗೆಯೇ ಅನುಬಂಧದಲ್ಲಿ ಅಧ್ಯಯನಕ್ಕೆ ನೆರವಾದ ಮೂಲ ಮತ್ತು ಪೂರಕ ಆಕರ ಗ್ರಂಥಗಳ ಪಟ್ಟಿಯನ್ನು ಹಾಗೂ ಪಾರಿಭಾಷಿಕ ಪದಕೋಶವನ್ನು ನೀಡಲಾಗಿದೆ.

*

ಟಿಪ್ಪಣಿಗಳು

೧. ಚಿದಾನಂದಮೂರ್ತಿ, ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯

೨. ವೆಂಕೋಬರಾವ್, ಬಿ. ಮೈಸೂರು ದೇಶದ ವಾಸ್ತುಶಿಲ್ಪ, ಬೆಂಗಳೂರು, ೧೯೫೯

೩. ಶಿವರಾಮ ಕಾರಂತ, ಕೆ. ಭಾರತೀಯ ಶಿಲ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫

೪. ಅಸೂರಿ ಶ್ರೀನಿವಾಸ ಅಯ್ಯಂಗಾರ್, ಭರತಖಂಡದ ದೇವಾಲಯಗಳು

೫. ರಾಮಚಂದ್ರರಾವ್, ಎಸ್.ಕೆ. ಭಾರತೀಯ ದೇವಾಲಯ ನೆಲೆ ಹಿನ್ನೆಲೆ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೭೯

೬. ಚಿದಾನಂದಮೂರ್ತಿ, ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯

೭. ಎಚ್ಚೆಸ್ಕೆ (ಸಂ), ಕರ್ನಾಟಕದ ಪರಂಪರೆ ಸಮೀಕ್ಷೆ, ಕಸಂನಿರ್ದೇ, ಬೆಂಗಳೂರು, ೧೯೮೫

೮. ಷೇಕ್ ಅಲಿ (ಪ್ರ.ಸಂ), ಕರ್ನಾಟಕ ಚರಿತ್ರೆ, ಸಂ.೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭

೯. Ismail, K. Karnataka Temples, Sundeep Prakashana, Delhi, 1984

೧೦. Anita Vargees, Religious Traditions at Vijayanagara, American Institute of Indian Studies, New Delhi, 1995

೧೧. Anne, L. Della Piccola and others, The Ramachandra Temple at Vijayanagara, Manohar, American Institute of Indian Studies, New Delhi, 1992

೧೨. Bhargavi Shivaiah, Krishnadevaraya his life and achievements (Ph.D. Thesis), Karnataka University, Dharwad, 1972

೧೩. Jayanti, V.G. Hampi a Cultural Study (Ph.D. Thesis: Unpublished), Karnataka University, Dharwad, 1993

೧೪. Reddeppa, K. Vijayanagara Temples, Bharatiya Kala Prakashana, New Delhi

೧೫. Sarojini Konduri, Religion in Vijayanagara Empire, New Delhi, 1990

೧೬. Suresh, K.M. Sculptural Art of Hampi, Directorate of Archaeology and Museum, Mysore, 1998

೧೭. Salatore, B.A. Vijayanagara Art, Sundeep Prakashan, Delhi, 1982

೧೮. Rajashekara, S. Karnataka Architecture, Sujata Publications, Dharwad, 1985

೧೯. Patil, C.S. Temples of Bellary and Raichur District, Directorate of Archaeology and Museum, Mysore, 1994

೨೦. Shivarudra Swamy, N. Vijayanagara Temples in Karnataka, Directorate of Archaeology and Museum, Mysore, 1996

೨೧. ಗೋಪಾಲ, ಬಾ.ರಾ. ವಿಜಯನಗರದ ವಾಸ್ತುಶಿಲ್ಪ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩

೨೨. ರಾಜಶೇಖರ ಸಿಂದಗಿ, ಕರ್ನಾಟಕದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ

೨೩. ರಮಾನಂದ, ವಿಜಯನಗರ ಕಾಲದ ಶಾಸನಗಳು : ಸಾಂಸ್ಕೃತಿಕ ಅಧ್ಯಯನ (ಪಿಎಚ್.ಡಿ. ಮಹಾಪ್ರಬಂಧ : ಅಪ್ರಕಟಿತ) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೯

೨೪. ಸಜ್ಜನ, ಎಸ್.ಎಸ್. ವಿಜಯನಗರ ಕಾಲದ ಜಾತ್ರೆ ಮತ್ತು ಉತ್ಸವಗಳು (ಎಂ.ಫಿಲ್ ಪ್ರಬಂಧ : ಅಪ್ರಕಟಿತ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೬

❑❑

ಅಧ್ಯಾಯ ೨

ಚಾರಿತ್ರಿಕ ಹಿನ್ನೆಲೆ

೨

ಚಾರಿತ್ರಿಕ ಹಿನ್ನೆಲೆ

ಹದಿನಾಲ್ಕನೆಯ ಶತಮಾನದ ಆರಂಭಕ್ಕೂ ಮುನ್ನ ಭಾರತದ ರಾಜಕೀಯ ಚರಿತ್ರೆಯನ್ನು ಅವಲೋಕಿಸುವಾಗ ಹಿಂದೂ ಅರಸರ ಹಿಡಿತದಲ್ಲಿ ಹಲವು ಪ್ರದೇಶಗಳು ನೇರ ಆಳ್ವಿಕೆಗೆ ಒಳಪಟ್ಟಿದ್ದವು. ಆ ಪ್ರದೇಶದಲ್ಲಿ ಆಳ್ವಿಕೆ ಮಾಡಿದವರೆಂದರೆ ಮಧುರೆಯ ಪಾಂಡ್ಯರು, ತಂಜಾವೂರಿನ ಚೋಳರು, ದೇವಗಿರಿಯ ಯಾದವರು, ದ್ವಾರಸಮುದ್ರದ ಹೊಯ್ಸಳರು ಪ್ರಮುಖರು.

ಕ್ರಿ.ಶ. ೧೧ನೆಯ ಶತಮಾನದಲ್ಲಿ ಭಾರತವು ವಾಯುವ್ಯದಿಂದ ಬಂದ ಯವನರ ಧಾಳಿಯನ್ನು ಮೊಟ್ಟಮೊದಲ ಬಾರಿಗೆ ಕಂಡಿತು. ಮೊದಲ ಧಾಳಿಗಳು ಇಲ್ಲಿ ಯಾವುದೇ ವಾಸ್ತವ್ಯವನ್ನು ಹೂಡಲು ಮಾಡಿದ ಧಾಳಿಗಳಾಗಿರಲಿಲ್ಲ. ಆ ಧಾಳಿಗಳು ಆರ್ಥಿಕವಾಗಿ ಭಾರತದ ಅರಸುಮನೆತನಗಳ ಮತ್ತು ಅಲ್ಲಿನ ದೇವಾಲಯಗಳ ಸಂಪತ್ತನ್ನು ಕೊಳ್ಳೆ ಹೊಡೆಯುವ ಉದ್ದೇಶಕ್ಕೆ ಮಾತ್ರ ಸೀಮಿತವಾಗಿದ್ದವು. ಮುಂದೆ ಭಾರತದ ರಾಜಮನೆತನಗಳ ಬಲಹೀನತೆಯನ್ನು ಬಳಸಿಕೊಂಡು ದಿಲ್ಲಿಯ ಸುಲ್ತಾನನಾದ ಅಲ್ಲಾವುದ್ದೀನ್ ಖಿಲ್ಜಿಯು ದೇವಗಿರಿಯ ಮೇಲೆ ಯುದ್ಧ ಮಾಡಿ ಕ್ರಿ.ಶ. ೧೨೯೪ರಲ್ಲಿ ಅದನ್ನು ವಶಪಡಿಸಿಕೊಂಡನು. ಇವನ ನಂತರ ಖಿಲ್ಜಿಯ ಪ್ರಖ್ಯಾತ ದಂಡನಾಯಕನಾದ ಮಲ್ಲಿಕಾಫರ್‌ನ ವಿಪುಲ ಧಾಳಿಯು ಕ್ರಿ.ಶ. ೧೩೧೦ರಲ್ಲಿ ಓರಂಗಲ್ಲಿನ ಕಾಕತೀಯರು ಮತ್ತು ದೋರಸಮುದ್ರದ ಹೊಯ್ಸಳರ ಮೇಲೆ ನಡೆಯಿತು. ಈ ಅರಸು ಮನೆತನದವರು ಪ್ರತಿಧಾಳಿ ಮಾಡದೆ ಅವನ ಧಾಳಿಗೆ ತುತ್ತಾಗಿ ಕೊನೆಗೆ ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು.

ದಕ್ಷಿಣಭಾರತದ ರಾಜವಂಶಗಳ ಅರಸರು ಆಂತರಿಕವಾಗಿ ದುರ್ಬಲರಾಗಿದ್ದು, ಇವರು ಒಂದಲ್ಲ ಒಂದು ರೀತಿ ಯುದ್ಧಗಳಲ್ಲಿ ತೊಡಗಿರುತ್ತಿದ್ದರು. ಇವರು ಉತ್ತರದಿಂದ ಬಂದ ಮಹ್ಮದೀಯರನ್ನು ಎದುರಿಸುವಲ್ಲಿ ಎಂದೂ ಒಗ್ಗೂಡಲಿಲ್ಲ. ಕಾಕತೀಯರು ಮತ್ತು ಮಧುರೆಯ ಅರಸರು ತುಘಲಕರ ಕಾಲದಲ್ಲಿ ಅನುಭವಿಸಿದ ಯಾತನೆಯನ್ನು ವಿಲಾಸ ಶಾಸನವು "ಈ ಕ್ರೂರಿಗಳು ಶ್ರೀಮಂತರನ್ನು ಅವರ ಸಂಪತ್ತನ್ನು ಕಿತ್ತುಕೊಳ್ಳುವುದಕ್ಕಾಗಿ

ಹಿಂಸಿಸಿದರು. ಅನೇಕರು ಅವರ ಅನಿಷ್ಟ ಮುಖವನ್ನು ನೋಡಿದ ಕೂಡಲೇ ಹೆದರಿ ಸತ್ತರು. ರೈತರು ತಮ್ಮ ದುಡಿಮೆಯ ಫಲವನ್ನು ಕಳೆದುಕೊಂಡರು. ಯಾವುದೇ ರಕ್ಷಣೆಯಿಲ್ಲದೆ ಯವನರ ದೌರ್ಜನ್ಯದಿಂದ ಬೆಂದು ಹೋದರು"[೧] ಎಂದು ಉಲ್ಲೇಖಿಸುತ್ತದೆ.

ದೋರಸಮುದ್ರದ ಮೇಲೆ ದಂಡಯಾತ್ರೆಯನ್ನು ಕೈಗೊಂಡ ಮಲ್ಲಿಕಾಫರನು ಮೂರನೆಯ ಬಲ್ಲಾಳನನ್ನು ಸಂಪೂರ್ಣವಾಗಿ ಸೋಲಿಸಿ ದೆಹಲಿಗೆ ಕಳುಹಿಸಿದನು. ಇವನನ್ನು ಬರಮಾಡಿಕೊಂಡ ಖಿಲ್ಜಿಯು ಇವನ ಶಕ್ತಿ ಸಾಮರ್ಥ್ಯವನ್ನು ತಿಳಿದುಕೊಂಡಿದ್ದರಿಂದ ಗೌರವದಿಂದ ನಡೆಸಿಕೊಂಡು ಅವನನ್ನು ಬೀಳ್ಕೊಟ್ಟು ಸಾಮಂತನಾಗಿ ಇರುವುದಕ್ಕೆ ಅನುಗ್ರಹಿಸಿದನು. ಅರಸನು ಅಲ್ಲಿಂದ ದೋರಸಮುದ್ರಕ್ಕೆ ಬಂದ ನಂತರ ರಾಜಧಾನಿಯನ್ನು "ತಿರುವಣ್ಣಾಮಲೆ'ಗೆ ವರ್ಗಾಯಿಸಿದನು."[೨] ಇದರಿಂದ ಹೊಯ್ಸಳ ಸಾಮ್ರಾಜ್ಯವು ದಕ್ಷಿಣ ಭಾರತದ ಏಕೈಕ ಹಿಂದೂರಾಜ್ಯವಾಗಿ ಉಳಿಯಿತು. ದೇಶದ ಸ್ವಾತಂತ್ರ್ಯಕ್ಕಾಗಿ ಮೂರು ದಶಮಾನಗಳ ಕಾಲ ನಿಜವಾದ ಮಹಾಸಂಗ್ರಾಮವನ್ನು ಮುಮ್ಮಡಿ ಬಲ್ಲಾಳನು ಹೂಡಿದನೆಂಬ ಷೇಕ್ ಆಲಿಯವರ ಹೇಳಿಕೆ ಸಮಂಜಸವಾಗಿದೆ.[೩] ಮುಂದೆ ಎರಡನೆಯ ಬಾರಿಗೆ ಮಹ್ಮದೀಯರ ಧಾಳಿಗೆ ಹೊಯ್ಸಳರು ತುತ್ತಾಗಿ ಕ್ರಿ.ಶ. ೧೩೨೭ರಲ್ಲಿ ಸಂಪೂರ್ಣವಾಗಿ ಹೊಯ್ಸಳ ರಾಜ್ಯವು ನಾಶವಾಗುವ ತನಕ ನಾಮಕಾವಸ್ಥೆ ಆಳ್ವಿಕೆ ಮುಂದುವರೆಯಿತು.

ಇತ್ತ ತುಂಗಭದ್ರ ಸಮೀಪದಲ್ಲಿ ಆನೆಗೊಂದಿಯನ್ನು ಕೇಂದ್ರವಾಗಿ ಮಾಡಿಕೊಂಡು ಕಂಪಿಲ ಆಳ್ವಿಕೆ ಮಾಡುತ್ತಿದ್ದನು. ದಿಲ್ಲಿಯ ಮಹಮ್ಮದನ ಸೋದರಳಿಯ ಸುಲ್ತಾನನ ವಿರುದ್ಧ ದಂಗೆ ಎದ್ದುದರಿಂದ ಇವನನ್ನು ಸೆರೆಹಿಡಿಯಲು ಸುಲ್ತಾನನು ಆಜ್ಞಾಪಿಸಿದನು. ಇದರಿಂದ ಸುಲ್ತಾನನ ಅಳಿಯನು ರಕ್ಷಣೆಗಾಗಿ ಆನೆಗೊಂದಿಗೆ ಬಂದುದರಿಂದ ಕಂಪಿಲರಾಯ ರಾಜಾಶ್ರಯ ನೀಡಿದನು. ಕ್ರಿ.ಶ.ಸು. ೧೩೩೪ರಲ್ಲಿ ತುಘಲಕನು ಆನೆಗೊಂದಿಯ ಮೇಲೆ ದಾಳಿಯಿಟ್ಟು ಕಂಪಿಲರಾಯನನ್ನು ಸೋಲಿಸಿ ಆನೆಗೊಂದಿ ವಶಪಡಿಸಿಕೊಂಡನು. ಅಲ್ಲಿ ತನ್ನ ಪ್ರತಿನಿಧಿಯನ್ನಾಗಿ ಮಲ್ಲಿಕ್ ಮಹ್ಮದನನ್ನು ನೇಮಿಸಿ ದೆಹಲಿಗೆ ಹಿಂತಿರುಗಿದ. ಮಲ್ಲಿಕ್ ಮಹ್ಮದನಿಗೆ ಅಲ್ಲಿನ ಜನರನ್ನು ನಿಯಂತ್ರಿಸುವುದು ಕಷ್ಟವಾದ ಮೇಲೆ ಸುಲ್ತಾನನ ಅಪ್ಪಣೆಯ ಮೇರೆಗೆ ರಾಜ್ಯವನ್ನು ಸ್ಥಳೀಯರಿಗೆ ಕೊಡುವ ಉದ್ದೇಶದಿಂದ ಹರಿಹರನನ್ನು ರಾಜನನ್ನಾಗಿಯೂ ಬುಕ್ಕನನ್ನು ಮಂತ್ರಿಯನ್ನಾಗಿಯೂ ನೇಮಿಸಿ ದೆಹಲಿಗೆ ಹೊರಟು ಹೋದನು. ಈ ಸಹೋದರರಿಂದಲೇ ಮುಂದೆ ವಿಜಯನಗರ ರಾಜ್ಯ ಸ್ಥಾಪನೆಯಾಯಿತು."[೪]

ವಿಜಯನಗರ ಸಾಮ್ರಾಜ್ಯ

ಕ್ರಿ.ಶ. ೧೪ನೆಯ ಶತಮಾನದ ದಕ್ಷಿಣಭಾರತದ ರಾಜಕೀಯ ಇತಿಹಾಸದಲ್ಲಿ ಎಂದೂ ಕಾಣದ ಮಹತ್ವದ ಬದಲಾವಣೆಗಳು ಜರುಗಿದವು. ಅನಾದಿಕಾಲದಿಂದಲೂ ಬೆಳೆದು ಬಂದ ಹಿಂದೂಧರ್ಮ ಮತ್ತು ಸಂಸ್ಕೃತಿಯ ಪುನರುತ್ಥಾನಕ್ಕಾಗಿ ತಲೆಯೆತ್ತಿದ ಮಧ್ಯಕಾಲೀನ ಅರಸುಮನೆತನಗಳ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಹೆಚ್ಚಿನ ಮಹತ್ವವಿದೆ. ಅಂದಿನ ಸಾಂಸ್ಕೃತಿಕ ಸಂಘರ್ಷಗಳ ಬೆಳವಣಿಗೆಯಲ್ಲಿ ಹಲವಾರು ರೀತಿಯ ಏರುಪೇರುಗಳು ಸಂಭವಿಸಿದ್ದವು. ಉತ್ತರದಿಂದ ಬಂದಂತಹ ಯವನರ ದಾಳಿಗೆ ಇಡೀ ದಕ್ಷಿಣಭಾರತವು ಆಹುತಿಯಾಗುತ್ತಿದ್ದ ಕಾಲದಲ್ಲಿ ಅವರ ವಿರುದ್ಧ ದಂಗೆಯೆದ್ದ ಅರಸುಮನೆತನಗಳು ನಿಲ್ಲಲಾರದೆ ಕುಸಿದವು. ಇವರ ಅನಾರೋಗ್ಯ

ಸ್ಥಿತಿಯನ್ನು ಬಳಸಿಕೊಂಡು ಕನ್ನಡ ನೆಲದಲ್ಲಿ ಮುಂದೆ ಮಹಾಸಾಮ್ರಾಜ್ಯವಾಗಿ ಮೆರೆದ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾಯಿತು. ಈ ಸಾಮ್ರಾಜ್ಯವನ್ನು ಕ್ರಿ.ಶ. ೧೩೩೬ ರಿಂದ ಕ್ರಿ.ಶ. ೧೫೬೫ ರವರೆಗೆ ಸಂಗಮ, ಸಾಳುವ, ತುಳುವ, ಅರವೀಡು ಎಂಬ ನಾಲ್ಕು ಪ್ರಮುಖ ಅರಸುಮನೆತನದವರು ಆಳಿದರು. ಆದರೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಕಾಲ ಮತ್ತು ವಂಶಾವಳಿಯ ಮೂಲಗಳಲ್ಲಿಯೂ ಸಾಕಷ್ಟು ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಅನೇಕ ಬರಹಗಾರರು ಈ ವಿಷಯವಾಗಿ ತಮ್ಮ ಲೇಖನಗಳಲ್ಲಿ ಚರ್ಚಿಸಿದ್ದಾರೆ. ಆದರೆ ನನ್ನ ಅಧ್ಯಯನದ ಇತಿಮಿತಿಗೆ ಅನುಸಾರವಾಗಿ ಇಲ್ಲಿ ಚರ್ಚಿಸಲಾಗುತ್ತದೆ.

ವಿಜಯನಗರ ಸ್ಥಾಪನೆಯಲ್ಲಿ ಶಂಕರಾಚಾರ್ಯರು ಸ್ಥಾಪಿಸಿದ ಕ್ರಿ.ಶ. ೮ನೇ ಶತಮಾನದ ಶೃಂಗೇರಿ ಮಠದ ಪಾತ್ರ ಬಹಳ ಅಮೂಲ್ಯವಾದದು. ಇದರ ಬಗ್ಗೆ ಮಾಹಿತಿಯನ್ನು ನೀಡುವ ಶಾಸನಗಳು, ತಾಮ್ರ ಪತ್ರಗಳು, ಮಠದ ಕಡತಗಳು ಹೇರಳವಾಗಿ ದೊರಕುತ್ತವೆ. ಶೃಂಗೇರಿ ಮಠವು ಅದ್ವೈತದರ್ಶನವನ್ನು ಸ್ಮಾರ್ತ - ಭಾಗವತ - ಪಂಚಾಯತ ಪೂಜಾಕ್ರಮವನ್ನು ಪ್ರಸಾರ ಮಾಡಿತು. ಇದರಿಂದ ಧಾರ್ಮಿಕ ವಲಯದಲ್ಲಿ ಐಕ್ಯಮತ್ಯ ಏರ್ಪಟ್ಟು ಮಠದ ತಾತ್ವಿಕ ಚಿಂತನೆಗಳು ಸಂಗಮ ಸಹೋದರರಿಗೆ ಸಾಮ್ರಾಜ್ಯ ಸ್ಥಾಪನೆಯಲ್ಲಿ ಹೆಚ್ಚು ಪರಿಣಾಮ ಬೀರಿದವು. 'ಸಂಗಮವಂಶವು ಹಿಂದೂಧರ್ಮದ ಬೇರು ಎನಿಸಿದ ವೈದಿಕ ಮಾರ್ಗವನ್ನು ಸಂರಕ್ಷಿಸುವಲ್ಲಿ ಪ್ರಸಿದ್ಧವಾಗಿ ರೂಪುಗೊಂಡಿತು.''[೫] ಇದಕ್ಕೆ ಪುಷ್ಟಿಕೊಡುವಂತೆ ಬಾ.ರಾ.ಗೋಪಾಲರ ಹೇಳಿಕೆಯಲ್ಲಿ 'ಶೃಂಗೇರಿ ಮಠದ ಅನುಗ್ರಹ ಆ ಕಾಲಕ್ಕೆ ಅತ್ಯಂತ ಪ್ರಭಾವ ಶಾಲಿಯಾಗಿತ್ತು. ಜನತೆಯ ಅಧ್ಯಾತ್ಮಿಕ ತೃಷೆಯನ್ನು ಪೂರೈಸುವಂತಹ ಧರ್ಮಸಂಸ್ಥೆಯಾಗಿತ್ತು.''[೬]

ವಿಜಯನಗರ ಸಾಮ್ರಾಜ್ಯದ ಮೊದಲ ಅರಸು ಮನೆತನಗಳಲ್ಲಿ ಸಂಗಮವಂಶದ ಅರಸರು ಆಳ್ವಿಕೆ ನಡೆಸಿದರು. ಇವರು ಕ್ರಿ.ಶ. ೧೩೩೬ ರಿಂದ ಕ್ರಿ.ಶ. ೧೪೮೫ರ ವರೆಗೆ ಆಳಿದರು. ಇವರಲ್ಲಿ ಹಿರಿಯನಾದ ಹರಿಹರನು ಮೊದಲಿಗೆ ರಾಜ್ಯಭಾರ ಮಾಡಿದನು. ವಿಜಯನಗರವು ಪ್ರಾಚೀನ ಶೈವಕೇಂದ್ರವಾದ ಪಂಪಾವಿರೂಪಾಕ್ಷ ಕ್ಷೇತ್ರದಲ್ಲಿ ಸ್ಥಾಪನೆಯಾದುದರಿಂದ ಇವರು ತಮ್ಮ ಕ್ಷೇತ್ರದ ಅಧಿದೇವತೆಯ ಹೆಸರಲ್ಲಿ ಆಳ್ವಿಕೆ ಮಾಡಲು ನಿರ್ಣಯಿಸಿ ತಮ್ಮನ್ನು 'ಮಹಾಮಂಡಲೇಶ್ವರರು' ಎಂದು ಕರೆದುಕೊಂಡರು. ತಮ್ಮ ಶಾಸನಗಳಲ್ಲಿ 'ಶ್ರೀ ವಿರುಪಾಕ್ಷ' ಎಂಬ ಅಂಕಿತದೊಂದಿಗೆ ಕೊನೆಗೊಳಿಸಿರುವುದು ಕಂಡುಬರುತ್ತದೆ.''[೭] ಹೀಗೆ ವೈಯಕ್ತಿಕ ರಾಜಕೀಯ ಮಹತ್ವಾಕಾಂಕ್ಷೆಯಿಲ್ಲದೆ ಅವರು ಅಂದಿನ ಧಾರ್ಮಿಕ ರಕ್ಷಣೆಗೆ, ಸಂಸ್ಕೃತಿಯ ಉಳಿವಿಗೆ ಪಣತೊಟ್ಟು ಉನ್ನತವಾದ ಧ್ಯೇಯದೊಡನೆ ಕನ್ನಡ ಭೂಮಿಯಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿದರು. ರಾಜ್ಯ ಸ್ಥಾಪನೆಯಲ್ಲಿ ಶೃಂಗೇರಿ ಮಠದ ಪೂಜ್ಯ ಗುರುಗಳ ಆಶೀರ್ವಾದ ಬಹಳವಾಗಿ ಕಂಡುಬರುತ್ತದೆ. ಅವರು ಸಾಮ್ರಾಜ್ಯ ಸ್ಥಾಪನೆ ಮಾಡುವಲ್ಲಿ ಕೈಗೊಂಡ ಕ್ರಮವೆಂದರೆ ಧಾರ್ಮಿಕ ಸಾಮರಸ್ಯ. ಇದು ಆ ಕಾಲದ ಪರಿಸ್ಥಿತಿಯಲ್ಲಿ ಒಂದು ರಾಜಕೀಯ ಅಗತ್ಯವೂ ಆಗಿದ್ದಿತು. ಇದನ್ನು ಶೃಂಗೇರಿ ಮಠ ಹಾಗೂ ಅಲ್ಲಿನ ಗುರುಗಳ ಕೃಪಾಕಟಾಕ್ಷದಿಂದ ನೆರವೇರಿಸಿಕೊಂಡರು. ಸಾಮ್ರಾಜ್ಯದಲ್ಲಿ ಅವರು ಎಲ್ಲಾ ಧಾರ್ಮಿಕ ಪಂಥಗಳಿಗೆ ಸಮಾನ ರೀತಿಯ ಒಲವು ಮೂಡಿಸಿದರು. ಧಾರ್ಮಿಕ ಸಹಿಷ್ಣುತೆಯನ್ನು ಪ್ರೋತ್ಸಾಹಿಸಿಕೊಂಡು ತಮ್ಮ ಆಳ್ವಿಕೆಯನ್ನು ಮುಂದುವರಿಸಿದರು.

ಹರಿಹರನು ಮೊದಲನೆಯ ದೊರೆಯಾಗಿ ಆಳ್ವಿಕೆಗೆ ಬಂದ ಮೇಲೆ ಮೊಟ್ಟ ಮೊದಲ ಬಾರಿಗೆ ತನ್ನ ಆಡಳಿತ ಪ್ರದೇಶಗಳಲ್ಲಿನ ಹಲವು ಸಂಪದ್ಭರಿತ ಜ್ಞಾನನಿಧಿಗಳ ಖಜಾನೆಗಳು ಆಗಿದ್ದ ದಕ್ಷಿಣದ ದೇವಾಲಯಗಳು ಹಾಳುಗೆಡವಲ್ಪಟ್ಟಿದ್ದವು. ಅವುಗಳಿಗೆ ಧಾರಾಳವಾದ ಕೊಡುಗೆಗಳನ್ನು ನೀಡುವುದರ ಮೂಲಕ ದೇವಾಲಯವನ್ನು ಕಟ್ಟಿಸುವ ಅಥವಾ ಜೀರ್ಣೋದ್ಧಾರಗೊಳಿಸುವ ಹೊಣೆ ಹೊತ್ತಿದ್ದನ್ನು ಅವನ ಶಾಸನಗಳಿಂದ ತಿಳಿದುಬರುತ್ತದೆ. ಆದಕಾರಣ ಅವನಿಗೆ 'ಹಿಂದೂರಾಯ ಸುರತ್ರಾಣ' ಎಂಬ ಬಿರುದಿದ್ದಿತು. ಹರಿಹರನು ಕ್ರಿ.ಶ. ೧೩೪೬ರಲ್ಲಿ ಸ್ವತಂತ್ರವಾಗಿ ಆಳ್ವಿಕೆಗೆ ಬಂದಾಗ ತನ್ನ ವಿಜಯೋತ್ಸವವನ್ನಾಚರಿಸಲು ಶೃಂಗೇರಿಗೆ ದಾನದತ್ತಿಯನ್ನು ನೀಡಿದನು."[೮] ಶೃಂಗೇರಿಗೆ ಬರುವಾಗ ತನ್ನ ಸಹೋದರರನ್ನು ಕರೆದುಕೊಂಡು ಬಂದು ಶ್ರೀಭಾರತೀತೀರ್ಥರಿಗೆ ಭೂದಾನವನ್ನು ನೀಡಿದನು. ಹರಿಹರನು ಶೈವಧರ್ಮವನ್ನು ರಾಜಧರ್ಮವಾಗಿ ಸ್ವೀಕರಿಸಿದ ಮೇಲೆ ಮಿಕ್ಕ ಧರ್ಮಗಳನ್ನೂ ಸಮನ್ವಯತೆಯಿಂದ ಕಂಡನು. ಪ್ರಾಚೀನ ಕನ್ನಡಿಗರ ಬದುಕನ್ನು ರೂಪಿಸುವಲ್ಲಿ ರಾಜಶಕ್ತಿಯಂತೆ ಧರ್ಮಶಕ್ತಿ ಪ್ರಮುಖವಾದದ್ದು.[೯] ಈ ಧರ್ಮಶಕ್ತಿಯನ್ನು ಹರಿಹರನು ಗುರುಗಳ ಆಶೀರ್ವಾದದಿಂದ ಪಡೆದುಕೊಂಡಿದ್ದನು. ಧರ್ಮ ರಕ್ಷಣೆಗೆ ಪ್ರಾಚೀನ ಕಾಲದ ಅರಸರು ಹೆಚ್ಚು ಪ್ರಾಮುಖ್ಯತೆಯನ್ನು ನೀಡಿ ಧರ್ಮಸಮನ್ವತೆಯಲ್ಲಿ ಅವರು ಒಂದು ಹೆಜ್ಜೆ ಮುಂದಿದ್ದರು. ಧರ್ಮಶಕ್ತಿಯೇ ಅಂದಿನ ಮುಖ್ಯವಾದ ಬೆನ್ನೆಲುಬಾಗಿತ್ತು. ಕ್ರಿ.ಶ. ೧೩೪೨ರಲ್ಲಿ ಹರಿಹರನ ಆಜ್ಞೆಮೇರೆಗೆ ಇರುಗುಪ್ಪನೆಂಬುವನು ಜಿನಾಲಯವೊಂದನ್ನು ಆನೆಗೊಂದಿಯಲ್ಲಿ ಕಟ್ಟಿಸಿದನು. ಅದೇ ರೀತಿಯ ಹಂಪಿಯ ವಿರೂಪಾಕ್ಷ ದೇವಾಲಯದ ಜೀರ್ಣೋದ್ಧಾರವನ್ನು ಹರಿಹರನು ಮಾಡಿಸಿದನಲ್ಲದೆ, ಸಾಮ್ರಾಜ್ಯದಲ್ಲಿ ಎಲ್ಲ ಧರ್ಮಗಳಿಗೆ ಸಮಾನ ರೀತಿಯ ಪ್ರೋತ್ಸಾಹವನ್ನು ನೀಡಿದ್ದನು.

ವಿಜಯನಗರ ಸಾಮ್ರಾಜ್ಯದ ವಿಶಿಷ್ಟ ಧ್ಯೇಯಗಳಲ್ಲಿ ಸ್ವರಾಜ್ಯ, ಸ್ವಧರ್ಮ, ಸ್ವಸಂಸ್ಕೃತಿಗಳಿಗೆ ಗಂಡಾಂತರ ವನ್ನುಂಟು ಮಾಡಿದ ಸಂದರ್ಭದಲ್ಲಿ ಸ್ವಶಕ್ತಿಯನ್ನು ಸಂವರ್ಧಿಸಿ ಹಿಂದೂ ಧರ್ಮವನ್ನು, ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದು ಒಂದಾಗಿದ್ದಿತು. ಇದಕ್ಕಾಗಿ ಎಲ್ಲಾ ಧರ್ಮಗಳನ್ನು ಪೋಷಿಸುವ ಪರಂಪರಾಗತವಾದ ವಿದ್ಯೆ, ಜ್ಞಾನಶಾಖೆಗಳನ್ನು ಊರ್ಜಿತಗೊಳಿಸುವ ಭಾಷೆ - ಸಾಹಿತ್ಯ - ಕಲೆಗಳಿಗೆ ಪ್ರೋತ್ಸಾಹ ನೀಡುವ ಅಭಿಲಾಷೆಯನ್ನು ಈ ಸಾಮ್ರಾಜ್ಯದ ಅರಸರು ಹೊಂದಿದ್ದರು."[೧೦]

ಹರಿಹರನ ನಂತರ ಇವನ ಸೋದರ ಒಂದನೆ ಬುಕ್ಕನು ಕ್ರಿ.ಶ. ೧೩೫೬ ರಿಂದ ಕ್ರಿ.ಶ. ೧೩೭೭ರ ವರೆಗೆ ಆಳ್ವಿಕೆ ನಡೆಸಿದನು. ಇವನ ಕಾಲದಲ್ಲಿ ಸಾಮ್ರಾಜ್ಯವು ಹೆಚ್ಚು ವಿಸ್ತರಣೆ ಪಡೆಯಿತು. ಇವನು ತನ್ನ ಮಗ ಕಂಪಣ್ಣನ ನೆರವಿನಿಂದ ಸುಲ್ತಾನರ ಆಳ್ವಿಕೆಯಲ್ಲಿ "ಶ್ರೀರಂಗಂ ದೇವಾಲಯದಿಂದ ಕೊಂಡೊಯ್ದು ತಿರುಪತಿಯಲ್ಲಿ ರಕ್ಷಿಸಿದ್ದ ರಂಗನಾಥನ ಮೂರ್ತಿಯನ್ನು ಪುನಃ ಪ್ರತಿಷ್ಠೆ ಮಾಡಿಸಿದನು."[೧೧] ಧರ್ಮ ಸಂವರ್ಧನೆಗಾಗಿ ಕಂಪಣ್ಣನು ಕೈಗೊಂಡ ಕಾರ್ಯಗಳಲ್ಲಿ ಇದು ಮಹತ್ವದ್ದಾಗಿದೆ. ಇದಲ್ಲದೆ "ಮಧುರೆಯ ಮೀನಾಕ್ಷಿ ದೇವಾಲಯವನ್ನು ಪುನಃತೆರೆಯ ಲಾಯಿತು."[೧೨] ಇದನ್ನು ತಮಿಳುನಾಡಿನ ತಿರುಕ್ಕಲಕ್ಕುಡಿಯ ಶಾಸನದಲ್ಲಿ ಕಾಣಬಹುದು.

ಕಂಪಣ್ಣನ ಕಾಲದಲ್ಲಿ ದೇವಾಲಯಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ವಿವಾದಗಳನ್ನು ಬಗೆಹರಿಸುವುದಕ್ಕಾ ಗಿಯೇ ಆನೆಗೊಂದಿಯ 'ವಿಟ್ಟಪ್ಪನ್' ಎಂಬ ಬ್ರಾಹ್ಮಣ ಅಧಿಕಾರಿ ನಿಯುಕ್ತನಾಗಿದ್ದನು.[೧೩] ಅಂದಿನ ತಮಿಳು

ರಾಜ್ಯದಲ್ಲಿ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ವ್ಯವಸ್ಥೆಗಳು ಪುನಃ ಸಮರ್ಥವಾಗಿ ನೆಲೆಗೊಂಡು, ಪುನರುಜ್ಜೀವನಗೊಳ್ಳುವಲ್ಲಿ ವಿಜಯನಗರದ ಆಳ್ವಿಕೆ ಬಹುಮಟ್ಟಿಗೆ ನೆರವಾಯಿತು[೧೪] ಎಂಬ ದೀಕ್ಷಿತ್‌ರ ಅಭಿಪ್ರಾಯವು ಸಮಂಜಸವಾಗಿದೆ. 'ಹಿಂದೂ ಧರ್ಮದ ಆಧಾರ ಶಿಲೆಯಾದ ವೇದಗಳ ಮೇಲಿನ ವ್ಯಾಖ್ಯಾನಗಳ ಸಂಕಲನವನ್ನು ಬುಕ್ಕನು ಮಾಡಿಸಿದ್ದರಿಂದ ಅವನಿಗೆ ಅಮರಕೀರ್ತಿ ಲಭ್ಯವಾಗಿ 'ವೇದಮಾರ್ಗಪ್ರತಿಷ್ಠಾಪನಾಚಾರ್ಯ' ಎಂಬ ಬಿರುದು ದೊರಕಿತು. ಸಾಮ್ರಾಜ್ಯದಲ್ಲಿ ಜೈನರಿಗೂ ಮತ್ತು ಶ್ರೀವೈಷ್ಣವರಿಗೂ ನಡುವೆ ಉಂಟಾದ ಒಂದು ವ್ಯಾಜ್ಯದಲ್ಲಿ ಬುಕ್ಕನು ಕೈಗೊಂಡ ತೀರ್ಮಾನ ಮಹತ್ವದ್ದಾಗಿದೆ. ಕ್ರಿ.ಶ. ೧೩೬೮ರಲ್ಲಿ ವ್ಯಾಜ್ಯದ ತೀರ್ಮಾನದಂತೆ ಅಲ್ಪಸಂಖ್ಯಾತ ಜೈನರ ಹಕ್ಕು ಸೌಲಭ್ಯಗಳನ್ನು, ಹಿತಾಸಕ್ತಿಗಳನ್ನು ಕಾಪಾಡುವ ಹೊಣೆಯು ಬಹುಸಂಖ್ಯಾತ ಶ್ರೀವೈಷ್ಣವರ ಸಮುದಾಯಕ್ಕೆ ಸೇರಿದ್ದು. ಶ್ರೀವೈಷ್ಣವರಿಗೆ ಜೈನರ ಬಸದಿ ಚೈತ್ಯಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸಿದನು. ಜೈನರ ಕೈಯಲ್ಲಿ ಶ್ರೀವೈಷ್ಣವರ ಕೈಹಾಕಿ ಪ್ರತಿಜ್ಞೆ ಮಾಡಿಸಿದನು. ಸಾಮ್ರಾಜ್ಯದಲ್ಲಿ ಯಾವುದೇ ಆಂತರಿಕ ಕಲಹಗಳು ನಡೆಯದಂತೆ ಬುಕ್ಕನು ಆಡಳಿತವನ್ನು ನಿರ್ವಹಿಸಿದನು. ಇದನ್ನು ಕಲ್ಯ ಮತ್ತು ಶ್ರವಣಬೆಳಗೊಳ ಶಾಸನಗಳು ಉಲ್ಲೇಖಿಸುತ್ತವೆ.[೧೫] ಇದೊಂದು ಧಾರ್ಮಿಕ ಸಹಿಷ್ಣುತೆಯಲ್ಲಿ ಉನ್ನತವಾದ ತೀರ್ಮಾನವಾಗಿ ಉಳಿದಿದೆ.

ಇವನ ನಂತರ ೨ನೇ ಹರಿಹರನು ಕ್ರಿ.ಶ. ೧೩೭೭ರಲ್ಲಿ ಪಟ್ಟಕ್ಕೆ ಬಂದನು. ಇವನು ಮಹಾರಾಜಾಧಿರಾಜ ಮೊದಲಾದ ಚಕ್ರವರ್ತಿ ಸೂಚಕವಾದ ಬಿರುದುಗಳನ್ನು ಧರಿಸಿದ ವಿಜಯನಗರದ ಅರಸರಲ್ಲಿ ಇವನೇ ಮೊದಲಿಗನು.[೧೬] ಇವನ ಕಾಲದಲ್ಲಿ ಇಡೀ ದಕ್ಷಿಣಭಾರತವೆಲ್ಲಾ ಆಳ್ವಿಕೆಗೆ ಒಳಪಟ್ಟಿತ್ತು. ಇವನ ಆಡಳಿತಾವಧಿಯಲ್ಲಿ ವೇದಗಳ ಮೇಲಿನ ಭಾಷ್ಯರಚನೆಯ ಕಾರ್ಯವು ಸಮಾಪನೆಗೊಂಡಿತು. ಇದರಿಂದ ಇವನಿಗೆ 'ವೈದಿಕಮಾರ್ಗ ಸ್ಥಾಪನಾಚಾರ್ಯ' ಎಂಬ ಬಿರುದು ನೀಡಿ ಸನ್ಮಾನಿಸಲಾಯಿತು. ಇವನ ಆಳ್ವಿಕೆಯಲ್ಲಿ 'ಸಾಯಣಅಯ್ಯ, ಅಕ್ಷದನಾಥ ಒಡೆಯ ಇವರ ಆಡಳಿತದಲ್ಲಿ ಶ್ರೀನಲಾನು ಚಕ್ರವರ್ತಿ ಅಯ್ಯ ಎನ್ನುವವನು ಪಂಪಾತೀರದಲ್ಲಿ ನರಸಿಂಹದೇವರ ಮಂಟಪವನ್ನು ನಿರ್ಮಿಸಿದನು. ಈ ದೇವರನ್ನು ಆಹೋಬಲ ನರಸಿಂಹನೆಂದು ಕರೆದಿದೆ.'[೧೭] ಅದೇ ರೀತಿಯಲ್ಲಿ 'ಮಂತ್ರಿ ಬೈಚಪನ ಮಗ ಇರುಗಪ್ಪನು ಕುಂತಳ ದೇಶದ ವಿಜಯನಗರದಲ್ಲಿ ಕುಂಥುಜಿನಾಲಯವನ್ನು ಶಿಲೆಯಲ್ಲಿ ನಿರ್ಮಿಸಿದನು.'[೧೮] ಅಲ್ಲದೆ ಮಲಿಗೆಯ ನಾಯ್ಕನ ಮಗ ಬಥ್ಥೆಯ ನಾಯ್ಕನು ಬೇಟೆಗಾರರ ಹೆಬ್ಬಾಗಿಲಿನ ಪೂರ್ವದಿಕ್ಕಿನಲ್ಲಿ ಒರತೆಯ ಮೈಲಾರ ದೇವರನ್ನು ಪ್ರತಿಷ್ಠೆ ಮಾಡಿಸಿದನು.[೧೯] ಇದೆಲ್ಲದರಿಂದ ಇವನ ಆಡಳಿತವು ಪರಮತ ಸಹಿಷ್ಣುತೆಗೆ ಒಳ್ಳೆಯ ಉದಾಹರಣೆಯಾಗಿದೆ.

ಹರಿಹರನ ನಂತರ ದುರ್ಬಲ ಅರಸರು ಆಳ್ವಿಕೆ ಮಾಡಿದರು. ನಂತರ ಸಂಗಮ ಮನೆತನದಲ್ಲಿ ಪ್ರತಿಷ್ಠಿತ ದೊರೆಯಾದ ಪ್ರೌಢದೇವರಾಯನು ಕ್ರಿ.ಶ. ೧೪೨೩-೨೪ರಲ್ಲಿ ಆಳ್ವಿಕೆಗೆ ಬಂದನು. ಈತನು ಇಮ್ಮಡಿ ದೇವರಾಯನೆಂದೂ ಪ್ರಖ್ಯಾತನಾಗಿದ್ದಾನೆ. ಈತನ ಆಳ್ವಿಕೆಯಲ್ಲಿ ಭೇಟಿ ನೀಡಿದ ಅಬ್ದುಲ್ ರಜಾಕ್ ತನ್ನ ವರದಿಯಲ್ಲಿ "ಇಡೀ ಪ್ರಪಂಚದಲ್ಲಿಯೇ ಇಂತಹ ಇನ್ನೊಂದು ಪಟ್ಟಣವಿರುವುದನ್ನು ಕಣ್ಣಿದ್ದವರು ನೋಡಿರಲಾರರು, ಕಿವಿಯಿದ್ದವರು ಕೇಳಿರಲಾರರು; ಎನ್ನುವ ಮಾತುಗಳನ್ನು ಮನತುಂಬಿ ನುಡಿದಿರುವನು. ಅದರಂತೆ

ನಿಕೋಲೋಕೋಂತಿಯು ಗುಡ್ಡಗಳ ಪಕ್ಕದಲ್ಲಿರುವ ವಿಜಯನಗರ ಸುಮಾರು ೬೦ ಮೈಲು ಸುತ್ತಳತೆಯುಳ್ಳದ್ದಾಗಿದೆ. ಗುಡ್ಡದ ತುದಿಯವರೆಗೆ ಕೋಟೆಗೋಡೆಗಳು ಚಾಚಿವೆ. ಇಲ್ಲಿ ೯೦ ಸಾವಿರ ವೀರಯೋಧರಿದ್ದಾರೆಂದು ಹೇಳುವ ಜೊತೆಗೆ ಅಲ್ಲಿನ ಜನರ ಪರಾಕ್ರಮ, ರಸಿಕತೆ, ಹಬ್ಬಗಳು, ದೇವಾಲಯಗಳು ಮತ್ತು ಅವುಗಳಿಗೆ ಸೇರಿದ ವಿದ್ಯಾಸಂಸ್ಥೆಗಳನ್ನು ವರ್ಣಿಸುತ್ತಾನೆ. ಇಮ್ಮಡಿ ದೇವರಾಯ ಸರ್ವಧರ್ಮ ಸಮನ್ವಯ ಭಾವನೆ, ಔದಾರ್ಯಕ್ಕೆ ಅಷ್ಟೇ ಪ್ರಾಮುಖ್ಯತೆ ನೀಡಿದ್ದನು. ಇವನ ಕಾಲದಲ್ಲಿ ವೀರಶೈವ ಧರ್ಮವು ದೊಡ್ಡಧರ್ಮವಾಗಿ ರೂಪುಗೊಂಡಿತು. ಅರಸನ ಅಪಾರ ಪ್ರೋತ್ಸಾಹದ ಫಲವಾಗಿ ಸಾಮ್ರಾಜ್ಯದಲ್ಲಿ ಈ ಧರ್ಮವು ಹುಲುಸಾಗಿ ಬೆಳೆಯಿತು. ವೀರಶೈವರ ಆರಾಧ್ಯಕ್ಷೇತ್ರ ಶ್ರೀಶೈಲವಾಗಿದ್ದಿತು. ಇಮ್ಮಡಿ ದೇವಾರಾಯನು ವೀರಶೈವ ಧರ್ಮಕ್ಕೆ ನೀಡಿದ ಪ್ರೋತ್ಸಾಹವನ್ನು ಕುರಿತಂತೆ ಶಿವಮೊಗ್ಗ ಜಿಲ್ಲೆಯ ತೆಂಗಿನಪುರದಲ್ಲಿನ ಒಂದು ಶಾಸನವು ಇಮ್ಮಡಿ ದೇವರಾಯನನ್ನು "ವೀರಶೈವಾಗಮನುಸಾರ ಸಂಪನ್ನ"[೧೯] ಎಂದು ಉಲ್ಲೇಖಿಸಿದೆ.

ಪ್ರೌಢದೇವರಾಯನು ವೀರಶೈವನಾಗಿದ್ದರೂ ಸಾಮ್ರಾಜ್ಯದಲ್ಲಿ ಇನ್ನಿತರ ಮತಧರ್ಮಗಳನ್ನು ಸಮಾನ ಔದಾರ್ಯದಿಂದ, ಶ್ರದ್ಧೆಯಿಂದ ಗೌರವಿಸುತ್ತಿದ್ದನು. 'ಪಾನ್ ಸುಪಾರಿ ಬಜಾರಿನ ಪಾರ್ಶ್ವನಾಥ ಬಸದಿಯ ನಿರ್ಮಾಣ ಮತ್ತು ಮೂರ್ತಿಪ್ರತಿಷ್ಠಾಪನೆಗಳಿಗೆ ಇವನೇ ಕಾರಣನಾಗಿದ್ದನು.'[೨೦] ಅದೇ ರೀತಿ 'ಅಹಮದ್ ಖಾನ್ ಎಂಬ ಅಧಿಕಾರಿ ದೇವರಾಯನಿಗೆ ಪುಣ್ಯಪ್ರಾಪ್ತವಾಗಲೆಂದು ರಾಜಧಾನಿಯ ಮುಸ್ಲಿಂರ ವಾಸಸ್ಥಾನದಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದನು.'[೨೧] ಇಮ್ಮಡಿ ದೇವರಾಯನ ದಂಡನಾಯಕನಾದ ಲಕ್ಕಣ್ಣದಂಡೇಶನು ಕ್ರಿ.ಶ. ೧೪೨೦ರಲ್ಲಿ ವಿರೂಪಾಕ್ಷಪುರದ ಪ್ರಸನ್ನ ವಿರೂಪಾಕ್ಷ ದೇವಾಲಯದ ಗೋಪುರವನ್ನು ನಿರ್ಮಿಸಿದನು.[೨೨] ಇವನ ಕಾಲದಲ್ಲಿ ವೀರಶೈವ ಧರ್ಮಕ್ಕೆ ಬೆಂಬಲ ನೀಡಿದ್ದರೂ ಸರ್ವಧರ್ಮಗಳಿಗೆ ಆಶ್ರಯ ನೀಡಲಾಗಿತ್ತು. ಒಟ್ಟಾರೆಯಾಗಿ ಸಂಗಮ ದೊರೆಗಳ ತುಂಬು ಬೆಂಬಲದಿಂದ ವೀರಶೈವ ಸಾಹಿತ್ಯ, ಸಂಸ್ಥೆ ಮತ್ತು ಧರ್ಮಪ್ರಚಾರ ಕಾರ್ಯಗಳ ಸರ್ವತೋಮುಖ ಅಭಿವೃದ್ಧಿಗೆ ಬಲವಾದ ಪ್ರೇರಣೆಯನ್ನು ನೀಡಿತು. ಇದರ ಫಲವಾಗಿ ಒಂದೇ ಧರ್ಮಕ್ಕೆ ನೀಡಿದ ಅತಿ ಪ್ರೋತ್ಸಾಹವು ನಂತರದ ಕಾಲದಲ್ಲಿ ಪರಧರ್ಮದವರ ಕೆಂಗಣ್ಣಿಗೆ ಗುರಿಯಾಗಿ, ಸಾಮ್ರಾಜ್ಯದಲ್ಲಿ ವೈಷ್ಣವ ಧರ್ಮವು ರಾಜಧರ್ಮವಾಗಲು ಸಂಗಮರು ವೀರಶೈವ ಧರ್ಮಕ್ಕೆ ನೀಡಿದ ಪ್ರೋತ್ಸಾಹವೇ ಮುಖ್ಯ ಕಾರಣವಾಯಿತು ಎಂದರೆ ತಪ್ಪಾಗುವುದಿಲ್ಲ.

ಇಮ್ಮಡಿದೇವರಾಯನ ಮರಣಾನಂತರ ೨ನೇ ವಿಜಯ, ಮಲ್ಲಿಕಾರ್ಜುನ ಪಟ್ಟಕ್ಕೆ ಬಂದರು. ಇವರ ಆಡಳಿತವು ಅಷ್ಟೊಂದು ದಕ್ಷವಾಗಿರಲಿಲ್ಲ. ಇವರ ನಂತರ ಮುಮ್ಮಡಿ ವಿರೂಪಾಕ್ಷನು ಅರಸನಾದನು. ಇವನು ತನ್ನ ಆಳ್ವಿಕೆಯಲ್ಲಿ ಸಾಮ್ರಾಜ್ಯವನ್ನು ಮತ್ತಷ್ಟು ಹಾಳುಗೆಡವಿದನು. ಈ ಸಮಯವನ್ನರಿತ ವಿರೋಧಿ ಬಣಗಳು ಕೊಂಕಣ ಮತ್ತು ಗೋವೆಗಳನ್ನು ವಶಪಡಿಸಿಕೊಂಡರು. ಇಂಥ ಸುಸಂದರ್ಭವನ್ನು ಹಾಗೂ ರಾಜನ ಅಸಹಾಯಕತೆಯನ್ನು ಉಪಯೋಗಿಸಿಕೊಂಡು ಸಾಳುವ ನರಸಿಂಹನು ವಿಜಯನಗರ ಸಾಮ್ರಾಜ್ಯದ ಆಡಳಿತ ಸೂತ್ರವನ್ನು ಹಿಡಿದುಕೊಂಡನು. ಇಲ್ಲಿಗೆ ಸಂಗಮ ವಂಶವು ಕೊನೆಗೊಂಡು ಸಾಳುವ ಮನೆತನದವರು ಅರಸರಾಗಿ ಆಳ್ವಿಕೆ ನಡೆಸಿದರು.

ಸಂಗಮವಂಶದ ಕೊನೆಯ ಅರಸರ ಕಾಲದಲ್ಲಿ ಮಹತ್ವದ ಬದಲಾವಣೆಯೊಂದು ನಡೆಯಿತು. ಕೊನೆಯ ಅರಸನಾದ ಮುಮ್ಮಡಿ ವಿರೂಪಾಕ್ಷನು ಶೈವನಾಗಿದ್ದು ಕೊನೆಯಲ್ಲಿ ವೀರಶೈವ ಮತಧರ್ಮವನ್ನು ತ್ಯಜಿಸಿ ಶ್ರೀ ವೈಷ್ಣವ ಧರ್ಮಕ್ಕೆ ಮತಾಂತರಗೊಂಡನೆಂಬ ಸಂಗತಿಯನ್ನು 'ಪ್ರಪನ್ನಾಮೃತಂ' ಕೃತಿಯು ಉಲ್ಲೇಖಿಸುತ್ತದೆ. ಈ ಉಲ್ಲೇಖದ ಹಿನ್ನೆಲೆಯಲ್ಲಿ ಕಂಡುಬರುವುದೇನೆಂದರೆ ಸಂಗಮವಂಶದ ಕೊನೆಯಲ್ಲಿ ವೈಷ್ಣವ ಧರ್ಮವು ಪ್ರಗತಿಗೆ ಬಂದಿತ್ತು. ಇದು ಸಾಳುವ ಮತ್ತು ತುಳುವರ ಕಾಲಕ್ಕೆ ಉನ್ನತಿಯನ್ನು ಮುಟ್ಟಿ ಪ್ರಮುಖ ಧರ್ಮವಾಗಿ ವಿಜಯನಗರದಲ್ಲಿ ಕಾಣಿಸಿಕೊಂಡಿತು.

ಸಾಳುವ ವಂಶ

ಸಂಗಮವಂಶದ ವಿರೂಪಾಕ್ಷನನ್ನು ಸಿಂಹಾಸನದಿಂದ ಕೆಳಗಿಳಿಸಿ ಸಾಳುವ ಮನೆತನದ ನರಸಿಂಹನು ಪಟ್ಟಕ್ಕೆ ಬಂದನು. ಇಲ್ಲಿಗೆ ಸಂಗಮವಂಶವು ಕೊನೆಗೊಂಡು ಸಾಳುವ ಮನೆತನದ ಆಳ್ವಿಕೆ ಪ್ರಾರಂಭವಾಯಿತು. ಕ್ರಿ.ಶ. ೧೪೮೬ರಲ್ಲಿ ಸಿಂಹಾಸನವನ್ನೇರಿದ ನರಸಿಂಹನು ಕೇವಲ ಆರು ವರ್ಷಗಳು ಮಾತ್ರ ಆಳ್ವಿಕೆ ನಡೆಸಿದನು. ಇವನು ಸ್ವತಂತ್ರವಾಗಿ ಕಡಿಮೆ ಅವಧಿಯ ಆಡಳಿತವನ್ನು ಮಾಡಿದನು. ಇವನ ನಂತರ ನರಸಿಂಹನ ಮಗನು ತೀರಾ ಕಿರಿಯನಾಗಿದ್ದುದರಿಂದ ನರಸನಾಯಕನನ್ನು ರಾಜಪ್ರತಿನಿಧಿಯನ್ನಾಗಿ ನೇಮಿಸಲಾಗಿತ್ತು. ನರಸಿಂಹನಿಗೆ ಇಬ್ಬರು ಪುತ್ರರಿದ್ದು, ಅದರಲ್ಲಿ ದೊಡ್ಡವನಾದ ತಿಮ್ಮನು ಸಿಂಹಾಸನಕ್ಕೆ ಬಂದ ಮೇಲೆ ಅವನು ಕೊಲೆಗೀಡಾಗಬೇಕಾಯಿತು. ಇವನ ನಂತರ ಇಮ್ಮಡಿ ನರಸಿಂಹನು ಪಟ್ಟಕ್ಕೆ ಬಂದನು. ಆದರೆ ಇವನು ನಾಮಮಾತ್ರ ಅರಸನಾಗಿದ್ದನು. ವಾಸ್ತವ ಅಧಿಕಾರಗಳೆಲ್ಲ ತುಳುವ ನರಸನಾಯಕನ ಕೈಯಲ್ಲಿದ್ದವು. ಇದನ್ನು ನ್ಯೂನಿಜ್ ತನ್ನ ಕಥನದಲ್ಲಿ ಸ್ಥಿರಪಡಿಸುತ್ತಾನೆ. ನರಸನಾಯಕನಿಗೂ ಮತ್ತು ನರಸಿಂಹನಿಗೂ ಕಾಲಾಂತರದಲ್ಲಿ ವೈಮನಸ್ಸು ಉಂಟಾಗಿ ನರಸನಾಯಕನು ನರಸಿಂಹನನ್ನು ಗೃಹಬಂಧನದಲ್ಲಿಟ್ಟನು. ಇದರಿಂದ ನರಸನಾಯಕನು ವಸ್ತುತಃರಾಜನಾದಂತಾಯಿತು. ಕ್ರಿ.ಶ. ೧೫೦೩ರ ವರೆಗೆ ನರಸನಾಯಕನು ಆಡಳಿತ ನಡೆಸಿ ತೀರಿಕೊಂಡನು. ಇವನಿಗೆ ನಾಲ್ಕು ಜನ ಮಕ್ಕಳಿದ್ದು ಹಿರಿಯ ಮಗನಾದ ವೀರನರಸಿಂಹನು ತಂದೆಯ ಸ್ಥಾನದಲ್ಲಿ ರಾಜಪ್ರತಿನಿಧಿಯಾಗಿ ನೇಮಕಗೊಂಡು ಆಡಳಿತವನ್ನು ನಡೆಸಿದನು. ಮುಂದೆ ಕ್ರಿ.ಶ. ೧೫೦೫ರಲ್ಲಿ ಇಮ್ಮಡಿ ನರಸಿಂಹನು ಮಡಿದ ನಂತರ ತಾನೇ ಸಿಂಹಾಸನಾರೋಹಣ ಮಾಡಿ ಸಾರ್ವಭೌಮನೆನಿಸಿಕೊಂಡನು. ಇಲ್ಲಿಗೆ ಸಾಳುವ ವಂಶವು ಕೊನೆಗೊಂಡು ತುಳುವ ವಂಶವು ಅಧಿಕಾರ ವಹಿಸಿಕೊಂಡಿತು.


ತುಳುವ ವಂಶ

ತುಳುವ ವಂಶದ ಮೂಲದ ಬಗ್ಗೆ ನಮಗೆ ಶಾಸನಗಳು ಮತ್ತು ವಿದೇಶಿ ಪ್ರವಾಸಿಗರ ಬರಹಗಳು ತುಂಬಾ ಸಹಕರಿಸುತ್ತವೆ. ಇವರು ತಮ್ಮನ್ನು ತುಳುವರೆಂದುಕೊಂಡಿದ್ದು, ತಮ್ಮ ಮೂಲವು ತುರ್ವಸುವಿನ ವಂಶಕ್ಕೆ ಸೇರಿದ ಚಂದ್ರವಂಶದ ಕ್ಷತ್ರಿಯರು ಎಂದು ಗುರುತಿಸಿಕೊಂಡಿದ್ದಾರೆ.[೨೩] ಪುರಾಣ ವ್ಯಕ್ತಿಗಳಾದ ಚಂದ್ರನಿಂದ ಆರಂಭಿಸಿ ತುರ್ವಸುವಿನ ವಂಶದ ತುಳುವ ವಂಶದಲ್ಲಿ ಪ್ರಖ್ಯಾತನಾದ ತಿಮ್ಮ ಎನ್ನುವವನು ಉದಿಸಿದ. ಇವನ ಪತ್ನಿ ದೇವಕಿ,

ಇವರ ಮಗ ಈಶ್ವರ, ಇವರ ಪತ್ನಿ ಬುಕ್ಕಮ್ಮ, ಇವರ ಮಗ ನರಸ ಅಥವಾ ನರಸಿಂಹ. ಇವನಿಗೆ ಇಬ್ಬರು ಪತ್ನಿಯರು, ಮೊದಲ ಪತ್ನಿ ತಿಪ್ಪಾಜಿಯ ಗರ್ಭದಲ್ಲಿ ವೀರನರಸಿಂಹನು, ಎರಡನೆಯ ಪತ್ನಿ ನಾಗಲಾದೇವಿಯ ಗರ್ಭದಲ್ಲಿ ಕೃಷ್ಣದೇವರಾಯನು ಉದಿಸಿದ ಎಂದು ಹಂಪೆಯ ಶಾಸನದಲ್ಲಿ ಉಲ್ಲೇಖಿತವಾಗಿದೆ.

ಆದರೆ ತುಳುವರ ಮೂಲವನ್ನು ಗಮನಿಸಿದಾಗ ಅವರು ದಕ್ಷಿಣಕನ್ನಡ ಜಿಲ್ಲೆಯವರೆಂದು ಹೇಳಬಹುದು. ಅವರ ಮೂಲಸ್ಥಾನದಿಂದ ಇವರು 'ತುಳುವಾನ್ವಯ'ರಾಗಿ ಪರಿಚಿತರಾಗಿದ್ದಾರೆ ಎಂದು ಎಂ.ರಾಮರಾವ್ ಎಂಬ ಆಂಧ್ರದ ಇತಿಹಾಸಕಾರರು ಅಭಿಪ್ರಾಯಪಟ್ಟಿರುವರು.[೨೪] ಇವರೇ ಮುಂದೆ 'ತುಳುವ ಮನೆತನದ ಇತಿಹಾಸದಲ್ಲಿ ಉಲ್ಲೇಖಿತವಾದ ಪ್ರಥಮ ಸದಸ್ಯ ತಿಮ್ಮ. ಇವನು ತುಳುದೇಶದಲ್ಲಿ ಇದ್ದನು. ಮುಂದೆ ಈ ವಂಶ ಕಿಷ್ಕಿಂಧೆಗೂ ಚಂದ್ರಗಿರಿಗೂ ವಲಸೆ ಹೋಯಿತು.' ಚಂದ್ರಗಿರಿಯ ಸಾಳುವ ಅರಸರ ಬಳಿಯಲ್ಲಿ ಸೇವೆಗೆ ಸೇರಿಕೊಂಡು ಪ್ರಭುಗಳಿಂದ ಮೆಚ್ಚುಗೆಯನ್ನು ಪಡೆದರು. ಇವರ ಮೂಲ ನೆಲೆ ಗೇರುಸೊಪ್ಪೆಯೆಂಬುದು ಸೂರ್ಯನಾಥ ಕಾಮತರ ಅಭಿಮತ.[೨೫] ಇವರು ವಿಜಯನಗರಕ್ಕೆ ಬಂದ ಮೇಲೆ ಅಲ್ಲಿಯ ಸಾಳುವ ಅರಸರಿಗಿಂತ ನಾವು ಭಿನ್ನ ಎಂದು ತೋರಿಸಿಕೊಳ್ಳಲಿಕ್ಕೆ ತಮ್ಮನ್ನು ತುಳುವರೆಂದು ಕರೆದುಕೊಂಡಿದ್ದಾರೆ. ಇವರು ತಮ್ಮನ್ನು ತುಳು ಪ್ರದೇಶದವರೆಂದು ಹೇಳಿಕೊಂಡಿರುವರು.[೨೬] ಇದರಿಂದ ಇವರ ಮೂಲ ನೆಲೆ ತುಳು ಪ್ರದೇಶವಾಗಿತ್ತೆಂದು ಹೇಳಬಹುದು. ಅಲ್ಲದೆ ಕೃಷ್ಣದೇವರಾಯನು ಬರೆದ 'ಆಮುಕ್ತಮಾಲ್ಯದ' ದಲ್ಲಿ ಅನೇಕ ಕನ್ನಡ ಶಬ್ದಗಳು, ಕೆಲವು ತುಳು ಶಬ್ದಗಳಿದ್ದು, ಇದರಿಂದ ಅವನ ವಂಶಜರೂ ತುಳುವರೆಂಬುದು ಇದರಿಂದ ಖಚಿತವಾಗುತ್ತದೆ.[೨೭]

ಈ ತುಳುವ ಮನೆತನದ ಪೂರ್ವಜರು ಉತ್ತರ ಆರ್ಕಾಟು ಜಿಲ್ಲೆಯ ದೇವಕಿಪುರಂನಲ್ಲಿ ನೆಲೆಸಿದ್ದರು. ಅವರ ಉಲ್ಲೇಖವಿರುವ ಶಾಸನಗಳು ದೇವಿಕಾಪುರಂನ ಬೃಹದಾಂಬಾ ದೇವಾಲಯದಲ್ಲಿ ಇವೆ.[೨೮] ಆದರೆ ಹುಲ್ಷ್‌ರವರು ತಮ್ಮ ೧೯೧೨ರ ವಾರ್ಷಿಕ ವರದಿಯಲ್ಲಿ ತುಳುನಾಡಿನಿಂದ ಅವರು ದೇವಿಕಾಪುರಂಗೆ ವಲಸೆಹೋಗಿರಬೇಕೆಂದು ಅಭಿಪ್ರಾಯಪಟ್ಟಿರುವರು. ಅದೇ ರೀತಿ ಟಾಮ್ ಪೀರೇಸ್ ಎನ್ನುವ ಪೋರ್ಚುಗೀಸ್ ಲೇಖಕನು ದಿ ಸುಮಾ ಓರಿಯೆಂಟಲ್ ಎನ್ನುವ ಪ್ರವಾಸ ಕಥನವನ್ನು ಕ್ರಿ.ಶ. ೧೫೧೨-೧೫ರಲ್ಲಿ ಬರೆದನು. ಇವನು ತನ್ನ ಬರವಣಿಗಳಲ್ಲಿ ವಿಜಯನಗರ ಸಾಮ್ರಾಜ್ಯದ ಬಗ್ಗೆ ಉಲ್ಲೇಖವನ್ನು ನೀಡಿರುವನು. ಅದರಲ್ಲಿ ಪೀರೇಸ್‌ನು ನರಸಿಂಗ ಎನ್ನುವ ಭಾಗದಲ್ಲಿ ಕೃಷ್ಣದೇವರಾಯ ಮತ್ತು ಅವನ ಆಸ್ಥಾನದ ಬಗ್ಗೆ ಬರೆದಿರುವನು. ಕೃಷ್ಣದೇವರಾಯನು ಕೆನರಾ ಅಥವಾ ತುಳುನಾಡಿನವನು. ಅವನ ಸಹಜವಾದ ಭಾಷೆ ಕನ್ನಡ ಎಂದು ಅವನು ಮೌಲಿಕ ಮತ್ತು ಖಚಿತವಾದ ಮಾಹಿತಿಯನ್ನು ನೀಡಿದ್ದಾನೆ.[೨೯] ಒಟ್ಟಿನಲ್ಲಿ ವಿಜಯನಗರದ ಮೂರನೇ ರಾಜವಂಶವಾದ ತುಳುವ ಮನೆತನದವರ ಮೂಲ ಕರ್ನಾಟಕದ ಕೆನರಾವೆಂದು ಅವರು 'ತುಳುವ' ವಂಶದವರೆಂಬುದಂತೂ ಖಚಿತ. ಹೀಗಾಗಿ ಅವರ ವಂಶಾವಳಿಯನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.



ತುಳುವ ವಂಶದಲ್ಲಿ ನರಸನಾಯಕನು ಸಾಳುವರಿಗೆ ರಾಜಪ್ರತಿನಿಧಿಯಾಗಿ ಆಡಳಿತವನ್ನು ನಿರ್ವಹಿಸಿದ ಮೇಲೆ ಸಾಳುವ ಇಮ್ಮಡಿ ನರಸಿಂಹನು ಸಾಯುವವರೆಗೆ ತುಳುವ ವೀರನರಸಿಂಹನು ರಾಜಪ್ರತಿನಿಧಿಯಾಗಿದ್ದನು. ಇಮ್ಮಡಿ ನರಸಿಂಹ ತೀರಿದ ಬಳಿಕ ವೀರನರಸಿಂಹನು ಸ್ವತಂತ್ರವಾಗಿ ತುಳುವ ವಂಶದ ಮೊದಲನೆಯ ಅರಸನಾಗಿ ವಿಜಯನಗರ ಸಿಂಹಾಸನವನ್ನೇರಿದನು. ಇವನಿಂದ ತುಳುವ ವಂಶದ ಅಧಿಕಾರ ಸ್ಥಾಪನೆಗೊಂಡು ಸುಮಾರು ೭೦ ವರ್ಷಗಳ ಕಾಲ ತನ್ನ ಆಳ್ವಿಕೆಯನ್ನು ನಡೆಸಿ, ವಿಜಯನಗರವು ವೈಭವದ ಉತ್ತುಂಗ ಶಿಖರವನ್ನು ತಲುಪಿತು. ಮುಂದೆ ಭಾರತದ ಪ್ರಸಿದ್ಧ ಅರಸರ ಪಾಲಿಗೆ ಸೇರುವ ಒಬ್ಬ ರಾಜನನ್ನು ಈ ವಂಶವು ಕರ್ನಾಟಕಕ್ಕೆ ನೀಡಿತು. ಇದರಿಂದ ವಿಜಯನಗರದ ಹೆಸರು ದಶದಿಕ್ಕುಗಳಲ್ಲಿ ಮೊಳಗಿತು. ಉತ್ತಮವಾದ ಧ್ಯೇಯಗಳನ್ನು ಇಟ್ಟುಕೊಂಡು ಸ್ಥಾಪನೆಯಾದ ಸಾಮ್ರಾಜ್ಯವನ್ನು ಈ ಮನೆತನದವರು ಉನ್ನತ ಸ್ಥಿತಿಗೆ ತಲುಪಿಸಲು ಬಹಳವಾಗಿ ಶ್ರಮಿಸಿ ಅದರಲ್ಲಿ ಯಶಸ್ಸು ಕಂಡರು.

ವೀರನರಸಿಂಹ : ಇವನು ತುಳುವ ವಂಶದ ಮೊದಲನೆಯ ದೊರೆಯಾಗಿ ಆಳ್ವಿಕೆಗೆ ಬಂದನು. ಕ್ರಿ.ಶ. ೧೫೦೫ ರಿಂದ ಕ್ರಿ.ಶ. ೧೫೦೯ರ ವರೆಗೆ ಕೇವಲ ನಾಲ್ಕು ವರ್ಷಗಳ ಕಾಲ ಆಳ್ವಿಕೆ ಮಾಡಿ, ಆಡಳಿತದ ಅವಧಿಯಲ್ಲಿ ಸಾಮ್ರಾಜ್ಯದ ಆಗುಹೋಗುಗಳನ್ನು ರೂಪಿಸತೊಡಗಿದನು. ಆದರೆ ರಾಜ್ಯದ ಆಡಳಿತದಲ್ಲಿ ಒಳಸಂಚುಗಳು ಮತ್ತು ಸಾಮಂತರ ವಿರೋಧ, ಸಾಮ್ರಾಜ್ಯದ ಸುತ್ತಮುತ್ತಲ ಅರಸರ ಧಾಳಿಗಳು ಯಥೇಚ್ಛವಾದುದರಿಂದ ಇವನು ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ತರುವುದರಲ್ಲಿ ಶ್ರಮಿಸಿ ಕೊನೆಗೂ ಸಫಲನಾಗದೆ ತನ್ನ ಕೊನೆಯ ಆಡಳಿತದ ಅವಧಿಯಲ್ಲಿ ಅಸ್ವಸ್ಥನಾದನು. ಇದರಿಂದ ಸಾಮ್ರಾಜ್ಯದಲ್ಲಿ ಅರಸನ ವಿರುದ್ಧ ಪಟ್ಟಕ್ಕಾಗಿ ಅನೇಕ ಒಳಸಂಚುಗಳು ಪ್ರಾರಂಭವಾದವು. ಆಗ ವೀರನರಸಿಂಹನು ತಾನು ಬದುಕಿದ್ದ ಕಾಲದಲ್ಲೇ ತನ್ನ ಮಗನನ್ನು ಸಿಂಹಾಸನಕ್ಕೆ ತರಬೇಕೆಂದುಕೊಂಡನೆಂಬ ಒಂದು ಹೇಳಿಕೆಯೂ ಇದೆ. ಆದರೆ ಅದರಲ್ಲಿ ಹುರುಳಿಲ್ಲ. ಪ್ರಧಾನ ಮಂತ್ರಿಯ

ಅಪ್ಪಟ ಪ್ರೀತಿಗೆ ಪಾತ್ರನಾಗಿ ಬೆಳೆದ, ಸಮರ್ಥನಾದ ಶ್ರೀಕೃಷ್ಣದೇವರಾಯನನ್ನು ಪಟ್ಟಕ್ಕೆ ತರುವಲ್ಲಿ ತಿಮ್ಮರಸನ ಮುಂದಾಲೋಚನೆ ಆ ಸಮಯದಲ್ಲಿ ಫಲಕೊಟ್ಟಿತು.

ಕೃಷ್ಣದೇವರಾಯನ ಆಳ್ವಿಕೆ

ವಿಜಯನಗರ ಸಾಮ್ರಾಜ್ಯದ ಅರಸರಲ್ಲಿ ತುಳುವ ಮನೆತನದ ಶ್ರೀಕೃಷ್ಣದೇವರಾಯನಿಗೆ ಬಹಳ ಮಹತ್ವದ ಸ್ಥಾನವಿದೆ. ಕರ್ನಾಟಕದ ಹಾಗೂ ಕನ್ನಡಿಗರ ಸಂಸ್ಕೃತಿ ಮತ್ತು ಶೌರ್ಯ ಸಾಹಸಗಳನ್ನು ನಾಡಿನಾಚೆಗೂ ಹಬ್ಬಿಸಿದ ಕೀರ್ತಿವಂತನೆಂಬ ಖ್ಯಾತಿ ಇವನಿಗಿದೆ. ಇವನ ಆಳ್ವಿಕೆಯಲ್ಲಿ ನಾಡಿನಾದ್ಯಂತ ಸಾಹಿತ್ಯ, ಕಲೆ, ವಾಸ್ತುಶಿಲ್ಪಗಳು ವಿಶೇಷವಾಗಿ ಅಭಿವೃದ್ಧಿಗೊಂಡವು. ಸಾಮ್ರಾಜ್ಯದ ಶ್ರೇಯಸ್ಸಿಗೆ ತನ್ನ ಜೀವನವನ್ನೇ ಮುಡಿಪಾಗಿಟ್ಟ ಅಪರೂಪದ ಅರಸರಲ್ಲಿ ಶ್ರೀಕೃಷ್ಣದೇವರಾಯ ಒಬ್ಬ. ಇವನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಉನ್ನತಿಯ ತುತ್ತತುದಿಯನ್ನು ತಲುಪಿತು. ರಾಯನು ಅತ್ಯಂತ ಸಾಹಸಿಯೂ, ದಕ್ಷನೂ, ಸುಸಂಸ್ಕೃತ ವ್ಯಕ್ತಿಯೂ ಆಗಿದ್ದನು. ಇವನು ಪಟ್ಟಕ್ಕೆ ಬರುವ ಮುನ್ನ ಸಾಮ್ರಾಜ್ಯದ ಸ್ಥಿತಿ ಅಂತಃಕಲಹಗಳಿಂದ ಕೂಡಿತ್ತು. ಇಂತಹ ಕಠಿಣ ಸಮಯದಲ್ಲಿ ವಿಜಯನಗರ ಸಿಂಹಾಸನದ ಸೂತ್ರವನ್ನು ಹಿಡಿದುಕೊಂಡನು. ಇದರಿಂದ ಕರ್ನಾಟಕ ಚರಿತ್ರೆಯಲ್ಲಿ ಸಾಮ್ರಾಜ್ಯ ಲಕ್ಷ್ಮಿಯನ್ನು ಪ್ರತಿಷ್ಠಾಪಿಸಿ ವಿಜಯನಗರದ ಹೆಸರು ಚಿರಸ್ಥಾಯಿಯಾಗಿ ಉಳಿಯುವಲ್ಲಿ ಕಾರಣೀಭೂತನಾದನು.

ಜನನ : ಕೃಷ್ಣದೇವರಾಯನ ಜನನದ ಬಗ್ಗೆ ತಿಳಿಯುವಲ್ಲಿ ನಮಗೆ ಆಧಾರಗಳು ಸಿಗುವುದೆಂದರೆ ವಿದೇಶಿ ಪ್ರವಾಸಿಗರ ವರದಿಗಳಿಂದ ಮತ್ತು ಕೃಷ್ಣದೇವರಾಯನ ಮಗಳು ಮೋಹನಾಂಗಿಯ 'ಮಾರೀಚೀಪರಿಣಯಂ' ಕಾವ್ಯದಿಂದ ಮಾತ್ರ. ಹುಟ್ಟಿನ ಬಗ್ಗೆ ಮೋಹನಾಂಗಿಯ ಹೇಳಿಕೆಗೆ ಮತ್ತು ನ್ಯೂನಿಜ್‌ನ ಹೇಳಿಕೆಗೆ ಸರಿಹೊಂದಾಣಿಕೆ ಬರುವುದಿಲ್ಲ. 'ಕೃಷ್ಣದೇವರಾಯನು ಅರಸನಾಗಿ ಪಟ್ಟಕ್ಕೆ ಬರುವ ವೇಳೆಗೆ ಅವನಿಗೆ ಇಪ್ಪತ್ತು ವರ್ಷಗಳಿಗಿಂತ ಹೆಚ್ಚು ವಯಸ್ಸಾಗಿದ್ದಿತು' ಎಂದು ನ್ಯೂನಿಜನು ತನ್ನ ವರದಿಯೊಂದರಲ್ಲಿ ಹೇಳಿರುವನು.[೨೦] ರಾಯನು ಪಟ್ಟಕ್ಕೆ ಬಂದದ್ದು ಕ್ರಿ.ಶ. ೧೫೦೯ ಎಂದು ಕೊಂಡರೆ ಆತ ಹುಟ್ಟಿದ್ದು ಕ್ರಿ.ಶ. ೧೪೮೯ರ ಸುಮಾರಿಗೆ ಎಂದು ತಿಳಿಯಬಹುದು. ಆದರೆ ಈ ದಿನಾಂಕದ ಬಗ್ಗೆ ಚರಿತ್ರೆಕಾರರಲ್ಲಿ ಒಮ್ಮತವಿಲ್ಲ. ಆದರೆ ಕೃಷ್ಣದೇವರಾಯನ ಮಗಳು ಮೋಹನಾಂಗಿಯು ಬರೆದಿರುವ 'ಮಾರೀಚೀಪರಿಣಯಂ' ಎಂಬ ಕಾವ್ಯದಲ್ಲಿ ರಾಯನ ಜನನಕಾಲ, ಅವನ ಚಾರಿತ್ರಿಕ ವಿಷಯಗಳ ಬಗ್ಗೆ ದಾಖಲಿಸಿದ್ದಾಳೆ. ಇದು ರಾಯನ ಬಗ್ಗೆ ಮಾಹಿತಿ ನೀಡುವ ಮಹತ್ವದ ಕಾವ್ಯ. ಈ ಕಾವ್ಯದ ಪ್ರಕಾರ ಕೃಷ್ಣರಾಯ ಹುಟ್ಟಿದ್ದು ಶಕ ಸಂವತ್ಸರ ೧೩೯೩, ವಿಕೃತಿ ಸಂವತ್ಸರದ ಪುಷ್ಯ ಬಹುಳ ದ್ವಾದಶಿ ಶುಕ್ರವಾರದಂದು ಎಂದು ಹೇಳಿರುವಳು.[೨೧] ಇದರನ್ವಯ ಕ್ರಿ.ಶ. ೧೪೭೧ ಜನವರಿ ೧೭ ಕೃಷ್ಣದೇವರಾಯನು ಹುಟ್ಟಿದ ದಿನವಾಗುತ್ತದೆ. ಅಂದರೆ ಕೃಷ್ಣದೇವರಾಯನ ಮೊದಲ ಮಗ ತಿರುಮಲರಾಯನನ್ನು ಪಟ್ಟಕ್ಕೆ ಕೂಡಿಸಿದಾಗ ರಾಯನಿಗೆ ೫೩ ವರ್ಷ ವಯಸ್ಸಾಗಿದ್ದಿತು. ಈ ಹೇಳಿಕೆಯು ನ್ಯೂನಿಜ್‌ನ ಇನ್ನೊಂದು ಹೇಳಿಕೆಗೆ ಸರಿಹೊಂದುತ್ತದೆ. 'ಕ್ರಿ.ಶ. ೧೫೨೪ರ ವೇಳೆಗೆ ರಾಯನಿಗೆ ತುಂಬಾ ವಯಸ್ಸಾಗಿದ್ದು ಮುಪ್ಪಿನಲ್ಲಿ ವಿಶ್ರಾಂತಿಯನ್ನು ಪಡೆಯಬೇಕೆಂಬ ಇಚ್ಛೆಯಿತ್ತು' ಎಂದು ಹೇಳಿರುವನು.[೨೨] ಈ ಹೇಳಿಕೆಯ ಸಮರ್ಥನೆಗೆ ಮೋಹನಾಂಗಿಯ ಕಾವ್ಯವು ಪುಷ್ಟಿಕೊಡುತ್ತದೆ. ಕಾರಣ ರಾಯನ ಜನನದ ಕಾಲವು ಕ್ರಿ.ಶ. ೧೪೬೫ ರಿಂದ ಕ್ರಿ.ಶ. ೧೪೭೧ರ ಒಳಗೆ ಇರಬಹುದೆಂದು ಊಹಿಸಬಹುದು.

ಕೃಷ್ಣದೇವರಾಯನ ಹುಟ್ಟುಹಬ್ಬವನ್ನು ವಿಜಯನಗರದ ಅರಸರೆಲ್ಲರ ಹುಟ್ಟುಹಬ್ಬದಂತೆ ಬಹಳ ವಿಜೃಂಭಣೆಯಿಂದ ನಾಡಿನಲ್ಲೆಲ್ಲಾ ಆಚರಿಸುತ್ತಿದ್ದರು.[೩೩] ಇದನ್ನು ಡೋಮಿಂಗ್ ಪಾಯಸನು ತನ್ನ ವರದಿಯಲ್ಲಿ ಉಲ್ಲೇಖಿಸಿರುವನು. ಅರಸನ ಹುಟ್ಟುಹಬ್ಬದಂದು ನಾಡಿನ ಸಾಮಂತರೆಲ್ಲಾ ವಿಜಯನಗರಕ್ಕೆ ಬಂದು ಅರಸನಿಗೆ ಶುಭಾಶಯವನ್ನು ತಿಳಿಸಿ ಕಪ್ಪಕಾಣಿಕೆ ಹಾಗೂ ಅಮೂಲ್ಯವಾದ ಕೊಡುಗೆಗಳನ್ನು ನೀಡುತ್ತಿದ್ದರು. ಪಯಾಸ್‌ನು ಹುಟ್ಟುಹಬ್ಬವು ಯಾವದಿನ ನಡೆಯುತ್ತಿತ್ತು ಎನ್ನುವುದನ್ನು ಖಚಿತವಾಗಿ ತಿಳಿಸಿರುವುದಿಲ್ಲ.

ಪಟ್ಟಾಭಿಷೇಕ : ಶ್ರೀಕೃಷ್ಣದೇವರಾಯನು ವಿಜಯನಗರ ಸಿಂಹಾಸನಕ್ಕೆ ಬಂದುದು ಶಾಲಿವಾಹನ ಶಕೆ ೧೪೩೧ ರಲ್ಲಿ ಎನ್ನಬಹುದು. ಈ ಪಟ್ಟಾಭಿಷೇಕ ನಡೆಯುವ ಕಾಲಕ್ಕೆ ನ್ಯೂನಿಜ್‌ನು ಒಂದು ಕಥೆ ಕಟ್ಟಿಕೊಟ್ಟಿದ್ದಾನೆ. ವೀರನರಸಿಂಹನು ತಾನು ಸಾಯುವ ಕಾಲಕ್ಕೆ ತನ್ನ ಮಗನನ್ನು ಸಿಂಹಾಸನಕ್ಕೆ ತರಬೇಕೆಂದು ಬಯಸಿ ತನ್ನ ತಮ್ಮ ಕೃಷ್ಣದೇವರಾಯನ ಕಣ್ಣುಗಳನ್ನು ಕೀಳಿಸಿ ತೆಗೆದುಕೊಂಡು ಬರಲು ಆಜ್ಞೆ ಮಾಡಿದನು. ಇದರಿಂದ ಪಾರುಮಾಡಲು ಮಹಾಮಂತ್ರಿ ತಿಮ್ಮರಸನು ಆಡಿನ ಕಣ್ಣುಗಳನ್ನು ತೆಗೆದುಕೊಂಡು ಬಂದು ನೀಡಿದನು. ಇದರಿಂದ ಸಂತೋಷಗೊಂಡ ವೀರನರಸಿಂಹನು ಸುಖಾಂತವಾಗಿ ಪ್ರಾಣಬಿಟ್ಟನು. ಭಾರತದ ಅತ್ಯುನ್ನತ ಅರಸರಲ್ಲಿ ಒಬ್ಬನಾದ ಕೃಷ್ಣದೇವರಾಯನ ಪುನರ್ಜನ್ಮಕ್ಕೆ ತಿಮ್ಮರಸನು ಕಾರಣನಾದನು ಎಂದು ಹೇಳಿರುವನು. ಕೃಷ್ಣದೇವರಾಯನ ಪಟ್ಟಾಭಿಷೇಕವು ಎರಡೆರಡು ಬಾರಿ ಆಗಿರುವುದು ಕಂಡುಬರುತ್ತದೆ. ಮೊದಲನೆಯದಾಗಿ ಕ್ರಿ.ಶ. ೧೫೦೯-೧೦ರಲ್ಲಿ ವೀರನರಸಿಂಹನು ಬದುಕಿರುವ ಕಾಲಕ್ಕೆ ರಾಯನು ಜಂಟಿ ಅರಸನಾಗಿ ಪಟ್ಟಾಭಿಷಕ್ತನಾದನು. ಎರಡನೆಯದಾಗಿ ವೀರನರಸಿಂಹನು ಮಡಿದ ಮೇಲೆ ಕ್ರಿ.ಶ. ೧೫೧೩ರಲ್ಲಿ ಪಟ್ಟಾಭಿಷಕ್ತನಾದನು. ಇಲ್ಲಿ ಕೃಷ್ಣದೇವರಾಯನ ಪಟ್ಟಾಭಿಷೇಕದ ಬಗ್ಗೆ ಶಾಸನಗಳು, ಕಾವ್ಯಗಳು, ವಿದೇಶಿ ಪ್ರವಾಸಿಗರ ವರದಿಗಳು ನೀಡುವ ಕೆಲವು ಮಾಹಿತಿಗಳನ್ನು ತಾಳೆಹಾಕಿ ನೋಡಬೇಕಾಗುತ್ತದೆ.

ಕೃಷ್ಣದೇವರಾಯನು ರತ್ನಸಿಂಹಾಸನಾರೋಹಣ ಮಾಡಿದುದರ ಬಗ್ಗೆ ಅನೇಕ ವಾದಗಳಿವೆ. ತುಳುವ ವಂಶದ ವೀರನರಸಿಂಹರಾಯರು ವಿಜಯನಗರ ಸಾಮ್ರಾಜ್ಯವನ್ನು ನಡೆಸುತ್ತಿದ್ದರು ಎಂದು ಸಾರುವ ಶಾಸನಗಳು ಕ್ರಿ.ಶ. ೧೫೦೯ನೇ ಇಸ್ವಿ ಜುಲೈ ೧೭ನೇ ದಿನಾಂಕದವರೆಗೆ ದೊರಕುತ್ತವೆ.[೩೪] ಶ್ರೀಕೃಷ್ಣದೇವರಾಯನ ನಾಮಾಂಕಿತವಿರುವ ಮೊಟ್ಟ ಮೊದಲ ಶಾಸನವೂ ಗೊಳ್ಳಂ ಗ್ರಾಮದಲ್ಲಿದೆ. ಅದರ ಕಾಲವು ಕ್ರಿ.ಶ. ೧೫೦೯ನೇ ಜುಲೈ ತಿಂಗಳ ೨೬ ಎಂದಿದೆ. ಇದಲ್ಲದೆ ಎಪಿಗ್ರಾಫಿಯ ಕರ್ನಾಟಕದ ಮುನ್ನುಡಿಯಲ್ಲಿ ಕೃಷ್ಣದೇವರಾಯನ ಪಟ್ಟಾಭಿಷೇಕವಾದದು ಕ್ರಿ.ಶ. ೧೫೦೯ ಆಗಸ್ಟ್ ೮ನೆಯ ತಾರೀಖು ಶ್ರೀಜಯಂತಿ (ಕೃಷ್ಣಜನ್ಮಾಷ್ಟಮಿ)ಯ ಪವಿತ್ರ ದಿನದಂದು[೩೫] ಎಂದು ಹೇಳಲಾಗಿದೆ. ಇದನ್ನೇ ಕರ್ನಾಟಕ ಪರಂಪರೆ ಸಂಪುಟ ೩ರಲ್ಲಿ ಕ್ರಿ.ಶ. ೧೫೦೯ ವೀರನರಸಿಂಹನು ಆಕಸ್ಮಾತ್ತಾಗಿ ಮಡಿದ ಮೇಲೆ ರಾಯನು ಪಟ್ಟಕ್ಕೆ ಬಂದನು. ಕ್ರಿ.ಶ. ೧೫೦೯ನೇ ಆಗಸ್ಟ್ ಎಂಟನೆಯ ತಾರೀಖು, ಕೃಷ್ಣಜನ್ಮಾಷ್ಟಮಿ ದಿನದಂದು ವಿಜಯನಗರದ ಸಿಂಹಾಸನವನ್ನೇರಿ ಕಿರೀಟಧಾರಣೆ ಮಾಡಿಕೊಂಡನು[೩೬] ಎಂದು ಹೇಳಲಾಗಿದೆ.

ಕೃಷ್ಣದೇವರಾಯನ ಪಟ್ಟಾಭಿಷೇಕದ ಬಗ್ಗೆ ಮಾಹಿತಿ ನೀಡುವ ಇನ್ನೊಂದು ಶಾಸನವು ಹಂಪಿಯ ವಿರೂಪಾಕ್ಷ ದೇವಾಲಯದ ರಂಗಮಂಟಪದ ಎಡಕ್ಕೆ ನಿಲ್ಲಿಸಲಾಗಿದೆ. ಈ ಶಾಸನದಲ್ಲಿ ಕಾಲವು ಶಾಲಿವಾಹನ ಶಕವರ್ಷ ೧೪೩೦ನೆಯ ಶುಕ್ಲ, ಮಾಘ, ಶು.೧೪ ಎಂದಿದೆ. ಇದರ ಕಾಲವು ಕ್ರಿ.ಶ. ೨೪-೧-೧೫೧೦ಕ್ಕೆ ಸಮವಾಗುತ್ತದೆ.

'ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕದ ದಿನ ವಿರೂಪಾಕ್ಷದೇವರ ಅಮೃತಪಡಿ ಮತ್ತು ನೈವೇದ್ಯ ಸೇವೆಗಾಗಿ ಸಿಂಗನಾಯಕನಹಳ್ಳಿಯನ್ನು ನೀಡುತ್ತಾನೆ. ಆ ದಿನದ ನೆನಪಿಗಾಗಿ ವಿರೂಪಾಕ್ಷ ದೇವರ ದೇವಾಲಯದ ಮುಂದಿನ ರಂಗಮಂಟಪವನ್ನು, ಅದರ ಮುಂದಿನ ಗೋಪುರವನ್ನು ಕಟ್ಟಿಸುತ್ತಾನೆ. ಇದು ರಾಯನ ಕಾಲದ ಪಟ್ಟಾಭಿಷೇಕದ ದಿನವಾಗಿರದೆ ನಂತರ ಕಾಲದ್ದೆಂದು ಗುರುತಿಸಬಹುದು. ಈ ಶಾಸನದಲ್ಲಿ.....ಪ್ರತಿವರ್ಷ ಪ್ರವರ್ತಿತ ಕನಕವಸಂತ ಮಹೋತ್ಸವೇನ ಸವೇನ ಕೃತಾರ್ದ್ರಿತಿ ವಿಪ್ರ, ಸಾರ್ಥೇ.....ಎಂಬ ನುಡಿಗಳನ್ನು ಬರೆದಿರುವುದರಿಂದ ಗೊಂದಲಕ್ಕೀಡು ಮಾಡಿದೆ. ಇದನ್ನು ಸಮರ್ಥಿಸುವ ಸಿಂಗನಾಯಕನಹಳ್ಳಿಯ ಶಾಸನವನ್ನು ಸಿ.ಎಸ್.ಪಾಟೀಲ್ ಮತ್ತು ಬಾಲಸುಬ್ರಹ್ಮಣ್ಯ ಇವರು ಪ್ರಕಟಿಸಿದ್ದಾರೆ. ಅದರಲ್ಲಿ "ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕದ ಸಮಾರಂಭವನ್ನು ಶಕ ೧೪೩೧, ಶುಕ್ಲ, ಮಾಘ, ಶು.೧. ಅಥವಾ ಕ್ರಿ.ಶ. ೧೫೧೦ ಜನವರಿ ೨೪ರಂದು ಮಾಡಿಕೊಂಡನೆಂದು ಸ್ಪಷ್ಟವಾಗಿ ಹೇಳಿದೆ."[೩೭] ಒಟ್ಟಾರೆಯಾಗಿ ಶಾಸನಗಳನ್ನು ಅಧ್ಯಯನ ಮಾಡಿದ ವೆಂಕಟರಮಣಯ್ಯನವರು ತಮ್ಮ ತೆಲುಗು ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಞಿಯು ಇದರಲ್ಲಿ ಶಾಲಿವಾಹನ ಶಕೆ ೧೪೩೨ ಶುಕ್ಲನಾಮ ಸಂವತ್ಸರ ಅವಣಿಮಾಸ ಶ್ರೀಜಯಂತಿ ಶುಭದಿನದಂದು ಕೃಷ್ಣದೇವರಾಯನು ವಿಜಯನಗರದ ಸಿಂಹಾಸನವನ್ನೇರಿ ಕಿರೀಟಧಾರಣೆ ಮಾಡಿಕೊಂಡರು ಎಂದು ಹೇಳಿರುವರು. ಇದನ್ನು ಒಪ್ಪಿಕೊಂಡರೆ ಇದರ ಅಧಾರದಿಂದ ಕೃಷ್ಣದೇವರಾಯನ ಪಟ್ಟಾಭಿಷೇಕವು ಕ್ರಿ.ಶ. ೧೫೧೯ನೇ ವರ್ಷ ಆಗಸ್ಟ್ ತಿಂಗಳ ಏಳರಂದು ನಡೆದಿರಬಹುದೆಂದು ನಿರ್ಧಾರಕ್ಕೆ ಬರಬಹುದು. ಆದುದರಿಂದ ಕೃಷ್ಣದೇವರಾಯನು ಸಾಕ್ಷಾತ್ ಭಗವಾನ್ ಶ್ರೀಕೃಷ್ಣನ ಅಪರಾವತಾರವೆಂಬುದು ಬಹುಜನರ ಅಭಿಪ್ರಾಯವು ಆಗಿತ್ತು.

ಕೃಷ್ಣದೇವರಾಯನಿಗೆ ಕ್ರಿ.ಶ. ೧೫೧೩ರಲ್ಲಿ "ಶ್ರೀಮುಖ ಸಂವತ್ಸರದಲ್ಲಿ ಎರಡನೆ ಬಾರಿಗೆ ಕಿರೀಟಧಾರಣೆಯಾಗಿರಬೇಕು. ಆದುದರಿಂದ ಈ ಮಹತ್ತರವಾದ ಒಂದು ಘಟನೆಯ ಜ್ಞಾಪಕಾರ್ಥವಾಗಿ ಅವನು ಅನೇಕ ದೇವಾಲಯಗಳಿಗೆ ದಾನಧರ್ಮಗಳನ್ನು ಕೊಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ."[೩೮] ಈ ಸಂದರ್ಭದಲ್ಲಿ ಮಾಡಿರುವಷ್ಟು ದಾನದತ್ತಿಗಳು ಬೇರೆ ಯಾವ ವರ್ಷದಲ್ಲೂ ಮಾಡಿಲ್ಲ. ಕಾಳಹಸ್ತಿ, ತಿರುಪತಿ ಇತರೆ ದೇವಾಲಯಗಳಿಗೆ ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಬೇಕೆಂದು ರಾಯನು ಅನೇಕ ದಾನಗಳನ್ನು ನೀಡಿದ್ದಾನೆ. ಇವುಗಳ ಉದ್ದೇಶವೆಂದರೆ ತನ್ನ ಅಣ್ಣನು ತೀರಿಕೊಂಡ ಮೇಲೆ ತನ್ನ ಸ್ಥಾನವು ಭದ್ರವಾದದ್ದು.

ಸ್ವಭಾವ : ಕೃಷ್ಣದೇವರಾಯನು ಪಟ್ಟಾಭಿಷಕ್ತನಾದ ಮೇಲೆ ವಿಜಯನಗರವೂ ಈತನ ರಾಜ್ಯಭಾರದಲ್ಲಿ ಹೆಚ್ಚು ಸಂಪದ್ಭರಿತ ಸಮೃದ್ಧಿಯನ್ನು ಕಂಡಿತು. ರಾಯನು ಅಧಿಕಾರಕ್ಕೆ ಬಂದಾಗ ಇಪ್ಪತ್ತೈದು ವರ್ಷಗಳು ದಾಟಿದ್ದವು ಎಂಬುದು ನ್ಯೂನಿಜ್‌ನ ಹೇಳಿಕೆ. ಇವನು ವೀರನು, ದಕ್ಷರಾಜಕೀಯ ತಂತ್ರಗಾರಿಕಾ ನಿಪುಣನೂ ಆಗಿದ್ದನು. ಕೃಷ್ಣದೇವರಾಯನು ಹಕ್ಕಿನಿಂದ ಮಾತ್ರ ಅರಸನಾಗಿರದೆ ವಾಸ್ತವಿಕವಾಗಿಯೂ ವ್ಯಾಪಕ ಅಧಿಕಾರ ಮತ್ತು ವೈಯಕ್ತಿಕ ಪ್ರಭಾವವುಳ್ಳ ಪರಮಪ್ರಭುವಾಗಿದ್ದನು. ಪಯಾಸನು ವರ್ಣಿಸಿರುವ ಪ್ರಕಾರ, ಸಾಧಾರಣ ಎತ್ತರದ, ಸೌಮ್ಯವರ್ಣದ ಅಷ್ಟೇನೂ ನೀಳಾಂಗನಾಗಲಿ ಅಥವಾ ಭಾರಂಗನಾಗಲಿ ಆಗಿರದೆ, ಗೌರಾಂಗನಾದ ಸುಂದರನಾಗಿದ್ದನು. ಮುಖದ ಮೇಲೆ ಸಿಡುಬಿನ ಕಲೆಗಳು ಇದ್ದವು. ಅರಿಭಯಂಕರನೂ ಪರಮಶ್ರೇಷ್ಠ ಸಾರ್ವಭೌಮನೂ ನಯನಮನೋಹರ

ಮಂದನೀತ ಮದನ ಸುಂದರನೂ ಆಗಿದ್ದನು. ವಿದೇಶಿಯರನ್ನು ವಿಶ್ವಾಸದಿಂದ ಬರಮಾಡಿಕೊಂಡು ಆದರದ ಆತಿಥ್ಯ ನೀಡಿ ಸತ್ಕರಿಸಿ ಅವರ ಯೋಗಕ್ಷೇಮಗಳನ್ನು ವಿಚಾರಿಸುವ ಸೌಜನ್ಯಮೂರ್ತಿಯಾಗಿದ್ದನು. ರಾಯನು ಆಡಳಿತ ನಿಪುಣನೂ, ನ್ಯಾಯಾಧುರಂಧರನೂ ಆಗಿದ್ದನು. ಅವನು ಹರೆಯದಲ್ಲಿ ದೈಹಿಕವಾಗಿ ಬಲಶಾಲಿಯಾಗಿದ್ದನು. ಅವನು ಬೇಗನೆ ಎದ್ದು ಭಾರತೀಯ ಗದೆ ಮತ್ತು ಕತ್ತಿಯ ಬಳಕೆಯಿಂದ ತನ್ನೆಲ್ಲಾ ಸ್ನಾಯುಗಳನ್ನು ಬಲಪಡಿಸಿಕೊಳ್ಳುತ್ತಿದ್ದ; ಅವನು ಶೂರನೂ ಮುತ್ಸದ್ದಿಯೂ ಆಗಿದ್ದುದಲ್ಲದೆ ಅಂತರ್ಯದಲ್ಲಿ ಮೃದು ಹಾಗೂ ಉದಾರ ಸ್ವಭಾವದವನಾಗಿದ್ದನು. ಆತನನ್ನು ಎಲ್ಲರೂ ಪ್ರೀತ್ಯಾದಾರಗಳಿಂದ ಕಾಣುತ್ತಿದ್ದರು" ಎಂದು ಹೇಳಿರುವನು.

'ಪಾರಿಜಾತಪಹರಣಮು' ಎಂಬ ಕೃತಿಯಲ್ಲಿ ಅಶ್ವವಿದ್ಯೆಯಲ್ಲಿ ಪ್ರವೀಣನಾದ ರಾಯನನ್ನು ಪಂಚ ಪಾಂಡವರಲ್ಲಿ ಒಬ್ಬನಾದ ನಕುಲನಿಗೆ ಹೋಲಿಸಲಾಗಿದೆ. ತೆಲುಗಿನ ಇನ್ನೊಂದು ಗ್ರಂಥವಾದ 'ರಾಯವಾಚಕಮು' ಕೂಡಾ ರಾಯನ ವ್ಯಕ್ತಿತ್ವದ ಬಗ್ಗೆ ದಾಖಲೆಯ ಮಾಹಿತಿಯನ್ನು ನೀಡುತ್ತದೆ.

ಕೃಷ್ಣರಾಯನು ಚಿಕ್ಕಂದಿನಿಂದಲೇ ರಾಜ್ಯಭಾರದ ಸೂತ್ರಗಳನ್ನು ತಿಳಿದುಕೊಂಡಿದ್ದನು. ಇವನ ಅಣ್ಣ ವೀರನರಸಿಂಹನು ಅರಸನಾಗಿದ್ದಾಗ ಕೃಷ್ಣದೇವರಾಯನನ್ನು ಯುವರಾಜನನ್ನಾಗಿ ಮಾಡಿ ರಾಜ್ಯಭಾರದಲ್ಲಿ ಅವನ ಸಹಾಯವನ್ನು ತೆಗೆದುಕೊಂಡನು. ಹೀಗೆ ಅಣ್ಣನ ಕೈಯಲ್ಲಿ ಪಳಗಿದ ರಾಯನು ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ತರುವಲ್ಲಿ ಯಶಸ್ವಿಯಾದನು. ರಾಯನ ಅಭಿಪ್ರಾಯದಲ್ಲಿ ಅರಸನಾದವನು ರಾಜ್ಯದ ನೆಲವನ್ನೆಲ್ಲಾ ಮೆಟ್ಟಬೇಕು. ಅಮರಗಾರರು ಮತ್ತು ಪಾಳೆಯಗಾರರು ಸೈನ್ಯವನ್ನು, ಕಪ್ಪವನ್ನು ಕೊಡದಿದ್ದರೆ ಅವರ ಬಾಕಿಗೆ ಅವರ ಆನೆ, ಕುದುರೆಗಳನ್ನು ರಾಯನು ಕೊಂಡುಕೊಂಡನು. ಇದರಿಂದ ಸಾಮ್ರಾಜ್ಯದ ಸೈನ್ಯವು ತುಂಬಾ ಬಲಿಷ್ಠವಾಯಿತು. ಶತ್ರುಗಳು ಮೇಲೆ ಬೀಳುವ ಮುಂಚೆಯೆ ತಾನೇ ಅವರ ಮೇಲೆ ಯುದ್ಧವನ್ನು ಪ್ರಾರಂಭಿಸುವುದು. ಹೀಗೆ ದಿನಚರಿಯಲ್ಲಿ ರಾಯನು ರಾಜನೀತಿಯ ಬಗ್ಗೆ ವಿವರವಾಗಿ ಹೇಳಿರುವನು. ರಾಯನು ತನ್ನ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವದಿಂದಾಗಿ ಮಹಾಸಾಮ್ರಾಜ್ಯದ ಮುನ್ನಡೆಗೆ ಶ್ರಮಿಸಿದನು. ಇವನು ಬಹುಮುಖ ವ್ಯಕ್ತಿತ್ವದ ದೊರೆಯಾಗಿದ್ದನು. ಅಭಿವೃದ್ಧಿಯು ಕೇವಲ ಆರ್ಥಿಕವಾಗಿ ಆಗಿರದೆ ಕಲೆ, ಸಾಹಿತ್ಯ, ಸಂಸ್ಕೃತಿಗಳ ಬೆಳವಣಿಗೆಗೂ ಪ್ರೇರಣೆ ನೀಡುವಂತಹದಾಗಿತ್ತು.

ವೀರನರಸಿಂಹ ಮತ್ತು ಕೃಷ್ಣರಾಯರು ಚಾಣಕ್ಯನೀತಿ, ವಿದುರನೀತಿ, ಸಂಜಯನೀತಿಗಳನ್ನು ಪ್ರತಿದಿನವೂ ಓದಿಸಿ ಕೇಳುತ್ತಿದ್ದರು ಎಂದು ರಾಯವಾಚಕಮು ಮತ್ತು ದಿನಚರಿಗಳಲ್ಲಿ ಹೇಳಿದೆ. ಕಿರಿಯ ವಯಸ್ಸಿನಲ್ಲಿ ದೊರೆತ ರಾಜನೀತಿ ಶಿಕ್ಷಣದಿಂದಲೂ ಮತ್ತು ರಾಜ್ಯಾಡಳಿತದ ಅನುಭವದಿಂದಲೂ ಒಳ್ಳೆಯ ತಂತ್ರಗಾರಿಕೆಯ ಅರಸನಾಗುವುದಕ್ಕೆ ಸಾಧ್ಯವಾಯಿತು. ಇದಕ್ಕೆ ಮೂಲ ಕಾರಣ ರಾಜನೀತಿ ನಿಪುಣನಾಗಿದ್ದ ಮಹಾಮಂತ್ರಿ ತಿಮ್ಮರಸನ ನಿಕಟ ಸಂಪರ್ಕವೇ ಕಾರಣವಾಯಿತು. ರಾಯನಿಗೆ ವ್ಯಾಸಯೋಗಿಗಳ ಸಾನಿಧ್ಯವು ದೊರಕಿದ್ದರಿಂದ ಸಂಸ್ಕೃತ ಸಾಹಿತ್ಯದಲ್ಲಿ ಅಭಿರುಚಿಯನ್ನು ಬೆಳೆಸಿಕೊಂಡು ಪಾಂಡಿತ್ಯವನ್ನು ಸಂಪಾದಿಸಿದನು. ಇದರಿಂದ ಮುಂದೆ ಸಂಸ್ಕೃತದಲ್ಲಿ 'ಜಾಂಬವತೀಕಲ್ಯಾಣ'ವೆಂಬ ನಾಟಕವನ್ನು ಬರೆಯುವಷ್ಟು ಮಟ್ಟಿಗೆ ಸಾಧ್ಯವಾಯಿತು. ಅಲ್ಲದೆ ಇದರ ಜೊತೆಗೆ ಹಲವು ಸಂಸ್ಕೃತ ಗ್ರಂಥಗಳನ್ನು ಬರೆದನು. ತೆಲುಗಿನಲ್ಲಿ ಆಮುಕ್ತಮಾಲ್ಯದ ಎಂಬ ಮಹಾ ಪ್ರಬಂಧವನ್ನು

ರಾಯನು ರಚಿಸಿ ತೆಲುಗು ಭಾಷೆಯಲ್ಲಿ ಪ್ರಭುತ್ವವನ್ನು ಪಡೆದುಕೊಂಡನು. ರಾಯನಿಗೆ ಸಂಗೀತ ಮತ್ತು ನೃತ್ಯದಲ್ಲಿ ಹೆಚ್ಚು ಆಸಕ್ತಿ ಇತ್ತೆಂದು ಅವನು ಬಾಲ್ಯದಲ್ಲಿಯೇ 'ಸಕಲಕಲಾ ಕಲಾಪಯುಕ್ತ' ನಾಗಿದ್ದನೆಂದೂ ಬಂಡಾರು ಲಕ್ಷ್ಮೀನಾರಾಯಣ ತನ್ನ 'ಸಂಗೀತ ಸೂರ್ಯೋದಯ'ದಲ್ಲಿ ಹೇಳಿದ್ದಾನೆ.[೪೬] ರಾಯನಿಗೆ ಚದುರಂಗದಲ್ಲಿ ತುಂಬಾ ಆಸಕ್ತಿ ಇದ್ದಂತೆ ಕಂಡುಬರುತ್ತದೆ. ಅರಸನು ಮಗಳೊಂದಿಗೆ ಚದುರಂಗವನ್ನು ಆಡುತ್ತಿದ್ದನಂತೆ.[೪೭] ರಾಯನಿಗಿದ್ದ ಚದುರಂಗದ ಆಟದ ಪರಿಣತಿಯನ್ನು ಚಾಟುಪದ್ಯವು ತಿಳಿಸುತ್ತದೆ.

ಕೃಷ್ಣದೇವರಾಯ ತಾನು ಆಳ್ವಿಕೆಗೆ ಬರುವುದಕ್ಕಿಂತ ಮುನ್ನ ಆಡಳಿತದಲ್ಲಿ ಅಣ್ಣನಿಗೆ ಸಹಕರಿಸುತ್ತಿದ್ದುದರಿಂದ ಒಬ್ಬರಿಗೊಬ್ಬರು ತುಂಬಾ ಪ್ರೀತ್ಯಾದರಗಳಿಂದ ಕೂಡಿರುತ್ತಿದ್ದರು. ಕೆಲವು ಸಂಗತಿಗಳಲ್ಲಿ ಇವರಿಬ್ಬರ ನಡುವೆ ದ್ವೇಷಭಾವನೆ ಇತ್ತೆಂಬುದನ್ನು ಶಾಸನಗಳು ಅಲ್ಲಗಳೆದಿವೆ.

"ತಿಪ್ಪಾಜೀ ನಾಗಲಾದೇವ್ಯೋ ಕೌಸಲ್ಯಾಶ್ರೀ ಸುಮತ್ರಾಮೋಃ |
ದೇವ್ಯೋರಿವ ನೃಸಿಂಹೇಂದ್ರಾತ್ರ ಸ್ಮಾತ್ಪಂಕ್ತಿರಥಾದಿವ ||
ವೀತಾ ವಿನಯಸೌ ರಾಮಲಕ್ಷ್ಮಣಾವಿವ ನಂದನೌ |
ಜೌತೌ ವೀರನೃಸಿಂಹೇಂದ್ರ ಕೃಷ್ಣರಾಯ ಮಹೀಪತಿ ||[೪೮]

ಈ ಶಾಸನವಲ್ಲದೆ ಅವರ ವಂಶಾವಳಿಯ ಶಾಸನಗಳೆಲ್ಲವೂ ಇದನ್ನೇ ಹೇಳುತ್ತವೆ. ಇದರಿಂದ ಸಹೋದರರ ನಡುವೆ ನಿಕಟಸಂಪರ್ಕ ಮತ್ತು ಪ್ರೀತ್ಯಾದರವಿತ್ತೆಂದು ಕಂಡುಬರುತ್ತದೆ. ಇವರೀರ್ವರು ಅಧಿಕಾರದ ಆಡಳಿತದಲ್ಲಿ ಸಮಭಾಗಿಯಾಗಿರುತ್ತಿದ್ದರು. ದಿನಚರಿಯಲ್ಲಿ "ವೀರನೃಸಿಂಹರಾಯರವರು| ತಾವು ಹಿರೆಯರಾದೆವು| ತರ್ಮೋಪಾದಿಯಲ್ಲಿ ರಾಜ್ಯಪರಿಪಾಲನೆಯ ಮಾಡೋದಕ್ಕೆ ಕೃಷ್ಣದೇವರಾಯರವರಿಗೆ ಪಟ್ಟಾಭಿಷೇಕ ಮಾಡಿ ಅಧಿಷ್ಠಾನ ಕರ್ತರ ಮಾಡುಯೆಂದು ಒಳ್ಳೆಯ ವೇಳೆಯಲ್ಲಿ ಮುದ್ರೆ ಉಂಗುರವನ್ನು ಕೊಟ್ಟರಾದ ಕಾರಣ..."[೪೯] ಎಂದು ಹೇಳಿದೆ. ಇದರಿಂದ ರಾಜ್ಯಭಾರದ ಜವಾಬ್ದಾರಿಯನ್ನು ತಾನೇ ಸ್ವತಃ ವಹಿಸಿಕೊಡುವ ಸನ್ನಿವೇಶ ಕಂಡುಬರುತ್ತದೆ.

ಕೀರ್ತಿ : ಕೃಷ್ಣದೇವರಾಯನ ಕೀರ್ತಿ ಇಡೀ ಭಾರತದಲ್ಲೆಲ್ಲಾ ಹರಡಿತ್ತು. ಭಾರತದ ಇತಿಹಾಸದ ಪಠ್ಯಪುಸ್ತಕಗಳಲ್ಲಿ ಕೃಷ್ಣರಾಯನನ್ನು ದಕ್ಷಿಣಭಾರತದ ಅತ್ಯಂತ ಶ್ರೇಷ್ಠ ಅರಸನೆಂದು ಒಮ್ಮತದಿಂದ ಪರಿಗಣಿಸಲಾಗಿದೆ. ಸಮಕಾಲೀನ ಬಾಬರನು ಕ್ರಿ.ಶ. ೧೫೨೬ರಲ್ಲಿ ಮೊಗಲ್ ಸಾಮ್ರಾಜ್ಯದ ರಾಜಧಾನಿ ದೆಹಲಿಯಲ್ಲಿ ಆಳ್ವಿಕೆ ಮಾಡುವ ಕಾಲಕ್ಕೆ ತನ್ನ ಆತ್ಮಚರಿತ್ರೆಯಲ್ಲಿ "ಆ ಕಾಲದ ಭಾರತದ ವಿವಿಧ ಭಾಗಗಳ ಅರಸರು ಯಾರು ಯಾರೆಂದು ಬರೆದಿದ್ದಾನೆ. ವಿಜಯನಗರದ ಕೃಷ್ಣರಾಯನ ಹೆಸರನ್ನು ಹೇಳದೆ ತನ್ನ ಕಾಲದ ವಿಜಯನಗರದ ಅರಸನು ಅತ್ಯಂತ ಬಲಾಢ್ಯನೆಂದು ಹೊಗಳಿದ್ದಾನೆ."[೫೦] ಉದಯಾಂಬಕಂನಲ್ಲಿರುವ ಅವನ ಶಾಸನದಲ್ಲಿ ಗಂಗಾತೀರದಿಂದ ಲಂಕೆಯವರೆಗೂ ಹೆಸರುವಾಸಿಯಾಗಿದ್ದನೆಂದು ಹೇಳಿದೆ. "ಇದಕ್ಕೆ ಸಾಕ್ಷಿಯಾಗಿ ಗಂಗಾನದಿಯ ಅನತಿದೂರದ ಗಯೆಯಲ್ಲಿ ಇವನ ಶಾಸನವೊಂದಿದೆ. ಇದು ರಾಯನ ಆಸ್ಥಾನ ಕವಿಯಾದ ಮುಕ್ಕುತಿಮ್ಮಯ್ಯನು ಗಯೆಗೆ ಹೋಗಿ ರಾಯನ ಪಿತೃಗಳಿಗೆ ತರ್ಪಣವನ್ನು ಬಿಟ್ಟು ಪ್ರಕಟಿಸಿದ ಶಾಸನವಿದು. ಗಯೆಯಲ್ಲಿ ವಿಷ್ಣುಪಾದ ದೇವಾಲಯದ

ಪಕ್ಕದಲ್ಲಿ ಕ್ರಿ.ಶ. ೧೫೨೧ರಲ್ಲಿ ರಾಯನು ಮತ್ತು ಅವನ ರಾಣಿ ತಿರುಮಲದೇವಿಯ ಹೆಸರಿನಲ್ಲಿ ಒಂದು ಕಲ್ಲಿನಲ್ಲಿ ತೋರಣವನ್ನು ಕಟ್ಟಿಸಿದ್ದು, ಈ ವಿಷಯವನ್ನು ಬುಕ್ಯಾನ್ನನು ತನ್ನ ಪಾಟ್ನಾ - ಗಯೆ ವರದಿಯಲ್ಲಿ ಕ್ರಿ.ಶ. ೧೮೧೧ರಲ್ಲಿ ಬರೆದಿರುವನು.[೫೦] ಅಲ್ಲದೆ ಇವನ ಕೀರ್ತಿ ರಾಜ್ಯದ ಹೊರಗೂ ಹಬ್ಬಿತ್ತು. ತೆಲುಗು ಪ್ರದೇಶದಲ್ಲಿ ಹುಟ್ಟಿದ ವಲ್ಲಭಾಚಾರ್ಯರು ಬಂದು ವೈಷ್ಣವ ಪಂಥವನ್ನು ಸ್ಥಾಪಿಸಿದರು. ಈ ಪಂಥವು ಗುಜರಾತ್ ಮತ್ತು ಉತ್ತರಭಾರತದಲ್ಲಿ ವಲ್ಲಭೀಪಂಥವೆಂದು ಹೆಸರಾಗಿದೆ. “ಇವರು ರಾಯನ ಆಸ್ಥಾನಕ್ಕೆ ಭೇಟಿ ನೀಡಿದಾಗ ರಾಯನು ವಲ್ಲಭರಿಗೆ ಆಚಾರ್ಯರೆನ್ನುವ ಬಿರುದನ್ನು ಕೊಟ್ಟನೆಂದು ವಲ್ಲಭಚಾರ್ಯರ ಜೀವನ ಚರಿತ್ರೆಯಲ್ಲಿ ಹೇಳಿದೆ.”[೫೧] ಕೃಷ್ಣದೇವರಾಯನ ಆಳ್ವಿಕೆಯು ಇಡೀ ದಕ್ಷಿಣ ಭಾರತಕ್ಕಷ್ಟೆ ಅಲ್ಲದೆ ಸಿಲೋನ್, ಮಲಯ, ಚೀನಾ, ಅರಬ್, ಪೋರ್ಚುಗಲ್ ಮುಂತಾದ ದೇಶಗಳಿಗೆ ಇವನ ಕೀರ್ತಿಯು ಹಬ್ಬಿದ್ದಿತು.

ಬಿರುದುಗಳು : ತುಳುವ ಮನೆತನವು ವಿಜಯನಗರದ ಸಾರಥ್ಯವನ್ನು ವಹಿಸಿಕೊಂಡ ನಂತರ ಸಾಮ್ರಾಜ್ಯದ ಗತಿಯೇ ಬದಲಾಯಿತೆಂದರೆ ಅತಿಶಯೋಕ್ತಿಯಾಗಲಾರದು. ಕೃಷ್ಣದೇವರಾಯನು ಹೊಂದಿದ ಬಿರುದಾವಳಿಗಳು ಅನೇಕ. ಹಿಂದಿನ ಯಾವ ಅರಸನನ್ನು ವರ್ಣಿಸದಷ್ಟು ಬಿರುದುಗಳಿಂದ ರಾಯನನ್ನು ಶಾಸನ - ಸಾಹಿತ್ಯಕೃತಿಗಳು ಬಣ್ಣಿಸಿವೆ. ಇವನು ತನ್ನ ಶೌರ್ಯ, ಪರಾಕ್ರಮ ಮತ್ತು ಆಡಳಿತದ ಕಾರ್ಯವೈಖರಿಗಳಿಂದ ಗಳಿಸಿದ ಬಿರುದುಗಳು ಹಲವು. ಯಾವನೇ ಒಬ್ಬ ಅರಸನು ಹೆಚ್ಚು ಸಮರ್ಥ ಶಕ್ತಿಯುತವಾಗಿ ತನ್ನ ಆಡಳಿತವನ್ನು ನಡೆಸುವಾಗ ಅವನು ತೋರಿಸುವ ಶೌರ್ಯ ಪರಾಕ್ರಮಗಳಿಗೆ ಬಿರುದುಗಳನ್ನು ನೀಡಲಾಗುತ್ತಿತ್ತು. ಇದರಲ್ಲಿ ಹಿರಿಯರಿಂದ ಬಂದಿರುವ ಬಿರುದುಗಳಿದ್ದರೆ, ತಮ್ಮ ಸಮಕಾಲೀನ ಕವಿಗಳು, ಮುನಿಗಳು, ಸಾಮಂತರಿಂದ ಅನೇಕ ಬಿರುದಾವಳಿಗಳನ್ನು ಪಡೆಯುತ್ತಿದ್ದರು. ಇದರಲ್ಲಿ ಶಕ್ತಿ ಪ್ರದರ್ಶನ ಮತ್ತು ಯುದ್ಧದಲ್ಲಿ ಗೆದ್ದುಬಂದಾಗ ಹೆಚ್ಚು ಬಿರುದುಗಳನ್ನು ಧರಿಸಿದ್ದು ಕಂಡುಬರುತ್ತದೆ. ಇವುಗಳೆಲ್ಲವೂ ರಾಯನ ನಡೆ-ನುಡಿ, ವ್ಯಕ್ತಿತ್ವಗಳನ್ನು ಅಭಿವ್ಯಕ್ತಿಸುತ್ತವೆ.

ಕೃಷ್ಣದೇವರಾಯನು ಅನೇಕ ಬಿರುದಾವಳಿಗಳನ್ನು ಹೊಂದಿದ್ದನು. ತನ್ನ ಪರಾಕ್ರಮ ಬುದ್ಧಿಶಕ್ತಿಯಿಂದ ಸಾಮ್ರಾಜ್ಯದ ವಿವಿಧ ಧಾರ್ಮಿಕ ಮುಖಂಡರ ಕೃಪಾಕಟಾಕ್ಷದಿಂದ ಹೊಂದಿದ ಬಿರುದುಗಳು ಹಲವು ಶಾಸನಗಳಲ್ಲಿ ಕಂಡುಬರುತ್ತವೆ. “ಅರಿರಾಯ ವಿಭಾಡ, ಭಾಷೆಗೆ ತಪ್ಪುವ ರಾಯರಗಂಡ, ಮೂರುರಾಯರಗಂಡ, ಕಂಡ ನಾಡುಕೊಂಡು ಕೊಂಡನಾಡಕೊಡದ ಪೂರ್ವ ದಕ್ಷಿಣ ಪಶ್ಚಿಮೋತ್ತರ ಚತುಃಸಮುದ್ರಾಧಿಪತಿ.”[೫೨] ಇದು ಹಂಪಿ ಶಾಸನದಲ್ಲಿ ಉಲ್ಲೇಖಿತಗೊಂಡಿದೆ. ಅಲ್ಲದೆ ಶೌರ್ಯಪರಾಕ್ರಮೋದಾರ, ಸಕಲ ದೇಶಾಧೀಶ್ವರ, ಮಣಿಮುಕುಟ ಚರಣಾರವಿಂದ,[೫೩] ಮೇದಿನಿಮೀಸರಗಂಡ, ಕಠಾರಿಸಾಳುವ, ಸಮ್ಯಕ್ತ್ವಚೂಡಾಮಣಿ, ಪರನಾರೀಸಹೋದರ, ಸೌಚವೀರ, ಪರಕ್ರಮಣಾಧಾರ ಸಕಲದೇಶಧೀಶ್ವರ,[೫೪] ಸಂಗೀತ ಸಾಹಿತ್ಯ ಸಮರಾಂಗಣ ಸೌರ್ವಭೌಮ.[೫೫] ಅಷ್ಟದಿಕ್ಕುರಾಯ ಮನೋಭಯಂಕರ, ಯವನರಾಜ್ಯಸ್ಥಾಪನಾಚಾರ್ಯ, ಗಜಪತಿದಳವಿಭಾಡ.[೫೬] ಪ್ರಬಲಪ್ರತಾಪ, ಸಕಲ ಭೂಮೀಶ್ವರಿ ನಿಕರ ಮುಕುಟವಿನ್ಯಾಸ್ತಚರಹಾರವಿಂದಯುಗಲ ಸರ್ವಭುವನ ಪ್ರಚಾರ ಕೂತೂಹರಿತ, ಕೀರ್ತಿಕುಲದೇವತಾಸಹಚರ ಪರಾಕ್ರಮಪ್ರಸೂತಿ, ಪ್ರಥಮಪ್ರಜಾಪತಿ ದುರ್ಧರವೈರಿವಕ್ಷಸ್ಥಲದಲನ ಗಲಾದ್ಧಾರಾರುಧಿರೋಪಹಾರ ದುರ್ಲರಿತ ವೀರಲಕ್ಷ್ಮೀ ಸಮಾಕರ್ಷಣ ಮಂತ್ರಪತ್ರಸ್ವಾಗತ ಸಮಸ್ತ ವಿಭುಧವರ

ಸಂಧೋಹಾನಂದಕರಣ ವಿಚಾರ ವಿಶಾರದ.[೫೮] ಅಭಿನವ ಮುಕುಂದೆ, ಆಚರಣ ಶರಣ್ಯ ಅಖಿಲಜನಪುಣ್ಯ ಸತ್ಯಸಂಧ, ಸತ್ಯಕಾಮ ಸತ್ಯಪಿತ ಸತ್ಯ ಪ್ರಾತಿಗ್ಯ ಸರ್ವ ಮಂಗಾಲಾಲ ಸರ್ವಾಕಾರ ಮಹಾರಾಜ ತ್ರಿಭುವನೈಕ ರಕ್ಷಕ ಎಂದಿದೆ.[೫೯]

ಕೃಷ್ಣರಾಯನಿಗೆ ಸಂಗೀತ ಮತ್ತು ನಾಟ್ಯದಲ್ಲೂ ಹೆಚ್ಚು ಆಸಕ್ತಿ ಇದ್ದುದರಿಂದ ಒಂದು ಶಾಸನದಲ್ಲಿ ಸಕಲಕಲಾ ಕಲಾಪಯುಕ್ತ.[೬೦] ವಿಧಿತ ನಾನಕಲ, ಕಾವ್ಯನಾಟಕಾಲಂಕಾರ ಮರ್ಮಜ್ಞ; ಧರ್ಮಜ್ಞ, ಅಪರಭೋಜರಾಜ[೬೧] ಎಂದು ವಿಶ್ಲೇಷಿಸಿರುವುದು ಕಂಡುಬರುತ್ತದೆ. ಪರರಾಜಭಯಂಕರ, ಹಿಂದೂರಾಯಸುರತ್ರಾಣ, ದುಷ್ಟ ಶಾರ್ದೂಲ ಮರ್ದನ.[೬೨] ಮುಕ್ತತುಲಾರೋಹಣ, ಶೋಡಶಮಹಾದಾನಪ್ರಚಂಡ, ಸಂತ್ರತಕಮಳ ವಸಂತ ತ್ಯಾಗ ಲಕ್ಷ್ಮೀನಿವಾಸ ಚತುಸ್ಸಮುದ್ರಾಧೀಶ್ವರ.[೬೩] ಕರ್ನಾಟಕ ಸಿಂಹಾಸನ ಸಂಸ್ಥಾಪನಾಚಾರ್ಯ, ಶ್ರೀವಿಜಯನಗರ ರತ್ನಸಿಂಹಾಸನಾಧ್ಯಕ್ಷ ಶ್ರೀಕೃಷ್ಣರಾಯನೆಂದು ಗಿಣಿಗೇರಾ ಶಾಸನವು ರಾಯನನ್ನು ಹೊಗಳಿದೆ.[೬೪]

ಸದ್ಧರ್ಮಚಾರಿತ್ಯ, ಸ್ವಾಮಿಕಾರ್ಯ ದುರಂಧರ ತೌಳವಂಶಾಬ್ಧಿಚಂದ್ರ, ಈಶ್ವರೇಂದ್ರವರಪುತ್ರ, ಅತುಲಭುಜಪಲ ಪರಾಕ್ರಮ, ಚೇರಚೋಳ ಪಾಂಡ್ಯದಿವೈರಿ ಭೂಭುಜಮದಭಂಜನ, ದೇವಬ್ರಾಹ್ಮಣಸೀಮಾ ಜೀರ್ಣೋದ್ಧಾರಕ, ಶರಣಾಗತರಕ್ಷಕ, ಆಜ್ಞಾಪಾಲಕ, ಐಶ್ವರ್ಯ ಅನೇಕ ಗುಣಸಂಪನ್ನ ನರಸಭೂಪಾಲ ಕುಮಾರ, ಅನೇಕ ಷೋಡಶಮಹಾದಾನಾಧಿರೂಢ, ಸ್ನಾನದಾನವ್ರತ ನಿಯಾಮಾತ್ಮಕ, ಅಘಟಿತ ಮಹಾಪುಣ್ಯಕ್ಷೇತ್ರಾದಿದರ್ಶನ, ಸಮಸ್ತ ವೇದಶಾಸ್ತ್ರಪುರಾಣಾಗಮಾದಿ ಪ್ರವರ್ತಕ, ಸಾಕ್ಷ್ಯಾತ್ ಪ್ರತ್ಯಕ್ಷಕೃಷ್ಣಾವತಾರ, ಅಧರ್ಮಸಂಹಾರಕ, ಧರ್ಮಪ್ರತಿಪಾಲನ, ಸಕಲಲೋಕರಕ್ಷಕ, ಅತಿಬಹಳಚತುರಂಗಬಲ ಸಮೋಪೇತ, ಗಜಾಶ್ವಪತಿಸರ್ವಸ್ವಾಪಹಾರಕ, ಅಮರೇಂದ್ರಸಮಾನ ಸಂಪತ್ಕರ ಗಿರಿವನಜಲದುರ್ಗಾಧಿಸಮಸ್ತ ದುರ್ಗಗರ್ವಮದಭಂಜನ, ಹರಿಶ್ಚಂದ್ರಾದಿ ಚಕ್ರವರ್ತಿಸಮೋಪೇತ ಸತ್ಯಕೀರ್ತಿಪ್ರತಾಪ, ಅನೇಕ ಸೂತನಾಗ್ರಹಾರಪಾಲಕ, ಆಶ್ಚರ್ಯ ಅಪ್ರತಿಮ ಸಾಹಸಭುಜಬಲ ಪರಾಕ್ರಮ ಕಲ್ಪಾಂತಕೀರ್ತಿಯುಕ್ತ ಚತುಃಸಮುದ್ರಾಧೀಶ್ವರ, ಕೃತಯುಂಗಾಶ ಪ್ರವರ್ತಕ ಶ್ರೀತಿರುಮಲಾಂಬಿಕಾ ಲಕ್ಷ್ಮಿಸಮೋಪೇತ ಶ್ರೀಕರ್ನಾಟಕ ಸಿಂಹಾಸನಾರೂಢ ಶ್ರೀಕೃಷ್ಣದೇವಮಹಾರಾಯ ಕನ್ನಡ ರಾಜ್ಯರಮಣ, ಕರ್ನಾಟಕ ರಾಜ್ಯರಕ್ಷಾಮಣಿ ಕರ್ನಾಟಕ ರಾಜ್ಯಲಕ್ಷ್ಮೀ ಮನೋಹರ ಎಂಬುವ ಬಿರುದುಗಳು ಮಧ್ಯಯುಗದ ಕನ್ನಡ ನಾಡು, ಕರ್ನಾಟಕವನ್ನು ನೆನಪಿಸುತ್ತವೆ. ಈ ಬಿರುದುಗಳಲ್ಲಿ ಸ್ಪಷ್ಟವಾಗಿ ಕರ್ನಾಟಕದ ಒಡೆಯನೆಂದು ಕರೆದಿರುವುದರಿಂದ ಕೃಷ್ಣದೇವರಾಯ ಕನ್ನಡ ಮೂಲದವನೆಂದು ನಿಖರವಾಗಿ ಹೇಳಬಹುದಾಗಿದೆ. ಅವನಿಗೆ ಅನೇಕ ಬಿರುದುಗಳನ್ನು ನೀಡಿ ಅಂದಿನ ಕವಿಗಳು ಹಾಡಿ ಹೊಗಳಿದ್ದಾರೆ.

ಕೃಷ್ಣದೇವರಾಯನ ಶಕ್ತಿಸಾಮರ್ಥ್ಯಗಳನ್ನು ಸೂಚಿಸುವ ಬಿರುದುಗಳು ಅವನ ಆಡಳಿತದಲ್ಲಿ ವಿಜಯನಗರ ಸಾಮ್ರಾಜ್ಯದ ಶಕ್ತಿಸಂಪತ್ತನ್ನು ಪ್ರತಿಬಿಂಬಿಸುತ್ತವೆ. ಅರಸನ ಗುಣಧರ್ಮಗಳನ್ನು ಮತ್ತು ಅಂದಿನ ಕಾಲದ ಸಮಾಜ, ಧರ್ಮ, ಸೈನಿಕವ್ಯವಸ್ಥೆ, ಪ್ರದೇಶಸಂಪತ್ತು, ವೈರಿಗಳು ಇತ್ಯಾದಿ ಬಗೆಗೆ ತಿಳಿಯುವಲ್ಲಿಯೂ ಈ ಬಿರುದಾವಳಿಗಳು ಸಹಾಯಕ್ಕೆ ಬರುತ್ತವೆ. ವಂಶಾವಳಿ ಮತ್ತು ದಾನದತ್ತಿಗಳನ್ನು ನೀಡಿರುವುದು ಈ ಬಿರುದುಗಳಿಂದ ತಿಳಿದುಬರುತ್ತದೆ. ದಾನದತ್ತಿಯನ್ನು ನೀಡುವಾಗ ತನ್ನ ವಂಶಾವಳಿ ಬಿರುದಾವಳಿಗಳನ್ನು ತಿಳಿಸಿ ದಾನ ನೀಡಿರುವುದು ಶಾಸನಗಳಲ್ಲಿ ಉಲ್ಲೇಖಿತವಾಗಿವೆ.

ದಂಡಯಾತ್ರೆಗಳು : ಕೃಷ್ಣದೇವರಾಯನು ಪಟ್ಟಕ್ಕೆ ಬಂದಾಗ ವಿಜಯನಗರ ಸಿಂಹಾಸನವು ಮುಳ್ಳಿನ ಹಾಸಿಗೆಯಾಗಿದ್ದಿತು. ಅರಸನು ಆಂತರಿಕ ದಂಗೆಗಳನ್ನು ಅಡಗಿಸುತ್ತ, ಹೊರಗಿನ ಶತ್ರುಗಳ ದಾಳಿಗಳನ್ನು ಸಮರ್ಥವಾಗಿ ಎದುರಿಸಿದನು. ರಾಯನು ಸಮರ್ಥನೂ ಶೂರನೂ ಮುತ್ಸದ್ಧಿಯೂ ಆಗಿದ್ದುದಲ್ಲದೆ ಆಂತರ್ಯದಲ್ಲಿ ಮೃದು ಹಾಗೂ ಉದಾರ ಸ್ವಭಾವದವನಾಗಿದ್ದನು. ರಾಯನು ಪಟ್ಟಕ್ಕೆ ಬಂದ ಹೊಸದರಲ್ಲೆ ಸಾಮ್ರಾಜ್ಯದಲ್ಲಿ ಮೊದಲು ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ಪಣತೊಟ್ಟನು. ತನ್ನ ರಾಜ್ಯದಲ್ಲಿ ಪ್ರತಿಯೊಂದು ಕ್ಷೇತ್ರಗಳ ಕಡೆಗೆ ಗಮನಹರಿಸಿ ಆಯಾಯ ಕ್ಷೇತ್ರಗಳ ಅಭಿವೃದ್ಧಿಗೆ ಶ್ರಮವಹಿಸಿದನು.

ನ್ಯೂನಿಜ್‌ನ ಹೇಳಿಕೆಯ ಪ್ರಕಾರ "ಕೃಷ್ಣದೇವರಾಯನು ರಾಜ್ಯಾಡಳಿತವನ್ನು ವಹಿಸಿಕೊಂಡ ಮೇಲೆ ಒಂದೂವರೆ ವರ್ಷಗಳ ಕಾಲ ಹೊರಗೆಲ್ಲಿಯೂ ಹೋಗದೆ ವಿಜಯನಗರದಲ್ಲಿಯೇ ಇದ್ದು ರಾಜ್ಯವಹಿವಾಟುಗಳ ಬಗ್ಗೆ ವಿಷಯ ಸಂಗ್ರಹವನ್ನು ಮಾಡಿಕೊಳ್ಳುತ್ತಿದ್ದನಲ್ಲದೆ, ಹಿಂದಿನ ಅರಸರುಗಳ ಮರಣ ಶಾಸನಗಳನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದ್ದನು."[೬೫] ಇದರಿಂದ ತನ್ನ ಹಿಂದಿನ ಅರಸರು ತಮ್ಮ ಮೇಲಿನ ಹೊಣೆಯನ್ನು ಸರಿಯಾಗಿ ಮಾಡದೆ ಬಿಟ್ಟುಹೋದುದ್ದನ್ನು ಗ್ರಹಿಸಿ ಆ ಕೂಡಲೇ ಸೈನ್ಯಗಳನ್ನು ಸಜ್ಜುಗೊಳಿಸಿ ಆ ಕೋಟೆಗಳ ಮೇಲೆ ದಂಡಯಾತ್ರೆಗಳನ್ನು ಕೈಗೊಳ್ಳುತ್ತಿದ್ದನು. ರಾಯಚೂರು, ಮುದಗಲ್ಲು, ಉದಯಗಿರಿ, ಕೊಂಡವೀಡು ಅನುಕ್ರಮವಾಗಿ ನಡೆದದ್ದು ಕಂಡುಬರುತ್ತದೆ. ಆದರೆ ಈ ದಂಡಯಾತ್ರೆಗಳನ್ನು ಕೈಗೊಳ್ಳುವ ಮೊದಲು ರಾಯನು ಆಂತರಿಕ ದಂಗೆಕೋರರಾದ ಕೆಳದಿ ಮತ್ತು ಉಮ್ಮತ್ತೂರು ಪಾಳೆಯಗಾರರನ್ನು ತನ್ನ ಹತೋಟಿಗೆ ತಂದುಕೊಳ್ಳುವಲ್ಲಿ ಯಶಸ್ವಿಯಾದನು.

ಮೊಟ್ಟಮೊದಲನೆಯದಾಗಿ ರಾಯನು ತನ್ನ ರಾಜ್ಯದಲ್ಲಿ ಆಂತರಿಕವಾಗಿ ಭದ್ರಪಡಿಸಿಕೊಳ್ಳುವ ಉದ್ದೇಶದಿಂದ ಮೊದಲ ಹಂತವಾಗಿ ಮೈಸೂರಿನ ಪಕ್ಕದಲ್ಲಿರುವ ಉಮ್ಮತ್ತೂರಿನ ಮೇಲೆ ದಂಡಯಾತ್ರೆಯನ್ನು ಕೈಗೊಂಡು ಅಲ್ಲಿಯ ಪಾಳೆಯಗಾರನಾದ ಗಂಗರಾಜನನ್ನು ತಹಬಂಧಿಗೆ ತರುವಲ್ಲಿ ಯಶಸ್ವಿಯಾದನು. ಇದು ಅವನ ಮೊದಲ ದಂಡಯಾತ್ರೆಯಾಗಿತ್ತು.

ಕೃಷ್ಣದೇವರಾಯನ ಜೀವನದ ಎರಡು ಮೈಲುಗಲ್ಲುಗಳೆಂದರೆ, ಒಂದು ಮಹಾನ್ ಚೈತ್ರಯಾತ್ರೆ, ಮತ್ತೊಂದು ತೀರ್ಥಯಾತ್ರೆ. ಚೈತ್ರಯಾತ್ರೆಯಲ್ಲಿ ವಿಜಯ ಪಡೆಯುತ್ತಾ ಮುಂದುವರೆದಂತೆಲ್ಲಾ, ಧಾರ್ಮಿಕ ತೀರ್ಥಕ್ಷೇತ್ರಗಳಿಗೆ ಹೋಗುವ ಹಂಬಲ ಹೆಚ್ಚಾಯಿತು. ಇವನು ವೈಷ್ಣವ ಧರ್ಮಾವಲಂಬಿಯಾಗಿದ್ದರೂ ಎಲ್ಲಾ ಧರ್ಮಗಳನ್ನು ಸಮನಾಗಿ ಕಾಣುತ್ತಿದ್ದನು. ತನ್ನ ದಂಡಯಾತ್ರೆಯ ಪ್ರತಿಸಂದರ್ಭದಲ್ಲಿ ವಿಜಯಿಯಾಗಿ ರಾಜಧಾನಿಗೆ ಮರಳುವ ಕಾಲಕ್ಕೆ ಪ್ರಸಿದ್ಧ ತೀರ್ಥಕ್ಷೇತ್ರಗಳಿಗೆ ಭೇಟಿ ನೀಡುತ್ತಿದ್ದುದನ್ನು ಅವನ ಕಾಲದ ಅನೇಕ ಶಾಸನಗಳು ದೃಢಪಡಿಸುತ್ತವೆ.

ಕೃಷ್ಣದೇವರಾಯನು ನಿಸ್ಸಂಶಯವಾಗಿಯೂ ಸಮರಾಂಗಣ ಸಾರ್ವಭೌಮನಾಗಿದ್ದನು. ಅವನ ಯುದ್ಧ ಕೌಶಲ್ಯ ಶತ್ರುಭೀಕರವಾದದ್ದು. ಕ್ರಿ.ಶ. ೧೫೧೦ರಲ್ಲಿ ಬರೆಸಲಾದ ಶಾಸನವೊಂದು ಹಂಪಿಯ ಶ್ರೀ ವಿರೂಪಾಕ್ಷ ದೇವಾಲಯದಲ್ಲಿದ್ದು, ಶ್ರೀಕೃಷ್ಣದೇವರಾಯನು ಪಟ್ಟಾಭಿಷೇಕ ಹೊಂದುವಾಗಲೇ : "ಭಾಷೆಗೆ ತಪ್ಪುವರಾಯರಗಂಡ ಸ್ತೋತ್ರಷ ಕೃದರ್ಥೀಷುಯೋ ರರಾಚಂಡಃ, ರಾಜಾಧಿರಾಜ ಇತ್ಯುಕ್ತೋಯೋ ರಾಜಪರಮೇಶ್ವರಃ, ಮೂರುರಾಯರ

ಗಂಡಶ್ಚ ಪರರಾಜ ಭಯಂಕರ ಹಿಂದೂರಾಯ ಸುರತ್ರಾಣೋ ದುಷ್ಟಶಾರ್ದೂಲ ಮರ್ದನಃ ಗಜೌಘಗಂಡಭೇರುಂಡ ಇತ್ಯಾದಿ ಬಿರುದಾನ್ವಿತಃ, ಚೇರ, ಚೋಳಂಚ ಪಾಂಡ್ಯಚಮವೇಚ ಮಧುರ ವಲ್ಲಭಂ ಮಾನಭೂಷಂ ವೀರ್ಯೋದಗ್ರಾಂ ತುರುಷ್ಕಂ ಗಜಪತಿ ನೃಪತಿಂಚಜಿತ್ವಾತದನ್ಯಾನ್''[೬೬] ಈ ಎಲ್ಲ ಬಿರುದುಗಳನ್ನು ಹೊಂದಿದ್ದನು. ಕಾರಣ ರಾಯನು ಪಟ್ಟಕ್ಕೆ ಬರುವ ಮುನ್ನ ತನ್ನ ಅಣ್ಣನ ಆಳ್ವಿಕೆಯಲ್ಲಿ ಅವನ ಪರವಾಗಿ ವಿವಿಧ ರಾಜ್ಯಗಳ ಮೇಲೆ ಯುದ್ಧಮಾಡಿ ಗೆದ್ದಿರಬೇಕು. ಈ ಶಾಸನದಿಂದ ರಾಯನು 'ಹಿಂದೂರಾಯ ಸುರತ್ರಾಣ' ಎಂಬ ಬಿರುದನ್ನು ಹಿಂದೆಯೇ ಹೊಂದಿದ್ದುದು ತಿಳಿದು ಬರುತ್ತದೆ.

ರಾಯನು ಸುಮಾರು ಇಪ್ಪತ್ತು ವರ್ಷಗಳ ಕಾಲ ಅಖಂಡವಾಗಿ ವಿಜಯನಗರವನ್ನು ಪರಾಕ್ರಮದಿಂದಲೂ, ಧರ್ಮರಕ್ಷಣೆಗಾಗಿ ಕೈಗೊಂಡ ಧಾಳಿಗಳು ಅಮೋಘವಾಗಿವೆ. ಇವನ ಆಳ್ವಿಕೆಯಲ್ಲಿ ರಾಜ್ಯವು ಅತ್ಯಂತ ವೈಭವ ಸ್ಥಿತಿಗೆ ಬರಲು ರಾಯನ ಸಮರ್ಥ ಆಡಳಿತವೇ ಕಾರಣವಾಗಿದೆ. ಇವನಿಗೆ ಆಡಳಿತದ ಸಂದರ್ಭದಲ್ಲಿ ಮುಖ್ಯಪಾತ್ರ ವಹಿಸಿದವರೆಂದರೆ ಮಹಾಮಂತ್ರಿ ತಿಮ್ಮರಸ. ಇವನು ರಾಯನನ್ನು ಸಮರ್ಥ ಸೇನಾನಿಯಂತೆ ಸಿದ್ಧಗೊಳಿಸಿದ್ದನು. ಇತ್ತ ವೀರನರಸಿಂಹನು ಮರಣ ಹೊಂದಿದಾಗ ಸಮಯ ಪ್ರಜ್ಞೆಯಿಂದ ವಿಜಯನಗರದ ಸಿಂಹಾಸನದ ಮೇಲೆ ರಾಯನನ್ನು ಕೂಡಿಸಿ ಒಂದು ಮಹಾನ್ ವಿಪತ್ತನ್ನು ತಪ್ಪಿಸಿದನು. ತಿಮ್ಮರಸನ ದೂರದೃಷ್ಟಿಯ ಫಲವಾಗಿ ಕೃಷ್ಣದೇವರಾಯ ಅಧಿಕಾರಕ್ಕೆ ಬಂದನು.

ರಾಯನ ಪಟ್ಟಾಭಿಷೇಕ ಮುಗಿದ ಮೇಲೆ ಸಾಮ್ರಾಜ್ಯದ ಹಿರಿಯ ಮಂತ್ರಿಗಳಿಂದ ರಾಜ್ಯದ ಆಡಳಿತವನ್ನು ಸುಗಮವಾಗಿ ನಡೆಸುವುದಕ್ಕೆ ಅರಸನು ಅನುಸರಿಸಬೇಕಾದ ನೀತಿನಿಯಮಗಳನ್ನು 'ರಾಯವಾಚಕಮು'ದಲ್ಲಿ ಹೇಳಲಾಗಿದೆ. ಅನ್ಯರಾಜ್ಯರೊಡನೆ ವ್ಯವಹರಿಸುವಾಗ ವಹಿಸಬೇಕಾದ ಎಚ್ಚರಿಕೆ, ಸಾಮಂತ ರಾಜರನ್ನು ನಡೆಸಿಕೊಳ್ಳಬೇಕಾದ ವಿಧಾನ, ರಾಜ್ಯದಲ್ಲಿ ನ್ಯಾಯವಿತರಣೆ ಮೊದಲಾದ ನಿತ್ಯಕಾರ್ಯಗಳನ್ನು ಗಮನಿಸುವ ವಿಧಾನಗಳು, ಗೂಢಚಾರರ ಮಹತ್ವ, ಅವರು ತರುವ ವರ್ತಮಾನಗಳ ಸತ್ಯಾಸತ್ಯತೆ ಬಗೆಗೆ ಅರಸ ಮಂತ್ರಿಮಹೋದಯರಿಂದ ಕೇಳಿ ತಿಳಿದುಕೊಳ್ಳುತ್ತಿದ್ದನು. ಅರಸನು ಸಪ್ತಾಂಗಗಳನ್ನು ತಿಳಿದುಕೊಂಡಿರುವುದು ಅತ್ಯವಶ್ಯ. ಈ ನೀತಿಪಾಠಗಳನ್ನು ಕೃಷ್ಣದೇವರಾಯನ ದಿನಚರಿಯಲ್ಲಿ ಹೇಳಲಾಗಿದೆ.[೬೭]

ಸಹ್ಯಾದ್ರಿ ಪ್ರದೇಶದ ಕೆಳದಿಯಲ್ಲಿ ಚೌಡಪ್ಪನು ಸುತ್ತಮುತ್ತಲಿನ ಪ್ರದೇಶವನ್ನು ನೋಡಿಕೊಳ್ಳುತ್ತಿದ್ದನು. ಅರಸನು ಒಮ್ಮೆ ಚೌಡಪ್ಪನನ್ನು ಪುಂಡರ ಹಾವಳಿಯನ್ನು ತಡೆಗಟ್ಟಲು ನಿಯುಕ್ತ ಮಾಡಿದನು. ಚೌಡಪ್ಪನು ಈ ಕಾರ್ಯದಲ್ಲಿ ಯಶಸ್ವಿಯಾಗಿ ಅರಸನಿಂದ ಮಾಗಣೆಗಳನ್ನು ಪಡೆದು ಕೆಳದಿಯ ಒಡೆಯನಾಗಿ ವಿಜಯನಗರದ ಸಾಮಂತ ನಾಯಕನಾದನು.[೬೮] ಉಮ್ಮತ್ತೂರಿನ ಮೇಲೆ ಕೃಷ್ಣದೇವರಾಯನು ಕ್ರಿ.ಶ. ೧೫೧೦ ಮತ್ತು ಕ್ರಿ.ಶ. ೧೫೧೨ರಲ್ಲಿ ಎರಡು ಸಾರಿ ದಂಡಯಾತ್ರೆಯನ್ನು ಮಾಡಿದ್ದು "ಮೊದಲನೆಯ ದಂಡಯಾತ್ರೆಯ ವಿವರಗಳನ್ನು ಕಾಂಜಿವರಂನ ಶಾಸನಗಳು ನಿರೂಪಿಸುತ್ತವೆ."[೬೯] ಇದು ಕೇವಲ ಒಂದು ದಿನ ನಡೆಯಿತೆಂದು ರಾಯನ ದಿನಚರಿಯಲ್ಲಿ ಹೇಳಿದೆ.[೭೦] ಈ ಕಾರ್ಯಚರಣೆಯಲ್ಲಿ ರಾಯನು ಶಿವನಸಮುದ್ರ ಮತ್ತು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ರಾಜಧಾನಿಯನ್ನು ನೆಲಸಮಮಾಡಿದನು. ಈ ನೂತನ ಪ್ರದೇಶವು ವಿಜಯನಗರ ಸಾಮ್ರಾಜ್ಯದ ಹೊಸ

ಪ್ರಾಂತ್ಯವಾಯಿತು. ಶ್ರೀರಂಗಪಟ್ಟಣವನ್ನು ರಾಜಧಾನಿಯಾಗಿ ಮಾಡಿ ಸಾಳುವ ಗೋವಿಂದರಾಯನನ್ನು ಅದರ ಮಾಂಡಲಿಕನಾಗಿ ರಾಯನು ನಿಯಕ್ತಿಗೊಳಿಸಿದನು.[೬೧] ಇದರಿಂದ ಈ ಪ್ರದೇಶದಲ್ಲಿ ಮುಂದೆ ಶಾಂತಿಯು ನೆಲೆಸಿತು.

ಕೃಷ್ಣದೇವರಾಯನು ರಾಯಚೂರು ಮತ್ತು ಮುದಗಲ್ಲುಗಳ ಮೇಲೆ ಯುದ್ಧ ಮಾಡುವುದಕ್ಕಿಂತ ಮುಂಚೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡ ಬಗೆ ದಿನಚರಿಯಲ್ಲಿ ಹೇಳಲಾಗಿದೆ. "ಮುಸ್ಲಿಂ ರಾಜ್ಯಗಳ ವಿಷಯವಾಗಿ ಗೂಢಚಾರರನ್ನು ಪ್ರಶ್ನಿಸಿ ವಿವರಗಳನ್ನು ಅರಿತನೆಂದು ದಿನಚರಿಯಲ್ಲಿ ಹೇಳಿದೆ.[೬೨] ರಾಯನು ರಾಯಚೂರು ಮತ್ತು ಮುದಗಲ್ಲುಗಳ ಮೇಲೆ ಧಾಳಿಮಾಡುವ ಮುಂಚೆ ಉಮ್ಮತ್ತೂರನ್ನು ಗೆದ್ದು ಬಳಸು ದಾರಿಯನ್ನು ಉಪಯೋಗಿಸಿ ಕೊಂಡು ಕೆಳದಿಯ ಕಡೆಗೆ ದಂಡನ್ನು ಸಾಗಿಸಿದನು. ಇದರಿಂದ ಶತ್ರುಗಳ ಯೋಜನೆಯನ್ನು ಭಗ್ನಗೊಳಿಸಿ ಕೆಳದಿಯ ಕಡೆಗೆ ಅಲ್ಲಿನ ಪಾಳೆಯಪಟ್ಟುವಿನ ವಿಚಾರಣೆಯ ನೆಪವಾಗಿ ನಡೆದು ಆ ಮೂಲಕ ವಿಜಾಪುರದ ದಂಡಯಾತ್ರೆಯ ಮಾರ್ಗವನ್ನು ಸುಗಮಗೊಳಿಸಿಕೊಂಡನು. ರಾಯನು ಇಲ್ಲಿಂದ ನಡೆದು ಮುದಗಲ್ಲು ಮತ್ತು ರಾಯಚೂರು ಹಾಗೂ ಇತರ ಕೋಟೆಗಳನ್ನು ವಶಪಡಿಸಿಕೊಂಡು, ತನ್ನ ಸೈನ್ಯವನ್ನು ಗೋಲ್ಕೊಂಡದ ಕಡೆಗೆ ತಿರುಗಿಸಿದನು.[೬೩] ಮುದಗಲ್ಲು ಮತ್ತು ರಾಯಚೂರು ಕೋಟೆಗಳನ್ನು ಕ್ರಿ.ಶ. ೧೫೨೦ ಮಾರ್ಚ್ ತಿಂಗಳ ಸುಮಾರಿಗೆ ಜಯಿಸಿದನು. ಕೃಷ್ಣದೇವರಾಯನ ಪೂರ್ವಾಪರಯೋಜನೆ, ದೂರದೃಷ್ಟಿ, ದೃಢನಿಷ್ಠೆ, ಸತತ ಪ್ರಯತ್ನದಿಂದ ಹಲವಾರು ಕೋಟೆಗಳನ್ನು ಗೆಲ್ಲಲು ಕಾರಣವಾಯಿತು.

ರಾಯನು ಮೊದಲನೆಯದಾಗಿ ಮುಸ್ಲಿಂರ ವಿರುದ್ಧ ಹೋರಾಟವನ್ನು ಪ್ರಾರಂಭಿಸಿದನು. ಇಲ್ಲಿ ಮೂರು ಮುಸ್ಲಿಂ ರಾಜ್ಯಗಳಾದ ಬಿಜಾಪುರ, ಗೋಲ್ಕೊಂಡ ಮತ್ತು ಅಹಮದ್‌ನಗರಗಳ ಸೈನ್ಯಗಳು ಸಂಘಟಿತವಾಗಿ ಕೃಷ್ಣಾನದಿ ದಂಡೆಯಲ್ಲಿ ಶಿಬಿರಹೂಡಿದ್ದವು. ಈ ವಿಷಯವು ಗುಪ್ತಚಾರ ದಳದಿಂದ ರಾಯನಿಗೆ ತಿಳಿದುಬಂದ ಮೇಲೆ ರಾಯನು ಶತ್ರುಗಳನ್ನು ಧ್ವಂಸಗೊಳಿಸುವಲ್ಲಿ ಅನಿರೀಕ್ಷಿತ ಮುತ್ತಿಗೆಯ ಯೋಜನೆಯನ್ನು ಹಾಕಿಕೊಂಡನು. ಈ ಯೋಜನೆಯ ಪ್ರಕಾರ ರಾಯನು ಮಾಡಿದ ಭೀಕರ ಆಕ್ರಮಣದಿಂದ ಶತ್ರುಸೈನ್ಯವು ನೂಚ್ಚುನೂರಾಯಿತು. ಈ ಯುದ್ಧದಲ್ಲಿ ಸುಲ್ತಾನನು ತೀವ್ರವಾಗಿ ಆಘಾತಕ್ಕೆ ಒಳಗಾದನು. ಸೈನಿಕರೆಲ್ಲಾ ಚೆಲ್ಲಾಪಿಲ್ಲಿಯಾಗಿ ಓಡಿಹೋದರು. ಇವರನ್ನು ವಿಜಯನಗರದ ಸೈನಿಕರು ಬೆನ್ನಟ್ಟಿ ಕೋವಿಲಕೊಂಡದವರೆಗೂ ಅಟ್ಟಿಸಿಕೊಂಡು ಅಲ್ಲಿಯೂ ಮುಸ್ಲಿಂ ಸೈನ್ಯವನ್ನು ಅಂತಿಮವಾಗಿ ಮತ್ತೆ ಸೋಲಿಸಿದರು. ಈ ದಾಳಿಯಿಂದ ಅರಸನಿಗೆ ತುಂಬಾ ಲಾಭವಾಯಿತು. ಯುದ್ಧದಲ್ಲಿ ದೊರೆತ ಆನೆ, ಕುದುರೆ, ಗುಡಾರ - ನಿಶಾನು, ನಗಾರಿ ಮೊದಲಾದವುಗಳನ್ನೆಲ್ಲಾ ವಿಜಯನಗರಕ್ಕೆ ಕಳುಹಿಸಿದನು.[೬೪] ಈ ಯುದ್ಧದಲ್ಲಿ ವಿಜಾಪುರದ ಯೂಸಫ್ ಆದಿಲ್‌ಖಾನನು ಕೊಲೆಯಾದನು.

ಮುಂದೆ ಕೃಷ್ಣದೇವರಾಯನಿಗೆ ಒರಿಸ್ಸಾದ ದೊರೆ ಗಜಪತಿ ಪ್ರತಾಪರುದ್ರದೇವನನ್ನು ಸೋಲಿಸುವುದು ಮುಖ್ಯ ಧ್ಯೇಯವಾಗಿದ್ದಿತು. ಕ್ರಿ.ಶ. ೧೫೧೩ರಲ್ಲಿ ಪ್ರಾರಂಭವಾದ ಉದಯಗಿರಿ ದಂಡಯಾತ್ರೆಯು ಹಲವು ಹಂತಗಳಲ್ಲಿ ನಡೆಯಿತು. ಉದಯಗಿರಿ ಕೋಟೆಯನ್ನು ವಶಪಡಿಸಿಕೊಳ್ಳುವ ಸಲುವಾಗಿ ರಾಯನು ಸ್ವತಃ ಸೇನೆಯನ್ನು ಮುನ್ನಡೆಸಿದನು. ಇದಕ್ಕಾಗಿ ಬಳಸಿದ ಸಂಪತ್ಸಾಧನಗಳು, ಯುದ್ಧಸಾಮಗ್ರಿಗಳು, ಸೇನೆ ಸಮರತಂತ್ರಗಳು. ರಾಯನು ಸೇನಾತಂತ್ರದಲ್ಲಿ ಸಮರವಿಚಕ್ಷಣ ತಂತ್ರವಿಶಾರದನೂ ಆಗಿದ್ದನೆಂದು ಹೇಳಬಹುದು. ಉದಯಗಿರಿ ಕೋಟೆಯನ್ನು

ವಶಪಡಿಸಿಕೊಳ್ಳುವ ಸಲುವಾಗಿ ಸದಾ ಕಳಿಂಗ ರಾಜ್ಯಗಳೊಡನೆ ರಾಯನು ಯುದ್ಧಗಳನ್ನು ಮಾಡುತ್ತಿದ್ದನು.[೮೫] ರಾಯನು ಕ್ರಿ.ಶ. ೧೫೧೩-೧೪ ರಲ್ಲಿ ಯುದ್ಧವನ್ನು ಕೈಗೊಂಡಾಗ ರಾಯನ ಸೈನ್ಯದ ಬಗ್ಗೆ ನ್ಯೂನಿಜನು ತನ್ನ ವರದಿಯಲ್ಲಿ ವಿವರಗಳನ್ನು ನೀಡಿದ್ದಾನೆ. "ರಾಯನ ಸೈನ್ಯದಲ್ಲಿ ೩೪,೦೦೦ ಕಾಲಾಳುಗಳೂ ೮೦೦ ಆನೆಗಳೂ ಇದ್ದಾಗ ಉದಯಗಿರಿ ಕೋಟೆಯಲ್ಲಿದ್ದ ಗಜಪತಿಯ ಸೈನ್ಯದಲ್ಲಿ ೧೦,೦೦೦ ಕಾಲಾಳುಗಳು ೪೦೦ ಕುದುರೆಗಳು ಮಾತ್ರ ಇದ್ದವು" ಎಂದು ಹೇಳಿರುವನು. ರಾಯನು ಉದಯಗಿರಿ ಕೋಟೆಯ ಮುತ್ತಿಗೆಯು ಸುಮಾರು ೮-೯ ತಿಂಗಳುಗಳ ಕಾಲದವರೆಗೆ ಹಾಕಿದನು.[೮೬] ಕೋಟೆಯು ದುರ್ಭೇದ್ಯವಾಗಿರುವುದರಿಂದ ರಾಯನು ಹಲವು ದಾರಿಗಳನ್ನು ನಿರ್ಮಿಸಿಕೊಂಡು ಕೋಟೆಯನ್ನು ಅಂತಿಮವಾಗಿ ವಶಪಡಿಸಿಕೊಂಡನು. ಈ ದಾಳಿಯಲ್ಲಿ ಕೋಟೆಯ ಒಳಗೆ ಸೆರೆಸಿಕ್ಕ ಗಜಪತಿ ಪ್ರತಾಪರುದ್ರನ ಚಿಕ್ಕಮ್ಮ ಮತ್ತು ಕುಮಾರನನ್ನು ರಾಜಮಾರ್ಯದೆಯಿಂದ ನಡೆಸಿಕೊಂಡನು. ಈ ಧಾಳಿಯ ಬಗ್ಗೆ ಹೆಚ್ಚಿನ ವಿವರವು "ಕೃಷ್ಣದೇವರಾಯ ವಿಜಯಮು" ಎಂಬ ಮಹಾಕಾವ್ಯವು ಹಲವು ವಿವರಣೆಯನ್ನು ನೀಡುತ್ತದೆ.[೮೭] ಇದೊಂದು ಭಯಂಕರವಾದ ಯುದ್ಧವಾಗಿ ರಾಯನ ದಂಡಯಾತ್ರೆಗಳಲ್ಲಿ ಮಹತ್ವದ್ದಾಗಿದೆ. ಈ ಯುದ್ಧದಲ್ಲಿ ಅರಸನ ಪಾಳೆಯಗಾರರು, ಮಾಂಡಲಿಕರ ಸಹಕಾರ ತುಂಬಾ ಅಪಾರವಾದುದು. ಈ ಯುದ್ಧದಲ್ಲಿ ಕ್ಲಿಷ್ಟವಾದ ಪರಿಸ್ಥಿತಿಯಲ್ಲಿ ರಾಯನ ಉಗ್ರವಾದ ಘೋಷಣೆಯು ಗಮನಾರ್ಹವಾದುದಾಗಿದೆ. ಕೊನೆಯಲ್ಲಿ ಹೋರಾಡಿ ಕ್ರಿ.ಶ. ೧೫೧೪ರಲ್ಲಿ ಕೋಟೆಯನ್ನು ವಶಪಡಿಸಿಕೊಳ್ಳಲಾಯಿತು. ರಾಯಸದ ಕೊಂಡಮರಸಯ್ಯನನ್ನು ಉದಯಗಿರಿಯ ಅಧಿಕಾರಿಯಾಗಿ ನೇಮಿಸಿ ಅಲ್ಲಿಂದ ವಿಜಯನಗರಕ್ಕೆ ಬರುವಾಗ ದಾರಿಯಲ್ಲಿ ಕ್ರಿ.ಶ. ೧೫೧೪ರ ಜುಲೈ ೬ ರಂದು ರಾಯನು ತಿರುಪತಿಗೆ ಭೇಟಿನೀಡಿದನು.[೮೮] ಈ ದೇವಾಲಯದ ವೆಂಕಟೇಶ್ವರ ದೇವರಿಗೆ ಕನಕಾಭಿಷೇಕವನ್ನು ಮಾಡಿದನು. ಈ ಕನಕಾಭಿಷೇಕವನ್ನು ಮೂವತ್ತುಸಾವಿರ ವರಾಹಗಳಿಂದ (ಬಂಗಾರದ ನಾಣ್ಯಗಳು) ನಡೆಸಿದನು. ಈ ಸಂದರ್ಭದಲ್ಲಿ ಇದೇ ದೇವರಿಗೆ ಅನೇಕ ಆಭರಣಗಳನ್ನು ಒಪ್ಪಿಸಿದನು. ಅದೇ ರೀತಿ ಅವನ ಸಂಗಡವಿದ್ದ ರಾಣಿಯರಿಂದ ದಾನವನ್ನು ಅರ್ಪಿಸಿದನು.[೮೯]

ರಾಯನು ಉದಯಗಿರಿ ಕೋಟೆಯನ್ನು ವಶಪಡಿಸಿಕೊಂಡ ಮೇಲೆ ಅಲ್ಲಿನ ದೇವಾಲಯವೊಂದರಲ್ಲಿದ್ದ ಬಾಲಕೃಷ್ಣ ವಿಗ್ರಹವನ್ನು ತಂದು ಕೃಷ್ಣಾಪುರದಲ್ಲಿ (ರಾಜಧಾನಿ) ಬೃಹತ್ತಾದ ಒಂದು ದೇವಾಲಯವನ್ನು ನಿರ್ಮಿಸಿ ಅದನ್ನು ಪ್ರತಿಷ್ಠಾಪಿಸಿದನು.[೯೦] ಈ ಸಂದರ್ಭದಲ್ಲಿ ರಾಯನ ಕಾರ್ಯವನ್ನು ಮೆಚ್ಚಿದ ಗುರುಗಳಾದ ವ್ಯಾಸರಾಯರು ತಮ್ಮ ಒಂದು ಕೀರ್ತನೆಯಲ್ಲಿ ಸಂತಸದಿಂದ ಹಾಡಿದ ಬಗೆಯಿದು :

'ಧರೆಗಧಿಕವೆಂದೆನಿಪ ವಿದ್ಯಾನಗರ ಒಳಿತೆಂದು
ಉದ್ದಗಿರಿಯಿಂದ ಬಂದ ಮುದ್ದು ಬಾಲಕೃಷ್ಣ ನಮ್ಮ'

ಈ ಮೇಲಿನ ವಿಷಯದಲ್ಲಿ ರಾಯನು ಗಜಪತಿಯ ವಿರುದ್ಧ ಮುಯ್ಯಿ ತೀರಿಸಿಕೊಂಡನೆಂದು ತಿಳಿದು ಬರುತ್ತದೆ.[೯೧] ಇದು ಅಂದಿನ ಕಾಲದಲ್ಲಿ ಸರ್ವೇಸಾಮಾನ್ಯವಾಗಿತ್ತು.

ಕೃಷ್ಣದೇವರಾಯನು ಉದಯಗಿರಿಯನ್ನು ಗೆದ್ದುಕೊಂಡ ಮೇಲೆ ಕ್ರಿ.ಶ. ೧೫೧೫ರಲ್ಲಿ ಕೊಂಡವೀಡಿನ ಕಡೆಗೆ ತನ್ನ ಸೈನ್ಯವನ್ನು ಮುನ್ನಡೆಸಿದನು. ಇದಕ್ಕೆ ಕಾರಣ ಸಾಳುವ ನರಸಿಂಹನ ಮರಣ ಶಾಸನ. ಇದರ ಪ್ರಕಾರ ರಾಯನು

ಕಳಿಂಗ ರಾಜ್ಯದ ಕೊಂಡವೀಡಿನ ಮೇಲೆ ದಂಡಯಾತ್ರೆಯನ್ನು ಮಾಡಬೇಕಾಗಿತ್ತು. "ರಾಯಚೂರು, ಉದಯಗಿರಿ ಮತ್ತು ಕೊಂಡವೀಡುಗಳನ್ನು ಗೆಲ್ಲುವುದು ರಾಜನ ಮನೋಭಾವನೆಯಾಗಿತ್ತು."[೮೨] ರಾಯನು ಈ ಯುದ್ಧಕ್ಕೆ ಬೇಕಾದ ಅನೇಕ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡು ಉದಯಗಿರಿಯಿಂದ ಕೊಂಡವೀಡಿನ ಕಡೆಗೆ ಸೈನ್ಯವನ್ನು ನಡೆಸಿದನು. ಈ ಯುದ್ಧವು ತಿಮ್ಮರಸನ ನೇತೃತ್ವದಲ್ಲಿ ನಡೆಯಿತು. ಈ ಯುದ್ಧದ ಕೊನೆಯ ಘಟ್ಟದಲ್ಲಿ ರಾಯನು ಇನ್ನೂ ಹೆಚ್ಚಿನ ಸೈನ್ಯದೊಂದಿಗೆ ತಿಮ್ಮರಸನ ಸೈನ್ಯವನ್ನು ಸೇರಿಕೊಂಡನು. ಕೊಂಡವೀಡು ಜಯಸಿಕೊಳ್ಳುವ ಮುನ್ನ ಅದ್ದಂಕಿ, ವಿನುಕೊಂಡ, ಬೆಲ್ಲಂಕೊಂಡ, ನಾಗಾರ್ಜುನಕೊಂಡ, ತಂಗಡ ಮತ್ತು ಕೇತವರಗಳನ್ನು ಗೆದ್ದುಕೊಂಡನೆಂದು ತಿಳಿಯುತ್ತದೆ.[೮೩] ಮೊದಲು ಈ ಎಲ್ಲಾ ಸಣ್ಣಪುಟ್ಟ ಕೋಟೆಗಳನ್ನು ಪ್ರಾಂತ್ಯಗಳನ್ನು ವಶಪಡಿಸಿಕೊಂಡನು. ಕೊಂಡವೀಡು ವಿಜಯದ ವಿವರಗಳನ್ನು ನ್ಯೂನಿಜ್‌ನ ವರದಿಯಿಂದ ಮಾತ್ರ ತಿಳಿದುಬರುತ್ತದೆ. ರಾಯನು ಕೊಂಡವೀಡು ಕೋಟೆಯ ಮೇಲೆ ಕಾರ್ಯಾಚರಣೆಯನ್ನು ನಡೆಸಿ ಎರಡು ತಿಂಗಳ ಕಾಲ ಮುತ್ತಿಗೆ ಹಾಕಿ ಅದನ್ನು ಕೊನೆಗೆ ವಶಪಡಿಸಿಕೊಂಡನು.[೮೪] ಇದರ ಆಡಳಿತವನ್ನು ಪ್ರಧಾನಿ ತಿಮ್ಮರಸನಿಗೆ ವಹಿಸಿಕೊಟ್ಟು, ಗಜಪತಿಯ ಪ್ರಧಾನಿಗಳನ್ನು, ಅಧಿಕಾರಿಗಳನ್ನು ರಾಜಕುಮಾರನನ್ನು ಸೆರೆಹಿಡಿದನು. ಇಲ್ಲಿಂದ ಅಮರೇಶ್ವರ ದೇವಾಲಯಕ್ಕೆ ಭೇಟಿ ನೀಡಿ ರಾಯನು ಕ್ರಿ.ಶ. ೧೫೧೫ ಜುಲೈ ೮ ರಂದು ತುಲಾಪುರುಷದಾನ ಮಾಡಿ ತನ್ನ ರಾಣಿಯರಿಂದ ರತ್ನಧೇನೂ, ಸಪ್ತಸಾಗರ ಮಹಾದಾನಗಳನ್ನು ಮಾಡಿಸಿದನು.[೮೫] ಅಲ್ಲಿಂದ ಶ್ರೀಶೈಲಕ್ಕೆ ನಡೆದು ವಿಜಯನಗರಕ್ಕೆ ತಲುಪಿದನು.[೮೬]

ರಾಯನ ಮೂರನೇ ದಂಡಯಾತ್ರೆಯು ಕೊಂಡಪಲ್ಲಿ ಕೋಟೆಯಾಗಿದ್ದಿತು. ಇದು ರಾಯನ ದಂಡಯಾತ್ರೆಯಲ್ಲಿ ಅತ್ಯಂತ ಮುಖ್ಯವಾದುದೆಂದೂ ಗೊತ್ತಾಗುತ್ತದೆ. ರಾಯನು ಶ್ರೀಶೈಲದಿಂದ ವಿಜಯನಗರಕ್ಕೆ ಬಂದ ಮೇಲೆ ಸಾಕಷ್ಟು ಆಹಾರ ಸಾಮಗ್ರಿಗಳನ್ನು, ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಕೊಂಡು ಕ್ರಿ.ಶ. ೧೫೧೫ರ ಡಿಸೆಂಬರ್ ತಿಂಗಳಲ್ಲಿ ವಿಜಯನಗರದಿಂದ ಹೊರಟು ವಿಜಯವಾಡವನ್ನು ಸೇರಿಕೊಂಡು ಆ ಪ್ರದೇಶವನ್ನು ವಶಪಡಿಸಿಕೊಂಡನು. ಈ ಪ್ರದೇಶವು ಯುದ್ಧತಂತ್ರ ದೃಷ್ಟಿಕೋನದಿಂದ ಬಹಳ ಮಹತ್ವದ ಕೇಂದ್ರವಾಗಿದ್ದಿತು. ಮುಂದಿನ ಎಲ್ಲಾ ದಂಡಯಾತ್ರೆಗಳಿಗೆ ಇದು ಮುಖ್ಯ ನೆಲೆಯಾಯಿತು. ವಿಜಯವಾಡದ ಸಮೀಪ ಶ್ರೀಕಾಕುಳದಲ್ಲಿ ಮಧುಸೂದನನೆಂದು ಹೆಸರಾದ ವಿಷ್ಣುವಿನ ದೇವಾಲಯವಿದೆ. ವಿಜಯನಗರ ಅರಸರೆಲ್ಲರೂ ಈ ದೇವರ ಭಕ್ತರಾಗಿದ್ದರು. ರಾಯನು ವಿಜಯವಾಡದಲ್ಲಿ ತಂಗಿದ್ದಾಗ ಶ್ರೀಕಾಕುಳಕ್ಕೆ ಹೋಗಿ ಅಲ್ಲಿನ ಮಧುಸೂಧನನ ದರ್ಶನ ಮಾಡಿ ಹರಿವಾಸರೋಪವಾಸವನ್ನು ಆಚರಿಸಿದನು. ಆ ಪುಣ್ಯರಾತ್ರಿಯಲ್ಲಿ ಮಧುಸೂದನನು ರಾಯನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು 'ಆಮುಕ್ತಮಾಲ್ಯದ' ಮಹಾಕಾವ್ಯದ ರಚನೆಗೆ ಆದೇಶ ನೀಡಿದನು. ಇದೊಂದು ಚರಿತ್ರಾತ್ಮಕ ಘಟನೆಯಾಗಿದೆ.[೮೭] ಮುಂದೆ ರಾಯನು ಕ್ರಿ.ಶ. ೧೫೧೯ರಲ್ಲಿ ಶ್ರೀಕಾಕುಳದ ಮಧುಮಥನ ದೇವಾಲಯವನ್ನು ದರ್ಶಿಸಿ ಆ ಪ್ರದೇಶದ ಲಂಕಪಲ್ಲಿ ಎಂಬ ಹಳ್ಳಿಯನ್ನು ದತ್ತಿಯಾಗಿ ದೇವಾಲಯಕ್ಕೆ ನೀಡಿದನು.[೮೮]

ಕೃಷ್ಣದೇವರಾಯನು ವಿಜಯವಾಡದಿಂದ ಕೊಂಡಪಲ್ಲಿಗೆ ಕಾರ್ಯಾಚರಣೆಯನ್ನು ಸಾಗಿಸಿ ಅದನ್ನು ಯಾವುದೇ ಪ್ರತಿಭಟನೆಯಿಲ್ಲದೆ ಕ್ರಿ.ಶ. ೧೫೧೬ ಫೆಬ್ರುವರಿ ತಿಂಗಳಲ್ಲಿ ವಶಪಡಿಸಿಕೊಂಡನು.[೮೯] ಕೊಂಡಪಲ್ಲಿ ವಿಜಯದ ನಂತರ

ರಾಯನು ಮುಂದುವರಿದು ರಾಜಮಹೇಂದ್ರಿಯನ್ನು ವಶಪಡಿಸಿಕೊಂಡು ಮುಂದೆ ಸಾಗಿ ಸಿಂಹಾದ್ರಿ, ಪೊಟ್ನೂರುಗಳನ್ನು ಆಕ್ರಮಿಸಿಕೊಂಡನು. ಈ ಸಂದರ್ಭದಲ್ಲಿ ಸಿಂಹಾಚಲಕ್ಕೆ ಹೋಗಿ ದೇವರ ದರ್ಶನ ಪಡೆದುಕೊಂಡು ತನ್ನ ವಿಜಯದ ಸವಿನೆನಪಿಗಾಗಿ ಸಿಂಹಾಚಲ, ಪೊಟ್ನೂರು ಮತ್ತು ಶ್ರೀಕೂರ್ಮದಲ್ಲಿ ವಿಜಯಸ್ತಂಭಗಳನ್ನು ಸ್ಥಾಪಿಸಿಧನು. ಈ ಕಾರ್ಯವನ್ನು ನೆರವೇರಿಸಿದವನು ಮಹಾ ಪ್ರಧಾನ ರಾಯಸದ ಕೊಂಡಮರಸಯ್ಯನಾಗಿದ್ದನು. ರಾಯನು ಇಲ್ಲಿಂದ ಮುಂದೆ ನಡೆದು ರಾಜಮಹೇಂದ್ರಿಯ ಮೂಲಕ ವಿಜಯವಾಡವನ್ನು ತಲುಪಿ, ಅಲ್ಲಿ ಕೊಂಚ ಕಾಲ ವಿಶ್ರಾಂತಿಯನ್ನು ಪಡೆದು ತನ್ನ ಯಾತ್ರೆಯನ್ನು ಮುಂದುವರಿಸಿ ಮೇಡೂರನ್ನು ವಶಪಡಿಸಿಕೊಂಡನು.

ಮುಂದೆ ತೆಲಂಗಾಣದ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡುದರ ಬಗ್ಗೆ ತಿರುಪತಿ ಮತ್ತು ಕಾಳಹಸ್ತಿ ಶಾಸನಗಳಲ್ಲಿ ವಿವರಗಳಿವೆ. ಈ ತೆಲಂಗಾಣದ ಪ್ರದೇಶಗಳೆಂದರೆ ಅನಂತಗಿರಿ, ಉರ್ಲಕೊಂಡ, ಆರುವಪಲ್ಲಿ, ಜಲ್ಲಿಪಲ್ಲಿ, ಕಂಡಿಕೊಂಡ, ಕಪ್ಪಲುವಾಯಿ, ನಲ್ಲಕೊಂಡ, ಕನಕಗಿರಿ, ಶಂಕರಗಿರಿ ಮತ್ತು ಕಂಭಂಮ್ಮೆಟ್ಟು ಇತ್ಯಾದಿಗಳನ್ನು ಗೆದ್ದುಕೊಂಡನು. 'ಆಮುಕ್ತಮಾಲ್ಯದ'ದಲ್ಲಿ ಕನಕಗಿರಿಯನ್ನು ಪೊಟ್ನೂರಿಗೆ ಮೊದಲೇ ತಿಳಿಸಲಾಗಿದೆ.[೧೦] ಇಲ್ಲಿ ಅರಸನು ಮೊದಲು ಪಶ್ಚಿಮಕ್ಕೆ ನಡೆದು ನಲ್ಗೊಂಡಕೋಟೆ ಮತ್ತು ವರಂಗಲ್ ಪ್ರದೇಶಗಳನ್ನು ಗೆದ್ದು ಗೋದಾವರಿಯನ್ನು ತಲುಪಿ ಅಲ್ಲಿಂದ ಸೇನೆಯನ್ನು ಪೂರ್ವಾಭಿಮುಖವಾಗಿ ತಿರುಗಿಸಿದನು. ಅಲ್ಲಿ (ತೆಲಂಗಾಣ) ಭೋಗಿ ಕುಲಕ್ಕೆ ಸೇರಿದ ಸಿತಬ್ ಖಾನ್ (ಸೀತಾಪತಿ) ಆಳುತ್ತಿದ್ದನು. ಇವನು ೬೦,೦೦೦ ಬಿಲ್ಗಾರರ ಪಡೆಯೊಂದಿಗೆ ಉಗ್ರವಾಗಿ ಎದುರಿಸಿದನು. ಅರಸನ ಅಶ್ವಪಡೆಯು ಎರಡೂ ಪಕ್ಕಗಳಲ್ಲಿದ್ದ ಬೆಟ್ಟಗಳನ್ನು ಹತ್ತಿಕೊಂಡು ಹಿಂದಿನಿಂದ ವೈರಿಯ ಮೇಲೆ ಮುಗಿಬಿದ್ದಿತು. ಸೀತಾಪತಿಯ ಯೋಧರು ದಿಕ್ಕಾಪಾಲಾಗಿ ಓಡಿದರು. ರಾಯನು ೩೦,೦೦೦ ಅಶ್ವಾರೋಹಿ ಪಡೆಯನ್ನು ಆ ಕಣಿವೆಯ ಕಾವಲಿಗೆ ನೇಮಿಸಿದನು.[೧೧] ಕೊನೆಯಲ್ಲಿ ಈ ತೆಲಂಗಾಣದ ಸೀತಾಪತಿಯನ್ನು ಸೋಲಿಸಿ ಗಜಪತಿಯ ರಾಜ್ಯಕ್ಕೆ ಮುತ್ತಿಗೆ ಹಾಕಲು ಮಾರ್ಗವನ್ನು ಸುಲಭಪಡಿಸಿಕೊಂಡನು.[೧೨]

ರಾಯನು ಕಟಕಕ್ಕೆ ಹೋಗುವಾಗ ಮೇಲೆ ತಿಳಿಸಿದ ಮಾರ್ಗದಿಂದಲೇ ನಡೆದನು. ಆದುದರಿಂದ ಈ ಎಲ್ಲಾ ಪ್ರದೇಶಗಳನ್ನು ಗೆದ್ದುಕೊಂಡ ಬಗ್ಗೆ ಯಾವುದೇ ಅನುಮಾನವಿಲ್ಲ. ತೆಲಂಗಾಣ ಪ್ರದೇಶವನ್ನು ಗೆದ್ದುಕೊಂಡ ಮೇಲೆ ಶ್ರೀಕಾಕುಳಮ್ ಜಿಲ್ಲೆಯ ಉತ್ತರದ ಪ್ರದೇಶಗಳನ್ನು ಗೆಲ್ಲುವುದಾಗಿತ್ತು. ಕೊನೆಯಲ್ಲಿ ಕಟಕ್ ಇವುಗಳನ್ನು ಮನುಚರಿತ್ರೆಯ ಪದ್ಯವೊಂದರಲ್ಲಿ ಉಲ್ಲೇಖಿಸಲಾಗಿದೆ.[೧೩] ರಾಯನು ಕಟಕಕ್ಕೆ ಹೋದದ್ದು ಕೋನಸೀಮೆ, ಮೋಡೆಮು, ಒಡ್ಡಾದಿ, ಜಮ್ಮಿ ಮತ್ತು ಕೊಟ್ಟಮ್ ಮಾರ್ಗವಾಗಿ ಶ್ರೀಕೂರ್ಮಾಮ್‌ನಿಂದ ರಾಯನು ಉತ್ತರದಿಕ್ಕಿನ ಮೂಲಕ ಕಟಕವನ್ನು ಮುತ್ತಿದನು. ಕಟಕ್ ದಾಳಿಯನ್ನು ತಿಳಿಸುವಲ್ಲಿ ಹಲವು ಮೂಲಧಾರಗಳು ಮುಖ್ಯವಾಗಿವೆ. ಅವುಗಳಲ್ಲಿ ಮನುಚರಿತ್ರೆ, ರಾಯವಾಚಕಮು, ಪಾರಿಜಾತಪಹರಣಮು, ಕೊಮ್ಮೂರು ಶಾಸನ, ಚೋಳ ಸಮುದ್ರಂ ಶಾಸನ ಹಾಗೂ ಚಮಾರ್ಲಾಕೋಟ ಕೈಫಿಯತ್ತುಗಳು ಪ್ರಮುಖವಾಗಿವೆ.[೧೪] ರಾಯನು ರಾಜಮಹೇಂದ್ರಿಯನ್ನು ಗೆದ್ದುದರಿಂದ ಸಮಗ್ರವೆಂಗಿನಾಡು ಅವನ ಆಳ್ವಿಕೆಗೆ ಒಳಪಟ್ಟದ್ದಿತು. ಇಷ್ಟಾದರೂ ಗಜಪತಿಯು ಶರಣಾಗತನಾಗುವ ಒಲವು ತೋರಿಸಲಿಲ್ಲ. ಈ ಯುದ್ಧಗಳ ನಿರೂಪಣೆಯನ್ನು ರಾಯವಾಚಕಮು ಒದಗಿಸುತ್ತದೆ. ಒರಿಸ್ಸಾದ ರಾಜಧಾನಿ

ಕಟಕ್ ಗೆ ವಿಜಯನಗರದ ಸೈನ್ಯ ಮುತ್ತಿಗೆ ಹಾಕಿದ್ದನ್ನು ಕಂಡ ಪ್ರತಾಪರುದ್ರ ಗಜಪತಿಯು ವಿಧಿಯಿಲ್ಲದೆ ಸಂಧಾನಕ್ಕೆ ಮುಂದಾದನು. ತರುವಾಯ ಇಬ್ಬರ ನಡುವೆ ಶಾಂತಿಯ ಒಪ್ಪಂದಗಳು ಏರ್ಪಟ್ಟು ಗಜಪತಿಯು ತನ್ನ ಮಗಳಾದ ಜಗನ್ಮೋಹಿನಿಯನ್ನು ಕೃಷ್ಣದೇವರಾಯನಿಗೆ ಧಾರೆಯೆರೆದುಕೊಟ್ಟು ಸಂಧಿಮಾಡಿಕೊಳ್ಳಬೇಕಾಯಿತು. ರಾಯನು ತನ್ನ ಮಾವನಾದ ಗಜಪತಿಗೆ ಕೃಷ್ಣಾನದಿಯ ಉತ್ತರದ ತಾನು ಗೆದ್ದುಕೊಂಡ ಸೀಮೆಗಳನ್ನು ಹಿಂದಕ್ಕೆ ಬಿಟ್ಟುಕೊಟ್ಟನು. ಇಲ್ಲಿಗೆ ದಕ್ಷಿಣಭಾರತ ಮಿಲಿಟರಿ ಇತಿಹಾಸದ ಅತ್ಯಂತ ಉಜ್ವಲವಾದ ಘಟನೆಗಳಲ್ಲಿ ಇದು ಸಮಾಪನಕಂಡಿತು. ಈ ಯುದ್ಧದಲ್ಲಿ ಮಾಡಿಕೊಂಡ ಒಪ್ಪಂದವನ್ನು ಕಂಡರೆ ಕೇವಲ ರಾಜ್ಯದಾಹ ಹಾಗೂ ಸಾಮ್ರಾಜ್ಯದ ವಿಸ್ತರಣೆಯೇ ರಾಯನ ಪರಮ ಗುರಿಯಾಗಿರಲಿಲ್ಲವೆಂಬುದು ವ್ಯಕ್ತವಾಗುತ್ತದೆ. ಈ ವಿಜಯದ ಫಲವಾಗಿ ಕೃಷ್ಣಾನದಿಯ ಸಮಗ್ರ ದಕ್ಷಿಣಭಾಗವೂ ವಿಜಯನಗರದ ಸಾಮ್ರಾಜ್ಯದಲ್ಲಿ ಲೀನವಾಯಿತು. ಒರಿಸ್ಸಾದ ಯುದ್ಧತಂತ್ರವು ಐದು ಹಂತಗಳಲ್ಲಿ ನಡೆದು ಪ್ರಸ್ತುತ ಘಟನೆಯು ಕ್ರಿ.ಶ. ೧೫೧೩ ರಿಂದ ೧೫೧೮ರ ವರೆಗೆ ಸುಮಾರು ಆರುವರ್ಷಗಳನ್ನು ಒಳಗೊಂಡ ಸಮರತಂತ್ರವನ್ನು ಯೋಜಿಸಲಾಗಿತ್ತು.

ಕಳಿಂಗ ದಂಡಯಾತ್ರೆಯಲ್ಲಿ ಗಳಿಸಿದ ವಿಜಯದ ನೆನಪಿಗಾಗಿ ರಾಯನು ಹಲವು ಪುಣ್ಯಕ್ಷೇತ್ರಗಳಿಗೆ ಭೇಟಿ ಮಾಡಿ ದಾನದತ್ತಿ ನೀಡಿ ಧರ್ಮಕಾರ್ಯಗಳನ್ನು ನಡೆಸಿದನು. ಶ್ರೀಕೃಷ್ಣದೇವರಾಯನ ದಿನಚರಿಯಲ್ಲಿ ರಾಯನು ಕೈಗೊಂಡ ತೀರ್ಥಕ್ಷೇತ್ರಗಳ ವಿವರಗಳಿವೆ.[೯೫] ರಾಯನು ತಿರುಪತಿಯ ವೆಂಕಟೇಶ್ವರ ಸ್ವಾಮಿಯನ್ನು ಸೇವಿಸಿ ಷೋಡಶ ಮಹಾದಾನಗಳನ್ನು ಮಾಡಿ ಅಲ್ಲಿಂದ ಕಾಳಹಸ್ತಿಗೆ ಬಂದು ಸ್ವಾಮಿ ದರ್ಶನ ಮಾಡಿ ಕಾಣಿಕೆಗಳು, ನವರತ್ನಾಭರಣಗಳು, ಗ್ರಾಮಗಳನ್ನು ಸಮರ್ಪಿಸಿ, ಶ್ರೀಮುಖ ಸಂವತ್ಸರದಲ್ಲಿ ಶಿವಕಂಚಿ, ವಿಷ್ಣುಕಂಚಿಗೆ ಬಂದು ಏಕಾಂಬರನಾಥ, ಕಾಮಾಕ್ಷಮ್ಮ ವರದರಾಜಸ್ವಾಮಿ, ಶೊಡಿಕಡುತ್ತ ನಾಚ್ಚಿಯಾರಮ್ಮನವರ ಸೇವಿಸಿ ನವರತ್ನಾಭರಣಗಳನ್ನು, ಗ್ರಾಮಗಳನ್ನು ಸಮರ್ಪಿಸಿದನು. ಮುಂದೆ ಶ್ರೀರಂಗಕ್ಕೆ ಜಂಬುನಾಥಸ್ವಾಮಿಯ ಸನ್ನಿಧಿಯಲ್ಲಿ ತುಲಾಪುರುಷದಾನವ ಮಾಡಿ ನಂದಿಕೇಶ್ವರ, ಅಳಗರುಗುಡಿ, ಮಧುರೆ ಶ್ರೀವಿಲ್ಲಿಪುತ್ತೂರು, ಕರುವನಲ್ಲೂರು, ದಕ್ಷಿಣಕಾಶಿ, ತ್ರಿಕೂಟಾಚಲ, ಅಗಸ್ತ್ಯಪರ್ವತ, ಶಾಲಿ, ವಟಪುರ, ಕುರುಂಗುಡಿ, ಕನ್ಯಾಕುಮಾರಿ, ಶ್ರೀಕಂದೂರು, ನವತಿರುಪತಿ, ಆದಿಸೇತು ಮತ್ತು ಧನುಷ್ಕೋಟಿಯಲ್ಲಿ ಬಂದು ರಾಯನು ತನ್ನ ಕತ್ತಿಯನ್ನು ತೊಳೆದನು. ಮುಂದೆ ಶ್ರೀರಂಗಪಟ್ಟಣ, ಗೋಕರ್ಣ ಇತ್ಯಾದಿ ಕ್ಷೇತ್ರಗಳನ್ನು ಸಂದರ್ಶಿಸಿದನು. ರಾಯನು ತೀರ್ಥಯಾತ್ರೆಯ ಸಂದರ್ಭದಲ್ಲಿ ಮಿತವಾದ ಸೈನ್ಯವನ್ನು ಹೊಂದಿದ್ದನು. ಇವನು ಕ್ರಿ.ಶ. ೧೫೧೬ ನವೆಂಬರ್‌ನಲ್ಲಿ ವಿಜಯನಗರದ ವಿರೂಪಾಕ್ಷ, ವಿಠಲ, ಹಜಾರರಾಮಸ್ವಾಮಿ ದೇವಾಲಯಗಳಿಗೆ ದಾನದತ್ತಿಯನ್ನು ನೀಡುವುದರ ಮೂಲಕ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದನು. ಮುಂದಿನ ವರ್ಷ ೧೫೧೭ರಲ್ಲಿ ತಿರುಪತಿ, ಕಾಳಹಸ್ತಿಗೆ ಭೇಟಿನೀಡಿದನು. ಅದೇ ವರ್ಷ ರಾಯನು ಕುಂಭಕೋಣಂದ ಮಹಾಮುಖಂ ಉತ್ಸವಗಳಲ್ಲಿ ಭಾಗವಹಿಸಿದ್ದನು.[೯೬] ಅಲ್ಲದೆ ದಕ್ಷಿಣಪಥದ ಹಲವು ಪುಣ್ಯಕ್ಷೇತ್ರಗಳಿಗೂ ಹೋಗಿಬಂದನು.[೯೭] ಕಳಿಂಗ ವಿಜಯದ ನಂತರ ರಾಯನು ರಾಜಾಜ್ಞೆಯನ್ನು ಹೊರಡಿಸಿ ದಕ್ಷಿಣದೇಶದ ಹಲವು ದೇವಾಲಯಗಳ ಮಾನ್ಯಗಳ ಮೇಲೆ ಕಂದಾಯಗಳನ್ನು ತೆಗೆದುಹಾಕಿ ಆ ಗ್ರಾಮಗಳನ್ನು ಸರ್ವಮಾನ್ಯ ಗ್ರಾಮಗಳಾಗಿ ಪರಿವರ್ತಿಸಿದನು.[೯೮] ರಾಯನು ಕೈಗೊಂಡ ಕಳಿಂಗ ದಂಡಯಾತ್ರೆಯು ಒಂದು ಪೌರುಷವಾದ ದಂಡಯಾತ್ರೆಯಾಗಿದೆ.

ಇದರಿಂದ ಇವನು ಅನೇಕ ಕ್ಷೇತ್ರಗಳಿಗೆ ಯಾತ್ರೆಯನ್ನು ಕೈಗೊಂಡು ನಾಡಿನಲ್ಲೆಲ್ಲಾ ದಾನಧರ್ಮಗಳನ್ನು ಮಾಡಿ ಸಾಮ್ರಾಜ್ಯದಲ್ಲಿ ಧಾರ್ಮಿಕ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡಿ ಸಾಮ್ರಾಜ್ಯದ ಶಕ್ತಿ ಸಾಮರ್ಥ್ಯಗಳನ್ನು ಬೆಳೆಸಿದನು. ತನ್ನ ಸಾಮ್ರಾಜ್ಯದ ವಿಸ್ತರಣೆಯೊಂದಿಗೆ ಶಾಂತಿಯ ನೇತಾರನಾಗಿ ಕಂಡುಬಂದನು.

ಮುಂದೆ ರಾಯನು ಶಾಹಿಸುಲ್ತಾನರ ವಿರುದ್ಧ ಯುದ್ಧಗಳನ್ನು ಪದೇ ಪದೇ ಮಾಡಬೇಕಾಗಿ ಬಂದಿತು. ಬಿಜಾಪುರದ ಆದಿಲ್ ಷಹನು ರಾಯಚೂರನ್ನು ಪುನಃ ಗೆದ್ದುಕೊಂಡನು. ಕ್ರಿ.ಶ. ೧೫೧೩ರ ವೇಳೆಗೆ ರಾಯಚೂರು ಬಿಜಾಪುರದ ರಾಜ್ಯಕ್ಕೆ ಸೇರಿಹೋಗಿದ್ದಿತು. ಪ್ರಾಯಶಃ ಅರಸನು ಎರಡನೆ ಉಮ್ಮತ್ತೂರು ಕಾಳಗದಲ್ಲಿ ತೊಡಗಿದ್ದಾಗ ಬಿಜಾಪುರದವರು ರಾಯಚೂರು ಮುದಗಲ್ಲುಗಳನ್ನು ಸ್ವಾಧೀನಪಡಿಸಿಕೊಂಡರು. ರಾಯನು ರಾಯಚೂರು ಆಕ್ರಮಣಕ್ಕೆ ಮುಂಚಿತವಾಗಿಯೇ ಪೋರ್ಚುಗೀಸರ ಬಳಿ ಒಂದು ನಿಯೋಗವನ್ನು ಕಳುಹಿಸಿ ಇಸ್ಮೈಲ್ ಆದಿಲ್‌ಷಾಹನೊಡನೆ ಯುದ್ಧಮಾಡುವಾಗ ಸಹಾಯವನ್ನು ಮಾಡಬೇಕೆಂದು ಕೋರಿದ ವಿವರ ತಿಳಿಯುತ್ತದೆ.[೯೯] ಇದರ ಉದ್ದೇಶ ದೋಅಬ್ ಪ್ರದೇಶವನ್ನು ಷಾಹಿಗಳಿಂದ ಕಿತ್ತುಕೊಳ್ಳುವುದಾಗಿತ್ತು.

ಕ್ರಿ.ಶ. ೧೫೧೪ ಸೆಪ್ಟೆಂಬರ್ ತಿಂಗಳ ಕೊಂಡಮರಸಯ್ಯನ ಕಂದುಕೂರು ಶಾಸನವು ರಾಯನನ್ನು "ಯವನರಾಜ್ಯ ಸ್ಥಾಪನಾಚಾರ್ಯ" ಎಂದು ಕರೆದಿರುವ ಮೊತ್ತಮೊದಲ ದಾಖಲೆಯಾಗಿದೆ.[೧೦೦] ಧರಣೀಕೋಟ, ಆಹೋಬಲಂ, ಸಿಂಹಾಚಲ, ತಿರುಪತಿ,[೧೦೧] ಶ್ರೀಶೈಲ[೧೦೨] ಶಾಸನಗಳಲ್ಲಿ ಯವನರಾಜ್ಯಸ್ಥಾಪನಾಚಾರ್ಯ ಎಂದೇ ಕರೆಯಲಾಗಿದೆ. ಅಲ್ಲದೆ ಮನುಚರಿತ್ರೆಯಲ್ಲಿ 'ಯವನಕ್ಷೋಣಿಧವಸ್ಥಾಪನಾ ಮಂದೀಭೂತ ಕೃಪಾಕಟಾಕ್ಷ' ಎಂದು ರಾಯನನ್ನು ಹೊಗಳಲಾಗಿದೆ.[೧೦೩] ರಾಯನು ಗುಲ್ಬರ್ಗಾ ಕೋಟೆಯನ್ನು ಮುತ್ತಿ ಅದನ್ನು ವಶಪಡಿಸಿಕೊಂಡನೆಂದು ನ್ಯೂನಿಜ್‌ನು ಹೇಳುತ್ತಾನೆ.[೧೦೪] ಆದರೆ ಅಲ್ಲಿನ ಮಂತ್ರಿ ಪರಿಷತ್ತಿನ ಸಲಹೆಯ ಮೇರೆಗೆ ಅರಸನು ಇಸ್ಮಾಯಿಲ್‌ನ ಮೇಲೆ ಆಕ್ರಮಣವನ್ನು ನಿಲ್ಲಿಸಿದನು. ಗುಲ್ಬರ್ಗಾದಲ್ಲಿ ಬಂಧಿಯಾಗಿದ್ದ ೨ನೇ ಮಹಮದ್‌ಷಾಹನನ್ನು ಬಿಡುಗಡೆ ಮಾಡಿ ಅವನನ್ನು ಪುನಃ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಹೀಗೆ ಬಹುಮನಿ ಸುಲ್ತಾನಷಾಹಿಯನ್ನು ಪುನರುಜ್ಜೀವನಗೊಳಿಸಿ ಅರಸನು ಮುಸ್ಲಿಂ ರಾಜ್ಯಗಳ ಮೇಲೆ ತನ್ನ ಹಿಡಿತವನ್ನು ಸಾಧಿಸಿದನು. ಈ ಸಂದರ್ಭದ ನೆನಪಿಗಾಗಿ ರಾಯನಿಗೆ 'ಯವನರಾಜ್ಯಸ್ಥಾಪನಾಚಾರ್ಯ' ಎಂಬ ಬಿರುದನ್ನು ನೀಡಲಾಯಿತು.[೧೦೫] ಗುಲ್ಬರ್ಗಾ ಯುದ್ಧದಲ್ಲಿ ರಾಯನಿಗೆ ಸಹಾಯಕರಾಗಿ ನಿಂತ ನೇತಾರರೆಂದರೆ ಸದಾಶಿವನಾಯಕ, ದೊಡ್ಡವಸಂತನಾಯಕ, ಪೆಮ್ಮಸಾನಿ ತಿಮ್ಮನಾಯಕ ಇವರ ಸಾಹಸ ಹೋರಾಟದಿಂದ ಗುಲ್ಬರ್ಗಾವು ವಿಜಯನಗರದ ಅರಸರ ವಶವಾಯಿತು. ಇದರಿಂದ ಸದಾಶಿವನಾಯಕನಿಗೆ "ಇಮ್ಮಡಿ ಸದಾಶಿವೇಂದ್ರ"[೧೦೬] 'ಕೋಟೆ ಕೋಲಾಹಲ' ಎನ್ನುವ ಬಿರುದನ್ನು ಕಲ್ಯಾಣ ಹಾಗೂ ಗುಲ್ಬರ್ಗಾದ ಜಯಕ್ಕಾಗಿ ರಾಯನು ನೀಡಿದನು. ಅರಸನು ಈ ಯುದ್ಧದಲ್ಲಿ ಸೋತಿದ್ದ ಸೈನ್ಯವನ್ನು ದಯೆಯಿಂದ ನಡೆಸಿಕೊಂಡನು. ಅದು ಅಲ್ಪಾವಧಿಯ ಯುದ್ಧವಾಗಿದ್ದರಿಂದ ಕ್ರಿ.ಶ. ೧೫೧೪ರ ಜುಲೈ ನಂತರ ನಡೆದಿರಬೇಕು. ಈ ಒಂದು ಯುದ್ಧವನ್ನು ರಾಯನು ತಿರುಪತಿಯಿಂದ ಹಿಂತಿರುಗಿ ಬಂದ ಬಳಿಕ ನಡೆದಿರಬೇಕು.

ಕ್ರಿ.ಶ. ೧೫೧೭ರ ಸೆಪ್ಟೆಂಬರ್ ತಿಂಗಳಲ್ಲಿ ಮುಸ್ಲಿಂರ ಧರ್ಮಯುದ್ಧವನ್ನು ರಾಯನು ಎದುರಿಸಬೇಕಾಯಿತು. ಮುಸ್ಲಿಂ ಸುಲ್ತಾನರೆಲ್ಲಾ ಒಂದಾಗಿ 'ಜಿಹಾದ್'ಗೆ ಕರೆ ನೀಡಿದರು. ಸುಲ್ತಾನರ ವಜೀರರೆಲ್ಲ ಬೀದರ್‌ನಲ್ಲಿ ಸಭೆಸೇರಿ

ಒಂದು ತೀರ್ಮಾನವನ್ನು ಕೈಗೊಂಡು ವಿಜಯನಗರದ ಮೇಲೆ 'ಧರ್ಮಯುದ್ಧ' ನಡೆಸಬೇಕೆಂದು ತೀರ್ಮಾನಿಸಿದರು.[೧೦೭] ಈ ಕಾರ್ಯದಲ್ಲಿ ಮುಖ್ಯಪಾತ್ರವಹಿಸಿದವನೆಂದರೆ ಆದಿಲ್‌ಷಾಹನ ಸರದಾರನಾದ ಅಸಾದ್‌ಖಾನ್ ಎಂಬುವನು ಪ್ರಮುಖನಾಗಿದ್ದನು. ಈ ವಿಷಯವನ್ನು ರಾಯನು ತನ್ನ ಗೂಢಚಾರರಿಂದ ತಿಳಿದುಕೊಂಡು ಮುಸ್ಲಿಂ ಸುಲ್ತಾನರಿಗಿಂತ ಮೊದಲೇ ತಾನೇ ಧಾಳಿ ನಡೆಸುವ ಕಾರ್ಯತಂತ್ರವನ್ನು ರೂಪಿಸಿದನು. ಈ ಯುದ್ಧವು ಕೃಷ್ಣಾನದಿಯ ಉಪನದಿಯಾದ 'ದೋಣಿ' ಎಂಬಲ್ಲಿ ನಡೆದಿರಬೇಕು. ಈ ಕದನದ ವಿವರಗಳು ಅಷ್ಟಾಗಿ ತಿಳಿದುಬರುವುದಿಲ್ಲ. ಈ ಯುದ್ಧದಲ್ಲಿ ಸುಲ್ತಾನರ ಸೈನ್ಯವು ಸೋತು ಓಡಿಹೋಯಿತು. ಅದರಲ್ಲಿ ಅಮೀರರು, ವಜೀರರು ತಮ್ಮ ಪ್ರದೇಶದ ಕಡೆಗೆ ಹಿಂದಕ್ಕೆ ಹೊರಟುಹೋದರು.[೧೦೮] ಒಟ್ಟಿನಲ್ಲಿ ಕೃಷ್ಣದೇವರಾಯನ ಸೈನ್ಯವು ವಿಜಯವನ್ನು ಪಡೆದು ಗುಲ್ಬರ್ಗಾದ ಕೋಟೆಯ ಮೇಲೆ ತನ್ನ ಧ್ವಜವನ್ನು ಹಾರಿಸಿತು. ಈ ವಿಜಯದಿಂದ ಮುಸ್ಲಿಂ ಸುಲ್ತಾನರ 'ಜಿಹಾದ್' ಯತ್ನವು ವಿಫುಲಗೊಂಡಿತು. ಈ ವಿಜಯದ ಸವಿನೆನಪಿಗಾಗಿ ದೇವಾಲಯಗಳಿಗೆಲ್ಲಾ ದಾನದತ್ತಿ ಧರ್ಮಗಳನ್ನು ನೀಡಿದನು. ರಾಯನು ಡಿಸೆಂಬರ್ ತಿಂಗಳಲ್ಲಿ ಕೃಷ್ಣಾನದಿಯ ದಂಡೆಯ ಮೇಲೆ ಯುದ್ಧದಲ್ಲಿ ತೊಡಗಿದ್ದಾಗ ಹತ್ತುಸಾವಿರ ವರಾಹಗಳನ್ನು ಚೋಳ ಮಂಡಳದ ಶೈವ ಮತ್ತು ವೈಷ್ಣವ ದೇವಾಲಯಗಳಿಗೋಸ್ಕರ ಕಳುಹಿಸಿಕೊಟ್ಟನೆಂದು ಕ್ರಿ.ಶ. ೧೫೧೭ ಡಿಸೆಂಬರ್ ೨೮ರ ಶಾಸನದಿಂದ ತಿಳಿದುಬರುತ್ತದೆ.[೧೦೯] ರಾಯನು ವಿಜಯವಾಡದ ಮಲ್ಲಿಕಾರ್ಜುನ ಮತ್ತು ಉಂದವಳ್ಳಿಯ ಅನಂತಶಯನ ದೇವಾಲಯಗಳನ್ನು ಮಕರ ಸಂಕ್ರಾಂತಿಯ ಕಾಲದಲ್ಲಿ ಸಂದರ್ಶಿಸಿದಾಗ ಈ ಆಜ್ಞೆಯನ್ನು ಮಾಡಿದುದು ಗೊತ್ತಾಗುತ್ತದೆ. ಈ ಹಿನ್ನೆಲೆಯಲ್ಲಿ ಕಂಡುಬರುವ ಹಾಗೇ 'ಜಿಹಾದ್' ಯುದ್ಧದಲ್ಲಿ ಅಪಾರ ಯಶಸ್ಸುಗಳಿಸಿ ವಿಜಯಿಯಾದನು.

ಮುಂದೆ ಕೇತವರಂ ದಂಡಯಾತ್ರೆಯನ್ನು ಕ್ರಿ.ಶ. ೧೫೧೮ರಲ್ಲಿ ರಾಯನು ಕೈಗೊಂಡನು. ಈ ಯುದ್ಧದ ಮಾಹಿತಿಯು ನ್ಯೂನಿಜ್‌ನ ವರದಿಯಿಂದ ಮಾತ್ರ ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ಪೂಪಪಾಟಿ ರಾಚರಾಜನ ಮನೆತನದವರು ಆಳುತ್ತಿದ್ದರು. ಇವರು ಬಹುಕಾಲದಿಂದಲೂ ವಿಜಯನಗರದ ಶತ್ರುಗಳಾಗಿದ್ದರು. ರಾಯನು ತನ್ನ ಸೈನಿಕಾಚರಣೆಯನ್ನು ಮುನ್ನಡೆಸಿ ಈ ಯುದ್ಧದಲ್ಲಿ ಬಳಸಿದ ಯುದ್ಧತಂತ್ರ ನೀತಿಯು ಗಮನಾರ್ಹವಾದದ್ದು. ಇಲ್ಲಿ ಕೇತವರಂ ಪಾಳೆಯಗಾರರನ್ನು ಸೋಲಿಸಿ ಆ ಪ್ರದೇಶಗಳನ್ನು ತನ್ನ ಸೇನಾಪತಿಗಳಿಗೆ ಹಂಚಿಕೆ ಮಾಡಿದನು.[೧೧೦] ಇಲ್ಲಿಂದ ಫಾಲ್ಗುಣ ಮಾಸದಲ್ಲಿ ಶ್ರೀಕಾಕುಳಂ ದೇವಾಲಯಕ್ಕೆ ಹೋಗಿ ದರ್ಶನ ಪಡೆದನು.[೧೧೧]

ರಾಯಚೂರು ದಂಡಯಾತ್ರೆಗೆ ತೊಡಗುವ ಮುಂಚೆ ಯುದ್ಧಸನ್ನದ್ಧವಾಗಿರುವುದು ಅವನ ತಂತ್ರಗಳನ್ನು ಪ್ರತಿಬಿಂಬಿಸುತ್ತದೆ. ರಾಯನ ಪೂರ್ವಯೋಜಿತ ರಾಯಚೂರು ದಂಡಯಾತ್ರೆಗೆ ತೊಡಗಲು ರಾಜತಾಂತ್ರಿಕ ನಿಟ್ಟನ್ನು ಅನುಸರಿಸಿದನೆಂದು ನ್ಯೂನಿಜ್‌ನು ತನ್ನ ವರದಿಯಲ್ಲಿ ತಿಳಿಸಿರುವನು. ರಾಯನಿಗೆ ನಿಜಾಮ್-ಉಲ್-ಮುಲ್ಕ್, ಅಮೀರ್ ಬಾರಿದ್ ಮತ್ತು ಇಮಾದ್-ಉಲ್-ಮುಲ್ಕ್ ಅವರನ್ನೆಲ್ಲಾ ತನ್ನ ಕಡೆಗೆ ಒಲಿಸಿಕೊಳ್ಳುವ ಹಾಗೂ ಕೊನೆಯಪಕ್ಷ ಅವರ ಸಹಾನುಭೂತಿಯಾದರೂ ಪಡೆಯುವ ಇಚ್ಛೆಯಿದ್ದಿತು. ಮುಸ್ಲಿಂ ಸುಲ್ತಾನರನ್ನೆಲ್ಲಾ ಒಗ್ಗಟ್ಟಿನಿಂದ ಬೇರ್ಪಡಿಸಿ, ಆದಿಲ್ ಷಹನೊಬ್ಬನನ್ನು ಒಂಟಿ ಮಾಡುವ ಯೋಜನೆಯಿಂದ ಸುಲ್ತಾನರ ಒಪ್ಪಿಗೆ ಪಡೆದುಕೊಂಡನು. ಇಲ್ಲಿ ಖುಲಿಖುತುಬ್‌ಷಹನಿಗೆ ಯಾವುದೇ ರೀತಿಯ ಸಹಾಯವನ್ನು ಯಾಚಿಸಲಿಲ್ಲ. ಷಹನು

ಆದಿಲ್‌ಷಹನಿಗೆ ಯಾವುದೇ ತರಹ ಸೈನ್ಯ ಸಹಾಯಮಾಡಲು ಸುಲಭದ ದಾರಿಗಳಿಲ್ಲದ ಕಾರಣ ಅವನನ್ನು ಓಲೈಸುವುದನ್ನು ಅರಸನು ಬಿಟ್ಟನು. ಈ ಮಹತ್ತರವಾದ ಪೂರ್ವ ಯೋಜನೆಯನ್ನು ದಂಡಯಾತ್ರೆಗೆ ಮೊದಲೇ ರಾಯನು ತನ್ನ ವಿಸ್ತಾರವಾದ ಚಕ್ರಾಧಿಪತ್ಯವನ್ನು ಭದ್ರಪಡಿಸಿಕೊಂಡಿದ್ದನ್ನು ಕಾಣಬಹುದು. ಇಲ್ಲಿನ ಯುದ್ಧದ ಸಮಯದಲ್ಲಿ ಸೈನಿಕ ಹಾಗೂ ರಾಜತಾಂತ್ರಿಕ ಪರಿಸ್ಥಿತಿಗಳು ರಾಯನಿಗೆ ತುಂಬಾ ಅನುಕೂಲವಾಗಿದ್ದವು. ರಾಯನು ತನ್ನ ದಂಡನ್ನು ರಾಯಚೂರಿನ ಆಗ್ನೇಯಕ್ಕಿರುವ ಮಲ್ಲಾಪುರದ ಬಳಿಗೆ ಹೊರಡಿಸಿದನು. ರಾಯನ ಸೈನ್ಯವು ತುಂಬಾ ಅಗಾಧವಾಗಿದ್ದಿತು. ಇವನ ಸೈನ್ಯದ ಬಗ್ಗೆ ನ್ಯೂನಿಜ್‌ನು ವಿವರವಾಗಿ ವರ್ಣಿಸಿದ್ದಾನೆ. "ಇವನ ಪಾಳೆಯದಲ್ಲಿ ಮಹಾಪ್ರಸಿದ್ಧ ದಂಡಾಧಿಪತಿಗಳು ಅದರ ನೇತೃತ್ವವನ್ನು ವಹಿಸಿದ್ದರು. ಇವರ ಪಾಳೆಯದ ಸಂಭ್ರಮ ಸಡಗರಗಳನ್ನು ನೋಡಿದವರು ಇದು ಯುದ್ಧದ ಪ್ರಸಂಗವೇನೂ ಇಲ್ಲವೆ ಕೇವಲ ಉತ್ಸವಕೋಸ್ಕರ ಹೂಡಿದ ಬೀಡೋ ಅಥವಾ ಇದೊಂದು ಶಾಶ್ವತವಾದ ದೊಡ್ಡ ಪಟ್ಟಣವೋ ಇರಬೇಕೆಂದು ಆಶ್ಚರ್ಯಪಡುವಂತಿತ್ತು" [೧೧೨] ಎಂದು ಹೇಳಿರುವನು. ರಾಯನು ಕ್ರಿ.ಶ. ೧೫೨೦ರಲ್ಲಿ ವಿಜಯನಗರವನ್ನು ಬಿಟ್ಟು ರಾಯಚೂರಿನ ದೋಆಬ್ ಕಡೆಯ ಮಲ್ಲಾಪುರವನ್ನು ಸೇರಿರಬೇಕು. ಇದಕ್ಕೆ ಪ್ರಬಲವಾದ ಕಾರಣಗಳು ಕಂಡುಬರುತ್ತವೆ. ಈ ಸ್ಥಳವು ಎಲ್ಲಾ ಕಡೆಗಳಿಂದಲೂ ಸೈನಿಕ ಚಲನವಲನಗಳ ನಿಯಂತ್ರಣಕ್ಕೆ ತೊಂದರೆಯಾಗಲಾರದಂತೆ ಮೂಲಸ್ಥಾನದಲ್ಲಿದ್ದಿತು. ಇಲ್ಲಿನ ಪಾಳೆಯವನ್ನು ಸುಮಾರು ಮೂರು ತಿಂಗಳವರೆಗೆ ಹಾಕಿದ್ದನು.

ಇತ್ತ ಆದಿಲ್‌ಷಹನು ಸಿದ್ಧತೆಗಳನ್ನು ಮಾಡಿಕೊಂಡು ಕೂಡಲೇ ಸೈನ್ಯವನ್ನು ಹೊರಡಿಸಿಕೊಂಡು ಕೃಷ್ಣಾನದಿಯ ಇನ್ನೊಂದು ದಂಡೆಯಲ್ಲಿ ಬೀಡುಬಿಟ್ಟಿದ್ದನು. ಇಸ್ಮೈಲ್ ಆದಿಲ್‌ಷಹನಿಗೆ ಹೆಚ್ಚು ದಿನಗಳು ಕಾಯುವ ತಾಳ್ಮೆ ಇಲ್ಲದೆ ಹೋಗಿ ತನ್ನ ಸಲಹೆಗಾರರ ಸಲಹೆಗಳನ್ನೆಲ್ಲಾ ಪರಿಶೀಲಿಸಿ ಆ ನಂತರವೇ ನದಿಯನ್ನು ದಾಟಿದನೆಂದು ತಿಳಿದುಬರುತ್ತದೆ.[೧೧೩] ಈ ಯುದ್ಧಕ್ಕಿಂತ ಮುಂಚಿತವಾಗಿ ಇಸ್ಮೈಲ್‌ನು ತನ್ನ ಸೈನ್ಯದ ಗಣತಿಯನ್ನು ಮಾಡಿಸಿದನು. ಇದರಲ್ಲಿ ಕಾಲಾಳುಗಳ ಸಂಖ್ಯೆ ಒಂದುಲಕ್ಷದ ಇಪ್ಪತ್ತುಸಾವಿರ, ಅಶ್ವದಳ ಹದಿನೆಂಟುಸಾವಿರ, ಒಂದುನೂರ ಐವತ್ತು ಆನೆಗಳೂ ಅವನ ಸೈನ್ಯದಲ್ಲಿದ್ದವು.[೧೧೪] ಇವುಗಳನ್ನೆಲ್ಲ ನದಿ ದಾಟಿಸಿಕೊಂಡು ಬಂದು ಶತ್ರುಸೈನ್ಯದ ಮೇಲೆ ಬೀಳುವುದು ಷಹನ ಉದ್ದೇಶವಾಗಿದ್ದತೆಂದು ಕಂಡುಬರುತ್ತದೆ. ಇದರಿಂದ ರಾಯಚೂರನ್ನು ಕಳೆದುಕೊಳ್ಳುವುದಿಲ್ಲ ಎಂದು ಷಹನು ನಂಬಿದ್ದನು.[೧೧೫] ಇತ್ತ ಶತ್ರು ಸೈನ್ಯವು ನದಿಯನ್ನು ದಾಟಿ ಬಂದುದರಿಂದ ರಾಯನು ತನ್ನ ಯುದ್ಧತಂತ್ರವನ್ನು ಬಳಸಿಕೊಂಡು ಮುಂದಾಗಿಯೇ ಸೇನೆಯನ್ನು ಏಳುಭಾಗಗಳಾಗಿ ವಿಂಗಡಿಸಿದನು. ತನ್ನ ಸೈನ್ಯವನ್ನು ಮಲ್ಲಾಪುರ (ಮಲಯಾಬಾದ್), ನೀರಮಾನವಿ ಎಂಬ ಊರುಗಳಲ್ಲಿ ನಿಯೋಜಿಸಿದನು. ತನ್ನ ಸೈನ್ಯವೂ ಯಾವ ರೀತಿಯಲ್ಲಿ ಆತುರದಿಂದ ಮುನ್ನುಗ್ಗಬಾರದೆಂಬ ಉದ್ದೇಶದಿಂದ ಶತ್ರುಸೈನ್ಯದ ವರ್ತನೆಯನ್ನು ತಾನು ಗಮನಿಸಿ ನಿಷ್ಕರ್ಷಿಸಿಕೊಳ್ಳುವವರೆಗೂ ನಮ್ಮ ಸೈನ್ಯವು ಯಾವ ರೀತಿಯಲ್ಲಿಯೂ ಕದಲಕೂಡದೆಂದು[೧೧೬] ತನ್ನ ಸೈನ್ಯಕ್ಕೆ ಆಜ್ಞೆ ಮಾಡಿದನು. ಜೋತಿಷ್ಯನು ರಾಯನ ಜನ್ಮನಕ್ಷತ್ರಾದಿಗಳ ಪ್ರಕಾರ ಪಂಚಾಂಗ ಶುದ್ಧಿಯನ್ನು ಗಮನಿಸಿ ಶುಕ್ರವಾರಕ್ಕಿಂತ ಶನಿವಾರವು ಶುಭಪ್ರದವೆಂದು[೧೧೭] ಪರಿಗಣಿಸಿ ತಿಳಿಸಿದ್ದರಿಂದ[೧೧೮] ಅಂತಿಮವಾಗಿ ಮೇ ತಿಂಗಳ ೧೯ನೆಯ ತಾರೀಖು ಶನಿವಾರ ಆಕ್ರಮಣವು ಪ್ರಾರಂಭವಾಯಿತು. ಈ ಯುದ್ಧ ಭೀಕರವಾಗಿ ಗೊಬ್ಬೂರಿನ ಬಳಿ

ನಡೆಯಿತು. ಎರಡೂ ಕಡೆಯ ಸೈನ್ಯವು ಅಪಾರ ಸಾವು-ನೋವುಗಳನ್ನು ಅನುಭವಿಸಿತು. ಮೊದಲಿಗೆ ರಾಯನ ಸೈನ್ಯವು ಹಿಂದಕ್ಕೆ ಸರಿಯಿತು. ಆಗ ಇದರಿಂದ ಚೇತರಿಸಿಕೊಳ್ಳುವಲ್ಲಿ ಅರಸನು ಆಡಿದ ಮಾತುಗಳು ಪ್ರಬಲಶಕ್ತಿಯಾಗಿ ಕಂಡುಬಂದವು. ರಾಯನ ಪುನರಾಕ್ರಮಣವನ್ನು ಶತ್ರುಗಳು ನಿರೀಕ್ಷಿಸಿರಲಿಲ್ಲ. ಈ ಅನಿರೀಕ್ಷಿತ ಆಕ್ರಮಣವನ್ನು ತಡೆಯಲಾರದೆ ಹೋದರು. ಇದರಿಂದ ಮುಸ್ಲಿಂ ಸೈನಿಕರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ನದಿಯಲ್ಲಿ ಬೀಳ ತೊಡಗಿದರು.[೧೯] ಇಲ್ಲಿಗೆ ವಿಜಯನಗರದ ಸೇನೆಯು ಷಹನ ಸೈನ್ಯವನ್ನು ಸಂಪೂರ್ಣವಾಗಿ ಸೋಲಿಸಿ ಮುಂದಿನ ರಾಯಚೂರು ಕೋಟೆಯ ಕಡೆಗೆ ನಡೆಯಿತು. ಇದೊಂದು ಚಾರಿತ್ರಾತ್ಮಕ ಯುದ್ಧವಾಗಿ ಭಾರತದಲ್ಲಿ ಪ್ರಸಿದ್ಧವಾಗಿದೆ.

ಮುಂದೆ ರಾಯಚೂರು ಧಾಳಿಯು ಕ್ರಿ.ಶ. ೧೫೨೦ನೇ ಜೂನ್ ತಿಂಗಳಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ಈ ಕಾರ್ಯಚರಣೆಯು ಕೆಲವು ದಿನಗಳಿಗೆ ಮಾತ್ರ ಸೀಮಿತವಾಗಿದ್ದಿತು. ಈ ಯುದ್ಧದಲ್ಲಿ ಪೋರ್ಚುಗೀಸರ ನಿಯೋಗಿಯಾದ ಫಿಗ್ಯುರೇಡೋನ ತುಂಬು ಸಹಕಾರ ಹಾಗೂ ಅವನ ಬಂದೂಕಧಾರಿಗಳ ಸೇವೆಯು ಅಮೋಘವಾದದ್ದು. ಇದರಿಂದ ರಾಯಚೂರು ಕೋಟೆಯು ಕೊನೆಯಲ್ಲಿ ರಾಯನ ವಶವಾಯಿತು. ಇದನ್ನು ಗೆದ್ದು ರಾಯಚೂರು ದೋಅಬ್‌ನ್ನು ಆಕ್ರಮಿಸಿಕೊಂಡಿದ್ದು ರಾಯನ ಉಜ್ವಲ ಸಾಹಸಗಳಿಗೆ ಕಳಶಪ್ರಾಯವಾದುದಾಗಿದೆ. ಇಲ್ಲಿಂದ ವಿಜಯನಗರಕ್ಕೆ ಬಂದು ಆ ವರ್ಷದ ಮಹಾನವಮಿ ಉತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು.

ರಾಯಚೂರು ದಂಡಯಾತ್ರೆಯ ನಂತರ ದೋಅಬ್ ಪ್ರದೇಶವನ್ನು ಹಿಂದಕ್ಕೆ ಪಡೆಯುವ ಸಲುವಾಗಿ ಆದಿಲ್‌ಷಹನು ರೂಪಿಸಿದ ರಾಜತಾಂತ್ರಿಕ ಮಾರ್ಗಗಳೆಲ್ಲ ವಿಫಲವಾದವು. ಈ ಕೆಲಸದಲ್ಲಿ ಅಸದ್‌ಖಾನನ ಕುತಂತ್ರ ನೀತಿಯಿಂದ ಮತ್ತೊಮ್ಮೆ ರಾಯನು ಬಿಜಾಪುರದ ಮೇಲೆ ದಂಡಯಾತ್ರೆಯನ್ನು ನಡೆಸಬೇಕಾಗಿ ಬಂದಿತು. ಬಿಜಾಪುರದ ಮುತ್ತಿಗೆಯು ರಾಯಚೂರು ಆಕ್ರಮಣದ ಮುಂದುವರೆದ ಭಾಗವಾಗಿ ಪರಿಣಮಿಸಿತು. ಇದಾದ ನಂತರ ಅರಸನು ಗುಲ್ಬರ್ಗಾದ ಮೇಲೆ ಧಾಳಿನಡೆಸಿ ಅಲ್ಲಿನ ಕೋಟೆಯನ್ನು ನೆಲಸಮ ಮಾಡಿ ಸುತ್ತ ಮುತ್ತಣ ಪ್ರದೇಶಗಳನ್ನು ಧ್ವಂಸ ಮಾಡಿದನು.[೨೦] ಗುಲ್ಬರ್ಗಾದಲ್ಲಿ ಸೆರೆಯಲ್ಲಿದ್ದ ಎರಡನೆ ಅಲ್ಲಾವುದ್ದೀನನನ್ನು ಸಿಂಹಾಸನದಲ್ಲಿ ಕೂಡಿಸಿದನು. ಇಲ್ಲಿಂದ ಹಿಂತಿರುಗಿ ವಿಜಯನಗರಕ್ಕೆ ಆಗಮಿಸಿದನು.

ರಾಯನು ಗುಲ್ಬರ್ಗಾವನ್ನು ಜಯಿಸಿದ ಮೇಲೆ ಆಸ್ಥಾನ ಕವಿಯಾದ ಮುಕ್ಕುತಿಮ್ಮಯನನ್ನು ಗಯೆಗೆ ಕಳುಹಿಸಿ ತನ್ನ ಪರವಾಗಿ ಪಿತೃಗಳಿಗೆ ಗಯಾಶ್ರಾದ್ಧವನ್ನು ನೆರವೇರಿಸಲು ಅಪ್ಪಣೆ ನೀಡಿದ್ದನು. ಅದರಂತೆಯೇ ಶ್ರಾದ್ಧವನ್ನು ಮುಕ್ಕುತಿಮ್ಮಯ್ಯನು ಗಯೆಗೆ ಹೋಗಿ ನೆರವೇರಿಸಿದನು. ಈ ಕಾರ್ಯದ ಬಗ್ಗೆ ಗದಾಧರ ಸ್ವಾಮಿ ದೇವಾಲಯದಲ್ಲಿ ರಾಯನ ಶಾಸನವನ್ನು ಹಾಕಿಸಿದುದಲ್ಲದೆ ವಿಷ್ಣುಪಾದ ದೇವಸ್ಥಾನದ ಪಕ್ಕದಲ್ಲಿ ಕ್ರಿ.ಶ. ೧೫೨೨ರಲ್ಲಿ ಕೃಷ್ಣರಾಯ ಮತ್ತು ಆತನ ಪಟ್ಟಮಹಿಷಿ ತಿರುಮಲದೇವಿಯ ಹೆಸರಿನಲ್ಲಿ ಒಂದು ಕಲ್ಲಿನ ತೋರಣವನ್ನು ಕಟ್ಟಿಸಿದನು.

ಈ ಎಲ್ಲಾ ಯುದ್ಧಗಳ ನಂತರ ಕೃಷ್ಣದೇವರಾಯನ ಜೀವನ ಕಾಲವು ಶಾಂತಿಯುತವಾಗಿದ್ದಿತು. ಅವನ ಆರೋಗ್ಯವು ಕ್ಷೀಣಿಸುತ್ತ ಇರಲಾಗಿ ದೇಹಶಕ್ತಿಯು ಕುಗ್ಗುತ್ತಿದ್ದುದರಿಂದ ತನ್ನ ಮಗನ ಮೇಲಿನ ಪುತ್ರ ವಾತ್ಸಲ್ಯದಿಂದ ಸಹಜವಾಗಿಯೇ ತನ್ನ ಜೀವಿತದ ಕಾಲದಲ್ಲಿಯೇ ತನ್ನ ಮಗ ತಿರುಮಲನನ್ನು ಸಿಂಹಾಸನಕ್ಕೆ ಕೂರಿಸಬೇಕೆಂಬ

ಮಹಾದಾಸೆಯನ್ನು ಇಟ್ಟುಕೊಂಡಿದ್ದನು. ರಾಜಕುಮಾರ ತಿರುಮಲದೇವನು ಕ್ರಿ.ಶ. ೧೫೧೮ರಲ್ಲಿ ಹುಟ್ಟಿದ್ದನು.[೧೫೧] ಅವನ ಸಿಂಹಾಸನಾರೋಹಣವು ಕ್ರಿ.ಶ. ೧೫೨೪ರಲ್ಲಿ ನಡೆಯಿತೆಂಬುದಕ್ಕೆ ಆ ವರ್ಷ ಅವನ ಹೆಸರಿನಲ್ಲಿ ಬಿಟ್ಟ ಶಾಸನಗಳು ಕಂಡುಬರುತ್ತವೆ.[೧೫೨] ಆದರೆ ದುರದೃಷ್ಟವಶಾತ್ ಅದೇ ವರ್ಷ ಅಂತಃಪುರದಲ್ಲಿ ನಡೆದ ಒಳಸಂಚುಗಳಿಂದ ತಿರುಮಲನು ಮರಣ ಹೊಂದಿದನು. ತನ್ನ ಮಗನ ಆಕಾಲ ಮರಣದಿಂದ ರಾಯನು ದುಃಖತಪ್ತನಾಗಿ ಆರೋಗ್ಯ, ಶಕ್ತಿಸಾಮರ್ಥ್ಯಗಳೂ ಕ್ಷೀಣಿಸತೊಡಗಿದವು. ತನ್ನ ಆಡಳಿತದ ಕೊನೆಯಲ್ಲಿ ಅರಸನು ಬೆಳಗಾಂ ದಂಡಯಾತ್ರೆಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದುದನ್ನು ಹಲವು ಶಾಸನಗಳಿಂದ ತಿಳಿದುಬರುತ್ತದೆ.[೧೫೩] ಈ ದಂಡಯಾತ್ರೆಗೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವಾಗಲೇ ರಾಯನು ತೀವ್ರವಾದ ಉದರ ಶೂಲೆಗೆ ಗುರಿಯಾಗಿ ನಿಧನನಾದನು. ರಾಯನು ಕ್ರಿ.ಶ. ೧೫೨೯ರ ಅಕ್ಟೋಬರ್ ೨೭ ರಿಂದ ಡಿಸೆಂಬರ್ ೨೪ರ ನಡುವಿನ ಅವಧಿಯಲ್ಲಿ ನಿಧನ ಹೊಂದಿದನೆಂದು ಕಂಡುಬರುತ್ತದೆ.[೧೫೪]

ರಾಯನು ಅವಸಾನ ಕಾಲದಲ್ಲಿ ಗುರುಗಳಾದ ವ್ಯಾಸತೀರ್ಥರನ್ನು ವಂದಿಸಿ ಇಹಲೋಕ ತ್ಯಜಿಸಿದನು. ದೇವಕೀನಂದನ ಶ್ರೀಕೃಷ್ಣನು ಅವತಾರ ಪರಿಸಮಾಪ್ತಿ ಕಾಲದಲ್ಲಿ ಮರ್ತ್ಯಲೋಕವನ್ನು ತ್ಯಜಿಸಿಹೋದಂತೆ ಭಾಸವಾಯಿತು ಎಂದು ಕವಿ ಸೋಮನಾಥನು 'ವ್ಯಾಸಯೋಗಿಚರಿತ'ದಲ್ಲಿ ವರ್ಣಿಸಿರುವನು.[೧೫೫]

ಕೃಷ್ಣದೇವರಾಯನು ಧರ್ಮಶಾಸ್ತ್ರ, ನೀತಿಸಾರದಲ್ಲಿ ನಿರೂಪಿತವಾದ ರಾಜನೀತಿ ಸೂತ್ರಗಳಿಗೆ ಅನುಗುಣವಾಗಿ ರಾಜ್ಯಭಾರಕ್ರಮವನ್ನು ರೂಪಿಸಿಕೊಂಡಿದ್ದನು. ರಾಯನು ಪ್ರಜಾಧರ್ಮದ, ಸಾಮಾಜಿಕ ದೃಢತೆಯ, ಏಕತಾ ತತ್ವದ ಸಾಕಾರಮೂರ್ತಿಯಾಗಿದ್ದನು. ರಾಜನೀತಿಯ ಮೂಲ ಪ್ರಸ್ಥಾನಗಳಾದ ಮಂತ್ರಶಕ್ತಿ, ಪ್ರಭುಶಕ್ತಿ, ಉತ್ಸಾಹಶಕ್ತಿ ಎಂಬ ಶಕ್ತಿತ್ರಯದ ಮಹತ್ವವನ್ನು ಅರಿತವನಾಗಿದ್ದನು. ರಾಯನ ಆಧ್ಯಾತ್ಮಿಕ ಗುರುಗಳಾದ ಶ್ರೀ ವ್ಯಾಸರಾಯರು ಅರಸನಿಗೆ ಯಾವಾಗಲೂ ಬೆನ್ನೆಲುಬಾಗಿ ನಿಂತಿರುತ್ತಿದ್ದರು. ಇವನು ಸದಾ ಯುದ್ಧ ನಿರತನಾಗಿದ್ದರೂ ಕಲಾಭಿವೃದ್ಧಿಯನ್ನು ಎಂದು ಕಡೆಗಣಿಸಿರಲಿಲ್ಲ. ರಾಜಧಾನಿಯಲ್ಲಿ ಹೊಸ ಹೊಸ ದೇವಾಲಯಗಳನ್ನು ನಿರ್ಮಿಸಿದುದಲ್ಲದೆ, ದಕ್ಷಿಣ ಭಾರತದ ಪ್ರಸಿದ್ಧ ದೇವಾಲಯಗಳನ್ನು ಸಂದರ್ಶಿಸಿ ಹೋದಕಡೆಯಲ್ಲೆಲ್ಲ ದಾನದತ್ತಿ ಧರ್ಮಗಳನ್ನು ಮಾಡಿದನು. ಸಿವೆಲ್ ಎಂಬ ಪಾಶ್ಚಾತ್ಯನು ರಾಯನ ಮಹಿಮೆಯನ್ನು ಹೀಗೆಂದು ವರ್ಣಿಸಿದ್ದಾನೆ. "ಕೃಷ್ಣದೇವರಾಯನ ಧಾರ್ಮಿಕ ಶ್ರದ್ಧೆಯಾಗಲಿ ಔದಾರ್ಯ ಗುಣವಾಗಲಿ ಕಡಿಮೆಯೇನೂ ಅಲ್ಲ. ಸ್ವತಃ ವೈಷ್ಣವ ಪ್ರವಣನಾದರೂ ಹಿಂದೂಧರ್ಮದ ಸಮಸ್ತ ಶಾಖೆಗಳನ್ನು ಅವನು ಒಂದೇ ಬಗೆಯಾಗಿ ಗೌರವಿಸುತ್ತಿದ್ದನು. ಪರಾಜಿತ ವೈರಿಯ ಬಗೆಗೆ ದಯೆ, ಸ್ವಾಧೀನ ನಗರಗಳ ನಿವಾಸಿಗಳ ಬಗೆಗೆ ಕರುಣೆ, ಅನುಕಂಪ, ಪ್ರಜಾವರ್ಗದಲ್ಲೂ ಸಾಮಂತವರ್ಗದಲ್ಲೂ ಏಕರೀತಿಯಾಗಿ ಆದರಾಭಿಮಾನಗಳನ್ನುಕ್ಕಿಸಿದ ಅವನ ಯುದ್ಧ ಶೌರ್ಯ, ವಿದೇಶಿಯ ರಾಯಭಾರಿಗಳ ವಿಚಾರದಲ್ಲಿ ತೋರ್ಪಡಿಸಿದ ಆದರ ಸೌಹಾರ್ದಗಳು, ಅವನ ಭವ್ಯ ಗಂಭೀರಾಕೃತಿ, ಉದಾತ್ತ ಜೀವನ ಪ್ರತೀಕವಾದ ಪ್ರಸನ್ನಚಿತ್ತ, ಮಧುರ ಸಲ್ಲಾಪಗಳು, ಅವನ ಧರ್ಮಶಕ್ತಿ, ಸಾಹಿತ್ಯಪ್ರೀತಿ, ಪ್ರಜಾಕೋಟಿಯ ಹಿತಚಿಂತನೆ, ಎಲ್ಲದಕ್ಕೂ ಮಿಗಿಲಾಗಿ, ದೇವಾಲಯಗಳಿಗೂ ಬ್ರಾಹ್ಮಣರಿಗೂ ಅವನು ನೀಡಿದ ಅಪಾರ ಧನದಾನ - ಈ ಲೋಕೋತ್ತರ ಗುಣಗಳಿಂದ ಕೃಷ್ಣದೇವರಾಯನು ದಾಕ್ಷಿಣಾತ್ಯ ಸಾರ್ವಭೌಮರಲ್ಲಿ ಅಗ್ರಗಣ್ಯನಾಗಿದ್ದಾನೆ" ಎಂದು ಹೇಳಿರುವುದು ನೈಜನೀಯವೇ ಸರಿ.

*

ಟಿಪ್ಪಣಿಗಳು

೧. ಎಪಿಗ್ರಾಫಿಯ ಇಂಡಿಕಾ, XXXII, ಪು. ೨೪೧
೨. ಶ್ರೀ ಮಾಧವ ವಿದ್ಯಾರಣ್ಯಸ್ವಾಮಿ ಚರಿತ್ರೆ, ಪು. ೧೩
೩. 'ದಿ ಹೊಯ್ಸಳ ಡೈನಾಸ್ಟಿ', ಪು. ೩೩೪, ೩೫
೪. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೧೩೮
೫. ಕರ್ನಾಟಕ ಚರಿತ್ರೆ, ಸಂ. ೩, ಪು. ೮
೬. ವಿಜಯನಗರ ಇನ್ಸ್‌ಕ್ರಿಪ್ಷನ್ಸ್ , ಸಂ. ೨, ಪೀಠಿಕೆ, ಪು. ೨೭
೭. ಜರ್ನಲ್ ಬಾಂಬೆ ಶಾಖೆ, ಆರ್.ಎ.ಎಸ್. XII, ೩೩೮, ೪೦
೮. ಶೃಂಗೇರಿ ಪುರದತ್ತಿ ಶಾಸನ, ಎ.ಕ. VI, ಶೃಂಗೇರಿ, ಶೃಂಗೇರಿ RI, ಎ.ಕ.ಸಂ. ೬, ಶೃಂಗೇರಿ ೧
೯. ಧಾರವಾಡ ತಾಲೂಕಿನ ಶಾಸನಗಳು, ಪು. XIV
೧೦. ಕರ್ನಾಟಕದ ಕಲೆಗಳು, ಸಂಪು. ೪, ಪು. ೧೧೩
೧೧. ಎ.ಇ. VI, ಸಂಖ್ಯೆ ೩೩, ಕ್ರಿ.ಶ. ೧೩೭೧
೧೨. ಎ.ಆರ್.ಎಸ್.ಐ.ಇ. ೧೯೧೬, ಸಂಖ್ಯೆ ೬೪
೧೩. ಎ.ಆರ್.ಎಸ್.ಐ.ಇ. ೧೯೧೯, ಸಂಖ್ಯೆ ೨೬೭
೧೪. ಎ.ಕ. VOl-ix, ಮಾಗಡಿ, ಸಂಖ್ಯೆ ೧೮, ಕಲ್ಯ
೧೫. ಕವಿಶಾಸಂ ೩, ಹಂಪಿ, ಸಂಖ್ಯೆ ೧೪೫
೧೬. ಕವಿಶಾಸಂ ೩, ಹಂಪಿ, ಸಂಖ್ಯೆ ೧೪೫
೧೭. ಕವಿಶಾಸಂ ೩, ಹಂಪಿ, ಸಂಖ್ಯೆ ೩೫೦
೧೮. ಕವಿಶಾಸಂ ೩, ಹಂಪಿ, ಸಂಖ್ಯೆ ೩೬೫
೧೯. ಎಂ.ಎ.ಆರ್. ೧೯೨೩, ಪು. ೯೧: ಐ.ಎ. ೫೭, ಪು. ೮೦
೨೦. ಎಸ್ಐಐ, ಭಾಗ ೧, ಶಾ, ಸಂ. ೧೫೩
೨೧. ಐಎಸ್ಐಐ, IX, ಭಾಗ II, ಶಾ, ಸಂ. ೪೪೩
೨೨. ಎ.ಕ. X- KL- ೧೦೪
೨೩. ಕವಿಶಾಸಂ ೩, ಹಂಪಿ, ಸಂ. ೩೪, ಕ್ರಿ.ಶ. ೧೫೧೦
೨೪. ಕೃಷ್ಣದೇವರಾಯ, ಪು. ೭
೨೫. ತುಳುವ ವಂಶದ ಮೂಲಸ್ಥಾನ, ಪು. ೭೦೮-೧೧
೨೬. E.C. ಸಂ. ೭, ಶಿವಮೊಗ್ಗ ೧ನೇ ಶಾಸನ
ತದ್ವಂಶೇ ದೇವಕಿ ಜಾನಿರ್ದಿ ದೀಪೇ ತಿಂಮಭೂಪತಿಃ
ಯಶಸ್ವೀ ತುಳುವೇಂದ್ರೇಷು ಯದೋಃ ಕೃಷ್ಣ ಇವಾನ್ವಯೆ
ಮತ್ತು 'ಆಮುಕ್ತಮಾಲ್ಯದ' ಮೊದಲನೆಯ ಅಧ್ಯಾಯ ೨೩ನೆಯ ಪದ್ಯದಲ್ಲಿ ತುಳುವರೆಂದು ಕರೆದುಕೊಂಡಿರುವರು.
೨೭. 'ಶ್ರೀಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ, ಪು. ೭೦, ೭೧
೨೮. ಸ್ಟಡೀಸ್ ಆನ್ ಕೃಷ್ಣದೇವರಾಯ ಆಫ್ ವಿಜಯನಗರ, ಪು. ೩೧
ಆರಿಸೌಇಂಎ, ೧೯೧೨, ಸಂ. ೩೫೫, ೩೯೫
೨೯. 'ದಿ ಸಮಾ ಓರಿಯಂಟಲ್', ಪು. ೬೦, ೬೫
೩೦. ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೨೦೧
Krishnadevaraya was a man of over twenty years at the time of his accession
೩೧. ಮಾರೀಚಿಪರಿಣಯಂ, ಪೀಠಿಕೆ, ಪು. XXVIII, ಅವತಾರಿಕ, ಪದ್ಯ ೬೬
೩೨. F E, P. ೩೪೦
೩೩. F E, ಪು. ೨೭೦
೩೪. ಶ್ರೀಕೃಷ್ಣದೇವರಾಯ, ಪು. ೧೬
೩೫. ಎ.ಕ., ಸಂ. ೩, (ಪ) ಮುನ್ನುಡಿ, ಪು. ೧೧೬, ೧೭
೩೬. ಕರ್ನಾಟಕ ಪರಂಪರೆ ಭಾಗ ೨, ಪು. ೩೨

೩೭. Vijayanagara Progress of Research: ೧೯೮೮ - ೯೧, ಸಂ, ೨, ಎ.ಸ್ಕ, ಪು. ೨೦
ಕವಿಶಾ ಸಂ, ೩, ಸಿಂಗಿನಾಯಕನಹಳ್ಳಿ, ಸಂಖ್ಯೆ ೩೯೭

೩೮. ಕೃಷ್ಣದೇವರಾಯನ ಜೀವನ ಮತ್ತು ಸಾಧನೆಗಳು, ಪು. ೨೦
SII, I, VOl-IX, Pt, II, No. 491
SII, VOl-IV, No. 277
SII, VOl-IV, No. 253, V.R.I, Bellary 349 and 350, MAR, 1920
MAR, 1930, No. 38

೩೯. ಮರೆತುಹೋದ ಮಹಾಸಾಮ್ರಾಜ್ಯ, ಪು. ೧೩೨

೪೦. ಶ್ರೀಕೃಷ್ಣದೇವರಾಯನ ದಿನಚರಿ, ಪು. ೫

೪೧. ಶ್ರೀಕೃಷ್ಣದೇವರಾಯನ ದಿನಚರಿ, ಪು. ೧೦

೪೨. ಶ್ರೀಕೃಷ್ಣದೇವರಾಯನ ದಿನಚರಿ, ಪು. ೧೬-೧೭

೪೩. ಶ್ರೀಕೃಷ್ಣದೇವರಾಯನ ದಿನಚರಿ, ಪು. ೧೯

೪೪. ರಾಯವಾಚಕಮು, ಪು. ೨
ದಿನಚರಿ, ಪು. ೧ ಹಾಗೂ ೧೨

೪೫. ಆಮುಕ್ತಮಾಲ್ಯದ, ಆಶ್ವಾಸ ೧, ಪದ್ಯ ೧೩

೪೬. F.S.V.H, Part II, P. 172, No. 116 (a). ಭಾರತ ೧೯೨೫, ಪು. ೬೫
'ಬ್ಯಾಲ್ಯೈಲೌಸಕಲಕಲಾಪಯುಕ್ತ'

೪೭. ಮಾರೀಚಿಪರಿಣಯಂ, ಪೀಠಿಕೆ, ಪು. LIX, ಅವತಾರಿಕ ಪದ್ಯ ೩೭, ಪು. ೯೪

೪೮. E.I. VOl-XIV, No. 17

೪೯. ಶ್ರೀಕೃಷ್ಣದೇವರಾಯನ ದಿನಚರಿ, ಪು. ೫

೫೦. Memories of Babar, P. 199

೫೧. ದತ್ತಿ ಉಪನ್ಯಾಸಗಳು, ೧೯೮೬, ಪು. ೧

೫೨. The Sources of Vijayanagara History, p.154-55

೫೩. ಕವಿಶಾಸಂ ೩, ಹಂಪಿ, ಸಂಖ್ಯೆ ೩೨೧, ಕ್ರಿ.ಶ. ೧೫೧೦
ಕವಿಶಾಸಂ ೩, ಹಂಪೆ, ಸಂಖ್ಯೆ ೩೨೦

೫೪. EC, ೩, ನಂಗೂ, ಸಂಖ್ಯೆ ೧೯೫, ರಂಗಾಪುರ, ಕ್ರಿ.ಶ. ೧೫೧೩

೫೫. EC, ೩, ನಂಗೂ, ಸಂಖ್ಯೆ ೨೪೮, ಕಾಹಳ್ಳಿ, ಕ್ರಿ.ಶ. ೧೫೧೪

೫೬. ಕವಿಶಾಸಂ, ೩, ಹಂಪಿ, ಸಂಖ್ಯೆ ೮೧, ಕ್ರಿ.ಶ. ೧೫೨೯

೫೭. SII, XVI, No. 53, A.D. 1515

೫೮. SII, IX, II, No. 497

೫೯. ಕವಿಶಾಸಂ ೨, ಕೊಪ್ಪಳ, ಸಂಖ್ಯೆ ೧೩೮, ಕಿಡಿದಾಳು, ಕ್ರಿ.ಶ. ೧೫೧೪

೬೦. F.S.V.H. Part II, P. 172, No. 116, (a) ಭಾರತ ೧೯೨೫, ಪು. ೬೫
'ಬ್ಯಾಲ್ಯೊಲೌಸಕಲ ಕಲಾಪಯುಕ್ತ'

೬೧. SII, IV, No. 259, ಪು. ೧೫೪, ೫೫
SII, IX, Pt, II, No. 489, ಪು. ೫೦೩

೬೨. EC, ೩, ಗುಂಪೇ, ಸಂಖ್ಯೆ ೧, ಕ್ರಿ.ಶ. ೧೫೧೭

೬೩. SII, XVI, No. 63, ಚೆಂಜೆರ್ಲ, ಕ್ರಿ.ಶ. ೧೫೧೮

೬೪. ಕವಿಶಾಸಂ ೨, ಕೊಪ್ಪಳ, ಸಂಖ್ಯೆ ೧೩೯, ಗಿಣಿಗೇರಿ, ಕ್ರಿ.ಶ. ೧೫೨೦

೬೫. F .E. P, ೩೦೧

೬೬. ಕವಿಶಾಸಂ ೩, ಹಂಪಿ, ಸಂಖ್ಯೆ ೩೪, ಕ್ರಿ.ಶ. ೧೫೦೯-೧೦

೬೭. ಶ್ರೀಕೃಷ್ಣದೇವರಾಯನ ದಿನಚರಿ, ಪು. ೬, ೭, ೮

೬೮. ಕೆಳದಿಯ ನೃಪವಿಜಯ: ಆಶ್ವಾಸ ೧, ಪದ್ಯಗಳು ೯೫-೯೯

೬೯. H.I.S.I. P. 237

೭೦. ಶ್ರೀಕೃಷ್ಣದೇವರಾಯನ ದಿನಚರಿ, ಪು. ೩೮, ಪಂಕ್ತಿ ೨೮ ೨೩೭ ೩೦

೭೧. ಕರ್ನಾಟಕ ಇತಿಹಾಸ ದರ್ಶನ, ಪು. ೩೭೯

೭೨. ದಿನಚರಿ, ಪು. ೨೯, ಪಂಕ್ತಿ ೪, ೮, ಮತ್ತು ಪು. ೩೦, ಪಂಕ್ತಿ ೨-೮

೭೩. ವಾಚಕ: ಪು. ೫೮, ಪಂಕ್ತಿ ೧೬-೨೨

೭೪. ದಿನಚರಿ, ಪು. ೪೧, ಪಂಕ್ತಿ ೯-೧೧, ರಾಯವಾಚಕಮು, ಪು. ೬೧, ಪಂಕ್ತಿ ೧೪-೧೮

೭೫. N.D.I. VOL II, K.R. ೨೭ and ೩೦

೭೬. Report on the Inscriptions of the T.T.D. by. S. Subramanya Sastri, Madras, ೧೯೩೦, P. ೧೭೨

೭೭. ಕೃಷ್ಣರಾಯವಿಜಯಮು, ಆಶ್ವಾಸ ೩, ಪದ್ಯಗಳು ೫೩-೬೪

೭೮. T.D.E.R, P. 157-58, Subramanya Sastri. S

೭೯. Inscriptions of Krishnadevaraya Time, vol iii, No. 67, 72, 75

೮೦. SII, VOl-IV, No. 254-255

೮೧. E.I, VOl-XII, P. 156, 'ಒಮ್ಮೆ ಪುರುಷೋತ್ತಮ ಗಜಪತಿಯು ವಿಜಯನಗರದ ಮೇಲೆ ದಾಳಿ ಮಾಡಿದಾಗ ಅಲ್ಲಿಂದ ರತ್ನಮಂಟಪ ಸಹಿತ ಸಾಕ್ಷಿಗೋಪಾಲ ವಿಗ್ರಹವನ್ನು ಅಪಹರಿಸಿಕೊಂಡು ಹೋಗಿ ಆ ಮಂಟಪವನ್ನು ಪುರಿಯ ಜಗನ್ನಾಥ ದೇವಾಲಯಕ್ಕೂ, ವಿಗ್ರಹವನ್ನು ಕಟಕದಲ್ಲಿಯ ದೇವಾಲಯಕ್ಕೂ ಕೊಟ್ಟಿದ್ದನಂತೆ ಆದುದರಿಂದ ಈ ಸೇಡಿನ ಮನೋಭಾವನೆಯು ಅಂದು ಸರ್ವೇಸಾಮಾನ್ಯವಾಗಿತ್ತು.'

೮೨. Sewell, FE. P. 294

೮೩. A.R.S.I.E. 1903, Para 16, SII, IX, ii, No. 500, PP. 514-15

೮೪. F E, PP. 303-4

೮೫. SII, IX, ii, No. 500, PP. 514-15

೮೬. TTDI, VOl-iii, No. 80

೮೭. ಜಿ.ಎಸ್. ದೀಕ್ಷಿತ್ ಮತ್ತು ಇತರರು: ಕೃಷ್ಣದೇವರಾಯನ ಜೀವನ ಮತ್ತು ಸಾಧನೆಗಳು, ಪು. ೩೯

೮೮. SII, VOl-IV, No. 981, P. 320

೮೯. ಜಿ.ಎಸ್. ದೀಕ್ಷಿತ್ ಮತ್ತು ಇತರರು: ಕೃಷ್ಣದೇವರಾಯನ ಜೀವನ ಮತ್ತು ಸಾಧನೆಗಳು, ಪು. ೩೯

೯೦. ಆಮುಕ್ತಮಾಲ್ಯದ ಪ್ರಥಮಾಶ್ವಾಸ, ಅವತಾರಿಕ ಪದ್ಯ ೩೬

೯೧. ಷೇಕ್ ಅಲಿ (ಸಂ), ಕರ್ನಾಟಕ ಚರಿತ್ರೆ, ಸಂ. ೩, ಪು. ೪೧

೯೨. ದಿನಚರಿ, ಪು. ೪೩, ಪಂಕ್ತಿ ೧೯-೨೨

೯೩. ಮನುಚರಿತ್ರೆ, ಪ್ರಥಮಾಶ್ವಾಸ ಪದ್ಯ ೩೭

೯೪. Bharghavi Shivaih : Krishnadevaraya his Life and Achivements (Ph D Thiesus) ೧೯೭೨, K.U.D. PP ೧೯೬, ೯೭

೯೫. ದಿನಚರಿ, ಪು. ೫೨, ಪಂಕ್ತಿ ೧೩, ೨೪

೯೬. TDER. P. 179

೯೭. ಉದ್ಧೃತ. ಜಿ.ಎಸ್. ದೀಕ್ಷಿತ್, ಕೃದೇ ಮತ್ತು ಸಾ - ಪು. ೪೨.

೯೮. E.I. VOl-XXV, No. 32

೯೯. H.Heras: Early Relations between Vijayanagara and Portugal Q.J.M.S. VOl, XVI, P. 73, Vide also danvers, P. 300

೧೦೦. N.D.I. Part II, Kandukur, No. 27, P. 536

೧೦೧. ಕವಿಶಾಸಂ ೫, ಭಾಗ ೧, ಸಂಖ್ಯೆ ೨೬೬, ೬೭, ೬೮

೧೦೨. ಕವಿಶಾಸಂ ೫, ಭಾಗ ೧, ಸಂಖ್ಯೆ ೨೪೩

೧೦೩. ಮನುಚರಿತ್ರೆ; ಆಶ್ವಾಸ ೩, ಪದ್ಯ ೧೪೨

೧೦೪. ಸಿವೆಲ್ : F.E. ಪು. ೩೩೯

೧೦೫. ಷೇಕ್ ಅಲಿ (ಪ್ರ.ಸಂ), ಕರ್ನಾಟಕ ಚರಿತ್ರೆ ಸಂ, ೩, ಪು. ೪೩

೧೦೬. ಕೆಳದಿನೃಪವಿಜಯ, ಪ್ರಥಮಾಶ್ವಾಸ, ೧೮, ೨೦, ಪು. ೩೨

೧೦೭. I.A. VOl-XXVIII (1899), P. 316, Vide also B.F. P. 348

೧೦೮. I.A. VOl-XXVIII, P. 321 (1899)

೧೦೯. Nilakantha Sastri K.A., The Punjai Inscriptions of Krishnadevaraya, E.I. VOl-XXV, No.32, 1939, 60

೧೧೦. F.E. P. 307

೧೧೧. SII, VOl-IV, No. 981

೧೧೨. F .E. P. 317-18

೧೧೩. F .E. P. 319

೧೧೪. F .E. P. 320

೧೧೫. FE. P. 320

೧೧೬. FE. P. 320

೧೧೭. Indian Ephemeries, Vol V, P. 242

೧೧೮. ಶ್ರೀನಿವಾಸ ರಿತ್ತಿ: Sri Vyasaraya and the Vijayanagara Empire (Paper Presented at the Vijayanagara History Seminor (Unpublished) Hospet, Nove, 1970, P. 7

೧೧೯. FE. P. 323

೧೨೦. FE. P. 339

೧೨೧. E.C. IV, (Old) Gundlupet, No. 62

೧೨೨. T.V. Mahalingam 'Tirumaladeva Maharaya' J.I.H. Vol-XVII, 1938; E. C. IX, MG, 5, 638 of 1923

೧೨೩. SII, Vol-XV, No. 250

೧೨೪. ಜಿ.ಎಸ್. ದೀಕ್ಷಿತ್ (ಇತರರು) ಪು. ೬೫

೧೨೫. ಪುಲಮತಿ ಶ್ಯಾಮರಾವ್ 'ವಿಜಯನಗರದ ಕಲೆ ಮತ್ತು ಸಾಹಿತ್ಯ' ಪು. ೫೬

❑❑

ಅಧ್ಯಾಯ ೩

ವೈಷ್ಣವ ಧರ್ಮ

೩

ವೈಷ್ಣವ ಧರ್ಮ

ಧರ್ಮ ಶಬ್ದದ ಅರ್ಥವು 'ಧೃ' ಎಂಬ ಧಾತುವಿಗೆ 'ರ್ಮ' ಎಂಬ ಪ್ರತ್ಯಯವನ್ನು ಸೇರಿಸುವುದರಿಂದ ರೂಪಗೊಂಡಿರುತ್ತದೆ. 'ಧಾರಣಾಧರ್ಮ ಇತ್ಯಾಹುಃ ಧರ್ಮೋಧಾರಯತಿ ಪ್ರಜಾಃ" ಎಂದರೆ ಜನರನ್ನು ಹಿಡಿದು ನಿಲ್ಲಿಸಿರುವ, ಒಗ್ಗೂಡಿಸಿ ಪರಸ್ಪರವಾಗಿ ಸಹಾನುಭೂತಿಯಿಂದ ಸಹಕರಿಸುತ್ತಿರುವಂತೆ ಪ್ರೇರೇಪಿಸುತ್ತಿರುವ ತತ್ವ ಅಥವಾ ಶಕ್ತಿಗೆ 'ಧರ್ಮ'ವೆಂದು ಹೆಸರು. ಧರ್ಮದ ಅರ್ಥವನ್ನು ಹುಡುಕಿದರೆ "ಜಾತಿ-ಪಂಗಡಗಳಿಗೆ ಸೇರಿದ ಆಚಾರ - ವಿಚಾರ ಹಾಗೂ ಭಕ್ತಿ ಔಚಿತ್ಯವೆಂದರ್ಥವಾಗುತ್ತದೆ."[1] ಅದೇ ರೀತಿ ಇಂಗ್ಲಿಶ್ ಭಾಷೆಯ 'ರಿಲಿಜಿಯನ್' ಎಂಬ ಪದಕ್ಕೆ ಇಂಗ್ಲಿಶ್-ಕನ್ನಡ ನಿಘಂಟಿನಲ್ಲಿ 'ಮಾನವನು ತಾನು ಒಂದು ಅತಿಮಾನುಷ ಶಕ್ತಿಯ ಅಧೀನನೆಂದೂ ಮುಖ್ಯವಾಗಿ ತನ್ನ ವಿಧೇಯತೆಗಳು ಸಲ್ಲತಕ್ಕ ದೇವರೊಬ್ಬನು ಇದ್ದಾನೆಂದೂ ಇಟ್ಟುಕೊಂಡಿರುವ ತಿಳುವಳಿಕೆ, ಅಥವಾ ನಂಬಿಕೆ"[2] ಎಂದು ಹೇಳಿದೆ. ಧರ್ಮವು ಮಾನವನ ಸಹಜವಾದ ನೈತಿಕ ಪ್ರವೃತ್ತಿಯ ಬೆಳವಣಿಗೆ ಮತ್ತು ನಂಬಿಕೆಗಳ ಮೂಲವಾಗಿದೆ ಎಂದು ಹೇಳಬಹುದು. ಧರ್ಮವನ್ನು ಬಿಟ್ಟು ಮಾನವನು ಬದುಕಲಾರ. ಮನುಷ್ಯನು ಹುಟ್ಟಿನಿಂದಲೇ ಧರ್ಮದ ಜೊತೆಯಲ್ಲಿ ಬೆಳೆದುಬಂದಿದ್ದಾನೆ. ಅದು ಪ್ರತ್ಯಕ್ಷವಲ್ಲದಿದ್ದರೂ ಪರೋಕ್ಷವಾಗಿ ಯಾದರೂ ಕಾಣಿಸಿಕೊಂಡಿರುತ್ತದೆ.

ಮುಖ್ಯವಾಗಿ ಜೀವನದ ಅಗತ್ಯ ಮತ್ತು ಬುದ್ಧಿಶಕ್ತಿಯ ಫಲ ಇವೆರಡರ ಸಂಗಮವೇ ಧರ್ಮದ ಹುಟ್ಟಿಗೆ ಕಾರಣ. ಒಂದೊಂದು ಜೀವದ ರಚನೆ, ಸ್ವಭಾವ, ಸಂದರ್ಭ, ಸನ್ನಿವೇಶಗಳೆಲ್ಲವೂ ಬೇರೆಬೇರೆಯಾಗಿರುವುದರಿಂದ, ಪ್ರತಿಯೊಬ್ಬ ವ್ಯಕ್ತಿಯ ಧರ್ಮವೂ ಬೇರೆಬೇರೆಯಾಗಿರುವುದು ಅಸಹಜವೇನಲ್ಲ. ಆದರೂ ಒಂದೇ ಆಗಿರುವ ಧರ್ಮತತ್ವವು, ಜೀವಿಗಳ ಶಕ್ತಿ ಯೋಗ್ಯತೆಗಳಿಗೆ ಒಪ್ಪುವಂತೆ ಅವರ ವಿವಿಧ ಸಂದರ್ಭಗಳಿಗೆ ಹೊಂದುವಂತೆ ಅನೇಕ ರೂಪಗಳನ್ನು ಧರಿಸಿ ಕೆಲಸ ಮಾಡುತ್ತದೆ.

ಭಕ್ತಿ, ದೇವತೋಪಾಸನೆ, ನೃತ್ಯ, ಸಂಗೀತ, ಶಿಲ್ಪಕಲೆ, ಚಿತ್ರಕಲೆ, ನಾಟಕ, ಸಾಹಿತ್ಯ ಮುಂತಾದವುಗಳಿಗೆ ಉಗಮಸ್ಥಾನವಾಗಿರುವ ಧರ್ಮವು, ಸಂಸ್ಕೃತಿಯ ವಾಹಕವೂ ಆಗಿದ್ದು ಅದರ ಮೂಲಕ ಜನಜೀವನಕ್ಕೆ ಒಂದು ಆಶಾದಾಯಕ ಹಾಗೂ ಸುಸಂಬದ್ಧವಾದ ಸಾಮಾಜಿಕ ಪರಿಸರವನ್ನು ಒದಗಿಸಿಕೊಡುತ್ತದೆ. ಧರ್ಮದ ಜಾಡನ್ನು ಹುಡುಕುತ್ತ ಹೊರಟರೆ ನಮಗೆ ಕ್ರಿಸ್ತಪೂರ್ವ ಶಿಲಾಯುಗದ ಜನರಲ್ಲಿ ಧಾರ್ಮಿಕ ಕಲ್ಪನೆಗಳು ಒಡಮೂಡಿದ್ದವು ಎನ್ನುವುದಕ್ಕೆ ಉತ್ಖನನದಲ್ಲಿ ದೊರೆತ ಹಲವು ಮೂರ್ತಿಶಿಲ್ಪಗಳಿಂದ ತಿಳಿದುಬರುತ್ತದೆ. ಸು.ಕ್ರಿ.ಪೂ. (೨೧೦೦-೧೯೦೦)ದ ನೆಲೆಯಾದ ಸಾವಳದ ಸಂಸ್ಕೃತಿಯಲ್ಲಿ ದೊರೆತ ಧಾರ್ಮಿಕವೆನ್ನಬಹುದಾದ ಸು. ೩ ಸೆಂ.ಮೀ. ಎತ್ತರದ ವರ್ತುಲಾಕಾರದ ಲಿಂಗಾಕೃತಿ ದೊರಕಿದೆ. ಅಲ್ಲದೆ ಕಾಲಿಬಂಗಾನ್, ಹರಪ್ಪ ನಾಗರೀಕತೆಯ ಮಣ್ಣಿನ ಪ್ರಣಾಳ ಪೀಠ ಸಹಿತ ಶಿವಲಿಂಗ ದೊರೆತಿರುವುದು ಮುಖ್ಯವಾಗಿದೆ. ಕ್ರಿ.ಪೂ. ೨೦೦೦ ಹೊತ್ತಿಗೆ ಶಿವನ ಆರಾಧನೆ ವ್ಯಾಪಕವಾಗಿರುವ ಸಾಧ್ಯತೆ ಇದೆ.[೩] ಸಿಂಧೂಕೊಳ್ಳದ ನಾಗರೀಕತೆಯಲ್ಲಿ ಜನರು ವೃಕ್ಷ ಹಾಗೂ ಪ್ರಾಣಿಗಳ ಪೂಜೆ ಮಾಡುವುದು ಪ್ರಚಲಿತವಿತ್ತು.[೪] ಅಲ್ಲಿ ದೊರೆತಿರುವ ಒಂದು ಮುದ್ರೆಯಲ್ಲಿ ಕೊಂಬುಗಳುಳ್ಳ ಮನುಷ್ಯನ ಮುದ್ರೆಯನ್ನು ಚಿತ್ರಿಸಲಾಗಿದ್ದು, ಮುದ್ರೆಯ ಮೇಲೆ ಹಲವು ಪ್ರಾಣಿಗಳು ಚಿತ್ರಿತವಾಗಿವೆ. ಅವುಗಳಲ್ಲಿ ನಂದಿ ಮುಖ್ಯ ಪ್ರಾಣಿಯಾಗಿದೆ. ಇವರು ದೈವವೆಂದು 'ಪಶುಪತಿ'ಯ ರೂಪದಲ್ಲಿ ಈ ವಿಗ್ರಹವನ್ನು ಪೂಜಿಸುತ್ತಿದ್ದರೆಂದು ತಿಳಿಯಬಹುದು.

ಭಾರತಕ್ಕೆ ಆರ್ಯರು ಕ್ರಿ.ಪೂ. ೧೫೦೦ರ ಸುಮಾರಿಗೆ ಕಾಲಿಟ್ಟದ್ದು ನಮಗೆ ಅತ್ಯಂತ ಪ್ರಾಚೀನ ಗ್ರಂಥಗಳಾದ ವೇದಗಳಿಂದ ತಿಳಿದುಬರುತ್ತದೆ. ಹಿಂದೂಧರ್ಮದ ಮೂಲ ಉಗಮವನ್ನು ನಾವು ವೇದಗಳಲ್ಲಿ ಕಾಣುತ್ತೇವೆ. ವೇದಗಳ ಕಾಲ ನಿರ್ದಿಷ್ಟವಾಗಿ ನಿರ್ಣಾಯಕವಾಗಿಲ್ಲವಾದರೂ ಅದು ಸುಮಾರು ಕ್ರಿ.ಪೂ. ೧೫೦೦ರ ಸುಮಾರಿಗೆ ಆಗಿರಬೇಕೆಂದು ಪ್ರಾಕ್ತನ ವಸ್ತು ಸಂಶೋಧನ ಶಾಖೆಯವರ ಅಭಿಪ್ರಾಯ. ಋಗ್ವೇದದಲ್ಲಿ ಆರ್ಯರು ಅಗ್ನಿ, ಇಂದ್ರ, ವರುಣ ಇತರ ದೇವತೆಗಳನ್ನು ಕುರಿತು ಪ್ರಾರ್ಥನೆ ಸಲ್ಲಿಸುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ ಋಗ್ವೇದ ಕಾಲದಲ್ಲಿ ಪಿತೃ ಕುಲೀನ ಸಾಮಾಜಿಕ ವ್ಯವಸ್ಥೆಯಲ್ಲಿ ಗಂಡುದೇವತೆಗಳಿಗೆ ದೊರೆತ ಪ್ರಾಧಾನ್ಯತೆ ಹೆಣ್ಣುದೇವತೆಗಳಿಗೆ ದೊರೆಯಲಿಲ್ಲ.[೫] ಈ ಕಾಲದಲ್ಲಿ ದೇವತೆಗಳನ್ನು ಮಂತ್ರಗಳು ಹಾಗೂ ಯಜ್ಞಯಾಗಾದಿಗಳ ಮೂಲಕ ಪೂಜಿಸುವುದು ಪ್ರಧಾನವಾಗಿ ಕಂಡುಬರುತ್ತದೆ. ಉತ್ತರ ವೇದಗಳ ಕಾಲದಲ್ಲಿ ಯಜ್ಞಯಾಗಾದಿಗಳ ಪ್ರಾಮುಖ್ಯತೆ ಹೆಚ್ಚಾಯಿತು. ಇವರಲ್ಲಿ ಪ್ರಜಾಪತಿಯು ಉನ್ನತ ಸ್ಥಾನವನ್ನು ಗಳಿಸಿದನು. ವಿಷ್ಣುವಿನ ಮಹತ್ವ ಹೆಚ್ಚಾಗಿ ಇವನು ಜನರನ್ನು ಕಾಪಾಡುವ ದೇವನಾಗಿ ಸೃಷ್ಟಿಗೊಂಡನು. ಈ ಕಾಲದಲ್ಲಿ ವಿಗ್ರಹಾರಾಧನೆಯು ರೂಪುಗೊಂಡು, ವೈದಿಕ ಸಂಸ್ಕಾರಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಆರ್ಯರು ನೀಡಿದರು. ಇವರ ಧಾರ್ಮಿಕ ಶ್ರದ್ಧೆಯಲ್ಲಿ ರುದ್ರ ಮತ್ತು ವಿಷ್ಣು ಪ್ರಮುಖ ದೈವಗಳಾಗಿದ್ದರು. ಈ ವೈದಿಕಧರ್ಮದ ಜೊತೆಗೆ ಕ್ರಿ.ಪೂ. ೬ನೇ ಶತಮಾನ ದಲ್ಲಿ ಜೈನ ಮತ್ತು ಬೌದ್ಧಧರ್ಮಗಳು ಹುಟ್ಟಿಕೊಂಡವು. ಇವು ವೈದಿಕ ಧರ್ಮಗಳಲ್ಲಿರುವ ವರ್ಣವ್ಯವಸ್ಥೆಯ ತಪ್ಪುಗಳನ್ನು ನಿವಾರಿಸಲು ಪ್ರಯತ್ನಿಸಿದವು. ಮೌರ್ಯರ ಕಾಲದಲ್ಲಿ ಅಶೋಕನು ಬೌದ್ಧಧರ್ಮಕ್ಕೆ ನೀಡಿದ ಪ್ರೋತ್ಸಾಹವು ಕರ್ನಾಟಕದಲ್ಲೆಲ್ಲ ಹರಡಲು ಕಾರಣವಾಯಿತು. ಅದೇ ರೀತಿ ಮುಂದೆ ಇಸ್ಲಾಂ, ಸಿಖ್, ಕ್ರೈಸ್ತ ಧರ್ಮಗಳು ಭಾರತದಲ್ಲಿ ಹುಟ್ಟಿಕೊಂಡು ಧರ್ಮಪ್ರಸರಣ ಕಾರ್ಯದಲ್ಲಿ ತೊಡಗಿದವು.

ಹುಟ್ಟು ಮತ್ತು ಬೆಳವಣಿಗೆ

ಪ್ರಾಚೀನ ಭಾರತದಲ್ಲಿ ಹಿಂದೂಧರ್ಮವು ಹುಟ್ಟಿಬೆಳೆದುದರ ಜೊತೆಯಲ್ಲೇ ನಾವು ವೈಷ್ಣವಧರ್ಮ (ಭಾಗವತ)ದ ಉಗಮವನ್ನು ಕಾಣುತ್ತೇವೆ. ವೈದಿಕಯುಗದಲ್ಲಿ ಆರ್ಯರು ವಿಷ್ಣುವಿಗೆ ನೀಡಿದ ಮಹತ್ವ ಇವನನ್ನು ಪ್ರಧಾನ ದೇವತೆಗಳ ಸಾಲಿನಲ್ಲಿ ನಿಲ್ಲಿಸಿತು. ಇವನು ಜನರನ್ನು ಕಾಪಾಡುವ, ರಕ್ಷಿಸುವ ದೇವತೆಯೆಂದು ನಂಬಲಾಯಿತು. ಅಲ್ಲಿಂದ ವಿಗ್ರಹರಾಧನೆಯು ರೂಪುಗೊಂಡು ಪೂಜಾವಿಧಾನಗಳು ಏರ್ಪಟ್ಟವು. ಬ್ರಾಹ್ಮಣಗಳ ಕಾಲದಲ್ಲಿ ವಿಷ್ಣುವಿನ ಮಹತ್ವ ಇದಕ್ಕಿಂತ ಹೆಚ್ಚಾಗಿ ಬೆಳೆಯಿತು. 'ಆಧ್ಯಾತ್ಮಿಕೋನ್ನತಿಯ ಪ್ರವಾಸದಲ್ಲಿ ಆತ್ಮನು ಮುಟ್ಟಿತಕ್ಕ ಕಡೆಯ ಸ್ಥಾನಕ್ಕೆ ವಿಷ್ಣುವಿನ ಪರಮಪದ ಎಂದು ಕಠೋಪನಿಷತ್ತಿನಲ್ಲಿ ಹೇಳಿದೆ.'[೬] ಮಹಾಭಾರತದಲ್ಲಿ ವೈಷ್ಣವ ಧರ್ಮದ ಬಗೆಗೆ ಅನೇಕ ಆಧಾರಗಳು ದೊರೆಯುತ್ತವೆ. ಭಾಗವತ ಧರ್ಮ ಮುಂದೆ ಪರಿಪೂರ್ಣ ಸ್ಥಿತಿಯನ್ನು ತಲುಪಿತು.

ಅಂದಿನ ಕಾಲದ ಸಾರ್ವಜನಿಕರಲ್ಲಿ ವೈದಿಕಮತವನ್ನು ಸಮುದಾಯಗಳು ಸೃಷ್ಟಿಸಿಕೊಂಡು, ಮುಂದೆ ಮತ ಧರ್ಮದಲ್ಲಾದ ಮಾರ್ಪಾಡಿನಿಂದ ಅರಸರು ವೈಷ್ಣವ ಮತಕ್ಕೆ ಪರಿವರ್ತನೆಗೊಂಡರು. ಭಾರತದಲ್ಲಿ ಮೊಟ್ಟ ಮೊದಲು ವೈಷ್ಣವ ಧರ್ಮದ ಉಗಮದ ಅವಶೇಷವನ್ನು 'ಮಧ್ಯಪ್ರದೇಶದ ವಿದಿಶಾದಲ್ಲಿ ಕ್ರಿ.ಪೂ. ೨ನೇ ಶತಮಾನದ ಹೆಲಿಯೋಡೋರಸ್ ಎಂಬ ಗ್ರೀಕ್ ರಾಯಭಾರಿಯು ವಿಷ್ಣುವಿನ ಪ್ರೀತ್ಯರ್ಥವಾಗಿ ಒಂದು ಸ್ತಂಭವನ್ನು ಸ್ಥಾಪಿಸಿದನು.'[೭] ಮುಂದೆ ಕುಶಾನರ ಕಾಲದಲ್ಲಿ ಕೆಲವು ಅರಸರು ವಿಷ್ಣುವಿನ ಆರಾಧಕರಾಗಿದ್ದರು. ವಿಷ್ಣುವಿನ ಅವತಾರಗಳಲ್ಲಿ ಒಂದಾಗಿರುವ ವಾಸುದೇವ ಎಂಬ ಹೆಸರನ್ನು ಇವರು ಹೊಂದಿದ್ದರು.

ಭಾರತದಲ್ಲಿ ಮೌರ್ಯರ ಆಳ್ವಿಕೆಯ ನಂತರ ಪ್ರಮುಖವಾಗಿ ಕ್ರಿ.ಶ. ೧೦೦ ರಲ್ಲಿ ಶಾತವಾಹನ ಅರಸರು ಕಾಣಬರುತ್ತಾರೆ. ಇವರು ತಮ್ಮನ್ನು ಬ್ರಾಹ್ಮಣರೆಂದು ಕರೆದುಕೊಂಡಿದ್ದುದು, ಅವರು ಕೃಷ್ಣ, ವಾಸುದೇವ ಮೊದಲಾದ ಹಲವಾರು ವೈಷ್ಣವ ದೈವಗಳನ್ನು ಪೂಜಿಸುತ್ತಿದ್ದರು. ಇವರ ನಂತರ ಗುಪ್ತರು ಕ್ರಿ.ಶ. ೩೩೦ರಲ್ಲಿ ಭಾರತದಲ್ಲಿ ಏಳ್ಗೆಗೆ ಬಂದರು. ಇವರ ಕಾಲದಲ್ಲಿ ಬೌದ್ಧಮತವು ರಾಜಾಶ್ರಯವನ್ನು ಕಳೆದುಕೊಂಡು ಭಾಗವತ ತತ್ವಪಂಥವು ಹುಟ್ಟಿಕೊಂಡಿತು. ಇದರಲ್ಲಿ ವಿಷ್ಣು ಪ್ರಮುಖ ದೇವತೆಯಾದನು. ಇವನನ್ನು ನಾರಾಯಣ ಎಂತಲೂ ಕರೆಯುತ್ತಿದ್ದರು. ಇದಲ್ಲದೆ ವಿಷ್ಣುವನ್ನು ಭಾಗವತ್ ಎಂದೂ ಕರೆದಿರುವುದರಿಂದ ಅವನನ್ನು ಪೂಜಿಸುವವರು ಭಾಗವತರು ಎಂದು ಹೆಸರಾದರು.[೮] ಸುಮಾರು ಕ್ರಿಸ್ತಶಕದ ವೇಳೆಗೆ ಭಾಗವತ ತತ್ವ ಅಥವಾ ವೈಷ್ಣವ ಧರ್ಮ ರೂಪುಗೊಂಡಿತೆಂದು ಹೇಳಬಹುದು. ಭಕ್ತಿ ಮತ್ತು ಅಹಿಂಸೆಗಳು ಭಾಗವತ ಧರ್ಮದ ಪ್ರಮುಖ ಲಕ್ಷಣಗಳು. ಕೃಷ್ಣನು ಬೋಧಿಸಿದ ಭಗವದ್ಗೀತೆ, ವಿಷ್ಣುಪುರಾಣ ಹಾಗೂ ವಿಷ್ಣುಸ್ಮೃತಿಗಳು ವೈಷ್ಣವ ತತ್ವದ ಬೋಧನೆಗಳನ್ನು ವಿವರಿಸುವ ಗ್ರಂಥಗಳಾಗಿವೆ. ಕ್ರಿ.ಶ. ೬ನೇ ಶತಮಾನದ ವೇಳೆಗೆ ವಿಷ್ಣು ತ್ರಿಮೂರ್ತಿಗಳಲ್ಲಿ ಒಬ್ಬನಾದನು. ವಿಷ್ಣು ಪೂಜೆಯು ಪ್ರಚಾರಗೊಳ್ಳಲು ಹಲವು ಗ್ರಂಥಗಳು ಬರೆಯಲ್ಪಟ್ಟವು. ಅವುಗಳಲ್ಲಿ 'ಭಾಗವತ ಪುರಾಣವು' ಶ್ರೇಷ್ಠ ಗ್ರಂಥವಾಗಿದೆ.

ಶಾತವಾಹನರ ಅರಸೊತ್ತಿಗೆಯ ನಂತರ ಬನವಾಸಿಯಿಂದ ಆ ಪ್ರದೇಶವನ್ನು ಆಳುತ್ತಿದ್ದ ಚುಟು ಕುಲಾನಂದರನ್ನು ಕಂಚಿಯ ಪಲ್ಲವರು ಸೋಲಿಸಿ ಕರ್ನಾಟಕದ ಭಾಗವನ್ನು ಆಳಲು ಪ್ರಾರಂಭಿಸಿದರು. ಇವರು ತಮ್ಮನ್ನು 'ಪರಮಭಾಗವತ'ರೆಂದು ಕರೆದುಕೊಂಡಿದ್ದಾರೆ.[೯] ಕನ್ನಡನಾಡಿನ ವೈಷ್ಣವ ಮತ ಪ್ರಚಾರವು ಧರ್ಮದ ಏಳ್ಗೆಗೆ ಶ್ರಮಿಸಿರುವ ಪ್ರಮುಖವಾದ ಧರ್ಮಪಂಥವಾಗಿದೆ. ಮುಂದೆ ಕನ್ನಡದ ಮೊಟ್ಟಮೊದಲ ಅರಸು ಮನೆತನವಾದ ಕದಂಬ ಮನೆತನದವರು ಕ್ರಿ.ಶ. ೪ನೆಯ ಶತಮಾನದಲ್ಲಿ ಉತ್ತರ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಸ್ವತಂತ್ರವಾದ ರಾಜ್ಯವನ್ನು ಸ್ಥಾಪಿಸಿದರು. ಕನ್ನಡದ ಅತ್ಯಂತ ಪ್ರಾಚೀನ ಶಾಸನವೆಂದು ಪರಿಗಣಿತವಾದ 'ಹಲ್ಮಿಡಿ' ಶಾಸನವು ಇವರ ಕಾಲದ್ದಾಗಿದೆ. ಈ ಹಲ್ಮಿಡಿ ಶಾಸನ ಪಾಠವು ಲಕ್ಷ್ಮೀಸಹಿತ ಧನುರ್ಧಾರಿ ಅಚ್ಯುತನು ದುಷ್ಟರಿಗೆ ಯುಗಾಂತದ ಅಗ್ನಿಯಂತೆಯು, ಶಿಷ್ಟರಿಗೆ ಆಹ್ಲಾದಕರನಾಗಿಯೂ ಇರುವನೆಂದು ಸ್ತುತಿಸಿದೆ. 'ಶಾಸನದ ಮೇಲ್ಭಾಗದಲ್ಲಿ ಅರಳಿದ ಕಮಲದಂತೆ ವರ್ತುಲಾಕಾರವಾಗಿಯೂ ಸುದರ್ಶನ ಚಕ್ರದಂತೆ ಬಿಡಿಸಲಾಗಿದೆ.'[೧೦] ಇಷ್ಟು ಹೊತ್ತಿಗಾಗಲೇ ಕರ್ನಾಟಕದಲ್ಲಿ ವೈಷ್ಣವ ಮತವು ವ್ಯಾಪಕವಾಗಿ ಹರಡಿತ್ತೆಂದು ಹೇಳಬಹುದು. ವಿಷ್ಣುವಿನ ವಿವಿಧ ಅವತಾರಗಳ ಪರಿಕಲ್ಪನೆ ಆಗಲೇ ಸಮಾಜದಲ್ಲಿ ರೂಪುಗೊಂಡಿದ್ದವು. ಹರಿ, ಕೃಷ್ಣ, ಮುರಾರಿ, ವಿಷ್ಣು, ವಾಸುದೇವ, ನಾರಾಯಣ ಎನ್ನುವ ನಾಮಗಳು ವಿಷ್ಣುವಿನ ಮಾಯೆಯನ್ನು ತಿಳಿಸುವ ಹೆಸರುಗಳಾಗಿದ್ದವು.

ಗಂಗರ ಪ್ರಾರಂಭಿಕ ಶಾಸನಗಳಲ್ಲಿ ಏಕಪ್ರಕಾರವಾಗಿ ಅನಂತಪದ್ಮನಾಭನ ಸ್ತುತಿಯಿರುವುದು ಗಮನಾರ್ಹ. ಹರಿವರ್ಮ, ಕೃಷ್ಣವರ್ಮ, ವಿಷ್ಣುಗೋಪ ಅರಸರೆಲ್ಲ ಈ ದೇವರ ಹೆಸರನ್ನಿಟ್ಟುಕೊಂಡಿದ್ದರು. ಮುಂದೆ ವಿಶಾಲ ಕರ್ನಾಟಕದಲ್ಲಿ ಬಾದಾಮಿಯನ್ನು ತಮ್ಮ ರಾಜಧಾನಿಯಾಗಿ ಮಾಡಿಕೊಂಡು ಆಳಿದ ಚಾಲುಕ್ಯರು ಬಾದಾಮಿ ಚಾಲುಕ್ಯರೆಂದೆ ಹೆಸರು ಪಡೆದರು. ಇವರು ಬನವಾಸಿಯ ಕದಂಬರನ್ನು ಸೋಲಿಸಿ ತಮ್ಮ ಆಳ್ವಿಕೆಯನ್ನು ಪ್ರಾರಂಭಿಸಿದರು. ಇವರ ಲಾಂಛನವಾದ ವರಾಹವು ವಿಷ್ಣುವಿನ ಅವತಾರಗಳಲ್ಲಿ ಒಂದು. ಅವರ ಶಾಸನಗಳು ಪ್ರಾರಂಭದಲ್ಲಿ ವಿಷ್ಣುಸ್ತುತಿಯಿಂದ ಪ್ರಾರಂಭವಾಗಿರುವುದನ್ನು ಕಾಣಬಹುದು. ಚಾಲುಕ್ಯವಂಶದ ಮಂಗಳೇಶನನ್ನು ಅವನ ಒಂದು ಶಾಸನ 'ಪರಮಭಾಗವತ'ನೆಂದು ಕರೆದಿದೆ.[೧೧] ಇವರು ವೈದಿಕಧರ್ಮವನ್ನು ಪೋಷಿಸಿ ಬಾದಾಮಿಯ ಗುಹಾದೇವಾಲಯಗಳಲ್ಲಿ ಪ್ರಸಿದ್ಧವಾದ ಮೂರನೆಯ ವೈಷ್ಣವಗುಹೆ ಮಹಾವಿಷ್ಣುವಿನದಾಗಿದೆ. ಈ ಗುಹಾಲಯವು ಕ್ರಿ.ಶ. ೫೭೮ರಲ್ಲಿ ಮಂಗಳೇಶನಿಂದ ನಿರ್ಮಿಸಲ್ಪಟ್ಟ ಅದ್ಭುತ ಗುಹಾವಾಸ್ತುವಿನ ಸಾಲಿನಲ್ಲಿ ಸೇರುತ್ತದೆ. ಈ ಗುಹಾಲಯದಲ್ಲಿ ಕೃಷ್ಣಚರಿತೆ ಮೊದಲಾದ ಕಥಾನಕ ಚಿತ್ರಪಟ್ಟಿಕೆಗಳನ್ನು ಕೆತ್ತಲಾಗಿದೆ. ವೈದಿಕವಿಷ್ಣು - ನಾರಾಯಣಪಂಥವು ಕರ್ನಾಟಕದಲ್ಲಿ ಮುಂದೆ ಬೆಳೆಯತೊಡಗಿತು. "ವ್ಯೂಹ ಮತ್ತು ವ್ಯೂಹಾಂತರ ಪರಿಕಲ್ಪನೆಗಳೊಡನೆ ಪರಾ - ವಾಸುದೇವನೇ ಸರ್ವೋತ್ತಮನೆಂಬ ತತ್ವ ಪ್ರನಾಳಿಕೆಯ ನವಪಾಂಚರಾತ್ರ ಪಂಥವು ಸುಮಾರು ಎಂಟನೆಯ ಶತಮಾನದಿಂದ ತನ್ನ ಪ್ರಭಾವವನ್ನು ಬೀರುತ್ತಾ ಸುಮಾರು ಹತ್ತನೆಯ ಶತಮಾನದ ಹೊತ್ತಿಗೆ ಪ್ರಬಲವಾಯಿತು."[೧೨]

ಸುಮಾರು ೧೧ನೇ ಶತಮಾನದ ಕೊನೆಯಲ್ಲಿ ವಿಶಿಷ್ಟಾದ್ವೈತ ಮತ ಯಮುನಾಚಾರ್ಯರ ಪ್ರಯತ್ನದಿಂದ ವಿಶೇಷವಾಗಿ ಬೆಳೆದು ಶ್ರೀರಂಗಂ, ಕಂಚಿ, ತಿರುಪತಿ ಮೊದಲಾದ ಸ್ಥಳಗಳಲ್ಲಿ ಬೇರೂರಿತು. ಈ ಮತದ ಬೆಳವಣಿಗೆ

ಯನ್ನು ಸಾಗಿಸಿಕೊಂಡು ಹೋದವರು ಶ್ರೀ ರಾಮಾನುಜಾಚಾರ್ಯರು. ಶೈವನಾದ ಮೊದಲನೆ ಕುಲೋತ್ತುಂಗ ಚೋಳನಿಗೂ ಇವರಿಗೂ ಮತಪ್ರಸಾರದಲ್ಲಿ ಮನಸ್ತಾಪ ಉಂಟಾಗಿ ಇವರು ಶ್ರೀರಂಗಂ ಪ್ರದೇಶವನ್ನು ಬಿಟ್ಟು ಕರ್ನಾಟಕದ ದೋರಸಮುದ್ರ ಅರಸನಾದ ಬಿಟ್ಟಿದೇವನಲ್ಲಿ ಆಶ್ರಯಪಡೆದರು. ಬಿಟ್ಟಿದೇವನನ್ನು ಶ್ರೀ ವೈಷ್ಣವನನ್ನಾಗಿ ಮಾಡಿ ಅವನಿಗೆ ವಿಷ್ಣುವರ್ಧನನೆಂಬುದಾಗಿ ಹೆಸರಿಟ್ಟರು. ಮೇಲುಕೋಟೆಯಲ್ಲಿ ಒಂದು ವಿಷ್ಣುದೇವಾಲಯವನ್ನು ಕಟ್ಟಿಸಿ ರಾಮಪ್ರಿಯ ಎಂಬ ವಿಷ್ಣುವಿನ ವಿಗ್ರಹವನ್ನು ಅಲ್ಲಿ ಸ್ಥಾಪಿಸಿದರು. ರಾಮಾನುಜ ಮತವು ಪಾಂಚರಾತ್ರ ಮತದ ವಾಸುದೇವ ಧರ್ಮವಾಗಿದೆ. ಅದರೊಳಗೆ ನಾರಾಯಣ ಮತ್ತು ವಿಷ್ಣು ಸಮಾವೇಶವಾಗಿ ಭಕ್ತಿ ಉಪಾಸನೆಯನ್ನು ಹೆಚ್ಚಾಗಿ ಹೋಲುವುದು.

ವೈಷ್ಣವ ಸಂಪ್ರದಾಯಗಳಲ್ಲಿ ದ್ವೈತಮತವು ಬ್ರಹ್ಮಸಂಪ್ರದಾಯಕ್ಕೆ ಸೇರಿದೆ. ಇದು ಒಂದು ಭಕ್ತಿಮಾರ್ಗದ ಪಂಥ. ಸುಮಾರು ೧೩ನೇ ಶತಮಾನದಲ್ಲಿ ಶ್ರೀ ಮಧ್ವಾಚಾರ್ಯರು ಇದನ್ನು ಸ್ಥಾಪಿಸಿ ಪ್ರಸಾರ ಮಾಡಿದರು. ಇವರು ವೇದೋಪನಿಷತ್ತುಗಳಲ್ಲಿ ಹೇಳಿದ ಮತದ್ವೈತವೆಂದು ಪ್ರತಿಪಾದಿಸಿ ಅದನ್ನು ಪ್ರತಿಷ್ಠಾಪಿಸಿದರು. ದ್ವೈತಮತದ ತತ್ವಗಳನ್ನು ಪ್ರಸಾರ ಮಾಡಿ ಉಡುಪಿಗೆ ಬಂದು, ಅಲ್ಲಿ ಗೀತಾಭಾಷ್ಯವನ್ನು ರಚಿಸಿ ಗುರುಗಳಿಗೆ ಅರ್ಪಿಸಿದರು. ಇವರ ತರುವಾಯ ಮುಂದೆ ವಿಜಯನಗರ ಕಾಲದಲ್ಲಿ ದ್ವೈತಮತ ಪ್ರಸಾರವನ್ನು ವ್ಯಾಸರಾಯಸ್ವಾಮಿಗಳು ಕೈಗೊಂಡರು. ಇವರು ಮಾಧ್ವಮತದ ಮುಖ್ಯ ತತ್ವಗಳನ್ನು ಈ ಶ್ಲೋಕದಲ್ಲಿ ಸಂಗ್ರಹಿಸಿರುವರು :

> "ಶ್ರೀಮನ್ಮಧ್ವಮತೇ ಹರಿಪರತರಃ ಸತ್ಯಂ ಜಗತ್ತತ್ತ್ವತೋ
> ಭೇದೋ ಜೀವಗಣಾ ಹರೇರನುಚರಾಃ ನೀ ಚೋಚ್ಚಭಾವಂ ಗತಾಃ
> ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚತತ್ಸಾಧನಂ
> ಹ್ಯಕ್ಷಾದಿ ತ್ರಿತಯಂ ಪ್ರಮಾಣಮಖಿಲಾಮ್ನಾಯೈ ಕವೇದ್ಯೋಹರಿಃ"[೩]

ಹರಿಯೇ ಪರಬ್ರಹ್ಮನು, ಜಗತ್ತು ಸತ್ಯವಾದುದು ಎಂಬುದು ಈ ಶೋಕ್ಲದ ವಿವರಣೆಯಾಗಿದೆ. ಮುಂದೆ ಈ ಪಂಥದಲ್ಲಿ ಹರಿದಾಸ ಪಂಥ ಹುಟ್ಟಿಕೊಂಡಿತು. ಇದರಲ್ಲಿ ವ್ಯಾಸಕೂಟ ಮತ್ತು ದಾಸಕೂಟ ಎಂಬ ವಿಧಗಳು ತಮ್ಮ ಧರ್ಮ ಪ್ರಸಾರ ಕಾರ್ಯದಲ್ಲಿ ತೊಡಗಿದವು. ಸಾಮಾನ್ಯವಾಗಿ ಕನ್ನಡದಲ್ಲಿ ದಾಸಕೂಟದವರು ತತ್ವಗಳನ್ನು ಬೋಧಿಸಿದರೆ, ಸಂಸ್ಕೃತದಲ್ಲಿ ಪಾಂಡಿತ್ಯಪಡೆದವರಿಗೆ ವ್ಯಾಸಕೂಟದವರೆಂದು ಕರೆಯಲಾಯಿತು. ಈ ಎರಡು ಪಂಥದವರು ವಿಜಯನಗರ ಉಚ್ಛ್ರಾಯಸ್ಥಿತಿಯಲ್ಲಿ ತತ್ವಪ್ರಸಾರಕ್ಕೆ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಇವರಲ್ಲಿ ದಾಸಕೂಟದವರು ಶ್ರೀಪಾದರಾಯ, ವಾದಿರಾಜ, ಪುರಂದರದಾಸ, ಕನಕದಾಸ ಮೊದಲಾದವರು. ವ್ಯಾಸಕೂಟದಲ್ಲಿ ವ್ಯಾಸರಾಯ, ವಿಜಯದಾಸ, ಜಗನ್ನಾಥದಾಸ, ವೆಂಕಟದಾಸ ಮೊದಲಾದವರು ಪ್ರಮುಖ ರಾಗಿರುವರು.

ವಿಜಯನಗರದಲ್ಲಿ ವೈಷ್ಣವ ಧರ್ಮದ ಪ್ರಾರಂಭಿಕ ಹಂತ

ಹೊಯ್ಸಳ ಸಾಮ್ರಾಜ್ಯದ ಅವನತಿಯೊಂದಿಗೆ ವಿಜಯನಗರಕ್ಕೆ ಬಂದ ವೈಷ್ಣವ ಪಂಥದವರಿಗೆ ವಿಜಯ ನಗರದ ಮೊದಲ ರಾಜಮನೆತನ ಸಂಗಮವಂಶಸ್ಥರು ಆಶ್ರಿತರಾಗಿದ್ದರು. ಮುಂದೆ ವಿಜಯನಗರ ಸಾಮ್ರಾಜ್ಯದಲ್ಲೆಲ್ಲ

ವೈಷ್ಣವ ರಚನೆಗಳು ಹುಟ್ಟಿಕೊಂಡವು. ಹಂಪೆಯಲ್ಲಿ ಕ್ರಿ.ಶ. ೧೩೯೦ ರಿಂದ ಅಂದರೆ ಇಮ್ಮಡಿ ಹರಿಹರನ ಕಾಲದಲ್ಲಿ ಸಾಯಣಯ್ಯ, ಅಕ್ಷುದನಾಥ ಒಡೆಯ ಇವರ ಆಡಳಿತದಲ್ಲಿ ಶ್ರೀನಲಾನುಚಕ್ರವರ್ತಿಅಯ್ಯ ಎನ್ನುವವನು ಪಂಪಾತೀರದ ತುಂಗಭದ್ರೆಯ ತಟದಲ್ಲಿ ನರಸಿಂಹದೇವರ ಮಂಟಪವನ್ನು ಕಟ್ಟಿಸಿದ ವಿವರವಿದೆ. ಈ ದೇವರನ್ನು ಆಹೋಬಲ ನರಸಿಂಹನೆಂದು ಕರೆದಿದೆ."[೧೪]

ವಿಠಲ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ನದಿದಂಡೆಯ ಹತ್ತಿರ ಇರುವ ದೇವಾಲಯದ ಎದುರು ಇಳಿಜಾರಾದ ಬಂಡೆಯ ಮೇಲಿನ ಶಾಸನವು ಕ್ರಿ.ಶ. ೧೩೮೭ರದು. ಈ ಶಾಸನದ ಪ್ರಕಾರ 'ಬುಕ್ಕರಾಯನ ಮಗ ವೀರಹರಿಹರರಾಯನ ಆಳ್ವಿಕೆಯಲ್ಲಿ ಪಂಪಾಕ್ಷೇತ್ರದ ನರಸಿಂಹದೇವರ ಪಶ್ಚಿಮಕ್ಕೆ ಕ್ಷೇತ್ರಪಾಲನ ಆಲಯವನ್ನು ಹಿರಿಯತಮ್ಮ ಮತ್ತು ಚಿಕ್ಕತಮ್ಮಗಳು ಮಾಡಿಸಿದ ಉಲ್ಲೇಖವಿದೆ. ಇದರಿಂದ ಸಂಗಮರ ಕಾಲಕ್ಕೆ ವೈಷ್ಣವ ಧರ್ಮವು ಶೈವಾವಸ್ಥೆಯಲ್ಲಿದ್ದುದು ಗೊತ್ತಾಗುತ್ತದೆ. ವಿಜಯನಗರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವೈಷ್ಣವರು ಬಂದು ನೆಲೆಸಿದ್ದರು. ಇಲ್ಲಿನ ವೈಷ್ಣವ ಸಂಪ್ರದಾಯಸ್ಥರು ಬಹುತೇಕ ಆಹೋಬಲದ ಪರಕಾಲ ಮಠಕ್ಕೆ ಸೇರಿದವರಾಗಿದ್ದಾರೆ.

ಕ್ರಿ.ಶ. ೧೬ನೇ ಶತಮಾನದ ಧಾರ್ಮಿಕ ವಲಯದಲ್ಲಾದ ಬದಲಾವಣೆಗಳು ಅವುಗಳ ಒಳನೋಟಗಳು ತುಂಬಾ ವಿಭಿನ್ನತೆಯಿಂದ ಕೂಡಿದ ತಮ್ಮ ತಮ್ಮ ಉಳಿವಿಗೆ ಶ್ರಮಿಸಿದ ಪರಿ ಮಹತ್ವವಾದದ್ದು. ಆದ್ದರಿಂದ ವಿಜಯನಗರದ ಧಾರ್ಮಿಕ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ಗ್ರಹಿಸುವ ಅಗತ್ಯವಿದೆ. ವಿಜಯನಗರ ಕಾಲದಲ್ಲಿ ತುಳುವ ಮನೆತನಕ್ಕಿಂತ ಪೂರ್ವದ ಸಾಳುವ ವಂಶದಲ್ಲಿಯೇ ವೈಷ್ಣವ ಧರ್ಮವು ಪ್ರಾಬಲ್ಯಕ್ಕೆ ಬಂದಿತು. ವೈಷ್ಣವರು 'ಹರಿಯೇ ಪರಮಸತ್ಯ: ಜಗತ್ತು ಮಿಥ್ಯವಲ್ಲ, ಸತ್ಯವೇ' ಎಂಬ ಸಿದ್ಧಾಂತದ ಪ್ರತಿಪಾದಕರಾಗಿದ್ದರು. ಈ ಪಂಥದ ಮೂಲಸ್ಥಾಪಕ ಮಾಧ್ವಚಾರ್ಯರು. ಈ ಪಂಥವು ಸಾಳುವರ ಕಾಲಕ್ಕೆ ಹೆಚ್ಚಿನ ಪ್ರಾಶಸ್ತ್ಯಗಳಿಸಿತು. ಅಲ್ಲಿಯವರೆಗೆ ಶೈವಧರ್ಮವು ವಿಜಯನಗರದಲ್ಲಿ ರಾಜಧರ್ಮವಾಗಿ ಸಂಗಮರ ಕಾಲಕ್ಕೆ ಅದು ತನ್ನ ಉನ್ನತಿಯ ಸೀಮೆಯನ್ನು ಮುಟ್ಟಿದ್ದಿತು. "ಶೈವ ಧರ್ಮವು ಮುಂದೆ ವೀರಶೈವದಲ್ಲಿ ಸಮಾವೇಶಗೊಂಡು, ವೀರಶೈವದ ಕ್ರಿಯಾಚರಣೆಗಳನ್ನು ಒಂದೊಂದಾಗಿ ಅನುಸರಿಸುತ್ತ ಕೊನೆಗೆ ಸಮರಸವಾದಂತೆ ತೋರುತ್ತದೆ."[೧೫] ಮುಂದೆ ಧಾರ್ಮಿಕ ಇತಿಹಾಸದಲ್ಲಿ ಎದ್ದುಕಾಣುವ ಒಂದು ಅಂಶವೆಂದರೆ ಧರ್ಮಪಂಥೀಯ ಸಂಘರ್ಷಣೆ. ಈ ಸ್ಥಿತಿ ವೀರಶೈವರ ಉಗಮದೊಂದಿಗೆ ಸ್ವಲ್ಪಮಟ್ಟಿಗೆ ಕಾಣಿಸಿಕೊಂಡು ಸಂಘರ್ಷಸ್ಥಿತಿ ಮುಂದುವರಿಯಿತು. ಹಿಂದೂಧರ್ಮ ಉದ್ಧಾರದ ಉದ್ದೇಶದೊಡನೆ ಕರ್ನಾಟಕದಲ್ಲಿ ಉದಯಿಸಿದ ವಿಜಯನಗರ ಸಾಮ್ರಾಜ್ಯವು ಹಿಂದೂಧರ್ಮದ ಒಂದು ಭಾಗವಾದ ವೀರಶೈವ ಧರ್ಮಕ್ಕೆ ನೀಡಿದ ಅತಿಯಾದ ಪ್ರೋತ್ಸಾಹವೇ ಮುಂದಿನ ಅರಸು ಮನೆತನಗಳು ತಮ್ಮ ಧಾರ್ಮಿಕ ನಿಲುವನ್ನು ವೈಷ್ಣವ ಧರ್ಮದ ಕಡೆಗೆ ತಿರುಗಲು ಕಾರಣವಾಯಿತು.

ಸಂಗಮರ ಕೊನೆಯ ಅರಸನಾದ ವಿರೂಪಾಕ್ಷನು ವೀರಶೈವಧರ್ಮವನ್ನು ತ್ಯಜಿಸಿ ವೈಷ್ಣವ ಧರ್ಮವನ್ನು ಸ್ವೀಕರಿಸಿದನೆಂದು 'ಪ್ರಪನ್ನಾಮೃತಂ' ಕಾವ್ಯದಲ್ಲಿ ಅನಂತಚಾರ್ಯರವರು ಅಭಿಪ್ರಾಯಪಟ್ಟಿರುವರು. ಸಂಗಮ ಮನೆತನದ ಕೊನೆಯ ಅರಸರು ವೈಷ್ಣವ ಧರ್ಮಕ್ಕೆ ಮತಾಂತರ ಹೊಂದಿದ ಮೇಲೆ ಸಾಮ್ರಾಜ್ಯದಲ್ಲಿ ವೈಷ್ಣವ ದೇವಾಲಯಗಳಿಗೆ ದಾನದತ್ತಿಗಳನ್ನು ಹೆಚ್ಚಾಗಿ ನೀಡಿದ್ದು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಇವರ ನಂತರ

ಸಾಳುವ ಮನೆತನದ ಕಾಲಕ್ಕೆ ವೈಷ್ಣವ ಧರ್ಮವು ಏಳ್ಗೆಗೆ ಬಂದಿತು. ಈ ವಂಶದ ಅರಸನಾದ ಸಾಳುವ ನರಸಿಂಹನು ವೈಷ್ಣವ ಧರ್ಮವನ್ನು ರಾಜಧರ್ಮವಾಗಿ ಸ್ವೀಕಾರ ಮಾಡಿದನು. ಇವನ ಕುಲದೈವವು ತಿರುಮಲೆಯ ವೆಂಕಟೇಶ್ವರ ನಾಗಿದ್ದು, ಈ ದೇವಾಲಯಕ್ಕೆ ಹಲವಾರು ದಾನದತ್ತಿಗಳನ್ನು ನೀಡಿದ್ದನು. ಇವನ ಕಾಲದಲ್ಲಿ ಅರಸರು, ರಾಜಕುಟುಂಬ ದವರು ಹಾಗೂ ರಾಜ್ಯಪಾಲರು ತಿರುಮಲೆ ದೇವರಿಗೆ ಅನೇಕ ರೀತಿಯ ದಾನದತ್ತಿಗಳನ್ನು ನೀಡಿರುವುದು ಶಾಸನಗಳಲ್ಲಿ ಉಲ್ಲೇಖವಾಗಿದೆ."[೨] ಸಾಳುವ ನರಸಿಂಹನ ಕಾಲದಲ್ಲಿ ಅಹೋಬಲಂ ಮತ್ತು ತಿರುಮಲೆಗಳು ವೈಷ್ಣವ ಧರ್ಮದ ಮುಖ್ಯ ಕೇಂದ್ರಗಳಾಗಿದ್ದವು.

ಸಾಳುವ ನರಸಿಂಹನು ಆಳ್ವಿಕೆ ಮಾಡುವಾಗ ದಕ್ಷಿಣಭಾರತದಲ್ಲಿ ಶ್ರೀ ವೈಷ್ಣವ ಪಂಥವು ಪ್ರಖ್ಯಾತಿಯನ್ನು ಪಡೆದುಕೊಂಡಿತು. ಮುಂದೆ ವಿಶಿಷ್ಟಾದ್ವೈತ ಪಂಥದಲ್ಲಿ ವಡಗಲೈ, ತೆಂಗಲೈ ಎಂಬ ಎರಡು ಭಾಗಗಳಾದ ಮೇಲೆ ತೆಂಗಲೈ ಪಂಥದವರು ಶ್ರೀ ವೈಷ್ಣವ ಧರ್ಮಕ್ಕೆ ಪ್ರೋತ್ಸಾಹ ನೀಡಿದರು. ಈ ಪಂಥದ ಮುಖ್ಯ ಆಚಾರ್ಯರಲ್ಲಿ ಕಂದಾಡೆ ರಾಮಾನುಜಯ್ಯಂಗಾರ್ ಪ್ರಮುಖರು. ಇವರು ಈ ಪಂಥದ ಧರ್ಮ ಪ್ರಸಾರವನ್ನು ಕೈಗೊಂಡು ಅನೇಕ ದೇವಾಲಯಗಳಲ್ಲಿ ಪಾಂಚರಾತ್ರಾಗಮ ಪೂಜಾವಿಧಿಗಳನ್ನು ಹೊಸದಾಗಿ ಅಳವಡಿಸಿದರು. ಅವರ ಕಾರ್ಯಕ್ಷೇತ್ರವು ವೆಂಕಟೇಶ್ವರನ ನೆಲೆಯಾದ ತಿರುಮಲೆಯಾಗಿತ್ತು.

ವಿಜಯನಗರ ಕಾಲದ ತಮಿಳು ಪ್ರದೇಶದಲ್ಲಿ ಈಗಾಗಲೇ ವೈಷ್ಣವ ಧರ್ಮವು ಪ್ರಸಿದ್ಧಿಗೆ ಬಂದಿದ್ದಿತು. ತಮಿಳು ಪ್ರದೇಶದ ಕಾಂಜೀವರಂ, ಶ್ರೀರಂಗಂ, ನಾಗಲಾಪುರಂ ಇನ್ನೂ ಅನೇಕ ವೈಷ್ಣವ ಕ್ಷೇತ್ರಗಳಿಗೆ ಈ ಅರಸರು ದಾನದತ್ತಿಯನ್ನು ಕೊಟ್ಟಿರುವುದು ಕಂಡುಬರುತ್ತದೆ. ಶ್ರೀರಂಗಂ ಅಂದಿನ ಪ್ರಸಿದ್ಧ ವೈಷ್ಣವ ಧರ್ಮದ ಮುಖ್ಯ ಕೇಂದ್ರವಾಗಿತ್ತು. ವಿಜಯನಗರದ ಅರಸರು ತಮಿಳು ಪ್ರದೇಶದ ದೇವಾಲಯಗಳಿಗೆ ದಾನದತ್ತಿಯನ್ನು ನೀಡಿದು ದಲ್ಲದೆ ಅನೇಕ ದೇವಾಲಯಗಳ ನಿರ್ಮಾಣಕಾರ್ಯ ಹಾಗೂ ಜೀರ್ಣೋದ್ಧಾರ ಕಾರ್ಯಗಳನ್ನು ಕೈಗೊಂಡರು. ಮುಂದೆ ತುಳುವ ಅರಸರ ಕಾಲದಲ್ಲಿ ಶ್ರೀರಂಗಂ ದೇವಾಲಯವು ವಿಪುಲವಾದ ದಾನದತ್ತಿಗಳನ್ನು ಸ್ವೀಕರಿಸಿತು.

ತಮಿಳು ಪ್ರದೇಶದಲ್ಲಿ ಕ್ರಿ.ಶ. ೯ನೇ ಶತಮಾನದಿಂದ ವೈಷ್ಣವಪಂಥದ ಪ್ರಭಾವವನ್ನು ತಮಿಳು ಪ್ರದೇಶದಲ್ಲಿ ಕಾಣುತ್ತೇವೆ. ಈ ಸಂಪ್ರದಾಯದಲ್ಲಿ ಮೊದಲಿಗೆ ಕಾಣಸಿಕೊಳ್ಳುವವರೆಂದರೆ ಆಳ್ವಾರರು. ಇವರು ಸುಮಾರು ೮ನೇ ಶತಮಾನದಲ್ಲಿ ಇದ್ದಂತಹ ಭಕ್ತಾದಿಗಳು. ಇವರ ಒಟ್ಟುಸಂಖ್ಯೆ ಹನ್ನೆರಡಾಗಿದ್ದು ಇವರು ತಮಿಳು ಭಾಷೆಯಲ್ಲಿ ದೇವರ ಮೇಲಿನ ಭಕ್ತಿಪೂರ್ವಕವಾದ ಪದ್ಯಗಳನ್ನು ಹಾಡಿ ಜನರಲ್ಲಿ ಭಕ್ತಿ ಪ್ರಸಾರ ಮಾಡುತ್ತಿದ್ದರು. ಈ ಹಾಡುಗಳಿಗೆ ಪ್ರಬಂಧಗಳೆಂದು ಕರೆಯುತ್ತಾರೆ. ದಕ್ಷಿಣಭಾರತದ ವೈಷ್ಣವ ಗುಡಿಗಳಲ್ಲಿ ಆಳ್ವಾರರ ಪೂಜೆ ಇಂದಿಗೂ ನಡೆಯುತ್ತದೆ. ವೈಷ್ಣವರ ದೇವಾಲಯಗಳಲ್ಲಿ ಪೂಜೆಯ ಕಾಲಕ್ಕೆ ಪ್ರಬಂಧಗಳೊಳಗಿನ ಪದ್ಯಗಳನ್ನು ಹೇಳುವ ಪರಿಪಾಠವು ವಿಜಯನಗರದ ದೇವಾಲಯಗಳಲ್ಲಿಯೂ ಕಂಡುಬರುತ್ತದೆ.

ವೈಷ್ಣವ ಧರ್ಮದಲ್ಲಿ ವಿಶಿಷ್ಟಾದ್ವೈತ ಪಂಥವು ಹುಟ್ಟಿಕೊಂಡಿತು. ಇದರ ಮೂಲಪುರುಷನು ನಾಥಮುನಿ ಯಾಗಿರುವನು. ಈತನ ತತ್ವಗಳನ್ನು ಮುಂದೆ ಬೆಳೆಸಿದ ಇನ್ನೊಬ್ಬ ಸಂತನೆಂದರೆ ಯಮುನಾಚಾರ್ಯರು. ಇವರು ಹೆಚ್ಚು ಉತ್ಸಾಹದಿಂದ ತಮ್ಮ ಕಾಲದಲ್ಲಿ ಕೆಲಸ ಮಾಡಿ ಪೀಠಾಧಿಪತಿಯಾಗಿದ್ದರು. ಈ ಆಚಾರ್ಯರು ತನ್ನ

ತರುವಾಯ ಶ್ರೀರಂಗಂದ ವೈಷ್ಣವ ಪೀಠದ ಉತ್ತರಾಧಿಕಾರಿಯನ್ನಾಗಿ ಶ್ರೀ ರಾಮಾನುಜಾಚಾರ್ಯರನ್ನು ನೇಮಿಸಬೇಕಾಗಿ ಸೂಚಿಸಿದ್ದರು. ಯಮುನಾಚಾರ್ಯರ ಪ್ರಯತ್ನದಿಂದ ವಿಶಿಷ್ಟಾದ್ವೈತ ಮತವು ವಿಶೇಷವಾಗಿ ಬೆಳೆದು ಹೆಚ್ಚಿನ ಪ್ರದೇಶಗಳಲ್ಲಿ ಹರಡುವುದಕ್ಕೆ ಕಾರಣವಾಯಿತು. ಈ ವಿಶಿಷ್ಟಾದ್ವೈತ ತತ್ವಗಳನ್ನು ಮುಂದೆ ರಾಮಾನುಜಾಚಾರ್ಯರು ಬೆಳಸಿ, ಪೋಷಿಸಿ ಸಂಸ್ಥಾಪಿಸಿದರು. ತಮಿಳುನಾಡಿನಲ್ಲಿ ಇವರ ಪ್ರಭಾವದಿಂದ ವೈಷ್ಣವ ಧರ್ಮವು ಹೆಚ್ಚು ಪ್ರಸಾರಗೊಂಡು ಅನೇಕ ವೈಷ್ಣವ ದೇವಾಲಯಗಳು ಸ್ಥಾಪನೆಗೊಂಡವು. ಇವರು ವೈಷ್ಣವ ಕ್ಷೇತ್ರಗಳ ದರ್ಶನ ಮತ್ತು ಮತಪ್ರಚಾರಕ್ಕಾಗಿ ಪ್ರವಾಸವನ್ನು ಕೈಗೊಂಡರು. ರಾಮಾನುಜಾಚಾರ್ಯರ ಹಿಂದೆಯೇ ಚೋಳರ ಆಳ್ವಿಕೆಯಲ್ಲಿದ್ದ ಮೈಸೂರಿನ ಪೂರ್ವಭಾಗದಲ್ಲಿ ಶ್ರೀ ವೈಷ್ಣವರಿದ್ದರೆಂದು ಮಾರೇಹಳ್ಳಿ, ತಡಿಮಾಲಂಗಿ ಮುಂತಾದ ಶಾಸನಗಳಿಂದ ತಿಳಿದುಬರುವುದು. ಆದುದರಿಂದ ರಾಮಾನುಜಾಚಾರ್ಯರು ಚೋಳರ ಹಿಂಸೆಯಿಂದ ತಪ್ಪಿಸಿಕೊಳ್ಳಲು ಮೈಸೂರು ಪ್ರಾಂತ್ಯಕ್ಕೆ ಬರಲಿಲ್ಲವೆಂದೂ ಇಲ್ಲಿದ್ದ ಶ್ರೀವೈಷ್ಣವ ಮತವನ್ನು ಮತ್ತಷ್ಟು ಪ್ರಬಲಗೊಳಿಸಲು ಬಂದರೆಂದೂ ಊಹಿಸುವುದು ಸೂಕ್ತವಾಗಿದೆ."[೧೭]

ತಮಿಳುನಾಡಿನಲ್ಲಿ ವೈಷ್ಣವ ಧರ್ಮವು ಬಹುಶಃ ಕ್ರಿಸ್ತಶಕದ ಆದಿಯಲ್ಲಿ ಆರಂಭವಾದರೂ, ಅದರ ಯೋಜನೆಯ ಕಾರ್ಯವನ್ನು ನಾಥಮುನಿಗಳೇ ಆರಂಭಿಸಿದರು. ಅದಕ್ಕೆ ಪೂರ್ಣರೂಪವು ಸಿಕ್ಕು ಅದೊಂದು ಸಿದ್ಧಾಂತವಾಗಿ ನೆಲೆಗೊಂಡದ್ದು ಶ್ರೀರಾಮಾನುಜಾರ್ಯರಿಂದ ಕ್ರಿ.ಶ. ೧೨ನೇ ಶತಮಾನದಲ್ಲಿ.[೧೮] ಮುಂದೆ ಬಂದಂತಹ ವೇದಾಂತ ದೇಶಿಕರು ಈ ತತ್ವಪ್ರಸಾರದಲ್ಲಿ ಪ್ರಮುಖಪಾತ್ರ ವಹಿಸಿ, ಅತ್ಯಂತ ದೊಡ್ಡ ವಿದ್ವಾಂಸರಾಗಿ ಹಲವು ಕೃತಿಗಳನ್ನು ರಚಿಸಿದರು. "ಭಾಗವತದ ಪ್ರಕಾರ ದಕ್ಷಿಣಭಾರತವೇ ಭಕ್ತಿಯ ತವರೂರು ಆಗಿದ್ದಿತು."[೧೯] ಇವರು ಹೊಯ್ಸಳರ ಕಾಲಕ್ಕೆ ಬೇಲೂರು, ಮೇಲುಕೋಟೆಗಳಲ್ಲಿ ಸಂಚರಿಸಿ ವಿಷ್ಣುದೇವಾಲಯವನ್ನು ಕಟ್ಟಿಸಿದರು. ಹೊಯ್ಸಳರ ಅರಸನನ್ನು ಜೈನ ಧರ್ಮದಿಂದ ವೈಷ್ಣವಧರ್ಮಕ್ಕೆ ಮತಾಂತರಗೊಳಿಸಿದುದು ಅವರ ಪ್ರಮುಖ ಸಾಧನೆಯಾಗಿದ್ದಿತು. ಇದರ ಪ್ರಭಾವದಿಂದ ಮುಂದೆ ವಿಜಯನಗರ ಕಾಲದಲ್ಲಿ ವೈಷ್ಣವ ಧರ್ಮವು ಉನ್ನತಿಯನ್ನು ಪಡೆದುಕೊಂಡಿತು.

ಶ್ರೀ ರಾಮಾನುಜಾಚಾರ್ಯರಿಂದ ಪ್ರಭಾವಿತವಾದ ಶ್ರೀ ವೈಷ್ಣವ ಧರ್ಮವು ಕರ್ನಾಟಕ, ಆಂಧ್ರಪ್ರದೇಶಗಳಲ್ಲೂ ಪ್ರಚಾರಕ್ಕೆ ಒಮ್ಮೆಲೇ ಬಂದಿತು. ಆಂಧ್ರನಾಡಿನ ವೈಷ್ಣವ ದೇವಾಲಯಗಳಲ್ಲಿ ಈ ಪ್ರಭಾವದಿಂದ ದೇವರುಗಳಿಗೆ ತಮಿಳು ನಾಮಕರಣಗಳೂ ಬಂದವು. ಉದಾ: ತಿರುಮಲೆಯ ದೇವರಿಗೆ ತಿರುವೇಂಗಡನಾಥ, ವರದರಾಜ ಪೆರುಮಾಳ್, ಇತ್ಯಾದಿ.

ವೈಷ್ಣವ ಧರ್ಮ ಮತ್ತು ಕೃಷ್ಣದೇವರಾಯ

ವಿಜಯನಗರ ಅರಸರು ಆರಂಭದಲ್ಲಿ ಶೈವ, ವೈಷ್ಣವ ಹಾಗೂ ಜೈನ ಧರ್ಮೀಯರಿಗೆ ಹೇರಳವಾಗಿ ದಾನದತ್ತಿಗಳನ್ನು ನೀಡಿರುವರು. ಇದರ ಜೊತೆಗೆ ಸಣ್ಣಪುಟ್ಟ ಧಾರ್ಮಿಕ ಮಠಗಳಿಗೂ ದಾನಮಾಡಿದ್ದಾರೆ. ಇದು ಆಯಾಯ ಧರ್ಮಗಳಲ್ಲಿ ನಂಬಿಕೆಯಿದ್ದ ಜನಸಾಮಾನ್ಯರಲ್ಲಿ ಸಾಮ್ರಾಜ್ಯದ ಬಗ್ಗೆ ನಿಷ್ಠೆ ಉಂಟಾಗಲಿ ಎಂಬ

ದೃಷ್ಟಿಯಿಂದ ಮಾಡಿದ ಒಂದು ರಾಜಕೀಯ ತಂತ್ರ. ಅರಸರು, ಅಧಿಕಾರಿವರ್ಗದವರು ದೇವಾಲಯಗಳಿಗೂ, ಮಠಾಧೀಶರಿಗೂ ಹಾಗೂ ಅರ್ಹ ವ್ಯಕ್ತಿಗಳಿಗೂ ಹೊಸ ದಾನಗಳನ್ನು ಮಾಡುತ್ತಿದ್ದರೂ, ತಮ್ಮ ಪೂರ್ವಜರು ಹಿಂದೆ ಮಾಡಿ ಹೋಗಿದ್ದ ದಾನಾದಿ ಸತ್ಕರ್ಮಗಳನ್ನು ಮುಂದೆ ಪಾಲಿಸಿಕೊಂಡು ಹೋಗುವುದರಲ್ಲಿಯೂ ಆಸಕ್ತಿ ವಹಿಸುತ್ತಿದ್ದರು. ಆದುದರಿಂದ ಅರಸರು ಸ್ವಧರ್ಮವನ್ನು ಶ್ರದ್ಧೆಯಿಂದ ಹಿಂಬಾಲಿಸುತ್ತಾ ಬರುವುದರ ಜೊತೆಗೆ ಪರಧರ್ಮಗಳ ಬಗೆಗೆ ಸಹಿಷ್ಣುತೆಯನ್ನು ತೋರುತ್ತಾ ಬಂದಿದ್ದಾರೆ. ಅಲ್ಲದೆ ಪ್ರತಿಯೊಬ್ಬರಿಗೂ ಅವನ ಒಲವಿನ ಧರ್ಮವನ್ನು ಹಿಂಬಾಲಿಸುವ ಸ್ವಾತಂತ್ರ್ಯವನ್ನು ನೀಡಿದ್ದರು.

ವಿಜಯನಗರದ ಅರಸರು ನೀಡಿದ ಉದಾರ ಪ್ರೋತ್ಸಾಹದಿಂದ ನಾಡಿನ ಉದ್ದಗಲಕ್ಕೂ ಎಲ್ಲಾ ಧರ್ಮಗಳು ಹರಡಿಕೊಂಡಿದ್ದವು. ರಾಯನ ಕಾಲದ ಧಾರ್ಮಿಕ ಪರಂಪರೆಯನ್ನು ಅರಿಯಲು ಶಾಸನಗಳು, ಸಾಹಿತ್ಯ ಕೃತಿಗಳು, ವಿದೇಶಿಯರ ಬರವಣಿಗೆಗಳು, ಸ್ಮಾರಕಗಳು, ಶಿಲ್ಪಗಳು, ನಾಣ್ಯ ಆಧಾರಗಳು ಸಹಾಯಕವಾಗಿವೆ. ಇಲ್ಲಿ ಮುಖ್ಯವಾಗಿ ರಾಯನು ವೈಷ್ಣವ ಧರ್ಮಕ್ಕೆ ನೀಡಿದ ಪ್ರೋತ್ಸಾಹವನ್ನು ವಿಶ್ಲೇಷಿಸಲಾಗುತ್ತದೆ. ಆದರೆ ರಾಯನ ಮತಧರ್ಮವನ್ನು ತಿಳಿಯುವುದು ಕಷ್ಟಸಾಧ್ಯವೇ ಸರಿ. 'ರಾಯನು ತನ್ನ ನಿತ್ಯ ಜೀವನದಲ್ಲಿ ಮೆಚ್ಚಿಕೊಂಡಿದ್ದ ಮತಧರ್ಮವೇನೋ ತಿಳಿಯದು. ಅವನದೆನ್ನುವ 'ಆಮುಕ್ತಮಾಲ್ಯದ' ಎಂಬ ಗ್ರಂಥವನ್ನು ತೋರಿಸಿ ಅದನ್ನು ಬರೆದ ಅವನು ಶ್ರೀ ವೈಷ್ಣವ ಶ್ರದ್ಧಾಳು ಎನ್ನುವವರಿದ್ದಾರೆ. ಆದರೆ ಯಾವ ಶ್ರೀ ವೈಷ್ಣವ ಗುರುವೂ ಅವನಿಗೆ ಮಾರ್ಗದರ್ಶನ ಮಾಡಿದ ಉಲ್ಲೇಖ ಬರುವುದಿಲ್ಲ: ಯಾವ ಶ್ರೀ ವೈಷ್ಣವ ಆಚಾರ್ಯರಿಗೂ ಅವನು ವಿಶೇಷವಾದ ಸನ್ಮಾನ ಮಾಡಿದ ಪ್ರಸಂಗ ಕಂಡುಬರುವುದಿಲ್ಲ. ಬೆಟ್ಟದ ತಿರುಮಲೆಯ ವಿಚಾರವಾಗಿ ಅವನು ನಡೆದುಕೊಂಡ ಬಗೆಯಲ್ಲಿ ಶ್ರೀ ವೈಷ್ಣವ ಪಕ್ಷಪಾತ ಅವನಿಗಿದ್ದಿತೆನ್ನಲು ಬರುವುದಿಲ್ಲ. ಏಕೆಂದರೆ ಅವನ ಪುರೋಹಿತರು ರಂಗಾದೀಕ್ಷಿತರು, ಶಿವದೀಕ್ಷಿತರು, ಯಜ್ಞನಾರಾಯಣಭಟ್ಟರು. ಅವನು ವಿಶೇಷವಾಗಿ ಪುರಸ್ಕರಿಸಿದ ಧರ್ಮಗುರುಗಳೆಂದರೆ ವ್ಯಾಸತೀರ್ಥರು. ಇಷ್ಟನ್ನು ಬಿಟ್ಟು ಅವನಿಗೂ ಮಾಧ್ವ ಸಂಪ್ರದಾಯಕ್ಕೂ ಏನೇನೂ ಸಂಬಂಧವಿಲ್ಲ."[೨೦]

ರಾಯನ ಕಾಲದ ವೈಷ್ಣವಧರ್ಮವನ್ನು ಅರಿಯುವಲ್ಲಿ ಶಾಸನಗಳು ಬಹಳಷ್ಟು ಸಹಾಯಕವಾಗುತ್ತವೆ. ಅಂದಿನ ಅರಸರಿಂದ ಹಿಡಿದು, ರಾಣಿಯರು, ಸಾಮಂತರು, ಅಧಿಕಾರಿವರ್ಗದವರು, ಜನಸಾಮಾನ್ಯರು ದೇವಾಲಯ ಹಾಗೂ ಮಠಗಳಿಗೆ ನೀಡಿದ ಉದಾರ ದಾನದತ್ತಿಗಳನ್ನು ನಾವು ನೋಡಬಹುದು. ಈ ಮೂಲಾಧಾರಗಳಿಂದ ಅಂದಿನ ಅರಸರ ಧಾರ್ಮಿಕ ಒಲವು ಯಾವ ಧರ್ಮದ ಕಡೆಗೆ ಇದ್ದಿತೆನ್ನುವುದು ತಿಳಿಯುತ್ತದೆ. ಅವರು ನೀಡಿರುವ ದತ್ತಿಗಳನ್ನು ಶಾಸನಗಳು ವಿವರವಾದ ಮಾಹಿತಿಯನ್ನು ಒದಗಿಸುತ್ತವೆ. ರಾಯನ ಕಾಲದ ಶಾಸನಗಳಲ್ಲಿ ಶೇಕಡಾ ೮೦ ರಷ್ಟು ದಾನದತ್ತಿಯ ಶಾಸನಗಳಾಗಿವೆ. ಅದೇ ರೀತಿಯಾಗಿ ಧರ್ಮವನ್ನು ಅಭ್ಯಸಿಸುವಾಗ ಸಾಹಿತ್ಯ ಚರಿತ್ರೆಯು ಬಹಳ ಮುಖ್ಯವಾಗುತ್ತದೆ. ಮತಧರ್ಮವೆಂಬುದು ಕವಿಗಳ, ಸಾಹಿತಿಗಳ ಒಂದು 'ದರ್ಶನ'ವಾಗಿತ್ತು. ಇದರಿಂದ ಧಾರ್ಮಿಕ ಪ್ರಸಾರವನ್ನು ಮಾಡಲಾಗಿದ್ದು ಅನೇಕ ಸಾಹಿತ್ಯ ಕೃತಿಗಳಿಂದ ತಿಳಿಯಬಹುದು. ಧರ್ಮವೆಂಬ ಚೌಕಟ್ಟಿನಲ್ಲಿ ಸಾಹಿತ್ಯವು ಬೆಳೆದುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ವೈದಿಕ ಸಾಹಿತ್ಯವು ವಿಪುಲವಾಗಿ ಬೆಳೆಯಿತು. "ಈ ಕಾಲದ ಧಾರ್ಮಿಕ ಪರಂಪರೆಯನ್ನು ಬಿಡದೆ ಸಮಾಜದ ಅವಿಭಾಜ್ಯ ಅಂಗವಾಗಿ

ನಿಂತು, ಧರ್ಮರಕ್ಷಣೆ ಮತ್ತು ಸಾಹಿತ್ಯವನ್ನು ಬೆಳೆಸಿದ ಕೀರ್ತಿ ವೈಷ್ಣವರಿಗೆ ಸಲ್ಲುತ್ತದೆ."[೨೧] ಹೀಗೆ ಒಂದು ಕಡೆ ಜನಸಾಮಾನ್ಯರಿಗೆ ಅರ್ಥವಾಗುವ ಪ್ರಾಂತೀಯ ಭಾಷೆಯಲ್ಲಿ ಧಾರ್ಮಿಕ ತತ್ವಗಳನ್ನು ಪ್ರಸಾರಮಾಡಿದ್ದಲ್ಲದೆ, ಕನ್ನಡ ಮತ್ತು ಸಂಸ್ಕೃತ ಸಾಹಿತ್ಯದ ಶ್ರೇಷ್ಠತೆಯನ್ನು ಬೆಳೆಸಿದ ಕೀರ್ತಿ ಭಕ್ತಿಪಂಥದಲ್ಲಿ ಕಾಣುತ್ತೇವೆ.

ರಾಯನ ಕಾಲದ ವೈಷ್ಣವ ಧಾರ್ಮಿಕ ನೀತಿಯನ್ನು ಅರಿಯುವಲ್ಲಿ ವಿದೇಶಿಯರು ಮಹತ್ವದ ದಾಖಲೆಗಳನ್ನು ನೀಡಿದ್ದಾರೆ. ಡೂಆರ್ಟ್ ಬಾರ್ಬೋಸನು ಕ್ರಿ.ಶ. ೧೫೦೦ ರಿಂದ ೧೫೧೬ರವರೆಗೆ ದಕ್ಷಿಣಭಾರತದಲ್ಲಿ ಸಂಚರಿಸಿದ ಒಬ್ಬ ಪೋರ್ಚುಗೀಸ್ ಅಧಿಕಾರಿ. ಅವನ ಬರವಣಿಗೆಯಲ್ಲಿ ವಿಜಯನಗರದ ವಿಸ್ತೃತವಾದ ವರ್ಣನೆಯಿದೆ. ಅವನು "ನಾನು ಪ್ರತ್ಯಕ್ಷ ಕಂಡದರ ಜೊತೆಗೆ ಮುಸ್ಲಿಮರು, ಕ್ರೈಸ್ತರು, ಹಿಂದೂಗಳನ್ನು ಕಂಡು ಅವರ ನಡೆನುಡಿ, ಆಚಾರ ವಿಚಾರ ವ್ಯವಹಾರಗಳ ಬಗ್ಗೆ ಕೇಳಿ ತಿಳಿದುಕೊಂಡು ಸತ್ಯವೆಂದು ನಿರ್ಧಾರವಾದ ಮೇಲೆ ಬರೆದಿದ್ದೇನೆ ಎನ್ನುತ್ತಾನೆ." ಡೊಮಿಂಗೋ ಪಾಯೇಸನು ಕೂಡ ಕ್ರಿ.ಶ. ೧೫೧೮ ರಿಂದ ೧೫೨೨ ರ ವರೆಗೆ ವಿಜಯನಗರದಲ್ಲಿದ್ದನು. ಇವನು ಪೋರ್ಚುಗೀಸ್ ರಾಯಭಾರಿಯೊಡನೆ ಬಂದವನಾಗಿದ್ದನು. ಆದ್ದರಿಂದ ಅವನಿಗೆ ರಾಜನ ಬಗ್ಗೆ ಅವನ ಪರಿವಾರ, ಉತ್ಸವಗಳ ಬಗ್ಗೆ ಹಾಗೂ ಅಂದಿನ ಆಚಾರ ವ್ಯವಹಾರಗಳ ಬಗ್ಗೆ ವಿಸ್ತೃತವಾದ ವರ್ಣನೆಗಳನ್ನು ನೀಡಿರುವನು. ಇವನ ಬರಹಗಳಲ್ಲಿ ಅಂದಿನ ಧರ್ಮದ ಬಗ್ಗೆ ಕೆಲವು ಮಾಹಿತಿಗಳು ದೊರೆಯುವುದರಿಂದ ವಿದೇಶಿ ಯಾತ್ರಿಕರ ವರದಿಗಳು ಪರೋಕ್ಷ ಮಾಹಿತಿಯನ್ನು ಒದಗಿಸುತ್ತವೆ.

ಅಂದಿನ ಧಾರ್ಮಿಕ ಸ್ಥಿತಿಯನ್ನು ತಿಳಿಯುವಲ್ಲಿ ಸ್ಮಾರಕ, ಶಿಲ್ಪ, ನಾಣ್ಯಗಳು ಬಹಳ ಮಹತ್ವವಾದ ಮಾಹಿತಿಯನ್ನು ಒದಗಿಸುತ್ತವೆ. ಅಂದಿನ ಅರಸರು ನೀಡಿದ ಪ್ರೋತ್ಸಾಹದ ಫಲವಾಗಿ ಧರ್ಮಗಳ ಪ್ರತಿರೂಪಗಳಾದ ದೇವಾಲಯಗಳು ಅಧಿಕ ಸಂಖ್ಯೆಯಲ್ಲಿ ನಿರ್ಮಾಣವಾಗಿ ಅನೇಕ ರೀತಿಯ ದಾನದತ್ತಿಗಳನ್ನು ಪಡೆದುಕೊಂಡವು. ರಾಯನ ಕಾಲದಲ್ಲಿ ವೈಷ್ಣವ ದೇವಾಲಯಗಳು ನಿರ್ಮಾಣಗೊಂಡವಲ್ಲದೆ ಹಳೆಯ ದೇವಾಲಯಗಳು ಜೀರ್ಣೋದ್ಧಾರಗೊಂಡು ದಾನದತ್ತಿಯನ್ನು ಹೊಂದಿದವು. ಸಾಮ್ರಾಜ್ಯದಾದ್ಯಂತ ನಿರ್ಮಾಣಗೊಂಡ ಶಿಲ್ಪಗಳು ಅಂದಿನ ಅರಸರಿಗಿದ್ದ ಧಾರ್ಮಿಕ ಒಲವನ್ನು ಎತ್ತಿ ತೋರಿಸುತ್ತವೆ. ಇನ್ನು ಅರಸರು ತಮ್ಮ ವಿಜಯದ ಸವಿನೆನಪಿಗಾಗಿ ಹಾಗೂ ಆಡಳಿತ ವ್ಯವಹಾರಕ್ಕಾಗಿ ಟಂಕಿಸುತ್ತಿದ್ದ ನಾಣ್ಯಗಳೂ ಧಾರ್ಮಿಕತೆಯ ಅಂದಿನ ಸಾಂಸ್ಕೃತಿಕ ಚಿತ್ರಣವನ್ನು ಪ್ರತಿಬಿಂಬಿಸುವಲ್ಲಿ ಮಹತ್ವದ್ದಾಗಿವೆ. ಈ ಎಲ್ಲ ಮೂಲಾಧಾರಗಳಿಂದ ಅಂದಿನ ಧಾರ್ಮಿಕ ಪರಿಸರವನ್ನು ಅಧ್ಯಯನ ಮಾಡಿದಾಗ ವೈಷ್ಣವಧರ್ಮದ ಆಚಾರ ವಿಚಾರಗಳನ್ನು ಅರಿಯುವಲ್ಲಿ ಸಹಾಯಕವಾಗುತ್ತವೆ.

ಕೃಷ್ಣದೇವರಾಯ ಧರ್ಮಶ್ರದ್ಧೆಯುಳ್ಳವನೆಂದು ಪ್ರಸಿದ್ಧನಾಗಿದ್ದನು. ಇವನು ಹಿಂದಿನಿಂದ ಬಂದ ಆಚಾರ ವಿಚಾರ ಸಂಪ್ರದಾಯಗಳನ್ನು ತಪ್ಪದೆ ಪಾಲಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ವರ್ಣಾಶ್ರಮ ಧರ್ಮರಕ್ಷಣೆ ವಿಜಯನಗರದ ಅರಸರ ಧ್ಯೇಯಗಳಲ್ಲಿ ಒಂದಾಗಿತ್ತು. "ತ್ರಯೀ ಧರ್ಮೈಕಸಂರಕ್ಷಣ" ಎಂಬ ತತ್ವದ ಅಡಿಯಲ್ಲಿ ತಮ್ಮ ಆಳ್ವಿಕೆಯನ್ನು ನಡೆಸುತ್ತಿದ್ದರು. "ಈ ಉಲ್ಲೇಖವನ್ನು ಮನುಚರಿತ್ರೆಯಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ."[೨೨] ಧರ್ಮಪ್ರತಿಪಾಲಕ ಎಂಬ ಪ್ರಶಂಸೆಗೆ ಪಾತ್ರನಾಗಿದ್ದ ಕೃಷ್ಣದೇವರಾಯನ ಕಾಲದಲ್ಲಿ ಚಾತುರ್ವರ್ಣವ್ಯವಸ್ಥೆ ಇತ್ತು ಎಂಬುದು ನಿಸ್ಸಂಶಯವಾಗಿ ಶಾಸನ ಆಧಾರದಿಂದ ಹೇಳಬಹುದು.[೨೩] ರಾಯನ ಕಾಲದಲ್ಲಿ ಬ್ರಾಹ್ಮಣರು

ಅಗ್ರಸ್ಥಾನವನ್ನು ಪಡೆದುಕೊಂಡಿದ್ದರು. ಇದನ್ನು ರಾಯ ತನ್ನ ಆಮುಕ್ತಮಾಲ್ಯದ ಗ್ರಂಥದಲ್ಲಿ ಹೇಳಿರುವನು. ಬ್ರಾಹ್ಮಣರು ವಿದ್ವತ್ತಿನಿಂದಲೂ, ವೈದಿಕ ವೃತ್ತಿಯಿಂದಲೂ ಜೀವನ ನಡೆಸುತ್ತಿದ್ದರು. ದೇವಾಲಯದಲ್ಲಿ ಅರ್ಚಕರಾಗಿ, ಪುರೋಹಿತರಾಗಿ, ಜ್ಯೋತಿಷ್ಯರಾಗಿ ಜೀವನ ನಡೆಸುತ್ತಿದ್ದರು."[೨೪] ಅವರಿಗೆ ಧಾರ್ಮಿಕ ಪ್ರಸಾರ ಕಾರ್ಯದಲ್ಲಿ ಹೆಚ್ಚು ಪ್ರೋತ್ಸಾಹವನ್ನು ಅರಸ ನೀಡಿದ್ದನು.

ರಾಯ ಆಡಳಿತದಲ್ಲಿ ನುರಿತವನಾಗಿದ್ದು, ಸ್ವತಃ ರಾಜನೀತಿಗಳನ್ನು ಅಧ್ಯಯನ ಮಾಡುತ್ತಿದ್ದುದರಿಂದ ರಾಷ್ಟ್ರದ ಆದಾಯ, ಖರ್ಚು-ವೆಚ್ಚಗಳ ಬಗ್ಗೆ, ಅದನ್ನು ಧಾರ್ಮಿಕ ಕಾರ್ಯಗಳಿಗಾಗಿ ಎಷ್ಟೆಷ್ಟು ವ್ಯಯಮಾಡಬೇಕೆಂಬ ಆರ್ಥಿಕ ಸೂತ್ರವನ್ನು ತನ್ನ ಗ್ರಂಥ ಆಮುಕ್ತಮಾಲ್ಯದದಲ್ಲಿ ಹೇಳಿರುವನು.[೨೫] ಈ ಕೃತಿಯಲ್ಲಿ ಒಂದೆಡೆ ರಾಜನೀತಿಯನ್ನು ಹೇಳಿದ್ದರೆ, ಮತ್ತೊಂದೆಡೆ ಅರಸರ ಕರ್ತವ್ಯಗಳನ್ನು ಯಥಾವತ್ತಾಗಿ ಚಿತ್ರಿಸಿದ್ದಾನೆ. 'ಪ್ರಾತಃ ಕಾಲದಲ್ಲಿ ಬ್ರಾಹ್ಮಣರ ದರ್ಶನ ಮಾಡಬೇಕು; ಅಪರಾಹ್ನದಲ್ಲಿ ದೇವತಾರ್ಚನೆ ಮಾಡಿ ಆಯಾ ಧರ್ಮಾಭಿಕೃತರಾದ ಯತಿಗಳಿಗೆ ಸಂಭಾವನೆಯನ್ನು ನೀಡಿ ಊಟ ಮಾಡುವುದು ರಾಯನ ದಿನಚರಿಯಾಗಿತ್ತು.[೨೬]

ಕೃಷ್ಣದೇವರಾಯ ತನ್ನ ಪೂರ್ವಜರು ಸ್ವೀಕರಿಸಿದ್ದ ವೈಷ್ಣವಧರ್ಮದಲ್ಲಿ ಹೆಚ್ಚಿನ ಒಲವುಳ್ಳವನಾಗಿದ್ದುದು. ಅವನು ನೀಡಿದ ಪ್ರೋತ್ಸಾಹದಿಂದ ವ್ಯಕ್ತವಾಗುತ್ತದೆ. ತನ್ನ ಕಾರ್ಯಚಟುವಟಿಕೆಗಳಲ್ಲೂ ಅದನ್ನು ತುಂಬಾ ತೋರಿಸಿ ಕೊಟ್ಟಿದ್ದಾನೆ. ರಾಯ ಆಮುಕ್ತಮಾಲ್ಯದದಲ್ಲಿ "ಸದಾಚಾರದಿಂದ ಕೂಡಿ ಚಂದ್ರಾಯಣಾದಿ ವ್ರತಗಳಿಂದ ಶಾಂತಚಿತ್ತರಾದ ವೈಷ್ಣವರಿಗೆ ಧನಕನಕಾದಿಗಳನ್ನು ದಾನವಾಗಿತ್ತು, ರಾಜನು ತನ್ನ ಪಿತೃಗಳಿಗೆ ಉತ್ತಮ ಗತಿಯುಂಟು ಮಾಡಬೇಕು"[೨೭] ಎಂದು ಹೇಳಿರುವಲ್ಲಿ ಅವನ ಒಲವು ವೈಷ್ಣವರ ಕಡೆಗೆ ಹೆಚ್ಚು ಒಲಿದುದನ್ನು ಕಾಣುತ್ತೇವೆ. ರಾಯ ತನ್ನ ಕೃತಿ ಅಮುಕ್ತಮಾಲ್ಯದದಲ್ಲಿ ಪದೇ ಪದೇ ವೈಷ್ಣವ ಧರ್ಮದ ತಿರುಳನ್ನು ತುಂಬಲು ಪ್ರಯತ್ನಿಸಿದ್ದಾನೆ. ಆ ಕೃತಿಯನ್ನು ಬರೆಯುವ ಮೂಲಪ್ರೇರಣೆಯಿಂದಲೇ ಅದನ್ನು ಕಂಡುಕೊಳ್ಳಬಹುದು. ಕ್ರಿ.ಶ. ೧೫೧೯ರಲ್ಲಿ ರಾಯ ಕಟಕ್‌ಗೆ ಮುತ್ತಿಗೆ ಹಾಕಲು ಹೋದಾಗ ದಾರಿಯ ಮಧ್ಯದ ವಿಜಯವಾಡದಲ್ಲಿ ತಂಗಿದ್ದಾಗ ಅಂದು ಏಕಾದಶಿಯ ವ್ರತದಲ್ಲಿದ್ದ ರಾಯನಿಗೆ ರಾತ್ರಿ ಕನಸಿನಲ್ಲಿ ಶ್ರೀಕಾಕುಳದ (ಆಂಧ್ರ) ವಿಷ್ಣುವು ಕಾಣಿಸಿಕೊಂಡು ಒಂದು ಕೃತಿಯನ್ನು ಬರೆದು ಅಂಕಿತ ಮಾಡು ಎಂದು ಹೇಳಿದನು. ಅದರಂತೆಯೇ ತಮಿಳುದೇಶದ ಶ್ರೀವಲ್ಲಿ ಪುತ್ತೂರಿನಲ್ಲಿ ಕ್ರಿ.ಶ. ೭೬೫ರಲ್ಲಿ ನಡೆದ ಕಥೆಯ ಆಧಾರದಿಂದ ತನ್ನ ಆಮುಕ್ತಮಾಲ್ಯದ ಕೃತಿಯನ್ನು ರಚಿಸಿದ್ದಾನೆ. ಇಲ್ಲಿ ಆಂಧ್ರವಿಷ್ಣುವಿನ ಅನುಗ್ರಹವೇ ಅವನಿಗೆ ಪರಮವೇದವಾಗಿರುವುದು ಕಂಡುಬರುತ್ತದೆ. ಅದೇ ರೀತಿ ಅದಕ್ಕೆ ಆರಿಸಿಕೊಂಡ ವಸ್ತುವು ಕೂಡಾ ಶ್ರೀವೈಷ್ಣವ ಮತಕ್ಕೆ ಸೇರಿದ ಗೋದಾದೇವಿ (ಆಂಡಾಳ್) ಹಾಗೂ ವಿಷ್ಣುಚಿತ್ತ ಎನ್ನುವ ಆಳ್ವಾರರ ಚರಿತ್ರೆಯನ್ನು ಏಳು ಆಶ್ವಾಸಗಳಲ್ಲಿ ಬರೆದಿರುವುದು ಗಮನಾರ್ಹ.

ಪರಮ ವಿಷ್ಣುಭಕ್ತನಾದ ಶ್ರೀಕೃಷ್ಣದೇವರಾಯ ಶ್ರೀಹರಿಕಟಾಕ್ಷದ ಅನುಗ್ರಹದಿಂದ ಬರೆದ 'ಆಮುಕ್ತಮಾಲ್ಯದ' ಪ್ರಬಂಧಕಾವ್ಯವು ತೆಲುಗಿನ ಪಂಚಮಹಾಕಾವ್ಯಗಳಲ್ಲಿ ಒಂದೆಂದು ಆಂಧ್ರಪಂಡಿತರ ಮನ್ನಣೆಗೆ ಪಾತ್ರವಾಗಿದೆ. ಇದರ ವಿಷಯ ವಸ್ತುಗಳು ಯಾಮುನಾಚಾರ್ಯರ ಕಥೆಗಳನ್ನು ಶ್ರೀ ವೈಷ್ಣವ ಮತಚಾರ್ಯರ ಚರಿತ್ರೆಯಿಂದ ಆರಿಸಿಕೊಂಡ ವಸ್ತುಗಳಾಗಿವೆ. ಬ್ರಹ್ಮರಾಕ್ಷಸರ ಸಂವಾದ ಕಥೆಯು ವರಾಹಪುರಾಣದಿಂದ

ತೆಗೆದುಕೊಂಡಿದ್ದರೆ, ಖಾಂಡಿಕ್ಯ ಕೇಶಿಧ್ವಜ ಸಂವಾದವನ್ನು ವಿಷ್ಣುಪುರಾಣದಿಂದ ತೆಗೆದುಕೊಳ್ಳಲಾಗಿದೆ. ಪಾಂಡ್ಯ ರಾಜನಾದ ಮತ್ಸ್ಯಧ್ವಜನ ಕಥೆಯೂ ಆಮುಕ್ತಮಾಲ್ಯದದಲ್ಲಿದೆ. ಈ ಕಾವ್ಯದಲ್ಲಿ ಚಿತ್ರಿಸಿರುವ ಪ್ರಸಂಗಗಳು ರಾಜಧರ್ಮ, ಪ್ರಜಾಧರ್ಮ ಮತ್ತು ಭಾಗವತರ ಮನೋಧರ್ಮವನ್ನು ಬಿಂಬಿಸುವಲ್ಲಿ ರಾಯನು ತನ್ನ ಪ್ರತಿಭೆಯನ್ನು ಮೆರೆದಿದ್ದಾನೆ. ರಾಯನು ಈ ಪ್ರಬಂಧದ ಮೊದಲು ತನ್ನ ಇಷ್ಟದೈವನಾದ ತಿರುಮಲೆಯ ವೆಂಕಟೇಶ್ವರನನ್ನು ಸ್ತುತಿಸಿ, ವಿಷ್ಣುವಿನ ವಾಹನ ಮತ್ತು ದಂಡಧಿಕಾರಿಯಾದ ಗರುಡ, ವಿಶ್ವಕ್ಸೇನರನ್ನು ವಂದಿಸಿ, ಮಹಾ ವಿಷ್ಣುವಿನ ಆಯುಧಗಳ ಪೈಕಿ ಬಹುಮುಖ್ಯವೆಂದು ಪರಿಗಣಿಸಲಾದ ಸುದರ್ಶನ ಚಕ್ರ, ಪಾಂಚಜನ್ಯ ಶಂಖ, ಕೌಮೋದಕೀ ಗಧೆ, ನಂದಕ ಖಡ್ಗ ಮತ್ತು ಸಾರಂಗ ಧನುಗಳನ್ನು ಹೊಗಳಿ ತರುವಾಯ ಹನ್ನೆರಡು ಮಂದಿ ಆಳ್ವಾರರನ್ನು ಸ್ಮರಿಸಿರುವುದು ಮುಖ್ಯವಾಗಿ ಕಂಡುಬರುತ್ತದೆ. ಇವು ರಾಯನಿಗಿದ್ದ ಭಕ್ತಿ ಭಾವಗಳ ಸಂಕೇತಗಳಾಗಿವೆ. ಇಲ್ಲಿ ಶ್ರೀ ವೆಂಕಟೇಶ್ವರನನ್ನೇ ನಾಲ್ಕು ಕಂದ ಪದ್ಯಗಳಲ್ಲಿ ಹೊಗಳಿ ಕಥೆಯನ್ನು ಪ್ರಾರಂಭಿಸಿದ್ದಾನೆ.

ರಾಯ 'ಆಮುಕ್ತಮಾಲ್ಯದ'ದಲ್ಲಿ ತನ್ನ ಮನದ ಇಂಗಿತದ ಧರ್ಮವನ್ನು ತೋರಿಸುವಲ್ಲಿ ಪದೇ ಪದೇ ನಮಗೆ ಮಾಹಿತಿಯನ್ನು ನೀಡುತ್ತ ಸಾಗಿರುವುದು ಕಾವ್ಯದಲ್ಲಿ ಕಂಡುಬರುತ್ತದೆ. ಯಾಮುನಾಚಾರ್ಯರ ಸನ್ನಿವೇಶವನ್ನು ನಿರೂಪಿಸುವಾಗ 'ವಿಷ್ಣುವೇ ಪರದೈವವೆಂಬ ತತ್ವವನ್ನು ಸ್ಥಾಪಿಸಿ ವಿಶಿಷ್ಟಾದ್ವೈತವೇ ವಿಷ್ಣುವಿನ ಅನುಗ್ರಹವನ್ನು ಸಾಧಿಸಿಕೊಡುವ ಮತವೆಂದು ಸಿದ್ಧಾಂತ ಮಾಡಿದುದು.[೨೦] ಸಾಮ್ರಾಜ್ಯದಲ್ಲಿ ವೈಷ್ಣವಧರ್ಮವನ್ನು ಸ್ವೀಕರಿಸುವ ಹಾಗೇ ಈ ಕಾವ್ಯದ ಮೂಲಕ ರಾಯ ಪ್ರಭಾವವನ್ನು ಬೀರಿರುವುದು ಗಮನಾರ್ಹ. ರಾಯ ತನ್ನ ಕಾವ್ಯದಲ್ಲಿ ಚಿತ್ರಿಸಿರುವ ದೈವಭಕ್ತಿಯು ಪಾರಲೌಕಿಕ ಸದ್ಗತಿ, ಧರ್ಮಾಚರಣೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದು ತೋರುತ್ತದೆ. ತನ್ನ ಜೀವಿತಕಾಲದಲ್ಲಿ ತಾನು ನಂಬಿದ ಧರ್ಮಪ್ರಚಾರಕ್ಕಾಗಿ ಅಮಿತವಾದ ಶ್ರಮವಹಿಸಿದುದು, ದೇವಾಲಯಗಳ ನಿರ್ಮಾಣ ಮತ್ತು ಶಿಲ್ಪಗಳನ್ನು ಮಾಡಿಸಿದುದಲ್ಲದೆ ಅನೇಕ ದೇವಾಲಯಗಳಿಗೆ ಧನಕನಕಗಳನ್ನು, ಮಾನ್ಯ ಗ್ರಾಮಗಳನ್ನು ಕಾಣಿಕೆಯಾಗಿ ನೀಡಿ ಅವುಗಳ ರಕ್ಷಣೆಗೆ ಮಹತ್ವ ನೀಡಿದ್ದುದು ಕಂಡುಬರುತ್ತದೆ. ರಾಯನು ಶ್ರೀ ವೈಷ್ಣವ ಧರ್ಮಪ್ರಚಾರಕ ಆಗಿದ್ದುದಲ್ಲದೆ, ರಾಯನ ಧರ್ಮಾಭಿಮಾನ ಅನನ್ಯವಾದದು. ಧಾರ್ಮಿಕ ಸಂಸ್ಥೆಗಳ ಪೋಷಣೆ, ಧರ್ಮಸಂರಕ್ಷಣೆಗಳು ರಾಜಕರ್ತವ್ಯಗಳೆಂದೇ ರಾಯನು ಭಾವಿಸಿದ್ದನು. ತನ್ನ ಆಸ್ಥಾನ ಕವಿಗಳಿಂದ ಅನೇಕ ಕಾವ್ಯ, ಕೃತಿಗಳನ್ನು ರಚನೆ ಮಾಡಿಸುವಲ್ಲಿ ರಾಯ ಪ್ರೋತ್ಸಾಹವನ್ನು ನೀಡಿ ಕುಮಾರವ್ಯಾಸಭಾರತದ ಮುಂದಿನ ಪರ್ವಗಳನ್ನು ಒಳಗೊಂಡ 'ಶ್ರೀಕೃಷ್ಣರಾಯಭಾರತ ಕಥಾಮಂಜರಿ' ಎಂಬ ಕಾವ್ಯವನ್ನು ತಿಮ್ಮಣ್ಣ ಕವಿಯಿಂದ ಬರೆಸಿದನು.

ಕೃಷ್ಣದೇವರಾಯನು ರಾಜ್ಯದಲ್ಲಿ ವಿಭಿನ್ನ ಧರ್ಮಗಳಿಗೆ ಪ್ರೋತ್ಸಾಹ ನೀಡಿ ಧರ್ಮಸಮನ್ವತೆಯನ್ನು ಕಾಪಾಡಿಕೊಂಡು ಬಂದಿದ್ದರೂ, ಆತನಿಗೆ ಶ್ರೀವೈಷ್ಣವ ಪಂಥದಲ್ಲಿ ವಿಶೇಷವಾದ ಒಲವು ಇದ್ದಿತು. ರಾಯನಿಗೆ ತಿರುಮಲೆಯ ತಿರುವೇಂಗಳನಾಥನು ಕುಲದೈವವಾಗಿದ್ದನು. ಆದ್ದರಿಂದಲೇ ತನ್ನ ಆಡಳಿತದ ಅವಧಿಯಲ್ಲಿ ಏಳು ಸಲ ತೀರ್ಥಯಾತ್ರೆ ಕೈಗೊಂಡು ದೇವಾಲಯದಲ್ಲಿ ತನ್ನ ಮತ್ತು ಇಬ್ಬರು ರಾಣಿಯರ ಭಕ್ತ ವಿಗ್ರಹಗಳನ್ನು ನಿಲ್ಲಿಸಿದನು. ಅವುಗಳನ್ನು ಇಂದಿಗೂ ನೋಡಬಹುದು. ಅದೇ ರೀತಿ ತನ್ನ ಮಗನಿಗೆ ತಿರುಮಲರಾಯನೆಂದು

ಹೆಸರಿಟ್ಟನು. ರಾಯನು ತಿರುಮಲಕ್ಕೆ ದರ್ಶನ ಪಡೆಯುವಲ್ಲಿ ಜೊತೆಗೆ ತನ್ನ ಇಬ್ಬರ ರಾಣಿಯರನ್ನು ಕರೆದುಕೊಂಡು ಬಂದಿದ್ದನ್ನು ಶಾಸನಗಳಿಂದ ತಿಳಿಯಬಹುದು. ಅವರಿಂದ ಅನೇಕ ಕಾಣಿಕೆಗಳನ್ನು ತನ್ನ ಆರಾಧ್ಯ ದೈವಕ್ಕೆ ಸಮರ್ಪಿಸಿದನು.

ಕೃಷ್ಣದೇವರಾಯನ ಆಳ್ವಿಕೆಯನ್ನು ವಿಜಯನಗರ ಕಾಲದ ಸುವರ್ಣಯುಗವೆಂದು ಕರೆಯುವರು. ಇದು ರಾಜಕೀಯ ಮತ್ತು ಸಾಂಸ್ಕೃತಿಕ ಔನ್ನತ್ಯವನ್ನು ಸಾಧಿಸಿದ ಕಾಲ. ರಾಯನಿಂದ ಟಂಕಿಸಲ್ಪಟ್ಟ ವೈವಿಧ್ಯಪೂರ್ಣ ಚಿನ್ನದ ನಾಣ್ಯಗಳಿಂದಲೇ ಇದನ್ನು ಸುವರ್ಣಯುಗವೆಂದು ತಿಳಿಯಬಹುದು. ವಿಜಯನಗರದ ನಾಣ್ಯಗಳು ಆ ಸಾಮ್ರಾಜ್ಯದ ರಾಜಕೀಯ ಮತ್ತು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಮಾತ್ರ ಅರ್ಥಪೂರ್ಣವಾಗಿ ಕಂಡುಬರುತ್ತವಲ್ಲದೆ ನಾಣ್ಯಗಳ ಮೇಲಿನ ಬರವಣಿಗೆಯಾಗಲೀ, ಚಿಹ್ನೆಯಾಗಲೀ, ದೇವ - ದೇವತೆಗಳಾಗಲೀ ಆ ಕಾಲದ ಸಂಸ್ಕೃತಿಯನ್ನು ಪ್ರತಿಬಿಂಬಿಸುವಲ್ಲಿ ಮಹತ್ವಪಾತ್ರ ವಹಿಸುತ್ತವೆ.

ರಾಯ ಕೊಂಡವೀಡು ಮತ್ತು ಉದಯಗಿರಿಗಳನ್ನು ಜಯಿಸಿ ಬರುವ ಕಾಲಕ್ಕೆ ತಿರುಮಲೆಗೆ ಭೇಟಿಯನ್ನಿತ್ತು, ವೆಂಕಟೇಶ್ವರನಿಗೆ ಕನಕಾಭಿಷೇಕವನ್ನು ಮಾಡಿದನು. ಇದಕ್ಕಾಗಿ ವಿಶಿಷ್ಟವಾದ ಚಿನ್ನದ ನಾಣ್ಯಗಳನ್ನು ಟಂಕಿಸಿದನು. ಇದರಿಂದ ರಾಯನಿಗೆ ತಿರುಮಲೆ ಸ್ವಾಮಿಯಲ್ಲಿದ್ದ ಭಕ್ತಿ-ಆದರಗಳು ಗೊತ್ತಾಗುತ್ತವೆ. ರಾಯನು ಟಂಕಿಸಿದ ನಾಣ್ಯಗಳಲ್ಲಿ ವೆಂಕಟೇಶ್ವರ, ಬಾಲಕೃಷ್ಣ, ಗರುಡ ಇತ್ಯಾದಿಗಳ ಚಿತ್ರಗಳಿವೆ.

"ವಿಜಯನಗರ ಕಾಲದಲ್ಲಿ ಕಾಣಬರುವ ಒಂದು ಪ್ರಮುಖ ಅಂಶವೆಂದರೆ ದೇವತೆಗಳನ್ನು ನಾಣ್ಯಗಳ ಮೇಲೆ ಬಳಸಿರುವುದು. ಆ ದೇವತೆಗಳೆಂದರೆ ಲಕ್ಷ್ಮೀನಾರಾಯಣ, ಲಕ್ಷ್ಮೀನರಸಿಂಹ ಇತ್ಯಾದಿ ದೇವತೆಗಳ ಹಾಗೂ ಅವರ ಪತ್ನಿಯರು ಪ್ರಮುಖರು. ಇದರಿಂದ ಈ ಕಾಲದಲ್ಲಿ ಹಿಂದೂಧರ್ಮವು ಸಾಕಷ್ಟು ಬದಲಾವಣೆಗಳನ್ನು ಹೊಂದಿ ದೇವತೆಗಳ ಜೊತೆಯಲ್ಲಿ ಸ್ತ್ರೀಶಕ್ತಿಯನ್ನು ಪೂಜಿಸುವ ಸಂಪ್ರದಾಯ ಬೆಳೆದು ಬಂದಿದ್ದನ್ನು ಕಾಣುತ್ತೇವೆ."[೨೯] ಶ್ರೀ ವೈಷ್ಣವ ಪಂಥದಲ್ಲಿ ಒಟ್ಟಾಗಿ ದೇವಾಲಯದಲ್ಲಿ ದೇವರ ಹಾಗೂ ಅವರ ಪತ್ನಿಯರನ್ನು ಪೂಜಿಸುವುದು ರೂಢಿಗೆ ಬಂದ ಮೇಲೆ ದೇವಾಲಯದ ಆವರಣದಲ್ಲಿ ಪ್ರತ್ಯೇಕ ಗರ್ಭಗುಡಿಯನ್ನು ಲಕ್ಷ್ಮೀ ದೇವತೆಗೆ ನಿರ್ಮಿಸುವ ಪರಂಪರೆ ಬೆಳೆದುದನ್ನು ಈ ಕಾಲದಲ್ಲಿ ಕಾಣಬಹುದು. ಈ ಪುರುಷ ಮತ್ತು ಸ್ತ್ರೀ ದೇವತೆಗಳ ಕಲ್ಯಾಣೋತ್ಸವನ್ನು ವಿಜೃಂಭಣೆಯಿಂದ ನಡೆಸುವ ಸಲುವಾಗಿ ಆವರಣದಲ್ಲಿ ಪ್ರತ್ಯೇಕ ಕಲ್ಯಾಣಮಂಟಪಗಳು ಬೆಳಕಿಗೆ ಬಂದವು.

ಕೃಷ್ಣದೇವರಾಯನ ಕಾಲದ ಸಾಂಸ್ಕೃತಿಕ ಜೀವನದ ಮೇಲೆ ತಿರುಮಲೆಯ ವೆಂಕಟೇಶ್ವರನ ಪ್ರಭಾವವನ್ನು ಸುಲಭವಾಗಿ ಗುರುತಿಸಬಹುದು. ರಾಯನು ದೇವರಿಗೆ ಕನಾಕಭಿಷೇಕ ಮಾಡಿಸುವ ಸಲುವಾಗಿ ವೆಂಕಟೇಶ್ವರನ ಚಿತ್ರವಿರುವ ೧೧೭ ಗ್ರೇನ್ ತೂಕವಿರುವ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿದನು. ಇದನ್ನು ಶಾಸನಗಳು ದೃಢಪಡಿಸುತ್ತವೆ. ರಾಯನು ನವರತ್ನ ಮಾಲಿಕೆಯನ್ನು ದೇವರಿಗೆ ಅರ್ಪಿಸಿದ ವಿವರಗಳು ತಿರುಮಲೆಯ ದೇವಾಲಯದ ಶಾಸನಗಳಲ್ಲಿ ವಿವರವಾಗಿ ಹೇಳಲ್ಪಟ್ಟಿವೆ."[೩೦]

ರಾಯ ಒರಿಸ್ಸಾ ರಾಜ್ಯದ ಮೇಲೆ ವಿಜಯವನ್ನು ಸಾಧಿಸಿ ಅಲ್ಲಿಂದ ತಂದ ಬಾಲಕೃಷ್ಣನ ವಿಗ್ರಹವನ್ನು ಹಂಪೆಯಲ್ಲಿ ಪ್ರತಿಷ್ಠಾಪಿಸಿದನು. ಇದರ ಜ್ಞಾಪಕಾರ್ಥವಾಗಿ ೫೨.೨೭ ಮತ್ತು ೧೩ ಗ್ರೇನ್ ತೂಕದ ಬಾಲಕೃಷ್ಣನ

ಚಿತ್ರವಿರುವ ಚಿನ್ನದ ನಾಣ್ಯಗಳನ್ನು ಅಚ್ಚುಹಾಕಿಸಿದ. ಈ ಬಾಲಕೃಷ್ಣನ ಬಲಗೈಯಲ್ಲಿ ಬೆಣ್ಣೆಯ ಮುದ್ದೆಯಿದೆ.[೪೦] ಈ ನಾಣ್ಯಗಳಿಂದ ವೈಷ್ಣವ ಧರ್ಮಕ್ಕೆ ರಾಯ ನೀಡಿದ ಪ್ರೋತ್ಸಾಹ, ಅಂದಿನ ಸಾಂಸ್ಕೃತಿಕ, ಧಾರ್ಮಿಕ ಒಳಹರಿವುಗಳನ್ನು ಕಾಣುತ್ತೇವೆ.

ಶಾಸನ ಮತ್ತು ವಾಸ್ತುಶಿಲ್ಪದ ಹಿನ್ನೆಲೆಯನ್ನು ತೆಗೆದುಕೊಂಡಾಗ ವಿರೂಪಾಕ್ಷನ ಸ್ಥಾನವನ್ನು ವಿಠಲನು ಪಡೆದುಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಸುಮಾರು ಕ್ರಿ.ಶ. ೧೫೧೩ರ ನಂತರದಿಂದ ವಿರೂಪಾಕ್ಷನ ವೈಭವ ಕ್ಷೀಣಿಸುತ್ತಾ ಬಂದು, ವಿಠ್ಠಲಸ್ವಾಮಿಯ ವೈಭವ ಹೆಚ್ಚಾಗಿರುವುದನ್ನು ಕಾಣುತ್ತೇವೆ. ಇದಕ್ಕೆ ಕಾರಣ ಅರಸರ ಧಾರ್ಮಿಕ ಶ್ರದ್ಧೆಯಲ್ಲಿ ಉಂಟಾದ ಮಾರ್ಪಾಡು ಮತ್ತು ಧರ್ಮಗುರುಗಳ ಪ್ರಭಾವ ಎಂದು ಹೇಳಬಹುದು.[೪೧] ಅಂದಿನ ಧಾರ್ಮಿಕತೆಯಲ್ಲಿ ಮುಖ್ಯವಾಗಿ ಧರ್ಮಗುರುಗಳ ಪ್ರಭಾವ ಹೆಚ್ಚು ಕಂಡುಬರುತ್ತದೆ. ಧರ್ಮಗುರುಗಳ ಮಾರ್ಗದರ್ಶನದಲ್ಲಿ ಅರಸರು ಧಾರ್ಮಿಕ ನೀತಿಯನ್ನು ಅನುಸರಿಸುತ್ತಿದ್ದರು. ರಾಯನ ಕಾಲದಲ್ಲಿ ಶ್ರೀ ವೈಷ್ಣವ ಧರ್ಮ ಹೆಚ್ಚು ಪ್ರಚಾರ ಪಡೆದುಕೊಂಡು ವಿಶೇಷವಾದ ಮನ್ನಣೆಯನ್ನು ಗಳಿಸಿತ್ತು. ಇವನ ಕಾಲದಲ್ಲಿ ಅನೇಕ ಶ್ರೀ ವೈಷ್ಣವ ದೇವಾಲಯ, ಅಗ್ರಹಾರಗಳು ಸ್ಥಾಪನೆಯಾದುವಲ್ಲದೆ, ಹಿಂದಿನಿಂದ ಉಳಿದುಬಂದಿದ್ದ ವೈಷ್ಣವ ದೇವಾಲಯಗಳೂ ಶ್ರೀ ವೈಷ್ಣವರ ರಕ್ಷಣೆಗೆ ಬಂದವು. ಇವು ಹೇರಳವಾಗಿ ದಾನದತ್ತಿಗಳನ್ನು ಸ್ವೀಕರಿಸಿದ್ದು ಕಂಡುಬರುತ್ತದೆ. ರಾಯ ತನ್ನ ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯದಾದ್ಯಂತ ವೈಷ್ಣವ ದೇವಾಲಯಗಳ ಮೇಲೆ ಹೆಚ್ಚಿನ ಒಲವು ತೋರಿಸಿರುವುದು ಅವನು ನೀಡಿದ ದಾನದತ್ತಿಗಳಿಂದ ತಿಳಿದುಬರುತ್ತದೆ. ಅಂದಿನ ಶಾಸನಗಳಲ್ಲಿ ಅರಸನಲ್ಲದೆ ಅವನ ಸಾಮ್ರಾಜ್ಯದ ಎಲ್ಲಾ ವರ್ಗದವರು ವೈಷ್ಣವ ದೇವಾಲಯಗಳಿಗೆ ದಾನದತ್ತಿ ನೀಡಿರುವುದು ಉಲ್ಲೇಖನೀಯ.

ರಾಯನು ಚೈತ್ರಯಾತ್ರೆಯಲ್ಲಿ ಜಯಗಳಿಸುತ್ತಾ ಹೋದಂತೆಲ್ಲಾ ತೀರ್ಥಯಾತ್ರೆಗಳನ್ನು ಕೈಗೊಂಡು ಅನೇಕ ವೈಷ್ಣವ ದೇವಾಲಯಗಳಿಗೆ ಭೇಟಿ ನೀಡಿ ವಿವಿಧ ರೀತಿಯ ದಾನದತ್ತಿಗಳನ್ನು ನೀಡಿದನು. ಸಾಮ್ರಾಜ್ಯದಲ್ಲಿ ಅನೇಕ ವೈಷ್ಣವ ದೇವಾಲಯಗಳಿಗೆ ದತ್ತಿಯನ್ನು ನೀಡುವುದರ ಮೂಲಕ ತನ್ನ ಧಾರ್ಮಿಕತೆಯ ಬಗ್ಗೆ ಇದ್ದ ಒಲವನ್ನು ತೋರಿಸಿದ್ದಾನೆ. ದಕ್ಷಿಣಭಾರತದ ಪ್ರಸಿದ್ಧ ವೈಷ್ಣವ ಕ್ಷೇತ್ರವಾದ ಆಂಧ್ರಪ್ರದೇಶದ ತಿರುಮಲೆಗೆ ಏಳು ಬಾರಿ ಭೇಟಿ ನೀಡಿದ್ದುದು ಗಮನಾರ್ಹ. ತನ್ನ ಕುಲದೈವದ ಬಗ್ಗೆ ಇದ್ದಂತಹ ಭಕ್ತಿ ಇದರಿಂದ ವ್ಯಕ್ತವಾಗುತ್ತದೆ. ಕೃಷ್ಣದೇವರಾಯನು ಹೆಚ್ಚಾಗಿ ತನ್ನ ಯಾತ್ರೆಗಳನ್ನು ಆಂಧ್ರದಲ್ಲಿ ಕೈಗೊಂಡಿರುವುದು ಅಲ್ಲಿ ಸಿಕ್ಕಿರುವ ಶಾಸನಗಳ ಹಿನ್ನೆಲೆಯಲ್ಲಿ ಗುರುತಿಸಬಹುದು.

ರಾಯನ ತಿರುಮಲೆ ಯಾತ್ರೆಯು ಪ್ರಾರಂಭವಾದುದು ಕ್ರಿ.ಶ. ೧೫೧೩ರಲ್ಲಿ. ಕ್ರಿ.ಶ. ೧೫೨೧ರ ವೇಳೆಗೆ ಸುಮಾರು ಏಳು ಬಾರಿ ದೇವರ ದರ್ಶನವನ್ನು ತನ್ನ ರಾಣಿಯರ ಸಂಗಡ ಪಡೆದುಕೊಂಡು, ಬೆಟ್ಟದ ಗುಡಿಗೆ ಸಲ್ಲಿಸಿದ ಸೇವೆ - ದಾನದತ್ತಿ ಕಾರ್ಯಗಳು ಲೆಕ್ಕವಿಲ್ಲದಷ್ಟು. ಇದರ ಉಲ್ಲೇಖಗಳು ತಿರುಮಲೆಯ ಶಾಸನಗಳಲ್ಲಿ ದೊರೆಯುತ್ತವೆ.[೪೨] ಅದೇ ರೀತಿ ಅರಸನಂತೆ ಅವನ ಅಧಿಕಾರಿಗಳು ವೇಂಗಡದ ದೇವರಿಗೆ ಹಲವು ಬಗೆಯ ಸೇವೆಗಳನ್ನು ಸಲ್ಲಿಸಿದ್ದರು. ಪ್ರಧಾನಮಂತ್ರಿ ಸಾಳುವ ತಿಮ್ಮಣ್ಣ ದಂಡನಾಥ, ಸಾಳುವ ಗೋವಿಂದ ರಾಜನೂ ಕ್ರಿ.ಶ. ೧೫೧೨-

೨೨ರ ಸುಮಾರಿಗೆ ಪರಾಂದಲೂರು, ಮೇಲ್‌ಪಾಡಿ ಗ್ರಾಮಗಳನ್ನು ದೇವಾಲಯಕ್ಕೆ ನೀಡಿದರು.[೩೪] ರಾಯನ ಸೇನಾಧಿಪತಿಯಾಗಿದ್ದ ಓಬಳನಾಯಕ್ಕರ್ ಕ್ರಿ.ಶ. ೧೫೧೪ರ ಸುಮಾರಿಗೆ ವೆಂಕಟೇಶ್ವರ ದೇವರೆದುರು ೨೫೦ ಹಸುಗಳನ್ನು ದಾನವಾಗಿ ನೀಡಿದನು.[೩೫] ಇನ್ನೊಬ್ಬ ಅಧಿಕಾರಿ ರಾಯಸಂ ಕೊಂಡಮರಸಯ್ಯನು ದೇವಾಲಯದ ಬೊಕ್ಕಸಕ್ಕೆ ಮುಲುಂಬುಂಡಿ ಎಂಬ ಗ್ರಾಮದ ಉತ್ಪತ್ತಿಯನ್ನು ಸಲ್ಲಿಸಿದ್ದನು.[೩೬] ಅಲ್ಲದೆ ಮಹಾಜನರು, ಯತಿಗಳು ಮುಂತಾದವರು ದಾನದತ್ತಿಗಳನ್ನು ಹೇರಳವಾಗಿ ನೀಡಿರುವುದು ಅಲ್ಲಿನ ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ರಾಯನು ತಿರಮಲೆ ದೇವರ ದರ್ಶನಕ್ಕೊಂದೇ ಭೇಟಿ ನೀಡದೆ ಹಲವಾರು ವೈಷ್ಣವ ಕ್ಷೇತ್ರಗಳಿಗೆ ತೀರ್ಥಯಾತ್ರೆ ಕೈಗೊಂಡು ಹಲವು ದತ್ತಿಗಳನ್ನು ನೀಡಿರುವುದು ಕೆಳಗಿನ ಶಾಸನಗಳಲ್ಲಿ ಕಂಡುಬರುತ್ತದೆ.

ಶ್ರೀರಂಗಂನ ಶ್ರೀರಂಗನಾಥ ದೇವರಿಗೆ ರಾಯನು ಗ್ರಾಮದಾನ ನೀಡಿದನು.[೩೭] ಅದೇ ರೀತಿ ಆಹೋಬಲಂ ನರಸಿಂಹದೇವರಿಗೆ,[೩೮] ಸಿಂಧೂಹರ ಜನಾರ್ಧನ ದೇವರಿಗೆ,[೩೯] ಹಂಪಿಯ ವಿಠಲ ದೇವಾಲಯಕ್ಕೆ,[೪೦] ಪುಷ್ಪಗಿರಿಯ ಚೆನ್ನಕೇಶವ ದೇವರಿಗೆ,[೪೧] ನಾಗಲಾಪುರ ಕರಿಯಾ ಮಾಣಿಕ್ಯ ಪೆರುಮಾಳ್ ದೇವಾಲಯಕ್ಕೆ,[೪೨] ಹಂಪಿಯ ಬಾಲಕೃಷ್ಣ ದೇವಾಲಯಕ್ಕೆ,[೪೩] ಅಣ್ಣೆಯೂರು ವರದರಾಜ ಪೆರುಮಾಳ್ ದೇವರಿಗೆ,[೪೪] ಕಂಚೀಪುರಂನ ಗೋವಿಂದರಾಜ ದೇವರಿಗೆ,[೪೫] ಬೇಲೂರಿನ ಚೆನ್ನಕೇಶವ ದೇವಾಲಯಕ್ಕೆ,[೪೬] ಕತ್ರೆಗಾಂಡ್ಲ ಗ್ರಾಮದ ಚೆನ್ನಕೇಶ್ವರ ದೇವರಿಗೆ ದಾನದತ್ತಿ ನೀಡಿದ್ದುದು,[೪೭] ಚಿನ್ನ ಆಹೋಬಲಂನ ನರಸಿಂಹ ದೇವರಿಗೆ,[೪೮] ಉಮ್ಮತ್ತೂರಿನ ತಿರುಮಲದೇವರಿಗೆ ಗ್ರಾಮದ ಸರ್ವಮಾನ್ಯವನ್ನು ನೀಡಿದನು.[೪೯] ಬಮ್ಮಾಪುರದ ಶ್ರೀ ಬಾಲಕೃಷ್ಣ ದೇವರಿಗೆ ಹೆಗ್ಗೊಟಾರ ಗ್ರಾಮದ ಆದಾಯ ದಾನ,[೫೦] ಹಂಪಿಯ ರಾಮಚಂದ್ರ ದೇವಾಲಯದ ಜೀರ್ಣೋದ್ಧಾರ ಮಾಡಿ ದತ್ತಿ ನೀಡಿದುದು,[೫೧] ಅಂಜನಗಿರಿಯ ಕರಿಯತಿರುವೇಂಗಳನಾಥ ದೇವರಿಗೆ ದತ್ತಿ ನೀಡಿದ್ದನು.[೫೨] ನಾಗಲಾಪುರದ ನಾಗೇಂದ್ರಶಯನ ನಿರ್ಮಾಣ,[೫೩] ರಾಮಘುಡದ ರಾಮನಾಥ ದೇವಾಲಯ ನಿರ್ಮಾಣ,[೫೪] ಅದೇ ರೀತಿ ಸಿಂಹಾಚಲ ಕಳಿಂಗದ ಪ್ರಸಿದ್ಧ ವೈಷ್ಣವ ಕ್ಷೇತ್ರಕ್ಕೆ ರಾಯನು ತೆರಳಿ ಆಭರಣಗಳನ್ನು, ವರಾಹ ಹಾಗೂ ಗ್ರಾಮಗಳನ್ನು ಸಮರ್ಪಿಸಿದನು.[೫೫] ಕುಂಬಕೋಣಂನಲ್ಲಿ ನಡೆಯುವ ಮಹಾಮುಖಂ ಉತ್ಸವದ ಸಂದರ್ಭದಲ್ಲಿ ರಾಯನು ಯಾತ್ರೆ ಕೈಗೊಂಡಿದ್ದನು.[೫೬] ಅಲ್ಲದೆ ಕರುವ, ನಲ್ಲೂರು, ಶಂಕರನಾರಾಯಣಕೋಯಿಲ್, ತೆಂಕಾಸಿ, ಗಜೇಂದ್ರಮೋಕ್ಷ, ಸಾಲವಾಹಪುರಂ, ತೋಟಾದ್ರಿ, ಕುರುಂಗಡಿ, ಕನ್ಯಾಕುಮಾರಿ, ತಿರುಚೆಂದೂರು, ಧನುಷ್ಕೋಟಿಗಳನ್ನು ಸಂದರ್ಶಿಸಿದನು.[೫೭] ಇದನ್ನು ಸುಧೀರ್ಘವಾದ ತೀರ್ಥಯಾತ್ರೆ ಎಂದು ಕರೆಯಲಾಗಿದೆ. ರಾಯನಲ್ಲಿರುವ ವೈಷ್ಣವಧರ್ಮದ ಪ್ರೋತ್ಸಾಹ ಮತ್ತು ನಿಷ್ಠೆಯನ್ನು ಈ ದೇವಾಲಯಗಳಿಗೆ ನೀಡಿದ ದಾನದತ್ತಿ, ಜೀರ್ಣೋದ್ಧಾರ ಮತ್ತು ಕೆಲವು ದೇವಾಲಯಗಳ ನಿರ್ಮಾಣಕಾರ್ಯದಿಂದ ತಿಳಿದುಬರುತ್ತದೆ.

ಅದರಂತೆಯೆ ಕೃಷ್ಣದೇವರಾಯನು ತನ್ನ ಆಸ್ಥಾನದಲ್ಲಿ ಅನೇಕ ಕವಿಗಳಿಗೆ ಆಶ್ರಯ ನೀಡಿದ್ದನು. ಇವನ ಆಳ್ವಿಕೆಯ ಅವಧಿಯಲ್ಲಿ ಅನೇಕ ಕೃತಿಗಳು ರಚನೆಯಾದವು. ಅದರಲ್ಲಿಯೂ ವಿಶೇಷವಾಗಿ ವೈಷ್ಣವ ಕವಿಗಳಿಗೆ ಹೆಚ್ಚಿನ ಆಧ್ಯತೆಯನ್ನು ನೀಡಿದ್ದನು. ಇವರು ಹೆಚ್ಚಾಗಿ ವೈಷ್ಣವ ಧರ್ಮದ ತತ್ವಗಳುಳ್ಳ ಕೃತಿಗಳನ್ನು ರಚಿಸಿದ್ದಾರೆ. ಇವನ ಆಸ್ಥಾನದ ಪ್ರಸಿದ್ಧ ಕವಿಯಾದ ಅಲ್ಲಸಾನಿ ಪೆದ್ದನ್ನನು ರಾಯನ ವಿಶೇಷ ಗೌರವಗಳಿಗೆ ಪಾತ್ರನಾಗಿದ್ದನು.

ಇವರಿಬ್ಬರ ನಡುವೆ ನಿಕಟವಾದ ಸಂಬಂಧವಿದ್ದಿತು. ಒಮ್ಮೆ ಅರಸನು ರಾಜಧಾನಿಯಲ್ಲಿ 'ಕವಿಗೋಷ್ಠಿ'ಯನ್ನು ಏರ್ಪಡಿಸಿ, ಅಮಿತವಾದ ಮನ್ನಣೆಗೆ ಪಾತ್ರನಾದ ಪೆದ್ದನ್ನನನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಕವಿಸನ್ಮಾನವನ್ನು ಮಾಡಿದನು. ರಾಯನಿಂದ ಪೆದ್ದನ್ನನು ಅನೇಕ ದತ್ತಿಗಳನ್ನು ಧನ-ಕನಕಗಳನ್ನು ಪಡೆದಿದ್ದನು. ಅವುಗಳಲ್ಲಿ ಒಂದು ಗ್ರಾಮವನ್ನು ತನ್ನ ವಿದ್ಯಾಗುರುವಾದ ಷಟಕೋಪಮುನಿಗೆ ಗುರುಕಾಣಿಕೆಯಾಗಿ ಸಮರ್ಪಿಸಿದನು. ಮೇಲೆ ಗಮನಿಸಿದಂತೆ ಅಲ್ಲಸಾನಿ ಪೆದ್ದನ್ನನು ವೈಷ್ಣವ ಧರ್ಮೀಯನಾದುದರಿಂದ ಅವನಿಗೆ ರಾಯನು ಹೆಚ್ಚಿನ ಪ್ರೋತ್ಸಾಹ ನೀಡಿದ್ದನು. ಅಲ್ಲದೆ ನಂದಿ ತಿಮ್ಮಣ್ಣನು 'ಪಾರಿಜಾತಪಹರಣಮು' ಕೃತಿಯಲ್ಲಿ ವಿಷಯ ವಸ್ತುವಾಗಿ ಶ್ರೀಕೃಷ್ಣನ ಪ್ರಣಯ ಆಯಾಮವನ್ನು ಸ್ವೀಕರಿಸಿದ್ದು, ಇದರಲ್ಲಿ ಕಂಡುಬರುತ್ತದೆ. ಹೀಗೆ ರಾಯನ ಆಸ್ಥಾನದಲ್ಲಿದ್ದ ಕವಿಗಳ ಕಾವ್ಯವಸ್ತು ಕೂಡ ವಿಷ್ಣುವಿನ ಅವತಾರಗಳಿಗೆ ಸಂಬಂಧಿಸಿದ್ದಾಗಿದೆ. ರಾಯನು ಪರಮ ವಿಷ್ಣುಭಕ್ತನಾಗಿದ್ದನು. "ರಮಾಧವ ಚರಣಕಮಲ ಸೇವಾ ಪ್ರವಣಮತಿ" ಎಂಬ ವೈಷ್ಣವ ಶ್ಲೋಕವು ಇದನ್ನು ದೃಢಪಡಿಸುತ್ತದೆ. ರಾಯನಿಗೆ ರಾಜವೈಭವಕ್ಕಿಂತಲೂ ಭಗವದ್ಭಕ್ತಿ ಮುಖ್ಯವಾಗಿತ್ತೆಂದು ಇದರಿಂದ ತಿಳಿಯುತ್ತದೆ.

ಮೇಲಿನ ಕಾವ್ಯವಾದ ಪಾರಿಜಾತಪಹರಣಮುದಲ್ಲಿ ಸತ್ಯಭಾಮೆ ಪಾರಿಜಾತ ಪುಷ್ಪವನ್ನು ಪಡೆಯುವ ಸಲುವಾಗಿ ಶಿವನನ್ನು ಕುರಿತು ತಪಸ್ಸು ಮಾಡಲು ತನ್ನ ಗಂಡನ ಅನುಮತಿಯ ಪ್ರಸಂಗವನ್ನು ಹರಿವಂಶ ಕಾವ್ಯವು ವಿವರಿಸುತ್ತದೆ. ಆದರೆ ಇಲ್ಲಿ ತಿಮ್ಮಣ್ಣನು ಈ ತಪಸ್ಸಿನ ಸನ್ನಿವೇಶವನ್ನು ಸಂಪೂರ್ಣವಾಗಿ ತೊಡೆದು ಹಾಕಿದ್ದಾನೆ. ಕೃಷ್ಣದೇವರಾಯನಿಗೆ ಒಪ್ಪದ ರೀತಿಯಲ್ಲಿ ಕವಿ ಅದನ್ನು ಬಿಟ್ಟುಕೊಟ್ಟಿರುವನು. ಏಕೆಂದರೆ ರಾಯನು ಪರಮ ವೈಷ್ಣವನಾಗಿರುವುದೇ ಇದಕ್ಕೆ ಕಾರಣವಾಗಿದೆ. ಇಲ್ಲಿ ರಾಯನ ತೃಪ್ತಿಗಾಗಿ ಶ್ರೀ ವೆಂಕಟೇಶ್ವರನನ್ನು ತನ್ನ ಕಾವ್ಯದ ಆರಂಭದಲ್ಲಿ ಸ್ತೋತ್ರ ಮಾಡಿರುವನು. ಕಾವ್ಯ ರಚನೆಗೆ ಧರ್ಮಪ್ರಚಾರವು ಇಲ್ಲಿನ ಮುಖ್ಯ ಉದ್ದೇಶವಾಗಿದ್ದಿತು.

ಕೃಷ್ಣದೇವರಾಯನು ವೈಷ್ಣವ ಧರ್ಮಕ್ಕೆ ನೀಡಿದ ಪ್ರೋತ್ಸಾಹದಿಂದ ಸಾಮ್ರಾಜ್ಯದಲ್ಲೆಲ್ಲ ವೈಷ್ಣವಧರ್ಮ ಪಂಥಿಯ ಶಾಖಪಂಥಗಳಾದ ವಿಶಿಷ್ಟಾದ್ವೈತ ಮತ್ತು ದ್ವೈತಪಂಥಗಳು ತಮ್ಮ ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿದ್ದವು. ಅಂದಿನ ಧರ್ಮಪ್ರಚಾರಕರ ಪ್ರಭಾವದಿಂದ ರಾಯನು ವೈಷ್ಣವಧರ್ಮವನ್ನು ರಾಜಧರ್ಮವಾಗಿ ಸ್ವೀಕರಿಸಿ ಸಾಮ್ರಾಜ್ಯದಲ್ಲಿ ಅನೇಕ ದೇವಾಲಯ, ಮಠಮಾನ್ಯಗಳಿಗೆ ದಾನ-ದತ್ತಿಯನ್ನು ನೀಡಿ ಅನೇಕ ವೈಷ್ಣವ ಯತಿಗಳಿಗೆ ತುಂಬು ಗೌರವ ಸಲ್ಲಿಸಿದ್ದುದು ಈ ಹಿನ್ನೆಲೆಯಲ್ಲಿಯೇ. ಯಾವುದೇ ಅರಸನು ಆಡಳಿತಕ್ಕೆ ಬಂದಾಗ ಏಕಧರ್ಮೀಯನಾಗಿರದೆ ರಾಜ್ಯದಲ್ಲಿ ಅನೇಕ ಧರ್ಮಗಳಿಗೆ ಸಮಾನವಾದ ಪ್ರೋತ್ಸಾಹವನ್ನು ನೀಡಿ ಧರ್ಮ ಸಮನ್ವಯತೆಯನ್ನು ಕಾಪಾಡಿಕೊಂಡು ಬರುವುದು ನೈಜನೀಯ. ಅದೇ ರೀತಿ ರಾಯನು ವೈಷ್ಣವಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರೂ, ಸಾಮ್ರಾಜ್ಯದಲ್ಲೆಲ್ಲ ಶೈವ, ಇಸ್ಲಾಂ, ಕ್ರೈಸ್ತ ಇತ್ಯಾದಿ ಧರ್ಮಗಳಿಗೂ ಕೂಡಾ ದಾನದತ್ತಿಯನ್ನು ನೀಡಿ, ಮಸೀದಿ, ಚರ್ಚುಗಳನ್ನು ಕಟ್ಟಿಕೊಳ್ಳಲು ಅನುಮತಿ ನೀಡಿದ್ದನು.

ಭಕ್ತಿಪಂಥದ ಸುಧಾರಕರು

ವಿಜಯನಗರದ ತುಳುವ ಮನೆತನದಲ್ಲಿ ದ್ವೈತ ಮತ್ತು ವಿಶಿಷ್ಟಾದ್ವೈತ ಮತದ ಪ್ರಚಾರಕರು, ಆಚಾರ್ಯರು, ದಾಸರು ಸಾಮ್ರಾಜ್ಯದಲ್ಲಿ ಸಮಾನವಾದ ಗೌರವಸ್ಥಾನವನ್ನು ಪಡೆದಿದ್ದರೆಂಬುದು ಮಹತ್ವದ ಸಂಗತಿ. ಇದರಿಂದಾಗಿ

ಅಂದಿನ ಧಾರ್ಮಿಕ ಜೀವನದಲ್ಲಿ ವಿಶೇಷಪಾತ್ರ ವಹಿಸುತ್ತಿದ್ದ ಈ ಪಂಥಗಳು ಅವುಗಳ ಮಠಗಳಲ್ಲಿ ಹೆಚ್ಚಿನ ಸಾಮರಸ್ಯವಿದ್ದು, ಸಾಂಸ್ಕೃತಿಕ ಹಾಗೂ ಧಾರ್ಮಿಕ ಪ್ರಗತಿಗೆ ಎಡೆಮಾಡಿಕೊಟ್ಟಿದ್ದವು. ಧರ್ಮ, ದರ್ಶನ, ಸಾಹಿತ್ಯ ಕ್ಷೇತ್ರ ಹಾಗೂ ಅವುಗಳ ಬೆಳವಣಿಗೆಯಲ್ಲಿ ತುಳುವ ಮನೆತನವು ನಿರ್ವಹಿಸಿದ ಪಾತ್ರ ಅಮೋಘವಾದುದು. ದರ್ಶನ ಕ್ಷೇತ್ರದ ವ್ಯಾಸರಾಯರಂತಹ ಭಾರತೀಯ ಚಿಂತನೆಯ ಶ್ರೇಷ್ಠತಮರಿಗೆ ತುಳುವ ಮನೆತನದವರು ಆಶ್ರಯದಾತರಾಗಿದ್ದರು. ಕ್ರಿ.ಶ. ೧೬ನೇ ಶತಮಾನದ ಪೂರ್ವದಲ್ಲಿ ಹರಡಿ ನವಚೈತನ್ಯ ತುಂಬಿದ ವೈಷ್ಣವ ಧರ್ಮವು ಭಕ್ತಿಪಂಥದ ಮಹಾಚಳುವಳಿಗೆ ಮೂಲ ಕಾರಣವಾಯಿತು. ಇದರಲ್ಲಿ ದಾಸಕೂಟ ಅಥವಾ ವೈಷ್ಣವ ಕೀರ್ತನಕಾರರ ಮತ್ತು ಸಂತವರ್ಗದವರು ದ್ವೈತವೇದಾಂತ ದರ್ಶನದ ಪ್ರಸಾರ ಕಾರ್ಯವನ್ನು ರಾಯನ ಕಾಲದಲ್ಲಿ ಹಮ್ಮಿಕೊಂಡರು. ಈ ಪಂಥವು ವಿಜಯನಗರದಲ್ಲಿ ಹುಟ್ಟಿ ಕರ್ನಾಟಕದ ಮೇರೆಗಳಾಚೆಗೆ ಹರಡಿ ಭಕ್ತಿಯ ಚಳುವಳಿಯನ್ನು ರೂಪಿಸಿತು.

ವ್ಯಾಸರಾಯರು : ಭಾಗವತ ಸಾಹಿತ್ಯದ ಪ್ರಮುಖರೆಂದರೆ ವ್ಯಾಸರಾಯರು. ಇವರು ಕೃಷ್ಣದೇವರಾಯನ ಕಾಲದಲ್ಲಿ ರಾಜಗುರುಗಳಾಗಿ, ರಾಯನಿಗೆ ನಿಕಟವರ್ತಿಗಳಾಗಿದ್ದರು. ವಿಜಯನಗರವು ಉಚ್ಛ್ರಾಯ ಸ್ಥಿತಿಯಲ್ಲಿರುವಾಗ ದ್ವೈತ ಭಕ್ತಿಪಂಥದಿಂದ ಅನೇಕ ಪರಿವರ್ತನೆಗಳು ಸಾಮ್ರಾಜ್ಯದಲ್ಲಿ ಕಾಣಿಸಿಕೊಂಡವು. ಅಲ್ಲದೆ, ಅನೇಕ ಸುಧಾರಣೆಗಳು ಸಾಂಪ್ರದಾಯಿಕತೆ ಹಾಗೂ ಉದಾರತೆಗಳು ಕಂಡುಬಂದವು. ಕೃಷ್ಣದೇವರಾಯನ ಕಾಲದ ವೈಷ್ಣವ ಧರ್ಮವನ್ನು ಅಧ್ಯಯನ ಮಾಡುವಾಗ ದ್ವೈತ ಪಂಥೀಯ ಪ್ರಚಾರಕರಾದ ವ್ಯಾಸರಾಯರ ಬಗ್ಗೆ ಸಂಕ್ಷಿಪ್ತ ಮಾಹಿತಿ ಒದಗಿಸಿಕೊಡುವುದು ಉಚಿತ. ಈ ಕಾಲದಲ್ಲಿದ್ದ ಶ್ರೀಪಾದರಾಯರ ಶಿಷ್ಯ ವ್ಯಾಸರಾಯರು ಅಗ್ರಗಣ್ಯ ದಾರ್ಶನಿಕರೆಂದೂ, ದ್ವೈತಸಿದ್ಧಾಂತದ ತಾರ್ಕಿಕರೆಂದು ಪ್ರಸಿದ್ಧರಾಗಿದ್ದಾರೆ. ವ್ಯಾಸತೀರ್ಥರು (ಕ್ರಿ.ಶ. ೧೪೪೭-೧೫೩೯). ತುಳುವ ನರಸನಾಯಕ, ಕೃಷ್ಣದೇವರಾಯನ ಕಾಲ ಹಾಗೂ ನಂತರದ ಅಚ್ಯುತರಾಯರಿಗೆ ರಾಜಗುರುಗಳಾಗಿದ್ದರೆಂದು ಸೋಮನಾಥ ಕವಿ ವಿರಚಿತವಾದ 'ವ್ಯಾಸಯೋಗಿ ಚರಿತೆ'ಯಿಂದ ತಿಳಿಯುತ್ತದೆ. ಅವರ ವಿದ್ವತ್ಪೂರ್ಣ ಪ್ರತಿಭೆಯಿಂದ ಬರೆಯಲ್ಪಟ್ಟ ಮಹಾನ್ ಕೃತಿಯಾದ 'ನ್ಯಾಯಾಮೃತ'ವು ವೇದಾಂತ ವಲಯಗಳಲ್ಲಿ ಆಂದೋಲನವನ್ನೆಬ್ಬಿಸಿತು. ವ್ಯಾಸರಾಯರು ದಾರ್ಶನಿಕರಷ್ಟೆ ಅಲ್ಲದೆ ಅದ್ಭುತ ಸಂಘಟನಾ ಶಕ್ತಿಯಿಂದ ವೈಷ್ಣವ ಭಕ್ತಿಪಂಥದ ಪ್ರಸಾರವನ್ನು ವ್ಯಾಪಕವಾಗಿ ಮಾಡಿದರು. ಅವರ ವಿದ್ವತ್ತವನ್ನು ದಾಸರು ಒಂದು ಕೀರ್ತನೆಯಲ್ಲಿ ಹೀಗೆ ಹಾಡಿದ್ದಾರೆ:

'ಈಸು ಮುನಿಗಳಿದ್ದರೇನ ಮಾಡಿದರಯ್ಯ

ವ್ಯಾಸರಾಯ ಮದ್ವಮತವನ್ನುದ್ಧರಿಸಿದ' ಎಂಬ ಉದ್ಗಾರ ಅವರ ಹಿರಿಮೆಯನ್ನು ಸೂಚಿಸುತ್ತದೆ. ವ್ಯಾಸರಾಯರಿಗೆ ರಾಯನ ಮೇಲೆ ತುಂಬಾ ಗೌರವವಿತ್ತು. ಅವನ ಶಕ್ತಿ ಸಾಮರ್ಥ್ಯವನ್ನು ಬಹಳವಾಗಿ ಮೆಚ್ಚುತ್ತಿದ್ದರು. ಆದ್ದರಿಂದ ರಾಯನು ವ್ಯಾಸತೀರ್ಥರನ್ನು ರಾಜಗುರು ಹಾಗೂ ಕುಲದೈವವಾಗಿ ಗೌರವಿಸುತ್ತಿದ್ದನು. ವ್ಯಾಸರಾಯರ ಮಾತು ರಾಯನಿಗೆ ವೇದವಾಕ್ಯವಾಗುತ್ತಿತ್ತು. ರಾಜ್ಯದ ಆಡಳಿತದಲ್ಲಿ ಆಚಾರ್ಯರ ಸಲಹೆ ಸೂಚನೆಗಳಿಗೆ ಸದಾ ಗೌರವವಿರುತ್ತಿದ್ದಿತು. ಒಮ್ಮೆ ಗುರುಗಳ ಸೂಚನೆಯನ್ನು ಮನ್ನಿಸಿ ಸೆರೆಸಿಕ್ಕಿದ್ದ ಕಳಿಂಗ

ರಾಜಕುಮಾರ ವೀರಭದ್ರನನ್ನು ಬಿಡುಗಡೆ ಮಾಡಿದನೆಂದು ತಿಳಿದು ಬರುತ್ತದೆ.[೫೮] ವ್ಯಾಸಯೋಗಿಚರಿತಾಮೃತ ಕೃತಿಯು ರಾಯನ ಸ್ವಭಾವ ಮತ್ತು ವ್ಯಕ್ತಿತ್ವದ ಮೇಲೆ ಸ್ವಲ್ಪಮಟ್ಟಿಗೆ ಬೆಳಕನ್ನು ಚೆಲ್ಲುತ್ತದೆ. ಕೃಷ್ಣರಾಯನು ರಾಜಧಾನಿಯಲ್ಲಿದ್ದಾಗ ವ್ಯಾಸರಾಯರ ದರ್ಶನವನ್ನು ತಪ್ಪದೆ ಪಡೆಯುತ್ತಿದ್ದನು. ಅವರ ಮೇಲೆ ವಿಶೇಷವಾದ ಭಕ್ತಿಗೌರವವಿದ್ದುದು ಇದರಿಂದ ತಿಳಿಯುತ್ತದೆ.

ವ್ಯಾಸರಾಯರು ವಿಜಯನಗರದಲ್ಲಿ ಒಂದು ಮಠವನ್ನು ಸ್ಥಾಪಿಸಿದರು. ಈ ಮಠದ ಕಾರ್ಯಕ್ರಮದಲ್ಲಿ ರಾಯ ಪಾಲ್ಗೊಳ್ಳುತ್ತಿದ್ದನು. 'ರಾಯನ ಆಸ್ಥಾನದಲ್ಲಿ ಧರ್ಮದ ಬಗೆಗೆ ವಾದಗಳು ಬಂದಾಗ ಅವುಗಳನ್ನು ಕೊನೆಯದಾಗಿ ನಿರ್ಣಯಿಸುವವರು ವ್ಯಾಸರಾಯರಾಗಿದ್ದರು. ಇದಕ್ಕೆ ವ್ಯಾಸಯೋಗಿ ಚರಿತ್ರೆಯಲ್ಲಿ ಒಂದು ನಿದರ್ಶನವಿದೆ.'[೫೯] ರಾಯನ ಕೆಲಸ ಕಾರ್ಯಗಳನ್ನು ವ್ಯಾಸರಾಯರು ತುಂಬಾ ಮೆಚ್ಚುತ್ತಿದ್ದರು. "ರಾಯನು ಕ್ರಿ.ಶ. ೧೫೧೩ರಲ್ಲಿ ಉದಯಗಿರಿಯನ್ನು ಗೆದ್ದು ಅಲ್ಲಿಂದ ತಂದ ಬಾಲಕೃಷ್ಣನ ವಿಗ್ರಹವನ್ನು ವಿಜಯನಗರದಲ್ಲಿ ವ್ಯಾಸರಾಯರು ತಮ್ಮ ಕೈಯಿಂದಲೇ ಪ್ರತಿಷ್ಠಾಪಿಸಿದರು."[೬೦] ಈ ಸಂದರ್ಭದಲ್ಲಿ ದೇವಾಲಯವನ್ನು ಕಟ್ಟಿಸಿದಾಗ ವ್ಯಾಸರಾಯರು,

'ಧರೆಗಧಿಕವೆಂದೆನಿಪ ವಿದ್ಯಾನಗರ ಒಳಿತೆಂದು ಉದ್ದ

ಗಿರಿಯಿಂದ ಬಂದ ಮುದ್ದು ಬಾಲಕೃಷ್ಣ ನಮ್ಮ' ಎಂದು ಹಾಡಿ ಹೊಗಳಿದ್ದಾರೆ. ಮುಂದೆ ರಾಯನಿಗೆ ಕುಹುಯೋಗ ಬಂದಾಗ ವ್ಯಾಸರಾಯರು ತಮ್ಮ ಜ್ಞಾನಸಂಪನ್ನವಾದ ಮಹಿಮಾನ್ವಿತ ಗುಣಗಳಿಂದ ಅರಸನಿಗೆ ಒದಗಬಹುದಾಗಿದ್ದ ವಿಪತ್ತಿನಿಂದ ರಕ್ಷಿಸಲು ತಾವೇ ಸಿಂಹಾಸನಾರೂಢರಾಗಿ ಸಾಮ್ರಾಜ್ಯದ ಯೋಗಕ್ಷೇಮವನ್ನು ನೋಡಿಕೊಂಡರು. ಇದು ಪುರಂದರದಾಸರ ಒಂದು ಕೀರ್ತನೆಯಿಂದ ತಿಳಿದುಬರುತ್ತದೆ. ವ್ಯಾಸರಾಯರು ವಿಜಯನಗರದ ಸಿಂಹಾಸನವನ್ನೇರಿದ್ದರಿಂದ ಅವರಿಗೆ 'ಕರ್ನಾಟಕ ಸಿಂಹಾಸನಾಧೀಶ್ವರ' ಎಂಬ ಬಿರುದು ಬಂದಿತೆಂದು ತಿಳಿದುಬರುತ್ತದೆ. ಇದರಿಂದ ರಾಮಾನುಜ ಪಂಥೀಯನಾಗಿ ತಾತಾಚಾರ್ಯರ ಶಿಷ್ಯನಾಗಿದ್ದ ಕೃಷ್ಣದೇವರಾಯನು ಮಾಧ್ವಯತಿಯನ್ನು ತನ್ನ ಹೃದಯ ಸಿಂಹಾಸನದಲ್ಲಿ ನೆಲೆಗೊಳಿಸಿಕೊಂಡನು. ಕೃಷ್ಣದೇವರಾಯನು ವ್ಯಾಸರಾಯರನ್ನು, "ನಿಗಮಾಗಮನಿರ್ಹೇತ ನಿರ್ಜರಾಧೀಶ ಮಂತ್ರಿ", "ನೃಪೇಂದ್ರಮುಕುಟೀರತ್ನ ನೀರಾಜಿತನಿಜಾಂಘ್ರಿ", "ನಿರಹಂಕಾರ ಚಿತ್ತ", "ನೀತಿಮಾರ್ಗೋಪ ದೇಶಿಕ" ಮುಂತಾದ ಬಿರುದುಗಳಿಂದ ಸನ್ಮಾನಿಸಿದನೆಂದು ಗೌರವಾಪುರದ ಶಾಸನದಿಂದ ತಿಳಿದುಬರುತ್ತದೆ.[೬೧] ಇದರಿಂದ ವ್ಯಾಸರಾಯರ ಘನತೆಗೆ ಮತ್ತೊಂದು ಕಲಶಪ್ರಾಯವಾಯಿತು. ಹೀಗೆ ಧರ್ಮಗುರುವಾಗಿ, ಧರ್ಮ ಮತ್ತು ಲೋಕವ್ಯವಹಾರಗಳನ್ನು ಸಮನ್ವಯಗೊಳಿಸುವಲ್ಲಿ ತಮ್ಮ ಪ್ರತಿಭೆಯನ್ನು ಮೆರೆದರು.

ವಿಜಯನಗರದ ವಿಠಲೇಶ್ವರ ಸನ್ನಿಧಿಯಲ್ಲಿದ್ದುಕೊಂಡು ವ್ಯಾಸರಾಯರು ತಮ್ಮ ಭಕ್ತಿಪಂಥದ ದ್ವೈತಮತವನ್ನು ಪ್ರಚಾರಮಾಡಿ, ಧಾರ್ಮಿಕ ಜಾಗೃತಿಯನ್ನು ಮೂಡಿಸುವಲ್ಲಿ ತಮ್ಮ ಜೀವಿತ ಕಾಲವನ್ನು ಕಳೆದರು. "ಕೃಷ್ಣದೇವರಾಯನು ಬೆಟ್ಟಕೊಂಡ ಎಂಬ ಗ್ರಾಮವನ್ನು ವ್ಯಾಸಸಮುದ್ರವೆಂಬ ಹೆಸರಿನಲ್ಲಿ ಸರ್ವಮಾನ್ಯ ಏಕಭೋಗ್ಯ ದತ್ತಿಯಾಗಿ ನೀಡಿದಾಗ, ಅದನ್ನು ವ್ಯಾಸತೀರ್ಥರು ೩೦೮ ಜನರಿಗೆ ವಿದ್ಯಾದಾನಕ್ಕಾಗಿ ವೃತ್ತಿಗಳನ್ನಾಗಿ

ಹಂಚಿಕೊಟ್ಟರು."[೬೨] ಇದು ಕ್ರಿ.ಶ. ೧೫೨೬ರ ಕಮಲಾಪುರದ ತಾಮ್ರ ಶಾಸನದಿಂದ ತಿಳಿದುಬರುತ್ತದೆ. ಇದರಿಂದ ವ್ಯಾಸರಾಯರಲ್ಲಿದ್ದ ವಿದ್ಯಾದಾನದ ಆಸಕ್ತಿ ಧ್ವನಿತವಾಗುತ್ತಿದೆ. ವ್ಯಾಸರಾಯರು ಹಂಪಿಯಲ್ಲಿ ಸರಸ್ವತಿ ಪೀಠವೆಂಬ ಘಟಿಕಾಸ್ಥಾನವನ್ನು ನಡೆಸುತ್ತಿದ್ದರು. ಇದರ ಮುಖ್ಯಸ್ಥರಾಗಿ ಶಿಷ್ಯರ ವ್ಯಾಸಂಗಕ್ಕೆ 'ತಾತ್ಪರ್ಯ ಚಂದ್ರಿಕೆ', 'ವ್ಯಾಖ್ಯಾಮೃತ' ಮತ್ತು 'ತರ್ಕತಾಂಡವ' ಎಂಬ ಸಂಸ್ಕೃತ ಗ್ರಂಥಗಳನ್ನು ರಚಿಸಿ ಬೋಧಿಸುತ್ತಿದ್ದರು. ವ್ಯಾಸರಾಯರು ಮಾಧ್ವಮತ ಪ್ರಸಾರಕ್ಕಾಗಿ ಒಂಬತ್ತು ಗ್ರಂಥಗಳನ್ನು ರಚಿಸಿದರು. ಅವು ಖಂಡನತ್ರಯಗಳೆಂದು ಪ್ರಸಿದ್ಧಿಯಾಗಿವೆ.

ವೈಷ್ಣವ ಭಕ್ತಿಮಾರ್ಗಧ ಪ್ರವರ್ತಕರಾಗಿ ಕನ್ನಡದಲ್ಲಿ ಕೀರ್ತನೆಗಳನ್ನು ಬರೆದ ವ್ಯಾಸರಾಯರು ಹರಿದಾಸ ಪಂಥವನ್ನು ಕಟ್ಟಿ ಹರಿಭಕ್ತಿ ಸುಧೆಯನ್ನು ಜನಸಾಮಾನ್ಯರಿಗೆ ಮುಟ್ಟುವಂತೆ ಹರಿದಾಸರನ್ನು ಸಜ್ಜುಗೊಳಿಸಿದರು. ಅದರಲ್ಲಿ ಪುರಂದರ, ಕನಕ, ವೈಕುಂಠದಾಸರು ಪ್ರಮುಖರಾಗಿದ್ದಾರೆ. ಹರಿದಾಸ ಪಂಥವನ್ನು ಕಟ್ಟಿದ ಶ್ರೇಯಸ್ಸು ವ್ಯಾಸರಾಯರದು. ವ್ಯಾಸಕೂಟ-ದಾಸಕೂಟಗಳನ್ನು ಸಂಘಟಿಸಿ ವೈಷ್ಣವ ಭಕ್ತಿ ಪ್ರಸಾರ ಮಾಡಿದರು. ರಾಜಕೀಯ, ಧಾರ್ಮಿಕ ಸಂಘಟನೆಗಳಂಥ ಬಾಹ್ಯವಿಚಾರಗಳಲ್ಲಿ ವ್ಯವಹಾರ ಚತುರತೆಯನ್ನು ತೋರಿದ ವ್ಯಾಸರಾಯರು ಆಂತರಂಗಿಕವಾಗಿ ಭಕ್ತಿಯ ಪರಮೋಚ್ಛ ನೆಲೆಯಲ್ಲಿ ಭಗವಂತನನ್ನು ಆರಾಧಿಸಿದರು. ಈ ಹಿನ್ನೆಲೆಯಲ್ಲಿ ರಾಯನು ವ್ಯಾಸರಾಯರಿಗೂ ಮತ್ತು ಅವರ ಅನುಯಾಯಿಗಳಿಗೂ ನೀಡಿದ ಪ್ರೋತ್ಸಾಹದ ಫಲವಾಗಿ ಕನ್ನಡ ಸಂಸ್ಕೃತಿಯು ಸರ್ವತೋಮುಖವಾಗಿ ಬೆಳೆಯಲು ಸಾಧ್ಯವಾಯಿತು.

ಪುರಂದರದಾಸರು : ಕನ್ನಡ ನಾಡುನುಡಿಗಳಲ್ಲಿ ದಾಸಶ್ರೇಷ್ಠರು ಮತ್ತು ದಯಾನಿಧಿಗಳೆಂದು ಎಲ್ಲಾ ಹರಿದಾಸರಿಂದ ಗೌರವಿಸಲ್ಪಟ್ಟ ದಾಸರು ಕನ್ನಡನಾಡಿಗೆ ಅಪಾರ ಗೌರವ ತಂದ ಕನಕದಾಸರು ಮಹಾಪುರುಷರಾಗಿರುವರು. ಪುರಂದರದಾಸರು ವೇದ ಉಪನಿಷತ್ತು, ಮಹಾಭಾರತ ಹಾಗೂ ರಾಮಾಯಣಗಳ ಸಾರವನ್ನು ನೀತಿಬೋಧನೆಗಳ ಮೂಲಕ ಸಮಾಜ ಸುಧಾರಣೆಯಲ್ಲಿ ಭಗವಂತನ ಸಾಕ್ಷಾತ್ಕಾರಕ್ಕೆ ಜ್ಞಾನಕರ್ಮಗಳಿಗಿಂತ ಭಕ್ತಿಯು ಹೆಚ್ಚು ಉತ್ತಮವಾದುದೆಂಬ ತತ್ವದಡಿಯಲ್ಲಿ ಸುಲಭಮಾರ್ಗವನ್ನು ಸಾಧಿಸಿತೋರಿಸಿದ ಕೀರ್ತಿ ಈ ದಾಸಶ್ರೇಷ್ಠರಿಗೆ ಸಲ್ಲುತ್ತದೆ.

ಕ್ರಿ.ಶ. ೧೩ನೇ ಶತಮಾನದಲ್ಲಿ ಶ್ರೀ ಮಧ್ವಾಚಾರ್ಯರು ಹರಿಭಕ್ತಿಯನ್ನು ಹರಿಸರ್ವೋತ್ತಮನೆಂದು ಪ್ರತಿಪಾದಿಸಿ ಪ್ರಚಾರ ಮಾಡಿದರು. ಭಗವಂತನನ್ನು ಪಡೆಯಲು ಭಕ್ತಿಮಾರ್ಗದಲ್ಲಿ ತೊಡಗಿದ ಅನೇಕರು ಹರಿದಾಸರಾದರು. "ಶ್ರೀಪಾದರಾಯರ ನಂತರ ಶ್ರೀ ವ್ಯಾಸರಾಯರು ಹರಿದಾಸ ಪರಂಪರೆಯನ್ನು ಹರಿದಾಸ ಸಾಹಿತ್ಯವನ್ನು ಬೆಳೆಸಿದರು. ವ್ಯಾಸರಾಯರ ಶಿಷ್ಯರಲ್ಲಿ ಪುರಂದರದಾಸರೂ, ಕನಕದಾಸರೂ ಪ್ರಸಿದ್ಧರಾದ ಹರಿದಾಸರಾಗಿರುವರು."[೬೩] ಪುರಂದರದಾಸರು ವ್ಯಾಸರಾಯರಿಂದ ದಾಸಕೂಟದ ದೀಕ್ಷೆಯನ್ನು ಪಡೆದ ಮೇಲೆ ವಿಜಯನಗರದಲ್ಲಿ ತಮ್ಮ ಜೀವನವನ್ನು ಬಹುಪಾಲು ಕಳೆದರು. ಇವರು ಕೃಷ್ಣದೇವರಾಯನ ಕಾಲದಲ್ಲಿ ಚಿರಪರಿಚಿತರಾಗಿದ್ದರು. ಇವರು ಸರಳವಾದ ಹಾಡುಗಳನ್ನು ರಚಿಸಿ ಸುಮಧುರವಾಗಿ ಹಾಡುತ್ತ ಮುಕ್ತಿಮಾರ್ಗವನ್ನು ತೋರಿಸಿದರು. ದಾಸರು ಪಾಂಡುರಂಗ ವಿಠಲನ ಅಂತರಂಗ ಭಕ್ತರಾಗಿ ಪುರಂದರ ವಿಠಲನೆಂಬ ಅಂಕಿತನೊಡನೆ ತಮ್ಮ ಕೃತಿಗಳನ್ನು ರಚಿಸಿರುವರು. ದಾಸರ ಕಾಲದಲ್ಲಿ ಕೃಷ್ಣ ಮತ್ತು ಪಾಂಡುರಂಗ ವಿಠಲನ ಪೂಜಾಮಂದಿರಗಳಲ್ಲಿ

ಭಜನಾ ಪದ್ಧತಿಗಳು ಆರಂಭವಾಗಿ ಕನ್ನಡ ಹಾಡುಗಳೇ ದೇವರ ಪೂಜಾವಿಧಿಗಳ ಅಂಗವಾದವು. ಸಂಗೀತ ರಚನೆಗಳಲ್ಲಿ ಹೊಸಮಾರ್ಗವನ್ನು ಸಿದ್ಧಗೊಳಿಸಿ, ಈ ರಚನೆಗಳಲ್ಲಿ ಭಾಗವತ ಸಾರವನ್ನು ಅಳವಡಿಸಿ, ಮಾಧ್ವಮತ ಸೂತ್ರಗಳ ನೈತಿಕ ವಿಚಾರಗಳನ್ನು ಸಾಮಾಜಿಕ ಸುಧಾರಣೆಯ ಮನೋಭಾವದೊಂದಿಗೆ ಧರ್ಮಪ್ರಚಾರ ಕಾರ್ಯವನ್ನು ಕೈಗೊಂಡ ದಾಸಶ್ರೇಷ್ಠರೆನಿಸಿದರು. ಇವರ ನೆನಪಿಗಾಗಿ ಹಂಪಿಯಲ್ಲಿ ಅವರಿದ್ದ ಒಂದು ಮಂಟಪವನ್ನು ಪುರಂದರ ಮಂಟಪವೆಂದು ಹೆಸರಿಸಿ ಇಂದಿಗೂ ಉಳಿಸಿಕೊಂಡು ಬರಲಾಗಿದೆ. ಪುರಂದರದಾಸರ ಶ್ರೇಷ್ಠತೆಯನ್ನು ಎತ್ತಿಹಿಡಿಯುವ ಒಂದು ರಚನೆಯನ್ನು ಅವರ ಗುರುಗಳಾದ ಶ್ರೀ ವ್ಯಾಸರಾಯರೇ ಹಾಡಿದ್ದು ಅದರಲ್ಲಿ 'ದಾಸರೆಂದರೆ ಪುರಂಧರ ದಾಸರಯ್ಯಾ' ಎಂದು ಶಿಷ್ಯ ಪುರಂದರದಾಸರನ್ನು ಹಾಡಿ ಹೊಗಳಿದ್ದಾರೆ.

ಕನಕದಾಸರು : ವ್ಯಾಸರಾಯರ ದ್ವಿತೀಯ ಶಿಷ್ಯರಾದ ಕನಕದಾಸರು ಕಾಗಿನೆಲೆ ಎಂಬ ಗ್ರಾಮದವರಾಗಿದ್ದು, ಅಲ್ಲಿನ ದೇವತೆಯಾದ 'ಕಾಗಿನೆಲೆ ಆದಿಕೇಶವ'ನ ನಾಮವನ್ನು ತಮ್ಮ ನಾಮಮುದ್ರಿಕೆಯಾಗಿ ಬಳಸಿಕೊಂಡರು. ಕನಕದಾಸರು ದಾಸಕೂಟದ ಪ್ರಮುಖ ಸದಸ್ಯರಲ್ಲಿ ಒಬ್ಬರಾಗಿ ವೈಷ್ಣವ ಕ್ಷೇತ್ರಗಳನ್ನು ವ್ಯಾಪಕವಾಗಿ ಸಂಚರಿಸಿದರು. ವ್ಯಾಸರಾಯರ ಅಚ್ಚುಮೆಚ್ಚಿನ ಶಿಷ್ಯರಲ್ಲಿ ಕನಕರು ಒಬ್ಬರಾದ ಮೇಲೆ ಉಳಿದ ಶಿಷ್ಯರು ಮತ್ಸರದಿಂದ ಕೊರಗಿದರು. ಇದನ್ನು ಶ್ರೀ ಪುರಂದರದಾಸರ ಒಂದು ಕೀರ್ತನೆಯ ಪಲ್ಲವಿಯಿಂದ ವೇದ್ಯವಾಗುತ್ತದೆ :

"ಕನಕದಾಸನ ಮೇಲೆ ದಯಾಮಾಡಲು
ವ್ಯಾಸಯೋಗಿ ಮಠದವರೆಲ್ಲ ದೂರಿಕೊಂಬರೋ" ||

ಭಕ್ತಿಪಂಥದಲ್ಲಿ ಜಾತಿ-ಮತಗಳಿಗೆ ಸ್ಥಾನವಿಲ್ಲ ಎಂಬುದಕ್ಕೆ ಕನಕದಾಸರು ಉದಾಹರಣೆಯಾದರು. ಕನಕದಾಸರು ಮೊದಲಿಗೆ ರಾಮಾನುಜರ ಪಂಥವರಾಗಿದ್ದರೆನ್ನುವುದಕ್ಕೆ ಹಲವು ಉದಾಹರಣೆಗಳಿವೆ. ಕನಕದಾಸರು ತಮ್ಮ ಕೃತಿ ಮೋಹನತರಂಗಿಣಿಯಲ್ಲಿ ರಾಮಾನುಜರನ್ನು ಕುರಿತು "ಶ್ರೀ ಮದ್ಗುರುರಾಯ ದುರಿತವಿಜೇಯ ದುಷ್ಕಾಮ ವಿಚ್ಛೆದನಾಹ್ಲದ ತಾಮಸಗುಣ ನಾಶ ಸಾತ್ವಿಕೋಲ್ಲಾಸ ಶ್ರೀರಾಮಾನುಜ ಮುನಿಶರಣು" (ಮೋಹನ ತರಂಗಿಣಿ ೧-೩). "ತರ್ಕಕೆ ರಾಮಾನುಜರೊಳು ವಾದಿಸಂಪರ್ಕನಿಲ್ಲುದೆ. ನಿಲ್ಲಲರಿದು (ಮೋಹನ ತರಂಗಿಣಿ ೧-೩) ಎಂದು ಮೊದಲಾಗಿ ನಿಷ್ಠೆ ಹಾಗೂ ಅಭಿಮಾನವನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ರಾಮಾನುಜಾಪಂಥೀಯ ಪ್ರಮುಖರಲ್ಲಿ ತಾತಾಚಾರ್ಯರು ಮುಖ್ಯರಾಗಿರುವರು. ಕನಕದಾಸರು ತಾತಾಚಾರ್ಯರ ಶಿಷ್ಯರಾಗಿ ಅವರಿಂದ ರಾಮಾನುಜ ಸಿದ್ಧಾಂತದ ರಹಸ್ಯಗಳನ್ನೆಲ್ಲಾ ತಿಳಿದುಕೊಂಡು ಅವರಿಂದಲೇ ದೀಕ್ಷೆ ಪಡೆದರು. ರಾಮಾನುಜಾಚಾರ್ಯರ ಶಿಷ್ಯರಾದ ತಾತಾಚಾರ್ಯರ ಬಗೆಗೆ ಅಪಾರ ಭಕ್ತಿಯನ್ನು ಪ್ರಕಟಿಸಿದ್ದಾರೆ. "ಈ ರೀತಿ ಪೆಂಪುವಡೆದ ಸದ್ಗುರುಕರ ವಾರಿಜೋದ್ಭವ ಶಿಷ್ಯಜನರ ಪ್ರೇರಿಸಿ ಚತುರ್ವಿದ ಫಲವೀವ ತಾತಾಚಾರ್ಯರಡಿಗೆ ವಂದಿಸುವೆ" ಎಂದು ಹೇಳಿರುವರು. ಈ ಆಧಾರಗಳಿಂದ ದಾಸರು ಶ್ರೀ ವೈಷ್ಣವರಾಗಿರಬಹುದು ಎಂಬ ಅನುಮಾನ ಬರುತ್ತದೆ.

ಆದರೆ ಮುಂದೆ ಮಾಧ್ವಮುನಿಯಾದ ವ್ಯಾಸರಾಯರಿಂದ ಮಾಧ್ವದೀಕ್ಷೆಯನ್ನು ಪಡೆದರು. ವಿಜಯನಗರದಲ್ಲಿ ಕೃಷ್ಣರಾಯರ ಕುಲಗುರುವಾಗಿದ್ದ ವ್ಯಾಸರಾಯರಿಂದ ಶಿಷ್ಯತ್ವವನ್ನು ಸ್ವೀಕರಿಸಿ, ದಾಸಕೂಟದಲ್ಲಿ ಉದ್ಧಾಮ

ಪಂಡಿತರೆನಿಸಿದರು. ವ್ಯಾಸರಾಯರು ವ್ಯಾಸಸಮುದ್ರದ ನಿರ್ಮಾಣ ಕಾರ್ಯದಲ್ಲಿ ತೊಡಗಿದಾಗ ಕನಕದಾಸರು ಅವರ ದರ್ಶನ ಪಡೆದರೆನ್ನುವುದು ಕಾವ್ಯದಿಂದ ತಿಳಿಯುತ್ತದೆ. "ರಾಯರಿಂದ ವ್ಯಾಸಸಮುದ್ರದ ಉಂಬಳಿ ದೊರೆತ ಮೇಲೆ ಕ್ರಿ.ಶ. ೧೫೨೬ರಲ್ಲಿ ವ್ಯಾಸಸಮುದ್ರ ಕಟ್ಟಲು ಆರಂಭಿಸಲಾಯಿತು."[೬೪] ವ್ಯಾಸರಾಯರು ಕ್ರಿ.ಶ. ೧೫೨೬ರಲ್ಲಿ ವಿಜಯನಗರದಲ್ಲಿ ಕಾಲಾಧೀನರಾದ ಮೇಲೆ ಕನಕದಾಸರು ಅವರ ಇಚ್ಛೆಯಂತೆ ಅವರ ತಂಬೂರಿಯನ್ನು ತಿರುಪತಿಯಲ್ಲಿರಿಸಿದನೆಂದೂ ಬೆಟಗೇರಿ ಕೃಷ್ಣಶರ್ಮರ ಹೇಳಿಕೆಯಾಗಿದೆ.[೬೫] ಕನಕರು ಮೊದಲು ಶ್ರೀರಾಮಾನುಜ ಮತದ ಶ್ರೀವೈಷ್ಣವ ತತ್ವವನ್ನು ಸ್ವೀಕರಿಸಿ 'ಮೋಹನ ತರಂಗಿಣಿ' ಮೊದಲಾದ ಗ್ರಂಥಗಳನ್ನು ಬರೆದಿದ್ದರೂ, ತಮ್ಮ 'ಹರಿಭಕ್ತಸಾರ'ದಲ್ಲಿಯೂ ಹಾಗೂ ಇತರ ಪದ್ಯಗಳಲ್ಲಿಯೂ ಮಾಧ್ವಸಂಪ್ರದಾಯದ ಪ್ರಮೇಯಗಳನ್ನು ಎತ್ತಿಹಿಡಿದಿದ್ದಾರೆ. ಆದ್ದರಿಂದ ಇವರು ಕಡೆಯ ಭಾಗದಲ್ಲಿ ಮಾಧ್ವ ವೈಷ್ಣವರಾಗಿ ಕಾಗಿನೆಲೆಯಲ್ಲಿ ನೆಲಸಿ ಅಲ್ಲಿಯೇ ಹರಿಪದವನ್ನೇರಿದರೆಂದು ಊಹಿಸಬಹುದು."[೬೬] ಆದರೆ "ಕನಕದಾಸರು ಯಾವೊಂದು ಮತದ ಪಡಿಯಚ್ಚಿನಲ್ಲಿ ಮಾತ್ರ ಬೆಳೆಯದೆ ಎಲ್ಲಾ ಮತದ ಸಾರಗ್ರಾಹಿಯಾದ ಪರಮ ಭಕ್ತನಾಗಿದ್ದನೆನ್ನುವ ಶ್ರೀ ಮುಗಳಿಯವರ ಹೇಳಿಕೆ ಸಮಂಜಸವಾಗಿದೆ."[೬೭]

ಕನಕದಾಸರು ತಮ್ಮ ಜೀವಿತದ ಕಾಲದಲ್ಲಿ ಮಹತ್ವದ ಕೃತಿಗಳನ್ನು ರಚಿಸಿ ಅಳಿಸಲಾಗದ ಕೊಡುಗೆಗಳನ್ನು ನೀಡಿರುವರು. ಅವರ ಕೃತಿಗಳಲ್ಲಿ ವೈಷ್ಣವ ಪಂಥೀಯ ಸನ್ನಿವೇಶಗಳಿಂದ ತುಂಬಿದ ಕಥೆಗಳ ಚಿತ್ರಣವನ್ನು ನೀಡಿರುವರು. ಅವರ ಮೊದಲ ಕೃತಿಯಾದ 'ಮೋಹನ ತರಂಗಿಣಿ'ಯಲ್ಲಿ ಕೃಷ್ಣನ ವಿಷಯವಾಗಿ ಚಿತ್ರಿಸಿದ್ದಾರೆ. ಅದೇ ರೀತಿ 'ಹರಿಭಕ್ತಸಾರ', 'ನಳಚರಿತೆ'ಯಲ್ಲಿ ಉಜ್ವಲವಾಗಿ ಶ್ರೀಕೃಷ್ಣಪರಮಾತ್ಮನ ಶಕ್ತಿಯನ್ನು ಬಣ್ಣಿಸಿರುವರು. ಈ ಹಿನ್ನೆಲೆಯಲ್ಲಿ ದಾಸಕೂಟದವರು ಭಕ್ತಿಯ ಸೆಲೆಯನ್ನು ಎಬ್ಬಿಸಿ ಕೃಷ್ಣದೇವರಾಯನ ಕಾಲದಲ್ಲಿ ವೈಷ್ಣವ ಮತಧರ್ಮವನ್ನು ಅದರ ತತ್ವಗಳನ್ನು ಸರಳ ಪ್ರಚಾರ ಮಾಡಿದರು. ಇದಕ್ಕೆಲ್ಲಾ ಅರಸರ ಬೆಂಬಲವಿದ್ದರೆ, ಮಠಾಧಿಪತಿಗಳ ಕೆಚ್ಚು ಧರ್ಮಪ್ರಚಾರಕ್ಕೆ ಅನುವುಮಾಡಿಕೊಟ್ಟಿತು.

ಧರ್ಮಸಮನ್ವಯ

ವಿಜಯನಗರ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದಂದಿನಿಂದ ಮತೀಯ ವಿಚಾರದಲ್ಲಿ ಸಮನ್ವಯತೆಯನ್ನು ಕಾಪಾಡಿಕೊಂಡು ಬಂದಿದ್ದು ಗಮನಿಸಬಹುದು. ವಿಜಯನಗರ ಅಧಿಪತಿಗಳು ಸಾಮ್ರಾಜ್ಯದಲ್ಲಿ ವಿವಿಧ ಮತಧರ್ಮ, ಪಂಥ-ಉಪಪಂಥಗಳು ಒಟ್ಟೊಟ್ಟಿಗೆ ಸಹಬಾಳ್ವೆ ನಡೆಸುವ ಸೌಹಾರ್ದ ವಾತಾವರಣವನ್ನು ಒದಗಿಸಿ ಕೊಟ್ಟಿದ್ದರು. ಇವರ ಉದಾರವಾದಿ ಧಾರ್ಮಿಕ ಧೋರಣೆಗಳು ಶೈವ, ವೈಷ್ಣವ, ಜೈನ, ಇಸ್ಲಾಂ, ಕ್ರೈಸ್ತಧರ್ಮ ಪಂಥಗಳು ಸಮಾನ ರೀತಿಯಲ್ಲಿ ಬದುಕಲು ಕಾರಣವಾಯಿತು. ವಿಜಯನಗರ ಅರಸರಲ್ಲಿ ತಮ್ಮ ಮತವಿಚಾರಗಳು ಏನೇ ಇದ್ದರೂ ಅವರು ವರ್ಣಾಶ್ರಮ ಧರ್ಮ ಪರಿಪಾಲಕರಾಗಿದ್ದರು. ಇಲ್ಲಿನ ಸಂಸ್ಕೃತಿಯಲ್ಲಿ ಧಾರ್ಮಿಕ ಅಸಹಿಷ್ಣುತೆ ತುಂಬಾ ವಿರಳ. ಇಲ್ಲಿಯ ನಿಯಮವೆಂದರೆ ಧಾರ್ಮಿಕ ಸಹನೆ. ಕೆಲವು ತಿಕ್ಕಾಟಗಳು ನಡೆದಿರಬಹುದಾದರೂ ಅದು ಸ್ವಾಭಾವಿಕ.

ನಮ್ಮಲ್ಲಿ ಹಿಂದಿನಿಂದಲೂ ಆಳರಸರು, ಅಧಿಕಾರಿಗಳು, ವರ್ತಕರು, ಜನಸಾಮಾನ್ಯರು ಸ್ವಧರ್ಮವನ್ನು ಶ್ರದ್ಧೆಯಿಂದ ಹಿಂಬಾಲಿಸುವುದರ ಜೊತೆಗೆ ಪರಧರ್ಮಗಳ ಬಗೆಗೆ ಸಮನ್ವತೆಯನ್ನು ಸಾಧಿಸುತ್ತಾ ಬಂದಿರುವರು. ಅಲ್ಲದೆ ಪ್ರತಿಯೊಬ್ಬ ವ್ಯಕ್ತಿಗೂ ಅವನ ಒಲವಿನ ಧರ್ಮವನ್ನು ಸ್ವೀಕರಿಸುವ ಸ್ವಾತಂತ್ರ್ಯ ಇದ್ದಿತು.

ದಕ್ಷಿಣಭಾರತಕ್ಕೆ ಬಂದೊದಗಿದ ಘೋರ ವಿಪತ್ತಿನ ಕಾಲದಲ್ಲಿ ಉದಯಿಸಿದ ವಿಜಯನಗರ ಸಾಮ್ರಾಜ್ಯವು ದೇಶೀಯ ಸಭ್ಯತೆ, ಸಂಸ್ಕೃತಿ, ಧರ್ಮ, ಸಾಹಿತ್ಯ, ಕಲೆ ಹಾಗೂ ವಿಶಿಷ್ಟಮೌಲ್ಯಗಳ ರಕ್ಷಣೆಗಾಗಿ ಸ್ಥಾಪನೆಗೊಂಡಿತು. ಪ್ರಾರಂಭಿಕ ಅರಸರು ಅಧಿಕಾರಕ್ಕೆ ಬಂದನಂತರ ಅವರು ಜನರ ವಿಶ್ವಾಸವನ್ನು ಗಳಿಸಲು ಮೊಟ್ಟಮೊದಲು ಮಾಡಿದ ಕಾರ್ಯವೆಂದರೆ, ಧರ್ಮಸಮನ್ವಯತೆ. ನಾಡಿನ ವಿವಿಧ ಧರ್ಮಗಳನ್ನು ಏಕರೀತಿಯಿಂದ ಕಂಡು ಅವುಗಳ ಧರ್ಮ ಪ್ರಸಾರಕ್ಕೆ ಪ್ರೋತ್ಸಾಹವನ್ನು ನೀಡಿ ಆ ಮೂಲಕ ಜನರನ್ನು ತಮ್ಮೆಡೆಗೆ ಒಲಿಸಿಕೊಳ್ಳುವ ತಂತ್ರದಲ್ಲಿ ನಾಡಿನ ಎಲ್ಲಾ ಧರ್ಮಗಳು ಪ್ರಗತಿಹೊಂದಿದವು. ವಿಜಯನಗರದ ಅರಸರು ಯಾವೊಂದು ಮತಧರ್ಮದ ಪರವಾಗಿ ಭೇದಭಾವ, ತಾರತಮ್ಯವನ್ನು ಮಾಡಲಿಲ್ಲ. ಅವರು ಆಂತರಿಕ ಮತೀಯ ಸಾಮರಸ್ಯವನ್ನು ಪ್ರೋತ್ಸಾಹಿಸಿದ ಉದಾಹರಣೆಗಳೇ ಈ ಹಿಂದೆ ಕಂಡುಬಂದಿದೆ. ಶ್ರೀ ವೈಷ್ಣವ - ಜೈನರ ಕಲಹವನ್ನು ನಿವಾರಣೆ ಮಾಡಲು ಬುಕ್ಕರಾಯನು ವೈಷ್ಣವ ಕಯ್ಯಲು ಜೈನರ ಕೈವಿಡಿದುಕೊಟ್ಟು - ವೈಷ್ಣವರು, ಜೈನರು ಒಂದು ಭೇದವಾಗಿ ಕಾಣಲಾಗದು - ವೈಷ್ಣವ ದರ್ಶನಕ್ಕೆಯು ಜೈನರ ದರ್ಶನಕ್ಕೆಯು ಭೇದವಿಲ್ಲ...ವೆಂದು ಸದುಪದೇಶ ಮಾಡಿದನು. ಈ ಸಮನ್ವಯದ ಬಗ್ಗೆ ವಿವರಿಸುವ ಶಾಸನಗಳಿವೆ.[೮] ಇದು ಧರ್ಮಸಮನ್ವತೆಯನ್ನು ತಿಳಿಸುವ ಮಹತ್ವವಾದ ಶಾಸನ. ಅಲ್ಲದೆ ವಿಜಯನಗರ ಕಾಲದಲ್ಲಿ ಕ್ರೈಸ್ತ, ಯಹೂದಿ, ಮುಸ್ಲಿಂ, ಹಿಂದೂ ಯಾರೇ ಆಗಲಿ ಧರ್ಮ ಯಾವುದೆಂದು ಪ್ರಶ್ನಿಸದೆ, ಅವರವರ ಧಾರ್ಮಿಕ ನಂಬಿಕೆಗಳನ್ನು ಅನುಸರಿಸಲು ಪೂರ್ಣ ಸ್ವಾತಂತ್ರ್ಯವಿದ್ದಿತ್ತೆಂದು ವಿದೇಶಿ ಪ್ರವಾಸಿಯಾದ ಬಾರ್ಬೋಸನು ತನ್ನ ವರದಿಯಲ್ಲಿ ಬರೆದಿದ್ದಾನೆ.

ಮುಂದೆ ಪ್ರೌಢದೇವರಾಯನು ವೈಯಕ್ತಿವಾಗಿ ವೀರಶೈವ ಮತಾವಲಂಬಿಯಾಗಿದ್ದರೂ ಅರಸನ ಧರ್ಮದೃಷ್ಟಿ ವಿಶಾಲವಾಗಿತ್ತು. ಜೈನರಿಗೂ ಅಷ್ಟೇ ಸಮಾನವಾದ ಅವಕಾಶಗಳನ್ನು ರಾಜ್ಯದಲ್ಲಿ ನೀಡಿದ್ದನು. ಅಲ್ಲದೆ ಮುಸ್ಲಿಂ ಭಕ್ತರಿಗಾಗಿ ರಾಜಧಾನಿಯಲ್ಲಿ ಮಸೀದಿಯನ್ನು ಕಟ್ಟಿಸಿದನು. ಹಾಗೆಯೇ ತನ್ನ ಸಿಂಹಾಸನದ ಬಳಿಯ ಪವಿತ್ರ ಪೀಠದ ಮೇಲೆ ಒಂದು ಕುರಾನ್ ಪ್ರತಿಯನ್ನಿರಿಸಿ ಮುಸ್ಲಿಂ ಭಕ್ತರ ಪ್ರೀತ್ಯಾದರಗಳಿಗೆ ಪಾತ್ರನಾಗಿದ್ದನು.[೯] ೧೫ನೇ ಶತಮಾನದ ಹಿಂದೂ ಸಮಾಜದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದರೂ ವಿಜಯನಗರ ಅರಸರು ಮಾತ್ರ ವಿಶಾಲವಾದ ತಳಹದಿಯ ಮೇಲೆ ದೇಶದಲ್ಲಿ ಭಾವೈಕ್ಯವನ್ನು, ಧರ್ಮೈಕ್ಯವನ್ನು ಕಾಪಾಡಿಕೊಂಡು ಬಂದರು. ಈ ಪರಮತ, ಪರಧರ್ಮ, ಸಹಿಷ್ಣುತೆ ಮತ್ತು ಗೌರವದ ಉದಾತ್ತ ಮನೋಭಾವ ಪರಂಪರೆಯನ್ನು ವಿಜಯನಗರದ ಮುಂದಿನ ಅರಸರು ಸಹ ಪಾಲಿಸಿಕೊಂಡು ಬಂದರು.

ವಿಜಯನಗರ ಸಾಮ್ರಾಜ್ಯವು ವಿಭಿನ್ನ ಧರ್ಮಗಳ, ವಿಭಿನ್ನ ಆಲೋಚನೆಗಳ ಸಂತರ ನಾಡು. ಒಂದು ಶಾಸನವು ಕರ್ನಾಟಕವನ್ನು 'ಸರ್ವಧರ್ಮ ಧೇನುನಿವಹಕ್ಕಾಡುಂಬೊಲಂ' ಎಂದು ವರ್ಣಿಸಿದೆ. 'ಕೃಷ್ಣದೇವರಾಯನು ತನ್ನ ಸಾಮ್ರಾಜ್ಯದಲ್ಲಿ ಎಲ್ಲಾ ಭಾಷಿಕರಿಗೂ, ಎಲ್ಲಾ ಮತಸ್ಥರಿಗೂ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದ್ದನೆಂಬ ಬಾರ್ಬೋಸನ ಹೇಳಿಕೆಯಲ್ಲಿ ಉತ್ಪ್ರೇಕ್ಷೆ ಇಲ್ಲ.'[೧೦] ಧಾರ್ಮಿಕವಾಗಿ ರಾಜ್ಯದಲ್ಲಿ ಆಯಾಯ ಮತಧರ್ಮದವರಿಗೆ ಪ್ರತ್ಯೇಕವಾದ ಸ್ಥಳಗಳಿರುತ್ತಿದ್ದವು. ಇಲ್ಲಿ ಶೈವ, ವೈಷ್ಣವ ಪಂಥಗಳ ಪ್ರಾಬಲ್ಯ ಹೆಚ್ಚಿತ್ತಾದರೂ, ಈ ಪಂಥಗಳ ಜೊತೆಯಲ್ಲಿಯೇ ಜೈನ ಹಾಗೂ ಮುಸ್ಲಿಂ ಧರ್ಮಿಯರು ವಾಸವಾಗಿದ್ದರು. ಕ್ರೈಸ್ತರು ಮಲೆನಾಡಿನಲ್ಲಿ ಚರ್ಚುಗಳನ್ನು

ಕಟ್ಟಿಕೊಳ್ಳಲು ಅನುಮತಿ ಪಡೆದುಕೊಂಡಿದ್ದರು. ಜಿನಾಲಯಗಳೂ, ಮಸೀದಿಗಳೂ ಅರಸರ ನೆರವಿನಿಂದ ಹಾಗೂ ಪ್ರೋತ್ಸಾಹದಿಂದ ನಾಡಿನಲ್ಲೆಲ್ಲ ನಿರ್ಮಾಣಗೊಂಡವು.

ರಾಯನ ಧರ್ಮನೀತಿಯನ್ನು ಮನುಚರಿತ್ರೆಯಲ್ಲಿ "ಯವನ ಕ್ಷೋಣಿಥವಸ್ಥಾಪನಾ ಮಂದೀಭೂತ ಕೃಪಾಕಟಾಕ್ಷ" ಎಂದು ಕೃಷ್ಣರಾಯನನ್ನು ವಿಶ್ಲೇಷಿಸಿ ಹೊಗಳಲಾಗಿದೆ.[೬೧] ರಾಯನ ಧರ್ಮಸಹಿಷ್ಣುತೆಗೆ ಶಿಖರ ಪ್ರಾಯವಾದದ್ದು. ಬೇರೆ ಮುಸ್ಲಿಂ ರಾಜ್ಯದಲ್ಲಿ ಪೀಡನೆಗೆ ಒಳಗಾದ ಮುಸ್ಲಿಮರಿಗೆ ಇವನು ಆಶ್ರಯ ಕೊಟ್ಟಿದ್ದು. ಇವರನ್ನು ದಾಖಲೆಯಲ್ಲಿ ಟರ್ಕಿವಾಲರೆಂದು ಹೆಸರಿಸಲಾಗಿದೆ.[೬೨] ರಾಯನು ಕಟ್ಟಿಸಿದ ಅನೇಕ ಕಟ್ಟಡಗಳಲ್ಲಿ ಮುಸ್ಲಿಂ ಶೈಲಿಯನ್ನು ಅಳವಡಿಸಿಕೊಳ್ಳಲಾಗಿತ್ತು. ಮುಸ್ಲಿಂರ ವಾಸಕ್ಕೆ ರಾಯನು ಪ್ರತ್ಯೇಕ ಪ್ರದೇಶವನ್ನು ನೀಡಿದ್ದನು. ಆ ಸ್ಥಳವನ್ನು ಗೋರಿ ಕೆಳಗಣ ಗ್ರಾಮವೆಂದೇ ಶಾಸನಗಳು ಹೇಳಿವೆ.[೬೩] ಅವರ ಮತಾಚರಣೆಗೆ ಸಾಮ್ರಾಜ್ಯದಲ್ಲಿ ಯಾವ ನಿರ್ಬಂಧವು ಇರುತ್ತಿರಲಿಲ್ಲ. ವಿಜಯನಗರದಲ್ಲಿ ಮುಸ್ಲಿಮರು ಎಷ್ಟು ನಿರ್ಭೀತರಾಗಿ ಮತ್ತು ಹೆಚ್ಚಿನ ಸಂಖ್ಯೆಯಲ್ಲಿದ್ದರೆಂದರೆ ಒಬ್ಬ ಇತಿಹಾಸಕಾರನು ಅದನ್ನು ಮುಸ್ಲಿಂರ ಊರಿನ ಹಾಗೇ ಇತ್ತೆಂದು ಹೇಳಿದ್ದಾನೆ.[೬೪] ಮುಸ್ಲಿಮರಿಗೂ ಕೂಡಾ ಸಮಾನವಾದ ಸ್ಥಾನ - ಮಾನಗಳನ್ನು ನೀಡಲಾಗಿದ್ದಿತು. ರಾಯನು ಹಿಂದೂ ಸಂಸ್ಕೃತಿಯ ಪೋಷಕನಾಗಿದ್ದರೂ ಇತರ ಧರ್ಮೀಯರ ವಿರೋಧಿಯೆಂದು ತಿಳಿಯಲಾಗದು. ಅವನ ಸೈನ್ಯದಲ್ಲಿ ಮುಸ್ಲಿಂ ಸೈನಿಕರು ಪ್ರಮುಖರಾಗಿದ್ದು, ನೆಮ್ಮದಿಯಿಂದ ಇದ್ದರು. ಮುಸ್ಲಿಂ ಸುಲ್ತಾನರ ವಿರುದ್ಧ ಯುದ್ಧಮಾಡುವಾಗ ಇವರ ಪರವಾಗಿ ಹೋರಾಡುತ್ತಿದ್ದರು.[೬೫] ರಾಯನ ಕಾಲದಲ್ಲಿ ಅನೇಕ ಸಾಮಾಜಿಕ ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ಮುಸ್ಲಿಂ ಕಲಾಶೈಲಿಯನ್ನು ಬಳಸಿಕೊಳ್ಳಲಾಯಿತು. ಇದರಿಂದ ಧರ್ಮಗಳಲ್ಲಿ ಯಾವುದೇ ಬಗೆಯ ಭೇದ ಕಾಣುತ್ತಿರಲಿಲ್ಲ.

ಕೃಷ್ಣದೇವರಾಯನು ವೈಷ್ಣವನಾದರೂ ಶೈವಧರ್ಮದಲ್ಲಿ ಸಮಾನವಾದ ಗೌರವ ಹೊಂದಿದ್ದನೆಂಬುದನ್ನು ಅವನು ಅಚ್ಚುಹಾಕಿಸಿದ ನಾಣ್ಯಗಳಿಂದ ತಿಳಿಯಬಹುದು. ಈ ನಾಣ್ಯಗಳ ಮೇಲೆ ಶಿವಪಾರ್ವತಿಯರ ಚಿತ್ರಗಳಿವೆ. ಇದು ವರಾಹ ನಾಣ್ಯವಾಗಿದ್ದು ತೂಕ ೫೨ ಗ್ರೇನ್ ಮತ್ತು ಅಗಲ ೪೫ ಅಂಗಲದ್ದಾಗಿದೆ.[೬೬] ರಾಯನು ತನ್ನ ಚೈತ್ರಯಾತ್ರೆಯ ಸಂದರ್ಭದಲ್ಲಿ ವಿಜಯಿಯಾಗಿ ಬರುವ ಕಾಲಕ್ಕೆ ಒಂದೊಂದು ಶೈವದೇವಾಲಯಗಳಿಗೆ ಭೇಟಿ ನೀಡಿ ದಾನದತ್ತಿ ನೀಡಿದ್ದು ಶಾಸನಗಳಿಂದ ತಿಳಿಯುತ್ತದೆ. ರಾಯನು ತನ್ನ ಪಟ್ಟಾಭಿಷೇಕದ ಕಾಲದಲ್ಲಿ ಹಂಪೆಯ ಪ್ರಸಿದ್ಧ ಶೈವಕ್ಷೇತ್ರವಾದ ವಿರೂಪಾಕ್ಷನಿಗೆ ದಾನದತ್ತಿಯನ್ನು ನೀಡಿ ಮಂಟಪ ಮತ್ತು ಗೋಪುರಗಳನ್ನು ಕಟ್ಟಿಸಿದುದು ಅವನಿಗೆ ಶೈವಪಂಥದಲ್ಲಿಯೂ ಗೌರವ ಭಾವನೆ ಇದ್ದುದನ್ನು ತೋರಿಸುತ್ತದೆ.[೬೭] ಇಲ್ಲಿ ಶೈವ ಮತ್ತು ವೈಷ್ಣವರನ್ನು ಸರಿಸಮಾನವಾದ ದೃಷ್ಟಿಯಿಂದ ನೋಡುತ್ತಿದ್ದರು. ಆರಂಭದಿಂದ ಕೊನೆಯವರೆಗೂ ವಿಜಯನಗರ ಸಾಮ್ರಾಜ್ಯದ ರಾಜಮುದ್ರೆಯು 'ಶ್ರೀ ವಿರೂಪಾಕ್ಷ' ಎಂದೇ ಪ್ರಚುರಪಡಿಸಲಾಗಿದೆ. ಅಲ್ಲದೆ ಅನೇಕ ಶೈವ ದೇವಾಲಯಗಳಿಗೆ ರಾಯ ಹಾಗೂ ಜನಸಾಮಾನ್ಯರೂ ಅವನ ಕಾಲದಲ್ಲಿ ದತ್ತಿ ನೀಡಿರುವುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ಮುಂದಿನ ಅಂಶಗಳಲ್ಲಿ ಗಮನಿಸಬಹುದು :

ರಾಯನು ಗಂಡೀಕೋಟೆ ಸೀಮೆಯ ಮಹಾರಾಮೇಶ್ವರದ ರಾಮಯ್ಯ ದೇವರಿಗೆ ಚೆನ್ನೂರು ಸೀಮೆಯ ಪಯಿಂಡಾಲೆ ಎಂಬ ಗ್ರಾಮವನ್ನು ಸೇವೆಗಳಿಗೆ ಸಮರ್ಪಿಸಿದನು.[೬೮] ಕಾಳಹಸ್ತಿಯ ಕಾಳಹಸ್ತೀಶ್ವರ ದೇವರಿಗೆ ಒಂದು

ಮುತ್ತಿನಕಂಠಮಾಲೆ, ಮಾಣಿಕ್ಯಕಂಠಮಾಲೆ, ಚಿನ್ನದಬಟ್ಟಲು ಇತರ ಅಮೂಲ್ಯ ವಸ್ತುಗಳನ್ನು ನೀಡಿದ್ದಾನೆ.[೬೯] ಕ್ರಿ.ಶ. ೧೫೧೫ರಲ್ಲಿ ರಾಯನು ಪೂರ್ವದಿಗ್ವಿಜಯದ ಯಾತ್ರೆಯನ್ನು ಕೈಗೊಂಡು ಧರಣಿಕೋಟ ಅಮರೇಶ್ವರಕ್ಕೆ ಹೋಗಿ ದೇವರ ಸನ್ನಿಧಿಯಲ್ಲಿ ತುಲಾಪುರುಷ ಮಹಾದಾನವನ್ನು ಮಾಡಿ ನಂತರ ಶ್ರೀಶೈಲಕ್ಕೆ ಬಂದು ದೇವರ ತೇರು ಬೀದಿಯಲ್ಲಿ ಶಿಲಾಮಂಟಪವನ್ನು ಕಟ್ಟಿಸಿ ಮಲ್ಲಿಕಾರ್ಜುನ ದೇವರ ಮಹಾನ್ನೈವೇದ್ಯಕ್ಕೆ ಗ್ರಾಮಗಳನ್ನು ದತ್ತಿಯಾಗಿ ಬಿಟ್ಟಿರುವನು.[೭೦] ಹಂಪಿಯ ಶ್ರೀ ಪ್ರಸನ್ನ ವಿರೂಪಾಕ್ಷ ದೇವರ ಪೂಜೆ ಉತ್ಸವಗಳಿಗೆ ಗ್ರಾಮವನ್ನು ಸಮರ್ಪಿಸಿದ್ದಾನೆ.[೭೧]

ಅದೇ ರೀತಿ ರಾಯನ ಸಾಮಂತನಾದ ನರಸರಾಜನು ಗೂಳ್ಯಂದ ವಿರೂಪಾಕ್ಷ ದೇವರ ದೇವಾಲಯವನ್ನು ನಿರ್ಮಿಸಿ, ಹೊಲವನ್ನು, ದತ್ತಿಯಾಗಿ ನೀಡಿದನು.[೭೨] ರಾಯನ ಕಾರ್ಯಕರ್ತನಾದ ರಾಯಸದ ಕೊಂಡಮರಸಯ್ಯನು ಕಂಭದೂರಿನ ಮಲ್ಲಿಕಾರ್ಜುನ ದೇವರಿಗೆ ಹೊಲವನ್ನು ದತ್ತಿಯಾಗಿ ನೀಡಿದ್ದಾನೆ.[೭೩] ಸುಂಕಣ್ಣನಾಯಕ ಎಂಬುವವನು ಚೆರುವು ಬೆಳಗಲ್ಲಿನ ವೀರಭದ್ರ ದೇವರಿಗೆ ಭೂಮಿಯನ್ನು ದೊರೆಗೆ ಪುಣ್ಯವಾಗಲಿ ಎಂದು ನೀಡಿದನು.[೭೪] ರಾಯರ ಕಾಲದಲ್ಲಿ ಬಾಗಿಲ ಕೃಷ್ಣರಾಯ ನಾಯಕನು ದೊಡ್ಡಬಸವಣ್ಣ ದೇವರ ಅಮೃತಪಡಿಗೆ ಭೂಮಿಯನ್ನು ದಾನಕೊಟ್ಟ ವಿಷಯವನ್ನು ಅಲ್ಲಿನ ಶಾಸನದಿಂದ ತಿಳಿಯುತ್ತದೆ.[೭೫] ಕುರುಗೋಡಿನ ಮಲ್ಲಪ್ಪನಾಯಕರ ಹೆಂಡತಿಯಾದ ಬಲ್ಲಕುಂದೆಯ ಮಲ್ಲಮ್ಮ ಹೊಜೆಹಾಳ ಶಾಂತಮಲ್ಲಿಕಾರ್ಜುನ ದೇವರ ದೇವಾಲಯದ ಬಾವಿ ಯನ್ನು ಜೀರ್ಣೋದ್ಧಾರ ಮಾಡಿ ದಾನವಾಗಿ ಬಿಟ್ಟಿರುವಳು.[೭೬] ಕಾಶಿವಿಶ್ವನಾಥ ದೇವರ ಪೂಜಾಕಾರ್ಯಗಳಿಗೆ ಭೂಮಿಯನ್ನು ರಾಯನು ದಾನ ನೀಡಿದ್ದನು.[೭೭] ರಾಯನು ವಿನಾಯಕಪುರವೆಂಬ ಗ್ರಾಮ ಹಾಗೂ ಕೆರೆಯನ್ನು ಕಟ್ಟಿಸಿ, ಕೋಟೆ ವಿನಾಯಕನ ಪೂಜೆ, ಪುನಸ್ಕಾರ, ರಥೋತ್ಸವ ಮುಂತಾದವುಗಳನ್ನು ನಡೆಸಲು ಗ್ರಾಮವನ್ನು ದತ್ತಿಯಾಗಿ ನೀಡಿದನು.[೭೮] ರಾಯನ ಆಳ್ವಿಕೆಯಲ್ಲಿ ಕುರಿಕುಪ್ಪೆಯಲ್ಲಿ ಹೆಗ್ಗರಸರ ಮಗನಾದ ಬೆನಕರಸನು ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿ ಬಸವಾದಿಕ್ಷೇತರಿಂದ ಭೂಮಿಯನ್ನು ಪಡೆದು ದಾನವಾಗಿ ನೀಡುತ್ತಾನೆ.[೭೯] ಈ ಎಲ್ಲ ಶಾಸನಗಳ ಹಿನ್ನೆಲೆಯಲ್ಲಿ ನಾಡಿನ ವೈಷ್ಣವ ದೇವಾಲಯಗಳಿಗೆ ನೀಡಿದಂಥ ಪ್ರೋತ್ಸಾಹವು ಶೈವದೇವಾಲಯಗಳ ನಿರ್ಮಾಣಕಾರ್ಯದಲ್ಲಿ ಹಾಗೂ ಅವರು ನೀಡಿದ ದಾನದತ್ತಿಗಳಿಂದ ತಿಳಿಯಬಹುದು. ರಾಯನ ಕಾಲದಲ್ಲಿ ಶೈವ, ವೈಷ್ಣವ, ಜೈನ, ಇಸ್ಲಾಂ, ಕ್ರೈಸ್ತ ಧರ್ಮಗಳಿಗೂ ಸಮಾನತೆಯನ್ನು ನೀಡಲಾಗಿದ್ದು, ದೇವಾಲಯ, ಮಸೀದಿ, ಚರ್ಚು, ಬಸದಿಗಳು ಸಮವಾಗಿ ನಿರ್ಮಾಣಗೊಂಡು ಅನೇಕ ರೀತಿಯ ಅಮೂಲ್ಯವಾದ ದಾನದತ್ತಿಗಳನ್ನು ಪಡೆದುಕೊಂಡು ತಮ್ಮ ಕಲಾಶೈಲಿಯನ್ನು ಅಳವಡಿಸಿದವು.

ರಾಯನ ಕಾಲದಲ್ಲಿ ಪ್ರತಿಯೊಂದು ಧರ್ಮ ಹಾಗೂ ಪಂಥಗಳು ಸಮಾನವಾಗಿ ತಮ್ಮ ಧಾರ್ಮಿಕ ಪ್ರಸಾರಕಾರ್ಯದಲ್ಲಿ ತೊಡಗಿ ಧಾರ್ಮಿಕ ರಕ್ಷಣೆಯಲ್ಲಿ ತೊಡಗಿದ್ದವು. ವೈಷ್ಣವ ಧರ್ಮವು ನಾಡಿನಾದ್ಯಂತ ಪ್ರೋತ್ಸಾಹವನ್ನು ಪಡೆದುಕೊಂಡು ತನ್ನ ಉನ್ನತಿಯನ್ನು ಮುಟ್ಟಿತು. ರಾಯನು ವೈಷ್ಣವ ಧರ್ಮಕ್ಕೆ ನೀಡಿದ ಪ್ರೋತ್ಸಾಹದ ಫಲದಿಂದ ಅನೇಕ ದೇವಾಲಯ, ಮಠಗಳು ಧಾರ್ಮಿಕತೆಯ ಸಂಕೇತಗಳಾಗಿ ತಮ್ಮ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದವು.


*

ಟಿಪ್ಪಣಿಗಳು

೧. ಕನ್ನಡ - ಕನ್ನಡ ಕಸ್ತೂರಿ ಕೋಶ, ಧಾರವಾಡ, ಪು. ೫೧೦
೨. ಇಂಗ್ಲಿಶ್ - ಕನ್ನಡ ನಿಘಂಟು, ಮೈಸೂರು ವಿಶ್ವವಿದ್ಯಾನಿಲಯ, ೧೯೯೯, ಪು. ೭೮೫
೩. ಕರ್ನಾಟಕ ಚರಿತ್ರೆ ಸಂ, ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೬೫
೪. ಆರ್.ಎಸ್.ಶರ್ಮ, ಪ್ರಾಚೀನ ಭಾರತ, ೧೯೯೭, ಪು. ೬೧
೫. ಅದೇ, ಪು. ೭೮
೬. ಕನ್ನಡನಾಡಿನ ಚರಿತ್ರೆ ಭಾಗ ೨, ಕರ್ನಾಟಕದ ಧರ್ಮಗಳು, ಪು. ೨೨೬
೭. ಆರ್.ಎಸ್. ಶರ್ಮ, ಪೂರ್ವೋಕ್ತ, ಪು. ೧೫೮ - ೫೯
೮. ಆರ್.ಎಸ್. ಶರ್ಮ, ಪೂರ್ವೋಕ್ತ, ಪು. ೨೧೩
೯. ಕರ್ನಾಟಕ ಚರಿತ್ರೆ ಸಂಪುಟ ೧, ಪು. ೩೧೫
೧೦. ಕರ್ನಾಟಕ ಚರಿತ್ರೆ ಸಂಪುಟ ೧, ಪು. ೩೯೮
೧೧. ಕರ್ನಾಟಕ ಚರಿತ್ರೆ ಸಂಪುಟ ೧, ಪು. ೪೮೨
೧೨. ಕರ್ನಾಟಕ ಚರಿತ್ರೆ ಸಂಪುಟ ೧, ಪು. ೪೮೪
೧೩. ಕರ್ನಾಟಕದ ಧರ್ಮಗಳು, ಪು. ೨೬೭
೧೪. ಕವಿಶಾಸಂ - ೩, ಹಂಪಿ, ಸಂಖ್ಯೆ. ೧೪೫
೧೫. The Aravidu Dynasty of Vijayanagar, Pp. 540-41
೧೬. TTDI, Vol-II, Nos No. 18,19, 23, 41, 42, 76
೧೭. ಭಾರತೀಯ ಸಂಸ್ಕೃತಿ, ೧೯೫೪, ಪು. ೧೪೨
೧೮. Contribution of South India to Indian Culture, p. 286
೧೯. Early History of Vaishnavism in South India, p. 8
೨೦. ಎಸ್.ಕೆ.ಆರ್. ತಿರುಪತಿ - ತಿಮ್ಮಪ್ಪ, ಪು. ೧೪೬
೨೧. ಇತಿಹಾಸ ದರ್ಶನ, ಸಂ. ೫, ಪು. ೧೬೯
೨೨. ಮನುಚರಿತ್ರೆ - ಆಶ್ವಾಸ ೪, ಪದ್ಯ ೧೨೦
೨೩. SII, Vol-ix - ii, No. ೫೦೭
೨೪. ಆಮುಕ್ತಮಾಲ್ಯದ - ಆಶ್ವಾಸ ೪, ಪದ್ಯ ೩೫
೨೫. ಆಮುಕ್ತಮಾಲ್ಯದ, ಪು. ೧೮, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯
೨೬. ಆಮುಕ್ತಮಾಲ್ಯದ, ಪು. ೧೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯
೨೭. ಆಮುಕ್ತಮಾಲ್ಯದ, ಪು. ೨೭, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯
೨೮. ಶ್ರೀಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ, ಪು. ೩೦
೨೯. ಇಂಡಿಯನ್ ಆರ್ಕಿಟೆಕ್ಚರ್, ಸಂ. ೧, ಪು. ೧೬೪
೩೦. TTDI, Vol-I, No. 184
೩೧. ವಿಜಯನಗರ ನಾಣ್ಯ ಸಂಪತ್ತು, ಪು. ೪೧
೩೨. ಹಂಪಿ ಪರಂಪರೆ, ಪು. ೮
೩೩. ತಿರುಪತಿ - ತಿಮ್ಮಪ್ಪ, ಪು. ೧೩೭, TTDI, Vol-iii, No. 33, 40, 91, 62, 67, 72, 83, TTDI, Vol-I, No. 77
೩೪. ತಿರುಪತಿ - ತಿಮ್ಮಪ್ಪ, ಪು. ೧೪೩
೩೫. ಅದೇ, ಪು. ೧೪೪
೩೬. ಅದೇ, ಪು. ೧೪೫
೩೭. SII, XXVI, No. 714
೩೮. SII, IX, ii, No. 485
೩೯. ಎ.ಕ. iii, ನಂಗೂ, ಸಂಖ್ಯೆ ೧೯೦
೪೦. ಕವಿಶಾಸಂ - ೨, ಕೊಪ್ಪಳ, ಸಂಖ್ಯೆ ೧೬೦
೪೧. SII, IX-ii, No. 494
೪೨. SII, XVVI, No. 677-84
೪೩. ಕವಿಶಾಸಂ - ೨, ಕೊಪ್ಪಳ, ಹತೋಟಿ, ಸಂಖ್ಯೆ ೧೬೧
೪೪. SII, XVI, No. 68
೪೫. SII, XVI, No. 71


೪೬. E.C. 9, No. 159
೪೭. SII, Vol-XVI, No. 78, 79, 84
೪೮. SII, VOl-XVI, No. 53
೪೯. ಎ.ಕ., ಸಂ. ೩, ಸಂಖ್ಯೆ ೨೮೫
೫೦. ಎ.ಕ., ಸಂ. ೪, ಸಂಖ್ಯೆ ೩೮೭
೫೧. SII, IV, No. 250
೫೨. SII, IX-ii, No. 510
೫೩. SII, IX-ii, No. 504
೫೪. ARSIE, 4344, No. 70
೫೫. ವಿಜಯನಗರ ಸಾಂಸ್ಕೃತಿಕ ಆಯಾಮಗಳು, ಪು. ೩೯
೫೬. SII, Vol. IX-ii, p. 513
೫೭. ಕೃಷ್ಣದೇವರಾಯ, (ಅನು), ಚದುರಂಗ, ೧೯೭೧, ಪು. ೩೯
೫೮. ವ್ಯಾಸಯೋಗಿ ಚರಿತಾಮೃತ, ಪುಟ - ಪೀಠಿಕೆ, LXVI
೫೯. ದತ್ತಿ ಉಪನ್ಯಾಸಗಳು, ೧೯೮೬, ಬಿ.ಎಂ.ಶ್ರೀ ಸ್ಮಾರಕಪ್ರತಿಷ್ಠಾನ, ಬೆಂಗಳೂರು, ಪು. ೮
೬೦. ಕವಿಶಾಸಂ - ೩, ಹಂಪಿ, ಸಂಖ್ಯೆ. ೬೩-೬೪
೬೧. ಭೂಷಣ - ಚಿಮೂ, ಪು. ೪೬೨
೬೨. Epigraphy of India-31, No.3
ಬೆಟಗೇರಿ ಕೃಷ್ಣಶರ್ಮ, (ಸಂ), ಸಂಕೀರ್ತನ ಸಂಗ್ರಹ, ಪು. ೭೪
೬೩ ಕರ್ನಾಟಕ ಸಂಗೀತ ದೀಪಿಕೆ, ಪು. ೩೨೦
೬೪. ಮೋಹನ ತರಂಗಿಣಿ ಸಂಗ್ರಹ, ಪು. ೧೦
೬೫. ಕರ್ನಾಟಕದ ಜನಜೀವನ, ಪು. ೮೧
೬೬. ಕನಕದರ್ಶನ, ೧೯೭೪, ಪು. ೧೦
೬೭. ಕನಕ ಸಾಹಿತ್ಯ ಚರಿತ್ರೆ, ೧೯೬೦, ಪು. ೨೯೭
೬೮. ಎ.ಕ., Vol-9, ಮಾಗಡಿ, ಸಂಖ್ಯೆ ೧೮, ಕಲ್ಯ
೬೯. My- Gezz, ii, Part iii, p. 1574
೭೦. ಪ್ರವಾಸಿ ಕಂಡ ಇಂಡಿಯಾ, ಸಂ. ii, ಪು. ೨೯೧
೭೧. ಮನುಚರಿತ್ರೆ, ಆಶ್ವಾಸ ೩, ಪದ್ಯ ೧೪೨
೭೨. An account of Ibrahim Adilshah of Bijapur, The J.B.O.R.S. XXVI, ೧೯೪೦, p. ೬೩
೭೩. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೧
೭೪. Burton Stein : Vijayanagara, p. 123
೭೫. F.E.R.S., p. 267
೭೬. ವಿಜಯನಗರ ನಾಣ್ಯ ಸಂಪತ್ತು, ಪು. ೮೬
೭೭. ಕವಿಶಾಸಂ - ೩, ಹಂಪಿ, ಸಂಖ್ಯೆ ೩೪
೭೮. ಕವಿಶಾಸಂ - ೫, ಭಾಗ ೨, ಸಂಖ್ಯೆ ೩೬೮
೭೯. ಕವಿಶಾಸಂ - ೫, ಭಾಗ ೧, ಸಂಖ್ಯೆ ೨೪೫ - ೪೬
೮೦. ಕವಿಶಾಸಂ - ೫, ಭಾಗ ೧, ಸಂಖ್ಯೆ ೩೪೩
೮೧. ಕವಿಶಾಸಂ ೩, ಸಂಖ್ಯೆ ೨೩೫, ೨೫೦, ೩೯೭
೮೨. ಕವಿಶಾಸಂ - ೫, ಭಾಗ ೧, ಸಂಖ್ಯೆ ೩೧೬
೮೩. ಅದೇ, ಸಂಖ್ಯೆ ೧೭೩
೮೪. ಅದೇ, ಸಂಖ್ಯೆ ೩೫೬
೮೫. ಕವಿಶಾಸಂ - ೧, ಬಳ್ಳಾರಿ, ಸಂಖ್ಯೆ ೯
೮೬. ಕವಿಶಾಸಂ - ೧, ಬಳ್ಳಾರಿ - ಕುರುಗೋಡು, ಸಂಖ್ಯೆ ೧೦
೮೭. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೪
೮೮. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೩೧
೮೯. ಕವಿಶಾಸಂ - ೧, ಸಂಡೂರು, ಸಂಖ್ಯೆ ೨೦

❑❑



ಅಧ್ಯಾಯ ೪

ವೈಷ್ಣವ ದೇವಾಲಯಗಳು



ಷಡ್ವರ್ಗ ದೇವಾಲಯದ ನೋಟ

೪

ವೈಷ್ಣವ ದೇವಾಲಯಗಳು

ದೇವಾಲಯವೆಂಬುದು ಒಂದು ಧಾರ್ಮಿಕ ಕಟ್ಟಡ, ಸಾಮೂಹಿಕ ಪೂಜೆ ಪ್ರಾರ್ಥನೆ ಸಲ್ಲಿಸಲು ಅನುಕೂಲವಿರುವ ಒಂದು ಜಾಗ ಅಥವಾ ಸ್ಥಳ. ಇದಕ್ಕೆ ದೇವಾಲಯ, ದೇವಸ್ಥಾನ, ಗುಡಿ, ದೇವಮಂದಿರ, ದೇವಗಾರ, ದೇವಳ, ದೇಗುಲ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಇಂಗ್ಲಿಶ್ ಭಾಷೆಯಲ್ಲಿ 'ಟೆಂಪಲ್' ಎಂಬ ಶಬ್ದಕ್ಕೆ ದೇವರು ನೆಲೆಸಿರುವ ಸ್ಥಳ, ದೇವಾಲಯ, ದೇವಸ್ಥಾನ, ಗುಡಿ ಎಂಬ ಅರ್ಥವೂ ಇದೆ.[1] ದೇವಾಲಯ ಎಂದರೆ ದೇವರು ಇರತಕ್ಕ ಸ್ಥಾನ, ಎಡೆ, ಜಾಗ ಎಂದು ಅರ್ಥ. ನಮ್ಮ ಮನಸ್ಸಿನ ಕಲ್ಪನೆಗೂ ಮೀರಿದ ಮನಸ್ಸಿಗೆ ಯಾವುದು ಆಧಾರವಾಗಿರುತ್ತದೆಯೋ ಅದು ದೇವರು. ದೇವರು ಸರ್ವವ್ಯಾಪಿ, ಅಣುರೇಣು ತೃಣಕಾಷ್ಠಗಳಲ್ಲಿ ದೇವರಿದ್ದಾನೆ. ಆದುದರಿಂದ ಪ್ರಾಚೀನ ಕಾಲದಲ್ಲಿ ದೇವಮಂದಿರಗಳ ಕಲ್ಪನೆ ಅಂದಿನ ಜನರ ಭಾವನೆಗೆ ಒಡಮೂಡಿದ್ದುದು ವಿಶೇಷವೇ ಸರಿ. ದೇವಾಲಯಗಳ ಉಗಮ, ಬೆಳವಣಿಗೆ ಇತ್ಯಾದಿಗಳನ್ನು ತಿಳಿಯಬೇಕಾದರೆ ನಮ್ಮ ಶಾಸ್ತ್ರಾಧ್ಯಯನ ಮಾನಸಾರದಂಥ ಗ್ರಂಥಗಳು ದೇವಾಲಯಗಳ ಬಗೆಗೆ ವಿಶೇಷ ವಿವರಗಳನ್ನು ನೀಡುತ್ತವೆ.

ಉಗಮ

ಪ್ರಾಚೀನ ಭಾರತದ ವಾಸ್ತುಶಿಲ್ಪ ಚರಿತ್ರೆಯಲ್ಲಿ ಇದುವರೆಗೆ ದೇವಾಲಯಗಳ ಸ್ಪಷ್ಟ ಚಿತ್ರಣ ನಮಗೆ ಶಿಲಾಯುಗದ ಜನರ ಪ್ರಕೃತಿಪೂಜೆ, ಸಮಾಧಿಪೂಜೆಗಳಿಂದ ಸಿಗುತ್ತದೆ. ಕ್ರಮೇಣ ಇವು ಪ್ರತಿಮಾರೂಪ ಪಡೆದು ಸಾಂಘಿಕ ಆರಾಧನೆಗಾಗಿ ದೇವಾಲಯಗಳು ನಿರ್ಮಾಣಗೊಂಡಿರಬೇಕು. ಮನುಷ್ಯನು ಪ್ರಾಣಿವರ್ಗದ ಕೆಳ ಹಂತಗಳಿಂದ ತಲೆಯೆತ್ತಿ ನಿಂತಾಗಲೇ ಧರ್ಮವು ಅವನ ನೆರವಿಗೆ ಬಂತು. ಧರ್ಮದ ಹುಟ್ಟಿಗೆ ಭಯವೂ ಒಂದು ಮೂಲಕಾರಣ ವಾಯಿತು. ಆದಿಮಾನವನು ನಿಸರ್ಗದ ಮಡಿಲಲ್ಲಿ ಅಡಗಿರುವ ವೈಚಿತ್ರ್ಯ, ಅದ್ಭುತಗಳನ್ನು ಕಂಡು ಭಯವಿಸ್ಮಿತನಾಗಿ, ದಿಗ್ಭ್ರಾಂತಗೊಂಡು ಅವನಲ್ಲಿ ಭಯವು ಮೂಡಿತು. ಪ್ರಕೃತಿಯಲ್ಲಿ ಯಾವುದೋ ಶಕ್ತಿ ಅಡಗಿದೆಯೆಂಬ ಅರಿವಾಗಿ

ಅದರ ವಿಚಾರದಲ್ಲಿ ಪೂಜ್ಯಭಾವ ಮೂಡಿತು. ಈ ಕಾರಣದಿಂದಲೇ ಗಿಡ, ಮರ, ನದಿ ಇತ್ಯಾದಿಗಳು ಪೂಜ್ಯನೀಯವಾದುವಲ್ಲದೆ, ಪೂಜ್ಯಸ್ಥಾನಗಳೂ ಆದವು.

ಅಪೂರ್ವ, ಅದ್ಭುತ, ದಿವ್ಯವೆಂದಾದುದನ್ನು ಅನುಭವಿಸುವ ಸಾಮರ್ಥ್ಯವಿರುವಂತೆಯೇ ಮನುಷ್ಯನಿಗೆ ಅದರ ಪ್ರತಿಕೃತಿಗಳನ್ನು ಕಲ್ಪಿಸಿಕೊಳ್ಳುವ, ರೂಪಿಸುವ ಸೃಜನಶಕ್ತಿಯೂ ಬೆಳೆಯಿತು. ನಿಸರ್ಗದತ್ತವಾದ ವಸ್ತುಗಳನ್ನು ಸಣ್ಣ ಪ್ರಮಾಣದಲ್ಲಿ ಕಲಾತ್ಮಕವಾಗಿ ಮಾಡಿಕೊಳ್ಳುವ ಹವ್ಯಾಸವೂ ನಿಸರ್ಗ ಸಿದ್ಧವಾದುದೇ. ಧರ್ಮದ ನೆಲೆಯಲ್ಲಿ ಪ್ರತಿಕೃತಿಗಳ ಬಳಕೆಯ ಮುನ್ನ ಪ್ರಕೃತಿ ಸಿದ್ಧವಾದ ಪ್ರತಿಮೆಗಳನ್ನು ಬಳಸುವ ಪದ್ಧತಿ ಇದ್ದಿತು. ಇದಲ್ಲದೆ ಇನ್ನೊಂದು ಬಗೆಯ ಧಾರ್ಮಿಕ ಕಲ್ಪನೆಯೂ ಒಡಮೂಡಿತು. ಆದಿಮಾನವನು ಬೇಟೆಗೆ ಹೊರಡುವ ಮುನ್ನ ಗುಹೆಯೆದುರು ಚಿತ್ರಮಂಡಲವೊಂದನ್ನು ಬರೆದು ಅದರ ನಡುವೆ ತನಗೆ ಬೇಕಾದ ಪ್ರಾಣಿಯ ಆಕಾರವನ್ನು ಸ್ಥೂಲವಾಗಿ ಬರೆದು, ಅದರ ಮೈಮೇಲೆ ಬಾಣವೊಂದು ನಾಟಿದಂತೆ ಗುರುತಿಸಿ ಬೇಟೆಗೆ ಹೊರಡುತ್ತಿದ್ದ. ಪ್ರಾಣಿಯೊಂದರ ಚರ್ಮವೊಂದನ್ನು ಮೈಮೇಲೆ ಧರಿಸಿ ಹೊರಟರೆ ಹಿಡಿದ ಕೆಲಸದಲ್ಲಿ ಜಯ ಎಂಬ ನಂಬಿಕೆ. ಕಾಕತಾಳೀಯವಾಗಿ ಆ ದಿನ ಜಯ ಒದಗಿದರೆ ಅದಕ್ಕೆ ಕಾರಣ ಚರ್ಮ ಪದಾರ್ಥ ಎಂಬ ನಂಬಿಕೆ ಬೇರೂರಿತು. ಮುಂದೆ ಯಾವ ಕೆಲಸಕ್ಕೆ ಹೋದರೂ ಈ ಪದಾರ್ಥ ಸಿದ್ಧ. ಅದನ್ನು ಮೈಮೇಲೆ ಧರಿಸಿಕೊಳ್ಳದಿದ್ದಾಗ ಅದಕ್ಕಾಗಿ ಸಿದ್ಧಪಡಿಸಿದ ಸ್ಥಳದಲ್ಲಿ ಅದನ್ನು ಇರಿಸಿ, ಯಾರೂ ಮುಟ್ಟದಂತೆ ನೋಡಿಕೊಂಡು ತಾನೂ ಮುಟ್ಟುವಾಗಲೂ ಎಚ್ಚರವಹಿಸಿದನು. ಆ ವಸ್ತುವು ಅವನ ಆರಾಧ್ಯದೈವ, ಜೀವನರಕ್ಷೆ ಅದನ್ನು ಇರಿಸಿದ ಸ್ಥಳವೇ ದೇಗುಲವಾಯಿತು. ಮುಂದೆ ಇದರ ರಕ್ಷಣೆಗೆ ಕಟ್ಟಿದ ಕಟಕಟೆಯೇ ದೇಗುಲವಾಗಿ ಬೆಳವಣಿಗೆ ಹೊಂದಿತು.[೨] ಹೀಗೆಯೆ ಆದಿಮಾನವನು ತನಗೆ ನೆರವಾಗುವ ಪ್ರತಿಮೆಯನ್ನು ಇಟ್ಟ ಸ್ಥಳ, ಅದರ ಸುತ್ತಲೂ ಕಟ್ಟಿದ ಕಟ್ಟಡ ಹಾಗೂ ಅದರ ಸುತ್ತ ಇರುವ ಪ್ರದೇಶವು ಪವಿತ್ರವಾಯಿತು. ಈ ಕ್ರಿಯೆಗಳೇ ಮುಂದೆ ದೇವಾಲಯದ ರಚನೆಗೆ ನಾಂದಿಯಾದವು.

ಬೆಳವಣಿಗೆ

ಕ್ರಿಸ್ತಶಕ ಆರಂಭಕ್ಕೆ ಮುನ್ನ ದೇವಾಲಯಗಳು ರಚನೆಗೊಂಡವು ಎಂದು ಹೇಳಲಾದರೂ ಅವುಗಳ ಸ್ವರೂಪ ಸ್ಪಷ್ಟವಾಗಿ ಕಂಡುಬರುವುದಿಲ್ಲ. ಹರಪ್ಪ - ಮೊಹೆಂಜೋದಾರೋ ಉತ್ಖನನಗಳಲ್ಲಿ ಸಾರ್ವಜನಿಕ ಕಟ್ಟಡಗಳನ್ನು ಗುರುತಿಸಬಹುದೇ ವಿನಃ ದೇವಾಲಯ ರಚನೆಗಳು ಕಾಣಬರುವುದಿಲ್ಲ ಎಂಬುದು ವಿದ್ವಾಂಸರ ಅಭಿಮತ.[೩] ಆದರೆ ಸಿಂಧುನದಿಯ ಬಯಲಿನಲ್ಲಿ ದೊರೆತ ಆಧಾರಗಳು ದೇವತಾಪೂಜೆ ಇದ್ದುದ್ದನ್ನು ಸ್ಪಷ್ಟಪಡಿಸಿವೆಯಾದರೂ ದೇವಾಲಯದ ಖಚಿತವಾದ ಆಧಾರಗಳಿಲ್ಲ. ಮುಂದೆ ವೇದಗಳ ಕಾಲದಲ್ಲಿ ಯಜ್ಞ, ಯಾಗಗಳು ಪೂಜಾವಿಧಾನದ ಸಂಕೇತಗಳಾಗಿದ್ದವು. ಆ ಕಾಲದಲ್ಲಿ ಮರ ಇಟ್ಟಿಗೆಯಂತಹ ನಾಶವಾಗುವ ವಸ್ತುಗಳಿಂದ ನಿರ್ಮಿತವಾದ ದೇವಸ್ಥಾನಗಳು ಕಾಲಾಂತರದಲ್ಲಿ ನಶಿಸಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಕೆಲವು ಇಟ್ಟಿಗೆಯ ದೇವಾಲಯಗಳನ್ನು ಕಲ್ಲಿನಿಂದ ಪುನರ್‌ನಿರ್ಮಾಣ ಮಾಡಿರುವ ದಾಖಲೆಗಳಿವೆ.[೪]

ಕ್ರಿ.ಪೂ.ಒಂದನೆಯ ಶತಮಾನಕ್ಕಾಗಲೇ ದೇವಾಲಯ ನಿರ್ಮಾಣವಾಗಿರುವುದನ್ನು ಇತ್ತೀಚೆಗೆ ದ್ವಾರಕೆಯ ದ್ವಾರಕಾಧೀಶ ದೇವಾಲಯದ ಎದುರು ನಡೆದಿರುವ ಸಮುದ್ರ ಶೋಧನೆ ಬೆಳಕಿಗೆ ತಂದಿದೆ.[೫] ಅಲ್ಲೇ ದೊರೆತ

ಹೂಜಿಯೊಂದರ ಮೇಲೆ ಬರವಣಿಗೆಯು ಹರಪ್ಪೋತ್ತರ ಕಾಲಕ್ಕೆ ಸೇರಿದ್ದು. 'ಮಹಾಗಚ್ಛಶಪಾ' (ಸಮುದ್ರ ರಾಜನೇ ರಕ್ಷಿಸು) ಎಂದಿರುವ ಶಾಸನದ ಕಾಲವನ್ನು ಕ್ರಿ.ಪೂ. ೧೫ನೆಯ ಶತಮಾನವೆಂದು ಹೇಳಲಾಗಿದೆ.[೬] ದ್ವಾರಕೆಯು ಕ್ರಿಸ್ತಪೂರ್ವ ಕಾಲದ ದೇವಾಲಯವಲ್ಲದೆ ಕ್ರಿ.ಶ. ೯ನೇ ಶತಮಾನದವರೆಗೆ ನಿರ್ಮಾಣವಾದ ಮೂರು ದೇವಾಲಯಗಳು ಸಮುದ್ರದ ಉಬ್ಬರದಿಂದ ನಾಶವಾಗಿರಬಹುದೆಂದು ವಿದ್ವಾಂಸರು ಭಾವಿಸುತ್ತಾರೆ.

ಕ್ರಿ.ಪೂ.ಎರಡನೆಯ ಶತಮಾನದಲ್ಲಿ ಹೆಲಿಯೋಡೊರಸ್ ಸ್ಥಾಪಿಸಿದ ಗರುಡ ಸ್ತಂಭದ ಉಲ್ಲೇಖ ವಾಸುದೇವನ ದೇವಾಲಯಕ್ಕೆ ಸಂಬಂಧಿಸಿದ್ದು.[೭] ಇದು ದೇವಾಲಯಗಳಿಗೆ ಸಂಬಂಧಿಸಿದ ಅತಿ ಪ್ರಾಚೀನ ಉಲ್ಲೇಖವೆನಿಸಿದೆ. ಕ್ರಿ.ಶ.ಒಂದನೇ ಶತಮಾನದಲ್ಲಿ ರಾಜಸ್ಥಾನದ ಗೌಸುಂಧಿಯಲ್ಲಿ ನಾರಾಯಣನಿಗಾಗಿ ಕಟ್ಟಲ್ಪಟ್ಟ 'ನಾರಾಯಣವಾಟಕ'ದ ಸ್ಪಷ್ಟ ಉಲ್ಲೇಖವಿದೆ.[೮] ಕಟ್ಟಡಗಳೊಂದಿಗೆ ಗುರುತಿಸಲ್ಪಡುವ ಅತಿ ಪ್ರಾಚೀನ ದೇವಾಲಯ ತಿಗುವಾದಲ್ಲಿಯ ವಿಷ್ಣು ದೇವಾಲಯ. ಇದರೊಂದಿಗೆ ಸಾಂಚಿಯ ಹದಿನೇಳನೆಯ ದೇವಾಲಯವನ್ನು ವಿದ್ವಾಂಸರು ಕ್ರಿ.ಪೂ. ೫ನೆಯ ಶತಮಾನಕ್ಕೆ ಸೇರಿದ್ದೆಂದು ಪರಿಗಣಿಸಿದ್ದಾರೆ. ಈ ದೇವಾಲಯದಲ್ಲಿ ಚತುರಸ್ರಾಕಾರದ ಗರ್ಭಗೃಹವಿದ್ದು, ಮುಂದುಗಡೆ ಸ್ತಂಭಗಳನ್ನಾಧರಿಸಿದ ಮುಖಮಂಟಪವಿದೆ. ಇವೆರಡೂ ಸ್ವತಂತ್ರ ದೇವಾಲಯಗಳ ಮೂಲಸ್ವರೂಪವೆನಿಸಿವೆ. ಗುಪ್ತರ ಕಾಲದ ದೇವಘರ್‌ನ ವಿಷ್ಣುದೇವಾಲಯ, ಭೂಮಾರದಲ್ಲಿನ ಶಿವಾಲಯ, ನಾಚ್ನ ಕುಟಾರದ ಪಾರ್ವತಿ ದೇವಾಲಯ ಇವುಗಳಲ್ಲಿ ಗರ್ಭಗೃಹವು ಮಧ್ಯಪ್ರವೇಶವನ್ನಾವರಿಸಿದೆ. ಇವು ೫ನೆಯ ಶತಮಾನದವೆಂದು ಗುರುತಿಸಲಾಗಿದೆ.[೯] ಗುಪ್ತರ ಕಾಲದಲ್ಲಿ ಮುಂದೆ ಹಿಂದೂ ಧರ್ಮಕ್ಕೆ ದೊರೆತ ಹೆಚ್ಚಿನ ಪ್ರೋತ್ಸಾಹದಿಂದ ಅಧಿಕ ಸಂಖ್ಯೆಯಲ್ಲಿ ದೇವಾಲಯಗಳು ನಿರ್ಮಾಣವಾದವು.

ದೇವಾಲಯದ ಕಲ್ಪನೆ, ರಚನೆಗೆ ಸ್ತೂಪ ನೇರವಾದ ಹಿನ್ನೆಲೆಯನ್ನೊದಗಿಸಿತು. ಸ್ತೂಪದ ಹಿನ್ನೆಲೆ ಅಗ್ನಿದ್ರಿಯದಲ್ಲಿ ದೊರೆಯುತ್ತದೆ. ಈ ಸಂಪ್ರದಾಯದುದ್ದಕ್ಕೂ ಸಾವು, ಸಮಾಧಿ, ಸ್ಮಾರಕ, ಆಲಯ, ಆರಾಧನೆಗಳು ಕೂಡಿಕೊಂಡು ಬಂದಿರುವುದನ್ನು ಕಾಣಬಹುದು.[೧೦] ಕ್ರಿ.ಪೂ. ೧ ಮತ್ತು ೨ನೆಯ ಶತಮಾನದ ಹೊತ್ತಿಗೆ ಬೆಟ್ಟ ಗುಡ್ಡಗಳನ್ನು ಕೊರೆದು ಗುಹಾಂತರ ದೇವಾಲಯಗಳನ್ನು ನಿರ್ಮಿಸಲಾಯಿತು. ಈ ಗುಹಾಂತರ ದೇವಾಲಯಗಳು ಮೊದಮೊದಲು ಬೌದ್ಧಧರ್ಮದ ಸ್ತೂಪ. ಚೈತ್ಯಾಲಯಗಳಿಗೆ ಸಂಬಂಧಿಸಿದ್ದವು.[೧೧] ಗುಹೆಗಳಲ್ಲಿ ಧರ್ಮಕ್ಕಿಂತ ಕಲೆಯ ಪಾತ್ರ ಹಿರಿದು. ಪ್ರತಿಮೆಯನ್ನು ಹಿಂದಕ್ಕೆ ತಳ್ಳಿ ಕಲ್ಪನೆ ಮುಂದೆ ಬಂದಿರುವುದನ್ನು ಇದರಲ್ಲಿ ಕಾಣಬಹುದು.[೧೨] ದೇವಾಲಯಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಉಳಿದು ಬಂದಿರುವ ಕಟ್ಟಡಗಳೆಂದರೆ ಸ್ತೂಪಗಳೇ ಎಂಬುದು ಎಸ್.ಕೆ.ರಾಮಚಂದ್ರರಾವ್ ಅವರ ಅಭಿಪ್ರಾಯ. "ಹಿಂದೂ ದೇವಾಲಯವು ಬೌದ್ಧಸ್ತೂಪದಿಂದ ಬೆಳೆದಿದ್ದು ವೈದಿಕ ಸ್ತೂಪಗಳು ಪ್ರಾಚೀನ ಗುಹಾಲಯಗಳ ಹಿನ್ನೆಲೆಯಿಂದ ಬಂದವೆಂಬುದನ್ನೂ ಮರೆಯಬಾರದು."[೧೩] ಬೌದ್ಧಭಿಕ್ಷುಗಳು ಧರ್ಮಪ್ರಸಾರದ ಸಂದರ್ಭದಲ್ಲಿ ಆಶ್ರಯ ಪಡೆದ ಪ್ರಶಾಂತತೆಯ ಗುಹೆಗಳು ಕ್ರಮೇಣ ಕೆತ್ತಲ್ಪಟ್ಟ ಗುಹೆಗಳು ಬೌದ್ಧವಿಹಾರಗಳಾಗಿ, ಚೈತ್ಯಗಳಾಗಿ, ವೈದಿಕ ಸ್ತೂಪಗಳ ಪ್ರತಿಕೃತಿಗಳಾಗಿ ಬೆಳೆದು ಬಂದವು.

ಅಶೋಕನು ದೇಶದ ವಿವಿಧ ಕಡೆಗಳಲ್ಲಿ ಸುಮಾರು ೮೪,೦೦೦ ಸ್ತೂಪಗಳನ್ನು ನಿರ್ಮಿಸಿದನೆಂಬುದು ಪ್ರತೀತಿ. ಇದರಲ್ಲಿ ಉತ್ಪ್ರೇಕ್ಷೆವಿದ್ದರೂ ಅದೇ ಕಾಲದಲ್ಲಿ ನಿರ್ಮಾಣವಾದ ಲುಂಬಿಣಿ, ಬುದ್ಧಗಯಾ, ಸಾರನಾಥ,

ಕುಶಿನಗರ, ನಗರವಿಹಾರ, ತಕ್ಷಶಿಲೆ, ಬಾರ್‌ಹೋತ್, ಸಾಂಚಿ ಮುಂತಾದ ಸ್ಥಳಗಳಲ್ಲಿ ಸ್ತೂಪಗಳು ನಿರ್ಮಾಣವಾದವು. ಅಶೋಕನ ಆಳ್ವಿಕೆಯ ೧೪ನೆಯ ವರ್ಷದ ಶಾಸನವೊಂದರ ಪ್ರಕಾರ, ಅಶೋಕನು ಕನಕಮುನಿ ಬುದ್ಧನ ಗೌರವಾರ್ಥ ಆ ಮೊದಲೇ ಕಟ್ಟಿಸಿದ ಸ್ತೂಪವನ್ನು ಎರಡನೆಯ ಬಾರಿಗೆ ವಿಸ್ತರಿಸಿದನು.[೧೪] ಮಥುರಾದ ಶಾಸನಗಳು ಒಂದನೆಯ ಕಾನಿಷ್ಕನ ೧೬ ಮತ್ತು ೧೭ನೆಯ ವರ್ಷಗಳ ಅಂದರೆ ಕ್ರಿ.ಶ. ೯೪ ಮತ್ತು ೯೫ನೆಯ ವರ್ಷದಲ್ಲಿ ನಾಗದತ್ತ ಮತ್ತು ನಾಗಪ್ರಿಯಾ ಎಂಬುವವರು ತಾವು ಮಾಡಿಸಿದ ಚೈತ್ಯಕುಟೀರಗಳಿಗೆ ಬೋದಿಸತ್ವನ ಪ್ರತಿಮೆಗಳನ್ನು ದಾನ ಮಾಡಿದ ವಿಷಯವನ್ನು ತಿಳಿಸುತ್ತವೆ.[೧೫] ಇದರಿಂದ ಕ್ರಿ.ಶ.ದ ವೇಳೆಗೆ ಮೂರ್ತಿಶಿಲ್ಪವು ದೇವಾಲಯಗಳ ರಚನೆಗೆ ಚಾಲನೆ ದೊರೆತಿತೆಂದು ತಿಳಿದುಬರುತ್ತದೆ. ಕ್ರಿ.ಪೂ.ಒಂದನೆಯ ಶತಮಾನದಿಂದ ಹಿಡಿದು ಪ್ರಾರಂಭವಾದ ದೇವಾಲಯಗಳ ಬೆಳವಣಿಗೆ ಗುಹಾಲಯ, ಸ್ತೂಪ, ವಿಹಾರ, ಚೈತ್ಯ, ಆಲಯ, ದೇವಾಲಯಗಳಾಗಿ ಬೆಳೆದಿರುವುದನ್ನು ಕಾಣಬಹುದು. ಕರ್ನಾಟಕದಲ್ಲಿ ದೇವಾಲಯ ವಾಸ್ತುಶಿಲ್ಪವು ಬೆಳೆದು ಬಂದುದನ್ನು ಗುರುತಿಸುವಾಗ ಮೊದಲು ನಮಗೆ ಕ್ರಿಸ್ತಶಕದ ಆರಂಭದಲ್ಲಿ ನಿರ್ಮಿಸಿದ ದೇವಾಲಯಗಳು ದೊರೆಯುವುದಿಲ್ಲವಾದರೂ, ಕ್ರಿ.ಶ. ೨ನೆಯ ಶತಮಾನದ ವೇಳೆಗಾಗಲೇ ಗುಲ್ಬರ್ಗ ಜಿಲ್ಲೆಯ ಸನ್ನತಿ ಎಂಬ ಗ್ರಾಮವು ಶಾತವಾಹನ ಕಾಲದಲ್ಲಿ ಬೌದ್ಧರ ಮುಖ್ಯ ನೆಲೆಯಾಗಿತ್ತು ಎಂಬುದನ್ನು ಅಲ್ಲಿ ದೊರೆಯುವ ಬೌದ್ಧಸ್ತೂಪದ ಅವಶೇಷಗಳು ಹಾಗೂ ಬ್ರಾಹ್ಮಿ ಲಿಪಿಯ ಶಾಸನಗಳು ತಿಳಿಸಿಕೊಡುತ್ತವೆ. ಹೀಗಾಗಿ ಬೌದ್ಧಸ್ತೂಪ, ಚೈತ್ಯಾಲಯಗಳನ್ನು ಒಳಗೊಂಡ ರಚನೆಗಳು ಬ್ರಹ್ಮಗಿರಿ, ಬನವಾಸಿ ಪ್ರದೇಶಗಳಲ್ಲಿಯೂ ಕಂಡುಬರುವುದರಿಂದ ಕರ್ನಾಟಕದ ದೇವಾಲಯ ರಚನೆಯ ಪ್ರಾಚೀನತೆಯನ್ನು ಅಲ್ಲಿಂದ ಗುರುತಿಸಬಹುದು.

ಶಿವರಾಮಕಾರಂತರು ಟಾಲಮಿಯ ಕಾಲದ ಗ್ರೀಕ್ ಪ್ರವಾಸವೊಂದರಲ್ಲಿ ಉಕ್ತವಾಗಿರುವಂತೆ ದಕ್ಷಿಣಕನ್ನಡ ಜಿಲ್ಲೆಯ 'ಉದ್ಯಾವರ'ದಲ್ಲಿ ಸೋಮೇಶ್ವರ ದೇವಾಲಯವು ಮೊದಲನೆಯ ನಿರ್ಮಾಣವೆನ್ನುತ್ತಾರೆ.[೧೬] ಕರ್ನಾಟಕದಲ್ಲಿ ಕ್ರಿ.ಶ.ದ ಆರಂಭದ ಕಾಲಘಟ್ಟದಲ್ಲಿ ನಿರ್ಮಿತವಾದ ದೇವಾಲಯಗಳು ಉಳಿದಿಲ್ಲವಾದರೂ ಕ್ರಿ.ಶ. ೧೫೦ರ ಕದಂಬರ ಪ್ರಾಕೃತ ಶಾಸನವು ದೇವಾಲಯಗಳು ರಚನೆಗೊಂಡದ್ದನ್ನು ದೃಢಪಡಿಸುತ್ತದೆ.[೧೭] ಕರ್ನಾಟಕದ ಪ್ರಾಚೀನ ದೇವಾಲಯವೆನಿಸಿದ ತಾಳಗುಂದದ ಪ್ರಣವೇಶ್ವರ ದೇವಾಲಯವು ಶಾತಕರ್ಣಿಗಳ ಕಾಲಕ್ಕಾಗಲೇ ಇದ್ದಿತು.[೧೮] ಈ ದೇವರನ್ನು ಶಾತವಾಹನರು ಪೂಜಿಸುತ್ತಿದ್ದರೆಂದು ಶಾಸನಗಳಲ್ಲಿ ಹೇಳಲಾಗಿದೆಯಾದರೂ, ಕೇವಲ ಅವಶೇಷದ ಮಾದರಿಯಲ್ಲಿ ಉಳಿದು ಬಂದಿರುವ ಈ ದೇವಾಲಯವು ಕದಂಬ ಮೃಗೇಶವರ್ಮನ ಕಾಲದಲ್ಲಿಯೂ ರಾಜಮನೆತನದ ಗೌರವವನ್ನು ಪಡೆದಿತ್ತು. ಕದಂಬ ಕಾಲದ ದೇವಾಲಯಗಳು ಇಂದು ದೊರಕುವುದಿಲ್ಲವಾದರೂ ಅನೇಕ ದೇವಾಲಯಗಳು ನಿರ್ಮಾಣವಾಗಿರುವುದನ್ನು ಶಾಸನಗಳು ತಿಳಿಸುತ್ತವೆ. ಹಲಸಿಯ ತಾಮ್ರಪಟಗಳು ಮೃಗೇಶವರ್ಮನು ಶ್ರೀವಿಜಯ ಪಲಾಶಿಕದಲ್ಲಿ ಜಿನಾಲಯವೊಂದನ್ನು ನಿರ್ಮಿಸಿದ್ದನ್ನು ಉಲ್ಲೇಖಿಸುತ್ತವೆ.[೧೯] ರವಿವರ್ಮನ ವೈದ್ಯ ನೀಲಕಂಠ ದೇಸಾಮಾತ್ಯನು ಬನವಾಸಿಯಲ್ಲಿ ಮಹಾದೇವಾಲಯತನವನ್ನು ಕಟ್ಟಿಸಿದನೆಂದು ಶಿರಸಿ ತಾಮ್ರಪಟಗಳು ತಿಳಿಸುತ್ತವೆ.[೨೦] ಅದೇ ರವಿವರ್ಮನ ಗುಡ್ನಾಪುರ ಶಾಸನವು ಮನ್ಮಥ ಜಿನಾಲಯವೊಂದರ ನಿರ್ಮಾಣವನ್ನು ಉಲ್ಲೇಖಿಸಿದೆ.[೨೧]

ಬಾದಾಮಿ ಚಾಲುಕ್ಯರು ಕ್ರಿ.ಶ. ೬ನೆಯ ಶತಮಾನದಿಂದ ಗುಹಾಲಯಗಳನ್ನೇ ಅಲ್ಲದೆ ಪ್ರತ್ಯೇಕ ದೇವಾಲಯ ನಿರ್ಮಾಣವನ್ನು ಆರಂಭಿಸಿ ಚಾಲುಕ್ಯ ರಚನೆಗೆ ಪೀಠಿಕೆ ಹಾಕಿದರು.[೨೨] ಪಟ್ಟದ ಕಲ್ಲಿನ ಸುತ್ತಮುತ್ತ ಭೂಶೋಧನೆ ನಡೆಸಿರುವ ಅ.ಸುಂದರ ಅವರು ಕದಂಬರ ಕಾಲದ ಹಲವು ಕಟ್ಟಡಗಳ ಅವಶೇಷಗಳನ್ನು ಗುರುತಿಸಿದ್ದಾರೆ. ಸಂಗಮೇಶ್ವರ ದೇವಾಲಯದ ಎದುರಿಗೆ ಇಟ್ಟಿಗೆಯ ಕಟ್ಟಡದ ಗುರುತುಗಳನ್ನು ಪತ್ತೆಮಾಡಿದ್ದಾರೆ. ಇದು ಬಾದಾಮಿ ಚಾಲುಕ್ಯಪೂರ್ವ ಕಟ್ಟಡವೆಂಬುದು ಅವರ ಅಭಿಪ್ರಾಯ.[೨೩] ಐಹೊಳೆಯಲ್ಲಿಯೂ ಅಂಬಿಗರ ದೇವಾಲಯದ ಕೆಳಗೆ ಬಾದಾಮಿಚಾಲುಕ್ಯ ಪೂರ್ವ ಇಟ್ಟಿಗೆಯ ದೇವಾಲಯವೊಂದು ಪತ್ತೆಯಾಗಿದೆ.[೨೪] ಕ್ರಿ.ಶ.ಸುಮಾರು ೪೦೦ರ ವೇಳೆಗೆ ತುಮಕೂರಿನ ಬಳಿಯ ಮೇಲುಕೋಟೆಯ ಸಮೀಪ ಶಾಕ್ಯವಿಹಾರವೊಂದು ಇದ್ದುದಾಗಿ ತಿಳಿದುಬರುತ್ತದೆ.[೨೫] ಅಲ್ಲದೆ ಬಾದಾಮಿ ಚಾಲುಕ್ಯರ ಕಾಲದಿಂದ ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣವು ಹೆಚ್ಚು ಭರದಿಂದ ಸಾಗಿತ್ತೆನ್ನಬಹುದು. ಇವುಗಳನ್ನೆಲ್ಲಾ ಕಲ್ಲಿನಿಂದ ಕಟ್ಟಲಾಗಿದ್ದು, ಮಹಾಕೂಟ-ಬಾದಾಮಿ-ಐಹೊಳೆ-ಪಟ್ಟದಕಲ್ಲು ಗಳಲ್ಲಿ ಈ ಪ್ರಾಚೀನ ಕಟ್ಟಡಗಳ ಅವಶೇಷಗಳನ್ನು ಇಂದಿಗೂ ಕಾಣಬಹುದಾಗಿದೆ. ಬಾದಾಮಿಯಲ್ಲಿರುವ ಗುಹಾದೇವಾಲಯಗಳು ಶಿಲೆಯಲ್ಲಿ ಕೊರೆದು ಮಾಡಿದ ಗುಹಾಲಯಗಳಿಗೆ ಪ್ರಖ್ಯಾತಿಯನ್ನು ಪಡೆದಿದ್ದು, ಇವುಗಳಲ್ಲಿ ಶೈವ, ವೈಷ್ಣವ, ಜೈನ ಧರ್ಮದ ನಿರ್ಮಾಣಗಳು ಕಂಡುಬರುತ್ತವೆ. 'ಐಹೊಳೆಯನ್ನು ದೇವಾಲಯದ ಪ್ರಯೋಗಶಾಲೆ' ಎಂದು ಕರೆಯಲಾಗಿದೆ.

ಪರ್ಶಿಬ್ರೌನ್‌ರವರ ಪ್ರಕಾರ ಲಾಡ್‌ಖಾನ್ ದೇವಾಲಯ ಅತಿ ಪ್ರಾಚೀನವೆನಿಸಿದರೆ, ಕೆ.ವಿ.ಸೌಂದರ್ಯ ರಾಜನ್‌ರವರು ಮಂಟಪ ರಚನೆಯನ್ನು ದೇವಾಲಯವೆಂದು ಗುರುತಿಸಿದ್ದು ಐಹೊಳೆಯ ಜ್ಯೋತಿರ್ಲಿಂಗ ಗುಡಿಗಳ ಗುಂಪಿನಲ್ಲಿರುವ ನಾಲ್ಕು ಸ್ತಂಭಗಳ ರಚನೆಯನ್ನು ಆರಂಭಿಕ ಹಂತವೆಂದು ಗುರುತಿಸಿದ್ದಾರೆ.[೨೬] ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳ ದೇವಾಲಯಗಳ ರಚನೆ, ವಿನ್ಯಾಸಗಳನ್ನು ಹಾಗೂ ಶಾಸನಗಳನ್ನು ಆಧರಿಸಿ ವಿದ್ವಾಂಸರು ಅವುಗಳ ಪ್ರಾಚೀನತೆಯನ್ನು ಗುರುತಿಸಿದ್ದಾರೆ. ಪರ್ಶಿಬ್ರೌನ್ ವಾಸ್ತುಮೂಲವನ್ನು ಆದರಿಸಿ ಲಾಡ್‌ಖಾನ್ ದೇವಾಲಯವನ್ನು ಅತಿ ಪ್ರಾಚೀನ ದೇವಾಲಯವೆಂದು ಗುರುತಿಸಿರುವರು.[೨೭] ದೇವಾಲಯಗಳ ಸುತ್ತ ತುಂಬಿದ್ದ ಮಣ್ಣಿನ ಸ್ತರಗಳ ಸರ್ವೇಕ್ಷಣೆಯಿಂದ ಇದಕ್ಕಿಂತ ಭಿನ್ನವಾದ ಫಲಿತಾಂಶ ಕಂಡುಬಂದಿದ್ದು, ಗೌಡರ ಗುಡಿಯನ್ನು ಅತಿ ಪ್ರಾಚೀನವೆಂದು ಎಸ್.ಆರ್.ರಾವ್ ಅವರು ಗುರುತಿಸಿದ್ದಾರೆ.[೨೮]

ಬಾದಾಮಿಚಾಲುಕ್ಯರ ದೇವಾಲಯಗಳನ್ನು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಕೊಪಣ, ಪುಲಿಗೆರೆ ಮುಂತಾದ ಸ್ಥಳಗಳಲ್ಲಿ ಕಾಣಬಹುದು. ನಮ್ಮ ನಾಡಿನ ದೇವಾಲಯಗಳ ಇತಿಹಾಸದಲ್ಲಿ ಚಾಲುಕ್ಯರ ದೇವಾಲಯಗಳು ಪ್ರಮುಖವಾದ ಹಂತವನ್ನು ಸೂಚಿಸುತ್ತವೆ. ಈ ಪ್ರದೇಶದಲ್ಲಿ ನಡೆದ ದೇವಾಲಯಗಳ ಪ್ರಯೋಗ ಮತ್ತೆಲ್ಲಿಯೂ ನಡೆದಿಲ್ಲವೆನ್ನಬಹುದು. ಇಲ್ಲಿ ಗುಹಾಲಯ ಹಾಗೂ ನಿರ್ಮಿತ ಆಲಯಗಳಿಗೂ ಬೇರೆ ಬೇರೆ ಹಂತಗಳನ್ನು ಮೊಟ್ಟ ಮೊದಲ ಬಾರಿಗೆ ಗುರುತಿಸಿ ಪ್ರಯೋಗ ಮಾಡಿರುವುದನ್ನು ಕಾಣಬಹುದಾಗಿದೆ. ಈ ಪ್ರದೇಶದಲ್ಲಿ ವೇಸರ ಶೈಲಿಯು ಬಳಕೆಗೊಂಡಿದೆ. ಬಾದಾಮಿ ಚಾಲುಕ್ಯರಿಂದ ಕರ್ನಾಟಕ ವಾಸ್ತುಶಿಲ್ಪ ರಚನೆಗೆ ಒಂದು ನಿರ್ದಿಷ್ಟವಾದ ನೆಲೆ ದೊರಕಿದಂತಾಯಿತು. ಈ ಕ್ರಮವನ್ನು ಮುಂದೆ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು,

ಹೊಯ್ಸಳರು, ಕಲಚೂರಿಗಳು ನಂತರ ವಿಜಯನಗರ ಸಾಮ್ರಾಜ್ಯದ ಅರಸರು ಅನುಸರಿಸಿ ಪ್ರೋತ್ಸಾಹ ನೀಡಿ ಕರ್ನಾಟಕವು ದೇವಾಲಯಗಳ ನಾಡೆಂಬ ಕೀರ್ತಿಗೆ ಭಾಜನರಾಗಿದ್ದಾರೆ. ದೇವಾಲಯಗಳ ಬೆಳವಣಿಗೆಗೆ ಧರ್ಮವೇ ತಳಹದಿಯಾಗಿ ಮಾತ್ರವಲ್ಲದೆ ಕಳಶವೂ ಆಗಿ ಪರಿಣಮಿಸಿತು.


ವಾಸ್ತುಶೈಲಿ

ವಾಸ್ತುಶಾಸ್ತ್ರ ಗ್ರಂಥಗಳು ಪ್ರಾಚೀನ ಶಾಸ್ತ್ರಗಳಲ್ಲಿ ಒಂದೆಂದು ಪರಿಗಣಿತವಾಗಿವೆ. ನಮಗೆ ಪ್ರಾಚೀನ ಗ್ರಂಥಗಳು ಸುಮಾರು ೬ನೇ ಶತಮಾನದ ವರಾಹಮಿಹಿರನ ಬೃಹತ್ಸಂಹಿತೆ ಗ್ರಂಥವು ವಾಸ್ತುಶಿಲ್ಪಚಾರ್ಯರೆನಿಸಿದ ಮಯ, ಗರ್ಗ, ವಿಶ್ವಕರ್ಮ, ಮನುಗಳು ರೂಪಿಸಿದ ಅವರ ಗ್ರಂಥಗಳ ಸಾರಾಂಶವನ್ನು ಇದು ಒಳಗೊಂಡಿದೆ. ಪುರಾಣ, ಆಗಮ, ತಂತ್ರಗ್ರಂಥಗಳಲ್ಲಿ ವಾಸ್ತುಶಿಲ್ಪದ ಹಲವು ವಿವರಗಳಿವೆ. ಆಗಮಶಾಸ್ತ್ರವಾದ ಕಾಮಿಕಾಗಮದಲ್ಲಿ ಅರವತ್ತು (೬೦) ಅಧ್ಯಾಯಗಳು ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಿಗೆ ಸಂಬಂಧಿಸಿದೆ. ಇದನ್ನು ಒಂದು ವಾಸ್ತುಶಾಸ್ತ್ರವೆನ್ನಬಹುದಾಗಿದೆ. ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಗ್ರಂಥಗಳು ಹಲವಾರು. ಅವುಗಳನ್ನು ದಾಕ್ಷಿಣಾತ್ಯ ಮತ್ತು ಔತ್ತರೇಯ ಗ್ರಂಥಗಳೆಂದು ವಿಂಗಡಿಸಲಾಗಿದೆ. ಮಯಮತ, ಮಾನಸಾರ, ಕಾಶ್ಯಪಶಿಲ್ಪ, ಅಗಸ್ತ್ಯ ಸಕಲಾಧಿಕಾರಗಳು ದಾಕ್ಷಿಣಾತ್ಯಶಾಸ್ತ್ರ ಗ್ರಂಥಗಳಾದರೆ, ಸಮರಾಂಗಣಸೂತ್ರಧಾರ, ಅಪರಾಜಿತ ಪೃಚ್ಛಾ, ಪ್ರಸಾದಮಂಡನ ಹಾಗೂ ರೂಪಮಂಡನಗಳು ಔತ್ತರೇಯ ಶೈಲಿಯ ವಾಸ್ತುಗ್ರಂಥಗಳಾಗಿವೆ. ಅಲ್ಲದೆ ಮಾನಸೋಲ್ಲಾಸ, ತಂತ್ರಸಮುಚ್ಚಯ, ಶಿಲ್ಪರತ್ನಗಳು ಕೂಡಾ ವಾಸ್ತುಗ್ರಂಥಗಳಾಗಿವೆ. ದಾಕ್ಷಿಣಾತ್ಯ ಗ್ರಂಥಗಳಲ್ಲಿ ಪ್ರಮುಖವಾದುದು ಮಾನಸಾರವಾಗಿದೆ. ಇದು ವಾಸ್ತು ಹಾಗೂ ಮೂರ್ತಿಶಿಲ್ಪಗಳ ಬಗೆಗೆ ಮಹತ್ವವಾದ ಆಧಾರ ನೀಡುವ ಗ್ರಂಥವಾಗಿದೆ. ಇದು ಎಪ್ಪತ್ತು ಅಧ್ಯಾಯಗಳನ್ನು ಒಳಗೊಂಡ ಬೃಹತ್ ಗ್ರಂಥ.

ಪ್ರಾಚೀನ ಕಾಲದಲ್ಲಿ ಮಾನವನು ತನ್ನ ಜೀವನದ ರಕ್ಷಣೆಗೋಸ್ಕರ ಒಂದು ಮನೆಯನ್ನು ಕಟ್ಟಿಕೊಂಡಂದಿನಿಂದಲೇ ವಾಸ್ತುಶಿಲ್ಪದ ಉಗಮವಾಯಿತು. ಕ್ರಮೇಣ ತನ್ನ ಅರಿವು ಬೆಳೆದಂತೆ ಕಟ್ಟಡಗಳು ಹೆಚ್ಚಿದಂತೆಲ್ಲ ಅವುಗಳ ಮೂಲಭೂತ ತತ್ವಗಳನ್ನು ರೂಪಿಸಬೇಕೆಂಬ ಭಾವನೆ ಸ್ಥಪತಿಗಳ ಆಲೋಚನೆಯಲ್ಲಿ ಬಂದುದರಿಂದ ನಂತರದಲ್ಲಿ ವಾಸ್ತುಶಿಲ್ಪ ಗ್ರಂಥಗಳು ಹುಟ್ಟಿಕೊಂಡವು. ಹಾಗೆಯೇ ರೂಢಿಸಿದ ವಿನ್ಯಾಸ - ಶೈಲಿಗಳನ್ನು ತತ್ವಗಳನ್ನಾಗಿ ಮಾರ್ಪಡಿಸಿದಾಗ ಹೊಸ ಹೊಸ ಶಾಸ್ತ್ರಗ್ರಂಥಗಳೂ ಹುಟ್ಟಿಕೊಂಡವು. ಹೀಗೆ ಒಂದು ಇನ್ನೊಂದಕ್ಕೆ ಪ್ರೇರಕ, ದೇಶ, ಕಾಲ, ಪರಿಸರಗಳನ್ನವಲಂಬಿಸಿ ಬೇರೆ ಬೇರೆ ಕಡೆಗಳಲ್ಲಿ ಭಿನ್ನವಾದ ಶೈಲಿಗಳು ತಲೆ ಎತ್ತಿದವು.[೨೯]

ಕರ್ನಾಟಕದ ದೇವಾಲಯಗಳ ವಾಸ್ತುವಿವರಣೆಯನ್ನು ತಿಳಿಸುವ ವಾಸ್ತುಗ್ರಂಥಗಳಲ್ಲಿ ಪ್ರಮುಖವಾಗಿ ಮೂರು ಶೈಲಿಗಳು ಪ್ರಸಿದ್ಧವಾಗಿವೆ. ಅವುಗಳೆಂದರೆ,

<u>ವಾಸ್ತುಶೈಲಿಯ ರಚನೆ</u>



ನಾಗರಶೈಲಿ

ಆಗಮಸಂಹಿತೆ ಮತ್ತು ಶಿಲ್ಪಗ್ರಂಥಗಳಲ್ಲಿ 'ಭೌಮದಿಸ್ತೂಪೀಪರ್ಯಂತಮ್ ಯುಗಾಶ್ರಮ್ ನಾಗರಮ್ ಭವೇತ್' ಎಂದು ಹೇಳಿರುವುದರಿಂದ ತಳದಿಂದ ಸ್ತೂಪಿಯವರೆಗೆ ಚೌಕಕಾರವಿರುವ ದೇವಾಲಯವು ನಾಗರಶೈಲಿ ಎಂಬುದು ಸ್ಪಷ್ಟ.[೨೦] ಈ ಶೈಲಿಯ ದೇವಾಲಯಗಳು ವಿಂಧ್ಯಪರ್ವತದ ದಕ್ಷಿಣಭಾಗದಲ್ಲಿ ಇರುವುದು ಕಂಡುಬರುತ್ತದೆ. ನಾಗರಶೈಲಿಯ ದೇವಾಲಯದ ಲಕ್ಷಣಗಳನ್ನು ಅಪರಾಜಿತಪೃಚ್ಛ ಮತ್ತು ಕಾಮಿಕಾಗಮದ ವರ್ಣನೆಗಳಲ್ಲಿ ಕಟ್ಟಡಗಳು ಲಂಬವಿನ್ಯಾಸದಲ್ಲಿ ವಿಭಿನ್ನ ರೀತಿಯ ಅಂಡಕಗಳ, ಉರಃಶೃಂಗ ಮತ್ತು ಪ್ರತ್ಯಂಗ ಜೋಡಣೆಯಿಂದುಂಟಾದ ಶಿಖರಗಳನ್ನು ಹೊಂದಿರುತ್ತವೆ. ಬಾದಾಮಿಯ ಮೇಲಣ ಶಿವಾಲಯವು ಅತಿ ಪ್ರಾಚೀನ ನಾಗರಶೈಲಿಯ ಶಿಖರಕ್ಕೆ ಉದಾಹರಣೆಯಾಗಿದೆ.[೨೧] ಅಲ್ಲದೆ ೫ - ೬ನೆಯ ಶತಮಾನಗಳ ಗುಪ್ತರ ಕಾಲದ ದೇವಘರದ ವಿಷ್ಣುಮಂದಿರ ಮತ್ತು ಭೀತರ್‌ಗಾಂವ್‌ದ ಇಟ್ಟಿಗೆಯಿಂದ ಕಟ್ಟಲಾದ ದೇವಾಲಯ ಮೊದಲ ಹಂತದ ನಾಗರಶೈಲಿಯ ಕಟ್ಟಡಗಳಿಗೆ ಮುಖ್ಯವಾದ ಉದಾಹರಣೆಗಳಾಗಿವೆ.

ದ್ರಾವಿಡಶೈಲಿ

ದ್ರಾವಿಡ ಶೈಲಿಯ ಪ್ರಮುಖ ಲಕ್ಷಣಗಳನ್ನು 'ಅಪರಾಜಿತಪೃಚ್ಛಾ' ಗ್ರಂಥದಲ್ಲಿ ಈ ರೀತಿ ಗುರುತಿಸಿದ್ದಾರೆ.

> "ಪೀಠೋದ್ವೇಕರ್ಣರೇಖಾಶ್ಚ ಭೂಮಿಕಾ
> ಕ್ರಮಸಂಸ್ಥಿತಾ ||
> ವಿಭಕ್ತಿದಲನಾ ಪೂರ್ಣಲತಾಶೃಂಗ
> ಕ್ರಮೋದ್ಭವಾಃ
> ಮೇಷಮಕರ ಕುಟಪ್ಯೈಃಕಂಟಕೈರಾವೃತಾಃ
> ಶುಭಾಃ
> ವೇದೀಘಂಟಾ ನಾಸಿಕಾದ್ಯಃ ದ್ರಾವಿಡಾಃ
> ಶುಭಲಕ್ಷಣಾಃ"

ಈ ಶ್ಲೋಕದಲ್ಲಿ ಕೆಲವು ಪ್ರಮುಖ ಲಕ್ಷಣಗಳನ್ನು ಗುರುತಿಸಬಹುದು. ದ್ರಾವಿಡ ಶೈಲಿಯಲ್ಲಿ ಪೀಠ

ಮತ್ತು ಪೀಠದ ಮೇಲೆ ಕರ್ಣರೇಖ ಭಾಗದಿಂದ ಆವೃತವಾದ ಭೂಮಿಗಳಿಂದ ರಚಿಸಲ್ಪಟ್ಟ ಶಿಖರ ಎಂದು ಗುರುತಿಸಿದೆ.[೩೨]

ಮಾನಸಾರ ಮುಂತಾದ ಶಿಲ್ಪಗ್ರಂಥಗಳ ರೀತಿಯಲ್ಲಿ ದೇವಾಲಯದ ವಿಮಾನವು ಅಡಿಯಿಂದ ಶಿಖರಾಗ್ರದವರೆಗೂ ಆರು ಅಥವಾ ಎಂಟು ಮುಖಗಳು ಮತ್ತು ಕೋನಗಳನ್ನು ಹೊಂದಿದ್ದರೆ ಅದನ್ನು ದ್ರಾವಿಡ ಶೈಲಿಯ ಲಕ್ಷಣಗಳೆಂದು ಗುರುತಿಸಬಹುದು. ಸಾಮಾನ್ಯವಾಗಿ ದ್ರಾವಿಡ ಶೈಲಿಯ ದೇವಾಲಯಗಳು ಕೃಷ್ಣಾನದಿಯಿಂದ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೆ ಹೆಚ್ಚು ಬಳಕೆಯಲ್ಲಿದ್ದವು. ದ್ರಾವಿಡ ಶೈಲಿಯ ದೇವಾಲಯ ಶಿಖರಗಳು ಮೇಲಕ್ಕೆ ಹೋದಂತೆ ಕ್ರಮೇಣ ಸಣ್ಣದಾಗುವ ಅಂತಸ್ತುಗಳಿರುತ್ತವೆ. ಪ್ರತಿಯೊಂದು ಅಂತಸ್ತು ಗರ್ಭಗೃಹದ ಪ್ರತಿರೂಪದಂತಿರುತ್ತದೆ. ಒಂದೊಂದು ಅಂತಸ್ತನ್ನು ಪ್ರತ್ಯೇಕಿಸುವ ದುಂಡು ಕಪೋತ ಮತ್ತು ಮೇಲಂತಸ್ತುಗಳ ಸುತ್ತಲೂ ಇರುವ ಪುಟ್ಟ ತೆರೆದ ಅಂಕಣಗಳು ಈ ಶೈಲಿಯ ಪ್ರಮುಖ ಲಕ್ಷಣಗಳಾಗಿವೆ. ಮಧ್ಯಕಾಲೀನ ದ್ರಾವಿಡ ಶೈಲಿಯ ಲಕ್ಷಣಗಳೆಂದರೆ ತಳವಿನ್ಯಾಸದಲ್ಲಿ ಚಚ್ಚೌಕವಾದ ಸಣ್ಣ ಗರ್ಭಗುಡಿಯಿರುತ್ತದೆ. ಅದರ ಸುತ್ತಲೂ ವಿಶಾಲವಾದ ಹಜಾರದ ಉಳಿದ ಭಾಗ ಪ್ರದಕ್ಷಿಣಾಪಥವಾಗಿರುತ್ತದೆ. ಇದೇ ಹಜಾರದ ಮೇಲೆ ಛಾವಣಿಯಿರುತ್ತದೆ. ದೇವಾಲಯದ ಗೋಡೆಗಳ ಹೊರಭಾಗವನ್ನು ಮುಂಚಾಚಿದ ಅರೆಗಂಬಗಳಿಂದಲೂ ಅವುಗಳ ನಡುವೆ ಹಿಂದೆಸರಿದಂತಿರುವ ಗೂಡುಗಳಿಂದಲೂ ಆಲಂಕರಿಸಲಾಗಿರುತ್ತದೆ. ಕಂಬಗಳಿಂದ ಕೂಡಿದ ಹಜಾರಗಳು, ಮೊಗಸಾಲೆಗಳು ಮತ್ತು ಮಹಾದ್ವಾರದ ಮೇಲಿನ ಬೃಹತ್ ಪ್ರಮಾಣದ ಗೋಪುರಗಳು ಈ ಶೈಲಿಯ ವಿಶಿಷ್ಟ ಲಕ್ಷಣಗಳಾಗಿವೆ.

ದ್ರಾವಿಡಶೈಲಿಯ ಮೊದಲ ಘಟ್ಟದ ದೇವಾಲಯಗಳೆಂದರೆ ಮಹಾಬಲಿಪುರದ ರಥಗಳು ಮುಖ್ಯವಾಗಿವೆ. ೨ ಹಾಗೂ ೩ನೆಯ ಕಾಲ ಘಟ್ಟಗಳಲ್ಲಿ ಗರ್ಭಗೃಹದ ಮೇಲೆ ವಿಮಾನ ಬೆಳೆಯಿತು. ನಾಲ್ಕನೇ ಕಾಲಘಟ್ಟಗಳಲ್ಲಿ ಮಹಾದ್ವಾರದ ಮೇಲಿನ ಗೋಪುರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಬಂದು ಇದು ವಿಮಾನಕ್ಕಿಂತಲೂ ದೊಡ್ಡದಾಯಿತು. ಆದರೆ ಈ ವಿಧದ ಕಟ್ಟಾಣಿಕೆಯು ಅಂದವಾಗಿರುವುದಿಲ್ಲವೆಂದೂ ವಾಸ್ತುವಿನ್ಯಾಸದಲ್ಲಿ ಇದು ಒಂದು ದೊಡ್ಡ ದೋಷವೆಂದು ಕೆಲವರು ಅಭಿಪ್ರಾಯಪಟ್ಟರೆ, ಮತ್ತೆ ಕೆಲವರು ಇದನ್ನು ಒಪ್ಪುತ್ತಾರೆ.[೩೩] ಈ ದ್ರಾವಿಡ ಶೈಲಿಯ ಗ್ರಂಥಗಳೆಂದರೆ ಮಯಮತ, ಮಾನಸಾರ, ಕಾಶ್ಯಪಶಿಲ್ಪ, ಅಗಸ್ತ್ಯಸಕಲಾಧಿಕಾರಗಳು ಪ್ರಮುಖ ಗ್ರಂಥಗಳಾಗಿವೆ. ಈ ಗ್ರಂಥಗಳಲ್ಲಿ ದ್ರಾವಿಡಶೈಲಿಯ ಬಗ್ಗೆ ಹೆಚ್ಚು ವಿವರಗಳು ದೊರೆಯುತ್ತವೆ.

ದ್ರಾವಿಡಶೈಲಿಯ ಪ್ರಾದೇಶಿಕ ವಿಂಗಡನೆಗೆ ಅನುಗುಣವಾಗಿ ಉತ್ತರದಲ್ಲಿ ಕೃಷ್ಣಾನದಿಯಿಂದ ದಕ್ಷಿಣದ ಹಿಂದೂಮಹಾಸಾಗರದ ನಡುವಿನ ಪ್ರದೇಶದಲ್ಲಿ ಹಬ್ಬಿದೆ. ದಕ್ಷಿಣದಲ್ಲಿ ಕಂಡುಬರುವ ಈ ಶೈಲಿಯನ್ನು ವಿದ್ವಾಂಸರು ದ್ರಾವಿಡಿಯನ್ ಎಂದು ಕರೆಯುತ್ತಾರೆ. ಐಹೊಳೆಯ ಲಾಡ್‌ಖಾನ್ ದೇವಾಲಯ ಕ್ರಿ.ಶ. ೪೫೦ರಲ್ಲಿ ನಿರ್ಮಾಣವಾದ ಪ್ರಥಮ ದ್ರಾವಿಡ ಶೈಲಿಯ ದೇವಾಲಯವಾಗಿದೆ.[೩೪] ದ್ರಾವಿಡ ಶೈಲಿಯ ಲಕ್ಷಣಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

* ಗ್ರೀವ ಮತ್ತು ಸ್ತೂಪಿಯ ನಡುವಣ ಭಾಗವನ್ನು ಶಿಖರವೆಂದು ಕರೆಯಲಾಗುತ್ತದೆ.
* ಗರ್ಭಗುಡಿಯನ್ನುಳಿದು ದೇವಾಲಯದ ಇತರ ಭಾಗಗಳ ಛಾವಣಿ ಸಮತಟ್ಟಾಗಿಯೂ ಅಲಂಕಾರ ರಹಿತವಾಗಿಯೂ ಇರುತ್ತದೆ.
* ಗರ್ಭಗೃಹದ ಉತ್ತರ ಗೋಡೆಯಲ್ಲಿ ಜಗತಿ ಅಥವಾ ಅಧಿಷ್ಠಾನದಿಂದ ಸ್ವಲ್ಪ ಎತ್ತರದಲ್ಲಿ ಅಭಿಷೇಕ ಜಲವನ್ನು ಹೊರ ಒಯ್ಯಲು ಪ್ರಣಾಳ ಅಥವಾ ಜಲಮಾರ್ಗವನ್ನು ನಿರ್ಮಿಸಲಾಗಿರುತ್ತದೆ.
* ಗೋಪುರ ದ್ವಾರ ದೇವಾಲಯದ ಮುಖ್ಯ ದ್ವಾರದ ಅಕ್ಷದಲ್ಲಿದ್ದು ಅಷ್ಟದಿಕ್ಕುಗಳೊಂದಿಗೆ ಹೊಂದಾಣಿಕೆ ಪಡೆದಿರುತ್ತದೆ.
* ಪ್ರಾಂಗಣದಲ್ಲಿ ಮುಖಮಂಟಪದ ಮುಂದೆ ಬಲಿಪೀಠದ ಬಳಿ ಧ್ವಜಸ್ತಂಭವಿರುತ್ತದೆ.
* ಗರ್ಭಗುಡಿಯ ಮೇಲೆ ಅಂತಸ್ತುಗಳುಳ್ಳ ಪಿರಮಿಡ್ಡಿನಾಕಾರದ ಶಿಖರವಿರುತ್ತದೆ.
* ದೇವಾಲಯದ ಸುತ್ತಲೂ ಪ್ರಾಕಾರ ಅವಶ್ಯ ಅಂಗವಾಗಿರುತ್ತದೆ.
* ದೇವಾಲಯಗಳಲ್ಲಿ ಧರ್ಮಕ್ಕೆ ತಕ್ಕಂತೆ ವಾಹನಮೂರ್ತಿಗಳು ಅವಶ್ಯವಾಗಿರುತ್ತವೆ.
* ಗರ್ಭಗುಡಿಯ ಬಾಗಿಲುವಾಡ ಅಲಂಕಾರ ರಹಿತವಾಗಿ ಸರಳವಾಗಿರುತ್ತದೆ.
* ಸಾಧಾರಣವಾಗಿ ದೊಡ್ಡಗಾತ್ರದ ದ್ವಾರಪಾಲಕ ವಿಗ್ರಹಗಳು ಮಹಾದ್ವಾರದ ಮುಂಭಾಗದಲ್ಲಿ ಅವಶ್ಯವಾಗಿ ಇರುತ್ತವೆ.
* ಪ್ರಧಾನ ದೇವಾಲಯದ ಸುತ್ತಲೂ ಪರಿವಾರ ದೇವತೆಗಳ ಗುಡಿಗಳಿರುತ್ತವೆ.
* ಸಾಮಾನ್ಯವಾಗಿ ದೇವಾಲಯದಲ್ಲಿ ಉತ್ಸವ ಮೂರ್ತಿಗಳಿರುತ್ತವೆ.
* ದೇವಾಲಯದ ಈಶಾನ್ಯಮೂಲೆಯಲ್ಲಿ ಪುಷ್ಕರಣಿ ಇರುತ್ತದೆ.[೬೫]

ದ್ರಾವಿಡ ಶೈಲಿಯ ಮೂಲವನ್ನು ಗುಪ್ತರ ದೇವಾಲಯಗಳಲ್ಲಿ ನೋಡಬಹುದು. ದ್ರಾವಿಡ ಶೈಲಿಯ ವಿಮಾನಕ್ಕೆ ಅಂತಸ್ತುಗಳಿಂದ ಕೂಡಿದ ಗುಡಿಗಳ ಮಾದರಿ ಮೂಲವೆನ್ನಬಹುದು. ಮುಂದೆ ಬಂದ ರಾಜಮನೆತನಗಳು ದ್ರಾವಿಡಶೈಲಿಯನ್ನು ಅಳವಡಿಸಿಕೊಂಡವು. ಇದು ೧೫ - ೧೬ನೇ ಶತಮಾನದಲ್ಲಿ ಉನ್ನತಿಯನ್ನು ಪಡೆದು ವಿಜಯನಗರ ಹಾಗೂ ಪಾಳೆಯಗಾರರ ಕಾಲದಲ್ಲಿಯೂ ಮುಂದುವರೆಯಿತು.

ವೇಸರ ಶೈಲಿ

ಈ ಶೈಲಿಯ ವಿಶಿಷ್ಟತೆಯನ್ನು ಗಮನಿಸಿದಾಗ ವೇಸರ ಶೈಲಿಯ ಕಟ್ಟಡಗಳು ಕರ್ನಾಟಕದಲ್ಲಿ ೬- ೭ನೆಯ ಶತಮಾನಗಳಿಂದ ೧೪ನೆಯ ಶತಮಾನದವರೆಗೆ ಹೆಚ್ಚು ಬಳಕೆಯಲ್ಲಿದ್ದವು. ಈ ಶೈಲಿಯ ವಿಶಿಷ್ಟಲಕ್ಷಣ ಅದರ ವೃತ್ತಾಕಾರ; ಅರ್ಧವೃತ್ತಾಕಾರದ ಅಥವಾ ಗಜಪೃಷ್ಠಾಕಾರದ ಒಂದಂತಸ್ತಿನ ಮತ್ತು ಪೂರ್ಣಾವೃತ್ತಕಾರದ ಕಟ್ಟಡಗಳನ್ನು ವೇಸರ ಶೈಲಿಯವೆಂದು ವರ್ಣಿಸಲಾಗಿದೆ. ಕೆಲವೊಂದು ಸಾರಿ ದೀರ್ಘ ವೃತ್ತಕಾರದ ಕಟ್ಟಡಗಳನ್ನು ಈ ಶೈಲಿಗೆ ಸೇರಿಸುವುದುಂಟು.

ಕಾಮಿಕಾಗಮ ಗ್ರಂಥದ ಪ್ರಕಾರ ತಳವಿನ್ಯಾಸದಲ್ಲಿ ದ್ರಾವಿಡ ಮತ್ತು ಮೇಲ್ಕಟ್ಟಡದ ವಿವರಗಳಲ್ಲಿ ನಾಗರಶೈಲಿಯ ಲಕ್ಷಣಗಳನ್ನೊಳಗೊಂಡ ಮಿಶ್ರಶೈಲಿ ವೇಸರವೆಂದು ಹೇಳಲಾಗಿದೆ. ವೇಸರ ಶೈಲಿಯಲ್ಲಿ ಕಟ್ಟಡದ ತಳಭಾಗದ ಆಕಾರಕ್ಕಿಂತಲೂ, ಅವುಗಳ ಗ್ರೀವ, ಶಿಖರಗಳ ಆಕಾರದ ಮೇಲೆ ಅದರ ಶೈಲಿಯನ್ನು ನಿರ್ಧರಿಸಬಹುದು. ವೇಸರ ಶೈಲಿಯ ಅತ್ಯುತ್ತಮ ದೇವಾಲಯವೆಂದರೆ ತಮಿಳುನಾಡಿನ ನಾರ್ತಾಮಲೈಯಲ್ಲಿರುವ ವಿಜಯಾಲಯ ಚೋಳೇಶ್ವರ ದೇವಾಲಯವು ಬುಡದಿಂದ ತುದಿಯವರೆಗೂ ವೃತ್ತಾಕಾರವಾಗಿದ್ದು ಇದು ವೇಸರ ಶೈಲಿಯ ಎಲ್ಲಾ ಲಕ್ಷಣಗಳನ್ನು ಹೊಂದಿದೆ.[೩೩] ಸ್ಟೆಲ್ಲಾಕ್ರಾಮರಿಷ್ ತಿಳಿಸಿರುವಂತೆ ಸಾಮಾನ್ಯವಾಗಿ ವೇಸರ ಶೈಲಿಯ ಮಂದಿರಗಳು ವಿಂಧ್ಯಪರ್ವತ ಮತ್ತು ಕೃಷ್ಣಾನದಿಗಳ ಮಧ್ಯಪ್ರದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿದ್ದವು. ಈ ಮಿಶ್ರಶೈಲಿಯ ದೇವಾಲಯಗಳು ಚಾಲುಕ್ಯ - ಹೊಯ್ಸಳ ಕಾಲದಲ್ಲಿ ಕಾವೇರಿ ಬಯಲಿನವರೆಗೂ ಪಸರಿಸಿವೆ.

ಇತ್ತೀಚಿನ ಹಲವಾರು ವಿದ್ವಾಂಸರು ದ್ರಾವಿಡ - ನಾಗರ ಶೈಲಿಯ ಮಧ್ಯವರ್ತಿ ಕಟ್ಟಡಗಳನ್ನು ವೇಸರ ಶೈಲಿಯ ನಿದರ್ಶನಗಳೆಂದು ಭಾವಿಸಿದ್ದಾರೆ.[೩೪] ಚಾಲುಕ್ಯರು ಈ ಶೈಲಿಯನ್ನು ಆರಂಭಿಸಿದರೆ, ಹೊಯ್ಸಳರು ಉತ್ತುಂಗ ಶಿಖರಕ್ಕೆ ಕೊಂಡ್ಯೊಯ್ದರು. ಈ ಶೈಲಿಯನ್ನು ಔತ್ತರೇಯ ದ್ರಾವಿಡಶೈಲಿ ಎಂದೂ ಗುರುತಿಸುತ್ತಾರೆ.

ಈ ಮೇಲಿನ ಮೂರು ಶೈಲಿಗಳಲ್ಲದೆ ಭೂಮಿಜಶೈಲಿಯ ಶಿಖರಗಳು ಮೇಲೆರುತ್ತಾ ಕಿರಿದಾಗುತ್ತವೆ. ಶಿಖರದ ಅಂತ್ಯದಲ್ಲಿ ವೇದಿ, ಘಂಟಾ, ಕಳಶ ಇರುವುದನ್ನು ವಿದ್ವಾಂಸರು 'ಭೂಮಿಜಶೈಲಿ' ಎಂದು ಗುರುತಿಸಿದ್ದಾರೆ.[೩೫] ಅಲ್ಲದೆ ಕಳಿಂಗ ಶೈಲಿಯು ಉತ್ತರದ ಪ್ರತಿನಿಧಿಯಾಗಿ ಇದರಲ್ಲಿ ಬಾಗಿದ ಶಿಖರವಿರುತ್ತದೆ. ಈ ಶೈಲಿಯು ೯ನೆಯ ಶತಮಾನದಲ್ಲಿ ವಿಸ್ತಾರಗೊಂಡ ಶೈಲಿಯಾಗಿದೆ. ಹೆಚ್ಚು ಮಳೆ ಬೀಳುವಂತಹ ಮಲೆನಾಡು ಪ್ರದೇಶದಲ್ಲಿ ಲುಪಾಶೈಲಿಯ ಶಿಖರವು ಕಂಡುಬರುತ್ತದೆ. ಮಳೆ ನೀರಿನಿಂದ ದೇವಾಲಯವನ್ನು ರಕ್ಷಿಸುವುದಕ್ಕೆ ಭಿತ್ತಿಯ ಮೇಲೆ ಇಳಿಜಾರು ಛಾವಣಿಯು ಇದ್ದು ಅದು ಭಿತ್ತಿಯಿಂದ ಮುಂಚಾಚಿರುತ್ತದೆ. ಇದರ ಒಟ್ಟು ರಚನೆಯು ಚತುರ್ವರ್ಗ ರಚನೆ ಎನಿಸಿದೆ. ಇದನ್ನು 'ಲುಪಾಕಾರ' ಶೈಲಿ ಎಂದು ಕರೆಯುವರು.

ಕರ್ನಾಟಕದ ವಾಸ್ತುಶಿಲ್ಪ ಶೈಲಿ

ಈ ಶೈಲಿಯನ್ನು ಪ್ರಧಾನವಾಗಿ ನಾಲ್ಕು ಘಟ್ಟಗಳಾಗಿ ವಿಭಾಗಿಸಲಾಗಿದೆ.

ಚಾಲುಕ್ಯಪೂರ್ವ ಯುಗ: ಕ್ರಿ.ಶ. ೧ರಿಂದ ಸುಮಾರು ಕ್ರಿ.ಶ. ೫ನೇ ಶತಮಾನವರೆಗಿನ ಕಾಲವನ್ನು ಇದರಲ್ಲಿ ಸೇರಿಸಲಾಗಿದೆ. ಇಲ್ಲಿ ಮೌರ್ಯರ ಕಾಲದಿಂದ ಹಿಡಿದು ಶಾತವಾಹನ, ಗಂಗ, ಕದಂಬರ ಕಾಲದವರೆಗೆ ನಿರ್ಮಿಸಲಾದ ವಾಸ್ತುಶೈಲಿಯ ಪ್ರಭೇದಗಳು ಒಳಗೊಂಡಿವೆ. ನಮಗೆ ಕರ್ನಾಟಕದಲ್ಲಿ ಶಾತವಾಹನರ ಕಾಲದ ವಾಸ್ತು ಅವಶೇಷಗಳು ಕಡಿಮೆ ಸಂಖ್ಯೆಯಲ್ಲಿ ದೊರೆತರೂ ಮೂಲ ವಾಸ್ತುಶಿಲ್ಪ ಶೈಲಿಯ ಕುರುಹುಗಳು ಸಿಗುವುದಿಲ್ಲ. ಉದಾ : ಶಿವಮೊಗ್ಗ ಜಿಲ್ಲೆಯ ತಾಳಗುಂದದ ಶಾಸನದ ಪ್ರಕಾರ ಅಲ್ಲಿನ ಪ್ರಣವೇಶ್ವರ ದೇವರನ್ನು ಶಾತವಾಹನಕುಲದ ಶಾತಕರ್ಣಿ ಮುಂತಾದವರು ಪೂಜಿಸುತ್ತಿದ್ದುದು ತಿಳಿದುಬರುತ್ತದೆ. ಆದರೆ ದೇವಾಲಯವು ಜೀರ್ಣೋದ್ಧಾರಕ್ಕೊಳಗಾಗಿ ಮೊದಲಿನ ರೂಪವನ್ನು ಕಳೆದುಕೊಂಡಿದೆ. ಶಾತವಾಹನರ ನಂತರ ಆಳಿದವರು ಕದಂಬರು. ಇವರು ಉತ್ತರದಲ್ಲಿ ಆಳಿದರೆ ದಕ್ಷಿಣದಲ್ಲಿ ತಲಕಾಡಿನ ಗಂಗರು ಆಳ್ವಿಕೆ ನಡೆಸುತ್ತಿದ್ದರು. ಕದಂಬರು ಅನೇಕ ದೇವಾಲಯಗಳನ್ನು

ಕಟ್ಟಿಸಿದ ಉಲ್ಲೇಖವಿರುವ ಶಾಸನಗಳಿವೆ. ಬನವಾಸಿಯ ಮಧುಕೇಶ್ವರ, ಹಲಸಿಯಲ್ಲಿ ಮೃಗೇಶವರ್ಮನು ದೇವಾಲಯವೊಂದನ್ನು ನಿರ್ಮಿಸಿದುದು ಶಾಸನಗಳಿಂದ ತಿಳಿದುಬರುತ್ತದೆ. ಕದಂಬರ ಕಾಲದ ವಾಸ್ತು ಅವಶೇಷಗಳು ಕಟ್ಟಿಗೆ ಹಾಗೂ ಇಟ್ಟಿಗೆಗಳಿಂದ ನಿರ್ಮಿಸಿದ ದೇವಾಲಯಗಳಾಗಿರುವುದರಿಂದ ಅವು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವುದಿಲ್ಲ.

ಮುಂದೆ ಗಂಗರ ಆಳ್ವಿಕೆಯಲ್ಲಿ ನಿರ್ಮಿಸಿದ ದೇವಾಲಯ, ಬಸದಿಗಳ ಬಗ್ಗೆ ಶಾಸನಗಳ ಉಲ್ಲೇಖಗಳಿವೆ. ಇವರು ಮಂಡಲಿ, ಮಣ್ಣೆ ಮುಂತಾದ ಕಡೆಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದರಲ್ಲದೆ ಅವರು ಆರಂಭ ಕಾಲದಲ್ಲಿ ಇಟ್ಟಿಗೆ, ಗಾರೆ, ಮರಗಳಿಂದ ದೇವಾಲಯಗಳನ್ನು ನಿರ್ಮಿಸಿದ ಅವಶೇಷಗಳು ಕಂಡುಬರುತ್ತವೆ. ಉದಾ: ನರಸಮಂಗಲದ ರಾಮೇಶ್ವರಾಲಯ ಇಟ್ಟಿಗೆಯ ಪ್ರಾಚೀನ ಕಟ್ಟಡವಾಗಿದೆ.

ಚಾಲುಕ್ಯ ಯುಗ: ಕ್ರಿ.ಶ. ೬ನೇ ಶತಮಾನದಿಂದ ಕ್ರಿ.ಶ. ೧೦ನೆಯ ಶತಮಾನದವರೆಗೆ ಒಳಗೊಂಡಿದೆ. ಚಾಲುಕ್ಯ ಶೈಲಿಯ ದೇವಾಲಯಗಳ ಮೂಲಭೂತ ಲಕ್ಷಣಗಳು ದ್ರಾವಿಡ ಶೈಲಿಯವಾಗಿವೆ. ಕ್ರಿ.ಶ. ೧೦ನೆಯ ಶತಮಾನದವರೆಗಿನ ಚಾಲುಕ್ಯ ದೇವಾಲಯಗಳಲ್ಲಿ ದ್ರಾವಿಡ ಶೈಲಿಯ ಲಕ್ಷಣಗಳನ್ನು ಸುಲಭವಾಗಿ ಗುರುತಿಸಬಹುದು. ಚಾಲುಕ್ಯ ವಾಸ್ತುಕೃತಿಗಳೆಲ್ಲವೂ ರಾಜಧಾನಿಯ ಪರಿಸರ ಪ್ರಾಂತ್ಯದಲ್ಲಿ ಕಂಡುಬರುತ್ತವೆ. ಈ ವಂಶದ ದೇವಾಲಯಗಳು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ನಾಗರಾಳ ಹಾಗೂ ಆಂಧ್ರಪ್ರದೇಶದ ಆಲಂಪುರ, ಸತ್ಯವೋಲು ಮತ್ತು ಮಹಾನಂದಿಗಳಲ್ಲಿ ಕಂಡುಬರುತ್ತವೆ. ಐಹೊಳೆಯಲ್ಲಿ ಸುಮಾರು ೧೨೫ ಗುಡಿಗಳಿವೆ. ಇವರು ದೇವಾಲಯವನ್ನು ಕಟ್ಟಲು ನಸುಗೆಂಪು ಅಥವಾ ತಿಳಿಹಳದಿ ಬಣ್ಣದ ಮರಳುಗಲ್ಲನ್ನು ಬಳಸಿಕೊಂಡರು. ಇವರು ನಿರ್ಮಿಸಿದ ದೇವಾಲಯಗಳ ವಾಸ್ತು ಸಂಪ್ರದಾಯದ ಪ್ರಯೋಗಾತ್ಮಕ ನೆಲೆಗಳಾಗಿರುವವೆಂದು ಭಾವಿಸಿರುವರು.

ಐಹೊಳೆ - ಪಟ್ಟದಕಲ್ಲುಗಳು ಭಾರತೀಯ ವಾಸ್ತುಶಿಲ್ಪದ 'ಕಾರ್ಯಗಾರ'ಗಳೆಂದು ಪ್ರಸಿದ್ಧವಾಗಿವೆ. ಅಲ್ಲಿನ ದೇವಾಲಯ, ಶಿಲ್ಪಗಳ ಜೀವಂತಿಕೆ ಸಮೃದ್ಧ ಸಾಮಾಜಿಕ ಜೀವನದ ಲವಲವಿಕೆ ಉತ್ಸಾಹಗಳ ಸಂಕೇತವಾಗಿವೆ.[೫೯] ಚಾಲುಕ್ಯರು ದಕ್ಷಿಣದ ದ್ರಾವಿಡಶೈಲಿ ಮತ್ತು ಉತ್ತರದ ನಾಗರಶೈಲಿಯ ಕಟ್ಟಡಗಳ ಸಮ್ಮಿಶ್ರಣವಾದ ವೇಸರ ಶೈಲಿಯನ್ನು ಬೆಳಕಿಗೆ ತಂದರು. ಇದು ಮುಂದೆ ಕರ್ನಾಟಕದಲ್ಲಿ ಒಂದು ಹೊಸಶೈಲಿಗೆ ನಾಂದಿಹಾಡಿತು. ಈ ಶೈಲಿಗೆ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯವು ಒಂದು ಉತ್ತಮ ಉದಾಹರಣೆ.

ಮುಂದೆ ಬಾದಾಮಿಚಾಲುಕ್ಯರ ನಂತರ ಬಂದ ರಾಷ್ಟ್ರಕೂಟರು ಕರ್ನಾಟಕದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದ ಅನೇಕ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಇವರ ಕಾಲದಲ್ಲಿ ದೇವಾಲಯಗಳು ವಿಶೇಷವಾಗಿ ಮಹಾರಾಷ್ಟ್ರ ರಾಜ್ಯದ ಎಲ್ಲೋರ ಮತ್ತು ಕರ್ನಾಟಕದ ಪ್ರದೇಶಗಳಾದ ಕುಕನೂರು, ರೋಣ, ಮುಳಗುಂದ, ಸಿರಿವಾಳ, ಹಳ್ಳೂರು, ಸವದತ್ತಿ, ಕುಡಿತಿನಿ, ಹಂಪಿ, ಆಡ್ಲೂರು, ಆತಕೂರು, ಲಕ್ಷ್ಮೇಶ್ವರ, ನರೇಗಲ್‌ಗಳಲ್ಲಿ ಕಂಡುಬರುತ್ತವೆ.[೬೦] ರಾಷ್ಟ್ರಕೂಟರ ವಾಸ್ತುಶಿಲ್ಪವು ಪ್ರಾಚೀನ ಚಾಲುಕ್ಯ ವಾಸ್ತುಶಿಲ್ಪದಿಂದ ಗಣನೀಯವಾಗಿ ಪ್ರಭಾವಿತವಾಯಿತು. ಬದಲಾದ ಧಾರ್ಮಿಕ ಪರಿಗಣನೆಗಳಿಗೆ ತಕ್ಕಂತೆ ಕೂಟ ದೇವಾಲಯಗಳನ್ನು

ರಾಷ್ಟ್ರಕೂಟರ ಕಾಲದಲ್ಲಿ ವಾಸ್ತುಶಿಲ್ಪಿಗಳು ನಿರ್ಮಿಸಿದರು. ಇವರು ದೇವಾಲಯಕ್ಕೆ ಬಳಸಿದ ಕಲ್ಲೆಂದರೆ ಕೆಂಪುಮರಳುಗಲ್ಲು. ಗ್ರಾನೈಟ್, ಪದರಗಲ್ಲುಗಳಿಂದ ದೇವಾಲಯಗಳ ಶಿಲ್ಪಕಲಾ ಕೆತ್ತನೆ ಕಡಿಮೆಯಿರುವುದು. ರಾಷ್ಟ್ರಕೂಟರ ಕಾಲದ ಪ್ರಮುಖ ಲಕ್ಷಣಗಳೆಂದರೆ, ಕೂಟ ದೇವಾಲಯಗಳ ಉಗಮ, ಸಾಂಧಾರ ದೇವಾಲಯಗಳು, ಕಂಬಗಳ ಕೆತ್ತನೆ ಹಾಗೂ ದ್ವಾರಪಾಲಕ ವಿಗ್ರಹಗಳ ರಚನೆಗಳಾಗಿವೆ.

ಕಲ್ಯಾಣಿ ಚಾಲುಕ್ಯರು ಪ್ರಬುದ್ಧಮಾನಕ್ಕೆ ಬರುವ ವೇಳೆಗೆ ಬಾದಾಮಿ ಚಾಲುಕ್ಯರ ವೇಸರ ಶೈಲಿಯು ಬಳಕೆಯಲ್ಲಿದ್ದಿತು. ಕುರುವತ್ತಿ, ಗದಗ, ಲಕ್ಕುಂಡಿ, ಡಂಬಳ, ಉಣಕಲ್ಲು, ಲಕ್ಷ್ಮೇಶ್ವರ, ಅಬ್ಬಲೂರು, ಇಟಗಿ, ಬಂಕಾಪುರಗಳಲ್ಲಿ ಈ ಕಾಲದ ದೇವಾಲಯಗಳು ಪ್ರಮುಖವಾಗಿ ಕಂಡುಬಂದಿವೆ.[೪೧] ಕಲ್ಯಾಣ ಚಾಲುಕ್ಯರ ವಾಸ್ತುಲಕ್ಷಣಗಳ ಗೋಪುರದಲ್ಲಿ ಲಂಬನಿಲವೂ ಅಳವಡಿಸಿ ಅಲಂಕರಣವನ್ನು ಹೆಚ್ಚಿಸಿದ್ದರು. ಹಿಂದಿನ ಮರಳು ಶಿಲೆಯ ಬದಲು ಹಸಿರು ಮಿಶ್ರಿತ ಕಪ್ಪುಶಿಲೆಯನ್ನು ಉಪಯೋಗಿಸಿ ದೇವಾಲಯದ ಎತ್ತರದ ಪ್ರಮಾಣವನ್ನು ತಗ್ಗಿಸಿದರು. ಬಾಗಿಲುವಾಡ ಮತ್ತು ಹೊರಗೋಡೆಗಳು ಶಿಲ್ಪಾಲಂಕಾರಗಳಿಂದ ತುಂಬಿದವು. ತಲವಿನ್ಯಾಸದಲ್ಲಿ ಬದಲಾವಣೆ ಮಾಡಿ ದೀರ್ಘ ಚತುರಸ್ರವಾಗಿ ನಿರ್ಮಿಸಿದರು. ಗೋಡೆಗಳಲ್ಲಿ ಅರೆಗಂಬಗಳು, ಮೂರ್ತಿಶಿಲ್ಪಗಳು ಕಾಣಿಸಿಕೊಂಡವು.

ಹೊಯ್ಸಳ ಯುಗ: ೧೧ನೆಯ ಶತಮಾನದಿಂದ ೧೩ನೇ ಶತಮಾನದ ಕೊನೆಯವರೆಗೆ. ಹೊಯ್ಸಳರು ಕಲ್ಯಾಣ ಚಾಲುಕ್ಯರ ನಂತರ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದರು. ಇವರು ಚಾಲುಕ್ಯರ ವಾಸ್ತುಶೈಲಿಯನ್ನು ಮುಂದುವರೆಸಿಕೊಂಡು ಬಂದರು. ಹೊಯ್ಸಳರ ಕಾಲದ ದೇವಾಲಯಗಳಿಗೆ ಬೇಲೂರು, ಹಳೇಬೀಡು, ಸೋಮನಾಥಪುರಗಳು ಪ್ರಸಿದ್ಧವಾಗಿದ್ದರೆ, ಹಾಸನ ಜಿಲ್ಲೆ, ತುಮಕೂರು ಜಿಲ್ಲೆಗಳಲ್ಲಿಯೂ ಅವರ ಕಾಲದ ಅನೇಕ ದೇವಾಲಯಗಳು ಕಂಡುಬರುತ್ತವೆ.[೪೨] ಕೆಲವು ಬದಲಾವಣೆಗಳೊಂದಿಗೆ ಈ ಕಾಲದಲ್ಲಿ ಆಳರಸರ ಧಾರ್ಮಿಕ ಪ್ರಜ್ಞೆಯ ಗಟ್ಟಿತನದಿಂದಾಗಿ ಭಕ್ತಿ - ಶ್ರದ್ಧಾಪೂರ್ವಕ ನಿಷ್ಠೆಯಿಂದ ಈ ಕಾಲದಲ್ಲಿ ರಚನೆಗೊಂಡ ದೇವಾಲಯಗಳು ಶಿಲ್ಪಕಲೆಯ ದೃಷ್ಟಿಯಿಂದ ಶ್ರೀಮಂತವಾಗಿವೆ. ದೇವಾಲಯಗಳ ತಲವಿನ್ಯಾಸವು ನಕ್ಷತ್ರಾಕಾರವಾಗಿಯೂ ಅದೇ ಆಕಾರದಲ್ಲಿ ಎತ್ತರವಾದ ಜಗಲಿಯಂತೆ ನಿರ್ಮಾಣವಾದ ಪೀಠಗಳ ಮೇಲೆ ದೇವಾಲಯ ನಿಂತಿರುವುದು. ಈ ಜಗಲಿ ಭಕ್ತಾಧಿಗಳ ಪ್ರದಕ್ಷಿಣೆಪಥವಾಗಿ ಏರ್ಪಟ್ಟಿರುತ್ತದೆ. ಈ ಕಾಲದ ದೇವಾಲಯಗಳು ಮೃದು ಬಳಪದ ಕಲ್ಲಿನಿಂದ ನಿರ್ಮಾಣವಾದುದರಿಂದ ತಲದಿಂದ ಹಿಡಿದು ಮುಡಿಯವರೆಗೆ ಅತಿಸೂಕ್ಷ್ಮ ಕೆತ್ತನೆಗಳನ್ನು ಒಳಗೊಂಡಿರುವವು. ಕಂಬಗಳು ತಿರುಗಣೆಯ ಯಂತ್ರದಿಂದ ಕಡೆದಿದ್ದು ವೃತ್ತಾಕಾರವಾಗಿ ಹೊಳಪಿನಿಂದ ಕೂಡಿವೆ. ಜಗಲಿಯ ಸುತ್ತಲೂ ಬಳಸಿರುವ ಅಲಂಕಾರ ಪಟ್ಟಿಕೆಗಳು ಈ ಗೋಡೆಗಳ ವೈಶಿಷ್ಟ್ಯ. ಹೊಯ್ಸಳ ರೀತಿಯ ಶಿಖರಗಳು ದ್ರಾವಿಡ ಶೈಲಿಯಂತೆ ಮೇಲಕ್ಕೇರುತ್ತ ಹೋಗಿ ಚಿಕ್ಕದಾಗಿ ಕೊನೆಗೊಳ್ಳುತ್ತವೆ. ಇವರ ಕಾಲದಲ್ಲಿ ಶಿಖರಗಳು ಅಷ್ಟು ದೊಡ್ಡದಾಗಿ ಕಂಡುಬರುವುದಿಲ್ಲ. ಕಟ್ಟಡಗಳಲ್ಲಿ ಭುವನೇಶ್ವರಿಗಳು ರಂಗಮಂಟಪದ ಮೇಲ್ಛಾವಣಿಯ ಒಳಭಾಗದಲ್ಲಿ ರೂಪುಗೊಂಡಿರುವುದು ವಿಶೇಷ. ಇಲ್ಲಿ ಸೂಕ್ಷ್ಮ ಕೆಲಸವನ್ನು ಶಿಲ್ಪಿಗಳು ಹೆಚ್ಚು ಪರಿಶ್ರಮದಿಂದ ಶಿಲಾಬಾಲಿಕೆಯರನ್ನು ನಿರ್ಮಿಸಿದ್ದಾರೆ. ಗರ್ಭಗುಡಿಯ ಮುಂಭಾಗದಲ್ಲಿ ಸುಕನಾಸಿಯ ಮೇಲೆ ಸಳನು ಹುಲಿಯನ್ನು ಇರಿಯುತ್ತಿರುವ ಹೊಯ್ಸಳ ವಂಶದ ಚಿಹ್ನೆ ಕಂಡುಬರುವುದರಿಂದ ಸುಲಭವಾಗಿ ಹೊಯ್ಸಳಶೈಲಿ ಎಂದು ಗುರುತಿಸಬಹುದಾಗಿದೆ.

ವಿಜಯನಗರ ಕಾಲ: (೧೪ನೆಯ ಶತಮಾನ ನಂತರದ ಕಾಲ) ವಿಜಯನಗರ ಸಾಮ್ರಾಜ್ಯದ ಹುಟ್ಟು ಇಡೀ ದಕ್ಷಿಣ ಭಾರತಕ್ಕೆ ಧಾರ್ಮಿಕ ರಕ್ಷಣೆಯನ್ನು ನೀಡಿ ವಾಸ್ತುಶಿಲ್ಪ, ಶಿಲ್ಪಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿ ಬೆಳೆಸಿತು. ಇವರು ದಕ್ಷಿಣ ಭಾರತದಲ್ಲೆಲ್ಲಾ ಅನೇಕ ದೇವಾಲಯಗಳ ಹುಟ್ಟಿಗೆ ಕಾರಣರಾಗಿ, ಹಲವು ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದರು. ಅರಸರು ದೇವಾಲಯದ ವಿಸ್ತರಣೆಗೆ ಹೆಚ್ಚು ಒಲವು ಹೊಂದಿದ್ದರಿಂದ ತಿರುಪತಿ, ತಾಡಪತ್ರಿ, ಕಾಂಚಿ, ಶ್ರೀರಂಗಂ, ಮಧುರೆ, ಚಿದಂಬರಂ, ಹಂಪಿ ಮೊದಲಾದ ಕಡೆಗಳಲ್ಲಿ ವಾಸ್ತುಶಿಲ್ಪದ ಬೆಳವಣಿಗೆಗೆ ಕಾರಣರಾದರು. ವಿಜಯನಗರ ಅರಸರ ಕಾಲದ ಕರ್ನಾಟಕದಲ್ಲಿ ದ್ರಾವಿಡ ಶೈಲಿಯ ಕಟ್ಟಡಗಳು ವಿಶೇಷವಾಗಿ ನಿರ್ಮಾಣವಾದವು. ಇದು ದ್ರಾವಿಡ ಶೈಲಿಯ ಮುಂದುವರಿದ ಭಾಗವಾಗಿ ಪರಿವರ್ತನೆಗೊಂಡು ಸಾಮಾನ್ಯ ರೀತಿಯ ಅನೇಕ ಕಟ್ಟಡಗಳು ಈ ಕಾಲದ ದ್ರಾವಿಡಶೈಲಿಯ ವೈಶಿಷ್ಟ್ಯಗಳಾಗಿವೆ. ಪೂಜಾವಿಧಾನದಲ್ಲಾದ ಬದಲಾವಣೆಗಳು ಮತ್ತು ಹೆಚ್ಚು ವಿಸ್ತಾರವಾಗಿ ನಡೆಯುತ್ತಿದ್ದ ಉತ್ಸಾವಾದಿಗಳು, ಕಟ್ಟಡದಲ್ಲಾದ ಬದಲಾವಣೆಗೆ ಕಾರಣವೆಂದು ಹೇಳಬಹುದು.[೪೨]

ತುಂಗಭದ್ರಾ ಪ್ರದೇಶದಲ್ಲಿ ವಿಪುಲವಾಗಿ ದೊರೆಯುವ ಶಿಲಾ ಸಮೂಹವೇ ವಿಜಯನಗರದ ದೇವಾಲಯ ನಿರ್ಮಾಣಕ್ಕೆ ಸಹಾಯಕವಾಯಿತು. ವಿಜಯನಗರ ಶಿಲ್ಪಿಗಳ ಕಲಾತ್ಮಕ ಕೈಗಳಲ್ಲಿ ಈ ಶಿಲೆ ಸುಂದರ ಮೂರ್ತಿಗಳಾಗಿ, ಭವ್ಯ ದೇವಾಲಯಗಳಾಗಿಯೂ ಪರಿವರ್ತನೆಗೊಂಡವು.[೪೩] ವಿಜಯನಗರದ ಅರಸರು ಹಿಂದಿನಿಂದ ಬಂದ ಅರಸು ಮನೆತನಗಳಂತೆ ಧರ್ಮರಕ್ಷಣೆಗೆ ಕಂಕಣಬದ್ಧರಾಗಿ ದುಡಿದರು. ಹಿಂದೂಧರ್ಮದ ಅವನತಿಯ ಕಾಲದಲ್ಲಿ ಉದ್ಭವಿಸಿದ ವಿಜಯನಗರದಲ್ಲಿ ಮೊಟ್ಟಮೊದಲು ಕೈಗೊಂಡಿರುವ ಕಾರ್ಯವೆಂದರೆ ದೇವಾಲಯಗಳ ಜೀರ್ಣೋದ್ಧಾರ. ಹಿಂದಿನ ಧಾಳಿಗಳಲ್ಲಿ ತುತ್ತಾದ ಅನೇಕ ದೇವಾಲಯಗಳನ್ನು ಸಾಮ್ರಾಜ್ಯದಾದ್ಯಂತ ದುರಸ್ತಿಗೊಳಿಸಿ ಅವುಗಳಲ್ಲಿ ಅನೇಕ ಭಾಗಗಳನ್ನು ಸೇರಿಸಿ ಧಾರ್ಮಿಕ ಒಲವು ಮೂಡಿಸುವುದರೊಂದಿಗೆ ಜನರ ಮನವನ್ನು ಗೆದ್ದರು. ತದನಂತರ ಸಾಮ್ರಾಜ್ಯದಲ್ಲಿ ಶಾಂತಿಯತ್ತ ಗಮನಹರಿಸಿ ಹಲವು ಹೊಸ ದೇವಾಲಯಗಳ ನಿರ್ಮಾಣಕ್ಕೆ ಕೈಹಾಕಿ ನಾಡಿನಾದ್ಯಂತ ಅನೇಕ ದೇವಾಲಯಗಳನ್ನು ನಿರ್ಮಿಸಿದರು.

ವಿಜಯನಗರ ವಾಸ್ತುಶಿಲ್ಪ ಬೆಳವಣಿಗೆಯನ್ನು ನಾವು ಗಮನಿಸಿದಾಗ ಅವರು ಮೊಟ್ಟಮೊದಲು ಚೋಳ ರೀತಿಯ ದೇವಾಲಯಗಳ ಶೈಲಿಯನ್ನು ಅನುಸರಿಸಿದ್ದುದು ತಿಳಿದುಬರುತ್ತದೆ. ಆದರೆ ಬೃಹದಾಕಾರದ ಒಂದೇ ಕಟ್ಟಡಗಳ ಬದಲಾಗಿ ದೇವಾಲಯ ಪ್ರಾಕಾರದಲ್ಲಿ ಅನೇಕ ಕಟ್ಟಡಗಳ ನಿರ್ಮಾಣವನ್ನು ಕೈಗೊಂಡರು. ಇವರದು ದ್ರಾವಿಡ ಶೈಲಿಯ ಮುಂದುವರೆದ ಭಾಗವಾಗಿ ಪರಿಣಮಿಸಿತು. ದ್ರಾವಿಡ ಮತ್ತು ಹೊಯ್ಸಳ ಶೈಲಿಗಳ ಸಂಗಮವನ್ನು ರೂಢಿಸಿಕೊಂಡು ವಿಜಯನಗರದ ಶಿಲ್ಪಿಗಳು ತಮ್ಮ ಕಲಾತ್ಮಕತೆಯಲ್ಲಿ ಭಿನ್ನವಾದ ಶೈಲಿಯನ್ನು ಹುಟ್ಟುಹಾಕಿದರು. ಮುಂದೆ ಅದು 'ವಿಜಯನಗರ ಶೈಲಿ' ಎಂದೇ ಕರೆಯಲಾದ ಹೊಸ ಹಾಗೂ ಖಚಿತವಾದ ಶೈಲಿಯ ಹುಟ್ಟಿಗೆ ಕಾರಣವಾಯಿತು. ಪರ್ಶಿಬ್ರೌನ್ ಹೇಳುವಂತೆ "ಈ ರೀತಿಯ ವಿಕಾಸಕ್ಕೆ ಸಮನಾದ ಉದಾಹರಣೆಯನ್ನು ಹುಡುಕುವುದು ಕಷ್ಟ. ಇದಕ್ಕೆ ಸಮೀಪವೆನಿಸುವ ನಿದರ್ಶನವೆಂದರೆ ಪುನರುಜ್ಜೀವನಕಾಲದ ಕೊನೆಯ ಹಂತದಲ್ಲಿ ವಿಕಾಸಗೊಂಡ ಬರೋಕ್ ಶೈಲಿ! ದ್ರಾವಿಡ ಶೈಲಿಯ ಅಥವಾ ಕರ್ನಾಟಕ ಶೈಲಿಯ ಪರಮಾವಧಿಯನ್ನು ನಾವು

ಇಲ್ಲಿ ಕಾಣುತ್ತೇವೆ" ಎಂದು ಹೇಳಿದ್ದಾರೆ.[೧೯] ಹೊಯ್ಸಳ ಸ್ಥಪತಿಗಳಂತೆ ವಿಜಯನಗರದ ಸ್ಥಪತಿಗಳು ದೇವಾಲಯದ ನಿರ್ಮಾಣವೆಂದರೆ ಅದೊಂದು ಬಗೆಯ ದೇವಕಾರ್ಯವೆಂದೇ ಬಗೆದಿದ್ದರು. ಅವರ ಶೈಲಿಯು ಕೇವಲ ಶುಷ್ಕನಿಯಮ ನಿಷ್ಠೆಯಿಂದ ಪ್ರೇರಿತವಾದ ನೀರಸ ಶೈಲಿಯಾಗಿರಲಿಲ್ಲ. ಪೋಷಕ ರಾಜರುಗಳ ಧರ್ಮ ಶ್ರದ್ಧೆಗೂ ಸ್ಫೂರ್ತಿ ವಿಶೇಷಕ್ಕೂ ಅನುಗುಣವಾಗಿ ಅವರು ತಮ್ಮ ಶೈಲಿ ವಿಶೇಷವನ್ನು ರೂಪಿಸಿಕೊಂಡವರಾಗಿ ದ್ದರು.[೨೦] ಅಂದಿನ ಕಾಲದ ನಿರ್ಮಾತೃಗಳ ಅಭಿರುಚಿಗೆ ತಕ್ಕಂತೆ ಹೊಸ ಶೈಲಿಯು ಹೆಚ್ಚು ಅಲಂಕರಣಕ್ಕೆ ಒತ್ತು ನೀಡಿ ಅನೇಕ ದೇವಾಲಯಗಳನ್ನು ನಿರ್ಮಿಸಿದರು.

ವಿಜಯನಗರ ಶೈಲಿಯ ಲಕ್ಷಣಗಳು

ವಿಜಯನಗರ ರಾಜಧಾನಿಯ ಸುತ್ತಮುತ್ತಲೂ ಸಿಗುವ ವಿಪುಲ ಗ್ರಾನೈಟ್ ಬೆಣಚುಕಲ್ಲಿನ ಶಿಲೆಯನ್ನು ಉಪಯೋಗಿಸಿ ದೇವಾಲಯಗಳನ್ನು ನಿರ್ಮಾಣ ಮಾಡಲಾಗಿದೆ. ಇಲ್ಲಿ ಸಿಗುವ ಶಿಲೆಯು ತುಂಬಾ ಕಠಿಣವಾದ ಗುಣವನ್ನು ಹೊಂದಿರುವುದರಿಂದ ಗಾಳಿ, ಮಳೆ, ಬಿಸಿಲಿನ ವಾತಾವರಣಕ್ಕೆ ತಡೆದುಕೊಂಡು ಹೆಚ್ಚು ಬಾಳಿಕೆ ಬರುವುದರಿಂದ ದೇವಾಲಯಗಳು ದೀರ್ಘಕಾಲ ಉಳಿಯುವುದಕ್ಕೆ ಹಾಗೂ ಸ್ಥಳೀಯವಾಗಿ ಹೇರಳ ದೊರೆಯುತ್ತಿದ್ದ ಗ್ರಾನೈಟ್ ಕಲ್ಲನ್ನು ಬಳಸಿದ್ದಾರೆ. ಈ ಶಿಲೆಯಿಂದ ಸೂಕ್ಷ್ಮ ಹಾಗೂ ಸುಂದರವಾದ ಕೆತ್ತನೆಗೆ ಆಸ್ಪದವನ್ನು ಶಿಲ್ಪಿಗಳು ನೀಡಿಲ್ಲದಿರುವುದು ಕಂಡುಬರುತ್ತದೆ. ದ್ರಾವಿಡಶೈಲಿಯ ದೇವಾಲಯಗಳು ಗರ್ಭಗೃಹ, ಸುಕನಾಸಿ, ನವರಂಗ, ಮಹಾರಂಗಮಂಟಪ, ಕಲ್ಯಾಣಮಂಟಪ ಹಾಗೂ ಇತರೆ ಪರಿವಾರ ದೇವಾಲಯಗಳನ್ನು ಒಳಗೊಂಡಿರುತ್ತವೆ. ಇವರು ಕಠಿಣವಾದ ಕಲ್ಲನ್ನು ಬಳಸಿರುವುದರಿಂದ ಎತ್ತರವಾದ ಮಂಟಪ, ಗೋಪುರ, ಪ್ರಾಕಾರಗೋಡೆ, ಪುಷ್ಕರಣಿಗಳನ್ನು ನಿರ್ಮಿಸುವುದು ಸಾಧ್ಯವಾಯಿತು. ಇವರ ಮುಖ್ಯ ಲಕ್ಷಣವೆಂದರೆ ಕಂಬಗಳ ಹೊಸ ವಿನ್ಯಾಸ. ಕಗ್ಗಲ್ಲನ್ನು ಹಲವಾರು ರೂಪಗಳಲ್ಲಿ ಕೊರೆದು ಹಲವು ರೀತಿಯ ಶಿಲ್ಪಗಳನ್ನು ಕಡೆದಿರುವುದಂತೂ ವಿಸ್ಮಯವೇ ಸರಿ. ಇವುಗಳಲ್ಲಿ ಶಿಲೆಯ ಕಂಬಗಳು ಚತುರಸ್ರಾಕಾರವಾಗಿವೆ. ಅವುಗಳಲ್ಲಿ ಶಾರ್ದೂಲ, ಕುದುರೆ, ಸಿಂಹಗಳ ವಿಗ್ರಹಗಳೂ ಆನೆ ಮತ್ತು ಅಶ್ವಾರೋಹಿಗಳ ವಿಗ್ರಹಗಳನ್ನು ಕೆತ್ತಿರುವರು. ಇಲ್ಲಿನ ಕಂಬಗಳಲ್ಲಿ ಶಿಲೆಯಕಾಂಡವು ಇಡೀ ಕಂಬಕ್ಕೆ ಆಸರೆಯಾಗಿ ಪರಿಣಮಿಸಿ, ಅದರ ಮಧ್ಯಭಾಗದಲ್ಲಿ ಸುತ್ತಲೂ ಸಣ್ಣ ಸಣ್ಣ ಕಂಬಗಳು ಅಷ್ಟಮುಖಗಳನ್ನು ಹೊಂದಿದ್ದು ಇವು ೮. ೧೦. ೧೬ ಕಂಬಗಳನ್ನು ಹೊಂದಿರುತ್ತವೆ. ಈ ಕಂಬಗಳು ವಿಜಯನಗರ ಶೈಲಿಯ ಭವ್ಯತೆಗೆ ಸಾಕ್ಷಿಯಾಗಿವೆ. ಗ್ರಾನೈಟ್ ಕಲ್ಲನ್ನು ಆಯ್ಕೆಮಾಡಿಕೊಂಡಿರುವುದರಿಂದ ಎತ್ತರವಾದ ಹಾಗೂ ಭವ್ಯವಾದ ಶಿಲಾಮೂರ್ತಿಗಳನ್ನು ಕೊರೆಯಲು ಅನುಕೂಲವಾಗಿ ಸಾಮ್ರಾಜ್ಯದಲ್ಲಿ ಅನೇಕ ಏಕಶಿಲಾಮೂರ್ತಿಗಳ ನಿರ್ಮಾಣ ವಿಜಯನಗರ ಶಿಲ್ಪಕಲೆಗೆ ವೈಶಾಲ್ಯತೆಯನ್ನು ತಂದುಕೊಟ್ಟಿದೆ. ವಿಜಯನಗರ ಸಾಮ್ರಾಜ್ಯದ ಸ್ಮಾರಕಗಳಲ್ಲಿ ದೇವಾಲಯಗಳ ಶಿಖರಗಳು ಹಾಗೂ ದ್ವಾರಗೋಪುರಗಳು ಬಹಳ ಪ್ರಾಮುಖ್ಯತೆಯನ್ನು ಪಡೆದಿವೆ. ಈ ಗೋಪುರಗಳು ೫. ೬. ೯. ೧೧ ತಲಗಳಲ್ಲಿ ಮುಂದುವರೆದ ಬೃಹತ್ ಗೋಪುರಗಳಾಗಿವೆ. ಇವುಗಳನ್ನು ರಾಯಗೋಪುರಗಳೆಂದೇ ಕರೆಯಲಾಗುತ್ತದೆ. ಈ ಕಾಲದ ಗೋಪುರಗಳು ವಿಜಯನಗರ ಮಹಾತ್ವಕಾಂಕ್ಷೆಯ ಹೆಗ್ಗುರುತುಗಳು.

ವಿಜಯನಗರ ಕಾಲದ ದೇವಾಲಯಗಳಲ್ಲಿ ಗೋಡೆಯ ಭಿತ್‌ಗಳು ಕಲ್ಲಿನಲ್ಲಿ ಕಟ್ಟಲ್ಪಟ್ಟು, ಅವುಗಳ ಮೇಲಣ ಭಾಗಗಳಾದ ಶಿಖರಪಟ್ಟಿಕೆಗಳು, ಗರ್ಭಗೃಹದ ಶಿಖರ, ಗೋಪುರ ಹಾಗೂ ಇನ್ನಿತರ ಕಡೆಗಳಲ್ಲಿ ಸುಟ್ಟ ಮಣ್ಣಿನ

ಕೃತಿಗಳಿಂದ ನಿರ್ಮಿಸಲಾಗಿದೆ. ಇಲ್ಲಿ ತಿಳಿಗಚ್ಚಿನ ಪ್ರತಿಮೆಗಳು ನೈಜತೆಯ ರೂಪವನ್ನು ಪ್ರತಿಬಿಂಬಿಸುತ್ತವೆ. ದೇವಾಲಯಗಳಲ್ಲಿ ಗರ್ಭಗುಡಿಯ ಸುತ್ತಲೂ ಮುಚ್ಚಿದ ಪ್ರದಕ್ಷಿಣೆಪಥವಿದ್ದು ಇದನ್ನು ಸಾಂಧಾರ ಪ್ರದಕ್ಷಿಣೆಪಥವೆಂತಲೂ ಕರೆಯುವರು. ಸುಕನಾಸಿ ಅಥವಾ ಮುಖಮಂಟಪದಿಂದ ಎಡಬಲ ಪಾರ್ಶ್ವಗಳಲ್ಲಿ ಐದಾರು ಮೆಟ್ಟಿಲು ಕೆಳಗೆ ಇಳಿದು ಹೋಗಬೇಕಾಗುತ್ತದೆ. ಗರ್ಭಗುಡಿಯ ಭಿತ್ತಿಗಳ ಕೆತ್ತನೆ ಅಲ್ಲಿನ ಒಳಕಿಂಡಿಗಳಿಂದ ಸೊಗಸಾಗಿ ಕಾಣುವುದು. ಈ ಪ್ರದಕ್ಷಿಣೆಪಥವು ಹಲವಾರು ಕಂಬಗಳಿಂದ ಕೂಡಿರುತ್ತದೆ. ತೆರೆದ ಮಂಟಪಗಳಾದ ಕಲ್ಯಾಣಮಂಟಪ, ಮಹಾರಂಗಮಂಟಪ, ನವರಂಗ ಇತ್ಯಾದಿ ಮಂಟಪಗಳಿಗೆ ಎಸ್ (S) ಆಕಾರದ ಕಪೋತ ಪ್ರಸ್ತಾರದಿಂದ ಇಳಿಬಿದ್ದಿರುತ್ತದೆ. ಮಳೆಬಂದರೆ ಒಳಗೆ ನೀರು ಬಾರದಿರುವ ಹಾಗೇ ಇವುಗಳನ್ನು ನಿರ್ಮಿಸುತ್ತಿದ್ದರು. ಅಲ್ಲದೆ ಸಂಗೀತ - ನೃತ್ಯ ಕಾರ್ಯಕ್ರಮಗಳ ಸಂದರ್ಭದಲ್ಲಿ ಪರದೆಯನ್ನು ಕಟ್ಟಲು ಕಪೋತದ ಕೊನೆಯಲ್ಲಿ ಹಿಡಿಕೆಗಳನ್ನು, ಕೊಂಡಿಗಳನ್ನು ಕೆತ್ತಿ ಕೊನೆಯ ಭಾಗದಲ್ಲಿ ಕಲ್ಲಿನ ಸರಪಳಿಯನ್ನು ಕೆತ್ತಿರುವುದು ಈ ಶೈಲಿಯ ವಿಶೇಷ. ಭಿತ್ತಿಯ ಭಾಗಗಳಲ್ಲಿ ಕೋಷ್ಠಕಗಳನ್ನು, ಕುಂಭಲತಾಗಳನ್ನು ಹಾಗೂ ಉಬ್ಬುಶಿಲ್ಪಗಳ ಚಿತ್ರಪಟಿಕೆಗಳನ್ನು ಕೆತ್ತಿರುವುದು ಗಮನಾರ್ಹ. ಎತ್ತರವಾದ ಮಂಟಪಗಳನ್ನು ಏರಲು ಸೋಪಾನಗಳಿವೆ. ಇವುಗಳಲ್ಲಿ ಸಿಂಹಯಾಳಿ, ಗಜಯಾಳಿ, ಸಾಮಾನ್ಯ ರೀತಿಯ ಸರಳ ಸೋಪಾನಗಳನ್ನೂ ಕೆತ್ತಲಾಗಿದೆ. ಹಲವಾರು ಮಂಟಪಗಳ ಭಿತ್ತಿಗಳಲ್ಲಿ ಹಾಗೂ ಪ್ರಾಕಾರದ ಹೊರ ಮತ್ತು ಒಳಗೋಡೆಗಳಲ್ಲಿ ರಾಮಾಯಣ ಮತ್ತು ಮಹಾಭಾರತದಿಂದ ಆಯ್ದ ಕೆಲವು ಸನ್ನಿವೇಶಗಳನ್ನು ಉಬ್ಬು ಚಿತ್ರಪಟಿಕೆಗಳಲ್ಲಿ ಖಂಡರಿಸಿರುವುದು. ಅಲ್ಲದೆ ಹಾಡು, ನೃತ್ಯ, ವಾದ್ಯ, ಯುದ್ಧದ ಸನ್ನಿವೇಶಗಳನ್ನು, ಪ್ರಾಣಿಪಕ್ಷಿಗಳ ಚಿತ್ರಗಳನ್ನು ಕೆತ್ತಿರುವುದು ಈ ಶೈಲಿಯ ಇನ್ನೊಂದು ವಿಶೇಷವಾಗಿದೆ. ಪ್ರಾಕಾರಕ್ಕೆ ಅಂಟಿಕೊಂಡ ತೆರೆದ ಮಂಟಪಗಳು ಸುತ್ತುವರೆದಿದ್ದು, ಇದಕ್ಕೆ 'ಮಾಲಿಕರಚನೆ' ಎಂದು ಕರೆಯುತ್ತಾರೆ. ಈ ಭಾಗಗಳು ವಿಜಯನಗರದ ಎಲ್ಲಾ ದೇವಾಲಯಗಳಲ್ಲೂ ಕಂಡುಬರುತ್ತವೆ.

ಈ ಶೈಲಿಯ ದೇವಾಲಯಗಳಲ್ಲಿ ಮುಖ್ಯ ಗರ್ಭಗುಡಿಯ ಜೊತೆಗೆ ಪ್ರಾಕಾರದೊಳಗೆ ಹಲವು ಮಂಟಪಗಳಿವೆ. ದೇವಾಲಯಗಳಲ್ಲಿ ನಡೆಯುವ ಪೂಜಾಪದ್ಧತಿಗಳಲ್ಲಾದ ಬದಲಾವಣೆಯು ಅನೇಕ ಮಂಟಪಗಳ ಹುಟ್ಟಿಗೆ ಕಾರಣವಾಯಿತು. ಈ ಮಂಟಪಗಳೆಂದರೆ ಉಯ್ಯಾಲೆ ಮಂಟಪ, ಕಲ್ಯಾಣಮಂಟಪ, ಉತ್ಸವ ಮಂಟಪ, ಭಜನಾಮಂಟಪ, ಮಹಾಮಂಟಪ, ಸಭಾಮಂಟಪ. ದ್ವಾರಗೋಪುರ ಮತ್ತು ಮಂಟಪಗಳ ಪ್ರಸ್ತರ ಹಾಗೂ ಗರ್ಭಗುಡಿಯ ಶಿಖರಗಳ ಮೇಲೆ ಇಟ್ಟಿಗೆ ಗಾರೆಯಿಂದ ನಿರ್ಮಿಸಿರುವ ಯುದ್ಧ ಚಿತ್ರಗಳು ಅಲ್ಲದೆ ಮೂರ್ತಿಶಿಲ್ಪ, ಗೂಡು, ಅರ್ಧಕಂಬ, ಹಲವು ಧರ್ಮಕ್ಕೆ ಸಂಬಂಧಪಟ್ಟ ಗಾರೆಶಿಲ್ಪಗಳನ್ನು ತಿಳಿಗಚ್ಚಿನಲ್ಲಿ ನಿರ್ಮಿಸಿರುವುದು ಮುಖ್ಯವಾಗಿದೆ. ಗರ್ಭಗುಡಿಯ ಅಭಿಷೇಕದ ನೀರು ಹೊರಗೆ ಹೋಗಲು ವಿವಿಧ ಪ್ರಣಾಳಗಳನ್ನು ಅಳವಡಿಸಲಾಗಿದೆ. ಅವುಗಳಲ್ಲಿ ಸಿಂಹವಕ್ರಪ್ರಣಾಳ, ಗಜವಕ್ರಪ್ರಣಾಳ, ಗೋಮುಖ ವಕ್ರಪ್ರಣಾಳ ಹಾಗೂ ಸಾಧಾರೀತಿಯ ಪ್ರಣಾಳಗಳು ಕಂಡುಬರುತ್ತವೆ. ಈ ಶೈಲಿಯಲ್ಲಿ ಎತ್ತರವಾದ ಗರುಡಸ್ತಂಭ, ದೀಪಸ್ತಂಭ, ಧ್ವಜಸ್ತಂಭಗಳನ್ನು ನೆಟ್ಟಿರುವುದು ವಿಶೇಷವಾಗಿದೆ. ಈ ಕಾಲದಲ್ಲಿ ಬಲಿಪೀಠವು ಒಂದು ಅವಶ್ಯಕ ಭಾಗವಾಗಿ ರೂಪುಗೊಂಡಿತು.

ವೈಷ್ಣವ ದೇವಾಲಯಗಳು - ನಿರ್ಮಾಣ

೧. ನಾಗೇಂದ್ರಶಯನ (ರಂಗನಾಥ) ದೇವಾಲಯ, ನಾಗೇನಹಳ್ಳಿ

ಅನಂತಶಯನಗುಡಿಯಿಂದ ಉತ್ತರಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿ ನಾಗೇನಹಳ್ಳಿ ಗ್ರಾಮವಿದೆ. ವಿಜಯನಗರದ ತುಳುವ ನರಸನಾಯಕನ ಎರಡನೆಯ ಹೆಂಡತಿ ಹಾಗೂ ಕೃಷ್ಣದೇವರಾಯನ ತಾಯಿಯಾದ ನಾಗಲಾದೇವಿಯ ಹೆಸರಿನಲ್ಲಿ ಕೃಷ್ಣದೇವರಾಯನ ರಾಜಪುರೋಹಿತನಾದ ರಂಗನಾಥ ದೀಕ್ಷಿತನು ಕ್ರಿ.ಶ. ೧೫೧೭ರಲ್ಲಿ ಅರಸನಿಂದ ಭೂಮಿಯನ್ನು ಪಡೆದು ನಾಗಲಾದೇವಿ ಅಮ್ಮನವರಿಗೆ ಧರ್ಮವಾಗಲೆಂದು ಪಟ್ಟಣವನ್ನು ಕಟ್ಟಿಸಿ ಈ ಗ್ರಾಮಕ್ಕೆ ನಾಗಲಾಪುರ ಎಂದು ಹೆಸರಿಸಿದನು. ಇಲ್ಲಿ ನಾಗೇಂದ್ರಶಯನ ಎಂಬ ವಿಷ್ಣು ಮತ್ತು ನಾಗೇಶ್ವರ ಎಂಬ ಶಿವ ದೇವಾಲಯಗಳನ್ನು ನಿರ್ಮಿಸಿ ನಾಗಸಮುದ್ರವೆಂಬ ಕೆರೆಯನ್ನು ಕಟ್ಟಿಸಿದುದು ಶಾಸನಗಳಿಂದ ತಿಳಿದುಬರುತ್ತದೆ.[೪]

ವಿಜಯನಗರ ಕಾಲದಲ್ಲಿ ಮುಖ್ಯ ಪಟ್ಟಣವಾಗಿದ್ದ ನಾಗಲಾಪುರವನ್ನು ಇಂದು ನಾಗೇನಹಳ್ಳಿಯೆಂದು ಕರೆಯಲಾಗುತ್ತಿದೆ. ಈ ಗ್ರಾಮದ ಮಧ್ಯದಲ್ಲಿರುವ ದೇವಾಲಯವನ್ನು (ಛಾಯಾಚಿತ್ರ ೧) ಪುರೋಹಿತ ರಂಗನಾಥ ದೀಕ್ಷಿತನು ನಿರ್ಮಿಸಿ, ನಾಗಲಾದೇವಿಪುರ ಎಂಬ ಹೆಸರನ್ನು ಕೊಟ್ಟು, ಬ್ರಾಹ್ಮಣರಿಗೆ ದತ್ತಿ ನೀಡುತ್ತಾನೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಸುಕನಾಸಿ, ಅಂತರಾಳ, ಪ್ರದಕ್ಷಿಣ ಪಥ, ಮುಖಮಂಟಪ, ಪೂರ್ವಕ್ಕೆ ಮುಖ್ಯದ್ವಾರಗೋಪುರವಿದೆ (ನಕ್ಷೆ ೧). ಚೌಕಕಾರದ ಗರ್ಭಗೃಹದ ಮಧ್ಯೆ ಎತ್ತರದ ಪೀಠದಲ್ಲಿ ಏಳೆಡೆ ಸರ್ಪದ ಮೇಲೆ ಶಯನ ರೀತಿಯಲ್ಲಿರುವ ವಿಷ್ಣುಮೂರ್ತಿಯನ್ನು ಕಪ್ಪುಶಿಲೆಯಿಂದ ನಿರ್ಮಿಸಲಾಗಿದೆ (ಛಾಯಾಚಿತ್ರ ೨) ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿದ್ದು, ಹಿಂದಿನ ಎರಡು ಕೈಗಳಲ್ಲಿ ಶಂಖಚಕ್ರಗಳನ್ನು ಹಿಡಿದಿದ್ದರೆ ಮುಂದಿನ ಬಲಗೈಯನ್ನು ತಲೆಗೆ ಆಸರೆಯಾಗಿ ಇಟ್ಟುಕೊಂಡು ಎಡಗೈಯನ್ನು ತನ್ನ ಮೊಣಕಾಲಮೇಲೆ ಇಟ್ಟುಕೊಂಡಿದೆ. ತಲೆಯಲ್ಲಿ ಕಿರೀಟವಿದ್ದು ಕತ್ತಿನಲ್ಲಿ ವಜ್ರಾಭರಣ ಹಾಗೂ ಕೊರಳಲ್ಲಿ ವೈಜಯಂತಿಮಾಲೆ ಕಂಡುಬರುತ್ತದೆ. ನಾಲ್ಕು ಕೈಗಳಲ್ಲಿ ತೋಳ್ಬಂದಿ ಕೈ-ಕಡಗಗಳನ್ನು ಧರಿಸಿದ್ದು ಕಾಲಲ್ಲಿಯೂ ಕಡಗಗಳು ಇವೆ. ಮೂರ್ತಿಯ ನಾಭಿಯಿಂದ ಮೇಲಕ್ಕೆ ಹೊರಟು ಅರಳಿದ ಕಮಲದಲ್ಲಿ ಸೃಷ್ಟಿಕರ್ತ ಬ್ರಹ್ಮನು ಕುಳಿತಿರುವನು. ಕಾಲಬಳಿಯಲ್ಲಿ ಶ್ರೀದೇವಿ-ಭೂದೇವಿಯರು ತಮ್ಮ ಕೈಗಳಿಂದ ಕಾಲನ್ನು ಒತ್ತುತ್ತಿರುವುದು ಕಂಡುಬರುತ್ತದೆ. ಮೂರ್ತಿಯು ಕಣ್ಣನ್ನು ಮುಚ್ಚಿದ್ದು ಮಂದಸ್ಮಿತವಾಗಿದೆ. ಒಟ್ಟಾರೆಯಾಗಿ ಮೂರ್ತಿಯು ತನ್ನ ಹಿಂದಿನ ಸೌಂದರ್ಯವನ್ನು ಉಳಿಸಿಕೊಂಡು ಬಂದು ಇಂದಿಗೂ ಪೂಜೆಗೊಳ್ಳುತ್ತಿದೆ. ಗರ್ಭಗೃಹದ ಛತ್ತಿನಲ್ಲಿ ಚೌಕಕಾರವಾಗಿ ಸುತ್ತುವರಿದ ಮಾಡು ಇದೆ. ಗರ್ಭಗೃಹ ಮತ್ತು ಅಂತರಾಳಗಳ ಬಾಗಿಲುಗಳು ಚಿಕ್ಕವಾಗಿದ್ದು ಅವುಗಳನ್ನು ಇಂದು ಸಿಮೆಂಟಿನಿಂದ ಮಾರ್ಪಾಟುಗೊಳಿಸಿರುವರು. ಸುಕನಾಸಿಯು ಚಚ್ಚೌಕ ರೀತಿಯಲ್ಲಿದ್ದು, ಮೇಲಿನ ಛಾವಣಿಯಲ್ಲಿ ಇತ್ತೀಚೆಗೆ ನಿರ್ಮಿಸಲಾದ ಮೂರು ಬೆಳಕಿನ ಕಿಂಡಿಗಳಿವೆ. ಈ ದ್ವಾರದ ಮುಂದೆ ಅಂತರಾಳವಿದ್ದು ಅಕ್ಕಪಕ್ಕ ಗರ್ಭಗುಡಿಯ ಸುತ್ತ ಸಾಂಧಾರ ರೀತಿಯ ಪ್ರದಕ್ಷಿಣೆಪಥವನ್ನು ನಿರ್ಮಿಸಲಾಗಿದೆ. ಅಂತರಾಳದ ಬಾಗಿಲುವಾಡಗಳು

ಸರಳ ರೀತಿಯಲ್ಲಿದ್ದು ಹೂಗಳಿಂದ ಸಿಂಗರಿಸಿರುವರು. ಪ್ರದಕ್ಷಿಣೆಪಥದಲ್ಲಿ ೪ - ೮ - ೪ - ೮ -೪ ರ ಹಾಗೇ ಚೌಕಕಾರದ ಸ್ತಂಭಗಳಿದ್ದು, ಇವುಗಳನ್ನು ಗೋಡೆಯಲ್ಲಿ ಅಳವಡಿಸಿರುವರು.

ಅಂತರಾಳದ ಮುಂದೆ ರಂಗಮಂಟಪವಿದ್ದು, ಇದಕ್ಕೆ ದ್ವಾರಬಾಗಿಲು ಇರುವುದಿಲ್ಲ. ರಂಗಮಂಟಪವು ಮಧ್ಯಭಾಗದಲ್ಲಿ ನಾಲ್ಕುಸ್ತಂಭಗಳಿಂದ ಕೂಡಿದೆ. ಈ ಸ್ತಂಭಗಳು ಚಿತ್ರಕಾಂಡ ಸ್ತಂಭಗಳಾಗಿದ್ದು ಒಂದೊಂದನ್ನು ಮೂರುಭಾಗವಾಗಿ ಕೆತ್ತಿರುವರು. ಮಧ್ಯದಲ್ಲಿ ೧೬ - ೮ - ೧೬ ಮುಖದ ಪಟ್ಟಿಗಳಂತಹ ಭಾಗ ಮಧ್ಯಪಟ್ಟಿಯನ್ನು ಹೊಂದಿದೆ. ಈ ಸ್ತಂಭಗಳು ಚತುರಸ್ರದ ಸ್ತಂಭಗಳಾಗಿದ್ದು ಮೇಲೆ ವಿವಿಧ ರೀತಿಯ ಅಲಂಕರಣವನ್ನು ಕಾಣಬಹುದು. ಈ ಸ್ತಂಭಗಳ ಮೇಲಿನ ಪುಷ್ಪಬೋಧಿಗೆಯು ಮೊಗ್ಗಿನ ಆಕಾರದಲ್ಲಿ ಕೆಳಮುಖವಾಗಿ ಬಾಗಿದ್ದುದು ಕಂಡುಬರುತ್ತದೆ. ಈ ನಾಲ್ಕು ಸ್ತಂಭಗಳಲ್ಲಿ ಉಬ್ಬುಶಿಲ್ಪಗಳನ್ನು ಕೆಳಗಿನಂತೆ ಕಾಣಬಹುದು (ಛಾಯಾಚಿತ್ರ ೩) :

ಉತ್ತರ ಪಶ್ಚಿಮಸ್ತಂಭ	ಕೆಳಭಾಗ	ಮಧ್ಯಭಾಗ	ಮೇಲಿನಭಾಗ
ಪೂರ್ವ	ಯಾಳಿ	ಬೆಣ್ಣೆಕೃಷ್ಣ	ಹನುಮಂತನು ತನ್ನೆರಡು ಕೈಗಳಲ್ಲಿ ಲಿಂಗಗಳನ್ನು ಹಿಡಿದಿರುವುದು.
ಪಶ್ಚಿಮ	ಬೇಟೆಗಾರನ ಚಿತ್ರ	ಗರುಡ	ಸುಖಾಸನಾ ವಿಷ್ಣು
ಉತ್ತರ	ಚೌರಿಧಾರಿ ಸ್ತ್ರೀ	ಕುಳಿತ ಮನುಷ್ಯ	ಹಂಸವು ಹಾವನ್ನು ಹಿಡಿದಿರುವುದು.
ದಕ್ಷಿಣ	ಗಣೇಶ	ರೇಖಾಚಿತ್ರ	ಚಂದ್ರಶೇಖರ
ಉತ್ತರ - ಪೂರ್ವಸ್ತಂಭ			
ಪೂರ್ವ	ಸಮಭಂಗ ವಿಷ್ಣು	ಲಕ್ಷ್ಮಿ	ಜೋಡಿ ಹಂಸಗಳು
ಪಶ್ಚಿಮ	ಯಾಳಿ	ವಾದ್ಯಗಾರ	ಕುಬ್ಜ
ಉತ್ತರ	ಗಧ್ನಧಾರಿ ವ್ಯಕ್ತಿ	ವಾದ್ಯಗಾರ	ಅಂಜಲಿ ಮುದ್ರೆಯಲ್ಲಿರುವ ಮನುಷ್ಯ
ದಕ್ಷಿಣ	ದ್ವಾರಪಾಲ	ಬೆಣ್ಣೆಕೃಷ್ಣ	ಕಾಳಿಂಗಮರ್ದನ ಕೃಷ್ಣ
ದಕ್ಷಿಣ - ಪಶ್ಚಿಮಸ್ತಂಭ			
ಪೂರ್ವ	ಸಂಗೀತದ ವಾದ್ಯ ಹಿಡಿದಿರುವ ಮನುಷ್ಯ	ಗಧ್ನಧಾರಿ ವ್ಯಕ್ತಿ	ಮನುಷ್ಯ
ಪಶ್ಚಿಮ	ಸ್ತ್ರೀ	ಜೋಡಿವ್ಯಕ್ತಿಗಳು	ಕಾಳಿಂಗಮರ್ದನ ಕೃಷ್ಣ
ಉತ್ತರ	ಕೋಲು ಹಿಡಿದಿರುವ ವ್ಯಕ್ತಿ	ಬೇಡರ ಕಣ್ಣಪ್ಪ	ಕಮಲದ ಹೂ
ದಕ್ಷಿಣ	ಯಾಳಿ	ಕೃಷ್ಣ	ಹಂಸ
ದಕ್ಷಿಣ - ಪೂರ್ವಸ್ತಂಭ			
ಪೂರ್ವ	ಹನುಮಾನ್	ಯಕ್ಷ	ಗಣೇಶ
ಪಶ್ಚಿಮ	ಮನುಷ್ಯ	ಕುಳಿತಭಂಗಿಯ ಮನುಷ್ಯ	ವಿಷ್ಣು
ಉತ್ತರ	ವೈಷ್ಣವ ದ್ವಾರಪಾಲಕ	ಕುಬ್ಜ	ನಾಟ್ಯಕೃಷ್ಣ
ದಕ್ಷಿಣ	ಸೂರ್ಯ	ಕೊಳಲು ಊದುವ ಮನುಷ್ಯ	ವಿಷ್ಣು

ನವರಂಗದ ಮಧ್ಯದ ಮೇಲ್ಭಾವಣಿಯಲ್ಲಿ ಚೌಕಕಾರದಲ್ಲಿ ಅರಳಿದ ಕಮಲದ ದಳಗಳಿವೆ. ಪಶ್ಚಿಮದ ತೊಲೆಯಲ್ಲಿ ಶಂಖ, ನಾಮ ಹಾಗೂ ಚಕ್ರಗಳನ್ನು ಕಡೆದಿರುವರು. ನವರಂಗದ ಮುಖ್ಯದ್ವಾರದಿಂದ ಹೊರನಡೆದರೆ ಮುಖಮಂಟಪವಿದೆ. ಇದರಲ್ಲಿ ಹನ್ನೆರೆಡು ಕಂಬಗಳಿದ್ದು ಈ ಕಂಬಗಳು ಸರಳವಾಗಿವೆ. ತೆರೆದ ಮುಖಮಂಟಪದ ಬಲಗಡೆ ಶಾಸನವನ್ನು ಕೆತ್ತಲಾಗಿದ್ದು, ಈ ಮಂಟಪದ ಮೇಲೆ ಇಟ್ಟಿಗೆ ಗಾರೆಯಿಂದ ಕೂಡಿದ ಕೂಟಗಳಿವೆ. ಅವುಗಳನ್ನು ಇಂದು ನವೀಕರಿಸಲಾಗಿದೆ. ಈ ಮಂಟಪಕ್ಕೆ ಸರಳ ರೀತಿಯ ಮಂಜೂರವನ್ನು ಜೋಡಿಸಿರುವುದು ಕಂಡುಬರುತ್ತದೆ.

ರಂಗಮಂಟಪದ ಉತ್ತರ ಮತ್ತು ದಕ್ಷಿಣಕ್ಕೆ ದ್ವಾರಬಾಗಿಲುಗಳಿದ್ದು, ಎರಡು ಕಂಬಗಳಿಂದ ಕೂಡಿದ ಮಂಟಪವನ್ನು ಹೊಂದಿವೆ. ಈ ಕಂಬಗಳಲ್ಲಿ ಹಲವು ಶಿಲ್ಪಗಳನ್ನು ಕೆತ್ತಿರುವರು. ಅವುಗಳಲ್ಲಿ ಮನುಷ್ಯ, ಲಕ್ಷ್ಮೀದೇವಿ, ವಿಷ್ಣು, ಗರುಡ, ನಾಟ್ಯಗಾರ, ಹೂವು, ದ್ವಾರಪಾಲಕರು, ಕೃಷ್ಣನವಿಗ್ರಹ, ಸ್ತ್ರೀ, ಶಂಖ, ಚಕ್ರ, ಹಂಸಗಳು, ಯಾಳಿಗಳು, ಪ್ರಾಣಿಗಳು, ಯಕ್ಷ, ನಾಟ್ಯಗಾರ್ತಿ, ಮಂಗ, ಆಕಳು ಹುತ್ತದ ಮೇಲಿಂದ ಲಿಂಗಕ್ಕೆ ಹಾಲೆರೆಯುವ ಶಿಲ್ಪ, ನಾಟ್ಯಕೃಷ್ಣ, ವಾದ್ಯಗಾರ, ಕೋಲುಹಿಡಿದಿರುವ ವ್ಯಕ್ತಿ, ಛತ್ರಿ ಹಿಡಿದಿರುವ ವ್ಯಕ್ತಿ, ಲಿಂಗ ಇತರೆ ಉಬ್ಬುಶಿಲ್ಪಗಳಿವೆ.


ಗರ್ಭಗೃಹದ ಅಧಿಷ್ಠಾನವು ಸಮತಲ ರೀತಿಯಲ್ಲಿದ್ದು, ಭಿತ್ತಿಯು ಸರಳವಾಗಿದೆ. ಗರ್ಭಗುಡಿಯ ಮೇಲಿನ ಶಿಖರವನ್ನು ಇಟ್ಟಿಗೆ ಮತ್ತು ಗಾರೆಗಚ್ಚಿನಿಂದ ನಿರ್ಮಿಸಿ, ಇದರಲ್ಲಿ ಅರ್ಧಕಂಭ, ದೇವಕೋಷ್ಠ, ಪ್ರಭಾವಳಿಯನ್ನು ಸ್ತೂಪದಲ್ಲಿ ನಿರ್ಮಿಸಿರುವರು. ಪೂರ್ವದ ದ್ವಾರಗೋಪುರವು ದೊಡ್ಡದಾದ ಪೌಳಿಯನ್ನು ನಿರ್ಮಿಸಿದ್ದು, ಈ ಗೋಡೆಯಲ್ಲಿ ಗಜ, ಸರ್ಪ, ಮೀನು, ಹೂಗಳ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ದಕ್ಷಿಣ - ಪೂರ್ವದ ಮೂಲೆಯಲ್ಲಿ ೩ x ೪ ರ ಹಾಗೇ ಕಂಬಗಳ ಮಂಟಪವಿದ್ದು ಇದನ್ನು ತದನಂತರ ನಿರ್ಮಿಸಿರುವುದು ಅಲ್ಲಿನ ಮಂಟಪದ ಶೈಲಿಯಿಂದ ತಿಳಿಯುತ್ತದೆ. ಪೂರ್ವದ ದ್ವಾರಗೋಪುರವನ್ನು ಪ್ರಸ್ತರದವರೆಗೆ ಕಲ್ಲಿನಿಂದ ನಿರ್ಮಿಸಿ ಅಲ್ಲಿಂದ ಇಟ್ಟಿಗೆ ಮತ್ತು ಗಾರೆಯಿಂದ ಮೂರು ತಲಗಳನ್ನು ರಚಿಸಿರುವರು (ಛಾಯಾಚಿತ್ರ ೪). ಈ ಗೋಪುರದಲ್ಲಿ ಕುಡ್ಯಸ್ತಂಭ, ಪಂಜರ, ಕೋಷ್ಠ, ಸ್ತ್ರೀಯರು ಹಲವು ಮೂರ್ತಿಗಳಿದ್ದು, ಶಾಲಾ ಶಿಖರವನ್ನು ನಿರ್ಮಿಸಿ ಇವುಗಳಿಗೆ ಗಾರೆಯನ್ನು ಲೇಪಿಸಿರುವರು. ಇವು ಇಂದು ಅಲ್ಪಸ್ವಲ್ಪ ಉಳಿದುಕೊಂಡು ಬಂದಿವೆ. ಗೋಪುರದ ಮುಂದೆ ನಾಲ್ಕುಕಂಬಗಳ ಎತ್ತರದ ವೇದಿಕೆಯ ಮೇಲೆ ಮಂಟಪವಿದ್ದು, ಇದು ಪ್ರತೋಲಿ ರಚನೆಯ ಮಾದರಿಯಲ್ಲಿದೆ. ಇವುಗಳಲ್ಲಿರುವ ಬೋದಿಗೆಗಳು ಸರಳವಾಗಿವೆ. ಮೇಲೆ ಚಜ್ಜೆಯನ್ನು ಹಾಕಲಾಗಿ, (ಇಂದು ಇದರ ಮೇಲೆ ಗಿಡ, ಬಳ್ಳಿಗಳು ಬೆಳೆದುಕೊಂಡಿವೆ) ದ್ವಾರಗೋಪುರದ ಕೊನೆಯಲ್ಲಿ ಶಾಲಾಶಿಖರವಿದೆ. ಈ ಶಿಖರದ ಪಾರ್ಶ್ವದಲ್ಲಿ ಕೀರ್ತಿಮುಖದಿಂದ ಕೂಡಿರುವ ಪಾರ್ಶ್ವನಾಸಿಯು ಅಲಂಕೃತಗೊಂಡಿರುವುದು ಕಂಡುಬರುತ್ತದೆ. ದೇವಾಲಯದ ಆವರಣದಲ್ಲಿ ಬಾವಿ ಇದ್ದು, ದೇವಾಲಯವು ಅಷ್ಟೇನೂ ಅಲಂಕೃತವಾಗಿ ಕಂಡುಬರುವುದಿಲ್ಲ. ಈ ದೇವಾಲಯವು ಆಕ್ರಮಣಕ್ಕೆ ಒಳಗಾಗದೆ ಇಂದಿಗೂ ಗರ್ಭಗುಡಿಯಲ್ಲಿರುವ ಮೂರ್ತಿಗೆ ಸರಳ ರೀತಿಯಲ್ಲಿ ಪೂಜೆ ನಡೆಯುವುದು ವಿಶೇಷವಾಗಿದೆ. ಈ ದೇವಾಲಯ ಮಾತ್ರವಲ್ಲದೆ ಮೂಲ ಮೂರ್ತಿಯೂ ಸುವ್ಯವಸ್ಥಿತವಾಗಿ ಇಂದು ಉಳಿದುಕೊಂಡು ಬಂದಿದೆ.



ಭಾ ಚಿ ೧. ನಾಗೇಂದ್ರಶಯನ ದೇವಾಲಯದ ಸಮಗ್ರ ನೋಟ, ನಾಗೇನಹಳ್ಳಿ



ಭಾ ಚಿ ೨. ನಾಗೇಂದ್ರಶಯನ ಮೂರ್ತಿ, ನಾಗೇನಹಳ್ಳಿ



ನಕ್ಷೆ-೧ ರಂಗನಾಥ ದೇವಾಲಯದ ತಲನಕ್ಷೆ





ಛಾ ಚಿ ೩. ರಂಗಮಂಟಪ ಸ್ತಂಭ, ನಾಗೇನಹಳ್ಳಿ



ಛಾ ಚಿ ೪. ನಾಗೇಂದ್ರಶಯನ ದ್ವಾರಗೋಪುರ [redacted], ನಾಗೇನಹಳ್ಳಿ

೨. ಅನಂತಪದ್ಮನಾಭ ದೇವಾಲಯ - ಅನಂತಶಯನಗುಡಿ

ಈ ದೇವಾಲಯವನ್ನು ಕ್ರಿ.ಶ. ೧೦.೫.೧೫೨೪ರ ಗುರುವಾರದಂದು ಕೃಷ್ಣದೇವರಾಯನು ಸಾಲೆತಿರುಮಲ ಮಹಾರಾಯ ಪಟ್ಟಣದಲ್ಲಿ ನಿರ್ಮಿಸಿ, ದೇವತಾಕಾರ್ಯ ಮತ್ತು ದೇವಾಲಯ ನಿರ್ವಹಣೆಗೆ ೧೦,೦೦೦ ವರಾಹ ವರಮಾನದ ಭೂಮಿಯನ್ನು ದಾನ ನೀಡಿದನು.[೬೮] ಈ ಪಟ್ಟಣವನ್ನು ತಿರುಮಲರಾಯ ಹುಟ್ಟಿದ ನಂತರ ಎಂದರೆ ೧೫೧೮ರ ನಂತರಕಟ್ಟಲು ಅಪ್ಪಣೆಕೊಟ್ಟು, ಅದೇ ವೇಳೆಗೆ ಅನಂತಶಯನ ದೇವಾಲಯವನ್ನು ಕಟ್ಟಲು ಪ್ರಾರಂಭಿಸಿದನು.[೬೯] ಈ ದೇವಾಲಯದ ಕಟ್ಟಡ ಕೆಲಸ ಮುಗಿದಿದ್ದು ೧೫೨೪ರಲ್ಲಿ[೭೦] ನಂತರವೂ ಈ ದೇವಾಲಯಕ್ಕೆ ಅನೇಕ ದಾನದತ್ತಿಗಳನ್ನು ಬಿಟ್ಟ ಯುವರಾಜ ತಿರುಮಲರಾಯನ ಹೆಸರು ಶಿಲಾಶಾಸನಗಳಲ್ಲಿ ಕ್ರಿ.ಶ. ೧೫೨೫ರ ವರೆಗೆ ಮಾತ್ರ ಕೇಳಿಬರುವುದರಿಂದ[೭೧] ಆ ನಂತರ ಯುವರಾಜನು ಹತ್ಯೆಗೀಡಾಗಿರಬಹುದು. ಮುಂದೆ ಬಂದ ಅರಸರಾದ ಅಚ್ಯುತರಾಯ, ಸದಾಶಿವರಾಯರು ಈ ದೇವರಿಗೆ ಭೂದಾನ ದತ್ತಿಯನ್ನು ಬಿಟ್ಟಿರುವುದು ಶಾಸನಗಳಲ್ಲಿ ಕಂಡುಬರುತ್ತದೆ.[೭೨]

ವಿಷ್ಣುವಿನ ಅವತಾರಗಳಲ್ಲಿ ಒಂದಾದ ಅನಂತಶಯನ ಮೂರ್ತಿಯಿರುವ ಈ ದೇವಾಲಯದ ವಾಸ್ತು ವಿನ್ಯಾಸ ವಿಶೇಷತೆಯನ್ನು ಪಡೆದಿದೆ. ಈ ದೇವಸ್ಥಾನಕ್ಕೆ ಅನಂತಪದ್ಮನಾಭ, ಅನಂತದೇವ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ದೇವಾಲಯವು ದೀರ್ಘಚತುರಸ್ರಾಕಾರದ ಗರ್ಭಗೃಹ ಅದೇ ವಿನ್ಯಾಸದ ಅರ್ಧಮಂಟಪ ಮತ್ತು ಮಹಾಮಂಟಪಗಳನ್ನೊಳಗೊಂಡಿದೆ (ನಕ್ಷೆ ೨). ಇದು ವಾಹನಮಂಟಪ, ಗರುಡಸ್ತಂಭ, ಅಮ್ಮನವರ ಗುಡಿ, ಕಲ್ಯಾಣಮಂಟಪ, ಮೂರುದ್ವಾರಗೋಪುರಗಳನ್ನು ಹೊಂದಿದ ಬೃಹತ್ತಾದ ದೇವಾಲಯವಾಗಿದೆ. ಸುತ್ತಲೂ ಪೌಳಿಯನ್ನು ಹೊಂದಿದ್ದು, ಅದಕ್ಕೆ ಹೊಂದಿಕೊಂಡಂತೆ ತೆರೆದ ಮಂಟಪಗಳ ಮಾಲಿಕರಚನೆಯು ಇದೆ.

ಗರ್ಭಗೃಹವು ಸರಳಾಲಂಕರಣದ ಮೂರು ಅಚ್ಚುಪಟ್ಟಿಯುಳ್ಳ ಹಾಗೂ ಅದರ ಮೇಲೆ ತ್ರಿಪಟ್ಟ ಕುಮುದವಿರುವ ಅಧಿಷ್ಠಾನವನ್ನು ಹೊಂದಿದೆ. ಭಿತ್ತಿಯು ಸಾದಾ ರೀತಿಯಲ್ಲಿ ನಿರ್ಮಿತವಾಗಿದ್ದು, ಇದರ ಮೇಲೆ ವಿಮಾನವು ೨೪ ಮೀಟರುಗಳಷ್ಟು ಎತ್ತರವಾಗಿದೆ (ಛಾಯಾಚಿತ್ರ ೫). ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾದ ಮೇಲ್ಕಟ್ಟಡದಲ್ಲಿ ದೀರ್ಘವರ್ತುಲಾಕಾರದ ಗ್ರೀವ ಮತ್ತು ಶಿಖರಗಳು, ಬದಿಗಳಲ್ಲಿ ಶಾಲಾಪಂಜರಗಳು ಮುಂಚಾಚಿಕೊಂಡಿವೆ. ಮೇಲಿನ ಸ್ತೂಪಿ ಇಂದು ಉಳಿದಿರುವುದಿಲ್ಲ. ಈ ಮೇಲ್ಭಾವಣಿಯು ಯುರೋಪಿಯನ್ ಗಾಥಿಕ್ ಚರ್ಚನಂತೆ ಗುಮ್ಮಟಾಕಾರ (Voulted dome)ವಾಗಿದೆ. ಶಿಖರದ ಹೊರಮೈಯಲ್ಲಿ ಗಾರೆಗಚ್ಚಿನ ಅಲಂಕರಣೆ ಹೆಚ್ಚಾಗಿ ಕಂಡುಬರುತ್ತದೆ. ಗುಮ್ಮಟದ ನಿರ್ಮಾಣ ಅಂದಿನ ವಾಸ್ತುಶಿಲ್ಪಿಗಳ ಕಲಾಕೌಶಲ್ಯಕ್ಕೆ ಉತ್ತಮ ನಿದರ್ಶನವಾಗಿದೆ.

ಗರ್ಭಗೃಹಕ್ಕೆ ಮೂರು ಬಾಗಿಲುಗಳಿವೆ. ಶಯನಾವಸ್ಥೆಯಲ್ಲಿರುವ ಮೂಲಮೂರ್ತಿಯ ಭವ್ಯವಿಗ್ರಹವನ್ನು ಕೇವಲ ಒಂದು ಬಾಗಿಲಿನಿಂದ ಸಮಗ್ರವಾಗಿ ನೋಡಲಾಗದೆಂಬ ಕಾರಣದಿಂದ ಈ ಏರ್ಪಾಡನ್ನು ಮಾಡಿರಬೇಕು. ಗರ್ಭಗುಡಿಯ ಹಿಂದಿನ ಭಾಗದ ಗೋಡೆಯನ್ನು ಹೊಂದಿಕೊಂಡ ದೊಡ್ಡದಾದ ವೇದಿಕೆಯಿದ್ದು, ಅದರ ಮೇಲೆ ಮೂಲವಿಗ್ರಹಕ್ಕೆ ಹೊಂದಿಕೊಳ್ಳುವ ಪೀಠವನ್ನು ಎರಡು ಅಡಿ ಎತ್ತರದಲ್ಲಿ ನಿರ್ಮಿಸಲಾಗಿದೆ. ಇದು ಆಯತಾಕಾರದ

ಪೀಠವಾಗಿದ್ದು ಪಕ್ಕದ ಎರಡು ಕಡೆಯಲ್ಲಿ ಆಳ್ವಾರರಿಗೆಂದು ನಿರ್ಮಿಸಿದ ಹನ್ನೆರೆಡು ಉಪಪೀಠಗಳಿವೆ. ಆದರೆ ಇಂದು ಒಂದು ಮೂರ್ತಿಯೂ ಉಳಿದುಬಂದಿಲ್ಲ. ಮೂಲ ಅನಂತದೇವರ ಮೂರ್ತಿಯು ಇಂದು ಪ್ರಾಚ್ಯ ವಸ್ತುಸಂಗ್ರಹಾಲಯದಲ್ಲಿದೆ. ಗರ್ಭಗೃಹದ ಒಳಗೋಡೆಯಲ್ಲಿ ಆರುಸ್ತಂಭಗಳನ್ನು ಗೋಡೆಗೆ ಸೇರಿಸಿ ಕಟ್ಟಲಾಗಿದ್ದು, ಇವುಗಳು ಅರ್ಧಕಂಬಗಳ ರೀತಿಯಲ್ಲಿ ಕಂಡುಬರುತ್ತವೆ.

ಗರ್ಭಗೃಹವು ಆಯತಾಕಾರದಲ್ಲಿದ್ದು, ಮುಂದೆ ಅಂತರಾಳವು ಅದೇ ಮಾದರಿಯಲ್ಲಿದೆ. ಅಂತರಾಳಕ್ಕೆ ಹೋಗಲು ಮೂರು ದ್ವಾರಬಾಗಿಲುಗಳಿವೆ. ಮಧ್ಯದ ಎರಡು ಗೋಡೆಗಳಿಗೆ ಮೂಲಮೂರ್ತಿಯ ಅಭಿಮುಖವಾಗಿ ಮಕರ ತೋರಣಗಳನ್ನು ಗಚ್ಚುಗಾರೆಯಿಂದ ನಿರ್ಮಿಸಿದ್ದಾರೆ. ಮಧ್ಯದಲ್ಲಿ ಕೀರ್ತಿಮುಖಗಳಿದ್ದು ಇಂದು ಹಾಳಾಗಿವೆ. ಅಂತರಾಳದ ಬಲಗೋಡೆಗೆ ಹೊಂದಿಕೊಂಡಂತೆ ಮೂರು ಚಿಕ್ಕ ಕಂಬಗಳ ಅಟ್ಟಣಿಗೆಯಿದೆ. ಅಂತರಾಳದಿಂದ ಮಹಾಮಂಟಪಕ್ಕೆ ಹೋಗಲು ಮೂರು ದ್ವಾರಬಾಗಿಲುಗಳಿದ್ದು, ಮಧ್ಯದ್ವಾರ ಬದಿಯ ಹೊರಭಾಗದಲ್ಲಿ ಅರ್ಧಕಂಬಗಳಿಂದ ಕೂಡಿದ ಮಕರ ತೋರಣವಿದೆ. ಇದರ ಮಧ್ಯದಲ್ಲಿ ಕೀರ್ತಿಮುಖವನ್ನು ಅಳವಡಿಸಿ ಇವುಗಳನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದ್ದು ಇಂದು ಅಳಿಸಿಹೋಗಿವೆ.

ಮಹಾಮಂಟಪವು ನಲವತ್ತೆಂಟು ಸ್ತಂಭಗಳಿಂದ ಕೂಡಿದ ವಿಸ್ತಾರವಾದ ಕಟ್ಟಡ. ಈ ಮಂಟಪದ ಬಲಭಾಗದ ಗೋಡೆಯಲ್ಲಿ ಶಾಸನಗಳಿವೆ. ಮಂಟಪದಲ್ಲಿ ೪೮ ಸ್ತಂಭಗಳು ಮಧ್ಯದಲ್ಲಿದ್ದರೆ, ಇನ್ನೂ ಎರಡು ಸ್ತಂಭಗಳು ಮುಂದಿನ ಗೋಡೆಗೆ ಅಂಟಿಕೊಂಡಿವೆ. ಇದರ ಮುಂಭಾಗದ ಸ್ತಂಭಗಳಲ್ಲಿ ಮಧ್ಯದ ಎರಡು ಸ್ತಂಭಗಳು ಸಾಶ್ರಾಯ ಸ್ತಂಭಗಳಾಗಿದ್ದು ಅಶ್ವಗಳು ತಮ್ಮೆರೆಡು ಕಾಲುಗಳನ್ನು ಮೇಲೆತ್ತಿ ನೆಗೆದಿವೆ. ಇವು ಸುಮಾರು ಹನ್ನೆರಡು ಅಡಿ ಎತ್ತರವಾಗಿವೆ. ಇವುಗಳ ಪಕ್ಕದ ಆರು ಸ್ತಂಭಗಳು ಸಂಯುಕ್ತ ಸ್ತಂಭಗಳಾಗಿವೆ. ಉಳಿದ ಸ್ತಂಭಗಳೆಲ್ಲಾ ಚಿತ್ರಕಾಂಡ ಸ್ತಂಭಗಳಾಗಿದ್ದು, ಇಲ್ಲಿ ಸಮತಲ ವಿತಾನವನ್ನು ಕಾಣುತ್ತೇವೆ. ಛಾವಣಿಯು ಏರುತಗ್ಗುಗಳಿಲ್ಲದೆ ಒಂದೇ ಮಟ್ಟದಲ್ಲಿರುವುದು. ಇದರ ಮೇಲೆ ಪದ್ಮದಳಗಳನ್ನು ಚಿತ್ರಿಸಲಾಗಿದೆ. ಈ ಎಲ್ಲ ಸ್ತಂಭಗಳಲ್ಲಿ ಪೀಠವಿದ್ದು ಮೇಲಿನ ಭಾಗವನ್ನು ಮೂರು ಭಾಗಗಳಾಗಿ ನಿರ್ಮಿಸಿ ಮಧ್ಯದಲ್ಲಿ ೧೬ x ೮ ರೀತಿಯ ಚತುರಸ್ರ ಚೌರಸಫಲಕ ವಿರುವುದು. ಈ ಚತುರಸ್ರ ಮತ್ತು ಮಧ್ಯಪಟ್ಟಿಗಳು ಒಂದಾದ ಮೇಲೊಂದರಂತೆ ಮೇಲಿನವರೆಗೂ ಮುಂದುವರಿದಿದ್ದು ಅಂತ್ಯದಲ್ಲಿ ಪುಷ್ಪಬೋದಿಗೆಗಳಿರುವುವು (ಛಾಯಾಚಿತ್ರ ೬). ಇವುಗಳಲ್ಲಿ ಚಿಕ್ಕದಾದ ಬಾಳೆಯ ಮೊಗ್ಗಿನ ಆಕಾರವು ಕೆಳಮುಖವಾಗಿ ಬಾಗಿದೆ. ಈ ಎಲ್ಲಾ ಸ್ತಂಭಗಳ ಮೂರುಭಾಗದ ಮಧ್ಯಪಟ್ಟಿಗಳಲ್ಲಿ ಉಬ್ಬುಶಿಲ್ಪಗಳಿವೆ. ಅವುಗಳಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಶಿಲ್ಪಗಳು, ವಿಷ್ಣುವಿನ ಅವತಾರಕ್ಕೆ ಸಂಬಂಧಿತ ಶಿಲ್ಪಗಳು, ಯಾಳಿ, ವೇಷಗಾರರು, ವಾದ್ಯಗಾರರು, ನಾಟ್ಯಗಾರ್ತಿಯರು, ಕೋಲಾಟದವರು, ಶಂಖ, ಚಕ್ರ, ನಾಮ, ಸ್ತ್ರೀ (ಛಾಯಾಚಿತ್ರ ೭), ಬೇಟೆಗಾರ್ತಿ, ಲಜ್ಜಾಗೌರಿ, ರಾಜಮನೆತನದವರು, ಆಂಜನೇಯ, ಹಂಸ, ಮಂಗ, ಕುಬ್ಜ, ನಾಗಬಂಧ, ಗಜ, ವೈಷ್ಣವರು, ಸನ್ಯಾಸಿ, ಸಾಧು, ಹೂದಳಗಳು, ಆಳ್ವಾರರು, ಸುಕಭಾಷಿಣಿ, ದ್ವಾರಪಾಲಕ ಇತ್ಯಾದಿ ಉಬ್ಬುಶಿಲ್ಪಗಳಿವೆ. ಅಂತರಾಳದ ಮುಂಭಾಗದ ನಾಲ್ಕು ಸ್ತಂಭಗಳಲ್ಲಿ ಕುಂಭಲತೆಯನ್ನು ಅಳವಡಿಸಿ ಮೇಲೆ ಯಾಳಿಗಳನ್ನು ಕೆತ್ತಲಾಗಿದೆ. ಅದರ ಮೇಲೆ ನಾಸಿಯ ಚಿತ್ರಣವಿದೆ.

ಈ ಮಂಟಪವು ಎತ್ತರದ ಅಧಿಷ್ಠಾನವನ್ನು ಹೊಂದಿದ್ದು, ಇದರಲ್ಲಿ ಕೆಳಗಿನಿಂದ ಪಾದುಕ, ಉಪಾನ, ಕಂಪ, ಮಹಾಪದ್ಮ, ತ್ರಿಪಟ್ಟಕುಮುದ, ಗಳ, ಕಪೋತ ಭಾಗಗಳನ್ನು ಹೊಂದಿದೆ. ಈ ಕಪೋತದಲ್ಲಿ ನಾಸಿಗಳನ್ನು ಅಳವಡಿಸಿರುವುದರಿಂದ ಇವುಗಳನ್ನು ಕಪೋತನಾಸಿ ಎಂದು ಕರೆಯಬಹುದು. ಮಂಟಪ ಮುಂಭಾಗದ ಅಧಿಷ್ಠಾನದಲ್ಲಿ ತ್ರಿಪಟ್ಟಕುಮುದದ ಬದಲು ಬಳೆಯಕಾರದ ಅಲಂಕರಣವನ್ನು ಕೆತ್ತಲಾಗಿದೆ. ಮಹಾಮಂಟಪದ ದ್ವಾರದ ಮೆಟ್ಟಿಲುಗಳ ಬದಿಯಲ್ಲಿ ಗಜಗಳನ್ನು ನಿಲ್ಲಿಸಿದ್ದಾರೆ. ಇದರ ಮೇಲೆ ಮುಂದಿನ ಭಾಗದಲ್ಲಿ ಎಸ್ (S) ಆಕಾರದ ಮಂಜೂರವನ್ನು ಜೋಡಿಸಿ, ಕೆಳಭಾಗದಲ್ಲಿ ಹಿಡಿಕೆಯ ಅಲಂಕಾರವನ್ನು ಮಾಡಲಾಗಿದೆ. ಈ ಮಂಟಪದ ಮುಂದೆ ನಾಲ್ಕು ಸ್ತಂಭಗಳ ಮಂಟಪವಿದ್ದು ಮೇಲೆ ಇಟ್ಟಿಗೆ ಮತ್ತು ಗಾರೆಗಚ್ಚಿನಿಂದ ಗೋಪುರವನ್ನು ನಿರ್ಮಿಸಲಾಗಿದೆ. ಇದರಲ್ಲಿ ಕೋಷ್ಠ, ಅರ್ಧಕಂಬ, ಸ್ತೂಪಗಳನ್ನು ಅಳವಡಿಸಲಾಗಿದೆ. ಮಂಟಪದ ಕೆಳಗೆ ಮಧ್ಯದಲ್ಲಿ ನಾಲ್ಕು ಅಡಿ ಎತ್ತರದ ಆಂಜನೇಯ ಮೂರ್ತಿಯನ್ನು ಇಡಲಾಗಿದ್ದು ವಿಶೇಷವಾಗಿದೆ. ಇದರಲ್ಲಿ ಹೆಚ್ಚಾಗಿ ಗರುಡಮೂರ್ತಿಯಿದ್ದರೆ ಇಲ್ಲಿ ಆಂಜನೇಯ ಮೂರ್ತಿ ಇದೆ. ಇದರ ಮುಂದೆ ಗರುಡಸ್ತಂಭವಿದ್ದು, ಇದು ಚಿತ್ರಕಾಂಡ ಸ್ತಂಭವಾಗಿದೆ. ಇದರಲ್ಲಿ ಹನುಮಂತ, ಗರುಡ, ಕೃಷ್ಣ, ಶಂಖ, ಚಕ್ರ, ಹಂಸ, ರಾಯ, ವಿಠಲ ಇತ್ಯಾದಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ಸ್ತಂಭದ ಮುಂದಿನ ಪಾದಭಾಗದಲ್ಲಿ ಗರ್ಭಗೃಹಕ್ಕೆದುರಾಗಿ ಕೈ ಮುಗಿದು ನಿಂತಿರುವ ಹನುಮಂತನ ಶಿಲ್ಪವಿದೆ. ಮಹಾಮಂಟಪದ ಪ್ರಸ್ತರದ ಮೇಲೆ ಕೋಷ್ಠಕಗಳನ್ನು ಅಳವಡಿಸಿದ್ದು ಕಂಡುಬರುತ್ತದೆ. ಅವುಗಳ ಪಕ್ಕದಲ್ಲಿ ಗಾರೆಶಿಲ್ಪಗಳಿದ್ದು, ಇಂದು ಸಂಪೂರ್ಣವಾಗಿ ಹಾಳಾಗಿವೆ. ಮುಂದೆ ಚಜ್ಜೆಯನ್ನು ಎಸ್ (S) ಆಕಾರದಲ್ಲಿ ನಿರ್ಮಿಸಿ ಮಳೆಯ ನೀರು ಒಳಗೆಬಾರದ ಹಾಗೇ ಈ ಭಾಗವನ್ನು ಸೇರಿಸಲಾಗಿದೆ.

ಲಕ್ಷ್ಮೀದೇವಾಲಯ

ಲಕ್ಷ್ಮೀದೇವಿಯ ದೇವಾಲಯವು ಅನಂತಶಯನ ದೇವಾಲಯದಷ್ಟು ದೊಡ್ಡದಲ್ಲದಿದ್ದರೂ ಚಿಕ್ಕದಾಗಿ ಸುಂದರವಾಗಿದೆ (ಛಾಯಾಚಿತ್ರ ೮). ಈ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ, ತೆರೆದ ಮಂಟಪವನ್ನು ಹೊಂದಿದ್ದು, ಇಂದು ಹಾಳಾಗಿದೆ. ಗರ್ಭಗುಡಿಯಲ್ಲಿನ ಪೀಠವು ಅಂತರಾಳದಲ್ಲಿದ್ದು, ಲಕ್ಷ್ಮೀಮೂರ್ತಿಯನ್ನು ಕಮಲಾಪುರದ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಇದು ಏಕಮಾತ್ರ ಗರ್ಭಗುಡಿಯಾಗಿದ್ದು ಪೀಠವು ಮೂರು ಅಡಿ ಎತ್ತರವಾಗಿದೆ. ಲಕ್ಷ್ಮೀದೇವಿಯ ಮೂರ್ತಿಯು ಸುಂದರವಾಗಿ ಕಂಗೊಳಿಸುತ್ತದೆ. ಆಸನಾರೂಢಳಾಗಿ ಕುಳಿತ ದೇವಿಯ ಕೈಗಳಲ್ಲಿ ಹಿಂದಿನ ಬಲಗೈಯಲ್ಲಿ ಪದ್ಮ, ಮುಂಬಲಗೈಲಿ ಅಭಯ, ಎಡಹಿಂಗೈಲಿ ಪದ್ಮ, ಎಡಮುಂಗೈಲಿ ವರದಾ ಮುದ್ರೆಯಲ್ಲಿದೆ. ಎದೆಗೆ ಕುಚಬಂಧವಿದ್ದು, ತಲೆಯ ಮೇಲೆ ಕಿರೀಟವಿದೆ. ಲಕ್ಷ್ಮೀದೇವಿಯು ಪದ್ಮಾಸನದಲ್ಲಿ ಮಂಡಿಸಿದ್ದಾಳೆ. ತಲೆಯ ಹಿಂಭಾಗದಲ್ಲಿ ಸುಂದರ ಕೇಶಶೈಲಿಯು ಕಂಡುಬರುತ್ತದೆ. ಗರ್ಭಗೃಹವು ಚೌಕಕಾರದಲ್ಲಿದ್ದು, ಅಂತರಾಳವು ಅದನ್ನು ಅನುಸರಿಸಿದೆ. ಅಂತರಾಳದ ಬಾಗಿಲುವಾಡದ ಕೆಳಭಾಗದಲ್ಲಿ ದ್ವಾರಪಾಲಕರು ಗದೆಯನ್ನು ಹಿಡಿದು ನಿಂತಿರುವರು. ದ್ವಾರ ಹೊಸ್ತಿಲ ಉದುಂಬರ ಭಾಗದ ಪದ್ಮಾಲಂಕಾರ ಹಾಗೂ ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವನ್ನು ಕೆತ್ತಲಾಗಿದೆ. ಉತ್ತರಾಂಗ ಭಾಗದಲ್ಲಿ ಶಾಲಾಕೂಟಗಳಿಂದ ಕೂಡಿದ ಅಲಂಕಾರವಿದ್ದು, ದ್ವಾರಶಾಖಾದಲ್ಲಿ ಉಭಯ ಪಾರ್ಶ್ವಗಳಲ್ಲಿ ಅಲಂಕರಿಸಲ್ಪಟ್ಟ ಲಂಬಪಟ್ಟಿಕೆ ಹೂವಿನ ಆಲಂಕರಣವನ್ನು ಹೊಂದಿದೆ.

ನವರಂಗದಲ್ಲಿ ಹತ್ತು ಸ್ತಂಭಗಳಿದ್ದು ಮಧ್ಯದ ನಾಲ್ಕು ಸ್ತಂಭಗಳು ಚೌಕದ ರೀತಿ ಯಲ್ಲಿದ್ದು, ಇವುಗಳ ಮಧ್ಯದಲ್ಲಿ ಮೇಲೆ ಪದ್ಮಲಂಕಾರವಿರುವುದು. ಈ ಸ್ತಂಭಗಳು ಚಿತ್ರಕಾಂಡ ಸ್ತಂಭಗಳಾಗಿದ್ದು, ಇವುಗಳ ಮೇಲೆ ಪುಷ್ಪಬೋದಿಗೆ ಇರುವುದು. ಬೋದಿಗೆಯು ನಾಲ್ಕು ಕಡೆಗಳಲ್ಲಿ ಹೊರಭಾಗಿದ್ದು ಮೇಲ್ಭಾಗವು ಕಮಲದಳಗಳಂತಿದ್ದು, ತುದಿಯಲ್ಲಿ ಕಮಲದ ಮೊಗ್ಗಿನ ಆಲಂಕರಣವಿರುವುದು. ಈ ಸ್ತಂಭಗಳಲ್ಲಿ ಗರುಡ, ಕೃಷ್ಣ, ವಾದ್ಯಗಾರ, ಲಕ್ಷ್ಮೀ, ಸ್ತ್ರೀ, ಮಹಿಷಿ, ಕಳಿಂಗಮರ್ದನ ಕೃಷ್ಣ, ವಿಷ್ಣು, ಹನುಮಂತ, ಆಳ್ವಾರರು, ನಾಟ್ಯಕೃಷ್ಣ, ಶಂಖ, ಕುಬ್ಜ, ಪದ್ಮದಳ, ಕಂಬಳಿ ಹೊದ್ದು ಕೈಯಲ್ಲಿ ಕೋಲುಹಿಡಿದಿರುವ ವ್ಯಕ್ತಿ, ಗಣೇಶ, ಗರುಡ, ರಾಮ, ಚಕ್ರ, ಕೂರ್ಮಾವತಾರ, ಹಂಸ, ಕುಳಿತಿರುವ ಸ್ತ್ರೀ ಇತ್ಯಾದಿ ಉಬ್ಬುಶಿಲ್ಪಗಳಿವೆ. ಇದರ ಮುಂದಿನ ತೆರೆದ ಮಂಟಪವು ಬಿದ್ದು ಹೋಗಿದೆ. ಇಂದು ಅಧಿಷ್ಠಾನ ಮಾತ್ರ ಕಂಡುಬರುತ್ತಿದ್ದು ಮುಂದೆ ಏಕಮಾತ್ರ ಸ್ತಂಭವೊಂದು ನಿಂತುಕೊಂಡಿದೆ. ಉಳಿದ ಸ್ತಂಭಗಳು ಹಾಳಾಗಿರುವುದು ಅಲ್ಲಿನ ಅವಶೇಷಗಳಿಂದ ತಿಳಿದುಬರುತ್ತದೆ. ಈ ಸ್ತಂಭಗಳು ಕೂಡಾ ಚಿತ್ರಕಾಂಡ ಸ್ತಂಭಗಳಾಗಿವೆ.

ಗರ್ಭಗೃಹದ ಅಧಿಷ್ಠಾನವು ಉಪಾನ, ಪದ್ಮ, ತ್ರಿಪಟ್ಟಕುಮುದ, ಗಳ, ಕಪೋತ ಭಾಗಗಳನ್ನು ಹೊಂದಿದ್ದು, ಇದರಲ್ಲಿ ನಾಸಿಗಳನ್ನು ಅಲಂಕರಿಸಲಾಗಿದೆ. ಈ ದೇವಾಲಯಕ್ಕೆ ಪ್ರಣಾಳವನ್ನು ಬಲಗಡೆಗೆ ಅಳವಡಿಸಿದ್ದು ವಿಶೇಷವಾಗಿದೆ. ಮೇಲಿನ ಭಿತ್ತಿಯ ಮೂರು ಭಾಗದಲ್ಲಿ ಒಂದೊಂದು ಕೋಷ್ಠಕಗಳನ್ನು ರಚಿಸಿ, ಇದರ ಮೇಲೆ ಲಕ್ಷ್ಮಿಯು ಕುಳಿತಿರುವಳು. ಹಿಂದೆ ಪ್ರಭಾವಳಿಯಿದ್ದು ಮಧ್ಯದಲ್ಲಿ ಕೀರ್ತಿಮುಖ ಕಂಡುಬರುತ್ತದೆ. ಪ್ರಸ್ತರದಲ್ಲಿ ಕಪೋತವನ್ನು ಅಳವಡಿಸಿ ಅದರ ಮೇಲೆ ಶಿಖರವನ್ನು ಇಟ್ಟಿಗೆ ಮತ್ತು ಗಚ್ಚುಗಾರೆಯಿಂದ ನಿರ್ಮಿಸಲಾಗಿದೆ. ಇದರಲ್ಲಿ ಕುಡ್ಯಸ್ತಂಭ, ಗಾರೆಯಶಿಲ್ಪ, ಶಾಲಾ, ಕಪೋತ, ಕರ್ಣಕೂಟ, ನಾಸಿಗಳಿಂದ ಅಲಂಕರಿಸಿ ಕೊನೆಯಲ್ಲಿ ಸ್ತೂಪವನ್ನು ನಿರ್ಮಿಸಿರುವರು. ಇದರ ಸುತ್ತಲೂ ನಾಲ್ಕು ದಿಕ್ಕಿಗೆ ಮಹಾನಾಸಿಗಳನ್ನು ಅಲಂಕರಿಸಿರುವರು. ಇಂದು ಈ ಶಿಖರವು ತನ್ನ ಮೂಲ ಸೌಂದರ್ಯವನ್ನು ಕಳೆದುಕೊಂಡು ಭಗ್ನವಾಗಿದೆ. ನವರಂಗದ ಮೇಲೆ ಸುತ್ತಲೂ ಪುಟ್ಟಸ್ತಂಭಗಳ ಚೌಕಟ್ಟಿನಿಂದಾಗಿ ಚೌಕೋನದ ಕೂಟವಿದ್ದು, ಅದರಲ್ಲಿ ಯಾವುದೇ ಗಾರೆಶಿಲ್ಪಗಳಿರದೆ ಖಾಲಿಯಾಗಿ ಕಂಡುಬರುತ್ತದೆ. ನವರಂಗದ ಅಧಿಷ್ಠಾನದಲ್ಲಿ ತ್ರಿಪಟ್ಟಕುಮುದದ ಬದಲು ಬಳೆಯಾಕಾರದ ಅಲಂಕಾರವನ್ನು ಮಾಡಲಾಗಿದೆ. ನವರಂಗದ ಮೇಲೆ ಮುಂದಿನ ಭಾಗದಲ್ಲಿ ಮಂಜೂರನ್ನು ಅಳವಡಿಸಿರುವರು.

ಕಲ್ಯಾಣಮಂಟಪ

ಮುಖ್ಯ ದೇವಾಲಯದ ಬಲಭಾಗದಲ್ಲಿ ದೇವರ ಕಲ್ಯಾಣೋತ್ಸವಗಳಿಗಾಗಿ ನಿರ್ಮಿಸಿದ ಕಲ್ಯಾಣ ಮಂಟಪವು ಎತ್ತರವಾದ ಅಧಿಷ್ಠಾನವನ್ನು ಹೊಂದಿದ್ದು, ಇದರ ಮೇಲೆ ಹನ್ನೆರಡು ಚಿತ್ರಕಾಂಡಸ್ತಂಭಗಳನ್ನು ನಿಲ್ಲಿಸಲಾಗಿದೆ. ಇವುಗಳ ಮಧ್ಯದಲ್ಲಿ ಅಧಿಷ್ಠಾನ ರೀತಿಯ ವೇದಿಕೆಯಿದ್ದು, ಅದರ ನಾಲ್ಕು ಮೂಲೆಯಲ್ಲಿ ನಾಲ್ಕು ಸ್ತಂಭಗಳನ್ನು ನಿಲ್ಲಿಸಿರುವರು. ಇವೆಲ್ಲ ಪುಷ್ಪಬೋದಿಗೆಗಳನ್ನು ಹೊಂದಿದ್ದು ಕಮಲದ ಮೊಗ್ಗನ್ನು ಕೆಳಮುಖವಾಗಿ ಚಿತ್ರಿಸಿರುವರು. ಈ ಎಲ್ಲಾ ಸ್ತಂಭಗಳಲ್ಲಿ ರಾಮಾಯಣ, ವಿಷ್ಣುವಿನ ಅವತಾರದ ಶಿಲ್ಪಗಳು, ವೇಷಗಾರರು, ಸ್ತ್ರೀ, ವಾದ್ಯಗಾರರು, ಶಂಖ, ಚಕ್ರ, ನಾಮಾ, ಹಂಸ, ಹೂದಳ ಇತ್ಯಾದಿ ಶಿಲ್ಪಗಳನ್ನು ಕಂಡರಿಸಲಾಗಿದೆ. ವಿತಾನದಲ್ಲಿ ಹೂದಳವನ್ನು

ಕೆತ್ತಲಾಗಿದ್ದು, ಪ್ರಸ್ತರವನ್ನು ಚಪ್ಪಟೆಯಾಗಿ ನಿರ್ಮಿಸಿ ಸುತ್ತಲೂ ಸಾಧಾರಣ ರೀತಿಯ ಮಂಜೂರನ್ನು ಇಡಲಾಗಿದೆ. ಈ ಮಂಟಪದ ಅಧಿಷ್ಠಾನವನ್ನು ಉಪಾನ, ಪದ್ಮ, ಬಳೆಯಕಾರದ ಕುಮುದ, ಗಳ, ಕಪೋತಗಳಿಂದ ಸಿಂಗರಿಸಲಾಗಿದೆ (ಛಾಯಾಚಿತ್ರ ೯). ದ್ವಾರದ ಮೆಟ್ಟಿಲುಗಳು ಉತ್ತರದಿಕ್ಕಿಗಿದ್ದು ಪಕ್ಕದಲ್ಲಿ ಗಜಗಳನ್ನು ನಿಲ್ಲಿಸಿರುವರು.

ದ್ವಾರಗೋಪುರಗಳು


ಮಹಾದ್ವಾರವು ಮುಖ್ಯ ದೇವಾಲಯದ ಎದುರಾಗಿರುವುದು (ಛಾಯಾಚಿತ್ರ ೧೦). ಈ ದ್ವಾರದ ಒಳಮುಖದಲ್ಲಿ ಪ್ರವೇಶದ ಆರಂಭದಲ್ಲೇ ಅಕ್ಕಪಕ್ಕ ವೇದಿಕೆಯಿದ್ದು ಅದರ ಮೇಲೆ ಸ್ತಂಭಗಳಿರುವವು. ಇದು ಪ್ರತೋಲಿ ರಚನೆಯ ರೂಪದಲ್ಲಿರುವುದು. ಪ್ರತೋಲಿಯಲ್ಲಿ ದ್ವಾರದ ಸ್ತಂಭದ ಮೇಲೆ ವಲ್ಲಿ ಮಂಡಲದಿಂದ ಕೂಡಿದ ದ್ವಾರ ಸ್ತ್ರೀಯರ ಉಬ್ಬುಶಿಲ್ಪಗಳು ನಿಂತಭಂಗಿಯಲ್ಲಿರುವುವು. ಇವುಗಳು ಈ ಕಾಲದ ಎಲ್ಲಾ ದೇವಾಲಯಗಳಲ್ಲಿರುವ ಅಲಂಕರಣವಾಗಿದೆ. ಮುಖ್ಯ ದ್ವಾರಬಾಗಿಲನ್ನು ಅಧಿಷ್ಠಾನ, ಭಿತ್ತಿ, ಪ್ರಸ್ತರದಿಂದ ಅಳವಡಿಸಲಾಗಿದ್ದು, ಇಂದು ಗೋಪುರವು ಕಂಡುಬರುವುದಿಲ್ಲ. ಅಧಿಷ್ಠಾನ ಭಾಗದಲ್ಲಿ ಉಪಾನ, ಕಂಪ, ಪದ್ಮ, ಗಳ, ಕುಮುದ, ಬಳೆಯಕಾರದ ಕುಮುದ, ಕುಡ್ಯಸ್ತಂಭ, ಕಪೋತ, ತ್ರಿಪಟ್ಟಕುಮುದಗಳನ್ನು ಹೊಂದಿದ್ದು, ಕುಂಭಪಂಜರ, ಕುಡ್ಯಸ್ತಂಭ, ಶಾಲಾ ನಂತರ ಮೇಲ್ಭಾಗದಲ್ಲಿ ಕಪೋತವನ್ನು ಜೋಡಿಸಿರುವುದು ಕಂಡುಬರುತ್ತದೆ.

ಈ ದೇವಾಲಯಕ್ಕೆ ಪಶ್ಚಿಮ ಮತ್ತು ಪೂರ್ವ ದ್ವಾರಬಾಗಿಲುಗಳಿದ್ದು, ಪೂರ್ವದ ದ್ವಾರಗೋಪುರವು ಇಂದು ಸಂಪೂರ್ಣವಾಗಿ ಬಿದ್ದುಹೋಗಿದೆ. ಪಶ್ಚಿಮದ ದ್ವಾರಗೋಪುರವು ಅಲ್ಪಸ್ವಲ್ಪ ಉಳಿದಿದ್ದು, ಇವುಗಳನ್ನು ಪ್ರಸ್ತರದವರೆಗೆ ಕಲ್ಲಿನಿಂದ ನಿರ್ಮಿಸಿ ಮೇಲೆ ಇಟ್ಟಿಗೆ ಗಾರೆಗಳಿಂದ ಕಟ್ಟಲಾಗಿದೆ. ಇವುಗಳಲ್ಲಿ ಶಿಲ್ಪಗಳನ್ನು ಗಾರೆಯಿಂದ ಮಾಡಲಾಗಿದ್ದು, ಗೋಪುರಗಳು ಮೂರು ತಲಗಳನ್ನು ಹೊಂದಿವೆ. ಅವು ಹಂತ ಹಂತವಾಗಿ ಕಿರಿದಾಗುತ್ತಾ ಹೋಗುವಂತೆ ರಚಿತವಾಗಿವೆ. ಈ ಗೋಪುರದ ಅಂತ್ಯದಲ್ಲಿ ಶಾಲಾಶಿಖರವಿದ್ದು ಇಂದು ಹಾಳಾಗಿದೆ.

ದೇವಾಲಯದ ಸುತ್ತಲೂ ದೊಡ್ಡದಾದ ಪ್ರಾಕಾರ ಗೋಡೆಯಿದ್ದು, ಒಳಮುಖದಲ್ಲಿ ಅದಕ್ಕೆ ಸೇರಿದಂತೆ ಸುತ್ತ ವೇದಿಕೆಯಿರುವ ಸಾಲು ಸ್ತಂಭಗಳಿರುವವು. ಇದರ ಮೇಲೆ ಛಾದ್ಯವಿದ್ದು, ಇವು ಮಾಲಿಕಾ ರಚನೆಯ ರೂಪದಲ್ಲಿವೆ. ಇವುಗಳಲ್ಲಿ ಕೆಲವು ಇಂದು ಉಳಿದುಕೊಂಡಿದ್ದರೆ, ಕೆಲವು ಬಿದ್ದು ಹಾಳಾಗಿವೆ.

ಪೂಜೆ ಮತ್ತು ಉತ್ಸವಗಳು

ಈ ದೇವಾಲಯದಲ್ಲಿ ವಿವಿಧ ಪ್ರಕಾರ ಪೂಜೆ ಹಾಗೂ ಉತ್ಸವಗಳು ನಡೆಯುತ್ತಿದ್ದುದು ಅಲ್ಲಿರುವ ಶಾಸನದಿಂದ ತಿಳಿದುಬರುತ್ತದೆ. ನಿತ್ಯಪೂಜೆಯಲ್ಲಿ ಧೂಪದೀಪ, ಸುಧಾಹಾರ, ನಾನಾಪೂಜೆ ನೈವೇದ್ಯ, ನೃತ್ಯ ನಿತ್ಯಮಹಾವಾದ್ಯ, ಛತ್ರಚಾಮರ ವೈಭವ, ನೈಮಿತ್ತಿಕ ಪೂಜೆಗಳು ಹಾಗೂ ವಿಶೇಷವಾಗಿ ಪ್ರತಿಸಂವತ್ಸರದಲ್ಲಿ ರಥೋತ್ಸವವು ನಡೆಯುತ್ತಿತ್ತು. ದೇವಾಲಯದ ಆಡಳಿತವನ್ನು ನೋಡಿಕೊಳ್ಳಲು ಸ್ಥಾನಿಕರಿದ್ದು, ಅವರ ಮೂಲಕ ಆಡಳಿತ ನಡೆಯುತ್ತಿದ್ದಿತು. ದೇವಾಲಯದಲ್ಲಿ ಶಾಸನಗಳನ್ನು ಬರೆಯಲು ಶಾಸನ ಮುರುಕವಿ, ಸಭಾಪತಿ, ಲೇಖಕ ಇತ್ಯಾದಿ ಸೇವಕರು ಇರುತ್ತಿದ್ದರು. ಅನಂತಶಯನ ದೇವಾಲಯದಲ್ಲಿ ಮಕರಸಂಕ್ರಾಂತಿಯನ್ನು ಬಹಳ



ನಕ್ಷೆ-೨ ಅನಂತಪದ್ಮನಾಭ ದೇವಾಲಯದ ತಲನಕ್ಷೆ





ಛಾ ಚಿ ೫. ಅನಂತಪದ್ಮನಾಭ ದೇವಾಲಯದ ಸಮಗ್ರ ಚಿತ್ರಣ, ಅನಂತಶಯನಗುಡಿ



ಛಾ ಚಿ ೬. ಮಹಾಮಂಟಪದ ಸ್ತಂಭಗಳು
ಅನಂತಶಯನಗುಡಿ



ಛಾ ಚಿ ೭. ಮಹಾಮಂಟಪದ ಸ್ತಂಭದಲ್ಲಿನ ಸ್ತ್ರೀಶಿಲ್ಪ
ಅನಂತಶಯನಗುಡಿ




ಛಾ ಚಿ ೮. ಅಮ್ಮನವರ ದೇವಾಲಯ, ಅನಂತಶಯನಗುಡಿ



ಛಾ ಚಿ ೯. ಕಲ್ಯಾಣಮಂಟಪ, ಅನಂತಶಯನಗುಡಿ







ಛಾ ಚಿ ೧೦. ಮುಖ್ಯ ದ್ವಾರಗೋಪುರ, ಅನಂತಶಯನಗುಡಿ

ವಿಜೃಂಭಣೆಯಿಂದ ನಡೆಸಲಾಗುತ್ತಿತ್ತು. ಈ ಪೂಜೆಯನ್ನು ನಡೆಸಿಕೊಂಡುಹೋಗಲು ದಾನಿಗಳು ದೇವಾಲಯಕ್ಕೆ ದಾನವನ್ನು ಕೊಟ್ಟಿರುವುದು ಅಲ್ಲಿನ ಶಾಸನದಲ್ಲಿ ಉಲ್ಲೇಖವಾಗಿದೆ.

೩. ಬಾಲಕೃಷ್ಣದೇವಾಲಯ, ಹಂಪಿ

ಹಂಪಿಯ ಮುಖ್ಯದೇವಾಲಯಗಳಲ್ಲಿ ಒಂದಾಗಿರುವ ಈ ದೇವಾಲಯವು ಕೃಷ್ಣಾಪುರದಲ್ಲಿ ನಿರ್ಮಿತವಾಗಿದೆ. ಇದನ್ನು ಕೃಷ್ಣದೇವರಾಯನು ಕ್ರಿ.ಶ. ೧೫೧೩ರಲ್ಲಿ ಒರಿಸ್ಸಾದ ಮೇಲೆ ದಂಡೆತ್ತಿ ಹೋಗಿ ಗಜಪತಿಯನ್ನು ಸೋಲಿಸಿ, ಉದಯಗಿರಿಯಿಂದ ತನ್ನ ವಿಜಯದ ನೆನಪಿಗೆ ಬಾಲಕೃಷ್ಣನ ಪ್ರತಿಮೆಯನ್ನು ತಂದನಲ್ಲದೆ, ಅದನ್ನು ಪ್ರತಿಷ್ಠಾಪಿಸುವುದಕ್ಕಾಗಿ ಕಟ್ಟಿಸಿದ ಬೃಹತ್ ದೇವಾಲಯವಾಗಿದೆ[೫೩] (ಛಾಯಾಚಿತ್ರ ೧೧). ದೇವಾಲಯವು ವಿಶಾಲವಾದ ಪ್ರಾಂಗಣವನ್ನು ಹೊಂದಿದ್ದು ದಕ್ಷಿಣ, ಉತ್ತರ ಮತ್ತು ಪೂರ್ವದಿಕ್ಕಿಗೆ ಗೋಪುರಗಳನ್ನು ಹೊಂದಿದೆ. ಗರ್ಭಗೃಹ, ಸುಕನಾಸಿ, ತೆರೆದಮಂಟಪ, ಪ್ರದಕ್ಷಿಣಾಪಥ, ನವರಂಗ ಮತ್ತು ಮಹಾಮಂಟಪಗಳು ದೇವಾಲಯದ ಪ್ರಮುಖ ಭಾಗಗಳಾಗಿವೆ. ಪ್ರಾಕಾರದಲ್ಲಿ ಪರಿವಾರಾಲಯಗಳು, ಗರುಡಸ್ತಂಭದ ಪೀಠ, ಬಲಿಪೀಠ, ಮಣಿಮಂಟಪ, ಪಾಕಶಾಲೆಗಳಿವೆ (ತಲನಕ್ಷೆ ೩). ಈ ದೇವಾಲಯವು ಎರಡು ಪ್ರಾಕಾರಗಳನ್ನು ಹೊಂದಿದ್ದು, ಮೊದಲನೆಯ ಪ್ರಾಕಾರದ ಗೋಡೆಗೆ ಹೊಂದಿಕೊಂಡ ಮಂಟಪಗಳಿವೆ. ಈ ಪ್ರಾಕಾರಕ್ಕೆ ಮೂರು ದ್ವಾರಗೋಪುಗಳು ಇದ್ದು ಎರಡನೆ ಪ್ರಾಕಾರದೊಳಗೆ ಧಾನ್ಯಸಂಗ್ರಹಣೆಗಾಗಿ ನಿರ್ಮಿಸಿದ ಉಗ್ರಾಣ, ಮಂಟಪ, ನೀರಿನ ತೊಟ್ಟಿಗಳಿವೆ. ಈ ಪ್ರಾಕಾರಕ್ಕೆ ಉತ್ತರ ಮತ್ತು ದಕ್ಷಿಣಕ್ಕೆ ದ್ವಾರಗಳಿದ್ದು ಮುಂದೆ ಪೂರ್ವದಲ್ಲಿ ರಥಬೀದಿ ಇದೆ. ಈ ಬೀದಿಯ ಬದಿಗಳಲ್ಲಿ ಸಾಲುಮಂಟಪಗಳನ್ನು ನಿರ್ಮಿಸಿದ್ದು, ಎಡಭಾಗದಲ್ಲಿ ಪುಷ್ಕರಿಣಿಯು ಕಂಡುಬರುತ್ತದೆ. ಈ ಬೀದಿಯು ಅಂದಿನ ಬೃಹತ್ ಮಾರುಕಟ್ಟೆಯಾಗಿದ್ದಿತೆಂದು ಶಾಸನಗಳಲ್ಲಿ ಹೇಳಲಾಗಿದೆ.

ಕ್ರಿ.ಶ. ೧೫೧೩ರಲ್ಲಿ ಬಾಲಕೃಷ್ಣನ ಪ್ರತಿಮೆಯನ್ನು ಹಂಪಿಗೆ ತಂದಿಟ್ಟು ದೇವಾಲಯ ಕಟ್ಟಲಿಕ್ಕೆ ಪ್ರಾರಂಭಮಾಡಿ ಕ್ರಿ.ಶ. ೧೫೧೯ರ ವೇಳೆಗೆ ಮಂದಿರವು ಮುಗಿದ ನಂತರ ಈ ಪ್ರತಿಮೆಯನ್ನು ಪ್ರತಿಷ್ಠಾಪಿಸಿರ ಬಹುದೆಂದು ವಿದ್ವಾಂಸರ ಅಭಿಪ್ರಾಯ (ಛಾಯಾಚಿತ್ರ ೧೨). ಶಾಸನದ ಪ್ರಕಾರ ಈ ಪ್ರತಿಮೆಯನ್ನು ಸ್ಥಾಪಿಸಿದುದು ಗರ್ಭಗೃಹದಲ್ಲಲ್ಲ, ಮಣಿಮಂಟಪದಲ್ಲಿ. ಆಗಮಗಳ ಪ್ರಕಾರ ಈ ಮಣಿಮಂಟಪ ಗೋಪುರ ಹಾಗೂ ಮಹಾಮಂಟಪಗಳ ಮಧ್ಯೆ ಇರುತ್ತದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ವಿಜಯನಗರ ವಾಸ್ತುಶೈಲಿಯ ಎಲ್ಲಾ ಲಕ್ಷಣಗಳನ್ನು ಒಳಗೊಂಡ ಬೃಹತ್ ರಚನೆಯಾಗಿದೆ. ಇದು ಕೃಷ್ಣದೇವರಾಯನಿಂದ ನಿರ್ಮಾಣಗೊಂಡರೂ ತದನಂತರ ಜೀರ್ಣೋದ್ಧಾರಗೊಂಡಿದೆ.[೫೪] ಈ ದೇವಾಲಯದ ಅಧಿಷ್ಠಾನವು ಐದು ಅಡಿ ಎತ್ತರವಾಗಿದ್ದು, ಅಧಿಷ್ಠಾನದಲ್ಲಿ ಪಾದುಕಾ, ಜಗತಿ ಇದರಲ್ಲಿ ಕಮಲದ ಎಲೆಯಂತಿರುವ ಕಲ್ಲು, ಕುಮುದ, ಗಳ, ಕಪೋತವನ್ನು ಅಳವಡಿಸಿರುವುದು. ಕುಮುದದ ಭಾಗವನ್ನು ಗರ್ಭಗೃಹ ಮತ್ತು ನವರಂಗಕ್ಕೆ ಮಾತ್ರ ಅಳವಡಿಸಲಾಗಿದ್ದು, ಅಂತರಾಳ ಮತ್ತು ಅರ್ಧಮಂಟಪದಲ್ಲಿ ತ್ರಿಪಟ್ಟಕುಮುದವಿದೆ (ನಕ್ಷೆ ೪). ಗಳವು ಬೇರೆ ಬೇರೆ ಭಾಗಗಳಾಗಿ ವಿಂಗಡಿಸುತ್ತದೆ. ಕಪೋತವು ನಾಸಿಯ ಅಲಂಕರಣೆಯನ್ನು ಹೊಂದಿದೆ. ಈ ರೀತಿಯ ಅಧಿಷ್ಠಾನವು ನವರಂಗ, ಮುಖಮಂಟಪ, ಗರ್ಭಗೃಹ, ಅಂತರಾಳಗಳ ಹೊರಭಾಗವು ಒಂದೇ ತೆರನಾಗಿ ಕಂಡುಬರುತ್ತದೆ. ಆದರೆ ಮಹಾಮಂಟಪದಲ್ಲಿ ಕುಮುದವು

ಬಳೆಯಾಕಾರದಲ್ಲಿದ್ದು ಹೆಚ್ಚು ಅಲಂಕರಣೆಯದಾಗಿದೆ. ಇದನ್ನು ನವರಂಗದವರೆಗೆ ಮೂರು ದಿಕ್ಕುಗಳಲ್ಲಿ ಸಮವಾಗಿ ಖಂಡರಿಸಲಾಗಿದೆ.

ಗರ್ಭಗೃಹದ ಹೊರಮ್ಮೆ ಭಿತ್ತಿಯಲ್ಲಿ ಕುಂಭಲತಾ ಮತ್ತು ಕೋಷ್ಠಕಗಳನ್ನು ಕೆತ್ತಲಾಗಿದೆ. ಅಲ್ಲದೆ ಅರ್ಧಕಂಬ ಮತ್ತು ಉಬ್ಬುಶಿಲ್ಪಗಳಿದ್ದು, ಇದರಲ್ಲಿ ವಿಷ್ಣುವಿನ ಅವತಾರಕ್ಕೆ ಸಂಬಂಧಿಸಿದ ಅನೇಕ ಶಿಲ್ಪಗಳಿವೆ. ಪ್ರಾಣಿಪಕ್ಷಿಗಳು, ಗಿಡ, ಬೇಟೆಗಾರ, ಹೂಬಳ್ಳಿ ಮುಂತಾದ ಚಿತ್ರಗಳನ್ನು ಕೊರೆದಿರುವರು. ಕುಂಭಲತಾಗಳು ಹೆಚ್ಚು ಅಲಂಕರಣ ಹೊಂದಿದ್ದು ಲತೆಯು ಹೊರಚಾಚಿದೆ. ಇದು ವಿಜಯನಗರದ ವಿಶೇಷ ಶೈಲಿಗಳಲ್ಲಿ ಒಂದಾಗಿದ್ದು ರಾಮಚಂದ್ರ ದೇವಾಲಯದಲ್ಲಿದ್ದಷ್ಟು ಸೌಂದರ್ಯಯುತವಾಗಿ ಕಂಡುಬರುವುದಿಲ್ಲ. ಕುಂಭದ ಮೇಲೆ ಕಂಭಬಂದಿದ್ದು ಶಾಲಾರೀತಿಯ ಗೋಪುರವಿದೆ. ಭಿತ್ತಿಯಲ್ಲಿರುವ ಕೋಷ್ಠಕಗಳು ಖಾಲಿಯಿದ್ದು ಮೇಲೆ ಶಿಖರದಲ್ಲಿ ಕಪೋತವನ್ನು ಹೊಂದಿದೆ. ಇದರಲ್ಲಿ ನಾಸಿಗಳನ್ನು ಚಿತ್ರಿಸಿ ಇದರ ಮೇಲೆ ಶಾಲಾ ಹಾಗೂ ಮೇಲೆ ಕಳಸಗಳಿವೆ. ಭಿತ್ತಿಯಲ್ಲಿ ಅಧಿಷ್ಠಾನ ಭಾಗಗಳು ಮುಂದುವರಿದಿದ್ದು, ಪದ್ಮ, ಕಂಪ, ತ್ರಿಪಟ್ಟಕುಮುದ, ಬಳೆಯಾಕಾರದ ಕುಮುದ, ಗಳ, ಕಪೋತನಾಸಿ, ರತ್ನಪಟ್ಟಿ, ಗಳ, ಮಹಾಪದ್ಮ ಅಲಂಕರಣೆಗಳಿವೆ. ಪ್ರಸ್ತರದಲ್ಲಿ ಕಪೋತವನ್ನು ಅಳವಡಿಸಿದ್ದು ಅವುಗಳ ಮೇಲೆ ನಾಸಿಗಳಿವೆ. ಅಂತರಾಳದ ಹೊರಭಾಗ ದಕ್ಷಿಣದಲ್ಲಿ ಶಾಸನವಿದೆ.

ಗರ್ಭಗೃಹದ ಮೇಲಿನ ಶಿಖರವು ಮೂರುಭಾಗವಾಗಿದೆ. ಕೆಳಭಾಗದಲ್ಲಿ ಪಂಜರ, ಕೋಷ್ಠಕ, ಅರ್ಧಕಂಭಗಳನ್ನು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದ್ದು, ನಾಲ್ಕು ದಿಕ್ಕಿಗೆ ಕರ್ಣಕೂಟಗಳಿವೆ. ಕೆಳಹಂತದಿಂದ ಮೇಲೆ ಹೋಗುತ್ತ ಶಿಖರವು ಚಿಕ್ಕದಾಗಿ ಸ್ತೂಪದಲ್ಲಿ ಕೊನೆಗೊಳ್ಳುತ್ತದೆ. ಮಧ್ಯದ ಭಾಗದಲ್ಲಿ ನರಸಿಂಹ, ಸ್ತ್ರೀಯರು, ಅರೆಗಂಭಗಳ ಗಾರೆಯಶಿಲ್ಪಗಳಿವೆ. ಮೂರನೆ ಹಂತದಲ್ಲಿ ದುಂಡಾದ ಸ್ತೂಪವಿದ್ದು ಮೂರು ಪಟ್ಟಿಯನ್ನು ಹೊಂದಿದೆ. ಈ ಭಾಗದಲ್ಲಿ ಹೆಚ್ಚು ಅಲಂಕರಣೆ ಕಂಡುಬರುವುದಿಲ್ಲ.

ಈ ದೇವಾಲಯವು ಚೌಕಾಕಾರದ ಗರ್ಭಗುಡಿಯನ್ನು ಹೊಂದಿದ್ದು, ಇದರಲ್ಲಿ ಎರಡೂವರೆ ಅಡಿ ಎತ್ತರದ ಪೀಠವಿದೆ. ಸಾಧಾರಣ ರೀತಿಯ ಚಚ್ಚೌಕ ಗರ್ಭಗುಡಿಯಾಗಿದ್ದು ಮುಂದೆ ಸುಕನಾಸಿಯಿದೆ. ಸುಕನಾಸಿಯ ಬಾಗಿಲುವಾಡದಲ್ಲಿ ಹೂಬಳ್ಳಿಯಿದ್ದು ಗಿಳಿಗಳನ್ನು ಖಂಡರಿಸಲಾಗಿದೆ. ಅದರ ಪಕ್ಕದಲ್ಲಿ ಅರ್ಧಕಂಭಗಳನ್ನು ಅಳವಡಿಸಿರುವರು. ಅಂತರಾಳದ ಬಾಗಿಲು ಚೌಕಟ್ಟಿನಲ್ಲಿ ಕೆಳಗೆ ದ್ವಾರಪಾಲಕರಿದ್ದರೆ, ಅಂತರಾಳದ ಬದಿಯಲ್ಲಿ ಎರಡು ಕಡೆ ದ್ವಾರಬಾಗಿಲುಗಳಿವೆ. ಇವುಗಳ ಮೂಲಕ ಒಳಗಡೆ ಹೋದರೆ ಗರ್ಭಗುಡಿಗೆ ಹೊಂದಿಕೊಂಡಂತೆ ಸುತ್ತು ಗೋಡೆಯಿದ್ದು ಸಾಂಧಾರ ಪ್ರದಕ್ಷಿಣೆಪಥವಾಗಿ ನಿರ್ಮಿತವಾಗಿದೆ. ಇದರಲ್ಲಿ ಗರ್ಭಗುಡಿಯ ಸುತ್ತಲೂ ಹನ್ನೆರಡು ಚಿತ್ರಕಾಂಡ ಸ್ತಂಭಗಳಿದ್ದು ಇವುಗಳನ್ನು ಮೂರುಭಾಗವಾಗಿ ನಿರ್ಮಿಸಲಾಗಿದೆ. ಒಂದೊಂದು ಭಾಗದಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಿರುವರು. ಇವುಗಳ ಮೇಲೆ ಸಾಧಾರಣ ರೀತಿಯ ಬೋಧಿಗೆಗಳಿದ್ದು, ಯಾವುದೇ ರೀತಿಯ ಅಲಂಕರಣೆ ಕಂಡುಬರುವುದಿಲ್ಲ. ಪ್ರದಕ್ಷಿಣೆ ಪಥಕ್ಕೆ ಹೋಗಲು ಮೂರು ಮೆಟ್ಟಿಲುಗಳಿದ್ದು ಪಕ್ಕದಲ್ಲಿ ಆಸರೆಯಾಗಿ ಕಲ್ಲಿನಬಂಡೆಯನ್ನು ನಿಲ್ಲಿಸಲಾಗಿದೆ. ಗರ್ಭಗುಡಿಯ ಹೊರಮ್ಮೆಯಲ್ಲಿ ಅಧಿಷ್ಠಾನದಿಂದ ಭಿತ್ತಿಯವರೆಗೆ ಕಲ್ಲುಪಟ್ಟಿಕೆ, ಉಬ್ಬುಶಿಲ್ಪ, ಕೋಷ್ಠಕಗಳನ್ನು ಅಳವಡಿಸಿ ಮೇಲೆ ಶಾಲಾ ರೀತಿಯಿದ್ದು ಕಳಸಗಳನ್ನು ಕೆತ್ತಲಾಗಿದೆ. ಗರ್ಭಗುಡಿಯ

ಸುತ್ತಲಿರುವ ಗೋಡೆಯಲ್ಲಿ ಅಲಂಕರಣೆಯಿರದೆ, ಸಾದಾರೀತಿಯ ಕಲ್ಲನ್ನು ಜೋಡಿಸಿರುವರು. ಈ ಪ್ರದಕ್ಷಿಣೆಪಥದಲ್ಲಿ ಬೆಳಕು, ಗಾಳಿಗಾಗಿ ಜಾಲಾಂಧ್ರಗಳನ್ನು ಅಳವಡಿಸಿರುವುದಿಲ್ಲ. ಗರ್ಭಗುಡಿಯ ಎಡಭಾಗದಲ್ಲಿ ಸಿಂಹವಕ್ರ ಪ್ರಣಾಳವಿದೆ.

ಅರ್ಧಮಂಟಪದ ಬದಿಗಳಲ್ಲಿ ಭಿತ್ತಿಯು ಹೆಚ್ಚು ಅಲಂಕರಣೆಯನ್ನು ಹೊಂದಿದ್ದು, ಎರಡು ಕೋಷ್ಠಕಗಳಿವೆ (ಛಾಯಾಚಿತ್ರ ೧೩). ಇವುಗಳ ಕೆಳಭಾಗದಲ್ಲಿ ಅಧಿಷ್ಠಾನದ ಭಾಗಗಳಾದ ಪಾದುಕಾ, ಪದ್ಮ, ಕಂಪ, ಬಳೆಯಕಾರದ ಕುಮುದ, ಗಳ, ಕಪೋತಭಾಗಗಳಿದ್ದು, ಮೇಲೆ ಪುಟ್ಟ ಸ್ತಂಭಗಳ ಚೌಕಟ್ಟಿದೆ. ಇದು ಸಣ್ಣ ಗೂಡನ್ನು ಒಳಗೊಂಡಿದ್ದು ಇದರಲ್ಲಿ ದೇವತಾ ವಿಗ್ರಹಗಳಿರುವುದಿಲ್ಲ. ಇದರ ಮೇಲ್ಭಾಗದಲ್ಲಿ ಚೌಕೋನದ ಶಿಖರದಂತಹ ಮುಚ್ಚಿಗೆಯಿದ್ದು ಕ್ಷುದ್ರ ಅಲ್ಪ ವಿಮಾನದಂತೆ ತೋರುವುದು. ಕೋಷ್ಠದ ಮುಂಭಾಗದಲ್ಲಿ ಅಲ್ಪನಾಸಿ ಇರುವುದು. ಅರ್ಧಮಂಟಪದ ಮುಂದಿನ ಮಂಟಪವು ನವರಂಗವಾಗಿದ್ದು, ಇಲ್ಲಿ ಸಂಗೀತ, ನೃತ್ಯ ಮಾಡಲು ಇದನ್ನು ಉಪಯೋಗಿಸುತ್ತಿದ್ದರು. ಇದಕ್ಕೆ ನೃತ್ಯಮಂಟಪ ಎಂದು ಕರೆಯಬಹುದು. ಈ ಭಾಗವು ದೇವಾಲಯದ ಅಲಂಕರಣೆ ಮಂಟಪವಾಗಿ ರಚನೆಯಾಗಿದ್ದು ಚೌಕಕಾರವಾಗಿದೆ. ಈ ನವರಂಗದ ಮಧ್ಯದಲ್ಲಿ ಮುಖ್ಯದ್ವಾರವಿದ್ದರೆ ಅಕ್ಕಪಕ್ಕಗಳಲ್ಲೂ ಎರಡು ದ್ವಾರಗಳಿವೆ. ನವರಂಗದ ಮಧ್ಯಭಾಗದಲ್ಲಿ ಚೌಕಕಾರದ ವೇದಿಕೆ ಇದ್ದು ಇದರ ಮಧ್ಯಭಾಗದಲ್ಲಿ ವೃತ್ತಾಕಾರದ ರಚನೆಯಿದೆ. ಈ ವೇದಿಕೆಯ ನಾಲ್ಕು ತುದಿಗಳಲ್ಲಿ ನಾಲ್ಕು ಸ್ತಂಭಗಳಿವೆ. ಇದರಿಂದ ಒಂಬತ್ತು ಅಂಕಣಗಳಾಗಿ ಏರ್ಪಡುವುದಕ್ಕೆ ನವರಂಗ ಎಂದು ಕರೆಯುತ್ತಾರೆ. ನವರಂಗದ ಭುವನೇಶ್ವರಿಯಲ್ಲಿ ಪದ್ಮದಳವಿದ್ದು, ಮಧ್ಯದಲ್ಲಿ ಬಾಳೆಯ ಮೊಗ್ಗಿನಾಕಾರವು ಕೆಳಮುಖವಾಗಿದೆ. ಇದರ ಸುತ್ತಲೂ ಪಾರಿವಾಳ, ಕೋಲಾಟದ ಸುತ್ತುಗಳಿದ್ದು ಚೌಕಟ್ಟಿನಲ್ಲಿ ನಾಲ್ಕುಕಡೆ ಕೀರ್ತಿಮುಖಗಳಿವೆ. ಮಧ್ಯದ ವಿತಾನದಲ್ಲಿ ಅಲಂಕರಣೆಯನ್ನು ಮಾಡಲಾಗಿದೆ. ನವರಂಗದ ಸ್ತಂಭಗಳು ಚಿತ್ರಕಾಂಡ ಸ್ತಂಭಗಳಾಗಿವೆ (ಛಾಯಾಚಿತ್ರ ೧೪). ಇವುಗಳನ್ನು ಮೂರುಭಾಗಮಾಡಿ ಮಧ್ಯದ ಪಟ್ಟಿಗಳಲ್ಲಿ ಉಬ್ಬುಶಿಲ್ಪಗಳನ್ನು ರಚಿಸಿರುವರು. ಇವುಗಳಲ್ಲಿ ಬಾಲಕೃಷ್ಣ, ವೆಂಕಟೇಶ್ವರ, ಪ್ರಸನ್ನ ನರಸಿಂಹ, ಲಕ್ಷ್ಮೀವೆಂಕಟೇಶ್ವರ, ಗರುಡಮೂರ್ತಿ, ರಾಯ, ಆಂಜನೇಯ, ನಾಟ್ಯಕೃಷ್ಣ, ಬಲರಾಮ, ಕೂರ್ಮಾವತಾರ, ಅಭಯನರಸಿಂಹ, ವಾಮನ, ಮತ್ಸ್ಯವತಾರಗಳನ್ನು ಕೆತ್ತಲಾಗಿದೆ. ಇದರ ಮೇಲೆ ಪುಷ್ಪಬೋದಿಗೆಗಳಿದ್ದು, ಮೊಗ್ಗುಗಳು ಕೆಳಮುಖವಾಗಿವೆ. ನವರಂಗದ ಒಳಗೋಡೆಗೆ ಅಂಟಿಕೊಂಡಂತೆ ಕೇವಲ ಬೋದಿಗೆಗಳನ್ನು ಮೂರು ದಿಕ್ಕಿಗೆ ಅಳವಡಿಸಿದ್ದಾರೆ.

ನವರಂಗಕ್ಕೆ ಉತ್ತರ ಮತ್ತು ದಕ್ಷಿಣಭಾಗದಲ್ಲಿ ಎರಡು ದ್ವಾರಗಳಿದ್ದು ಎರಡು ಬದಿಯಲ್ಲಿ ಎರಡು ಸ್ತಂಭಗಳ ಮಂಟಪವನ್ನು ಹೊಂದಿದೆ. ಈ ಮಂಟಪಕ್ಕೆ ಬರಲು ಐದು ಮೆಟ್ಟಿಲುಗಳನ್ನು ಅಳವಡಿಸಿ ಬದಿಗಳಲ್ಲಿ ಹಸ್ತಿ ಹಸ್ತದ ಫಲಕ ಇರುವುದು. ಇದರ ಹೊರಭಾಗದಲ್ಲಿ ಸಿಂಹದ ಬಾಯಿಂದ ಹಸ್ತಿಹಸ್ತವು ಹೊರಚಾಚಿದೆ (ಛಾಯಾಚಿತ್ರ ೧೫). ಇಲ್ಲಿರುವ ಸ್ತಂಭಗಳು ಚಿತ್ರಕಾಂಡ ಸ್ತಂಭಗಳಾಗಿದ್ದು ಮೇಲೆ ಎರಡು ಕಡೆ ಬೋದಿಗೆಯು ಹೊರಚಾಚಿದೆ. ನವರಂಗದ ಭಿತ್ತಿಯು ಗರ್ಭಗುಡಿಯ ಭಿತ್ತಿಯಂತೆ ಮುಂದುವರೆದಿದೆ. ಈ ಪಾರ್ಶ್ವಮಂಟಪಗಳಲ್ಲಿ ಉಬ್ಬುಶಿಲ್ಪಗಳಿವೆ. ನಾಲ್ಕು ದಿಕ್ಕುಗಳಲ್ಲಿ ಕುಂಭಲತೆಗಳನ್ನು ಕೆತ್ತಲಾಗಿದ್ದು, ಮಧ್ಯದಲ್ಲಿ ಕಂಬದ ಪಟ್ಟಿಯು ಹೊರಚಾಚಿದೆ. ಇದರ ಮೇಲೆ ಪ್ರಭಾವಳಿ, ಶಾಲಾ ಶಿಖರವಿದೆ. ಈ ಮಂಟಪಗಳ ದ್ವಾರದ ಲಲಾಟದಲ್ಲಿ

ಪದ್ಮದಳವಿದ್ದು, ದ್ವಾರದ ಉತ್ತರಾಂಗ ಭಾಗದಲ್ಲಿ ಪದ್ಮದಳವಿದೆ. ದ್ವಾರಶಾಖಾದಲ್ಲಿ ವಲ್ಲಿಮಂಡಲವಿದ್ದು ಕೆಳಭಾಗದಲ್ಲಿ ಸ್ತ್ರೀಯರು ನಾಟ್ಯಭಂಗಿಯಲ್ಲಿರುವರು. ದ್ವಾರಶಾಖಾಗಳ ಕೆಳಹಂತದಲ್ಲಿ ದ್ವಾರಪಾಲಕರು ಆಯುಧಗಳನ್ನು ಹಿಡಿದು ದೇವರಿಗೆ ರಕ್ಷಕರಾಗಿ ನಿಂತಿರುವರು. ದ್ವಾರದ ಹೊಸ್ತಿಲಿಗೆ ಪದ್ಮಾಲಂಕಾರವಿದೆ. ಈ ಮಂಟಪಗಳ ಮೇಲೆ ಎಸ್ (S) ಆಕಾರದ ಮಂಜೂರನ್ನು ಅಳವಡಿಸಿ ಕೆಳಭಾಗವನ್ನು ಹಿಡಿಕೆಗಳಿಂದ ಅಲಂಕರಿಸಿರುವರು.

ನವರಂಗದ ಮುಂದಿನ ಭಾಗದಲ್ಲಿ ಬೃಹತ್ತಾದ ಮಹಾಮಂಟಪವಿದೆ. ಇದು ಮೂವತ್ತೆರಡು ಸ್ತಂಭಗಳಿಂದ ಕೂಡಿದ್ದು ಉತ್ತರಕ್ಕೆ ಸಿಂಹಯಾಳಿ, ದಕ್ಷಿಣಕ್ಕೆ ಗಜಯಾಳಿಯ ಸೋಪಾನವನ್ನು ಅಳವಡಿಸಿರುವರು. ಈ ಮಂಟಪದ ಸುತ್ತಲಿರುವ ಹದಿನಾರು ಸ್ತಂಭಗಳಲ್ಲಿ ಸಂಯುಕ್ತ ಹಾಗೂ ಸಾಶ್ರಾಯಸ್ತಂಭಗಳನ್ನು ನಿಲ್ಲಿಸಿ, ಉಳಿದ ಮಧ್ಯದಲ್ಲಿರುವ ಹದಿನಾರು ಸ್ತಂಭಗಳು ಚಿತ್ರಕಾಂಡ ಸ್ತಂಭಗಳಿವೆ (ನಕ್ಷೆ ೫). ಇವುಗಳ ಮೇಲೆ ಪುಷ್ಪಬೋದಿಗೆಗಳನ್ನು ಕೆತ್ತಿರುವರು. ಮಹಾಮಂಟಪಕ್ಕೆ ಮಳೆಯ ನೀರು ಒಳಗೆ ಬಾರದ ಹಾಗೆ ಎಸ್ (S) ಆಕಾರದ ಮಂಜೂರಿದೆ. ಈ ಮಂಟಪದ ಪೂರ್ವ, ಉತ್ತರ, ದಕ್ಷಿಣ ದ್ವಾರಗಳ ಬದಿಗಳಲ್ಲಿ ಮೇಲೆ ಸಾಶ್ರಾಯಸ್ತಂಭಗಳಿವೆ. ಈ ಸ್ತಂಭಗಳಲ್ಲಿ ಸಿಂಹವ್ಯಾಳಿಗಳು ಕಂಬಕ್ಕೆ ಆಧಾರವಾಗಿ ತಮ್ಮೆರೆಡು ಮುಂಗಾಲುಗಳನ್ನು ಮೇಲೆಕ್ಕೆತ್ತಿ ನೆಗಿದಿವೆ. ಈ ಎಲ್ಲಾ ಸ್ತಂಭಗಳಲ್ಲಿಯೂ ಉಬ್ಬುಶಿಲ್ಪಗಳನ್ನು ರಚಿಸಿರುವರು. ಈ ಸ್ತಂಭಗಳಲ್ಲಿರುವ ಉಬ್ಬುಶಿಲ್ಪಗಳು ಈ ಕೆಳಗಿನಂತಿವೆ :

ಸ್ತಂಭಗಳು

೧. ತ್ರಿಭಂಗ ವಿಗ್ರಹ, ಕಮಂಡಲ ಹಿಡಿದಿರುವ ಸನ್ಯಾಸಿ, ಸ್ತ್ರೀ, ಯಕ್ಷ, ಕೃಷ್ಣದೇವರಾಯನ ವಿಗ್ರಹ, ಭೈರಾಗಿ, ಸಿಂಹ, ಕುಳಿತಿರುವ ಸಿಂಹ.

೨. ನರ್ತಕಿ, ಅಂಜಲಿಮುದ್ರೆ ವ್ಯಕ್ತಿ, ಹನುಮಾನ್, ಸಿಂಹ, ಗರುಡ, ಯಕ್ಷ, ಅಂಜಲಿ ಹಸ್ತ ಗುರುಡ, ಕುಳಿತ ಸಿಂಹ.

೩. ರಾಮ, ಸ್ತ್ರೀವಾದ್ಯಗಾರ್ತಿ, ಹೂದಳ, ಚತುರ್ಭುಜವಿಷ್ಣು, ನಾಟ್ಯಗಾರ್ತಿ, ಹೂ, ಸಿಂಹ, ನಾಟ್ಯಕೃಷ್ಣ, ಹನುಮಾನ್, ಮಕರ ಮತ್ತು ಯಾಳಿ.

೪. ನಾಟ್ಯ ಭಂಗಿಯಲ್ಲಿರುವ ಯಕ್ಷ ತ್ರುಟಿತವಾಗಿದೆ. ನಾಟ್ಯಗಾರ, ಅಂಜಲಿಹಸ್ತಗರುಡ, ಹನುಮಾನ್, ಕೃಷ್ಣ, ಸಿಂಹ, ಸಮಭಂಗದಲ್ಲಿರುವ ವೆಂಕಟೇಶ, ಪದ್ಮಾಸನದಲ್ಲಿರುವ ಮೂರ್ತಿ, ಮಕರಯಾಳಿ.

೫. ಸಿಂಹ, ಕಾಳಿಂಗಮರ್ದನಕೃಷ್ಣ, ಅಂಜಲಿ ಹಸ್ತ ಹನುಮಾನ್, ಹನುಮಾನ್, ರಾಮ, ಕುಳಿತ ಸ್ತ್ರೀ, ಸಿಂಹ, ಗರುಡ, ಹೂದಳ, ಸಿಂಹ.

೬. ಸಂಯುಕ್ತ ಸ್ತಂಭ, ನಾಲ್ಕು ಕೈಗಳುಳ್ಳ ಚಾಮುಂಡಿ, ಸಿಂಹ, ಮೀನಿನ ಮೇಲೆ ಕುಳಿತ ಮನುಷ್ಯ, ಗೋವರ್ಧನಗಿರಿಧಾರಿ ಕೃಷ್ಣ, ಯಕ್ಷ, ನಿಂತಿರುವ ಯಕ್ಷ, ಸಿಂಹ.

೭. ನಾಲ್ಕು ಕೈಗಳುಳ್ಳ ದೇವರಶಿಲ್ಪ, ಕುಳಿತಿರುವ ಲಕ್ಷ್ಮೀದೇವಿ, ಗಂಧರ್ವರು, ವೆಂಕಟೇಶ, ದ್ವಿಬಾಹು ಶಿಲ್ಪ, ಕುಳಿತ ಸ್ತ್ರೀ, ಸಿಂಹ, ಕೃಷ್ಣ, ನಾಟ್ಯಬಾಲಕೃಷ್ಣ, ಸ್ತ್ರೀ, ಪುರುಷ, ಯಕ್ಷ.

೮. ತ್ರುಟಿತಶಿಲ್ಪಗಳು, ಕಾದಾಡುವ ಮಂಗಗಳು, ಗರುಡ, ಕುಳಿತಿರುವ ಶಿಲ್ಪ, ನಾಟ್ಯಬಾಲಕೃಷ್ಣ, ಸಿಂಹ, ತ್ರುಟಿತ ಶಿಲ್ಪ, ಅಂಜಲಿಶಿಲ್ಪ, ತ್ರುಟಿತಶಿಲ್ಪಗಳು, ಕೃಷ್ಣ.

೯. ತ್ರುಟಿತ ಪುರುಷ ಶಿಲ್ಪ, ನಾಟ್ಯಬಾಲಕೃಷ್ಣ, ವಾದ್ಯಗಾರ, ಕಾರ್ತಿಕೇಯ, ಯಕ್ಷ, ಯೋಗಾಸನ ಶಿಲ್ಪ, ಸಿಂಹ, ಸ್ತ್ರೀ, ಕುಳಿತಶಿಲ್ಪ, ಯಕ್ಷ, ಶಂಖನಿಧಿಯಕ್ಷ, ಸುಖಾಸೀನ ಲಕ್ಷ್ಮೀನಾರಾಯಣ.

೧೦. ಸಿಂಹ, ತ್ರಿಭಂಗಶಿಲ್ಪ, ನಾಟ್ಯಗಾರ್ತಿ, ಸಿಂಹ, ನಾಟ್ಯಯಕ್ಷ, ಸ್ತ್ರೀ, ಸಿಂಹ, ಯಕ್ಷ, ವಿಗ್ರಹ, ಸಿಂಹ, ತ್ರಿಭಂಗಶಿಲ್ಪ, ವಾದ್ಯಗಾರಶಿಲ್ಪ.

೧೧. ಸಿಂಹ, ತ್ರಿಭಂಗಶಿಲ್ಪ, ವಾದ್ಯಗಾರ್ತಿ, ಸಿಂಹ, ನಾಟ್ಯಯಕ್ಷಶಿಲ್ಪ, ಸ್ತ್ರೀ, ಸಿಂಹ, ಯಕ್ಷ, ದೇವಶಿಲ್ಪ, ಸಿಂಹ, ತ್ರಿಭಂಗಶಿಲ್ಪ, ವಾದ್ಯಗಾರ.

೧೨. ಕುಳಿತಸಿಂಹ, ಕುಳಿತ ಹನುಮಾನ್, ಯಮಳಾರ್ಜುನೀಯ ಕೃಷ್ಣ, ಪದ್ಮನಿಧಿಯಕ್ಷ, ಸಮಭಂಗ ಬಾಲಕೃಷ್ಣ, ಸ್ತ್ರೀ, ಸಿಂಹ, ಕುಳಿತ ಸ್ತ್ರೀದೇವತೆ, ಕೃಷ್ಣ.

೧೩. ಅಂಜಲಿಹಸ್ತ ಹನುಮಾನ್, ರಾಯ, ಕಾಳಿಂಗಮರ್ದನ ಕೃಷ್ಣ, ವೆಂಕಟೇಶ, ಬಾಲಕೃಷ್ಣ, ಸಿಂಹ, ಹನುಮಾನ್, ಅಂಜಲಿಹಸ್ತ ಗರುಡ, ಹನುಮಾನ್, ಸಿಂಹ, ಬಾಗಿರುವ ವ್ಯಕ್ತಿ, ನಾಟ್ಯಗಾರ.

೧೪. ಯಮಳಾರ್ಜುನೀಯ ಕೃಷ್ಣ, ಮುನಿ, ಪುರುಷ ಶಿಲ್ಪ, ಸಿಂಹ, ಹಂಸ, ಕುಳಿತಪುರುಷ, ಯೋಗಾನಾರಸಿಂಹ, ಪರುಶುರಾಮ, ಯಕ್ಷ, ಹನುಮಾನ್, ಗಿಡದಕೆಳಗೆ ಕುಳಿತ ಸಂನ್ಯಾಸಿ, ಯಕ್ಷ.

೧೫. ನರಸಿಂಹ, ನಾಟ್ಯಗಾರ್ತಿ, ನಮಸ್ಕರಿಸುವ ವ್ಯಕ್ತಿ, ಯೋಗಾಸನಶಿಲ್ಪ, ಗಂಧರ್ವ, ಚತುರ್ಭುಜ ದೇವತೆ, ಚತುರ್ಭುಜ ದೇವರು, ಅಂಜಲಿಮುದ್ರೆ ಗರುಡ, ವಿಷ್ಣು, ನಾಟ್ಯಕೃಷ್ಣ, ಕೃಷ್ಣ.

೧೬. ಮಕರ ಹಾಗೂ ಯಾಳಿ, ಬಾಲಕೃಷ್ಣ, ಯಕ್ಷ, ನಾಟ್ಯಗಾರ, ಸಿಂಹ, ಸಿಂಹ, ಸಿಂಹ, ಸ್ತ್ರೀ, ಯಕ್ಷರು.

೧೭. ಸಿಂಹ, ಸಂನ್ಯಾಸಿ, ವಾದ್ಯಗಾರ್ತಿ, ಸಿಂಹ, ಪುರುಷಶಿಲ್ಪ, ಆಟಗಾರ, ಯಕ್ಷ, ತ್ರಿಭಂಗಶಿಲ್ಪ, ಗಂಧರ್ವ, ಸಿಂಹ, ಶಂಖ ಊದುವ ಯಕ್ಷ, ನಾಟ್ಯಗಾರ್ತಿ.

೧೮. ಯಕ್ಷ, ನಾಟ್ಯಗಾರ್ತಿ, ಯಕ್ಷ, ಅಂಜಲಿಮುದ್ರೆ ಗರುಡ, ನಾಟ್ಯವಾಡುವ ಯಕ್ಷ, ಅಂಜಲಿ ಹನುಮಾನ್ , ನಾಟ್ಯಯಕ್ಷ, ಅಂಜಲಿ ಹಸ್ತ ಯೋಗಿ, ಹಾವು ಹಿಡಿದಿರುವ ಯಕ್ಷ, ಸಿಂಹ, ಕಾಳಿಂಗಮರ್ದನ ಕೃಷ್ಣ, ಕುಳಿತ ಯಕ್ಷ.

೧೯. ಗರುಡ, ವಿಷ್ಣು, ರಾಮ, ಹನುಮಾನ್, ವೆಂಕಟೇಶ, ಯಕ್ಷ, ಹನುಮಾನ್, ಲಕ್ಷ್ಮೀ, ರಾಮ, ಸಿಂಹ, ಗರುಡ, ರಾಮಸಂಹಾರ ಶಿಲ್ಪ.

೨೦. ಹಾಸ್ಯಗಾರ, ಕೃಷ್ಣ, ಹನುಮಾನ್, ಸಿಂಹ, ಗರುಡ, ಚತುರ್ಭುಜ ಗಣೇಶ, ಗೋಪಾಲಕೃಷ್ಣ, ಯೋಗಾಸನದಲ್ಲಿರುವ ಶಿಲ್ಪ, ನಾಟ್ಯಗಾರ, ಗರುಡ, ಯಕ್ಷ, ವಿಷ್ಣು.

೨೧. ಮಕರಯಾಳಿ, ಅಂಜಲಿಹಸ್ತ ಗರುಡ, ನಾಟ್ಯಗಣಪತಿ, ಯಕ್ಷ, ನಾಟ್ಯಗಾರ್ತಿ, ವಿಷ್ಣು, ಹನುಮಾನ್, ನಾಟ್ಯಭಂಗಿ ಯಕ್ಷ, ಕಾಳಿಂಗಮರ್ದನ ಕೃಷ್ಣ, ಯಕ್ಷ.

೨೨. ಸರ್ಪಹಿಡಿದ ಗರುಡ, ದೇವಶಿಲ್ಪ, ವೀಣಾ ನುಡಿಸುವುದು (ಕಿನ್ನರಿ), ಹನುಮಾನ್, ನಾಟ್ಯಗಾರ್ತಿ, ಹಂಸ, ಸಿಂಹ, ನಾಟ್ಯಕೃಷ್ಣ, ಅಂಜಲಿಹಸ್ತದ ಭಕ್ತ.

೨೩. ಸಿಂಹ, ನಾಟ್ಯಯಕ್ಷ, ನಾಟ್ಯಗಾರ್ತಿ, ಪದ್ಮಹಿಡಿದಿರುವ ಯಕ್ಷ, ಕುಳಿತ ಚತುರ್ಭುಜ ಗಣಪತಿ, ಶಂಖಹಿಡಿದ ಯಕ್ಷ, ಯಕ್ಷ, ಗರುಡ, ಹಾರುವ ಹನುಮಂತ, ಸರ್ಪಹಿಡಿದ ಯಕ್ಷ, ಯೋಗಿ, ಸಿಂಹ.

೨೪. ಯೋಗನರಸಿಂಹ, ಮತ್ಸ್ಯಾವತಾರ, ಆಟಗಾರ, ತ್ರಿಭಂಗಶಿಲ್ಪ, ಪದ್ಮಹಿಡಿದ ಯಕ್ಷ, ನಾಟ್ಯಯಕ್ಷ, ಕಾಳಿಂಗಮರ್ದನ ಕೃಷ್ಣ, ಯೋಗಾನರಸಿಂಹ, ಅಂಜಲಿಹಸ್ತ ಗರುಡ, ವೆಂಕಟೇಶ, ಕುಳಿತ ಮಂಗ, ಕಂಬಳಿಹೊದ್ದು ಕೈಯಲ್ಲಿ ಕೋಲುಹಿಡಿದು ಗದ್ದತಾಗಿಸಿರುವ ವ್ಯಕ್ತಿ.

೨೫. ಶಿಲ್ಪ, ಗೋಪಿಕಿಯರಿಂದ ಬೆಣ್ಣೆಕದಿಯುವುದು, ಹನುಮಾನ್, ರಾಮ, ಪುರುಷಶಿಲ್ಪ, ನಾಟ್ಯಮಾಡುವ ಯಕ್ಷ, ಮರದ ಕೆಳಗೆ ಕುಳಿತ ಸ್ತ್ರೀ, ವೆಂಕಟೇಶ, ರಾಮ, ಹನುಮಾನ್, ಯೋಗಿ, ಸೂರ್ಯ.

೨೬. ಕುಳಿತ ಸಿಂಹ, ಕುಳಿತಿರುವ ಯಕ್ಷೀ, ಸ್ತ್ರೀ, ಸಂಜೀವಿನಿ ಪರ್ವತ ಎತ್ತಿರುವ ಹನುಮಾನ್, ಕರಿವರದ ವಿಷ್ಣು, ಬಾಲಕೃಷ್ಣ, ಹೂ.

೨೭. ಕುಳಿತಯಕ್ಷ, ಯೋಗನರಸಿಂಹ, ಗಂಧರ್ವ, ಕುಳಿತಸಿಂಹ, ಸಿಂಹ, ಹನುಮಾನ್, ಹಿರಣ್ಯಕಶ್ಯಪುಸಂಹಾರ ನರಸಿಂಹ ಶಿಲ್ಪ, ಪುರುಷ ಶಿಲ್ಪ.

೨೮. ಕುಳಿತ ಸ್ತ್ರೀ ದೇವತೆ, ನಾಟ್ಯ ಬಾಲಕೃಷ್ಣ, ಹನುಮಾನ್, ಕುಳಿತ ಸಿಂಹ, ಸ್ತ್ರೀ ದೇವತೆ, ನಾಟ್ಯಗಾರ್ತಿ, ನಾಟ್ಯಗಾರ, ವೆಂಕಟೇಶ, ಯಕ್ಷ, ಹನುಮಾನ್.

೨೯. ನಗ್ನಸುಂದರಿ, ನಾಟ್ಯಶಿಲ್ಪ, ದ್ವಾರಪಾಲಕ, ಮಕರಯಾಳಿ, ನಾಟ್ಯ ಗಣಪತಿ, ಪದ್ಮಾಸನದಲ್ಲಿ ಕುಳಿತಿರುವ ಲಕ್ಷ್ಮಿ, ಅಂಜಲಿಹಸ್ತ ದೇವಿಕ, ವಿಷ್ಣು, ದೇವತೆ ಶಿಲ್ಪ, ಹೂ.

೩೦. ಅರ್ಧಪರ್ಯಾಂಕಾಸನಯಕ್ಷ, ಅಂಜಲಿಹಸ್ತ ಗರುಡ, ಕುಳಿತಸಿಂಹ, ಮಕರ, ಯಾಳಿ, ಸಿಂಹ, ನಾಟ್ಯ ಬಾಲಕೃಷ್ಣ, ಗರುಡ, ಅಂಜಲಿಹಸ್ತ ಗರುಡ, ಕಿನ್ನರ, ನಾಟ್ಯ ಬಾಲಕೃಷ್ಣ.

೩೧. ಹಸುವಿನ ಹಾಲುಕುಡಿಯುವ ಕರು, ಹನುಮಾನ್, ನಾಟ್ಯಗಾರ್ತಿ, ಕುಳಿತಸಿಂಹ, ಹನುಮಾನ್, ಯಕ್ಷ, ನಾಟ್ಯಗಾರ, ಸಿಂಹ, ಕೃಷ್ಣದೇವರಾಯ, ಗಂಧರ್ವ.

೩೨. ಸಿಂಹ, ಸಹಸ್ತಂಭ, ಸಿಂಹ ಸಹಸ್ತಂಭ, ಯೋಗನರಸಿಂಹ, ಕೃಷ್ಣದೇವರಾಯ, ಪುರುಷಶಿಲ್ಪ, ಹಿರಣ್ಯಕಶ್ಯಪು ಸಂಹಾರ ನರಸಿಂಹ, ಯಕ್ಷ, ನಾಟ್ಯಯಕ್ಷ ಶಿಲ್ಪಗಳು ಇವೆ.

ಇದಕ್ಕೆ ಹೊಂದಿಕೊಂಡ ಮುಖಮಂಟಪ ನಾಲ್ಕು ಸ್ತಂಭಗಳ ಎತ್ತರದ ಅಧಿಷ್ಠಾನವನ್ನು ಹೊಂದಿದೆ. ಇಲ್ಲಿನ ಕಂಬಗಳು ಮಹಾಮಂಟಪದ ಸ್ತಂಭಗಳ ರೀತಿಯಲ್ಲಿ ಮೂರುಭಾಗಗಳಾಗಿ ನಿರ್ಮಿಸಿ ಮಧ್ಯಪಟ್ಟಿಗಳಲ್ಲಿ ಉಬ್ಬುಶಿಲ್ಪಗಳನ್ನು ರಚಿಸಿರುವರು. ಇವು ಚಿತ್ರಕಾಂಡ ಸ್ತಂಭಗಳಾಗಿವೆ. ಆದರೆ ಇವುಗಳು ಚಿಕ್ಕದಾಗಿದ್ದು ಸುಂದರವಾಗಿವೆ. ಈ ಸ್ತಂಭಗಳಲ್ಲಿ ಯಕ್ಷ, ಸುಖಾಸನ ದೇವತೆ, ಪದ್ಮಹಿಡಿದಿರುವ ಯಕ್ಷ, ಶಂಖ ಊದುವ

ವ್ಯಕ್ತಿ, ಕೃಷ್ಣದೇವರಾಯ, ಅಂಜಲಿಹಸ್ತ ವ್ಯಕ್ತಿ, ಯಕ್ಷ, ಸುಖಾಸನಾ ವಿಷ್ಣು, ಯಾಮಳಜುರ್ನೀಯ ಕೃಷ್ಣ, ನಾಟ್ಯಕೃಷ್ಣ, ಹನುಮಾನ್, ಹಂಸ, ಕುಳಿತಯಕ್ಷ, ವೇಣುಗೋಪಾಲ, ವೀರಕಥೆ ಹೇಳುವ ವ್ಯಕ್ತಿ, ಕುಳಿತ ಬಾಲಕೃಷ್ಣ, ನಾಟ್ಯ ಬಾಲಕೃಷ್ಣ, ಕಾಳಿಂಗಮರ್ದನ ಕೃಷ್ಣ, ಸರ್ಪವನ್ನು ಹಿಡಿದ ಯಕ್ಷ, ಕೃಷ್ಣದೇವರಾಯ, ಯೋಗಾನರಸಿಂಹ, ಯಕ್ಷ, ವಿಠ್ಠಲ, ಅಂಜಲಿಹಸ್ತಗರುಡ, ವಾಲಿಸುಗ್ರೀವ ಯುದ್ಧ, ರಾಮ, ಬಾಲಕೃಷ್ಣ ಹಕ್ಕಿಯನ್ನು ಕೊಲ್ಲುತ್ತಿರುವ ಶಿಲ್ಪ, ಯಕ್ಷ, ಕಾಳಿಂಗಮರ್ದನ, ವಿಭೂಷಣ, ಮತ್ತು ಹನುಮಾನ್, ಶಕಟಾಸುರವಧೆ ಬಾಲಕೃಷ್ಣ, ಕೃಷ್ಣದೇವರಾಯ, ಗಜಸಂಹಾರ ಕೃಷ್ಣ, ರಾಮಲಕ್ಷ್ಮಣ, ಸಂಜೀವಿನಿ ಹೊತ್ತ ಹನುಮಾನ್ ಇತ್ಯಾದಿ ಉಬ್ಬುಶಿಲ್ಪಗಳಿವೆ. ಮಂಟಪದ ಪ್ರಸ್ತರದ ಮೇಲೆ ಗೋಪುರವಿದ್ದು, ಕೆಳಗೆ ಮಂಜೂರವನ್ನು ಅಳವಡಿಸಿರುವರು. ಶಿಖರದಲ್ಲಿ ಮೂರುಭಾಗಗಳಿದ್ದು ಕೆಳಭಾಗದಲ್ಲಿ ಅರ್ಧಕಂಬ, ಕೂಟ, ನಾಸಿಗಳನ್ನು ಅಲಂಕರಿಸಿದ್ದಾರೆ. ಮಧ್ಯದ ಭಾಗದಲ್ಲಿ ಗ್ರೀವವಿದ್ದು, ಅದರ ಮೇಲೆ ಶಾಲಾಶಿಖರವಿದೆ. ಪಾರ್ಶ್ವದಲ್ಲಿ ಕೀರ್ತಿಮುಖ ಮಧ್ಯದಲ್ಲಿ ನಾಸಿಯು ಕಂಡುಬರುತ್ತದೆ. ಈ ಮಂಟಪದ ಬಲಭಾಗದಲ್ಲಿ ಐದು ಅಡಿ ಎತ್ತರದ ವೇದಿಕೆಯಿದ್ದು, ಹೆಚ್ಚು ಅಲಂಕರಣೆ ಹೊಂದದೆ ಖಾಲಿ ಅಧಿಷ್ಠಾನ ಮಾತ್ರವಿದೆ. ಹಿಂದೆ ಇದೊಂದು ಗುಡಿಯಾಗಿರುವ ಸಾಧ್ಯತೆಯಿದೆ.

ಮಣಿಮಂಟಪದ ಮುಂದೆ ಪೂರ್ವದಿಕ್ಕಿಗೆ ಗರುಡಸ್ತಂಭದ ಪೀಠವಿದ್ದು, ಕಂಬವು ಬಿದ್ದು ಹಾಳಾಗಿದೆ. ಈ ಪೀಠದಲ್ಲಿ ಪಾದುಕಾ, ಉಪಾನ, ಪದ್ಮ, ಕಂಪ, ಕುಮುದ, ಗಳ, ಕಪೋತವನ್ನು ಕೆತ್ತಿರುವರು. ಈ ಪೀಠದ ಮಧ್ಯ ಸ್ತಂಭದ ನಿಲುಗಡೆಗೆ ಒಂದು ರಂಧ್ರ ಕೊರೆಯಲಾಗಿದೆ. ಇದರ ಮುಂದೆ ದೇವರಿಗೆ ನೈವೇದ್ಯವಾದ ಪದಾರ್ಥಗಳನ್ನು ಪರಿವಾರ ದೇವತೆಗಳಿಗೆ ಇಡಲು ಬಲಿಪೀಠವಿದೆ. ಇದು ಗರ್ಭಗೃಹದ ಮುಂದಿರುವುದರಿಂದ ಪ್ರಧಾನ ಬಲಿಪೀಠವಾಗಿದೆ. ಬಲಿಪೀಠವು ಮೂಲ ದೇವಾಲಯದ ಅಧಿಷ್ಠಾನವನ್ನು ಹೊಂದಿದೆ. ಇದರ ಮೇಲ್ಭಾಗವು ಬಲಿಹರಣವನ್ನು ಇಡಲು ಅನುಕೂಲವಾಗುವಂತೆ ಚಪ್ಪಟೆಯಾಗಿದ್ದು, ಇದರ ಕೆಳಗಿನ ಅಂಗವು ಕಮಲದ ವಿನ್ಯಾಸವನ್ನು ಹೊಂದಿ ಹೆಚ್ಚು ಅಲಂಕೃತಗೊಂಡಿದೆ. ಬಲಿಪೀಠ ಮತ್ತು ಗರುಡ ಸ್ತಂಭದ ಮಧ್ಯೆ ಕೈಮುಗಿದು ನಿಂತಿರುವ ಗರುಡನ ಶಿಲ್ಪಬಂಡೆಯು ಬಲಿಪೀಠಕ್ಕೆ ಒರಗಿ ಗರ್ಭಗೃಹಕ್ಕೆ ಎದುರಾಗಿದೆ. ಮಣಿಮಂಟಪದ ಎಡಕ್ಕೆ ಕೃಷ್ಣದೇವರಾಯನ ಕಾಲದ ಶಿಲಾಶಾಸನವಿದೆ.

ಮೂಲ ದೇವಾಲಯದ ಗರ್ಭಗೃಹದಲ್ಲಿರುವ ಪ್ರಧಾನದೇವರ ಬಿಂಬಕ್ಕೆ ಸಂಬಂಧಿಸಿದ ಸ್ತ್ರೀ ದೇವತಾ ಬಿಂಬವು ಪ್ರತ್ಯೇಕ ದೇವಾಲಯವಾಗಿ ನಿರ್ಮಿತವಾಗಿದೆ. ಈ ಮಂದಿರವು ಮೂಲ ದೇವಾಲಯದ ಎಡಕ್ಕೆ ಉತ್ತರ ಭಾಗದಲ್ಲಿರುವುದು. ಇದು ಪೂರ್ವ ಮತ್ತು ದಕ್ಷಿಣಕ್ಕೆ ಮುಖಮಾಡಿದ ಜೋಡಿ ಗರ್ಭಗುಡಿಗಳನ್ನು ಹೊಂದಿದೆ (ಛಾಯಾಚಿತ್ರ ೧೬). ಪೂರ್ವಕ್ಕೆ ಮುಖಮಾಡಿರುವ ರುಕ್ಮಿಣಿ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ತೆರೆದ ಮಂಟಪಗಳಿವೆ. ಈ ಮಂಟಪಕ್ಕೆ ಹೊಂದಿಕೊಂಡಂತೆ ದಕ್ಷಿಣಕ್ಕೆ ಮುಖಮಾಡಿರುವ ಇನ್ನೊಂದು ಗರ್ಭಗುಡಿಯಿದೆ. ಈ ಗುಡಿಯಲ್ಲಿ ವಿಗ್ರಹವಿದೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ, ಶಿಖರವನ್ನು ಮಾತ್ರ ಹೊಂದಿ, ಅಧಿಷ್ಠಾನದಲ್ಲಿ ಪಾದುಕಾ, ಉಪಾನ, ಪದ್ಮ, ಜಗತೀ, ಕಪೋತ ಭಾಗಗಳಿವೆ. ಮೇಲೆ ಉಪಾನ, ಕುಮುದ, ಕಂಪವನ್ನು ಹೊಂದಿದ ಭಿತ್ತಿಯಿದ್ದು ಪ್ರಸ್ತರದಲ್ಲಿ ಕಪೋತವಿದೆ. ಶಿಖರದಲ್ಲಿ ಕೂಟ, ಅರ್ಧಕಂಬ, ಕರ್ಣಕೂಟ,

ಶಾಲಾಶಿಖರವಿದ್ದು, ಕೀರ್ತಿಮುಖ, ನಾಸಿಗಳನ್ನು ನಿರ್ಮಿಸಿದ್ದಾರೆ. ಇದನ್ನು ಇಟ್ಟಿಗೆ ಗಾರೆಗಚ್ಚಿನಿಂದ ಕಟ್ಟಿರುವರು. ಮೂಲ ರುಕ್ಮಿಣಿ ದೇವಾಲಯವು ಚಚ್ಚೌಕಕಾರದ ಗರ್ಭಗುಡಿಯನ್ನು ಹೊಂದಿದ್ದು, ಮುಂದೆ ಅಂತರಾಳವಿದೆ. ಗರ್ಭಗುಡಿಯಲ್ಲಿ ಪೀಠಮಾತ್ರವಿದ್ದು ಮುಂದಿನ ದ್ವಾರವು ಸಾದಾ ರೀತಿಯ ಕೆತ್ತನೆ ಹೊಂದಿದೆ. ಗರ್ಭಗುಡಿಗೆ ಹೋಗಲು ಮೂರು ಮೆಟ್ಟಿಲುಗಳಿವೆ. ಇದರ ಮುಂದಿನ ಭಾಗದಲ್ಲಿ ಕೆಳಹಂತವಾಗಿ ಚಿತ್ರಕಾಂಡ ಸ್ತಂಭಗಳ ನವರಂಗವಿದ್ದು, ಇದು ತೆರೆದ ಮಂಟಪರೀತಿಯದ್ದಾಗಿದೆ. ಈ ಮಂಟಪದಲ್ಲಿರುವ ಹನ್ನೆರಡು ಸ್ತಂಭಗಳು ಪೀಠವನ್ನು ಹೊಂದಿರುವುದಿಲ್ಲ. ಗರ್ಭಗುಡಿಯ ಮೇಲಿನ ಶಿಖರವು ತ್ರಿತಲ ಶಿಖರವಾಗಿದ್ದು ಗೂಡುಗಳು, ಅರ್ಧಕಂಬ, ಕರ್ಣಕೂಟ, ಗ್ರೀವ ಮೇಲೆ ಶಾಲಾಶಿಖರವನ್ನು ಹೊಂದಿದೆ (ಛಾಯಾಚಿತ್ರ ೧೬). ಈ ಶಿಖರದ ಪಾರ್ಶ್ವಗಳಲ್ಲಿ ಕೀರ್ತಿಮುಖಗಳಿವೆ. ಶಾಲಾದ ಮಧ್ಯದಲ್ಲಿ ನಾಸಿಯನ್ನು ಗಾರೆಯಿಂದ ಚಿತ್ರಿಸಲಾಗಿದೆ. ನವರಂಗದ ಮುಂದಿನ ತೆರೆದ ಮಂಟಪದಲ್ಲಿ ಸಾದಾ ರೀತಿಯ ಸರಳ ಬೋದಿಗೆಗಳನ್ನು ಹೊಂದಿದ ಹನ್ನೆರಡು ಸ್ತಂಭಗಳಿವೆ. ಕೆಳಗಿನ ಪಾದದಲ್ಲಿ ಪ್ರಾಣಿಗಳು, ಹೂಬಳ್ಳಿ, ಶಂಖ, ಸಿಂಹ, ಆಂಜನೇಯ, ಹಂಸ ಇತ್ಯಾದಿ ಉಬ್ಬುಶಿಲ್ಪಗಳಿದ್ದು ಈ ಮಂಟಪದ ಪ್ರಸ್ತರದಲ್ಲಿ ಮಂಜೂರವನ್ನು ಅಳವಡಿಸಲಾಗಿದೆ. ಮೂಲಗರ್ಭಗುಡಿಯ ನೀರು ಹೊರಗೆ ಹೋಗಲು ಅದಕ್ಕೆ ಸಿಂಹಮುಖದ ಪ್ರಣಾಳವನ್ನು ಕೆತ್ತಿರುವರು.

ಈ ದೇವಾಲಯ ಮಹಾಮಂಟಪದ ಎಡಭಾಗದಲ್ಲಿರುವ ಚಿಕ್ಕದಾದ ಗುಡಿಯು ಗರ್ಭಗುಡಿಯನ್ನು ಮಾತ್ರ ಒಳಗೊಂಡಿದೆ (ಛಾಯಾಚಿತ್ರ ೧೭). ಇದು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಶಿಖರವನ್ನು ಒಳಗೊಂಡ ದೇವಾಲಯವಾಗಿದ್ದು, ಅಧಿಷ್ಠಾನದಲ್ಲಿ ಪಾದುಕಾ, ಉಪಾನ, ತ್ರಿಪಟ್ಟಕುಮುದ ಹಾಗೂ ಭಿತ್ತಿಯಲ್ಲಿ ಸರಳವಾಗಿ ಶಾಸನಗಳನ್ನು ಮೂರು ಕಡೆ ಕೆತ್ತಲಾಗಿದೆ. ಗರ್ಭಗುಡಿಯ ಬಾಗಿಲವಾಡವು ಎರಡು ಸ್ತಂಭಗಳನ್ನು ಹೊಂದಿದ್ದು, ಸರಳವಾಗಿದೆ. ಪ್ರಸ್ತರದಲ್ಲಿ ಕಪೋತ ನಾಸಿಗಳನ್ನು ಕೆತ್ತಿರುವರು. ಶಿಖರವು ತ್ರಿತಲವಾಗಿದ್ದು ಕೆಳಭಾಗದಲ್ಲಿ ಕಂಬ ರೀತಿಯ ಪಟ್ಟಿಕೆಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿ ಅವುಗಳ ಮೇಲೆ ಸಿಂಹನಾಸಿಯನ್ನು ಚಿತ್ರಿಸಿರುವರು. ಶಿಖರದ ಕೊನೆಭಾಗದಲ್ಲಿ ನಾಲ್ಕುದಿಕ್ಕಿಗೆ ಕರ್ಣಕೂಟಗಳಿದ್ದು ಇದರ ಮೇಲೆ ಕಪೋತದಿಂದ ಕೂಡಿದ ನಾಸಿಗಳನ್ನು ಅಲಂಕರಿಸಿದ್ದಾರೆ. ಗ್ರೀವದಲ್ಲಿ ನಾಲ್ಕು ದಿಕ್ಕಿಗೆ ಕೈಮುಗಿದು ಕುಳಿತಿರುವ ದಿಕ್ಪಾಲಕರ ಗಾರೆಯ ಶಿಲ್ಪಗಳಿವೆ. ಮಧ್ಯಭಾಗದಲ್ಲಿ ವಿಷ್ಣುವಿನ ಗಾರೆಯ ಶಿಲ್ಪಗಳಿದ್ದು, ಇವುಗಳನ್ನು ಅರ್ಧಕಂಭಗಳಿಂದ ಜೋಡಿಸಿರುವರು. ಮೇಲ್ಭಾಗವು ದುಂಡನೆಯ ಗುಮ್ಮಟಾಕಾರದ ಶಿಖರವನ್ನು ಹೊಂದಿ ಸುತ್ತಲೂ ನಾಸಿಗಳನ್ನು ಗಾರೆಯಿಂದ ಚಿತ್ರಿಸಿರುವರು. ಮೇಲೆ ಮುಚ್ಚಿಗೆಯ ಆಕಾರವಿದ್ದು ಸುತ್ತಲೂ ಸಣ್ಣ ಸಣ್ಣ ನಾಸಿಗಳ ಅಲಂಕರಣೆಯಿದೆ. ಈ ದೇವಾಲಯದಲ್ಲಿ ಪೀಠವಿರದೆ ಇಂದು ಮೆಟ್ಟಿಲಿಗೆ ಇಲಿ ಇರುವ ಪೀಠವನ್ನು ಇಟ್ಟಿರುವುದು ಕಂಡುಬರುತ್ತದೆ. ಇದೇ ರೀತಿಯ ಪರಿವಾರ ದೇವಾಲಯಗಳಲ್ಲಿ ಮೂಲ ದೇವಾಲಯದ ದಕ್ಷಿಣಕ್ಕಿರುವ ಎರಡು ದೇವಾಲಯಗಳು ಒಂದೇ ತೆರನಾಗಿ ಉತ್ತರಕ್ಕೆ ಮುಖಮಾಡಿವೆ. ಈ ಎರಡು ದೇವಾಲಯಗಳು ಗರ್ಭಗುಡಿಯನ್ನು ಮಾತ್ರ ಹೊಂದಿ ಸರಳವಾಗಿವೆ. ಅಧಿಷ್ಠಾನ, ಭಿತ್ತಿ, ಪ್ರಸ್ತರ, ಶಿಖರಗಳಿಂದ ಕೂಡಿದ ದೇವಾಲಯಗಳ ಗರ್ಭಗುಡಿಯಲ್ಲಿ ಇಂದು ಮೂರ್ತಿ ಕಾಣುವುದಿಲ್ಲ. ಪಶ್ಚಿಮಕ್ಕಿರುವ ದೇವಾಲಯದ ಶಿಖರದಲ್ಲಿ ಸುಬ್ರಮಣ್ಯನ ವಿಗ್ರಹಗಳಿರುವುದು

ವಿಶೇಷವಾಗಿದೆ. ಈ ಶಿಲ್ಪಗಳನ್ನು ಗಾರೆಗಚ್ಚಿನಿಂದ ನಿರ್ಮಿಸಿದ್ದು ಕಾರ್ತೀಕೆಯನು ಸಿಂಹದ ಮೇಲೆ ಕುಳಿತುಕೊಂಡಿರುವನಲ್ಲದೆ, ಶಿಖರದ ಕೊನೆ ತುದಿಯನ್ನು ಗುಮ್ಮಟಾಕಾರದಲ್ಲಿ ನಾಸಿಗಳಿಂದ ಅಲಂಕರಿಸಲಾಗಿದೆ.

ಈ ದೇವಾಲಯವು ಎರಡು ಪ್ರಾಕಾರ ಗೋಡೆಗಳನ್ನು ಹೊಂದಿದ್ದು, ಮೊದಲನೆಯ ಪ್ರಾಕಾರವು ದೇವಾಲಯದ ರಕ್ಷಣೆಯ ದೃಷ್ಟಿಯನ್ನು ಹೊಂದಿರುವ ಗೋಡೆಯಾಗಿದೆ. ಇದಕ್ಕೆ ಆವರಣ, ಸಾಲ, ನಿಹಾರ, ಕೋಶ ಎಂದು ಹೆಸರುಗಳಿವೆ. ಈ ಪ್ರಾಕಾರಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಬಹುದು. ಮೊದಲನೆಯ ಪ್ರಾಕಾರವನ್ನು ಅಂತರ್ಮಂಡಲ, ಎರಡನೆಯದನ್ನು ಅಂತರ್ನಿಹಾರ ಎಂದು ಮಾನಸಾರದಲ್ಲಿ ಹೇಳಿದೆ (೩೧:೬-೭). ಮೊದಲನೆಯ ಪ್ರಾಕಾರದ ಒಳಮುಖದಲ್ಲಿ ಅದಕ್ಕೆ ಸೇರಿದಂತೆ ಸುತ್ತಲೂ ವೇದಿಕೆಯಿದ್ದು ಅದರ ಮೇಲೆ ಸಾಲು ಸ್ತಂಭಗಳಿರುವವು. ಇದರ ಮೇಲೆ ಛಾದ್ಯವಿದ್ದು ಸುತ್ತಲೂ ಮೊಗಸಾಲೆವಿದೆ. ಇದನ್ನು ಆವೃತಮಂಟಪವೆಂದು ಕರೆಯಲಾಗುತ್ತದೆ. ಈ ಆವೃತಮಂಟಪದ ಪೂರ್ವಕ್ಕೆ ಎರಡು ಭಾಗದಲ್ಲಿ ಮಂಟಪಗಳಿವೆ. ಬಲಭಾಗದಲ್ಲಿರುವ ಮಂಟಪವು ಪಾಕಶಾಲೆಯಾಗಿದ್ದಿತು. ಎಡಭಾಗದ ಮಂಟಪವು ನಾಲ್ಕುಸ್ತಂಭಗಳ ಮಂಟಪವಾಗಿ ಕಂಡುಬರುತ್ತದೆ. ಈ ಪ್ರಾಕಾರದ ಎಡಭಾಗದಲ್ಲಿ ಆರುಕಂಬಗಳ ಮಂಟಪವಿದೆ. ಮೊದಲನೆಯ ಪ್ರಾಕಾರಕ್ಕೆ ಮೂರು ದ್ವಾರಗೋಪುರಗಳಿದ್ದು, ಅವು ಉತ್ತರ, ದಕ್ಷಿಣಕ್ಕಿದ್ದರೆ, ಪೂರ್ವಕ್ಕಿರುವ ದ್ವಾರಗೋಪುರವು ಮುಖ್ಯ ದ್ವಾರಗೋಪುರವಾಗಿದೆ. ಈ ಮಹಾದ್ವಾರದ ಮೇಲೆ ಇಂದು ಎರಡು ತಲಗಳು ಮಾತ್ರ ಉಳಿದುಕೊಂಡಿವೆ (ಛಾಯಾಚಿತ್ರ ೧೮). ಈ ಪ್ರಾಕಾರದ ಗೋಪುರಕ್ಕೆ ದ್ವಾರಶೋಭಾ ಎಂದು ಕರೆಯಲಾಗುತ್ತದೆ. ಮಹಾದ್ವಾರದ ಹೊರಮುಖದಲ್ಲಿ ಪ್ರವೇಶದ ಆರಂಭದಲ್ಲೆ ಬದಿಗೆ ವೇದಿಕೆಯಿದ್ದು, ಅದರ ಮೇಲೆ ಸ್ತಂಭಗಳಿರುವವು. ಈ ಮಂಟಪದ ರಚನೆಗೆ ಪ್ರತೋಲಿ ಎನ್ನುವರು. ಈ ದ್ವಾರಗೋಪುರವು ಪ್ರಸ್ತರದವರೆಗೆ ಕಲ್ಲಿನಗೋಡೆಯಾಗಿದ್ದು, ಗೋಪುರವನ್ನು ಇಟ್ಟಿಗೆ, ಕಟ್ಟಿಗೆ, ಗಾರೆಗಚ್ಚಿನಿಂದ ನಿರ್ಮಿಸಿದ್ದಾರೆ. ಅಧಿಷ್ಠಾನದಲ್ಲಿ ಪಾದುಕ, ಉಪಾನ, ಪದ್ಮ, ಕಂಪ, ತ್ರಿಪಟ್ಟಕುಮುದ, ಜಗತಿ ಹಾಗೂ ಅರೆಗಂಬಗಳನ್ನು ಕೆತ್ತಿರುವರು. ಮೇಲೆ ಕಪೋತವಿದ್ದು ಇದರಲ್ಲಿ ನಾಸಿಗಳನ್ನು ಖಂಡರಿಸಲಾಗಿದೆ. ಈ ಪ್ರತೋಲಿಯಲ್ಲಿರುವ ಮುಂದಿನ ನಾಲ್ಕು ಸ್ತಂಭಗಳು ಸಂಯುಕ್ತ ಸ್ತಂಭಗಳಾಗಿವೆ. ಈ ಸ್ತಂಭಗಳಲ್ಲಿ ಉಬ್ಬುಶಿಲ್ಪಗಳನ್ನು ಬದಿಗಳಲ್ಲಿ ಚಿತ್ರಿಸಿರುವರು. ಮೇಲಿನ ಪ್ರಸ್ತರದಲ್ಲಿ ಮಂಜೂರನ್ನು ಅಳವಡಿಸಿದ್ದು, ಸ್ತಂಭದ ಬೋದಿಗೆಗಳು ಪುಷ್ಪಬೋದಿಗೆಯಾಗಿವೆ. ಭಿತ್ತಿಯಲ್ಲಿಯೂ ಅಧಿಷ್ಠಾನದ ಭಾಗಗಳು ಮುಂದುವರೆದಿದ್ದು ಅರ್ಧಕಂಬ, ಕೋಷ್ಠ, ಕುಂಭಲತೆಗಳನ್ನು ಕೆತ್ತಲಾಗಿದೆ. ದ್ವಾರದ ಒಳಮುಖದ ಕಂಬಗಳಲ್ಲಿ ಕೆಳಗೆ ಲತಾಬಳ್ಳಿಗಳನ್ನು ಹಿಡಿದು ನಾಟ್ಯದ ಭಂಗಿಯಲ್ಲಿರುವ ಮೂರು ಅಡಿ ಎತ್ತರದ ಸ್ತ್ರೀಯರು ನಿಂತಿರುವರು. ಇವರ ಕೈಯಿಂದ ಮೇಲೆ ಹೋಗಿರುವ ವಲ್ಲಿಮಂಡಲದಲ್ಲಿ ವಿಷ್ಣುವಿನ ಅವತಾರಕ್ಕೆ ಸಂಬಂಧಿಸಿದ ಉಬ್ಬುಶಿಲ್ಪಗಳನ್ನು ಆಯಾಯ ಮಂಡಲದಲ್ಲಿ ಕೆತ್ತಲಾಗಿದೆ. ಮೇಲಿನ ಗೋಪುರವನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಿದ್ದು, ಅದರಲ್ಲಿರುವ ಶಿಲ್ಪಗಳನ್ನು ಗಾರೆಯಿಂದ ಮಾಡಲಾಗಿದೆ. ಈ ಗೋಪುರದಲ್ಲಿ ದ್ವಾರಪಾಲಕ, ನಗ್ನಶಿಲ್ಪ, ದೇವತಾಶಿಲ್ಪ, ಕೋಷ್ಠಕ, ಶಾಲಾಕೂಟದಿಂದ ಕೂಡಿದ ಹಾರಗಳಿವೆ. ಈ ಗೋಪುರವು ಹಿರಿದಾಗಿದ್ದು ಬಲಗಡೆಯಲ್ಲಿರುವ ಗಾರೆಶಿಲ್ಪಗಳಲ್ಲಿ ಗುರಾಣಿಗಳನ್ನು ಹಿಡಿದ ಸೈನಿಕರ, ಉನ್ಮತ್ತ ಕುದುರೆಗಳ, ಆನೆಗಳ ಶಿಲ್ಪಗಳನ್ನು ನಿರ್ಮಿಸಿದ್ದು ಕಾಣಬಹುದು. ಇವು ಕೃಷ್ಣದೇವರಾಯನ ಒರಿಸ್ಸಾದಂಡಯಾತ್ರೆಯ ಚಿತ್ರಗಳನ್ನು ನಿರೂಪಿಸುವಂತೆ ತೋರುತ್ತದೆ.

ಅದೇ ರೀತಿಯಾಗಿ ಉತ್ತರಕ್ಕಿರುವ ತ್ರಿತಲ ಗೋಪುರವು ಪ್ರತೋಲಿಯನ್ನು ಒಳಮುಖದಲ್ಲಿ ಹೊಂದಿದೆ. ಈ ಗೋಪುರದಲ್ಲಿ ಅರ್ಧಕಂಬ, ಕರ್ಣಕೂಟ, ದ್ವಾರಪಾಲಕರು, ಶಾಲಾ ಇತರೆ ಶಿಲ್ಪಗಳನ್ನು ಗಾರೆಗಚ್ಚಿನಿಂದ ನಿರ್ಮಿಸಲಾಗಿದೆ. ಎರಡನೆ ಭಾಗದಲ್ಲಿ ಸುತ್ತಲೂ ನಾಸಿಗಳನ್ನು ಗಾರೆಯಿಂದ ರಚಿಸಿದ್ದು, ಮೇಲೆ ಶಾಲಾಶಿಖರವಿದೆ. ಪಾರ್ಶ್ವದಲ್ಲಿ ಕೀರ್ತಿಮುಖಗಳಿಂದ ಅಲಂಕರಿಸಿದ್ದಾರೆ. ದಕ್ಷಿಣ ದಿಕ್ಕಿನ ಗೋಪುರವು ಬಿದ್ದುಹೋಗಿದ್ದು ಅದರ ಕುರುಹು ಮಾತ್ರ ಅಲ್ಪಸ್ವಲ್ಪ ಉಳಿದುಬಂದಿದೆ. ಎರಡನೆ ಪ್ರಾಕಾರದ ಪಶ್ಚಿಮಕ್ಕೆ ಎಡಭಾಗದಲ್ಲಿ ಒಂದು ಮಂಟಪವಿದ್ದು, ಅದರ ಪಕ್ಕದಲ್ಲಿ ನೀರಿನ ತೊಟ್ಟಿಯಿದೆ. ಬಲಭಾಗದ ದಕ್ಷಿಣಕ್ಕೆ ಎರಡುಕಂಬಗಳ ಗುಮ್ಮಟದ ಕೋಣೆಯು ಇಂಡೋ-ಇಸ್ಲಾಮಿಕ್ ಶೈಲಿಯನ್ನು ಹೊಂದಿದ ಕಟ್ಟಡವಾಗಿದೆ. ಇದರಲ್ಲಿ ಬಾಗಿಲು ಮತ್ತು ಒಳಭಾಗವು ಕಮಾನಿನ ಆಕಾರದಲ್ಲಿ ನಿರ್ಮಿಸಿದ್ದು, ಆರು ಅಂಕಣಗಳಿಂದ ಕೂಡಿದೆ. ಮೇಲೆ ಎರಡು ಗುಮ್ಮಟಗಳಿದ್ದು, ಇಂದು ಸುರಕ್ಷಿತವಾಗಿ ಉಳಿದುಬಂದಿವೆ. ಇದೊಂದು ಧಾನ್ಯಗಳನ್ನು ಸಂಗ್ರಹಿಸುವ ಉಗ್ರಾಣವಾಗಿತ್ತು. ಈ ಕಟ್ಟಡವು ಪೂರ್ವಕ್ಕೆ ಮುಖಮಾಡಿದ್ದು ಒಂದೇ ದ್ವಾರಬಾಗಿಲನ್ನು ಹೊಂದಿದೆ.

ಎರಡನೆಯ ಪ್ರಾಕಾರ ಪೂರ್ವಗೋಪುರದ ಬಲಬದಿಯಲ್ಲಿ ಅಧಿಷ್ಠಾನ ಹೊಂದಿದ ಕಂಬಗಳ ಮಂಟಪವಿದ್ದು ಅದು ಹಾಳಾಗಿ ಇಂದು ಅಧಿಷ್ಠಾನ ಮಾತ್ರ ಉಳಿದಿದೆ. ಇದರ ಮುಂಭಾಗದಲ್ಲಿ ನಾಲ್ಕು ಎತ್ತರದ ಕಂಬಗಳ ಮಂಟಪವಿದೆ. ಇದರ ಕೆಳಗೆ ಯಾವುದೇ ವೇದಿಕೆ ಕಂಡುಬರುವುದಿಲ್ಲ. ಇದು ಉಯ್ಯಾಲೆ ಮಂಟಪವಾಗಿರಬಹುದು. ಈ ದೇವಾಲಯದ ಪೂರ್ವದಿಕ್ಕಿಗೆ ಎಂಟು ಕಂಬಗಳ ಒಂದು ಮಂಟಪವಿದೆ. ಇದರ ಎಡಭಾಗದಲ್ಲಿ ಆರುಕಂಬಗಳಿಂದ ನಿರ್ಮಿಸಿದ ಮಂಟಪವಿದ್ದು, ಕೆಳಗೆ ಶಂಖ, ನಾಮಾ, ಚಕ್ರ ಚಿಹ್ನೆಹೊಂದಿರುವ ನೀರಿನ ತೊಟ್ಟಿ ಇದೆ. ಇದನ್ನು ಒಂದೇ ಕಲ್ಲಿನಲ್ಲಿ ಕೊರೆದು ನಿರ್ಮಿಸಿ ಮೇಲೆ ಮುಚ್ಚಿಗೆಯನ್ನು ಅದೇ ಕಲ್ಲಿನಿಂದ ಕೆತ್ತಿರುವರು. ಮಂಟಪದ ಮುಂದೆ ಪೂರ್ವದಿಕ್ಕಿನ ಕಡೆ ರಥವೀದಿಗೆ ಹೋಗುವ ದ್ವಾರವಿದೆ. ಈ ಎರಡನೆಯ ಪ್ರಾಕಾರಕ್ಕೆ ಒಟ್ಟುಮೂರು ಭಾಗದಲ್ಲಿ ಅಂದರೆ ಪೂರ್ವ, ಉತ್ತರ, ದಕ್ಷಿಣಕ್ಕೆ ದ್ವಾರಬಾಗಿಲುಗಳಿದ್ದು, ಇದರಲ್ಲಿ ಉತ್ತರಕ್ಕಿರುವ ದ್ವಾರಬಾಗಿಲಲ್ಲಿ ಎರಡು ದ್ವಾರಗಳಿವೆ. ಇದರ ಮೇಲಿನ ಮಂಟಪವು ಬಿದ್ದುಹೋಗಿದೆ. ದಕ್ಷಿಣ ದಿಕ್ಕಿಗಿರುವ ದ್ವಾರದಲ್ಲಿ ಮೂರು ದ್ವಾರಗಳಿದ್ದು ಮಧ್ಯದಲ್ಲಿ ಆರುಕಂಬಗಳಿಂದ ನಿರ್ಮಿಸಿದ ಚಪ್ಪಟೆಯ ಮಂಟಪವಿದೆ. ಇಂತಹ ನಾಲ್ಕು ಮಂಟಪಗಳು ಇಂದು ಸುರಕ್ಷಿತವಾಗಿವೆ.

ಬಾಲಕೃಷ್ಣ ದೇವಾಲಯ ಪೂರ್ವದ ಕೃಷ್ಣಬಜಾರನ್ನು ಶಾಸನಗಳಲ್ಲಿ ಕೃಷ್ಣಾಪುರಪೇಟೆ, ಬಾಲಕೃಷ್ಣ ದೇವರ ತೇರುಬೀದಿಯೆಂದು ಕರೆಯಲಾಗಿದೆ (ಛಾಯಾಚಿತ್ರ ೧೯). ಈ ಬಜಾರನ್ನು ಒಳಗೊಂಡಂತೆ ಇದರ ಸುತ್ತಲಿನ ಪ್ರದೇಶವನ್ನು ಕೃಷ್ಣಾಪುರ ಎಂದು ಹೆಸರಿಸಲಾಗಿತ್ತು. ಈ ಕೃಷ್ಣಾಪುರದ ವರ್ಣನೆಯನ್ನು ಕನಕದಾಸರು

"ತಂಡ ತಂಡದೆ ಕೃಷ್ಣನಗರಿಯೊಳ್ ಚಲಿಸುವ
ಮಂಡಳಿಕರ ಕಾಲಕಡಗ
ಪೆಂಡೆಯ ತಾಟೀಡಿ ರತ್ನಗಳಕ್ಕೆ
ದಂಡೆಯೊಳ್ ಸಿಕ್ಕಿ ಬಾಚುವರು." [೫೫] ಎಂದು ತಮ್ಮ ಮೋಹನತರಂಗಿಣಿ ಕಾವ್ಯದಲ್ಲಿ ಹೊಗಳುತ್ತಾರೆ.

ಇಲ್ಲಿ ಹೇಳಿರುವ ಕೃಷ್ಣನಗರಿ ಕೃಷ್ಣಾಪುರವೇ ಇರಬೇಕು. ಈ ಕೃಷ್ಣಾಬಜಾರವು ೫೭೦ ಮೀ. ಉದ್ದ ೪೯.೫ ಮೀ. ಅಗಲವಿದ್ದು ಇಕ್ಕೆಲಗಳಲ್ಲಿ ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ಸಾಲುಮಂಟಪಗಳನ್ನು ಕಟ್ಟಲಾಗಿದೆ. ಈ ಮಂಟಪಗಳು ಮೂರು ಕಂಬಗಳ ಸಾಲನ್ನು ಹೊಂದಿ ಎರಡು ಅಂಕಣಗಳನ್ನು ಹೊಂದಿವೆ. ಇವುಗಳಲ್ಲಿ ಶ್ರೀವೈಷ್ಣವರ ಚಿಹ್ನೆಗಳು ಕಂಡುಬರುವುದರಿಂದ ಇವುಗಳಲ್ಲಿ ಕೆಲವು ಶ್ರೀವೈಷ್ಣವರ ಮಠಗಳಾಗಿದ್ದಿರಬೇಕು. ಈ ಪೇಟೆಯು ತೇರುಬೀದಿಯಾಗಿದ್ದು, ಕೃಷ್ಣನ ವಿಗ್ರಹವನ್ನು ರಥದಲ್ಲಿಟ್ಟು ಈ ಬೀದಿಯಲ್ಲಿ ಉತ್ಸವ ನಡೆಸುತ್ತಿದ್ದರು. ಈ ಬೀದಿಯ ಕೊನೆಯಲ್ಲಿ ಉತ್ಸವ ಮಂಟಪ ಇಂದು ನಾಶವಾಗಿದ್ದು, ಕೇವಲ ಅವಶೇಷಗಳಿವೆ. ಈ ಕೃಷ್ಣಾಪುರ ಪೇಟೆಯು ಅಂದಿನ ಕಾಲದಲ್ಲಿ ಸಾಂಸ್ಕೃತಿಕ, ಧಾರ್ಮಿಕ ಆಚರಣೆಗಳ ಕೇಂದ್ರವಾಗಿರದೆ, ಪ್ರಮುಖ ವ್ಯಾಪಾರ ಕೇಂದ್ರವೂ ಆಗಿದ್ದಿತು. ಈ ಮಾರುಕಟ್ಟೆಯಲ್ಲಿ ದವಸದ ಅಂಗಡಿಗಳೇ ಹೆಚ್ಚಾಗಿದ್ದುದು ಅಚ್ಯುತರಾಯನು ಹಾಕಿಸಿರುವ ಶಾಸನವೊಂದರಲ್ಲಿ,

"- - - - - ಕೃಷ್ಣಾಪುರದ ಪೇಟೆಯ ದವಸದಂಗಡಿಗಳ ತೊಡೆಯದ ಬಗೆಯಲೂ

ಸಲುವ ಘುಟವರಹ" [೫೬] ಎಂದಿದೆ. ಈ ಅಂಗಡಿಗಳಿಂದ ಬರುತ್ತಿದ್ದ ಆದಾಯವನ್ನು ಕೃಷ್ಣದೇವಾಲಯಕ್ಕೆ ಬಿಡಲಾಗಿದ್ದಿತ್ತೆಂದು ಮೇಲಿನ ಶಾಸನದಿಂದ ತಿಳಿದುಬರುತ್ತದೆ. ಬಾಲಕೃಷ್ಣ ದೇವಾಲಯಕ್ಕೆ ಈ ಮಾರುಕಟ್ಟೆಯಿಂದ ಬರುತ್ತಿದ್ದ ಆದಾಯವು ಪ್ರಮುಖವಾದುದಾಗಿತ್ತು (ಚಿತ್ರ ೧). ರಾಯನ ಕಾಲದಲ್ಲಿ ಭೇಟಿ ನೀಡಿದ ಪಾಯೇಸನು, ಕೃಷ್ಣಾಪುರದ ಆದಾಯವು ಒಂದು ನೂರು ಬಂಗಾರದ ಪರ್ದಾವೋಗಳೆಂದು, ಈ ಆದಾಯವು ಕೃಷ್ಣದೇವಾಲಯಕ್ಕೆ ಸೇರುತ್ತಿತ್ತೆಂದು ಹೇಳಿರುವನು.[೫೭] ಕೃಷ್ಣಬಜಾರು ವಿಜಯನಗರದ ಪ್ರಮುಖ ಬಜಾರುಗಳಲ್ಲಿ ಒಂದಾಗಿದ್ದು ಸತ್ಯಸಂಗತಿ. ಇಂದು ಈ ಬಜಾರು ಗದ್ದೆಗಳಾಗಿ ಮಾರ್ಪಾಡು ಹೊಂದಿ ಮಂಟಪಗಳ ಕೆಲವೊಂದು ಭಾಗಗಳು ಬಿದ್ದುಹೋಗಿವೆ.

ರಥಬೀದಿಯ ಎಡಕ್ಕೆ ಉತ್ತರದಲ್ಲಿ ತೆಪ್ಪೋತ್ಸವ ಕೊಳವಿದೆ. ಮಧ್ಯದಲ್ಲಿರುವ ಉತ್ಸವ ಮಂಟಪವು ಅಧಿಷ್ಠಾನ, ನಾಲ್ಕುಚಿತ್ರ ಕಾಂಡಸ್ತಂಭ, ಮಂಜೂರ ಹಾಗೂ ಗೋಪುರವನ್ನು ಹೊಂದಿದೆ. ಈ ಮಂಟಪದ ಕಂಬಗಳಲ್ಲಿ ಶ್ರೀವೈಷ್ಣವ ಚಿಹ್ನೆಗಳು, ಸಂತರು, ದೇವ - ದೇವತೆಗಳ ಇನ್ನಿತರ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ಈ ತೆಪ್ಪಕೊಳದ ಸುತ್ತಲೂ ತೆರೆದ ಮಂಟಪಗಳಿದ್ದು, ಮಧ್ಯದಲ್ಲಿ ಪಶ್ಚಿಮಕ್ಕೆ ಒಂದು ದೊಡ್ಡದಾದ ಮಂಟಪದ ವೇದಿಕೆಯನ್ನು ಹೊಂದಿದೆ (ಛಾಯಾಚಿತ್ರ ೨೦). ಈ ವೇದಿಕೆಯು ನಾಲ್ಕು ಕಂಬಗಳಿಂದ ಕೂಡಿದ್ದು ಇದರಲ್ಲಿ ಉಬ್ಬುಶಿಲ್ಪಗಳನ್ನು ಅಲಂಕರಿಸಲಾಗಿದೆ. ಬಜಾರದ ಬಲಭಾಗದ ಒಂದು ಮಂಟಪವು ವಿಶಾಲವಾಗಿದ್ದು, ಮುಂಭಾಗದ ಕಂಬಗಳಲ್ಲಿ ವಿಷ್ಣು, ಬಾಲಕೃಷ್ಣ, ಲಕ್ಷ್ಮೀನರಸಿಂಹ ಮತ್ತು ಆಳ್ವಾರನೆಂದು ಗುರುತಿಸಬಹುದಾದ ಶಿಲ್ಪಗಳಿವೆ. ಇದೊಂದು ಶ್ರೀವೈಷ್ಣವ ಮಠವಾಗಿರಬೇಕು. ಆಳ್ವಾರರು ಈ ಪಂಥದ ಅನುಯಾಯಿಗಳಾಗಿದ್ದು, ಅವರು ಇಂತಹ ಮಠಗಳಲ್ಲಿ ವಾಸಿಸುತ್ತಿದ್ದರು.

ಬಾಲಕೃಷ್ಣದೇವಾಲಯವು ವಿಜಯನಗರದ ಪ್ರಮುಖ ದೇವಾಲಯಗಳಲ್ಲಿ ಒಂದಾಗಿತ್ತು. ಇದು ಕೃಷ್ಣದೇವರಾಯನಿಂದ ಕಟ್ಟಲ್ಪಟ್ಟು ಉಳಿದ ಅರಸರ ಪ್ರೋತ್ಸಾಹ ಪಡೆದು ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ


ಚಟುವಟಿಕೆಗಳಲ್ಲಿ ಮುಖ್ಯಪಾತ್ರ ನಿರ್ವಹಿಸಿದ್ದಿತು. ಈ ದೇವಾಲಯದ ಧಾರ್ಮಿಕ ವಿಧಿ ವಿಧಾನಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಪ್ರಮುಖವಾಗಿ ಹಲವು ರೀತಿಯ ಪೂಜೆ - ಉತ್ಸವಗಳು ವಿಶೇಷವಾಗಿ ನಡೆಯುತ್ತಿದ್ದವು.

ಈ ದೇವಾಲಯದಲ್ಲಿ ನಿತ್ಯಪೂಜೆ, ನೈಮಿತ್ತಿಕ ಪೂಜೆ, ಅಂಗಭೋಗ, ರಂಗಭೋಗ, ಪಂಚಪರ್ವ, ಉಯ್ಯಾಲೆ ಉತ್ಸವ, ಕೊಡೆತಿರುನಾಳು, ಏಕಾಂತದ ಅವರಸದ ಪರಮಾನ್ನದ ನೈವೇದ್ಯ, ಶ್ರೀಕಾರ್ಯ, ದೀಪಾರಾಧನೆ, ಫಲಪೂಪಾದಿ ನೈವೇದ್ಯ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರದ ರಥೋತ್ಸವಗಳು ನಡೆಯುತ್ತಿದ್ದವು.[೫೮] ನಿತ್ಯಪೂಜೆಯನ್ನು ಪ್ರತಿದಿನ ಮೂರು ಬಾರಿ ಮಾಡಿದರೆ ನೈಮಿತ್ತಿಕಗಳು ವಿಶೇಷ ದಿನಗಳಂದು ನಡೆಯುತ್ತಿದ್ದವು. ಅಂಗಭೋಗವು ದೇವರ ಸನ್ನಿಧಿಯಲ್ಲಿ ಪೂಜೆಮಾಡುವಾಗ ನಡೆಸುವ ಸೇವೆಯಾಗಿ ಬಳಕೆಯಲ್ಲಿದ್ದಿತು. ರಂಗಭೋಗವು ದೇವರ ಪೂಜೆಯಾದ ನಂತರ ನವರಂಗ ಮತ್ತು ಮಹಾಮಂಟಪದಲ್ಲಿ ನಡೆಯುವ ಸೇವೆಯಾಗಿತ್ತು. ಇದರಲ್ಲಿ ನೃತ್ಯ, ಸಂಗೀತ, ಗಾಯನಕ್ಕೆ ಹೆಚ್ಚಿನ ಮಹತ್ವವಿತ್ತಾದರೂ ಇದರಲ್ಲಿ ಸ್ತ್ರೀಪುರುಷರೀರ್ವರು ಭಾಗವಹಿಸುತ್ತಿದ್ದರು. ಈ ದೇವಾಲಯದಲ್ಲಿ ರಂಗಭೋಗದ ಸೇವೆಯ ಪಾತ್ರದ ಬೆಂಪಾಯಿ ಎನ್ನುವ ಕಲಾವಿದೆಗೆ ಸ್ಥಾನದವರು ಭೂಮಿಯನ್ನು ದಾನ ನೀಡಿರುವುದು ಅಲ್ಲಿಯ ಒಂದು ಶಾಸನದಿಂದ ತಿಳಿದುಬರುತ್ತದೆ.[೫೯] ಅಲ್ಲದೆ ಪಂಚಪರ್ವ ದಿನಗಳಲ್ಲಿ ಪೂಜೆಯನ್ನು ವಿಜೃಂಭಣೆಯಿಂದ ನಡೆಸಲಾಗುತ್ತಿದ್ದಿತು. ದೇವರ ಉತ್ಸವಮೂರ್ತಿಯನ್ನು ಉಯ್ಯಾಲೆಯ ಮಂಟಪದಲ್ಲಿ ಕೂಡಿಸಿ ಉತ್ಸವ ನಡೆಸಲಾಗುತ್ತಿತ್ತು. ದೇವರ ನೈವೇದ್ಯಕ್ಕೆ ಹಣ್ಣುಹಂಪಲುಗಳನ್ನು ಸಮರ್ಪಿಸಿ, ಆ ನೈವೇದ್ಯ ಪ್ರಸಾದವನ್ನು ಪಂಚನಾಥ, ಪರದೇಶಿ ಶ್ರೀವೈಷ್ಣವರಿಗೆ ನೀಡಬೇಕೆಂದು ಭಕ್ತಾದಿಗಳು ಆಜ್ಞೆಮಾಡಿ ಅದಕ್ಕಾಗಿ ಹಲವು ದಾನದತ್ತಿಗಳನ್ನು ನೀಡಿದ್ದುದು ಕಂಡುಬರುತ್ತದೆ.[೬೦] ದೇವರ ಮುಂದೆ ದೀಪಾರಾಧನೆಯು ಸದಾ ಉರಿಯಲು ಹಲವು ಭಕ್ತಾದಿಗಳು ತಮ್ಮ ದತ್ತಿಯಲ್ಲಿ ಈ ಸೇವೆಯನ್ನು ಕೂಡಾ ಸಲ್ಲಿಸುತ್ತಿದ್ದರು. ನೈಮಿತ್ತಿಕ ಉತ್ಸವ ಪೌರ್ಣಿಮಿ ಮತ್ತು ವಿಶೇಷ ದಿನಗಳಲ್ಲಿ ನಡೆಯುವ ಪೂಜೆಯಾಗಿತ್ತು. ಹಲವು ಗಂಡಾಂತರ ಸಂದರ್ಭಗಳಲ್ಲಿ ಅದರ ನಿವಾರಣೆಗಾಗಿ ನೈಮಿತ್ತಿಕ ಪೂಜೆ, ಉತ್ಸವಗಳನ್ನು ನಡೆಸುತ್ತಿದ್ದರು. ವರ್ಷಕ್ಕೊಮ್ಮೆ ದೇವಾಲಯದಲ್ಲಿ ರಥೋತ್ಸವವು ಜರುಗುತ್ತಿದ್ದಿತು (ಚಿತ್ರ ೨). ಇದನ್ನು ದೇವಾಲಯದ ಮುಂದಿರುವ ಬಜಾರದ ಮಧ್ಯದ ಬೀದಿಯಲ್ಲಿ ನಡೆಸಲಾಗುತ್ತಿತ್ತು. ರಥೋತ್ಸವವನ್ನು ಬಹಳ ವಿಜೃಂಭಣೆಯಿಂದ ನಡೆಸುತ್ತಿದ್ದರು. ರಥಕ್ಕೆ ಮಣಿ, ವಸ್ತ್ರಗಳಿಂದ ಸಿಂಗರಿಸಿ ರಥ ಎಳೆಯಲಾಗುತ್ತಿದ್ದಿತು. ರಥೋತ್ಸವ ಕಾರ್ಯಕ್ರಮವು ಸಾಂಸ್ಕೃತಿಕವಾಗಿ ಬಹಳ ಮಹತ್ವವನ್ನು ಪಡೆದು ನಾಡಿನಿಂದ ಹಲವಾರು ಜನ ಭಕ್ತರು ಆಗಮಿಸಿ ಸಂಭ್ರಮದಿಂದ ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದರು.

ಅಲ್ಲದೆ ಕೃಷ್ಣದೇವಾಲಯವು ಬಹಳ ದೊಡ್ಡದಾದ ಸಂಸ್ಥೆಯಂತೆ ಕೆಲಸವನ್ನು ನಿರ್ವಹಿಸುತ್ತಿದ್ದಿತು. ದೇವರ ಪೂಜೆಯ ನಾನಾ ವಿಧಿಗಳನ್ನು ಪೂರೈಸುವುದಕ್ಕೆ ದೇವಾಲಯದ ಪರಿಚಾರಕವರ್ಗವು ದೊಡ್ಡ ಸಂಖ್ಯೆಯಲ್ಲಿರುತ್ತಿತ್ತು. ಇದರಲ್ಲಿ ನಾನಾ ರೀತಿಯ ಕೆಲಸ ಕಾರ್ಯಗಳಿಗೆ ಪ್ರತ್ಯೇಕವಾದ ಸೇವಕರಿರುತ್ತಿದ್ದರು. ಇವರಲ್ಲಿ ಪ್ರಮುಖ ಹಾಗೂ ಮುಖ್ಯಸ್ಥನು ಇರುತ್ತಿದ್ದು ಇವನನ್ನು ದೇವಾಲಯದ ನಿರ್ಮಾಪಕನು ನೇಮಿಸುತ್ತಿದ್ದನು. ದೇವಾಲಯದ ಕೆಲಸಕಾರ್ಯಗಳಿಗನುಸಾರವಾಗಿ ಸೇವಕರನ್ನು ಸ್ಥಾನಿಕನು ಆರಿಸುತ್ತಿದ್ದನು. ಮುಖ್ಯವಾಗಿ ಶಾಸನಗಳಲ್ಲಿ ಹೇಳಿದ



ಛಾ ಚಿ ೧೧. ಬಾಲಕೃಷ್ಣದೇವಾಲಯದ ಸಮಗ್ರ ಚಿತ್ರಣ, ಹಂಪಿ




ನಕ್ಷೆ- ೨ ಬಾಲಕೃಷ್ಣ ದೇವಾಲಯದ ತಲನಕ್ಷೆ





ಛಾಯಾಚಿತ್ರ-೧೨ ಬಾಲಕೃಷ್ಣ ವಿಗ್ರಹ





ನಕ್ಷೆ-೪ ಅಧಿಷ್ಠಾನ, ಬಾಲಕೃಷ್ಣ ದೇವಾಲಯ



ಭಾ ಚಿ ೧೩. ನವರಂಗದ ಕೋಷ್ಟಕ
ಹಂಪಿ




ಭಾ ಚಿ ೧೪. ನವರಂಗದ ಸ್ತಂಭ
ಹಂಪಿ



ಭಾ ಚಿ ೧೫. ಸಿಂಹವ್ಯಾಳಿ, ಹಂಪಿ







ನಕ್ಷೆ-೫ ಮಹಾಮಂಟಪದ ಸ್ತಂಭಗಳು, ಬಾಲಕೃಷ್ಣ ದೇವಾಲಯ



ಛಾ ಚಿ ೧೬. ರಾಧ ದೇವಾಲಯ, ಹಂಪಿ



ಛಾ ಚಿ ೧೭. ಪರಿವಾರ ದೇವಾಲಯ, ಹಂಪಿ



ಭಾ ಚಿ ೧೮. ಮುಖ್ಯ ದ್ವಾರಗೋಪುರ, ಹಂಪಿ



ಭಾ ಚಿ ೧೯. ಬಜಾರು, ಬಾಲಕೃಷ್ಣ ದೇವಾಲಯ, ಹಂಪಿ



ಚಿತ್ರ-೧ ದವಸ ಧಾನ್ಯಗಳ ಮಾರುಕಟ್ಟೆ - ಬಾಲಕೃಷ್ಣ ದೇವಾಲಯ, ಹಂಪಿ



ಛಾ ಚಿ ೨೦. ಪುಷ್ಕರಿಣಿ, ಬಾಲಕೃಷ್ಣ ದೇವಾಲಯ, ಹಂಪಿ



ಚಿತ್ರ-೨ ರಥೋತ್ಸವ - ಬಾಲಕೃಷ್ಣ ದೇವಾಲಯ, ಹಂಪಿ

ಪರಿಚಾರಕರೆಂದರೆ ಸ್ಥಾನಿಕ, ಪುರಾಣ ಹೇಳುವವ, ಅರ್ಚಕ, ಜ್ಯೋತಿಷ್ಯ, ಪವಮಾನಾಭಿಷೇಕದ ಸೇವಕ, ಘಳಿಯಾರದವ, ಮಂತ್ರಪುಷ್ಪದವ, ವಿದ್ವಾನ್‌ಗಳು, ಆಚಾರ್ಯ, ಇತಿಹಾಸದವರು, ಸೇನಬೋವ ಇತ್ಯಾದಿ ಸೇವಕರು ತಮ್ಮ ಸೇವೆಯನ್ನು ಈ ದೇವಾಲಯಕ್ಕೆ ಸಲ್ಲಿಸುತ್ತಿದ್ದರು.[೭೧]

ಅಲ್ಲದೆ ದೇವಾಲಯದ ಆಡಳಿತವನ್ನು ನಡೆಸಿಕೊಂಡು ಹೋಗಲು ಒಂದು ಮಂಡಳಿಯು ಇದ್ದಿತು. ಈ ಮಂಡಳಿಯಲ್ಲಿ ಹಲವು ಜನ ಸದಸ್ಯರಿರುತ್ತಿದ್ದುದು ಶಾಸನದಲ್ಲಿ ಉಲ್ಲೇಖವಾಗಿದೆ.[೭೨] ಮಂಡಳಿಯ ಸದಸ್ಯರಲ್ಲಿ ಶಿಲಾದೀಕ್ಷಿತ, ನರಸಿಂಹದೀಕ್ಷಿತ, ಭಾನುಭಟ್ಟ, ವಿರೂಪಾಕ್ಷಭಟ್ಟ, ಲಿಂಗಭಟ್ಟರು ಪ್ರಮುಖರಾಗಿದ್ದಾರೆ. ಇವರಿಗೆ ದಾನಿಗಳು ಹಲವು ದತ್ತಿಗಳನ್ನು ನೀಡುತ್ತಿದ್ದುದರಿಂದ ತಮ್ಮ ಜೀವನೋಪಾಯವನ್ನು ಸಾಗಿಸಿಕೊಂಡು ದೇವಾಲಯದ ಆಡಳಿತವನ್ನು ನಡೆಸುತ್ತಿದ್ದರು.

ಒಟ್ಟಿನಲ್ಲಿ ಕೃಷ್ಣಾಪುರದ ಅತಿದೊಡ್ಡ ದೇವಾಲಯಗಳಲ್ಲಿ ಒಂದಾದ ಬಾಲಕೃಷ್ಣ ದೇವಾಲಯವು ಧಾರ್ಮಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಶ್ರೀಮಂತಿಕೆಯ ದೇವಾಲಯವಾಗಿ ಪ್ರಸಿದ್ಧಿ ಹೊಂದಿತ್ತು. ಈ ದೇವಾಲಯವು ಕಲೆಯಲ್ಲಿ ಶ್ರೀಮಂತವಾಗಿದ್ದುದಲ್ಲದೆ, ದೊಡ್ಡ ಮಾರುಕಟ್ಟೆಯನ್ನು ಒಳಗೊಂಡಿದ್ದಿತು. ಇಂದು ಈ ತೇರುಬೀದಿಯು ತೋಟವಾಗಿ ಮಾರ್ಪಟ್ಟು ದೇವಾಲಯವು ಅಜೀರ್ಣಸ್ಥಿತಿಯಲ್ಲಿ ಉಳಿದುಕೊಂಡಿದ್ದರೂ ಕಲಾತ್ಮಕವಾಗಿ ಸುಂದರವಾಗಿ ಕಂಡುಬರುತ್ತದೆ.

೪. ಕೃಷ್ಣ ದೇವಾಲಯ, ಕೆಸರಟ್ಟಿ

ರಾಯನ ಆಳ್ವಿಕೆಯಲ್ಲಿ ಕ್ರಿ.ಶ. ೧೫೨೭ರಲ್ಲಿ ಶಾಂಡಿಲ್ಯಗೋತ್ರದ ರಾಯಶ್ರೀಭಟರ ಕೊಂಡಾಜೆಟಿಯ ಮಗ ಕೃಷ್ಣಯ್ಯನು ಕೆಸರಟ್ಟಿಯಲ್ಲಿ ಕೃಷ್ಣದೇವರನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ನಿರ್ಮಿಸಿದನು (ಛಾಯಾಚಿತ್ರ ೨೧). ಈ ದೇವಾಲಯದ ಸ್ಥಾನಿಕರ ಪದವಿಯನ್ನು ಕೊಮಾರಪೆರುಮಾಳೆ, ದೇವಪೆರುಮಾಳೆ, ರಾಮಾಂಜಯ್ಯನವರಿಗೆ ನೀಡಿ ಇವರು ತನ್ನ ಮಾತಿನೊಳಗೆ ನಡೆಯಬೇಕೆಂದು ಆಜ್ಞೆಮಾಡಿ ಹಾಕಿಸಿದ ಶಾಸನವು ಇಂದು ದೇವಾಲಯದ ಮುಂದೆ ಬಿದ್ದಿದೆ.[೭೩] ಇದೇ ಶಾಸನದಲ್ಲಿ ಹೇಳಿದ ಹಾಗೇ ಭಾರದ್ವಾಜಗೋತ್ರದ ಜೆಟಯನ ಮಗ ತಿಮ್ಮಯ್ಯನು ಗೌತಮಗೋತ್ರದ ಕೋಕಜೆಟಿಯ ಮಗ ಹಜಪಯ್ಯ ಇವರಿಬ್ಬರು ಕೃಷ್ಣದೇವರ ಅಮೃತಪಡಿಗೆ ಕೊಟ್ಟ ಭೂದಾನ. ದೇವಾಲಯದ ಆದಾಯದಲ್ಲಿ ದೇವರಿಗೆ ಒಂದುಪಾಲು, ಸ್ಥಾನಿಕರಿಗೆ ಎರಡು ಪಾಲು ಇದರಲ್ಲಿ ಪಂಚಪರ್ವ ನೈವೇದ್ಯ ಮಾಡಿಕೊಂಡು ಬರಲು ಈ ಶಾಸನದಲ್ಲಿ ವಿವರವಾಗಿ ಹೇಳಿದೆ.


ವಿಜಯನಗರ ಕಾಲದಲ್ಲಿ ನಿರ್ಮಿಸಿದ ಈ ದೇವಾಲಯವು ಸಂಪೂರ್ಣವಾಗಿ ನಾಶಹೊಂದಿದೆ. ಈ ದೇವಾಲಯವನ್ನು ಕ್ರಿ.ಶ. ೧೯೭೭ರಲ್ಲಿ ಆಧುನಿಕವಾಗಿ ಜೀರ್ಣೋದ್ಧಾರ ಮಾಡಲಾಗಿದ್ದು, ಸಂಪೂರ್ಣವಾಗಿ ಇಂದು ಬದಲಾವಣೆಗೊಂಡ ದೇವಾಲಯವಾಗಿದೆ. ಇಂದು ಗರ್ಭಗುಡಿಯಲ್ಲಿರುವ ಕೃಷ್ಣನ ವಿಗ್ರಹ, ಮುಂದಿನ ಪಾದಕಟ್ಟೆ, ಶಾಸನದ ಬಂಡೆಯನ್ನು ಹೊರತುಪಡಿಸಿ ಉಳಿದೆಲ್ಲಾವನ್ನು ಊರಿನ ಭಕ್ತರೆಲ್ಲಾ ಸೇರಿ ಆಧುನಿಕರಣಗೊಳಿಸಿರುವರು. ಗರ್ಭಗುಡಿಯಲ್ಲಿರುವ ಕೃಷ್ಣ ವಿಗ್ರಹವು ಕಪ್ಪು ಕಲ್ಲಿನಲ್ಲಿ ಕೆತ್ತಿದ ಶಿಲ್ಪವಾಗಿದೆ. ನಾಲ್ಕುಕೈಗಳುಳ್ಳ ಶಿಲ್ಪವು ಮುಂದಿನ



ಭಾ ಚಿ ೨೧. ಕೃಷ್ಣ ದೇವಾಲಯ, ಕೆಸರಟ್ಟಿ



ಭಾ ಚಿ ೨೨. ಕೃಷ್ಣ ವಿಗ್ರಹ, ಕೆಸರಟ್ಟಿ



ನಕ್ಷೆ- ೬ ಕೃಷ್ಣ ದೇವಾಲಯದ ತಲನಕ್ಷೆ

ಎರಡು ಕೈಗಳಲ್ಲಿ ಕೊಳಲು ಹಿಡಿದುಕೊಂಡಿರುವನು (ಛಾಯಾಚಿತ್ರ ೨೨). ಹಿಂದಿನ ಎರಡು ಕೈಗಳಲ್ಲಿ ಶಂಖಚಕ್ರಗಳನ್ನು ಹಿಡಿದಿದ್ದಾನೆ. ಶಿಲ್ಪವು ಸುಂದರವಾಗಿದೆ. ಹಿಂದೆ ಪ್ರಭಾವಳಿ ಇದ್ದು ಮೇಲೆ ಐದು ಹೆಡೆಗಳುಳ್ಳ ನಾಗರಶಿಲ್ಪವಿದೆ. ಮೂರ್ತಿಯ ಕಾಲ ಬಳಿ ಎಡಬಲಕ್ಕೆ ಎತ್ತಿನ ಮೇಲೆ ಸ್ತ್ರೀಯರು ಕೈಯಲ್ಲಿ ಗಜವನ್ನು ಹಿಡಿದುಕೊಂಡು ಕುಳಿತಿರುವರು. ಕೃಷ್ಣನ ಮೂರ್ತಿಯು ಮೂರು ಅಡಿ ಎತ್ತರವಿದ್ದು, ಪೀಠ ಸಾಮಾನ್ಯವಾಗಿದೆ.


ಕೃಷ್ಣದೇವಾಲಯವನ್ನು ಊರಿನ ಮಧ್ಯದಲ್ಲಿ ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿಸಿರುವರು. ಸಾದಾ ರೀತಿಯಲ್ಲಿಯ ಅಧಿಷ್ಠಾನದ ಮೇಲೆ ಚಚ್ಚೌಕದ ರೀತಿಯಲ್ಲಿ ಗರ್ಭಗುಡಿಯನ್ನು ನಿರ್ಮಿಸಿದ್ದಾರೆ. ದೇವಾಲಯವು ಪೂರ್ವಕ್ಕೆ ಮುಖಮಾಡಿದೆ (ನಕ್ಷೆ ೬). ಗರ್ಭಗುಡಿಯ ಮೇಲೆ ಇಂದು ಮೆಟ್ಟಲುಗಳ ರೀತಿಯಲ್ಲಿ ಕೆಳಗಿನಿಂದ ಮೇಲಕ್ಕೆ ಹೋದಂತೆ ಚಿಕ್ಕದಾಗಿ ಕೊನೆಯಲ್ಲಿ ಕುಂಭವನ್ನು ಮಾಡಿ ಅದರ ಮೇಲೆ ಕಳಸವನ್ನು ಇಟ್ಟಿರುವುದು ಕಂಡುಬರುತ್ತದೆ. ದೇವಾಲಯದ ಮುಂದಿನ ಭಾಗದಲ್ಲಿ ಎತ್ತರವಾದ ಕಲ್ಲಿನ ಕಟ್ಟೆ ಇದೆ. ಇದರ ಮುಂದೆ ಪಾದಗಟ್ಟೆ ಹಾಗೂ ಶಾಸನದ ಬಂಡೆಯು ಬಿದ್ದಿರುವವು. ಕೃಷ್ಣಾಜನ್ಮಾಷ್ಟಮಿಯಲ್ಲಿ ಮಾತ್ರ ಭಕ್ತಾದಿಗಳು ಬಂದು ವಿಶೇಷವಾಗಿ ಪೂಜೆಯನ್ನು ಸಲ್ಲಿಸುತ್ತಾರೆ. ಈ ಮೊದಲು ಕಟ್ಟಿಗೆಯ ಬಾಗಿಲುವಾಡವು ಇದ್ದುದು ಊರಿನ ಪ್ರಮುಖರಿಂದ ತಿಳಿದ ವಿಷಯವಾಗಿದೆ.

೫. ಹುಡೇದ ಹನುಮಪ್ಪ ದೇವಾಲಯ, ಶಿರುಗುಪ್ಪಿ


ಹುಡೇದ ಹನುಮಪ್ಪ ದೇವಾಲಯವು ದಕ್ಷಿಣ ದಿಕ್ಕಿಗೆ ಮುಖಮಾಡಿದ ದೇವಾಲಯವಾಗಿದ್ದು, ಇದು ಚೌಕಕಾರದ ಗರ್ಭಗುಡಿಯನ್ನು ಹೊಂದಿ ಸಮನಾಂತರವಾಗಿದೆ. ಈ ದೇವಾಲಯವು ಸಮನಾಂತರವಾದ ಗರ್ಭಗುಡಿ, ತೆರೆದ ಮಂಟಪವನ್ನು ಹೊಂದಿ, ಮುಂದೆ ದೀಪಸ್ತಂಭವನ್ನು ನಿಲ್ಲಿಸಲಾಗಿದೆ (ನಕ್ಷೆ ೭). ಈ ದೇವಾಲಯವು ಕ್ರಿ.ಶ. ೧೫೧೯ರಲ್ಲಿ ಕೃಷ್ಣದೇವರಾಯನ ಬಂಟನಾದ ಬಾಗಿಲ ತಿಮ್ಮಪ್ಪನಾಯಕನು ಅರಸನಿಗೆ ಮತ್ತು ತನ್ನ ತಂದೆ ತಿರುಮಲಪ್ಪನಿಗೆ ಪುಣ್ಯವಾಗಲೆಂದು ದೇವಾಲಯವನ್ನು ಕಟ್ಟಿಸಿ, ಹನುಮಪ್ಪನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸಿದನು.[೬೪] ಇದನ್ನು ಉಲ್ಲೇಖಿಸುವ ಶಾಸನವು ದೇವಾಲಯದ ತೆರೆದ ಮಂಟಪದ ಕಟ್ಟಿಗೆ ತೊಲೆಯ ಮೇಲೆ ಕೆತ್ತಲಾಗಿದೆ.

ಮೂಲ ದೇವಾಲಯವು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ್ದು, ದೇವಾಲಯದಲ್ಲಿ ವಿಜಯನಗರ ಶೈಲಿಯ ಯಾವುದೇ ಲಕ್ಷಣಗಳು ಕಂಡು ಬರುವುದಿಲ್ಲ (ಛಾಯಾಚಿತ್ರ ೨೩). ಗರ್ಭಗುಡಿಯಲ್ಲಿ ಗೋಡೆಗೆ ಹೊಂದಿಕೊಂಡ ಹಾಗೇ ಕಟ್ಟಿಗೆಯ ಎಂಟು ಕಂಬಗಳಿವೆ. ಇವುಗಳ ಮೇಲೆ ಸರಳ ರೀತಿಯ ಕಟ್ಟಿಗೆಯ ಬೋದಿಗೆಯಿದ್ದು, ಮೇಲೆ ಕಟ್ಟಿಗೆಯ ತೊಲೆಗಳನ್ನು ಜೋಡಿಸಲಾಗಿದೆ. ಇದರ ಮೇಲಿನ ಛಾವಣಿಯು ಕಟ್ಟಿಗೆ ಮತ್ತು ಕಪ್ಪನೆಯ ಬಂಡೆಗಳಿಂದ ಮುಚ್ಚಿ ಮೇಲೆ ಮಣ್ಣನ್ನು ತುಂಬಲಾಗಿದೆ.

ಗರ್ಭಗುಡಿಯಲ್ಲಿರುವ ಮೂಲಮೂರ್ತಿಯ ಕೆಳಗೆ ಒಂದೂವರೆ ಅಡಿ ಎತ್ತರದ ಪೀಠವಿದ್ದು, ಈ ಪೀಠವನ್ನು ಮೂರುಭಾಗಗಳಾಗಿ ಕೆತ್ತಿರುವರು. ಈ ಭಾಗದಲ್ಲಿ ಪಾದುಕಾ, ಪದ್ಮ, ಕಂಪ, ತ್ರಿಪಟ್ಟಕುಮುದ, ಕಪೋತದ



ನಕ್ಷೆ- ೭ ಹನುಮಪ್ಪ ದೇವಾಲಯದ ತಲನಕ್ಷೆ





ಛಾ ಚಿ ೨೩. ಉಡೇದ ಹನುಮಪ್ಪ ದೇವಾಲಯ, ಶಿರಗುಪ್ಪಿ



ಛಾ ಚಿ ೨೪. ಹನುಮಪ್ಪ ವಿಗ್ರಹ, ಶಿರಗುಪ್ಪಿ



ಛಾ ಚಿ ೨೫. ದೀಪಸ್ತಂಭ, ಹನುಮಪ್ಪ ದೇವಾಲಯ, ಶಿರಗುಪ್ಪಿ

ಭಾಗಗಳಿದ್ದು ಮಧ್ಯದಲ್ಲಿ ಏಳು ಶಿಲ್ಪಗಳಿವೆ. ಇವು ಉಬ್ಬುಶಿಲ್ಪಗಳಾಗಿದ್ದು ಅಲ್ಪಸ್ವಲ್ಪ ಕಂಡುಬರುತ್ತವೆ. ಮೂಲಮೂರ್ತಿಯು ದಕ್ಷಿಣದಿಕ್ಕಿಗೆ ಮುಖಮಾಡಿ ಓರೆಯಾಗಿ ನಿಂತಿದ್ದು, ಎಡ ಮತ್ತು ಬಲಕಾಲು ಹಿಂದು ಮುಂದು ಇರುವುದು ಕಂಡುಬರುತ್ತದೆ (ಛಾಯಾಚಿತ್ರ ೨೪). ಮುಖವು ಎಡಕ್ಕೆ ತಿರುಗಿದ್ದು ಕಣ್ಣನ್ನು ಮುಚ್ಚಿರುವುದು. ಬಾಲವು ತಲೆಯ ಮೇಲಿಂದ ಎಡ ನಡುವಿನ ಭಾಗಕ್ಕೆ ಬಾಗಿ ಸುರಳಿಯಾಕಾರದಲ್ಲಿದೆ. ಈ ಮೂರ್ತಿಯನ್ನು ಐದು ಅಡಿ ಎತ್ತರದ ಒಂದೇ ಬಂಡೆಯಲ್ಲಿ ಕೆತ್ತಲಾಗಿದ್ದು ಉಬ್ಬುಶಿಲ್ಪಮೂರ್ತಿಯಾಗಿದೆ. ಕಾಲಲ್ಲಿ ಕಡಗಗಳಿದ್ದು, ಮೈಮೇಲೆ ಮಾಲೆ, ಸೊಂಟಕ್ಕೆ ವಸ್ತ್ರ, ಕೈಗಳ ತೋಳಲ್ಲಿ ಕಡಗ ಹಾಗೂ ಕೈಗಳಲ್ಲಿ ಕಡಗಗಳಿದ್ದು, ಬಲಗೈಯು ಅಭಯಹಸ್ತದಲ್ಲಿದೆ. ಎಡಗೈಯು ಮೈಮೇಲಿನ ಮಾಲೆಯನ್ನು ಸೊಂಟದ ಮೇಲೆ ಹಿಡಿದುಕೊಂಡಿದೆ. ಕಿವಿಯಲ್ಲಿ ಓಲೆ ಮತ್ತು ತಲೆಯ ಮೇಲೆ ಪೇಟಾದ ಅಲಂಕರಣವನ್ನು ಖಂಡರಿಸಲಾಗಿದೆ. ಮೂರ್ತಿಯನ್ನು ನಯವಾಗಿ ಕೆತ್ತಲಾಗಿದ್ದು ಬಹು ಸುಂದರವಾಗಿ ಮೂಡಿಬಂದಿದೆ.

ಗರ್ಭಗುಡಿಯ ಬಾಗಿಲು ಚೌಕಟ್ಟನ್ನು ಕಟ್ಟಿಗೆಯಿಂದ ನಿರ್ಮಿಸಿ, ತೋಳನ್ನು ಎರಡು ಪಟ್ಟಿಗಳಿಂದ ಕೆತ್ತಲಾಗಿದ್ದು, ಲಲಾಟಬಿಂಬದಲ್ಲಿ ಪದ್ಮದಳವಿದೆ. ಲಲಾಟಬಿಂಬದ ಮೇಲೆ ಉತ್ತರಾಂಗದಲ್ಲಿ ಅಲಂಕರಣೆಯನ್ನು ಮಾಡಲಾಗಿದೆ. ಗರ್ಭಗೃಹದ ಮುಂದೆ ನಾಲ್ಕು ಕಂಬಗಳ ತೆರೆದ ಮಂಟಪವಿದೆ. ಈ ಕಂಬಗಳು ಕಟ್ಟಿಗೆಯದಾಗಿದ್ದು ಮುಂದಿನ ಎರಡು ಕಂಬಗಳನ್ನು ಚಿತ್ರಕಾಂಡಸ್ತಂಭಗಳ ರೀತಿಯಲ್ಲಿ ಕೆತ್ತಿರುವರು. ಇವುಗಳಲ್ಲಿ ಅರಳಿದ ಪದ್ಮದಳಗಳ ಅಲಂಕರಣೆಯನ್ನು ಮಾಡಲಾಗಿದ್ದು, ಬೋದಿಗೆಯನ್ನು ನಿರ್ಮಿಸಿರುವರು. ಮಂಟಪದ ಮೇಲೆ ಕಟ್ಟಿಗೆ ಮತ್ತು ಬಂಡೆಗಳ ಛಾವಣಿಯಿದೆ. ಮಂಟಪದ ಬಲಭಾಗ ಕಂಬದ ತೊಲೆಯ ಮೇಲೆ ಶಾಸನವನ್ನು ಕೆತ್ತಲಾಗಿದ್ದು, ಇಂದಿಗೂ ಉಳಿದುಕೊಂಡುಬಂದಿದೆ. ಈ ಮಂಟಪದ ಎಡ ಮತ್ತು ಬಲಭಾಗದಲ್ಲಿ ನಾಲ್ಕು ಗೂಡುಗಳನ್ನು ಬಿಡಲಾಗಿದೆ. ಈ ದೇವಾಲಯದ ಗರ್ಭಗುಡಿಯ ಮೇಲೆ ಯಾವುದೇ ಶಿಖರವಿರುವುದಿಲ್ಲ. ಇಂದು ದೇವಾಲಯದ ಗೋಡೆಯು ಅಜೀರ್ಣ ಸ್ಥಿತಿಯಲ್ಲಿದ್ದು, ಎಡ ಮತ್ತು ಬಲಭಾಗದಲ್ಲಿ ವೀರಗಲ್ಲುಗಳನ್ನು ನಿಲ್ಲಿಸಿರುವರು. ದೇವಾಲಯದ ಮುಂದಿನ ಭಾಗದಲ್ಲಿ ಎತ್ತರದ ವೇದಿಕೆಯ ಮೇಲೆ ಹತ್ತು ಅಡಿಗಳ ಎತ್ತರದ ಕಣಶಿಲಾ ಸ್ತಂಭವಿದ್ದು, ಮೇಲೆ ಫಲಕವನ್ನು ಇಟ್ಟು ಅದರ ಮಧ್ಯಭಾಗದಲ್ಲಿ ಕಬ್ಬಿಣದ ದೀಪವನ್ನು ಇಟ್ಟಿರುವರು (ಛಾಯಾಚಿತ್ರ ೨೫). ಈ ಕಂಬದ ಮೂರು ಭಾಗಗಳಲ್ಲಿ ಎಂಟುಪಟ್ಟಿಕೆಗಳನ್ನು ಕೆತ್ತಿರುವರು.

೬. ಪ್ರಸನ್ನಕೇಶವ ದೇವಾಲಯ, ಕೊಮ್ಮೂರು

ಪ್ರಸನ್ನಕೇಶವಪೆರುಮಾಳ್ ದೇವಾಲಯವು ಗರ್ಭಗುಡಿ, ಸುಕನಾಸಿ, ವಾಹನಮಂಟಪ, ಅಮ್ಮನವರ ದೇವಾಲಯ, ಬಲಿಪೀಠ, ತುಳಸಿಕಟ್ಟೆ, ಧ್ವಜಸ್ತಂಭವನ್ನು ಹೊಂದಿದ ದೇವಾಲಯವಾಗಿದೆ. ಈ ದೇವಾಲಯವನ್ನು ಕ್ರಿ.ಶ. ೧೫೧೭ರಲ್ಲಿ ಕೃಷ್ಣದೇವರಾಯನ ಬಂಟನಾದ ತಿಪ್ಪರಸಯ್ಯನ ಮಗ ಲಕ್ಷ್ಮೀಕಾಂತರಸನು ತಮ್ಮ ಸ್ವಾಮಿ ಕೃಷ್ಣರಾಯ ಮಹಾರಾಯರಿಗೆ ತಮ್ಮ ತಂದೆ ತಿಪ್ಪರಸಯ್ಯ ಹಾಗೂ ತಾಯಿ ರಾಸೂಯಮ್ಮನವರಿಗೆ ಸುಕೃತಿ ಪುಣ್ಯವಾಗಲೆಂದು ಕೊಮ್ಮೂರಿನಲ್ಲಿ ಪ್ರಸನ್ನಕೇಶವಪೆರುಮಾಳ್ ದೇವರನ್ನು ಪ್ರತಿಷ್ಠಾಪಿಸಿ ದೇವಾಲಯವನ್ನು ನಿರ್ಮಿಸಿದನು[೬೯] (ಛಾಯಾಚಿತ್ರ ೨೬).

ದೇವಾಲಯವು ೨೪ ಅಡಿ ಉದ್ದ ೧೪ ಅಡಿ ಅಗಲವಿದ್ದು, ಸಮಾನಾಂತರ ರೂಪದಲ್ಲಿ ಪೂರ್ವಕ್ಕೆ ಮುಖಮಾಡಿದೆ. ಗರ್ಭಗುಡಿಯು ಚಚ್ಚೌಕಾರದಲ್ಲಿದ್ದು ನಾಲ್ಕುಕಂಬಗಳ ಗೋಡೆಯನ್ನು ಹೊಂದಿದೆ (ನಕ್ಷೆ ೮). ಮೇಲೆ ಛಾವಣಿಯು ಚಪ್ಪಟೆಯಾಗಿದ್ದು ಸರಳವಾಗಿದೆ. ಇದರಲ್ಲಿ ಯಾವುದೇ ಅಲಂಕರಣವಿರುವುದಿಲ್ಲ. ಗರ್ಭಗುಡಿಯಲ್ಲಿರುವ ವಿಗ್ರಹದ ಪೀಠವು ಮೂರು ಅಡಿ ಎತ್ತರವಾಗಿದ್ದು ಆಯತಾಕಾರವಾಗಿದೆ. ಮೂರ್ತಿಯ ಅಭಿಷೇಕದ ನೀರು ಹೊರಗೆ ಹೋಗಲು ಪೀಠದಿಂದ ಕೊಳವೆಯನ್ನು ಅಳವಡಿಸಿರುವರು. ಮೂಲ ವಿಗ್ರಹದ ಕಲ್ಲು ಕಪ್ಪುಶಿಲೆಯಾಗಿದ್ದು ಎರಡು ಅಡಿ ಎತ್ತರವಾಗಿ ನಿಂತುಕೊಂಡ ವಿಗ್ರಹವಾಗಿದೆ (ಛಾಯಾಚಿತ್ರ ೨೭). ಈ ವಿಗ್ರಹವು ಚತುರ್ಭುಜವನ್ನು ಹೊಂದಿ ಹಿಂದಿನ ಎರಡು ಕೈಗಳಲ್ಲಿ ಶಂಕ ಚಕ್ರಗಳಿದ್ದರೆ, ಮುಂದಿನ ಬಲಗೈಯು ಅಭಯಹಸ್ತದಲ್ಲಿದ್ದು ಕಮಲವನ್ನು ಕೈಯಲ್ಲಿ ಹಿಡಿದಿರುವುದು ಕಾಣುತ್ತದೆ. ಎಡಗೈಯಲ್ಲಿ ಗದೆಯಿದ್ದು ನಾಲ್ಕು ಕೈಗಳಲ್ಲಿ ಕಡಗಗಳಿವೆ. ಸೊಂಟಕ್ಕೆ ಧೋತಿಯನ್ನು ತೊಟ್ಟು ಪಟ್ಟಿಯನ್ನು ಅಲಂಕರಿಸಿರುವರು. ಕೊರಳಲ್ಲಿ ತುಳಸಿಮಾಲಾ, ಯಜ್ಞೋಪವೀತವಿದ್ದು, ಕಿವಿಗಳಲ್ಲಿ ಕಡಗಗಳಿವೆ. ಹಣೆಯ ಮೇಲೆ ಮೂರು ನಾಮಗಳನ್ನು ಕೆತ್ತಲಾಗಿದೆ. ಕೈಗಳ ಭುಜಗಳಲ್ಲಿ ಕವಚಗಳಿದ್ದು ಮೂರ್ತಿಯ ಬಲಭಾಗದ ಕೆಳಗಡೆ ಕುಳಿತ ಗರುಡನು ಅಂಜಲಿಹಸ್ತದಲ್ಲಿರುವನು. ಎಡಭಾಗದಲ್ಲಿ ಸ್ತ್ರೀಶಿಲ್ಪವಿದ್ದು ಕೈಯಲ್ಲಿ ಕಮಲವನ್ನು ಹಿಡಿದಿರುವಳು. ಮೂಲಮೂರ್ತಿಯು ಮಂದಸ್ಮಿತವಾಗಿ ಕಂಡುಬರುತ್ತದೆ.

ಗರ್ಭಗುಡಿಯ ಬಾಗಿಲುವಾಡದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಬಾಗಿಲು ಚೌಕಟ್ಟಿನ ಕೆಳಭಾಗದಲ್ಲಿ ದ್ವಾರಪಾಲಕರ ವಿಗ್ರಹವಿದ್ದು ಕೈಗಳಲ್ಲಿ ವೈಷ್ಣವ ಲಾಂಛನಗಳಾದ ಶಂಖ, ಚಕ್ರಗಳನ್ನು ಹಿಡಿದು ನಿಂತಿರುವರು. ಇವರು ಚತುರ್ಭುಜಧಾರಿಗಳಾಗಿದ್ದು ಮುಂದಿನ ಕೈಗಳಲ್ಲಿ ಗದೆ ಮತ್ತು ಅಭಯಹಸ್ತದಲ್ಲಿದ್ದು, ಕಿರೀಟವನ್ನು ಧರಿಸಿರುವರು. ಅಂತರಾಳ ಚೌಕಕಾರದಲ್ಲಿದ್ದು ಮೇಲ್ಛಾವಣಿಯ ಮಧ್ಯಭಾಗದಲ್ಲಿ ಪದ್ಮದಳವಿದೆ. ಅಂತರಾಳದ ಬಾಗಿಲು ಚೌಕಟ್ಟಿನಲ್ಲಿ ಕಳಸಗಳ ಉಬ್ಬುಕೆತ್ತನೆಯಿದೆ.

ಗರ್ಭಗುಡಿಯ ಅಧಿಷ್ಠಾನವು ಉಪಾನ, ಕುಮುದ, ಕಂಪ, ಗಳ, ಉಪಾನ, ಕಂಪ, ಪಟ್ಟಿಕಾ ಭಾಗಗಳಿಂದ ಕೂಡಿದ್ದು, ಭಿತ್ತಿಯು ಸರಳವಾಗಿದೆ. ಅಧಿಷ್ಠಾನದಲ್ಲಿ ಸರಳ ರೀತಿಯ ಪ್ರಣಾಳವನ್ನು ಅಭಿಷೇಕದ ನೀರು ಹೊರಗೆ ಬರಲು ಅಳವಡಿಸಲಾಗಿದೆ. ಪ್ರಸ್ತಾರವನ್ನು ಸರಳ ರೀತಿಯ ಪಟ್ಟಿಗಳಿಂದ ಅಲಂಕರಿಸಿದ್ದು, ಏಳು ಹಂತಗಳಾಗಿ ಮುಂದುವರೆದು ಅವುಗಳ ಮೇಲೆ ಪಾರಿವಾಳಗಳ ಸಾಲುಗಳನ್ನು ಗಾರೆಯಿಂದ ನಿರ್ಮಿಸಿರುವರು. ಮೇಲೆ ಮೂರು ಪಟ್ಟಿಗಳನ್ನು ಚಿತ್ರಿಸಿ ಸಾಧಾರಣವಾದ ಮಂಜೂರವನ್ನು ಜೋಡಿಸಲಾಗಿದೆ. ಈ ಶಿಖರವು ತ್ರಿತಲವನ್ನು ಹೊಂದಿದ್ದು, ಮೊದಲನೆ ಭಾಗವನ್ನು ಅರ್ಧಕಂಬ, ಶಾಲಾ, ಕರ್ಣಕೂಟಗಳಿಂದ ಅಲಂಕರಿಸಲಾಗಿದೆ (ಛಾಯಾಚಿತ್ರ ೨೮). ಇವುಗಳಲ್ಲಿ ಪಟ್ಟಿ, ಸಣ್ಣಗೂಡು, ಶಾಲಾಗಳನ್ನು ರಚಿಸಿರುವರು. ಶಿಖರದ ಗ್ರೀವದಲ್ಲಿ ನಾಲ್ಕು ದಿಕ್ಕಿಗೆ ಸಿಂಹಗಳನ್ನು ರಚಿಸಿ ಕೊನೆಯಲ್ಲಿ ದುಂಡನೆಯ ಸ್ತೂಪವನ್ನು ನಿರ್ಮಿಸಿದ್ದಾರೆ. ಇದರ ಮೇಲೆ ಸಿಂಹಮುಖಗಳನ್ನು ಚಿತ್ರಿಸಿರುವರು. ಕೊನೆಯ ಭಾಗದಲ್ಲಿ ಕಳಸವಿದ್ದು ಸೂಪಿಯ ಕೆಳಗೆ ನಾಲ್ಕು ದಿಕ್ಕಿಗೆ ಮೂಲಮೂರ್ತಿಗೆ ಸಂಬಂಧಪಟ್ಟ ಅವತಾರಗಳನ್ನು ಇಟ್ಟಿಗೆ ಗಾರೆಗಚ್ಚಿನಿಂದ ರಚಿಸಲಾಗಿದೆ. ಇವುಗಳು ಇಂದು ಅಲ್ಪಪ್ರಮಾಣದಲ್ಲಿ ಕಂಡುಬರುತ್ತಿದ್ದು ನಶಿಸಿಹೋಗುವ ಸಂಭವದಲ್ಲಿವೆ.

ಮೂಲದೇವಾಲಯದ ಮುಂಭಾಗದಲ್ಲಿ ದಕ್ಷಿಣಕ್ಕೆ ಮುಖಮಾಡಿರುವ ಚಿಕ್ಕದಾದ ಪ್ರಸನ್ನಲಕ್ಷ್ಮೀ ದೇವಾಲಯವಿದ್ದು, ಇದು ಗರ್ಭಗುಡಿಯನ್ನು ಮಾತ್ರ ಒಳಗೊಂಡಿದೆ. ಈ ದೇವಾಲಯದ ಹೊರಭಾಗವೆಲ್ಲಾ ಮೂಲ ಕೇಶವಸ್ವಾಮಿ ದೇವಾಲಯದ ಎಲ್ಲಾ ಲಕ್ಷಣಗಳನ್ನು ಹೊಂದಿ, ಸುಂದರವಾಗಿ ಕಂಡುಬರುತ್ತದೆ. ಗರ್ಭಗುಡಿಯಲ್ಲಿ ಪ್ರಸನ್ನಲಕ್ಷ್ಮೀದೇವಿಯು ಕಮಲದ ಮೇಲೆ ಪದ್ಮಸನಾದಲ್ಲಿ ಕುಳಿತಿರುವಳು. ದೇವಿಯು ಚತುರ್ಭುಜವನ್ನು ಹೊಂದಿದ್ದು ಹಿಂದಿನ ಎರಡು ಕೈಗಳಲ್ಲಿ ಕಮಲದ ಮೊಗ್ಗನ್ನು ಹಿಡಿದು, ಮುಂದಿನ ಕೈಗಳು ಅಭಯ, ವರದ ಹಸ್ತದಲ್ಲಿವೆ. ತಲೆಯಲ್ಲಿ ಕಿರೀಟವನ್ನು ಸಿಂಗರಿಸಿ ಎತ್ತರವಾದ ಪೀಠದ ಮೇಲೆ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ಮೂಲ ಗರ್ಭಗುಡಿಯ ಎದುರಿಗೆ ಪ್ರಸನ್ನಆಂಜನೇಯಸ್ವಾಮಿಯ ದೇವಾಲಯವಿದ್ದು, ಇದು ಗರ್ಭಗುಡಿಯನ್ನು ಹೊಂದಿದೆ. ದೇವಾಲಯವು ಲಕ್ಷ್ಮೀದೇವಿ ದೇವಾಲಯದ ಮಾದರಿಯಲ್ಲಿದ್ದು ಶಿಖರವು ಸರಳವಾಗಿದೆ. ದೇವಾಲಯವನ್ನು ಮೂಲ ದೇವರಿಗೆ ಅಭಿಮುಖವಾಗಿ ನಿರ್ಮಿಸಲಾಗಿದೆ. ಗರ್ಭಗುಡಿಯಲ್ಲಿರುವ ಮೂರ್ತಿಯು ಎತ್ತರದ ಪೀಠದ ಮೇಲೆ ನಾಲ್ಕು ಅಡಿಗಳ ಎತ್ತರ ಮೂರ್ತಿಯಾಗಿ ನಿಂತಿರುವ ಭಂಗಿಯಲ್ಲಿದೆ (ಛಾಯಾಚಿತ್ರ ೨೯). ಮೂರ್ತಿಯು ಅಂಜಲಿಹಸ್ತದಲ್ಲಿದ್ದು, ಪಶ್ಚಿಮಕ್ಕೆ ಮುಖಮಾಡಿದೆ. ಮೂಲವಿಗ್ರಹವು ಸಮಭಂಗಿಯಲ್ಲಿದ್ದು ಕಾಲಲ್ಲಿ ಕಡಗಗಳಿವೆ. ಮೂರ್ತಿಗೆ ಧೋತಿಯನ್ನು ಸುತ್ತಿ ನಡುವಿಗೆ ಆಭರಣದ ಪಟ್ಟಿಯಿಂದ ಅಲಂಕರಿಸಿರುವರು. ಕೈಗಳ ತೋಳಲ್ಲಿ ಕಡಗಗಳಿವೆ. ಕೊರಳಲ್ಲಿ ಮಾಲೆ ಮತ್ತು ಆಭರಣಗಳಿದ್ದು, ಹಣೆಯ ಮೇಲೆ ನಾಮವನ್ನು ರಚಿಸಲಾಗಿದೆ. ತಲೆಯನ್ನು ಪೇಟದಿಂದ ಅಲಂಕರಿಸಿ, ಮೂರ್ತಿಯ ಎರಡು ಬದಿಯಲ್ಲಿ ಪ್ರಭಾವಳಿಯನ್ನು ಕೆತ್ತಲಾಗಿದ್ದು, ಮಧ್ಯದಲ್ಲಿ ಕೀರ್ತಿಮುಖವನ್ನು ಜೋಡಿಸಿದ್ದಾರೆ. ದೇವಾಲಯದ ಮುಂದಿನ ಭಾಗದಲ್ಲಿ ಎತ್ತರವಾದ ವೇದಿಕೆಯ ಮೇಲೆ ಮೂವತ್ತೆಂಟು ಅಡಿಗಳ ಧ್ವಜಸ್ತಂಭವನ್ನು ನಿಲ್ಲಿಸಲಾಗಿದ್ದು, ಇದನ್ನು ಕಂಚು ಮತ್ತು ತಾಮ್ರದಿಂದ ರಚಿಸಲಾಗಿದೆ. ಮೂಲ ದೇವಾಲಯದ ಅಂತರಾಳದಲ್ಲಿ ನಾಲ್ಕು ಆಳ್ವಾರರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಎಲ್ಲಾ ಮೂರ್ತಿಗಳು ಅಂಜಲಿ ಹಸ್ತದಲ್ಲಿರುವ ಕುಳಿತ ಮೂರ್ತಿಗಳಾಗಿವೆ.

ಪ್ರಸನ್ನಕೇಶವ ಪೆರುಮಾಳ್ ದೇವಾಲಯದಲ್ಲಿ ಪೂಜಾ ವಿಧಿವಿಧಾನಗಳು, ಉತ್ಸವಗಳು ವಿಶೇಷ ದಿನಗಳಲ್ಲಿ ನಡೆಯುವ ಉತ್ಸವಗಳು ಅಧಿಕ ಸಂಖ್ಯೆಯಲ್ಲಿ ನಡೆಸಲಾಗುತ್ತಿದ್ದಿತು. ಹಿಂದಿನಿಂದ ಬಂದ ವೈಖಾನಸ ಪೂಜಾ ವಿಧಾನವೇ ಇಂದಿಗೂ ದೇವಾಲಯದಲ್ಲಿ ಮುಂದುವರೆದುಕೊಂಡು ಬಂದಿದೆ. ದಿನನಿತ್ಯದಲ್ಲಿ ಮೂರು ಸಾರಿ ಪೂಜೆಯನ್ನು ಮಾಡಲಾಗುತ್ತಿದ್ದು, ವಿಶೇಷ ದಿನಗಳಾದ ಏಕಾದಶಿ, ವೈಕುಂಠ ಏಕಾದಶಿ, ಧನಸ್ಸು, ಮಕರಸಂಕ್ರಾಂತಿ, ಭೋಗಿ, ಜೇಷ್ಠಶುದ್ಧ ಏಕಾದಶಿಗಳಲ್ಲಿ ವಿಶೇಷ ಪೂಜೆಯನ್ನು ನಡೆಸಲಾಗುತ್ತದೆ. ಇಂದಿಗೂ ಅರ್ಣಕ ಬ್ರಹ್ಮೋತ್ಸವವನ್ನು ಮಾಡಲಾಗುತ್ತಿದ್ದು, ಇದನ್ನು ಹೆಚ್ಚು ವಿಶೇಷವಾಗಿ ನಡೆಸಲಾಗುತ್ತದೆ. ಅಂದು ಉತ್ಸವಮೂರ್ತಿಯನ್ನು ಗರುಡ, ಅಶ್ವ, ಗಜ ವಾಹನಗಳಲ್ಲಿ ಕೂಡಿಸಿ ಉತ್ಸವವನ್ನು ನೆರವೇರಿಸಲಾಗುತ್ತದೆ. ಈ ದೇವಾಲಯದಲ್ಲಿ ರಥೋತ್ಸವವು ನಡೆಯುವುದಿಲ್ಲ. ದೇವಾಲಯಕ್ಕೆ ಸಂಬಂಧಪಟ್ಟ ಶಿಲಾಶಾಸನವನ್ನು ಪಕ್ಕದಲ್ಲಿರುವ ಅಗಸ್ತ್ಯೇಶ್ವರ ದೇವಾಲಯದ ಮುಖಮಂಟಪದ ಕಂಬವೊಂದರಲ್ಲಿ ಕೆತ್ತಲಾಗಿದ್ದು, ಇಂದು ಸ್ಪಷ್ಟವಾಗಿ ಕಂಡುಬರುತ್ತದೆ.




ಭಾ ಚಿ ೨೬. ಪ್ರಸನ್ನಕೇಶವ ದೇವಾಲಯ, ಕೊಮ್ಮೂರು



ಭಾ ಚಿ ೨೭. ಪ್ರಸನ್ನಕೇಶವ ಮೂರ್ತಿ
ಕೊಮ್ಮೂರು



ಭಾ ಚಿ ೨೮. ವಿಮಾನ, ಪ್ರಸನ್ನಕೇಶವ ದೇವಾಲಯ
ಕೊಮ್ಮೂರು



ನಕ್ಷೆ-೮ ಚನ್ನಕೇಶವ ದೇವಾಲಯದ ತಲನಕ್ಷೆ





ಛಾ ಚಿ ೨೯. ಆಂಜನೇಯ ವಿಗ್ರಹ

ಕೊಮ್ಮೂರು

೭. ವರದರಾಜ ಪೆರುಮಾಳ್ ದೇವಾಲಯ, ಅಣ್ಣೆಯೂರು

ವರದರಾಜ ಸ್ವಾಮಿ ದೇವಾಲಯವು ದೊಡ್ಡ ಪೌಳಿಯನ್ನು ಹೊಂದಿದ್ದು, ದಕ್ಷಿಣ ದಿಕ್ಕಿಗೆ ಮುಖಮಾಡಿದೆ. ಮುಖ್ಯ ದೇವಾಲಯದ ಆವರಣದಲ್ಲಿ ಮೂಲ ದೇವಾಲಯ, ಅಮ್ಮನವರ ದೇವಾಲಯಗಳು, ಎರಡು ಮಂಟಪಗಳು, ಬಾವಿ, ಶಾಸನಗಳಿದ್ದು ಪ್ರಮುಖ ದ್ವಾರದಲ್ಲಿ ದ್ವಾರಗೋಪುರವಿದೆ. ಇದರ ಮುಂದಿನ ಭಾಗದಲ್ಲಿ ಆಂಜನೇಯ ಮಂಟಪ, ಪಕ್ಕದಲ್ಲಿ ಗರುಡ ಮಂಟಪ ಹಾಗೂ ತುಳಸಿಕಟ್ಟೆ, ಬಲಿಪೀಠ, ಗರುಡಸ್ತಂಭವಿದೆ (ನಕ್ಷೆ ೯). ಈ ದೇವಾಲಯವನ್ನು ಕ್ರಿ.ಶ. ೧೫೫೯ರಲ್ಲಿ ಅಲ್ಲಸಾನಿಚೊಕ್ಕರಾಜನ ಮಗನಾದ ಆಂಧ್ರಕವಿತ ಪಿತಾಮಹನಾದ ಪೆದ್ದಿರಾಜುಗಾರು ಶ್ರೀಕೃಷ್ಣದೇವರಾಯನು ತಮಗೆ ನಾಯಕತನಕೆ ನೀಡಿದ ಕರಿವಾಚಿ ಸೀಮೆಯ ಅನ್ನೂರು ಗ್ರಾಮದಲ್ಲಿ ಪ್ರತಿಷ್ಠಾಪಿಸಿದನು.[೬೬] ಇದರ ಉಲ್ಲೇಖವಿರುವ ಶಾಸನವು ಅದೇ ದೇವಾಲಯದ ಪ್ರಾಕಾರದಲ್ಲಿ ನಿಲ್ಲಿಸಲಾಗಿದೆ. ಅಲ್ಲದೆ ದೇವರ ಅಂಗರಂಗ ವೈಭೋಗಕ್ಕೆ, ನಿತ್ಯನೈವೇದ್ಯ ದೀಪಾರಾಧನೆಗೆ ಭೂದಾನವನ್ನು ನೀಡಿದ ಉಲ್ಲೇಖ ಅದೇ ಶಾಸನದಿಂದ ತಿಳಿದುಬರುತ್ತದೆ.

ಮೂಲದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ, ಮುಖಮಂಟಪ, ಮಹಾಮಂಟಪವನ್ನು ಹೊಂದಿದ್ದು, ಈ ಮಂಟಪಕ್ಕೆ ಮೂರು ಕಡೆಯಲ್ಲಿ ದ್ವಾರಬಾಗಿಲುಗಳಿವೆ. ಪ್ರಮುಖದ್ವಾರಬಾಗಿಲಲ್ಲಿ ದ್ವಾರಗೋಪುರವಿದ್ದು, ಮಹಾಮಂಟಪದ ಎರಡು ಕಡೆಗಳಲ್ಲಿ ದ್ವಾರಗೋಪುರದ ಪೌಳಿಗೆ ಹೊಂದಿಕೊಂಡಂತೆ ಎರಡು ಮಂಟಪಗಳಿವೆ. ಬಲಗಡೆಯ ಮಂಟಪದ ಪಕ್ಕದಲ್ಲಿ ಒಂದು ಬಾವಿಯನ್ನು ಕಾಣಬಹುದು. ಗರ್ಭಗುಡಿಯು ಸಮಾನಾಂತರವಾಗಿದ್ದು ದೊಡ್ಡ ದೊಡ್ಡ ಕಲ್ಲಿನಿಂದ ನಿರ್ಮಿಸಲಾಗಿದೆ. ಈ ಗರ್ಭಗುಡಿಯಲ್ಲಿ ವರದ ರಾಜಪೆರುಮಾಳ್ ವಿಗ್ರಹವು ಮುಖ್ಯ ಅರ್ಚನ ಮೂರ್ತಿಯಾಗಿದ್ದು, ಅಕ್ಕಪಕ್ಕದಲ್ಲಿ ಶ್ರೀದೇವಿ, ಭೂದೇವಿಯರಿಗೆ ಸ್ಥಾನವನ್ನು ನೀಡಲಾಗಿದೆ. ಇವರುಗಳಿಗೆ ಪ್ರತ್ಯೇಕವಾದ ಪೀಠಗಳಿದ್ದು ಕಪ್ಪು ಕಲ್ಲಿನಿಂದ ಮೂರ್ತಿಗಳನ್ನು ಕೆತ್ತಲಾಗಿದೆ. ಈ ಮೂರ್ತಿಗಳು ಸಮಭಂಗಿಯಲ್ಲಿ ನಿಂತು ಎರಡು ಕೈಗಳನ್ನು ಹೊಂದಿವೆ. ಎಡಗೈಯಲ್ಲಿ ಕಮಲದ ಮೊಗ್ಗನ್ನು ಬಲಗಡೆಯು ಮೂರ್ತಿಯು ಹಿಡಿದಿದ್ದರೆ, ಎಡಗಡೆಯ ಮೂರ್ತಿಯ ಬಲಗೈಯಲ್ಲಿ ಕಮಲದ ಮೊಗ್ಗು ಇದೆ. ಕಾಲಲ್ಲಿ ಕಡಗಗಳಿದ್ದು ದೇಹಕ್ಕೆಲ್ಲ ವಸ್ತ್ರ ಮತ್ತು ಆಭರಣಗಳಿಂದ ಅಲಂಕರಿಸಲಾಗಿದೆ. ತಲೆಯು ಕಿರೀಟದಿಂದ ಕೂಡಿದ್ದು ಅರೆಮುಚ್ಚಿದ ಕಣ್ಣಿನಿಂದ ಧ್ಯಾನಸ್ಥಿತಿಯಲ್ಲಿವೆ. ಮೂಲ ವರದರಾಜ ಪೆರುಮಾಳ್ ಮೂರ್ತಿಯು ಸಮಭಂಗಿಯಲ್ಲಿ ನಿಂತಿರುವುದು (ಛಾಯಾಚಿತ್ರ ೩೦). ಚತುರ್ಭುಜವನ್ನು ಹೊಂದಿದ ಈ ಮೂರ್ತಿಯು ಹಿಂದಿನ ಎರಡುಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದುಕೊಂಡು ಮುಂದಿನ ಬಲಗೈಯು ಅಭಯಹಸ್ತದಲ್ಲಿದ್ದರೆ ಎಡಗೈಯು ಕಾಟಿ ಹಸ್ತದಲ್ಲಿದೆ. ಕಾಲು ಮತ್ತು ಕೈಗಳಲ್ಲಿ ಕಡಗಗಳನ್ನು ಧರಿಸಿದ್ದು ನಡುವಿಗೆ ಧೋತಿಯನ್ನು ತೊಟ್ಟು, ಡಾಬಾ ಮತ್ತು ಆಭರಣಗಳಿಂದ ಅಲಂಕರಿಸಿರುವರು. ಮೂರ್ತಿಯ ಕೊರಳಲ್ಲಿ ಯಜ್ಞೋಪವೀತ ಕಂಠಾಭರಣಗಳಿದ್ದು ಹಣೆಯಲ್ಲಿ ನಾಮವಿದೆ. ತಲೆಯಲ್ಲಿ ಕಿರೀಟವಿದ್ದು ಹೆಚ್ಚು ಅಲಂಕಾರದ ನಾಜೂಕಿನ ಚಿತ್ರಗಳಿರುವವು. ಕಣ್ಣುಗಳು ಅರೆಮುಚ್ಚಿದ್ದು ಶಾಂತರೂಪವಾಗಿದೆ.

ಮೂಲ ಗರ್ಭಗುಡಿಯ ಛಾವಣಿಯಲ್ಲಿ ಪದ್ಮದಳವಿದ್ದು ಅರಳಿದ ದಳಗಳು ನಾಜುಕಾಗಿವೆ. ಈ ದಳಗಳು ಚೌಕಕಾರದಲ್ಲಿ ದುಂಡಾಗಿರುವ ವೃತ್ತದಲ್ಲಿವೆ. ಗರ್ಭಗುಡಿಯ ಬಾಗಿಲಲ್ಲಿ ಎರಡು ಕಡೆ ದ್ವಾರಪಾಲಕರಿದ್ದು ಚತುರ್ಭುಜವನ್ನು ಹೊಂದಿ ಹಿಂದಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಹಿಡಿದಿದ್ದರೆ, ಮುಂದಿನ ಎಡಗೈಯಲ್ಲಿ ಗದೆಯನ್ನು ಹಿಡಿದಿರುವರು. ತಲೆಯಲ್ಲಿ ಕಿರೀಟ ಧರಿಸಿದ್ದು ಸುಮಾರು ಮೂರು ಅಡಿಗಳಷ್ಟು ಎತ್ತರದಲ್ಲಿರುವುದು. ಗರ್ಭಗುಡಿಯ ಮುಂದಿರುವ ಅಂತರಾಳವು ಚೌಕಕಾರವಾಗಿದ್ದು ಸರಳರೀತಿಯಲ್ಲಿದೆ. ಇದರಲ್ಲಿ ಯಾವುದೇ ಅಲಂಕಾರವನ್ನು ಮಾಡಿರುವುದು ಕಂಡುಬರುವುದಿಲ್ಲ. ಈ ಅಂತರಾಳಕ್ಕೆ ದ್ವಾರಬಾಗಿಲಿಲ್ಲದೆ ಸರಳ ರೀತಿಯದಾಗಿದ್ದು, ಮುಂದೆ ನಾಲ್ಕುಸ್ತಂಭಗಳ ನವರಂಗವಿದೆ. ನವರಂಗವು ಚೌಕಕಾರದಲ್ಲಿದ್ದು ನಾಲ್ಕುಸ್ತಂಭಗಳನ್ನು ನಿಲ್ಲಿಸಿರುವುದರಿಂದ ಒಂಭತ್ತು ಅಂಕಣಗಳು ಏರ್ಪಟ್ಟಿವೆ. ನವರಂಗದ ನಾಲ್ಕುಸ್ತಂಭಗಳು ಚಿತ್ರಕಾಂಡ ಸ್ತಂಭದಂತಿದ್ದು, ಮಧ್ಯಪಟ್ಟಿಗಳಲ್ಲಿ ಪದ್ಮದಳಗಳಿವೆ. ಮಧ್ಯಪಟ್ಟಿಗಳನ್ನು ಅಷ್ಟಮುಖ ಚತುರಶ್ರದಿಂದ ಅಲಂಕರಿಸಿರುವರು. ನವರಂಗದ ಮಧ್ಯದಲ್ಲಿ ಮೇಲೆ ಪದ್ಮದಳವಿದ್ದು ಸ್ತಂಭಗಳ ಬೋದಿಗೆಗಳು ಸರಳವಾಗಿವೆ. ಈ ಮಂಟಪದ ಬಲಭಾಗದಲ್ಲಿ ಹನ್ನೊಂದು ಆಳ್ವಾರರ ವಿಗ್ರಹಗಳಿದ್ದು, ಇವುಗಳನ್ನು ಏಕಪೀಠದ ಮೇಲೆ ಪ್ರತಿಷ್ಠಾಪಿಸಿರುವರು. ಮೂರ್ತಿಗಳು ಕುಳಿತ ಮತ್ತು ನಿಂತ ಮೂರ್ತಿಗಳಾಗಿವೆ (ಛಾಯಾಚಿತ್ರ ೩೧). ನವರಂಗದ ಮುಂದೆ ತೆರೆದ ಆರುಸ್ತಂಭಗಳ ಮಂಟಪವಿದ್ದು, ಈ ಸ್ತಂಭಗಳ ಮೇಲಿರುವ ಬೋದಿಗೆಗಳಲ್ಲಿ ಉಬ್ಬುಶಿಲ್ಪಗಳಿರುವವು. ಈ ಎಲ್ಲಾ ಕಂಬಗಳು ಸಾಧಾರಣ ಸ್ತಂಭಗಳಾಗಿವೆ. ಇದರ ಮುಂದುಗಡೆ ಹದಿನಾರು ಸ್ತಂಭಗಳ ಮಹಾಮಂಟಪವಿದ್ದು ಇದಕ್ಕೆ ಮೂರು ಕಡೆಗಳಲ್ಲಿ ಪ್ರವೇಶದ್ವಾರಗಳಿವೆ. ದಕ್ಷಿಣಕ್ಕಿರುವ ದ್ವಾರವು ಮುಖ್ಯ ದ್ವಾರವಾಗಿದ್ದು, ದ್ವಾರಗೋಪುರವನ್ನು ಹೊಂದಿದೆ. ಈ ಮಂಟಪದಲ್ಲಿರುವ ಕಂಬಗಳಲ್ಲಿ ಕೆಳಗಿನ ಭಾಗವು ನಾಲ್ಕು ಮುಖಗಳ ಚೌಕಕಾರದ ಮಧ್ಯಪಟ್ಟಿ ಹೊಂದಿದ್ದು, ಮೇಲಿನ ಭಾಗ ಅಷ್ಟಮುಖ ಚತುರಶ್ರವು ಮೇಲಿನವರೆಗೂ ಮುಂದುವರೆದಿದೆ. ಸರಳ ರೀತಿಯ ಬೋದಿಗೆಯಿಂದ ಅಲಂಕರಿಸಿದ ಹನ್ನೆರಡು ಅಂಕಣಗಳು ಏರ್ಪಟ್ಟಿದ್ದು, ವಿತಾನದಲ್ಲಿ ಯಾವುದೇ ಅಲಂಕರಣೆಗಳಿಲ್ಲ.

ದಕ್ಷಿಣ ದಿಕ್ಕಿಗಿರುವ ದ್ವಾರಗೋಪುರವು ತ್ರಿತಲಗಳನ್ನು ಹೊಂದಿದ್ದು ಅಧಿಷ್ಠಾನ, ಭಿತ್ತಿ, ಪ್ರಸ್ತರವನ್ನು ಹೊಂದಿದೆ. ಅಧಿಷ್ಠಾನದಲ್ಲಿ ಪಾದುಕಾ, ಜಗತಿ, ಉಪಾನ, ಪಟ್ಟಿಕಾ, ತ್ರಿಪಟ್ಟಕುಮುದ, ಗಳ, ವಾಜನ ಭಾಗಗಳು ಕಂಡುಬರುತ್ತಿದ್ದು, ಭಿತ್ತಿಯು ಸರಳರೀತಿಯಲ್ಲಿದೆ. ಗೋಪುರದ ಎರಡು ಕಡೆಗಳಲ್ಲಿ ಒಂದೊಂದು ಕೋಷ್ಠಕಗಳನ್ನು ನಿರ್ಮಿಸಿದ್ದು ಇದರಲ್ಲಿ ಮೂರ್ತಿಗಳಿರದೆ ಖಾಲಿಯಾಗಿದೆ. ಭಿತ್ತಿಯ ಮೇಲೆ ಕಪೋತವಿದ್ದು ಇದರಲ್ಲಿ ನಾಸಿಗಳಿಂದ ಅಲಂಕರಿಸಿದ್ದಾರೆ. ಪ್ರಸ್ತರದ ಭಾಗದವರಗೆ ಕಟ್ಟಡವು ಕಲ್ಲಿನದ್ದಾಗಿದ್ದು ಮೇಲೆ ಇಟ್ಟಿಗೆ ಮತ್ತು ಗಾರೆಗಚ್ಚಿನಿಂದ ದ್ವಾರಗೋಪುರವನ್ನು ನಿರ್ಮಿಸಿರುವರು (ಛಾಯಾಚಿತ್ರ ೩೨). ಮೊದಲನೆ ತಲದಲ್ಲಿ ಮಧ್ಯ ಗೋಪುರದ್ವಾರವನ್ನು ಹೊಂದಿದ್ದು, ಮೇಲೆ ವೈಷ್ಣವ ಚಿಹ್ನೆಗಳಾದ ನಾಮ, ಶಂಖ, ಚಕ್ರಗಳನ್ನು ಗಾರೆಯಿಂದ ಚಿತ್ರಿಸಿರುವರು. ಅಕ್ಕಪಕ್ಕದಲ್ಲಿ ಚಿಕ್ಕದಾದ ಕಟ್ಟಡದಂತಿರುವ ಎರಡು ಭಾಗಗಳಿದ್ದು, ಒಂದರಲ್ಲಿ ಪ್ರಭಾವಳಿಯಿದ್ದರೆ ಇನ್ನೊಂದರಲ್ಲಿ ಕರ್ಣಕೂಟವಿದೆ. ಈ ಮೊದಲನೆ ತಲದ ಮೇಲಿನ ಭಾಗದಲ್ಲಿ ಮೂಲದೇವರ ಮೂರ್ತಿಗಳನ್ನು ಪತ್ನಿಯರ

ಸಮೇತವಾಗಿ ಕುಳಿತಿರುವ ಗಾರೆಯ ಮೂರ್ತಿಶಿಲ್ಪಗಳಿವೆ. ಈ ಮೂರ್ತಿಗಳನ್ನು ಶಾಲಾಭಾಗದ ಮೇಲೆ ಕೂಡಿಸಿದ್ದಾರೆ. ಇದೇ ರೀತಿ ಎರಡನೆ ತಲದಲ್ಲಿ ಶಾಲಾ, ಪ್ರಭಾವಳಿ, ಕರ್ಣಕೂಟಭಾಗಗಳಿದ್ದರೆ, ಮೂರನೇ ತಲದಲ್ಲಿ ಪ್ರಭಾವಳಿ ಭಾಗ ಮಾತ್ರವಿದ್ದು ಶಾಲಾಶಿಖರವಿದೆ. ಇದನ್ನು ಗಾರೆಯಿಂದ ಅಲಂಕರಿಸಿದ್ದು ಮೇಲೆ ಐದು ಕಳಸಗಳನ್ನು ನಿರ್ಮಿಸಿದ್ದಾರೆ. ಮಧ್ಯದ ಕೆಳಭಾಗದಲ್ಲಿ ದೊಡ್ಡದಾದ ಪ್ರಭಾವಳಿಯ ಕೀರ್ತಿಮುಖವಿದೆ. ಶಾಲಾದ ಪಾರ್ಶ್ವಭಾಗದಲ್ಲಿ ದೊಡ್ಡದಾದ ಪ್ರಭಾವಳಿಗಳಿದ್ದರೆ ಮೇಲೆ ಮಧ್ಯದಲ್ಲಿ ಕೀರ್ತಿಮುಖಗಳಿವೆ. ಈ ದ್ವಾರಗೋಪುರವು ಕೆಳಗಿನಿಂದ ಮೇಲೆ ಹೋದಂತೆಲ್ಲಾ ಸಣ್ಣದಾಗುತ್ತ ಶಾಲಾಭಾಗದಲ್ಲಿ ಕೊನೆಗೊಳ್ಳುತ್ತದೆ. ಈ ಗೋಪುರಕ್ಕೆ ಗಾರೆಯಿಂದ ಲೇಪನವನ್ನು ಅಂಟಿಸಿದ್ದು ಇನ್ನೂ ಸುಂದರವಾಗಿ ಉಳಿದಿದೆ. ದ್ವಾರಗೋಪುರದ ಕೆಳಗೆ ಕಲ್ಲಿನ ಕಟ್ಟಡದಲ್ಲಿ ಎರಡೂ ಕಡೆಯಲ್ಲೂ ಮಂಟಪದ ಅಂಕಣಗಳಿವೆ.

ಮೂಲ ದೇವಾಲಯದ ಗರ್ಭಗುಡಿಯ ಭಾಗವು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಶಿಖರ, ಸ್ತೂಪಿ, ಕಳಸ ಭಾಗಗಳಿಂದ ಕೂಡಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಪಟ್ಟಿಕಾ, ಗಳ, ತ್ರಿಪಟ್ಟಕುಮುದ ಭಾಗಗಳಿವೆ. ಭಿತ್ತಿಯಲ್ಲಿ ಖಾಲಿಕೋಷ್ಠಕ, ಅರ್ಧಕಂಭಗಳು ಮಾತ್ರವಿದ್ದು, ಶಾಲಾವನ್ನು ಗೋಡೆಯ ಹಿಂದಿನ ಭಾಗದಲ್ಲಿ ಉಬ್ಬುಕೆತ್ತನೆಯಿಂದ ಅಲಂಕರಿಸಿರುವರು. ಪ್ರಸ್ತರದಲ್ಲಿ ಕಪೋತವಿದ್ದು ನಾಸಿಗಳಿಂದ ಚಿತ್ರಿಸಿದ್ದಾರೆ. ಪ್ರಸ್ತರದವರೆಗೆ ಕಲ್ಲಿನ ಕಟ್ಟಡವಿದ್ದು, ಮೇಲೆ ಇಟ್ಟಿಗೆ, ಗಾರೆಗಚ್ಚಿನಿಂದ ಶಿಖರವನ್ನು ನಿರ್ಮಿಸಿರುವರು. ಗರ್ಭಗುಡಿಯ ಶಿಖರವು ಮೂರುಭಾಗಗಳಿಂದ ಕೂಡಿದ್ದು ಒಂದೊಂದು ಭಾಗದಲ್ಲಿ ಕರ್ಣಕೂಟ, ಪ್ರಭಾವಳಿ, ಮಧ್ಯದಲ್ಲಿ ಶಾಲಾವಿದ್ದು ಮೂರು ಕಳಸವನ್ನು ಹೊಂದಿದೆ. ಮೊದಲನೆ ಭಾಗದಲ್ಲಿ ಗಾರೆಯಶಿಲ್ಪಗಳಿದ್ದು, ಇದರಲ್ಲಿ ಮಧ್ಯದಶಿಲ್ಪವು ಮೂಲ ಮೂರ್ತಿಯ ಬಿಂಬವಾಗಿದೆ. ಅಕ್ಕಪಕ್ಕದಲ್ಲಿ ವಿಷ್ಣುವಿನ ಅವತಾರದ ಶಿಲ್ಪಗಳು ಮತ್ತು ಸ್ತ್ರೀ, ದ್ವಾರಪಾಲಕರ ಗಾರೆಶಿಲ್ಪಗಳಿವೆ. ಎರಡನೆ ಭಾಗದಲ್ಲಿ ಕಪೋತನಾಸಿಗಳು ಮಧ್ಯದಲ್ಲಿ ಲಕ್ಷ್ಮೀನರಸಿಂಹ ವಿಗ್ರಹ ಅಕ್ಕಪಕ್ಕದಲ್ಲಿ ಸ್ತ್ರೀ, ಗರುಡ ಶಿಲ್ಪಗಳಿವೆ. ಅದೇ ರೀತಿಯಾಗಿ ಕರ್ಣಕೂಟ, ಶಾಲಾ ಮತ್ತು ಉಬ್ಬುಶಿಲ್ಪಗಳಿವೆ. ಕೊನೆಯ ಭಾಗದಲ್ಲಿ ಕುಳಿತ ವಿಷ್ಣುವಿನ ಶಿಲ್ಪವಿದ್ದರೆ ನಾಲ್ಕು ಮೂಲೆಯಲ್ಲಿ ಗರುಡ ಶಿಲ್ಪಗಳಿವೆ. ಸೂಪಿಯು ಚತುರಾಶ್ರವಾಗಿದ್ದು, ನಾಲ್ಕು ದಿಕ್ಕಿಗೆ ಪ್ರಭಾವಳಿಯಿಂದ ಅಲಂಕರಿಸಿ ಕೊನೆಯಲ್ಲಿ ಕಳಸವನ್ನು ಇಟ್ಟಿರುವರು. ಈ ಶಿಖರದ ನಾಲ್ಕುದಿಕ್ಕಿಗೆ ಇದೇ ರೀತಿಯಾಗಿ ವಿಷ್ಣುವಿನ ಅವತಾರದ ಗಾರೆಯಶಿಲ್ಪಗಳಿಂದ ಅಲಂಕರಿಸಿದ್ದಾರೆ.


ಮುಖ್ಯಗರ್ಭಗುಡಿಯ ಎಡಭಾಗಕ್ಕೆ ಪ್ರಾಕಾರದಲ್ಲಿ ಒಂದು ದೇವಾಲಯವಿದ್ದು, ಗರ್ಭಗುಡಿ ಹಾಗೂ ಅಂತರಾಳವನ್ನು ಮಾತ್ರ ಹೊಂದಿದೆ. ಗರ್ಭಗುಡಿಯಲ್ಲಿ ತಾಯಾರಮ್ಮ ಮೂರ್ತಿಯಿದ್ದು, ಇದನ್ನು ಎರಡು ಅಡಿ ಎತ್ತರದ ಪೀಠದ ಮೇಲೆ ನಿಲ್ಲಿಸಿರುವರು. ಈ ಮೂರ್ತಿಯು ಎರಡು ಕೈಗಳನ್ನು ಹೊಂದಿದೆ. ಈ ದೇವಾಲಯವು ಸರಳರೀತಿಯ ಅಧಿಷ್ಠಾನ ಹೊಂದಿದ್ದು ಭಿತ್ತಿಯಲ್ಲಿ ಕೋಷ್ಠಕಗಳು ನಾಲ್ಕು ದಿಕ್ಕಿಗಿವೆ. ಪ್ರಸ್ತರದಲ್ಲಿ ಕಪೋತಭಾಗವು ಮುಂಚಾಚಿಕೊಂಡು ಮೇಲೆ ಶಿಖರದಲ್ಲಿ ತ್ರಿಪಟ್ಟ ಕುಮುದವಿದ್ದು, ಕೋಷ್ಠಕ, ಕಪೋತ ಮೇಲೆ ಸ್ತೂಪಿ ಇದೆ. ನಾಲ್ಕು ಕಡೆಗಳಲ್ಲಿ ಸರಳರೀತಿಯ ಅಲಂಕಾರವಿದ್ದು, ಕೊನೆಯಲ್ಲಿ ಕಳಸವನ್ನು ಜೋಡಿಸಿರುವರು. ಈ ಗರ್ಭಗುಡಿಗೆ ಹೋಗಲು ಅಂತರಾಳಕ್ಕೆ ಮೂರು ಮೆಟ್ಟಿಲುಗಳಿವೆ. ಅದೇ ರೀತಿ ಮುಖ್ಯದೇವಾಲಯದ ಬಲಭಾಗದಲ್ಲಿ ಮತ್ತೊಂದು

ದೇವಾಲಯವಿದ್ದು ನಾಚೀಯಾರಮ್ಮನ ವಿಗ್ರಹವನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿದ್ದಾರೆ. ಈ ದೇವಾಲಯವು ಗರ್ಭಗುಡಿ, ಅಂತರಾಳ, ತೆರೆದಮಂಟಪವನ್ನು ಹೊಂದಿದ್ದು ಸರಳವಾಗಿದೆ. ಗರ್ಭಗುಡಿಯಲ್ಲಿರುವ ಮೂರ್ತಿಯು ಮೂರು ಅಡಿ ಎತ್ತರದ ಪೀಠದಮೇಲೆ ಪ್ರಸನ್ನಚಿತ್ತದಿಂದ ಕುಳಿತ ಮೂರ್ತಿಯಾಗಿದ್ದು, ಚತುರ್ಭುಜವನ್ನು ಹೊಂದಿರುವಳು (ಛಾಯಾಚಿತ್ರ ೩೩). ಹಿಂದಿನ ಕೈಗಳಲ್ಲಿ ಕಮಲದ ಮೊಗ್ಗುಗಳಿದ್ದು, ಮುಂದಿನ ಬಲಗೈಯು ಅಭಯಹಸ್ತದಲ್ಲಿದ್ದರೆ ಎಡಗೈಯು ವರದಹಸ್ತದ್ದಾಗಿದೆ. ನಾಲ್ಕುಕೈಗಳಲ್ಲಿ ಕಡಗಗಳಿದ್ದು, ವಸ್ತ್ರವನ್ನು ಧರಿಸಿರುವಳು. ಮೂರ್ತಿಯ ತಲೆಯಲ್ಲಿ ಎತ್ತರದ ಕಿರೀಟವಿದೆ. ಕೊರಳನ್ನು ಅಭರಣಗಳಿಂದ ಅಲಂಕರಿಸಿದ್ದಾರೆ. ಗರ್ಭಗುಡಿಯ ಮುಂದೆ ಅಂತರಾಳವು ಸರಳವಾಗಿ ತೆರೆದ ಮಂಟಪವು ಕೂಡಾ ಅದೇ ರೀತಿಯಲ್ಲಿದೆ. ಗರ್ಭಗುಡಿಯು ಶಿಖರವನ್ನು ಹೊಂದಿದ್ದು ಇದು ಮೂರು ಭಾಗವಾಗಿದೆ. ಇದರಲ್ಲಿ ಕರ್ಣಕೂಟ, ಗೂಡು, ಅರ್ಧಕಂಬ, ಗಾರೆಶಿಲ್ಪ, ಶಾಲಾ ಭಾಗಗಳಿದ್ದು ಕೊನೆಯಲ್ಲಿ ದುಂಡನೆಯ ಸ್ತೂಪಿ ಇದೆ. ಕೊನೆಯ ಭಾಗದಲ್ಲಿ ಕಳಸವನ್ನು ಇಡಲಾಗಿದೆ.

ಮುಖ್ಯದ್ವಾರಗೋಪುರಕ್ಕೆ ಹೊಂದಿಕೊಂಡಂತೆ ಒಳಭಾಗದ ಎರಡೂ ಕಡೆ ಮಂಟಪಗಳಿದ್ದು ಒಳಗೆ ಕಂಬಗಳು ಮಾತ್ರ ಕಂಡುಬರುತ್ತವೆ. ಇವು ಸಾಧಾರಣ ರೀತಿಯಲ್ಲಿದ್ದು ಖಾಲಿಮಂಟಪಗಳಾಗಿ ಇಂದು ಉಳಿದಿವೆ. ಪ್ರಾಕಾರದಲ್ಲಿ ಬಲಗಡೆಗೆ ಒಂದು ನೀರಿನ ಬಾವಿ ಇದೆ. ಅದೇ ರೀತಿಯಲ್ಲಿ ದೇವಾಲಯದ ಎಡಭಾಗದಲ್ಲಿ ಪ್ರಾಕಾರದ ಒಳಗೆ ದೇವಾಲಯವನ್ನು ಕಟ್ಟಿಸಿದ ಉಲ್ಲೇಖವಿರುವ ಶಾಸನದ ಬಂಡೆಯನ್ನು ನಿಲ್ಲಿಸಲಾಗಿದೆ. ಈ ಎಲ್ಲಾ ಭಾಗಗಳು ಪ್ರಾಕಾರದ ಒಳಗಿದ್ದರೆ, ಹೊರಗಡೆಯಲ್ಲಿ ಮುಖ್ಯದೇವಾಲಯದ ಎದುರಿಗೆ ದ್ವಾರಗೋಪುರದ ಮುಂದೆ ಅಭಿಮುಖವಾಗಿರುವ ಆಂಜನೇಯ ಮೂರ್ತಿಯ ಗುಡಿಯಿದ್ದು ಸರಳವಾಗಿದೆ. ಈ ವಿಗ್ರಹವನ್ನು ಎರಡು ಅಡಿ ಎತ್ತರದ ಪೀಠದ ಮೇಲೆ ನಿಲ್ಲಿಸಲಾಗಿದ್ದು, ಸಮಭಂಗಿಯ ಅಂಜಲಿಹಸ್ತ ವಿಗ್ರಹವಾಗಿದೆ (ಛಾಯಾಚಿತ್ರ ೩೪). ಮೂರ್ತಿಯ ಎರಡು ಕಡೆಗಳಲ್ಲಿ ಅರ್ಧಕಂಬಗಳನ್ನು ಬಳ್ಳಿಗಳಿಂದ ಅಲಂಕರಿಸಿ, ಪ್ರಭಾವಳಿಯನ್ನು ರಚಿಸಿದ್ದಾರೆ. ಮಧ್ಯದಲ್ಲಿ ಕೀರ್ತಿಮುಖವಿದೆ. ಅದೇ ರೀತಿಯಲ್ಲಿ ಪೂರ್ವಕ್ಕೆ ಮುಖಮಾಡಿದ ಇನ್ನೊಂದು ಗರ್ಭಗುಡಿಯಿದ್ದು ಇದರಲ್ಲಿ ಗರುಡನು ಅಂಜಲಿಹಸ್ತದಲ್ಲಿದ್ದು ಕಿರೀಟ, ಆಭರಣ, ವಸ್ತ್ರವನ್ನು ಧರಿಸಿದ್ದಾನೆ. ಇದನ್ನು ಎರಡು ಅಡಿ ಎತ್ತರದ ಪೀಠದ ಮೇಲೆ ನಿಲ್ಲಿಸಿರುವರು (ಛಾಯಾಚಿತ್ರ ೩೫). ಮೂರ್ತಿಯು ಬಹಳ ಸುಂದರವಾಗಿದ್ದು ಪ್ರಸನ್ನಚಿತ್ತದಿಂದ ಕಣ್ಣುಮುಚ್ಚಿರುವ ವಿಗ್ರಹವಾಗಿದೆ.

ದ್ವಾರಗೋಪುರದ ಎದುರಿಗೆ ದೀಪಸ್ತಂಭವಿದ್ದು ಪೀಠ ಮಾತ್ರ ಇಂದು ಉಳಿದುಕೊಂಡಿದೆ. ಅದರ ಪಕ್ಕದಲ್ಲಿ ಬಲಿಪೀಠದ ಕಲ್ಲನ್ನು ಆರುಭಾಗಗಳಿಂದ ಅಲಂಕರಿಸಿದ್ದು, ಇದರಲ್ಲಿ ತ್ರಿಪಟ್ಟಕುಮುದ ಭಾಗವಿದೆ (ಛಾಯಾಚಿತ್ರ ೩೬). ಮುಂದೆ ಚೌಕಕಾರದ ಪೀಠದ ಮೇಲೆ ನಲವತ್ತು ಅಡಿ ಎತ್ತರವಿರುವ ಗರುಡಸ್ತಂಭವನ್ನು ನಿಲ್ಲಿಸಿದ್ದು ಅಷ್ಟಮುಖವನ್ನು ಹೊಂದಿದೆ (ಛಾಯಾಚಿತ್ರ ೩೭). ಇದು ಏಕಶಿಲೆ ಸ್ತಂಭವಾಗಿದ್ದು ಕೆಳಗಿನ ಭಾಗದಲ್ಲಿ ವಿಷ್ಣುವಿನ ಚಿಹ್ನೆಗಳಾದ ಶಂಖ, ಚಕ್ರ, ನಾಮಾಗಳನ್ನು ಉಬ್ಬುಶಿಲ್ಪಗಳಾಗಿ ಕೆತ್ತಿರುವರು.

ವರದರಾಜ ಪೆರುಮಾಳ್ ದೇವಾಲಯವು ದೊಡ್ಡ ದೇವಾಲಯ ಮಾತ್ರವಾಗಿರದೆ, ಅದರ ಕಲಾಕೃತಿಯಲ್ಲಿ ಶಿಖರಗಳು ಅದ್ಭುತ ಭಾಗವಾಗಿವೆ. ಅಲ್ಲಿನ ಗಾರೆಯಶಿಲ್ಪಗಳನ್ನು ಹೆಚ್ಚು ಸುಂದರವಾಗಿಯೂ ನಿರ್ಮಿಸಿ ದೇವಾಲಯದ



ನಕ್ಷೆ-೯ ವರದರಾಜ ಪೆರುಮಾಳ್ ದೇವಾಲಯದ ತಲನಕ್ಷೆ





ಛಾ ಚಿ ೩೦. ವರದರಾಜ ಪೆರುಮಾಳ್ ವಿಗ್ರಹ
ಅಣ್ಣಯೂರು



ಛಾ ಚಿ ೩೧. ಆಳ್ವಾರರ ಮೂರ್ತಿಗಳು, ಅಣ್ಣಯೂರು



ಛಾ ಚಿ ೩೨. ವರದರಾಜ ಪೆರುಮಾಳ್ ದೇವಾಲಯ ನೋಟ, ಅಗ್ಗೆಯೂರು



ಛಾ ಚಿ ೩೩. ತಾಯಾರಮ್ಮ ಮೂರ್ತಿ
ಅಗ್ಗೆಯೂರು



ಛಾ ಚಿ ೩೪. ಆಂಜನೇಯ ಮೂರ್ತಿ, ಅಣ್ಣಯೂರು



ಛಾ ಚಿ ೩೫. ಗರುಡಮೂರ್ತಿ, ಅಣ್ಣಯೂರು



ಛಾ ಚಿ ೩೬. ಬಲಿಪೀಠ, ಅಣ್ಣಯೂರು



ಛಾ ಚಿ ೩೭. ಗರುಡಸ್ತಂಭ, ಅಣ್ಣಯೂರು






ಸೌಂದರ್ಯವನ್ನು ದ್ವಿಗುಣಗೊಳಿಸಲಾಗಿದೆ. ಅಷ್ಟೆ ಅಲ್ಲದೆ ಈ ದೇವಾಲಯವು ಒಂದು ದೊಡ್ಡ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಸ್ಥಾನವಾಗಿ ಸಮಾಜದ ಒಂದು ಮುಖ್ಯ ಅಂಗವಾಗಿದ್ದಿತು. ದಿನಾಲು ನಡೆಯುವ ಪೂಜಾವಿಧಿಗಳು, ಸಾಂಸ್ಕೃತಿಕ ಉತ್ಸವಗಳು ಸದಾ ಜನರನ್ನು ತನ್ನೆಡೆಗೆ ಸೆಳೆಯುವ ಆಲಯವಾಗಿದ್ದಿತು. ದೇವಾಲಯದಲ್ಲಿ ದಿನನಿತ್ಯ ನಡೆಯುವ ಪೂಜೆಯು ಬೆಳಿಗ್ಗೆ, ಸಾಯಂಕಾಲ ದಿನದಲ್ಲಿ ಎರಡುಬಾರಿ ನಡೆಸಲಾಗುತ್ತಿದ್ದಿತು. ಇದು ಇಂದಿಗೂ ಮುಂದುವರೆದುಕೊಂಡು ಬಂದಿದೆ. ಪೂಜೆಯ ನಂತರ ನೈವೇದ್ಯವನ್ನು ತಯಾರಿಸಿ ದೇವರಿಗೆ ಅರ್ಪಿಸಿದ ಮೇಲೆ ಅದನ್ನು ಹಂಚಲಾಗುತ್ತಿದ್ದು, ಪೂಜೆಯ ವೇಳೆಯಲ್ಲಿ ಸದಾ ದೇವರ ಮುಂದೆ ದೀಪಾರಾಧನೆ ನಡೆಯುತ್ತಿದ್ದಿತು. ಇದಲ್ಲದೆ ದೇವರ ಪೂಜಾವಿಧಿಗಳಲ್ಲಿ ಅಂಗಭೋಗವು ಸೇರಿಕೊಂಡರೆ, ದೇವಾಲಯದ ಒಂದು ಮುಖ್ಯ ಸೇವೆಯಲ್ಲಿ ರಂಗಭೋಗವು ನಡೆಯುತ್ತಿದ್ದುದು ಶಾಸನದಲ್ಲಿ ಉಲ್ಲೇಖವಾಗಿದೆ.[೬೭] ರಂಗಭೋಗವು ಪೂಜೆಯ ನಂತರ ನಡೆಯುವ ಒಂದು ಸೇವೆಯಾಗಿತ್ತು. ಇದರಲ್ಲಿ ಸಂಗೀತ, ಗಾಯನ, ನೃತ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯಿದ್ದು, ಇದರಲ್ಲಿ ಹೆಣ್ಣುಗಂಡುಗಳು ಇಬ್ಬರು ಭಾಗವಹಿಸುತ್ತಿದ್ದರು. ಈ ಎಲ್ಲಾ ಸೇವೆಗಳನ್ನು ನಡೆಸಲು ದಾನಿಗಳು ಭೂದಾನವನ್ನು ಮಾಡಿದುದು ಅದೇ ಶಾಸನದಲ್ಲಿ ತಿಳಿಸಲಾಗಿದೆ.

೮. ರಾಮನಾಥ ದೇವಾಲಯ, ರಾಮಗಡ

"ಶಾಲಿವಾಹನ ಶಕವರುಷ ೧೪೫೦ನೆಯ ಸರ್ವಜಿತು ಸಂವತ್ಸರದ ಆಶ್ವಿಜ ಶುಕ್ಲ ೧೦ ಶ್ರೀಕೃಷ್ಣದೇವರಾಯ ಮಹಾರಾಯರು ಆಳ್ವಿಕೆ ನಡೆಸುವಾಗ ಹೊಸಮಲೆದುರ್ಗದಲಿ ಮುತಯ ಮುಮ್ಮಡಿಸಿಂಗನ ಕುಮಾರ ಖಂಡೆಯರಾಯ ಕಂಪಿಲರಾಯನ ಪಟ್ಟಕ್ಕೆ ಸಲುವ ರಾಣೀವಾಸ ವೀರಗುಜಲ ಹರಿಹರದೇವಿಯರ ಪುತ್ರ ಹೊಸಮಲೆಯ ರಾಮನಾಥ ಒಡೆಯರು ಛಪ್ಪನದೇಶದ ರಾಯರಗಂಡ ಆತನ ಮನೆಯ ಅಧಿಕಾರಿ ಸೋಮಣಯ್ಯ ವಿಜಯನಗರದ ಹೂವಿನ ಬಾಗಿಲ ಹನುಮಂತ ದೇವರ ಪೂಜಾರಿ ರಾಮಣನು ಆತನ ಮಗನು ಸೋಮಣಯ್ಯನು ಶಿಷ್ಯ ರಾಮನಾಥನ ಕೋನೇರಿನಾಯಕನ ಮಗಳು ಕಾಟನಾಯಕಒಡೆಯ ಹಳದ ರಾಮನಾಥನ ಗೋಪಾಯಿ ಆಕೆಯ ತಮ್ಮ ರಾಮನಾಥ ದೇವರ ತೂಳದ ರಾಮಣನು ಹೊಸಮಲೆದುರ್ಗದ ರಾಮನಾಥದೇವರ ದೇವಾಲಯವನ್ನು ಕಟ್ಟಿಸಿದಳು. ಗಂಟೇ ಜೇಗಟೆ ಹರಿವಾಣ ಚೆಂಬು ಮೇಲೆ ಹೊನ್ನನು ಸಮರ್ಪಿಸಿ ರಾಮನಾಥನ ಕಾಲದ ಪೂರ್ವದ ಛಪ್ಪನ್ನ ಸಮಂದಿ ವೀರರಿಗೆ ವೀರಸ್ವರ್ಗವಾಗಬೇಕೆಂದು ಕಟ್ಟಿಸಿದ ದೇವಾಲಯವಾಗಿದೆ." [೬೮]


ರಾಮನಮಲೆಯ ಘಟ್ಟಪ್ರದೇಶದಲ್ಲಿ ನಿರ್ಮಿತವಾದ ರಾಮನಾಥ ದೇವಾಲಯವು, ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿಗೆ ಸೇರಿದೆ. ಪೂರ್ವಾಭಿಮುಖವಾದ ಈ ದೇವಾಲಯವು ಗರ್ಭಗೃಹ, ತೆರೆದ ಮುಖಮಂಟಪವನ್ನು ಹೊಂದಿದೆ (ನಕ್ಷೆ ೧೦). ಗರ್ಭಗುಡಿಯಲ್ಲಿರುವ ಪೀಠದ ಮೇಲೆ ಕಮ್ಮಟದುರ್ಗದ ಕುಮಾರರಾಮನ ಶಿರವೆಂದು ಇಂದಿಗೂ ಪೂಜಿಸಿಕೊಳ್ಳುವ ಒಂದು ದುಂಡಾದ ಒರಟಾದ ಕಪ್ಪುಶಿಲೆಯನ್ನು ಇಡಲಾಗಿದೆ. ಪೀಠವು ಎರಡು ಅಡಿ ಎತ್ತರವಿದ್ದು ಮಧ್ಯದಲ್ಲಿ ಪೀಠಕ್ಕೆ ರಂಧ್ರವಿರುವುದರಿಂದ ಇದರ ಮೇಲೆ ಅದೇ ಗರ್ಭಗುಡಿಯಲ್ಲಿರುವ ಮೂಲಮೂರ್ತಿಯನ್ನು ಇಂದು ಪೀಠದ ಹಿಂದೆ ಇಡಲಾಗಿದೆ. ಈ ಮೂರ್ತಿಯು ಮೂಲ ಮೂರ್ತಿಯಾಗಿ ಕಂಡುಬರುತ್ತದೆ. ಈ ಮೂರ್ತಿಯು ಎರಡುವರೆ ಅಡಿ ಎತ್ತರವಿದ್ದು ನಾಲ್ಕು ಕೈಗಳನ್ನು

ಹೊಂದಿ ನಿಂತ ಮೂರ್ತಿಯಾಗಿದೆ (ಛಾಯಾಚಿತ್ರ ೩೯). ಹಿಂದಿನ ಕೈಗಳಲ್ಲಿ ಶಂಕಚಕ್ರ ಇದ್ದರೆ ಮುಂದಿನ ಕೈಗಳಲ್ಲಿ ಗದೆ ಕಂಡುಬರುತ್ತದೆ. ಮೂರ್ತಿಯ ಕೆಳಗಡೆ ಕೈಮುಗಿದು ನಿಂತಿರುವ ಹೆಣ್ಣುಶಿಲ್ಪವಿದೆ. ಮೂಲಪೀಠದ ಹಿಂದೆ ಪ್ರಭಾವಳಿಯಿದ್ದು ಇದನ್ನು ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಮೂರ್ತಿಯು ಕೈಯಲ್ಲಿ ತೋಳಬಂಧಿ ಕಾಲಲ್ಲಿ ಕಡಗ ಆಭರಣಗಳನ್ನು, ತಲೆಯಲ್ಲಿ ಕಿರೀಟವನ್ನು ಧರಿಸಿರುವುದು ಕಂಡುಬರುತ್ತದೆ. ಪೀಠಗಳನ್ನು ಎರಡೂ ಭಾಗಗಳಾಗಿ ಕಂಡರಿಸಲಾಗಿದೆ. ಬಾಗಿಲವಾಡವು ಸಾಧಾರಣವಾಗಿದ್ದು ಅಕ್ಕಪಕ್ಕದಲ್ಲಿ ಕೆಳಗೆ ಪದ್ಮದಳಗಳಿವೆ. ಮೇಲೆ ಲಲಾಟಬಿಂಬದಲ್ಲಿ ಹೂದಳವಿದೆ. ಬಾಗಿಲುವಾಡದ ಮೇಲೆ ಐದು ಸಣ್ಣದಾದ ಗೂಡುಗಳಿದ್ದು ಮಧ್ಯದಲ್ಲಿ ಗಣೇಶನ ವಿಗ್ರಹವಿದೆ.

ಗರ್ಭಗೃಹದ ಮುಂದೆ ನಾಲ್ಕುಸ್ತಂಭಗಳ ತೆರೆದ ಮಂಟಪವಿದ್ದು ಈ ಸ್ತಂಭಗಳು ಪೀಠವನ್ನು ಹೊಂದಿವೆ. ಸ್ತಂಭಗಳನ್ನು ಮೂರುಭಾಗಗಳಾಗಿ ವಿಂಗಡಿಸಿದ್ದು ಇದರಲ್ಲಿ ಯಾವುದೇ ಶಿಲ್ಪಗಳಿಲ್ಲ (ಛಾಯಾಚಿತ್ರ ೪೦). ಮೇಲಿನ ಬೋಧಿಗೆಗಳು ಸಣ್ಣದಾದ ಮೊಗ್ಗುಗಳನ್ನು ಹೊಂದಿದ್ದು ವಿಜಯನಗರ ಶೈಲಿಯ ಮಾದರಿಯಂತಿದೆ. ಈ ಮಂಟಪದ ಗೋಡೆಯಲ್ಲಿ ಸುತ್ತಲೂ ಆರು ಗೂಡುಗಳನ್ನು ನಿರ್ಮಿಸಲಾಗಿದ್ದು, ಗೋಡೆಯಲ್ಲಿ ನಾಲ್ಕುಸ್ತಂಭಗಳನ್ನು ಸೇರಿಸಿ ಕಟ್ಟಿರುವುದರಿಂದ ಅರ್ಧಕಂಬಗಳಾಗಿ ಕಂಡುಬರುತ್ತವೆ. ಇದರ ಮೇಲಿನ ಛಾವಣಿಯು ಸರಳರೀತಿಯಲ್ಲಿದ್ದು ದೇವಾಲಯದ ಮುಂದೆ ಬಲಗಡೆ ಭಾಗದಲ್ಲಿ ದೇವಾಲಯ ನಿರ್ಮಾಣವನ್ನು ತಿಳಿಸುವ ಶಾಸನದ ಬಂಡೆಯನ್ನು ನಿಲ್ಲಿಸಲಾಗಿದೆ. ಈ ಮಂಟಪದಲ್ಲಿ ಗೋಡೆಗೆ ಹೊಂದಿಕೊಂಡಂತೆ ನಿಂತ ಮನುಷ್ಯನ ಮೂರ್ತಿಶಿಲ್ಪವಿದ್ದು ಕೈಯಲ್ಲಿ ಬಿಲ್ಲುಬಾಣವನ್ನು ಹಿಡಿದಿರುವುದು ಕಂಡುಬರುತ್ತದೆ.

ದೇವಾಲಯದ ಮಂಟಪದ ಮೇಲೆ ಮುಂದುಗಡೆಯಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ ಮೂರು ಗೂಡು (ಕೋಷ್ಠ) ಗಳಿದ್ದು, ಅವುಗಳ ಮೇಲೆ ಶಾಲಾರೀತಿಯ ಹಂತಗಳನ್ನು ನಿರ್ಮಿಸಿರುವುದರಿಂದ ಗೋಪುರದ ಹಾಗೇ ಕಂಡುಬರುತ್ತವೆ. ಇದರ ಕೆಳಗಡೆ ಸಣ್ಣ ಸಣ್ಣ ಗೂಡುಗಳನ್ನು ಬಿಡಲಾಗಿದ್ದು, ಮೂಲಶಿಖರವನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ (ಛಾಯಾಚಿತ್ರ ೪೧). ಮೊದಲ ಹಂತದಲ್ಲಿ ಹೂದಳಗಳನ್ನು ಬಿಡಿಸಿ, ಇದರ ಮೇಲೆ ಬಳ್ಳಿಯನ್ನು ರಚಿಸಿದ್ದು ಮೇಲೆ ಕಂಬ, ಗೂಡು, ಮಧ್ಯದಲ್ಲಿ ಮನುಷ್ಯ ಗಾರೆಶಿಲ್ಪಗಳನ್ನು ನಿರ್ಮಿಸಿರುವರು. ಇವುಗಳ ಮೇಲ್ಭಾಗದಲ್ಲಿ ಕುಬ್ಜಮಾನವರ ಗಾರೆಶಿಲ್ಪಗಳು, ನಾಲ್ಕು ಮೂಲೆಗಳಲ್ಲಿ ಕುಳಿತಭಂಗಿಯಲ್ಲಿ ಸಿಂಹಗಳು ಅದರ ಮೇಲೆ ನಾಲ್ಕು ನಂದಿವಿಗ್ರಹಗಳು ಮತ್ತು ಇವುಗಳ ಮೇಲೆ ಮಾನವಾಕೃತಿಯ ಗಾರೆಶಿಲ್ಪಗಳಿವೆ. ಕೊನೆಯಲ್ಲಿ ಸ್ತೂಪವಿದ್ದು ಅದರ ಕೆಳಗಡೆ ಕಮಲದ ಎಲೆಗಳನ್ನು ನಿರ್ಮಿಸಿದ್ದಾರೆ. ಈ ಸ್ತೂಪದ ಮೇಲೆ ಸಿಂಹಗಳ ತಲೆಯನ್ನು ಚಿತ್ರಿಸಿರುವರು. ಕೊನೆಯಲ್ಲಿ ಮೂರು ಕಳಸಗಳನ್ನಿಟ್ಟಿದ್ದು ಕಂಡುಬರುತ್ತದೆ.

ಈ ದೇವಾಲಯದ ಮುಂದುಗಡೆ ಚೌಕಕಾರದ ಪೀಠದ ಮೇಲೆ ಮಧ್ಯದಲ್ಲಿ ದೀಪಸ್ತಂಭವನ್ನು ನಿಲ್ಲಿಸಲಾಗಿದೆ. ಈ ಸ್ತಂಭದ ಮೇಲೆ ಚೌಕಕಾರದ ಫಲಕವಿದ್ದು ಮಧ್ಯದಲ್ಲಿ ಕಬ್ಬಿಣದ ದೀಪವಿದೆ. ಈ ಸ್ತಂಭವು ಸರಳ ರೀತಿಯಲ್ಲಿದ್ದು ಯಾವುದೇ ಅಲಂಕರಣವನ್ನು ಹೊಂದಿರುವುದಿಲ್ಲ (ಛಾಯಾಚಿತ್ರ ೪೨). ಈ ದೇವಾಲಯದ ಹಜಾರದಲ್ಲಿ ಅನೇಕ ಒಡೆದು ಹೋದ ಶಿಲ್ಪಗಳು ಮತ್ತು ವೀರಗಲ್ಲುಗಳು ಅಸಂಖ್ಯಾತವಾಗಿ ಕಂಡುಬರುತ್ತವೆ.



ನಕ್ಷೆ-೧೦ ರಾಮನಾಥ ದೇವಾಲಯದ ತಲನಕ್ಷೆ





ಛಾ ಚಿ ೩೯. ರಾಮನಾಥ ಮೂರ್ತಿ, ರಾಮಗಡ



ಛಾ ಚಿ ೪೦. ಸ್ತಂಭ, ರಾಮಗಡ



ಛಾ ಚಿ ೪೧. ರಾಮನಾಥ ದೇವಾಲಯದ ಸಮಗ್ರ ಚಿತ್ರಣ, ರಾಮಗಡ









ಛಾ ಚಿ ೪೨. ದೀಪಸ್ತಂಭ, ರಾಮಗಡ


೯. ರಘುನಾಥ ದೇವಾಲಯ, ಹಂಪಿ

ರಘುನಾಥ ದೇವಾಲಯವು ಕಮಲಾಪುರ ಹಂಪಿ ರಸ್ತೆಯ ಪೂರ್ವಕ್ಕೆ ತುರ್ತುಕಾಲುವೆಯ ಉತ್ತರಕ್ಕಿರುವ ವೈಷ್ಣವ ದೇವಾಲಯವಾಗಿದೆ. ತೆರಕಣಾಂಬಿಯ ವಿರೂಪಾಕ್ಷಭಟ್ಟನ ಮಗ ಗೋಪಿನಾಥ ದೀಕ್ಷಿತನು ಹಿರಿಯ ಕಾಲುವೆಯ ಬಳಿ ಕ್ರಿ.ಶ. ೧೫೨೪ರಲ್ಲಿ ರಘುನಾಥ ದೇವರನ್ನು ಪ್ರತಿಷ್ಠಾಪಿಸಿದನು. ಈ ದೇವಾಲಯದ ದಿನದ ಸೇವೆಗಾಗಿ ಪಂಪಾವಿರೂಪಾಕ್ಷ ದೇವಾಲಯದಿಂದ ದಿನವೊಂದಕ್ಕೆ ಐದುಪಡಿ ಅಕ್ಕಿ, ಕಾಲುಪಡಿ ಎಣ್ಣೆಯನ್ನು ಕೊಡುವ ಕಟ್ಟಳೆ ಮಾಡಿದನು. ಅದೇ ರೀತಿಯಾಗಿ ಕೃಷ್ಣದೇವರಾಯನು ಇದೇ ದೇವಾಲಯದ ಅಮೃತಪಡಿಗೆ ದಿನ ಒಂದಕ್ಕೆ ಇಪ್ಪತ್ತುಪಡಿ ಅಕ್ಕಿ, ಒಂದುಪಡಿ ತುಪ್ಪ, ಒಂದುಪಡಿ ಎಣ್ಣೆಯನ್ನು, ತಿಂಗಳಿಗೆ ಒಂದು ಗದ್ಯಾಣ ಹೊನ್ನನು ನೀಡುವ ಕಟ್ಟಳೆ ಮಾಡಿ ಶಾಸನವನ್ನು ಹಾಕಿಸಿದ್ದಾನೆ. ದೇವಾಲಯದ ನಿರ್ಮಾಪಕನಾದ ಗೋಪಿನಾಥ ದೀಕ್ಷಿತನು ದೇವರ ಅಮೃತಪಡಿಗಾಗಿ ನೆಳಲಹುಣಿಸೆ ಅಗ್ರಹಾರದಲ್ಲಿ ಐಗುಳಗದ್ದೆಯನ್ನು ಮತ್ತೊಂದು ಕಡೆಯಲ್ಲಿ ಮೂಗುಳ ಗದ್ದೆಯನ್ನು ನೀಡಿ, ಯರಗುಡಿ ಎಂಬ ಸರ್ವಮಾನ್ಯ ಅಗ್ರಹಾರದಲ್ಲಿ ಹತ್ತು ವೃತ್ತಿಯನ್ನು ದೇವರ ಕಾರ್ಯಕ್ಕೆ ನೀಡಿರುವುದು ಶಾಸನದಿಂದ ತಿಳಿದುಬರುತ್ತದೆ.[೪೮] ಈ ದೇವಾಲಯವು ಗರ್ಭಗೃಹ, ಅಂತರಾಳ, ಎತ್ತರದ ಪೀಠದ ಮೇಲೆ ಪ್ರದಕ್ಷಿಣೆ ಪಥವನ್ನು ಹೊಂದಿದ್ದು ಇದರ ಸುತ್ತಲೂ ಕಂಬಗಳನ್ನು ಅಳವಡಿಸಲಾಗಿದೆ (ನಕ್ಷೆ ೧೧). ಪೀಠದಿಂದ ಕೆಳಗೆ ಇಳಿದುಬರಲು ಮೆಟ್ಟಿಲುಗಳಿದ್ದು ಮುಂದುಗಡೆಯಲ್ಲಿ ಹನ್ನೆರಡು ಕಂಬಗಳಿಂದ ಕೂಡಿದ ತೆರೆದ ಮಂಟಪವಿದೆ. ಇದು ಉತ್ತರಕ್ಕೆ ಮುಖಮಾಡಿದ ದೇವಾಲಯವಾಗಿದೆ.

ಅಧಿಷ್ಠಾನದಲ್ಲಿ ನಾಲ್ಕು ಭಾಗಗಳಿದ್ದು ಅವುಗಳಲ್ಲಿ ಉಪಾನ, ಜಗತೀ, ಗಳ ಮತ್ತು ಪಟ್ಟಿಕಾಗಳಿವೆ. ಇವುಗಳು ಸಾಧಾರಣ ರೀತಿಯದಾಗಿದ್ದು ಯಾವುದೇ ಅಲಂಕರಣವನ್ನು ಒಳಗೊಂಡಿರುವುದಿಲ್ಲ. ಗರ್ಭಗುಡಿಯನ್ನು ಎತ್ತರವಾದ ಪೀಠದ ಮೇಲೆ ಕಟ್ಟಲಾಗಿದೆ. ಒಳಗಡೆ ಪೀಠ ಮಾತ್ರ ಇದ್ದು ಮೂಲಮೂರ್ತಿಯು ಕಂಡುಬರುವುದಿಲ್ಲ. ಇದರ ಮುಂದಿನ ಭಾಗದಲ್ಲಿ ಅಂತರಾಳವು ಚಚ್ಚೌಕಾರದಲ್ಲಿದ್ದು ಈ ಎರಡು ಮಂಟಪಗಳ ಸುತ್ತು ಪ್ರದಕ್ಷಿಣೆಕಟ್ಟೆ ಇದ್ದು ಇದನ್ನು ಕಂಬಗಳಿಂದ ಅಳವಡಿಸಲಾಗಿದೆ. ಮೇಲಿನ ಛತ್ತಿನಲ್ಲಿ ಇಟ್ಟಿಗೆ, ಗಾರೆಗಚ್ಚಿನಿಂದ ಮಾಡಿದ ಶಿಲ್ಪಗಳನ್ನು ಅಲಂಕರಿಸಿದ್ದು ಇಂದು ಹಾಳಾದ ಸ್ಥಿತಿಯಲ್ಲಿವೆ. ತೆರೆದ ಮಂಟಪದಲ್ಲಿರುವ ಕಂಬಗಳಿಗೆ ಯಾವುದೇ ಪೀಠ ಇರುವುದಿಲ್ಲ. ಇವುಗಳು ಸರಳ ರೀತಿಯವಾಗಿದ್ದು ಒಂದೊಂದು ಕಂಬಗಳು ಮೂರುಭಾಗಗಳ ನಾಲ್ಕು ಮುಖಗಳಿಂದ ಕೂಡಿವೆ (ಛಾಯಾಚಿತ್ರ ೪೩). ಇವುಗಳಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಿರುವುದಿಲ್ಲ. ಈ ಎಲ್ಲಾ ಕಂಬಗಳಿಗೆ ಗಾರೆಯಿಂದ ಪ್ರಭಾವಳಿಯನ್ನು ಮತ್ತು ಹೂಬಳ್ಳಿ, ಶಿಲ್ಪಗಳನ್ನು ಚಿತ್ರಿಸಿರುವರು. ಈ ದೇವಾಲಯಕ್ಕೆ ಗೋಪುರವು ಇರುವುದಿಲ್ಲ. ಸುತ್ತಲೂ ಮಾಡಿನಲ್ಲಿ ಗಾರೆಯಶಿಲ್ಪಗಳಿದ್ದು ಅಲ್ಪಸ್ವಲ್ಪ ಉಳಿದುಕೊಂಡಿರುವುದು ಕಂಡುಬರುತ್ತದೆ. ಈ ದೇವಾಲಯವು ಇಂದು ಶಿಥಿಲಾವಸ್ಥೆಯಲ್ಲಿದೆ.

೧೦. ಲಕ್ಷ್ಮೀನರಸಿಂಹ ದೇವಾಲಯ, ಹಂಪಿ

ಇಂದು ಉಗ್ರನರಸಿಂಹ ಎಂದು ಕರೆಯಲ್ಪಡುವ ಈ ದೇವಾಲಯವು ಮೂಲತಃ ಲಕ್ಷ್ಮೀನರಸಿಂಹ ದೇವಾಲಯವಾಗಿದ್ದು, ಕೃಷ್ಣದೇವಮಹಾರಾಯರ ಉಲ್ಲೇಖವಿರುವ ಕ್ರಿ.ಶ. ೧೫೨೮-೨೯ ರ ಶಾಸನವು, ಅರಸನು



ನಕ್ಷೆ-೧೧ ರಘುನಾಥ ದೇವಾಲಯದ ತಲನಕ್ಷೆ



ಛಾ ಚಿ ೪೩. ರಘುನಾಥ ದೇವಾಲಯದ ಸಮಗ್ರ ಚಿತ್ರಣ, ಹಂಪಿ




ಛಾ ಚಿ ೪೪. ಲಕ್ಷ್ಮೀನರಸಿಂಹ ದೇವಾಲಯದ ಸಮಗ್ರ ಚಿತ್ರಣ, ಹಂಪಿ



ಛಾ ಚಿ ೪೫. ಲಕ್ಷ್ಮೀನರಸಿಂಹ ವಿಗ್ರಹ, ಹಂಪಿ







ನಕ್ಷೆ. ೧೨ ಲಕ್ಷ್ಮೀನರಸಿಂಹ ದೇವಾಲಯದ ತಲನಕ್ಷೆ

೧. ದ್ವಾರಬಾಗಿಲು ೨. ಆವರಣ ೩. ಮೆಟ್ಟಿಲು ೪. ಪೀಠ ೫. ಮೂರ್ತಿ ೬. ಪ್ರಣಾಳ




ಆರ್ಯಕೃಷ್ಣಭಟನ ಕೈಯಲ್ಲಿ ಕೃಷ್ಣಾಪುರದಲ್ಲಿ ಶ್ರೀಲಕ್ಷ್ಮೀನರಸಿಂಹ ದೇವರನ್ನು ಪ್ರತಿಷ್ಠಾಪಿಸಿ ಈ ದೇವರ ಅಮೃತಪಡಿ ನೈವೇದ್ಯಕ್ಕೆ ಹುತ್ತಿ ಸೀಮೆಯ ಹನ್ನೆನಾಡಿನ ವಂಗನೂರು ಗ್ರಾಮವನ್ನು, ಉರುವಕೊಂಡೆ ಸೀಮೆಯ ಬೇಲಜಿಂತೆ ಗ್ರಾಮವನ್ನು ದತ್ತಿಯಾಗಿ ನೀಡಿರುವುದು ಅಲ್ಲೇ ನಿಲ್ಲಿಸಿರುವ ಶಾಸನದಿಂದ ತಿಳಿಯುತ್ತದೆ.[೬೦]

ಪೂರ್ವಾಭಿಮುಖವಾಗಿ ನಿರ್ಮಿಸಿದ ಈ ದೇವಾಲಯ (ಛಾಯಾಚಿತ್ರ ೪೪) ಚೌಕಕಾರದ ಎತ್ತರ ಗೋಡೆಗಳ ಮಧ್ಯೆ, ದೊಡ್ಡದಾದ ಒಂದೇ ಕಲ್ಲಿನ ಬಂಡೆಯಲ್ಲಿ ಮೂರು ಅಡಿ ಎತ್ತರದ ಪೀಠದ ಮೇಲೆ ೬.೭ ಮೀಟರ್ ಎತ್ತರದ ಬೃಹತ್ತಾದ ಲಕ್ಷ್ಮೀನರಸಿಂಹನ ಪ್ರತಿಮೆ ಸ್ಥಾಪಿಸಲಾಗಿದೆ (ನಕ್ಷೆ ೧೨). ತಲೆಯ ಮೇಲೆ ಏಳುಹೆಡೆ ಸರ್ಪವನ್ನು ಕೆತ್ತಲಾಗಿದ್ದು, ಈ ಮೂರ್ತಿಯು ಯೋಗಾಭಂಗಿಯಲ್ಲಿ ಸರ್ಪದ ಮೇಲೆ ಕುಳಿತಿರುವುದು ಕಾಣುತ್ತದೆ. ಮೂರ್ತಿಯ ಎಡಕಾಲು ತೊಡೆಯ ಮೇಲೆ ಲಕ್ಷ್ಮೀ ವಿಗ್ರಹವಿದ್ದು ಅದು ಇಂದು ಕಳಚಿಬಿದ್ದಿದೆ. ದೇವರ ತೊಡೆಯ ಮೇಲೆ ಲಕ್ಷ್ಮೀ ಕುಳಿತಿದ್ದಳೆಂಬುದಕ್ಕೆ ಕುರುಹಾಗಿ ಮೂರ್ತಿಯ ಬೆನ್ನ ಹಿಂದೆ ದೇವಿಯ ಕೈಯೊಂದು ಕಂಡುಬರುತ್ತದೆ. ಈ ಮೂರ್ತಿಯ ಅಕ್ಕಪಕ್ಕದಲ್ಲಿ ತೋರಣಕಂಬವನ್ನು ನಿಲ್ಲಿಸಲಾಗಿದೆ. ಈ ಕಂಬಗಳ ಪೀಠ ಇಂದು ಹಾಳಾಗಿ ಮಧ್ಯದಲ್ಲಿ ಬಳ್ಳಿಗಳನ್ನು ಚಿತ್ರಿಸಲಾಗಿದೆ. ಕಂಬಗಳ ಮೇಲಿಂದ ದೊಡ್ಡದಾದ ಮಕರತೋರಣವು ವಿಗ್ರಹದ ಚೌಕಟ್ಟಿನಲ್ಲಿದೆ. ಮೇಲುತುದಿಯಲ್ಲಿ ಕೀರ್ತಿಮುಖವನ್ನು ಕೆತ್ತಲಾಗಿದೆ (ಛಾಯಾಚಿತ್ರ ೪೫). ಲಕ್ಷ್ಮೀನರಸಿಂಹ ಮೂರ್ತಿಯು ಅಜಾನುಬಾಹುಕೃತಿಯಾಗಿದ್ದು ಸೌಂದರ್ಯಯುತವಾಗಿ ಮೂಡಿಬಂದಿದೆ. ನರಸಿಂಹ ವಿಗ್ರಹದ ತಲೆಯಲ್ಲಿ ಕಿರೀಟವಿದ್ದು ಅಲಂಕಾರಯುತವಾಗಿದೆ. ಕತ್ತಿನಲ್ಲಿ ಕೇಶ ಮತ್ತು ಕಂಠಾಭರಣಗಳು, ನಡುವಿಗೆ ಡಾಬ ಹಾಗೂ ಯಜ್ಞೋಪವೀತವಿದ್ದು, ಕಾಲಲ್ಲಿ ಕಡಗ ಕೈಯಲ್ಲಿ ತೋಳುಬಂಧಿಯಿಂದ ಅಲಂಕರಿಸಲಾಗಿದೆ. ಈ ಮೂರ್ತಿಯ ಅಭ್ಯಂಜನ ಮಾಡಿದ ನೀರು ಹೊರಗೆ ಹೋಗಲು ಪ್ರಣಾಳವು ಎಡಬದಿಯಲ್ಲಿ ಕಂಡುಬರುತ್ತದೆ.

ಈ ದೇವಾಲಯದ ದ್ವಾರದಲ್ಲಿ ಎರಡು ಕಂಬಗಳನ್ನು ನಿಲ್ಲಿಸಿದ್ದು ಅವುಗಳು ಸರಳವಾಗಿ ಎತ್ತರವಾಗಿವೆ. ಇಂದು ಬಿದ್ದುಹೋದ ಗೋಡೆಗಳನ್ನು ಹೊಸದಾಗಿ ಜೀರ್ಣೋದ್ಧಾರ ಮಾಡಲಾಗಿದ್ದು, ಈ ಮೂಲ ಮೂರ್ತಿಯನ್ನು ಕ್ರಿ.ಶ. ೧೯೮೫ - ೮೬ರ ಸುಮಾರಿಗೆ ನವೀಕರಿಸಲಾಗಿದೆ. ಮೂರ್ತಿಯು ಮೂಲರೂಪವನ್ನು ಇಂದು ಕಳೆದುಕೊಂಡಿದೆ. ಈ ದೇವಾಲಯದಲ್ಲಿ ಪೂಜಾದಿ ಕಾರ್ಯಕ್ರಮಗಳು ದೀರ್ಘವಾಗಿ ನಡೆಯುತ್ತಿದ್ದವೆಂಬುದಕ್ಕೆ ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ. ದೇವಾಲಯದ ಸುತ್ತುಗೋಡೆಯು ಇಂದು ಅರ್ಧಕ್ಕೆ ಮಾತ್ರ ಕಂಡುಬರುತ್ತಿದ್ದು ಪರಿಪೂರ್ಣಗೊಂಡಿತ್ತೊ ಇಲ್ಲವೊ ತಿಳಿದುಬರುವುದಿಲ್ಲ. ದೇವಾಲಯದ ಲಕ್ಷ್ಮೀನರಸಿಂಹ ಮೂರ್ತಿಯು ವಿಜಯನಗರದ ನಿರ್ಣಾಯಕ ಯುದ್ಧವಾದ ನಂತರ ಪೂರ್ತಿ ಹಾಳಾಗಿ ಇಂದು ಭಗ್ನಗೊಂಡ ಮೂರ್ತಿಯು ಮಾತ್ರ ಉಳಿದುಕೊಂಡು ಬಂದಿರುವುದು ಕಂಡುಬರುತ್ತದೆ. ಇಂದು ಹೊಸದಾಗಿ ದ್ವಾರಕ್ಕೆ ಅಡ್ಡಲಾಗಿ ಕಬ್ಬಿಣದ ತಡೆಯನ್ನು ನಿಲ್ಲಿಸಿರುವರು.

೧೧. ತಿರುಮಲ ದೇವಾಲಯ, ತಗರ್ಥಿ ಅಗ್ರಹಾರ

ತಿರುಮಲ ದೇವಾಲಯವು ಸಾಗರ ತಾಲೂಕಿನ ತ್ಯಾಗರ್ತಿ ಅಗ್ರಹಾರ ಗ್ರಾಮದಲ್ಲಿ ನಿರ್ಮಿತವಾಗಿದೆ. ಇದು ಚೌಕಾಕಾರ ಅಧಿಷ್ಠಾನದ ಗರ್ಭಗುಡಿಯನ್ನು ಹೊಂದಿದ್ದು ಮುಂದೆ ಅಂತರಾಳವನ್ನು ಒಳಗೊಂಡಿದೆ (ನಕ್ಷೆ ೧೩).



ನಕ್ಷೆ-೧೨ ತಿರುಮಲ ದೇವಾಲಯದ ತಲನಕ್ಷೆ



ಭಾ ಚಿ ೪೬. ತಿರುಮಲ ದೇವಾಲಯ, ತ್ಯಾಗರ್ತಿ ಅಗ್ರಹಾರ



ಭಾ ಚಿ ೪೭. ತಿರುಮಲ ಮೂರ್ತಿ, ತ್ಯಾಗರ್ತಿ ಅಗ್ರಹಾರ

ಇಂದು ಹಳೆಯ ದೇವಾಲಯವನ್ನು ಕಿತ್ತು ಹೊಸದಾದ ಗರ್ಭಗುಡಿಯನ್ನು ಮಾತ್ರ ಹೊಂದಿರುವ ಕಟ್ಟಡವನ್ನು ನಿರ್ಮಿಸಲಾಗಿದ್ದು, ಪೂರ್ವಕ್ಕೆ ಮುಖಮಾಡಿದ ದೇವಾಲಯವಾಗಿದೆ. ಗರ್ಭಗುಡಿಯ ಮೇಲೆ ಸಿಮೆಂಟಿನಿಂದ ಹಾಕಿದ ಛಾವಣಿಯು ಸಮತಟ್ಟಾಗಿದೆ (ಛಾಯಾಚಿತ್ರ ೪೬). ದೇವಾಲಯದ ಬಾಗಿಲು ಚೌಕಟ್ಟನ್ನು ಕಟ್ಟಿಗೆಯಿಂದ ನಿರ್ಮಿಸಿ ಮೇಲಿನ ಪಟ್ಟಿಯನ್ನು ಬಳ್ಳಿಗಳಿಂದ ಅಲಂಕರಿಸಲಾಗಿದೆ. ಈ ದೇವಾಲಯವನ್ನು ಕ್ರಿ.ಶ. ೧೫೨೩ರಲ್ಲಿ ಕೃಷ್ಣರಾಯನ ಆಳ್ವಿಕೆಯಲ್ಲಿ ನಿರ್ಮಿಸಲಾಗಿದ್ದು, ದೇವಾಲಯದ ಬಲಗಡೆಯಲ್ಲಿ ಶಾಸನಗಳ ಎರಡು ಬಂಡೆಗಳನ್ನು ನಿಲ್ಲಿಸಲಾಗಿದೆ.[೬೨] ಈ ದೇವಾಲಯದಲ್ಲಿ ಹಳೆಯ ಕುರುಹುಗಳಾಗಿ ಅಧಿಷ್ಠಾನದ ಕೆಲವು ಭಾಗಗಳು ಮತ್ತು ಗರ್ಭಗುಡಿಯ ಮೂಲಮೂರ್ತಿಯು ಮಾತ್ರ ಉಳಿದುಕೊಂಡು ಬಂದಿದೆ. ಇಂದು ಈ ಮೂರ್ತಿಯನ್ನು ವರದರಾಜ ದೇವಾಲಯದ ಗರ್ಭಗುಡಿಯಲ್ಲಿ ಇಟ್ಟಿದ್ದು ದಿನಾಲು ಅಲ್ಲೇ ಪೂಜೆಯನ್ನು ನೆರವೇರಿಸಲಾಗುತ್ತಿದೆ. ಮೂಲ ದೇವಾಲಯದ ಜೀರ್ಣೋದ್ಧಾರ ಕಾರ್ಯ ಪ್ರಗತಿಯಲ್ಲಿದ್ದು, ಗ್ರಾಮದ ಜನರು ಇದರಲ್ಲಿ ಪಾಲ್ಗೊಂಡು ದೇವಾಲಯದ ನಿರ್ಮಾಣವನ್ನು ಕೈಗೊಂಡಿರುವರು. ಈ ದೇವಾಲಯವು ರಾಯನ ಕಾಲದಲ್ಲಿ ನಿರ್ಮಾಣ ಹೊಂದಿದ್ದರೂ ಮುಂದಿನ ಅರಸನಾದ ಸದಾಶಿವರಾಯನ ಕಾಲದಲ್ಲಿ ದೇವಾಲಯಕ್ಕೆ ಕ್ರಿ.ಶ ೧೫೫೫ರಲ್ಲಿ ದಾನಬಿಟ್ಟ ಶಾಸನದ ವಿವರವು ಸಿಗುತ್ತದೆ.

ಮೂಲ ದೇವಾಲಯದ ಪ್ರತಿಮೆಯು ಏಕಶಿಲೆಯಲ್ಲಿ ನಿರ್ಮಿಸಲಾಗಿದ್ದು, ಕೆಳಗಡೆ ಅದೇ ಕಲ್ಲಿನಲ್ಲಿ ಪೀಠವನ್ನು ಬಿಟ್ಟು ಅದರ ಮೇಲೆ ಮೂರ್ತಿಯನ್ನು ಕೆತ್ತಲಾಗಿದೆ. ಈ ಮೂರ್ತಿಯು ಚತುರ್ಭುಜವನ್ನು ಹೊಂದಿ ನಿಂತಿರುವ ಸಮಭಂಗಿಯದಾಗಿದೆ (ಛಾಯಾಚಿತ್ರ ೪೭). ಹಿಂದಿನ ಎರಡುಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿದಿದ್ದು, ಮುಂದಿನ ಎರಡು ಕೈಗಳ ಬಲಗೈಯು ಅಭಯಹಸ್ತದಲ್ಲಿದ್ದು ಅದರಲ್ಲಿ ಬಾಣವನ್ನು ಹಿಡಿದುಕೊಂಡಿರುವುದು ಕಂಡುಬರುತ್ತದೆ. ಎಡಗೈಯು ವರದಹಸ್ತದಲ್ಲಿದ್ದು ಬಿಲ್ಲನ್ನು ಭುಜಕ್ಕೆ ನೇತುಹಾಕಿಕೊಂಡಿದೆ. ನಾಲ್ಕು ಕೈಗಳಲ್ಲಿ ಕಡಗಗಳಿದ್ದು ತೋಳುಬಂಧಿಗಳಿಂದ ಅಲಂಕರಿಸಿರುವರು. ಮೂರ್ತಿಯ ಹಿಂದಿನ ಭಾಗದಲ್ಲಿ ಪ್ರಭಾವಳಿಯಿದ್ದು ಮಧ್ಯದಲ್ಲಿ ಕೀರ್ತಿಮುಖವಿದೆ. ತಲೆಯಲ್ಲಿ ಕಿರೀಟವನ್ನು ಹಾಗೂ ಹಣೆಯಲ್ಲಿ ನಾಮವನ್ನು ಖಂಡರಿಸಲಾಗಿದೆ. ಮೂರ್ತಿಯ ಮುಖದಲ್ಲಿ ಮೀಸೆಯಿದ್ದು, ಕಣ್ಣುಗಳು ಅರೆಮುಚ್ಚಿದ ರೀತಿಯಲ್ಲಿವೆ. ಕೊರಳಲ್ಲಿ ಕಂಠಹಾರವನ್ನು ಧರಿಸಿ ಆಭರಣಗಳಿಂದ ಅಲಂಕರಿಸಲಾಗಿದೆ. ಸೊಂಟದಲ್ಲಿ ಕತ್ತಿಯಿದ್ದು, ಯಜ್ಞೋಪವೀತವನ್ನು ಕೆತ್ತಲಾಗಿದೆ. ಮೂರ್ತಿಯ ಕಾಲ ಕೆಳಗೆ ಮಧ್ಯಭಾಗದಲ್ಲಿ ಗರುಡನ ಉಬ್ಬುಶಿಲ್ಪವು ಕುಳಿತಭಂಗಿಯಲ್ಲಿದೆ. ಈ ಸುಂದರವಾದ ಮೂರ್ತಿಗೆ ದಿನನಿತ್ಯಲೂ ಪೂಜೆ ಮಾಡುವುದರ ಜೊತೆಗೆ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

೧೨. ಅನಂತದೇವ ದೇವಾಲಯ, ಹೆಬ್ರಿ


ಅನಂತಪದ್ಮನಾಭ ದೇವಾಲಯವು ಉಡುಪಿ ತಾಲೂಕಿನ ಹೆಬ್ರಿ ಗ್ರಾಮದಲ್ಲಿ ನಿರ್ಮಿತವಾಗಿದೆ. ಇದು ನಗರದ ಮಧ್ಯಭಾಗದಲ್ಲಿರುವ ಒಂದು ಮುಖ್ಯ ದೇವಾಲಯವಾಗಿದ್ದು, ಗರ್ಭಗುಡಿ, ಅಂತರಾಳ, ಸಾಂಧಾರಪ್ರದಕ್ಷಿಣೆಪಥ, ಕಟ್ಟಿಗೆಯ ಕಟಾಂಜನ ಗೋಡೆ, ತೀರ್ಥಮಂಟಪ, ಯಾಗಶಾಲೆ, ಪಾಕಶಾಲೆ,

ದ್ವಾರಬಾಗಿಲು, ಬಲಿಪೀಠ, ಧ್ವಜಸ್ತಂಭ, ಎರಡು ಪ್ರಾಕಾರ ಗೋಡೆಯನ್ನು ಹೊಂದಿದ ದೇವಾಲಯವಾಗಿದೆ (ನಕ್ಷೆ ೧೪). ಈ ದೇವಾಲಯವನ್ನು ಕೃಷ್ಣದೇವರಾಯನು ಆಳ್ವಿಕೆ ಮಾಡುವಾಗ ಬಾರಕೂರು ರಾಜ್ಯದ ರಾಜ್ಯಪಾಲನಾದ ವಿಠ್ಠರಸ ಒಡೆಯರು ಕ್ರಿ.ಶ. ೧೫೨೭ರಲ್ಲಿ ನಿರ್ಮಿಸಿದರು.[೨] ಇದನ್ನು ಉಲ್ಲೇಖಿಸುವ ಶಾಸನವು ಪ್ರಾಕಾರದ ಗೋಡೆಗೆ ಹೊಂದಿಸಿ ನಿಲ್ಲಿಸಲಾಗಿದೆ. ಇಂದು ಈ ಶಾಸನವು ಸುರಕ್ಷಿತವಾಗಿ ಉಳಿದಿದೆ.

ಈ ದೇವಾಲಯವು ಪೂರ್ವಕ್ಕೆ ಮುಖಮಾಡಿದ್ದು ವಿಜಯನಗರ ಕಾಲದಲ್ಲಿ ಕಟ್ಟಲಾಗಿದ್ದರೂ ಹಿಂದಿನ ಶೈಲಿಯಲ್ಲಿ ಹಲವು ಬದಲಾವಣೆಯೊಂದಿಗೆ ಇಂದು ಲುಪಾಕಾರಶೈಲಿಯಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ (ಛಾಯಾಚಿತ್ರ ೪೮). ದೇವಾಲಯವು ಮಲೆನಾಡಿನ ಪ್ರದೇಶದಲ್ಲಿರುವುದರಿಂದ ಭಿನ್ನ ರೀತಿಯಲ್ಲಿದ್ದು, ಇದರಲ್ಲಿ ಭಿತ್ತಿಯ ಮೇಲೆ ಪ್ರಸ್ತರವಿಲ್ಲದೆ ಇಳಿಜಾರದ ಛಾವಣಿಯು (ಲುಪಾ) ಇದ್ದು, ಅದು; ಭಿತ್ತಿಯಿಂದ ಮುಂಚಾಚಿ ಮಳೆಯಿಂದ ದೇವಾಲಯವನ್ನು ರಕ್ಷಿಸುವ ಉದ್ದೇಶದಿಂದ ಈ ಶೈಲಿಯನ್ನು ನಿರ್ಮಿಸಿರುವರು. ಈ ದೇವಾಲಯವು ಚತುರ್ವರ್ಗದ ರಚನೆಯದಾಗಿದ್ದು ಮೇಲ್ತುದಿಯಲ್ಲಿ ಸ್ತೂಪಿಯನ್ನು ಅಳವಡಿಸಿದ್ದಾರೆ.

ಮೂಲಗರ್ಭಗುಡಿಯು ಅಧಿಷ್ಠಾನವನ್ನು ಹೊಂದಿದ್ದು ಸರಳ ರೀತಿಯಲ್ಲಿದೆ. ಭಿತ್ತಿಯಲ್ಲಿ ಅರ್ಧಕಂಭಗಳು ಮಾತ್ರ ಕಂಡುಬರುತ್ತಿದ್ದು, ಇಂದು ಸಿಮೆಂಟ್ ಲೇಪನ ಮಾಡಿರುವರು. ಮೇಲೆ ಇಳಿಜಾರದ ಛಾವಣಿಯಿದ್ದು ಇಟ್ಟಿಗೆಯ ಅಂಚಿನ ಅಚ್ಚುಗಳನ್ನು ಕಟ್ಟಿಗೆ ಮೇಲೆ ಹೊದಿಸಲಾಗಿದೆ. ಮಧ್ಯದಲ್ಲಿ ಕಟ್ಟಿಗೆ ಮತ್ತು ಅಂಚಿನ ಸ್ತೂಪಿಯನ್ನು ರಚಿಸಿ ಕೊನೆಯಭಾಗದಲ್ಲಿ ಕಳಸವನ್ನು ಇಟ್ಟಿರುವರು. ಈ ಸ್ತೂಪಿಯಲ್ಲಿ ಎರಡು ಗೂಡುಗಳನ್ನು ಬಿಡಲಾಗಿದೆ. ಗರ್ಭಗುಡಿಯು ಚೌಕಾಕಾರದಲ್ಲಿದ್ದು, ಇದಕ್ಕೆ ಹೊಂದಿಕೊಂಡ ಎರಡು ಸುತ್ತು ಗೋಡೆಗಳು ಸಾಂಧಾರ ಪ್ರದಕ್ಷಿಣೆಪಥವನ್ನು ನಿರ್ಮಿಸಿವೆ. ಒಂದು ಕಲ್ಲಿನಗೋಡೆಯದಾದರೆ ಮತ್ತೊಂದು ಕಟ್ಟಿಗೆಯದ್ದಾಗಿದೆ. ಗರ್ಭಗುಡಿಯಲ್ಲಿರುವ ಮೂಲ ಮೂರ್ತಿಯ ಕೆಳಗೆ ಪೀಠವು ಒಂದೂವರೆ ಅಡಿ ಎತ್ತರವಿದ್ದು ಮಧ್ಯದಲ್ಲಿ ಗರುಡನ ಉಬ್ಬುಶಿಲ್ಪವಿದೆ. ಪಾರ್ಶ್ವದಲ್ಲಿ ಶಂಖ ಮತ್ತು ಚಕ್ರಗಳನ್ನು ಕೆತ್ತಿರುವರು. ಮೂರ್ತಿಯು ಅನಂತಪದ್ಮನಾಗಿದ್ದು ಸಮಭಂಗಿಯಲ್ಲಿ ನಿಂತಿರುವನು. ಈ ಮೂರ್ತಿಯು ಸುಮಾರು ಮೂರುವರೆ ಅಡಿ ಎತ್ತರವಾಗಿದೆ (ಛಾಯಾಚಿತ್ರ ೪೯). ಚತುರ್ಭುಜವನ್ನು ಹೊಂದಿ ಹಿಂದಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರವನ್ನು ಧರಿಸಿದ್ದರೆ, ಮುಂದಿನ ಬಲಗೈಯು ಅಭಯಹಸ್ತದಲ್ಲಿದೆ. ಎಡಗೈಯು ವರದಹಸ್ತದಲ್ಲಿದ್ದು ತಲೆಯ ಮೇಲೆ ಕಿರೀಟವಿದೆ. ಮೂರ್ತಿಯ ಕೊರಳಲ್ಲಿ ಚಂದ್ರಹಾರ, ನಡುಪಟ್ಟಿಯನ್ನು ಧರಿಸಿ ಕೈಕಾಲಲ್ಲಿ ಕಡಗಗಳಿವೆ. ಮೂರ್ತಿಯ ಹಿಂದೆ ಪ್ರಭಾವಳಿಯಿದ್ದು ಹಣೆಯಲ್ಲಿ ನಾಮವಿದೆ. ಗರ್ಭಗುಡಿಯಲ್ಲಿ ಇಂದು ಉತ್ಸವಮೂರ್ತಿಗಳನ್ನಿಟ್ಟಿದ್ದಾರೆ. ಗರ್ಭಗುಡಿಯ ಮೇಲಿನ ಛಾವಣಿಯ ಬಂಡೆಯು ಸರಳ ಕೆತ್ತನೆಯಲ್ಲಿದೆ.

ಗರ್ಭಗುಡಿಯ ಮುಂದೆ ಅಂತರಾಳವಿದ್ದು ಕಟ್ಟಿಗೆ ಬಾಗಿಲು ಚೌಕಟ್ಟನ್ನು ಹೊಂದಿದೆ. ಇಂದು ಕಂಚಿನ ಅಚ್ಚನ್ನು ಜೋಡಿಸಲಾಗಿದೆ. ಇದರಲ್ಲಿ ಬಳ್ಳಿ ಮತ್ತು ಹೂಗಳ ರಚನೆಯನ್ನು ಚಿತ್ರಿಸಿರುವರು. ಗರ್ಭಗುಡಿ ಮತ್ತು ಅಂತರಾಳದ ಸುತ್ತಲೂ ಪ್ರದಕ್ಷಿಣಪಥವಿದ್ದು ಇದು ಸಾಂಧಾರರೀತಿಯಲ್ಲಿದೆ. ಇದಕ್ಕೆ ಇಂದು ಪಾತಳಿ ಎಂದು ಕರೆಯುವರು. ಅಂತರಾಳದ ಮುಂದೆ ಅಧಿಷ್ಠಾನವಿದ್ದು, ಇದರ ಮೇಲೆ ಕಟ್ಟಿಗೆಯ ಮುಚ್ಚಿಗೆಯನ್ನು



ನಕ್ಷೆ. ೧೪ ಅನಂತದೇವ ದೇವಾಲಯದ ತಲನಕ್ಷೆ





ಛಾ ಚಿ ೪೮. ಅನಂತಪದ್ಮನಾಭ ದೇವಾಲಯ, ಹೆಬ್ರಿ



ಛಾ ಚಿ ೪೯. ಅನಂತಪದ್ಮನಾಭ ಮೂರ್ತಿ, ಹೆಬ್ರಿ

ಜೋಡಿಸಿರುವರು. ಇದಕ್ಕೆ ಕಿಂಡಿಗಳಿದ್ದು ಇದು ಪ್ರದಕ್ಷಿಣೆಪಥವಾಗಿ ಏರ್ಪಟ್ಟಿದೆ. ಇದರ ದ್ವಾರದಲ್ಲಿ ಐದು ಅಡಿ ಎತ್ತರವಿರುವ ದ್ವಾರಪಾಲಕರ ವಿಗ್ರಹಗಳಿದ್ದು ಕೈಯಲ್ಲಿ ವೈಷ್ಣವ ಚಿಹ್ನೆಗಳಾದ ಶಂಖ, ಚಕ್ರ, ಗದೆಯನ್ನು ಧರಿಸಿರುವರು.

ಅಂತರಾಳದ ಮುಂದೆ ಗರ್ಭಗುಡಿಗೆ ಹೋಗಲು ಕಲ್ಲಿನ ಮೆಟ್ಟಿಲುಗಳಿದ್ದು, ಪಾರ್ಶ್ವದಲ್ಲಿ ಸಿಂಹಮುಖದಿಂದ ಕೂಡಿದ ಹಸ್ತಿಹಸ್ತವನ್ನು ಜೋಡಿಸಲಾಗಿದೆ. ಅಂತರಾಳದ ಮುಂದೆ ಎತ್ತರದ ವೇದಿಕೆಯಿರುವ ತೀರ್ಥಮಂಟಪವನ್ನು ನಿರ್ಮಿಸಿದ್ದು ಅದು ನಾಲ್ಕು ಕಂಬಗಳಿಂದ ಕೂಡಿದೆ. ಈ ಮಂಟಪವು ಚೌಕಾಕಾರವಾಗಿದ್ದು, ದುಂಡನೆಯ ಕಂಬಗಳನ್ನು ಕೆತ್ತಿ ನಿಲ್ಲಿಸಿರುವರು. ಛಾವಣಿಯಲ್ಲಿ ಕಟ್ಟಿಗೆಯ ಹಲಗೆ ಕೆತ್ತನೆಯು ಸುಂದರವಾದ ಅಲಂಕರಣೆಯನ್ನು ಹೊಂದಿದ್ದು, ಒಳಮುಖದಲ್ಲಿ ಹೆಚ್ಚು ಅಲಂಕಾರವಿದೆ. ಮೇಲೆ ಅಂಚುಗಳನ್ನು ಅಳವಡಿಸಿರುವರು. ಇದು ತೀರ್ಥಮಂಟಪವಾಗಿದ್ದು ಭಕ್ತಾದಿಗಳಿಗೆ ತೀರ್ಥ ಪ್ರಸಾದವನ್ನು ಈ ಮಂಟಪದಲ್ಲಿ ವಿತರಿಸಲಾಗುತ್ತದೆ. ಇದು ಹಿಂದಿನದಾಗಿದ್ದರೂ ಆಧುನಿಕತೆಯನ್ನು ಪಡೆದುಕೊಂಡಿದೆ. ಗರ್ಭಗುಡಿಯ ಸುತ್ತಲಿರುವ ಪ್ರಾಕಾರಗೋಡೆಯ ಮುಖ್ಯದ್ವಾರದ ಬದಿಯಲ್ಲಿ ಎರಡುಮಂಟಪಗಳಿದ್ದು, ಕೋಣೆಯ ಮಾದರಿಯಲ್ಲಿವೆ. ಇವುಗಳಲ್ಲಿ ಒಂದು ಯೋಗಶಾಲೆ ಮತ್ತೊಂದು ಪಾಕಶಾಲೆಯಾಗಿದೆ. ಈ ಪ್ರಾಕಾರದಲ್ಲಿ ಕಂಬಗಳಿಂದ ಕೂಡಿದ ತೆರೆದ ಮಂಟಪವಿದ್ದು ಇದಕ್ಕೆ ಅಂಚುಗಳನ್ನು ಜೋಡಿಸಿರುವರು.

ಮುಖ್ಯದ್ವಾರಬಾಗಿಲಿನ ಮುಂದೆ ಐದುಭಾಗಗಳನ್ನು ಹೊಂದಿದ ಬಲಿಪೀಠವಿದ್ದು ಮೇಲೆ ಬಲಿಗಾಗಿ ಇರಿಸುವ ಕಲ್ಲಿನ ಕೆಳಗೆ ಕಮಲವನ್ನು ತಲೆಕೆಳಗಾಗಿ ಕಂಡರಿಸಿರುವರು. ಇದರ ಮುಂದೆ ಚೌಕಕಾರದ ಪೀಠವನ್ನು ಹೊಂದಿದ ಹದಿನೆಂಟು ಹಂತಗಳ ಧ್ವಜಸ್ತಂಭವಿದ್ದು ಮೇಲೆ ಕಳಸವಿದೆ. ಈ ಪ್ರಾಕಾರದ ಮುಂದೆ ಇನ್ನೊಂದು ದ್ವಾರಬಾಗಿಲಿನ ಅವಶೇಷ ಮಾತ್ರ ಉಳಿದಿದೆ. ಇದಕ್ಕೆ ಹೊಂದಿಕೊಂಡ ಪೌಳಿಯ ಅಧಿಷ್ಠಾನ ಭಾಗವು ಅಲ್ಪಸ್ವಲ್ಪ ಉಳಿದಿದೆ. ಇದು ವಿವಿಧ ಕಾಲಘಟ್ಟಗಳಲ್ಲಿ ಜೀರ್ಣೋದ್ಧಾರವನ್ನು ಪಡೆದ ದೇವಾಲಯ. ಮೊದಲನೆಯ ಜೀರ್ಣೋದ್ಧಾರವನ್ನು ಕ್ರಿ.ಶ. ೧೯೨೪ರಲ್ಲಿ ಮಾಡಿದರೆ, ದ್ವಿತೀಯ ಜೀರ್ಣೋದ್ಧಾರವನ್ನು ಕ್ರಿ.ಶ. ೧೯೭೫ರಲ್ಲಿ ಮಾಡಲಾಗಿದೆ. ಹೀಗಾಗಿ ಇಂದು ಆಧುನಿಕ ರೂಪವನ್ನು ಪಡೆದ ದೇವಾಲಯ ಇದಾಗಿದೆ.

೧೩. ರಂಗನಾಥಸ್ವಾಮಿ ದೇವಾಲಯ, ಶ್ರೀರಂಗಾಪುರಂ

ರಂಗನಾಥಸ್ವಾಮಿ ದೇವಾಲಯವು ಆಂಧ್ರಪ್ರದೇಶದ ಕಲ್ಯಾಣದುರ್ಗ ತಾಲ್ಲೂಕಿನ ಶ್ರೀರಂಗಾಪುರಂ ಗ್ರಾಮದಲ್ಲಿ ನಿರ್ಮಾಣವಾಗಿದೆ. ಪ್ರಧಾನ ದೇವಾಲಯವು ಚೌಕಾಕಾರದ ಪೌಳಿಯನ್ನು ಹೊಂದಿದ್ದು ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ (ನಕ್ಷೆ - ೧೫). ಇದನ್ನು ಗ್ರಾಮದ ಮಧ್ಯೆ ನಿರ್ಮಿಸಲಾಗಿದೆ (ಛಾಯಾಚಿತ್ರ - ೫೦). ಇದನ್ನು ಕ್ರಿ.ಶ.ಸು. ೧೬ನೇ ಶತಮಾನದಲ್ಲಿ ಅಂದರೆ ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ತಿರುಮಲನಾಥನ ಮಗ ಶ್ರೀರಂಗಯ್ಯ ಎಂಬುವವನು ನಿರ್ಮಿಸಿ, ಸ್ವಾಮಿಯ ಪೂಜೆಗಾಗಿ ಒಂದು ಕೆರೆಯನ್ನು, ಒಂದು ಕಾಲುವೆಯನ್ನು ಕಟ್ಟಿಸಿ ಕೊಟ್ಟು, ಭೂಮಿಯನ್ನು ದತ್ತಿನೀಡಿದ್ದುದು ದೇವಾಲಯದಲ್ಲಿರುವ ಶಾಸನದಿಂದ ತಿಳಿದುಬರುತ್ತದೆ.[೬೮] ಅಲ್ಲದೆ, ಅದೇ ಶಾಸನದಲ್ಲಿ ಇನ್ನೊಂದು ಮುಖ್ಯವಿಷಯ ಉಲ್ಲೇಖವಾಗಿದೆ. ಶ್ರೀರಂಗನಾಥನ

ದೇವಾಲಯವು ತುರುಕರ ಕೈಯಲ್ಲಿ ಭಿನ್ನವಾಗಿ ಇಪ್ಪತ್ತು ವರ್ಷ ಪೂಜೆ ಪುನಸ್ಕಾರವಿಲ್ಲದೆ ಉಳಿದು ಬಂದುದು ಗಮನಾರ್ಹ.

ದೇವಾಲಯದ ಗರ್ಭಗುಡಿಯ ಅಧಿಷ್ಠಾನವು ಸರಳ ರೀತಿಯಲ್ಲಿ ಅಂದರೆ ಪಾದುಕಾ, ಜಗತಿ, ಉಪಾನದಿಂದ ನಿರ್ಮಿಸಿದ್ದು ಇದರಲ್ಲಿ ಯಾವುದೇ ರೀತಿಯ ಕೆತ್ತನೆ ಇರುವುದಿಲ್ಲ (ಛಾಯಾಚಿತ್ರ - ೫೧). ಜಗತಿಯು ಸರಳವಾದ ದೊಡ್ಡ ಕಲ್ಲುಚಪ್ಪಡಿಗಳಿಂದ ನಿರ್ಮಾಣವಾಗಿದ್ದು, ಅಲ್ಲಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಇದರಲ್ಲಿ ಲೈಂಗಿಕಶಿಲ್ಪ, ಗಜ, ಮೀನು ಇತ್ಯಾದಿ ಶಿಲ್ಪಗಳಿವೆ. ಪ್ರಸ್ತರದಲ್ಲಿ ಎರಡು ಭಾಗಗಳು ಮುಂಚಾಚಿದ್ದು ಮೇಲಿನದು ಕಪೋತವಾಗಿದೆ. ಇದರಲ್ಲಿ ನಾಗರ, ಚಂದ್ರ, ಸೂರ್ಯ, ಮತ್ಸ್ಯ, ನಾಮ ಅಲಂಕರಣವನ್ನು ಉಬ್ಬುಶಿಲ್ಪಗಳಿಂದ ಮಾಡಿರುವರು. ಪ್ರಸ್ತರದವರೆಗೆ ಕಲ್ಲಿನ ಕಟ್ಟಡವಾಗಿದ್ದು, ಶಿಖರವು ಇಟ್ಟಿಗೆ ಗಾರೆಗಚ್ಚಿನಿಂದ ನಿರ್ಮಿತವಾಗಿದೆ. ಶಿಖರವು ಮೂರು ಹಂತದಲ್ಲಿ ಮೇಲೆರಿದ್ದು, ಕೊನೆಗೆ ಸ್ತೂಪದಲ್ಲಿ ಕೊನೆಗೊಂಡಿದೆ. ಕೆಳಗಿನ ಹಂತದಲ್ಲಿ ನಾಲ್ಕು ದಿಕ್ಕಿಗೆ ಮಧ್ಯದಲ್ಲಿ ಕೋಷ್ಠಕಗಳಿದ್ದು, ಒಳಗಡೆ ಗಾರೆಯ ಶಿಲ್ಪಗಳನ್ನು ನಿರ್ಮಿಸಿರುವರು. ಅದರಲ್ಲಿ ಬ್ರಹ್ಮ, ವಿಷ್ಣು, ಮುರಳೀಧರ, ನರಸಿಂಹ ಮೂರ್ತಿಗಳಿವೆ. ಇದಕ್ಕೆ ಹೊಂದಿಕೊಂಡ ಹಾಗೇ ಮೇಲೆ ಪ್ರಭಾವಳಿಯಿದ್ದು, ಮಧ್ಯದಲ್ಲಿ ಕೀರ್ತಿಮುಖವಿದೆ. ಪ್ರಭಾವಳಿಯನ್ನು ಚಿಕ್ಕ ಚಿಕ್ಕ ಹೂಗಳ ಚಿತ್ತಾರದಿಂದ ಮಾಡಲಾಗಿದೆ. ಅರ್ಧಕಂಭ ಮೂಲೆಯಲ್ಲಿ ಕರ್ಣಕೂಟಗಳನ್ನು, ಅವುಗಳ ಪಕ್ಕದಲ್ಲಿ ಸ್ತ್ರೀಯರ ಗಾರೆಯಶಿಲ್ಪಗಳನ್ನು ನಿರ್ಮಿಸಿರುವರು. ಇವುಗಳೆಲ್ಲ ಇಂದು ಹಾಳಾಗಿರುವುದರಿಂದ ಸರಿಯಾಗಿ ಕಂಡುಬರುವುದಿಲ್ಲ. ಎರಡನೆ ಹಂತದಲ್ಲಿ ಎರಡು ಪಟ್ಟಿಗಳ ಮೇಲೆ ಗಿಳಿಗಳ ಸಾಲನ್ನು ಸುತ್ತಲೂ ಗಾರೆಯಿಂದ ನಿರ್ಮಿಸಿ ಮೇಲೆ ಮಂಜೂರದ ಹಾಗೇ ಗಾರೆಯನ್ನು ಹಾಕಲಾಗಿದೆ. ಗ್ರೀವದಲ್ಲಿ ಎರಡು ದಿಕ್ಕಿಗೆ ಗಾರೆಯಶಿಲ್ಪಗಳಿದ್ದು, ಇದರಲ್ಲಿ ಗಿಳಿಯಸಾಲನ್ನು ಸ್ತೂಪಿಯ ಕೆಳಭಾಗದಲ್ಲಿ ನಿರ್ಮಿಸಲಾಗಿದೆ. ಸ್ತೂಪವು ದುಂಡಾಕಾರವಾಗಿದ್ದು ಮೇಲೆ ಅರಳಿದ ಕಮಲವನ್ನು ನಿರ್ಮಿಸಿ ಮಧ್ಯದಲ್ಲಿ ಚಿಕ್ಕದಾದ ಕುಂಭದ ಮೇಲೆ ಕಳಸವನ್ನು ಇಡಲಾಗಿದೆ. ಈ ಸ್ತೂಪದಲ್ಲಿ ನಾಲ್ಕುದಿಕ್ಕಿಗೆ ಪ್ರಭಾವಳಿಯಿದ್ದು ಮೇಲೆ ಕೀರ್ತಿಮುಖವನ್ನು ಗಾರೆಯಿಂದ ನಿರ್ಮಿಸಿರುವರು.


ಅಂತರಾಳದ ಹೊರಭಾಗವು ಸರಳರೀತಿಯಲ್ಲಿದ್ದು ಯಾವುದೇ ಅಲಂಕರಣವಿರುವುದಿಲ್ಲ. ನವರಂಗದ ಹೊರಭಾಗದಲ್ಲಿ ಅಧಿಷ್ಠಾನವು ಗರ್ಭಗುಡಿಯ ರೀತಿಯಲ್ಲಿದೆ. ಭಿತ್ತಿಯಲ್ಲಿ ಅಲ್ಲಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಪ್ರಸ್ತರದ ನಾಲ್ಕು ಮೂಲೆಗಳಲ್ಲಿ ಜೋಡು ಸಿಂಹಗಳನ್ನು ಗಾರೆಯಿಂದ ನಿರ್ಮಿಸಿರುವುದು ಕಂಡುಬರುತ್ತದೆ. ಎಡಭಾಗದ ಸಿಂಹಗಳು ಹಾಳಾಗಿವೆ. ದ್ವಾರದ ಮಧ್ಯದಲ್ಲಿ ಕೋಷ್ಠಕವಿದ್ದು ಇದರ ಮಧ್ಯದ ಶಿಲ್ಪವು ಇಂದು ಹಾಳಾಗಿದೆ.

ಗರ್ಭಗುಡಿಯ ಒಳಭಾಗವು ಚೌಕಕಾರವಾಗಿದ್ದು, ನಾಲ್ಕುಕಂಬಗಳಿಂದ ಕೂಡಿದ ಗೋಡೆಯನ್ನು ಹೊಂದಿದೆ. ಮಧ್ಯದ ಛತ್ತಿನಲ್ಲಿ ಎಂಟು ಬಂಡೆಗಳನ್ನು ಚೌಕಾಕಾರವಾಗಿ ಎರಡು ತರದಲ್ಲಿ ಜೋಡಿಸಿ ಮಧ್ಯದಲ್ಲಿ ಪದ್ಮದಳವನ್ನು ಬಂಡೆಯಲ್ಲಿ ಕೆತ್ತಲಾಗಿದೆ. ಕೆಳಭಾಗದ ಮಧ್ಯದಲ್ಲಿ ಸಮತಲವಾದ ಎರಡು ಅಡಿ ಎತ್ತರದ ಪೀಠದ ಮೇಲೆ ಶ್ರೀರಂಗನಾಥನ ಎರಡು ಅಡಿ ಎತ್ತರದ ಮಲಗಿಕೊಂಡಿರುವ ಮೂರ್ತಿ ಇದೆ. ಇದನ್ನು ಕಪ್ಪು ಕಣಶಿಲೆ ಕಲ್ಲಿನಿಂದ

ಕೆತ್ತಲಾಗಿದೆ. ಶ್ರೀರಂಗನಾಥನು ಶೇಷಶಾಯಿಯಾಗಿ ಮಲಗಿಕೊಂಡಿರುವನು (ಛಾಯಾಚಿತ್ರ - ೫೨). ಮೂರ್ತಿಯು ಚತುರ್ಭುಜವನ್ನು ಹೊಂದಿದ್ದು ಹಿಂದಿನ ಎರಡು ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದುಕೊಂಡಿದ್ದಾನೆ. ಮುಂದಿನ ಬಲಗೈಯು ತಲೆಗೆ ಆಸರೆಯಾಗಿದ್ದರೆ, ಎಡಗೈಯು ತನ್ನ ಕಾಲಿನ ಮೇಲಿದೆ. ಮೂರ್ತಿಯ ನಾಭಿಯಿಂದ ಕಮಲದ ಬಳ್ಳಿಯು ಮೇಲಕ್ಕೆ ಬಂದಿದ್ದು, ಅದರ ಒಳಗೆ ಪದ್ಮಾಸನದಲ್ಲಿ ಚತುರ್ಮುಖಬ್ರಹ್ಮನು ಅಂಜಲಿಹಸ್ತನಾಗಿದ್ದಾನೆ. ಕೆಳಗಿರುವ ಆದಿಶೇಷವು ಮೂರು ಸುತ್ತು ಸುತ್ತಿಕೊಂಡು ಏಳು ಹೆಡೆಯನ್ನು ಹೊಂದಿದೆ. ಇದರ ಕಾಲಬಳಿಯಲ್ಲಿ ಶ್ರೀದೇವಿಯು ತನ್ನ ಕೈಯಿಂದ ರಂಗನಾಥನ ಕಾಲನ್ನು ಒತ್ತುತ್ತಿರುವಳು. ಭೂದೇವಿಯು ಪದ್ಮಾಸನದಲ್ಲಿ ಕುಳಿತು ಕೈಗಳಲ್ಲಿ ಈ ಇಬ್ಬರು ಕಮಲದ ಮೊಗ್ಗನ್ನು ಹಿಡಿದಿದ್ದಾರೆ. ಮೂರ್ತಿಯ ತಲೆಯಲ್ಲಿ ಕಿರೀಟವಿದ್ದು, ಅಲಂಕರಣೆಯಿಂದ ಕೂಡಿದೆ. ಹಣೆಯಲ್ಲಿ ನಾಮವಿದ್ದರೆ, ಕೊರಳಲ್ಲಿ ಆಭರಣ, ಯಜ್ಞೋಪವೀತ, ಚಂದ್ರಮಾಲಗಳಿವೆ. ನಡುವಿನಲ್ಲಿ ವಸ್ತ್ರವಿದ್ದು ಆಭರಣಗಳ ಪಟ್ಟಿಯಿಂದ ಅಲಂಕರಿಸಲಾಗಿದೆ. ಮೂರ್ತಿಯ ಕಾಲು ಮತ್ತು ಕೈಗಳಲ್ಲಿ ಕಡಗಗಳಿವೆ. ಮೂರ್ತಿಯು ಸುಂದರವಾಗಿ ಇಂದಿಗೂ ಉಳಿದುಬಂದಿದೆ. ಗರ್ಭಗುಡಿಗೆ ಸಮನಾಗಿ ಹೊಂದಿಕೊಂಡಂತೆ ಅಂತರಾಳವಿದ್ದು ಮಧ್ಯದ ಛತ್ತಿನಲ್ಲಿ ನಾಲ್ಕು ದಳಗಳಿವೆ. ನಾಲ್ಕು ಕಂಬಗಳನ್ನು ಸೇರಿಸಿ ಈ ಗೋಡೆಯನ್ನು ನಿರ್ಮಿಸಿರುವರು. ಅಂತರಾಳಕ್ಕೆ ಗಚ್ಚುಗಾರೆಯಿಂದ ಲೇಪನ ಮಾಡಿದ್ದಾರೆ. ಇದಕ್ಕೆ ದ್ವಾರಬಾಗಿಲಿದ್ದು ಮಧ್ಯದ ಲಲಾಟದಲ್ಲಿ ಪದ್ಮದಳವಿದೆ. ದ್ವಾರದ ಎರಡು ಬದಿಗೆ ಉಬ್ಬುಶಿಲ್ಪಗಳ ದ್ವಾರಪಾಲಕರು ಗದೆಯನ್ನು ಹಿಡಿದುಕೊಂಡಿರುವರು. ಈ ಮೂರ್ತಿಗಳು ಚತುರ್ಭುಜವನ್ನು ಹೊಂದಿ ಹಿಂದಿನ ಕೈಗಳಲ್ಲಿ ಶಂಖಚಕ್ರಗಳಿವೆ. ಇವುಗಳು ಎರಡು ಅಡಿ ಎತ್ತರವಾಗಿವೆ.

ಅಂತರಾಳದ ಮುಂದೆ ನವರಂಗ ಮಧ್ಯದಲ್ಲಿ ನಾಲ್ಕು ಕಂಬಗಳಿಂದ ಕೂಡಿದೆ. ಇದರಿಂದ ಒಂಬತ್ತು ಅಂಕಣಗಳು ಏರ್ಪಟ್ಟಿದ್ದು, ಮಧ್ಯ ಕೆಳಭಾಗದಲ್ಲಿ ಸಣ್ಣ ಚೌಕಾಕಾರದ ವೇದಿಕೆ ಇದೆ. ನವರಂಗದ ಗೋಡೆಗೆ ಹೊಂದಿಕೊಂಡಂತೆ ಹತ್ತು ಕಂಬಗಳಿವೆ. ಮಧ್ಯದ ಕಂಬಗಳು ಚಿತ್ರಕಾಂಡ ಕಂಬಗಳಾಗಿದ್ದು, ಸರಳ ರೀತಿಯ ಪೀಠವನ್ನು ಹೊಂದಿವೆ (ಛಾಯಾಚಿತ್ರ - ೫೩). ನಂತರ ಮೇಲ್ಭಾಗದಲ್ಲಿ ಪಾದ, ದಂಡಭಾಗವಿದ್ದು ಮಧ್ಯಪಟ್ಟಿಗಳನ್ನು ಕೆತ್ತಲಾಗಿದೆ. ಮಧ್ಯದಲ್ಲಿ ಚತುರಸ್ರವನ್ನು ಎಂಟು ಮುಖಗಳಿಂದ ಅಲಂಕರಿಸಿದ್ದಾರೆ. ಈ ಮಧ್ಯಪಟ್ಟಿಗಳಲ್ಲಿ ಹನುಮಾನ್, ಪದ್ಮದಳ, ಸಿಂಹವ್ಯಾಳಿ, ರಾಮ, ಕಾಳಿಂಗಮರ್ದನ ಕೃಷ್ಣ, ವಾಮನ, ಯಾಳಿ, ಮತ್ಸ್ಯಪುರುಷ, ಸಿಂಹ, ಗರುಡ, ಹಂಸ, ಶಂಖ, ಚಕ್ರ, ಕೋಲುಹಿಡಿದ ಪುರುಷ, ಆಳ್ವಾರ, ಗದೆಹಿಡಿದ ಪುರುಷ, ಗಣೇಶ ಮುಂತಾದ ಉಬ್ಬುಶಿಲ್ಪಗಳನ್ನು ನಾಲ್ಕು ಕಂಬಗಳಲ್ಲಿ ಕೆತ್ತಲಾಗಿದೆ. ಮಧ್ಯಪಟ್ಟಿಯ ಮೇಲೆ ಚಿಕ್ಕದಾದ ಕಲಶವಿದ್ದು, ಇದರ ಮೇಲೆ ಘಟ, ಮಂಡಿ, ಫಲಕ ಭಾಗಗಳಿದ್ದು ಮೇಲೆ ಸರಳವಾದ ಬೋದಿಗೆಯಿದೆ. ನವರಂಗದ ಮಧ್ಯದ ಛತ್ತಿನಲ್ಲಿ ಚೌಕಾಕಾರದ ಪಟ್ಟಿಯ ಮಧ್ಯೆ ಎಂಟು ಗಿಳಿಗಳಿದ್ದು ಇವುಗಳು ಒಂದಕ್ಕೊಂದು ಅಭಿಮುಖವಾಗಿವೆ. ಮಧ್ಯದಲ್ಲಿ ಮೊಗ್ಗಿನ ಪದ್ಮದಳವನ್ನು ಕೆತ್ತಿರುವುದು ಕಂಡುಬರುತ್ತದೆ.

ನವರಂಗದ ದ್ವಾರಬಾಗಿಲು ಪೂರ್ವಕ್ಕೆ ಮುಖವಾಗಿದೆ. ಇದು ಸರಳರೀತಿಯಲ್ಲಿದ್ದು ಎರಡು ಮೆಟ್ಟಿಲುಗಳನ್ನು ಹೊಂದಿದೆ. ದೇವಾಲಯದ ಮುಂದಿನ ಆವರಣದಲ್ಲಿ ವೇದಿಕೆಯ ಮಧ್ಯ ಕಟ್ಟೆಗೆಯ ಧ್ವಜಸ್ತಂಭವಿದೆ. ಅದರ



ನಕ್ಷೆ,೧೫ ರಂಗನಾಥ ದೇವಾಲಯದ ತಲನಕ್ಷೆ





ಛಾ ಚಿ ೫೦. ರಂಗನಾಥ ದೇವಾಲಯದ ಸಮಗ್ರ ಚಿತ್ರಣ, ಶ್ರೀರಂಗಾಪುರಂ



ಛಾ ಚಿ ೫೧. ದೇವಾಲಯದ ವಿಮಾನ, ಶ್ರೀರಂಗಾಪುರಂ







ಭಾ ಚಿ ೫೨. ರಂಗನಾಥ ಮೂರ್ತಿ, ಶ್ರೀರಂಗಾಪುರಂ



ಭಾ ಚಿ ೫೩. ನವರಂಗದ ಸ್ತಂಭ, ಶ್ರೀರಂಗಾಪುರಂ



ಭಾ ಚಿ ೫೪. ಬಲಿಪೀಠ, ಶ್ರೀರಂಗಾಪುರಂ







ನಂತರ ತುಳಸಿ ಕಟ್ಟೆಯಿದ್ದು ಮುಂದೆ ಬಲಿಪೀಠ, ಗರುಡ ಸ್ತಂಭಗಳಿವೆ (ಛಾಯಾಚಿತ್ರ - ೫೪). ದೇವಾಲಯದ ಸುತ್ತಲಿರುವ ಪೌಳಿಯು ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿದ್ದು ಒಂದೇ ದ್ವಾರವನ್ನು ಹೊಂದಿದೆ.

೧೪. ಪ್ರಸನ್ನ ರಾಮದೇವರ ದೇವಾಲಯ, ಆದವಾನಿ

ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆ ಆದವಾನಿಯ ಪ್ರಸನ್ನ ರಾಮದೇವರ ದೇವಾಲಯವು ಬೆಟ್ಟದ ಮೇಲೆ ಪಶ್ಚಿಮಾಭಿಮುಖವಾಗಿ ನಿರ್ಮಿಸಲ್ಪಟ್ಟ ದೇವಾಲಯವಾಗಿದೆ. ಇದನ್ನು "ಗಜಬೇಂಟೆಕಾರ ಪ್ರೌಢದೇವರಾಯನ ಕಠಾರಿ ತಿಪ್ಪಣ್ಣನಾಯಕನ ಮಗ ರಾಮಣ್ಣನಾಯಕನು ಆದವಾನಿಯ ಮೋಗೋಟೆಯಲ್ಲಿ ನಿರ್ಮಾಣಮಾಡಿ ರಾಮದೇವರನ್ನು ಪ್ರತಿಷ್ಠೆಮಾಡಿಸಿದನು."[೬೩] ರಾಮದೇವರ ದೇವಾಲಯವು ಸಂಪೂರ್ಣವಾಗಿ ಬದಲಾವಣೆಯನ್ನು ಹೊಂದಿದ್ದು ಇದನ್ನು ಮುಸ್ಲಿಂರ ಆಳ್ವಿಕೆಯಲ್ಲಿ ಮಸೀದಿಯನ್ನಾಗಿ ಪರಿವರ್ತಿಸಲಾಗಿದೆ. ಅಲ್ಲಿನ ವಾಸ್ತುಕಟ್ಟಡಕ್ಕೆ ಗಾರೆಯನ್ನು ಸಂಪೂರ್ಣವಾಗಿ ಲೇಪನಮಾಡಿ ಕಮಾನು ಮತ್ತು ಕೋಟೆಯ ತೆನೆಗಳನ್ನು ಪ್ರಸ್ತರ ಮೇಲೆ ನಿರ್ಮಿಸಿದ್ದಾರೆ. ಎರಡು ಕಡೆಯಲ್ಲಿ ಮೀನಾರ್‌ಗಳು ಕಂಡುಬರುತ್ತಿದ್ದು, ಇಂದು ದೇವಾಲಯವು ಹಾಳಾಗಿದೆ. (ಛಾಯಾಚಿತ್ರ - ೫೪ಎ) ದೇವಾಲಯವು ಗರ್ಭಗುಡಿ, ತೆರೆದ ಮಂಟಪ, ನವರಂಗಗಳನ್ನು ಹೊಂದಿದೆ (ನಕ್ಷೆ - ೧೫ಎ). ಇಂದು ಗರ್ಭಗುಡಿಯಲ್ಲಿ ಮೂರ್ತಿ ಕಂಡುಬರುವುದಿಲ್ಲ. ಬಾಗಿಲುವಾಡದ ಮೇಲೆ ಪದ್ಮದಳವಿದ್ದು, ಉತ್ತರಾಂಗದಲ್ಲಿ ಗಾರೆಯ ಶಿಲ್ಪಗಳಿವೆ. ದ್ವಾರದ ಕೆಳಗೆ ವೈಷ್ಣವ ದ್ವಾರಪಾಲಕರು ಗದೆ ಮತ್ತು ಶಂಖಚಕ್ರಗಳನ್ನು ಹಿಡಿದು ಎರಡು ಬದಿಯಲ್ಲಿ ನಿಂತಿದ್ದಾರೆ. ನವರಂಗದಲ್ಲಿ ನಾಲ್ಕು ಸ್ತಂಭಗಳಿದ್ದು ಇಂದು ಬಿದ್ದುಹೋಗಿವೆ. ನವರಂಗವು ಸಂಪೂರ್ಣವಾಗಿ ಹಾಳಾಗಿದ್ದು, ಸುತ್ತಲಿರುವ ಗೋಡೆಯಲ್ಲಿ ಕಮಾನುಗಳ ಪ್ರವೇಶದ್ವಾರಗಳಿವೆ. ಈ ಗೋಡೆಗಳ ಹೊರಮುಖದಲ್ಲಿ ಮತ್ಸ್ಯ, ಗಜಗಳನ್ನು ಕತ್ತಿರುವರು. ದ್ವಾರಬಾಗಿಲಿನ ಸೋಪಾನದಲ್ಲಿ ಗಜಗಳ ಉಬ್ಬುಕೆತ್ತನೆಯಿರುವ ಬಂಡೆಯನ್ನು ನಿಲ್ಲಿಸಿದ್ದಾರೆ. ಇಂದು ಭಿತ್ತಿ, ಪ್ರಸ್ತರ ಮಾತ್ರ ಉಳಿದಿದ್ದು, ಅಧಿಷ್ಠಾನವು ಮಣ್ಣಲ್ಲಿ ಹೂಳಿಕೊಂಡಿದೆ. ಇತ್ತೀಚಿನ ಕೆಲವು ಮಾರ್ಪಾಡಿನಿಂದಾಗಿ ಈ ದೇವಾಲಯವು ಇಸ್ಲಾಮಿಕ್ ಶೈಲಿಯನ್ನು ಹೋಲುತ್ತದೆ.


ಜೀರ್ಣೋದ್ಧಾರ

೧. ರಾಮಚಂದ್ರ ದೇವಾಲಯ, ಹಂಪಿ

ಹಂಪಿಯಲ್ಲಿರುವ ಪರಿಪೂರ್ಣವಾದ ದೇವಾಲಯವು ಹಜಾರರಾಮಚಂದ್ರ ದೇವಾಲಯವಾಗಿದೆ. ಶಾಸನಗಳಲ್ಲಿ ಈ ದೇವರನ್ನು ರಾಮಚಂದ್ರ ಎಂದು ಉಲ್ಲೇಖಗೊಂಡಿದ್ದರೂ ಇಂದು ಹಜಾರ ರಾಮಚಂದ್ರ ಎನ್ನುವ ಹೆಸರಲ್ಲಿ ಪ್ರಸಿದ್ಧವಾಗಿದೆ. ಇದೊಂದು ಅರಮನೆಯ ಖಾಸಗಿ ದೇವಾಲಯವಾಗಿತ್ತೆಂಬುದು ವಿದ್ವಾಂಸರ ಅಭಿಪ್ರಾಯ. ಪ್ರತಿನಿತ್ಯವು ಈ ದೇವಾಲಯಕ್ಕೆ ರಾಜಕುಟುಂಬದವರು ಬಂದು ಪೂಜಾ ಕೈಂಕರ್ಯಗಳನ್ನು ನಡೆಸುತ್ತಿದ್ದರು. ಈ ದೇವಾಲಯವು ಸಂಗಮರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ದೇವಾಲಯವಾಗಿದೆ.[೬೪] ಸುಮಾರು ೧೫ನೇ ಶತಮಾನದ ಆದಿಯಿಂದ ನಿರ್ಮಾಣವಾಗಿ ಕ್ರಿ.ಶ. ೧೬ನೇ ಶತಮಾನದವರೆಗೂ ವಿಸ್ತರಿಸಲ್ಪಟ್ಟಿದ್ದು ವಾಸ್ತು



ಛಾ ಚಿ ೫೪ ಎ. ಪ್ರಸನ್ನರಾಮ ದೇವಾಲಯ, ಆದವಾನಿ



ನಕ್ಷೆ-೧೪ ಎ ಪ್ರಸನ್ನರಾಮ ದೇವಾಲಯದ ತಲನಕ್ಷೆ



ಹಾಗೂ ಶಾಸನಗಳ ಹಿನ್ನೆಲೆಯಲ್ಲಿ ಹೇಳಬಹುದಾಗಿದೆ. ಇದೊಂದು ಸಂಪೂರ್ಣವಾದ ದೇವಾಲಯ. ಇಲ್ಲಿ ವಿಜಯನಗರ ಶೈಲಿಯು ಎದ್ದು ಕಾಣುತ್ತದೆ. ಪೂರ್ವಕ್ಕೆ ಮುಖಮಾಡಿರುವ ದೇವಾಲಯವು ೩೦೦ ಅಡಿ ಉದ್ದ, ೧೦೦ ಅಡಿ ಅಗಲ ವಿಸ್ತಾರವನ್ನು ಹೊಂದಿದ್ದು, ದೇವಾಲಯವು ಚಿಕ್ಕದಾಗಿದ್ದರು ಅಲ್ಲಿನ ವಾಸ್ತು ಮತ್ತು ಶಿಲ್ಪಕಲೆಗಳಿಂದ ಪ್ರಸಿದ್ಧಿ ಹೊಂದಿದೆ.

ಒಂದನೇ ದೇವರಾಯನ ಕಾಲದ ಕ್ರಿ.ಶ. ೧೪೧೬ರ ಒಂದು ಶಿಲಾಶಾಸನವು ದೇವಾಲಯದಲ್ಲಿರುವುದರಿಂದ ಇದಕ್ಕಿಂತಲೂ ಮೊದಲೇ ಈ ದೇವಾಲಯವು ಕಟ್ಟಿರುವ ಸಾಧ್ಯತೆ ಇದೆ. ಅಲ್ಲದೆ ದೇವಾಲಯದ ಉತ್ಸವಮಂಟಪ ದಲ್ಲಿರುವ ಶಾಸನವು ಕ್ರಿ.ಶ. ೧೫೨೧ರಲ್ಲಿ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಅವನ ಅಧಿಕಾರಿ ತೆಲುಗು ಚೋಳವಂಶದ ತಿಮ್ಮರಾಜನು ದೇವಾಲಯದ ಆವರಣದಲ್ಲಿ ಉತ್ಸವಮಂಟಪವನ್ನು ಕಟ್ಟಿಸಿದನೆಂದು ತಿಳಿಸುವ ಶಾಸನವೊಂದಿದೆ.[೮೮] ಅಲ್ಲದೆ ಕ್ರಿ.ಶ. ೧೫೧೩ರ ನಂತರದಲ್ಲಿ ಕೃಷ್ಣದೇವರಾಯನು ಪೂರ್ವ ದಿಗ್ವಿಜಯವನ್ನು ಕೈಗೊಂಡು ಅಲ್ಲಿಂದ ಕಳಿಂಗ ದೇಶದ ಮೇಲೆ ಯುದ್ಧಮಾಡಿ ಬಂದು ತನ್ನ ವಿಜಯದ ನೆನಪಿಗಾಗಿ ಈ ದೇವಾಲಯಕ್ಕೆ ಪ್ರಾಕಾರಗೋಡೆ, ದ್ವಾರಗೋಪುರಗಳನ್ನು ಮತ್ತು ಅಮ್ಮನವರ ದೇವಾಲಯ ಇತರೆ ಮಂಟಪಗಳನ್ನು ಹೊಸದಾಗಿ ಸೇರಿಸಿದನು (ಛಾಯಾಚಿತ್ರ - ೫೫).

ಕೃಷ್ಣದೇವರಾಯನ ಕಾಲದಲ್ಲಿ ಮಾತ್ರ ಜೀರ್ಣೋದ್ಧಾರವನ್ನು ಪಡೆಯುವುದರ ಮೂಲಕ ಈ ದೇವಾಲಯವು ಪ್ರಗತಿ ಹೊಂದಿತು. ಪೂರ್ವಾಭಿಮುಖವಾಗಿ ಪ್ರವೇಶಿಸುವ ಮೊದಲು ಮಟ್ಟಸವಾದ ಮೇಲ್ಛಾವಣಿಯುಳ್ಳ ಒಂದು ದ್ವಾರಮಂಟಪವಿದೆ (ನಕ್ಷೆ - ೧೬). ಪ್ರಮಾಣಬದ್ಧವಾದ ಸ್ತಂಭಗಳಿಂದ ಕೂಡಿದ ಆಕರ್ಷಕವಾದ ಈ ಮಹಾದ್ವಾರದಲ್ಲಿ ಪ್ರತೋಲಿಯು ಪ್ರಾಕಾರಕ್ಕೆ ಹೊಂದಿಕೊಂಡಂತೆ ಅದರ ಮಧ್ಯದಲ್ಲಿ ಮಹಾದ್ವಾರದ ಭಾಗವಾಗಿ ಇರುವುದು. ಮಹಾದ್ವಾರದ ಒಳಮುಖದಲ್ಲಿ ಪ್ರವೇಶದ ಆರಂಭದಲ್ಲೇ ಅಕ್ಕಪಕ್ಕ ವೇದಿಕೆಯಿದ್ದು, ಅದರ ಮೇಲೆ ಸ್ತಂಭಗಳಿರುವವು. ಇದನ್ನು ಪ್ರತೋಲಿ ಎಂದು ವಾಸ್ತುಗ್ರಂಥಗಳಲ್ಲಿ ಕರೆಯಲಾಗಿದೆ (ನಕ್ಷೆ - ೧೭). ಈ ಮಹಾದ್ವಾರದ ಮೇಲೆ ಗೋಪುರವಿರದೆ ಪ್ರತೋಲಿಯ ಮೇಲೆ ಸುತ್ತಲೂ ಛತ್ರಶೀರ್ಷಾಲಂಕರಣ ಇರುವುದು. ಈ ಮಹಾದ್ವಾರವು ಅಧಿಷ್ಠಾನವನ್ನು ಹೊಂದಿದ್ದು ಇದರಲ್ಲಿ ಕುಡ್ಯಸ್ತಂಭಗಳ ರೀತಿಯ ಪಟ್ಟಿಯಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಮೇಲೆ ಕಪೋತದಲ್ಲಿ ನಾಸಿಗಳನ್ನು ಅಲಂಕರಿಸಿರುವರು. ದ್ವಾರದ ಮುಂಭಾಗದಲ್ಲಿ ನಾಲ್ಕು ಸ್ತಂಭಗಳನ್ನು ನಿಲ್ಲಿಸಿದ್ದು ಇದರಲ್ಲಿ ಪೀಠ, ಪಾದ, ಚತುರಸ್ರ, ದಂಡ, ಕಳಸ, ಘಟ, ಮಂಡಿ, ಫಲಕ, ಬೋದಿಗೆಗಳನ್ನು ಕೆತ್ತಲಾಗಿದೆ. ಈ ಬೋದಿಗೆಗಳು ಸರಳವಾಗಿವೆ. ಈ ಸ್ತಂಭಗಳ ಮಧ್ಯಪಟ್ಟಿಗಳಲ್ಲಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ದೇವಾಲಯದ ಪ್ರಾಕಾರಕ್ಕೆ ಮೂರು ದ್ವಾರಗಳಿದ್ದು, ಅವು ಪೂರ್ವ, ಉತ್ತರ, ದಕ್ಷಿಣ ದಿಕ್ಕಿಗಿವೆ. ಉತ್ತರ ಮತ್ತು ಪೂರ್ವದಿಕ್ಕಿನ ದ್ವಾರಗಳಿಗೆ ಮಾತ್ರ ಅಲಂಕರಿಸಿರುವರು. ಈ ಮಹಾದ್ವಾರಗಳು ಪ್ರಾಕಾರ ಗೋಡೆಯಿಂದ ಮುಂದೆ ಹೊರಚಾಚಿಕೊಂಡಿವೆ. ಇವುಗಳ ಮೇಲೆ ಮಂಜೂರನ್ನು ಹೊದಿಸಲಾಗಿದ್ದು ಮೇಲೆ ಸಮತಟ್ಟಾದ ಛತ್ತನ್ನು ಹಾಕಿರುವರು. ಪ್ರಾಕಾರದ ಗೋಡೆಯ ಮೇಲೆ ಕಪೋತಭಾಗವಿದ್ದು ಅದರಲ್ಲಿ ನಾಸಿಗಳನ್ನು ಕೆತ್ತಲಾಗಿದೆ (ನಕ್ಷೆ - ೧೮). ಈ ಭಾಗದ ಮೇಲೆ ದುಂಡನೆಯ ಕೋಟೆತೆನೆಗಳನ್ನು ಅಲಂಕರಿಸಿ, ಅವುಗಳಲ್ಲಿ ಉಬ್ಬುಶಿಲ್ಪಗಳನ್ನು

ಕಡೆದಿರುವರು. ಈ ಪ್ರಾಕಾರಗೋಡೆಯಲ್ಲಿ ಐದು ದೊಡ್ಡದಾದ ಬಂಡೆಗಳನ್ನು ಒಂದರ ಮೇಲೊಂದರಂತೆ ಜೋಡಿಸಿ ಅವುಗಳ ಹೊರಭಾಗದಲ್ಲಿ ಕೆಳಗಿನಿಂದ, ಆನೆಗಳ ಸಾಲು, ಆನೆಗಳ ಮೇಲೆ ಮಾವುತರು ಕುಳಿತಿರುವರು. ಎರಡನೆಯ ಪಟ್ಟಿಯಲ್ಲಿ ಕುದುರೆಗಳ ಸಾಲು, ಅರಬ್ಬರ ಕುದುರೆ ವ್ಯಾಪಾರದ ಉಬ್ಬುಶಿಲ್ಪಗಳು, ಒಂಟೆಸಾಲು, ಸ್ತ್ರೀಸವಾರರು ಇರುವರು. ಮೂರನೆ ಪಟ್ಟಿಯಲ್ಲಿ ಸೈನಿಕರ ಸಾಲು ಯುದ್ಧಸನ್ನಿವೇಶ ದೃಶ್ಯಗಳು, ಆಯುಧಗಳನ್ನು ಹಿಡಿದ ಸೈನಿಕರುಗಳಿರುವರು. ನಾಲ್ಕನೆಯ ಪಟ್ಟಿಯಲ್ಲಿ ಸಾಂಪ್ರದಾಯಿಕ ಶೈಲಿಯಲ್ಲಿ ನೃತ್ಯಗಾರ್ತಿಯರು, ವಾದ್ಯಗಾರರು, ಕೋಲಾಟದಲ್ಲಿ ತೊಡಗಿರುವ ಸ್ತ್ರೀಯರ ಉಬ್ಬುಶಿಲ್ಪಗಳಿವೆ. ಕೊನೆಯ ಐದನೇ ಪಟ್ಟಿಯಲ್ಲಿ ಗೋಪಿಕಾಸ್ತ್ರೀಯರ ವಸ್ತ್ರಾಪಹರಣ, ಹೋಳಿಹಬ್ಬದ ಚಿತ್ರಣ, ನಾಟ್ಯ, ವಾದ್ಯಗಾರರು ಇತರೆ ಉಬ್ಬುಶಿಲ್ಪಗಳಿಂದ ಪ್ರಾಕಾರದ ಭಿತ್ತಿಯನ್ನು ಅಲಂಕರಿಸಿರುವರು (ಛಾಯಾಚಿತ್ರ - ೫೬).

ದೇವಾಲಯದ ಒಳ ಆವರಣದ ಗೋಡೆಯ ಮೇಲೆ ರಾಮಾಯಣ ಮಹಾಭಾರತದ ಉಬ್ಬುಶಿಲ್ಪಗಳನ್ನು ಚಿತ್ರಿಸಿದ್ದಾರೆ (ಛಾಯಾಚಿತ್ರ - ೫೭). ಇದರಲ್ಲಿ ವಿಷ್ಣುವು ಶೇಷಶಾಯಿಯಾಗಿ ಮಲಗಿಕೊಂಡಿರುವುದು. ಭಕ್ತರು ಕೈಮುಗಿದು ಸಾಲಾಗಿ ನಿಂತಿರುವ ಶಿಲ್ಪಗಳು, ಕಪಿಸೈನ್ಯ, ಯುದ್ಧದ ಸನ್ನಿವೇಶಗಳು, ರಥದಲ್ಲಿ ಕುಳಿತು ಯುದ್ಧಕ್ಕೆ ಹೊರಟಿರುವುದು, ನೃತ್ಯಮೇಳ, ಕಲ್ಕಿದರ್ಶನ, ಯಜ್ಞಮಾಡುವ ಉಬ್ಬುಶಿಲ್ಪಗಳನ್ನು ಒಳಬದಿಯಲ್ಲಿ ಕೆತ್ತಲಾಗಿದೆ. ಆವರಣದೊಳಗಿರುವ ಉತ್ಸವ ಮಂಟಪವನ್ನು ಕ್ರಿ.ಶ. ೧೫೨೧ರಲ್ಲಿ ತಿಮ್ಮರಾಜನು ಕಟ್ಟಿಸಿದ್ದನು (ಛಾಯಾಚಿತ್ರ - ೫೮). ಇದನ್ನು ಪ್ರಾಕಾರಕ್ಕೆ ಹೊಂದಿಕೊಂಡಂತೆ ಸೇರಿಸಿರುವುದರಿಂದ ಪ್ರಾಕಾರದಲ್ಲಿರುವ ಉಬ್ಬುಶಿಲ್ಪಗಳು ಕೆಲವೊಂದು ಮುಚ್ಚಿಕೊಂಡಿವೆ. ಈ ಮಂಟಪವು ದಕ್ಷಿಣಕ್ಕೆ ಮುಖಮಾಡಿದ್ದು ನಾಲ್ಕು ಮೆಟ್ಟಿಲುಗಳೆತ್ತರದಲ್ಲಿ ಪ್ರವೇಶವಿದೆ (ನಕ್ಷೆ - ೧೯). ಮೆಟ್ಟಿಲಿನ ಪಕ್ಕದಲ್ಲಿ ಸುರಳಿಯಾಳಿಗಳನ್ನು ನಿಲ್ಲಿಸಿರುವರು. ಈ ಉತ್ಸವಮಂಟಪವು ಅಧಿಷ್ಠಾನ, ಸರಳವಾದ ಭಿತ್ತಿ, ಕಪೋತವನ್ನುಹೊಂದಿದ ಪ್ರಸ್ತರವಿದ್ದು ಸರಳವಾಗಿದೆ. ಕಪೋತದ ಕೆಳಗೆ ಉಬ್ಬುಶಿಲ್ಪ, ಕುಬ್ಜರನ್ನು ಕೆತ್ತಲಾಗಿದೆ. ಮಂಟಪಕ್ಕೆ ಒಂದು ಪ್ರವೇಶದ್ವಾರವಿದ್ದು, ಮಧ್ಯದಲ್ಲಿ ಮೂರು ಅಡಿ ಎತ್ತರದ ವೇದಿಕೆ ಮೇಲೆ ನಾಲ್ಕು ಸ್ತಂಭಗಳನ್ನು ನಿಲ್ಲಿಸಿರುವರು. ವೇದಿಕೆಯು ವಿಜಯನಗರ ಶೈಲಿಯಲ್ಲಿದ್ದು, ಸ್ತಂಭಗಳು ಚಿತ್ರಕಾಂಡಸ್ತಂಭಗಳಾಗಿವೆ. ಬೋದಿಗೆ ಪುಷ್ಪಬೋದಿಗೆಯಾಗಿದೆ. ಮಧ್ಯದ ಛತ್ತಿನಲ್ಲಿ ಅರಳಿದ ಕಮಲದಿಂದ ಮೊಗ್ಗು ಕೆಳಮುಖವಾಗಿ ಖಂಡರಿಸಿದ್ದಾರೆ. ಈ ಮಂಟಪದ ಒಳಭಾಗದಲ್ಲಿ ಎರಡು ಬದಿಯಲ್ಲಿ ಉಬ್ಬುಶಿಲ್ಪ ಪಟ್ಟಿಗಳಿದ್ದು ಕೆಲವು ಹಾಳಾಗಿವೆ. ಈ ಶಿಲ್ಪಗಳಲ್ಲಿ ಹೆಚ್ಚು ವೈಷ್ಣವಧರ್ಮಕ್ಕೆ ಸಂಬಂಧಿಸಿದವುಗಳಾಗಿವೆ.

ಮಹಾದ್ವಾರಮಂಟಪದ ನಂತರ ಮುಖಮಂಟಪದಲ್ಲಿ ವಿವಿಧ ಉಬ್ಬುಕೆತ್ತನೆಗಳಿಂದ ಕೂಡಿದ ಚಿತ್ರಕಾಂಡ ಸ್ತಂಭಗಳು ಕಂಡುಬರುತ್ತವೆ. ಮುಖಮಂಟಪದ ಎದುರು ಬಲಿಪೀಠವಿದೆ. ಇದು ನವರಂಗದ ದ್ವಾರಬಾಗಿಲ ಹೊರ ಆದಿಬದಿಯಲ್ಲಿ ಎತ್ತರದ ವೇದಿಕೆಯನ್ನು ಹೊಂದಿದ್ದು, ನಾಲ್ಕು ಸ್ತಂಭಗಳನ್ನು ನಿಲ್ಲಿಸಲಾಗಿದೆ. ನವರಂಗ ಚೌಕಾಕಾರವಾಗಿದ್ದು ಮಧ್ಯದಲ್ಲಿರುವ ವೇದಿಕೆಯೂ ಚೌಕಾಕಾರವಾಗಿ ಕಪ್ಪುಶಿಲೆಯ ನಾಲ್ಕು ಕಂಬಗಳನ್ನು ಒಳಗೊಂಡಿದೆ. ಇವುಗಳು ಚಚ್ಚೌಕವಾಗಿದ್ದು ಒಂದೊಂದು ದಿಕ್ಕಿನಲ್ಲಿ ಮೂರು ಭಾಗಮಾಡಿ ಮೇಲಿನೆರಡು ಭಾಗಗಳಲ್ಲಿ ವಿಷ್ಣುವಿನ ಉಪ ಅವತಾರಗಳನ್ನು ಕೊರೆದಿದ್ದಾರೆ (ನಕ್ಷೆ- ೨೦). ಈ ಶಿಲ್ಪಗಳಿಗೆಲ್ಲ ಸಿಂಹ ಲಲಾಟವಿದೆ.

ಎರಡರ ಮಧ್ಯೆ ನಾಗಬಂಧವೂ ಇದೆ. ಈ ಕಂಭಗಳ ಮೇಲೆ ಪುಷ್ಪ ಬೋದಿಗೆ ಉನ್ನತವಾದ ಪರಿಪೂರ್ಣತೆಯನ್ನು ಹೊಂದಿದೆ. ಈ ಬೋದಿಗೆಗಳಿಗೆ ಜೋತುಬಿದ್ದ ಕಮಲದ ಮೊಗ್ಗುಗಳು ಕೆಳಮುಖವಾಗಿವೆ. ಈ ಸ್ತಂಭಗಳು ಹೊಯ್ಸಳ ಮಾದರಿಯಲ್ಲಿದ್ದು, ಚರಕಿಯಂತ್ರದ ಮೇಲೆ ತಯಾರಾಗಿ, ಹೊಳಪುಳ್ಳ ನಯವಾದ ಸ್ತಂಭಗಳಾಗಿವೆ. ಈ ರೀತಿಯ ಸ್ತಂಭಗಳು ವಿಜಯನಗರ ಶೈಲಿಯಲ್ಲಿ ಸಿಗುವುದು ತುಂಬಾ ವಿರಳ. ಈ ಸ್ತಂಭಗಳ ಕೆಳಗಿನ ಪಟ್ಟಿಗಳಲ್ಲಿ ಹನುಮಾನ್, ಗಣೇಶರ ಉಬ್ಬುಕೆತ್ತನೆಗಳಿವೆ. ನವರಂಗದ ವಿತಾನದಲ್ಲಿ ಭುವನೇಶ್ವರಿ ಸರಳ ಕೆತ್ತನೆಯಿಂದ ಕೂಡಿದೆ. ಅಲ್ಲದೆ ಅರಳಿದ ಪದ್ಮಗಳ ಕೆತ್ತನೆಗಳಿವೆ. ಅರ್ಧಮಂಟಪದ ಎರಡು ಪಕ್ಕದಲ್ಲಿ ಸಾಂಧಾರ ಶೈಲಿಯ ಬಾಗಿಲು ವ್ಯವಸ್ಥೆ ಇದ್ದು, ಆದರೆ ಸಾಂಧಾರ ರೀತಿಯ ಪ್ರದಕ್ಷಿಣೆಪಥವಿರುವುದಿಲ್ಲ. ನವರಂಗಕ್ಕೆ ಮೂರುದಿಕ್ಕಿಗೂ ಬಾಗಿಲು ವ್ಯವಸ್ಥೆಯಿದ್ದು ಉತ್ತರ ಮತ್ತು ದಕ್ಷಿಣಕ್ಕೆ ದ್ವಾರಮಂಟಪವನ್ನು ಹೊಂದಿವೆ. ನವರಂಗದ ಹೊರಬದಿಯಲ್ಲಿ ಚಿತ್ರ ಪಟ್ಟಿಗೆಗಳ ಸಾಲುಗಳಿದ್ದು, ರಾಮಾಯಣದ ಸನ್ನಿವೇಶಗಳನ್ನು ಸಾಲಾಗಿ ಕೆತ್ತಲಾಗಿದೆ.

ಅರ್ಧಮಂಟಪದ ಲಲಾಟಬಿಂಬದಲ್ಲಿ ಲಕ್ಷ್ಮೀಯ ಉಬ್ಬುಶಿಲ್ಪವಿದೆ. ಬಾಗಿಲುವಾಡದ ಕೆಳಭಾಗದಲ್ಲಿ ದ್ವಾರಪಾಲಕರ ಉಬ್ಬುಕೆತ್ತನೆಗಳಿವೆ. ಬಾಗಿಲುವಾಡದ ಇನ್ನೊಂದು ಪಟ್ಟಿಯಲ್ಲಿ ಸ್ತ್ರೀ ಉಬ್ಬುಕೆತ್ತನೆವಿದ್ದು, ಅವರ ತಲೆಯ ಮೇಲೆ ಬಳ್ಳಿಯ ಕೆತ್ತನೆಯಿದೆ. ಉತ್ತಾರಾಂಗದಲ್ಲಿ ಪದ್ಮದಳಗಳನ್ನು ಅಲಂಕರಿಸಿರುವರು. ಅರ್ಧಮಂಟಪದ ವಿತಾನದಲ್ಲಿ ಅರಳಿದ ಪದ್ಮದ ಕೆತ್ತನೆ ಇದೆ. ಈ ಮಂಟಪದ ಎರಡು ಸ್ತಂಭಗಳಲ್ಲಿ ವಿಷ್ಣುವಿನ ಅವತಾರದ ಉಬ್ಬುಶಿಲ್ಪಗಳಿವೆ. ಅಲ್ಲದೆ, ಈ ಸ್ತಂಭಗಳ ಮೇಲೆ ಪುಷ್ಪಬೋದಿಗೆಗಳನ್ನು ಅಳವಡಿಸಲಾಗಿದೆ.

ಸುಕನಾಸಿಯು ಸರಳವಾಗಿದ್ದು ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಗರ್ಭಗೃಹವು ಚಚ್ಚೌಕಾಕಾರವಾಗಿದ್ದು, ರಾಮಚಂದ್ರ ಹಾಗೂ ಸೀತಾ ಲಕ್ಷ್ಮಣರ ಮೂರ್ತಿಗಳ ಪೀಠ ಹಾಗೆ ಉಳಿದಿದೆ. ಮೂರ್ತಿಗಳು ಕಂಡುಬರುವುದಿಲ್ಲ. ಗರ್ಭಗೃಹದ ಮೇಲ್ಛಾವಣಿ ಬಹಳ ಸುಂದರವಾಗಿ ಮೂಡಿಬಂದಿದೆ. ಒಂದೇ ಕಲ್ಲಿನಲ್ಲಿ ಕೊರೆದ ಅರ್ಧ ವರ್ತುಲಾಕಾರದ ಛಾವಣಿಯ ಮಧ್ಯ ಕಮಲದ ಮೊಗ್ಗು ಇದೆ.

ಪ್ರಧಾನ ದೇವಾಲಯದ ಹೊರ ಬದಿಯು ಲಕ್ಷಣಗಳಲ್ಲಿ ಷಡ್ವರ್ಗದ ಮಾದರಿಯದಾಗಿದೆ (ಛಾಯಾಚಿತ್ರ - ೫೯). ಕೆಳಭಾಗದ ಅಧಿಷ್ಠಾನದಲ್ಲಿ ಪಾದುಕಾ, ಉಪಾನ, ಪದ್ಮ, ಕಂಪ, ಜಗತಿ, ತ್ರಿಪಟ್ಟಕುಮುದ ಭಾಗಗಳಿಂದ ಕೂಡಿದೆ. ಮೇಲಿನ ಭಿತ್ತಿಯಲ್ಲಿ ರಾಮಾಯಣದ ವಿವಿಧ ಸನ್ನಿವೇಶದ ಉಬ್ಬುಕೆತ್ತನೆಗಳ ಎರಡು ಪಟ್ಟಿ, ಅರ್ಧಕಂಬ, ಕೋಷ್ಠಕ (ಛಾಯಾಚಿತ್ರ - ೬೦). ಕುಂಭಲತಾಗಳು (ಛಾಯಾಚಿತ್ರ - ೬೧). ವಿವಿಧ ದೇವದೇವತೆಗಳ ಉಬ್ಬುಶಿಲ್ಪಗಳಿದ್ದು, ದೇವಾಲಯದ ದಕ್ಷಿಣದ ಅಧಿಷ್ಠಾನದಲ್ಲಿ ಶಾಸನಗಳಿವೆ. ಈ ಕೋಷ್ಠಕಗಳಲ್ಲಿ ಮೂರ್ತಿಗಳಿರದೆ ಖಾಲಿಯಾಗಿವೆ. ಪ್ರಸ್ತರದಲ್ಲಿ ಕಪೋತವಿದ್ದು, ಅದರ ಮೇಲೆ ಕ್ಷುದ್ರನಾಸಿಗಳಿಂದ ಅಲಂಕರಿಸಿರುವರು. ದೇವಾಲಯದ ವಿಮಾನವು ಗಂಭೀರವೂ, ಆಕರ್ಷಕವಾಗಿ ತೋರುತ್ತದೆ. ಕಲ್ಲಿನಿಂದ ನಿರ್ಮಿತವಾದ ಗರ್ಭಗೃಹದ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ಈ ವಿಮಾನವನ್ನು ನಿರ್ಮಿಸಿದೆ. ಶಿಖರದ ಆಕಾರ ಮೇಲು ಮೇಲಕ್ಕೇರುತ್ತಾ ಮೂರುಸಾಲುಗಳಿಗೊಮ್ಮೆ ಅರ್ಧಗೋಳಾಕೃತಿಯ ಆಕಾರವನ್ನು ಪಡೆದು ಕಿರಿದಾಗುತ್ತಾ ಹೋಗಿದೆ. ಇದರಲ್ಲಿ ಕುಡ್ಯಸ್ತಂಭ, ಕರ್ಣಕೂಟ, ಕೋಷ್ಠಕ, ಉಬ್ಬು ಗಾರೆಯಶಿಲ್ಪ, ನಾಸಿ, ಶಾಲಾ, ದೇವಾನುದೇವತೆಗಳ ಗಾರೆಶಿಲ್ಪಗಳನ್ನು

ಶಿಖರದಲ್ಲಿ ಅಲಂಕರಿಸಲಾಗಿದೆ (ನಕ್ಷೆ - ೨೧). ಶಿಖರದ ಮೇಲ್ಭಾಗ ಜೀರ್ಣೋದ್ಧಾರಪಡೆದಿದೆ. ಶಿಖರದ ಮುಂದೆ ಅಂತರಾಳದ ಮೇಲೆ ಸುಕನಾಸಿ ಇದ್ದು, ಇದು ಮೇಲ್ಕಟ್ಟಡದ ಕೆಳ ಮಧ್ಯಭಾಗವು ಮುಂಚಾಚಿದೆ. ಇದು ಲಲಾಟನಾಸಿಯನ್ನು ಹೊಂದಿದ್ದು, ಇದರ 'ಗಾಧ'ದಲ್ಲಿ ಮುಂದೆ ದೇವರಿಗೆ ಸಂಬಂಧಪಟ್ಟ ಮೂರ್ತಿ ಇರುವುದು. ಇಂದು ಹಾಳಾಗಿದೆ.

ಪ್ರಧಾನ ದೇವಾಲಯದ ಎಡಕ್ಕೆ ಸೀತಾದೇವಿಯ ದೇವಾಲಯವಿದ್ದು, ಇದು ವಿಜಯನಗರ ಶೈಲಿಯ ಲಕ್ಷಣಗಳನ್ನು ಒಳಗೊಂಡಿದೆ (ಛಾಯಾಚಿತ್ರ - ೬೨). ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಜೋಡುಗರ್ಭಗೃಹಗಳನ್ನು ಹೊಂದಿದೆ. ಗರ್ಭಗುಡಿಯ ಮೇಲ್ಛಾವಣಿಯಲ್ಲಿ ಅರಳಿದ ಪದ್ಮದಳವಿದ್ದು, ಎರಡು ಗರ್ಭಗೃಹಗಳಿಗೆ ಒಂದೇ ಅಂತರಾಳವಿದೆ. ಇದರಲ್ಲಿ ಎರಡು ಕುಂಭಾಲತಾಗಳಿವೆ. ಇಲ್ಲಿ ಹೂಬಳ್ಳಿಯ ಕೆತ್ತನೆಯಿಂದ ಅಲಂಕರಿಸಿರುವರು. ಅಂತರಾಳದ ಬಾಗಿಲುವಾಡದಲ್ಲಿ ಹೂಬಳ್ಳಿ, ಅರ್ಧಕಂಬ, ಕುಂಭಲತೆ, ಆನೆಸವಾರಿ, ಸ್ತ್ರೀ ನಾಟ್ಯಭಂಗಿ, ಲಕ್ಷ್ಮೀ, ಸಿಂಹಮುಖದ ಚಿಕ್ಕಚಿಕ್ಕ ನಾಸಿಗಳು, ವಿವಿಧ ದೇವತೆಗಳ ಉಬ್ಬುಕೆತ್ತನೆಗಳಿವೆ. ಗರ್ಭಗುಡಿಯಲ್ಲಿ ಮೂರ್ತಿಶಿಲ್ಪವು ಇರದೇ ಇಂದು ಖಾಲಿಯಿದೆ. ಈ ದೇವಾಲಯವು ತೆರೆದ ನವರಂಗವನ್ನು ಹೊಂದಿದ್ದು, ಇದರಲ್ಲಿ ಚಿತ್ರಕಾಂಡ ಸ್ತಂಭಗಳ ಮೇಲೆ ವಿವಿಧ ಪ್ರಾಣಿ, ದೇವತೆಗಳ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಈ ಸ್ತಂಭಗಳಲ್ಲಿ ನಾಗವಕ್ರಮಂಡಿಯು ಇದೆ. ಅಮ್ಮನವರ ದೇವಾಲಯದ ಒಂದು ಗೋಡೆಯ ಮೇಲೆ ಅರಸು ದಾನಕೊಡುತ್ತಿರುವುದರ ಉಬ್ಬುಶಿಲ್ಪದ ಚಿತ್ರವಿದೆ.

ಸೀತಾ ದೇವಾಲಯದ ಅಧಿಷ್ಠಾನದಲ್ಲಿ ಉಪಾನ, ಪದ್ಮ, ಪದ್ಮ, ಕಂಪ, ಊರ್ಧ್ವಪದ್ಮ, ವೃತ್ತಬಳೆಯಕಾರದ ಕುಮುದ, ಪದ್ಮ, ಗಳ ಇದರಲ್ಲಿ ಶಿಲ್ಪಪಟ್ಟಿಕಾಗಳನ್ನು ಅಳವಡಿಸಿರುವರು (ಛಾಯಾಚಿತ್ರ - ೬೩). ಮಧ್ಯದ ಪಟ್ಟಿಕೆಗಳಲ್ಲಿ ಹೂಬಳ್ಳಿಗಳ ಅಲಂಕಾರ ಮಾಡಲಾಗಿದೆ. ನಂತರ ಕಪೋತವಿದ್ದು ಇದರಲ್ಲಿ ಕಪೋತನಾಸಿಯನ್ನು ಸಾಲಾಗಿ ಚಿತ್ರಿಸಲಾಗಿದೆ. ಭಿತ್ತಿಯಲ್ಲಿಯೂ ಅಧಿಷ್ಠಾನದ ಕೆಲವೊಂದು ಭಾಗಗಳು ಮುಂದುವರೆದಿದ್ದು ಮೇಲೆ ಕುಂಭಲತೆ, ಕೋಷ್ಠಕ, ಅರ್ಧಕಂಬ ಮೇಲೆ ಕೆಳಗೆ ಉಬ್ಬುಶಿಲ್ಪಗಳ ಪಟ್ಟಿಗಳು, ಇದರಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಶಿಲ್ಪಗಳನ್ನು ಕೆತ್ತಲಾಗಿದೆ. ಕೋಷ್ಠಕಗಳಲ್ಲಿ ಮೂರ್ತಿಯ ಉಬ್ಬುಶಿಲ್ಪಗಳಿರದೆ ಖಾಲಿಯಿದ್ದು ಮೇಲೆ ಶಾಲಾ ಕಳಸಗಳನ್ನು ಅಲಂಕರಿಸಿರುವರು. ಪ್ರಸ್ತರದಲ್ಲಿ ಕಪೋತವಿದ್ದು ಇದರಲ್ಲಿ ನಾಸಿಗಳಿವೆ. ಈ ದೇವಾಲಯದ ಶಿಖರವು ಮೂರು ಹಂತಗಳಲ್ಲಿ ಮೇಲೆರಿದ್ದು, ಹಂತದಿಂದ ಹಂತಕ್ಕೆ ಸಣ್ಣದಾಗುತ್ತ ಶಾಲಾಶಿಖರದಲ್ಲಿ ಕೊನೆಗೊಂಡಿದೆ. ಕೆಳಹಂತದಲ್ಲಿ ಕೋಷ್ಠಕ, ಅರ್ಧಕಂಬ, ಗಾರೆಶಿಲ್ಪಗಳನ್ನು ಕೋಷ್ಠಕದ ಮುಂದೆ ನಿರ್ಮಿಸಿದ್ದಾರೆ. ಮಧ್ಯದ ಕೋಷ್ಠಕಗಳಲ್ಲಿ ಮೇಲೆ ಶಾಲಾಗಳಿದ್ದು ಇದರಲ್ಲಿ ನಾಸಿಗಳನ್ನು ಅಲಂಕರಿಸಿರುವರು. ನಾಲ್ಕು ಮೂಲೆಯಲ್ಲಿ ಕರ್ಣಕೂಟಗಳನ್ನು ನಿರ್ಮಿಸಿ, ಸುತ್ತಲೂ ಗಾರೆಶಿಲ್ಪಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಸಾಮಾಜಿಕ ಶಿಲ್ಪಗಳು ಮತ್ತು ದೇವತೆಯರ ಗಾರೆ ಶಿಲ್ಪಗಳಿವೆ.

ಎರಡನೆಯ ಹಂತದಲ್ಲಿ ಕೋಷ್ಠಕ, ಮೇಲೆ ಶಾಲಾ, ಪಾರ್ಶ್ವನಾಸಿಯಿದ್ದು ಕಪೋತದಿಂದ ನಿರ್ಮಿಸಿರುವರು. ಈ ಕಪೋತದ ಮೇಲೆ ನಾಸಿಗಳನ್ನು ರಚಿಸಿದ್ದಾರೆ. ಕಪೋತ ಹಾಗೂ ಗ್ರೀವದಲ್ಲಿಯೂ ಅರ್ಧಕಂಬಗಳನ್ನು

ನಿರ್ಮಿಸಿರುವುದು ಕಂಡುಬರುತ್ತದೆ. ಪಾರ್ಶ್ವದಲ್ಲಿ ಪ್ರಭಾವಳಿಯಿದ್ದು ಮಧ್ಯದಲ್ಲಿ ಪದ್ಮವಿದೆ. ಈ ಹಿಂಜರಿದ ಗೂಡಿನಲ್ಲಿ ಕರ್ಣಕೂಟವನ್ನು ಎರಡು ಬದಿಯಲ್ಲಿ ರಚಿಸಿ ಮೇಲೆ ಸಣ್ಣದಾದ ಶಾಲಾ ಶಿಖರವನ್ನು ನಿರ್ಮಿಸಿರುವರು. ಇದರಲ್ಲಿಯೂ ಚಿಕ್ಕ ಪಾರ್ಶ್ವಪ್ರಭಾವಳಿಯಿದೆ. ದೊಡ್ಡ ಶಾಲಾದ ಮಧ್ಯದಲ್ಲಿ ನಾಸಿಯ ಗೂಡು ಇದೆ. ಈ ಶಿಖರವು ಚಿಕ್ಕದಾದರೂ ಹೆಚ್ಚು ಅಲಂಕರಣದಿಂದ ಕೂಡಿದೆ.


ಮುಖ್ಯ ದೇವಾಲಯದ ಹಿಂಭಾಗ ಪ್ರಾಕಾರಕ್ಕೆ ಹೊಂದಿಕೊಂಡಂತೆ ಬಲಭಾಗದಲ್ಲಿ ಕಲ್ಯಾಣಮಂಟಪವಿದೆ. ಇದು ೮ ಸ್ತಂಭಗಳ ಮಂಟಪವಾಗಿದೆ. ಮಧ್ಯದಲ್ಲಿ ವೇದಿಕೆಯಿದ್ದು, ಅದರ ಮೇಲೆ ನಾಲ್ಕುಸ್ತಂಭಗಳನ್ನು ನಿಲ್ಲಿಸಿರುವರು. ಈ ಸ್ತಂಭಗಳು ಪದ್ಮಕಾಂತಸ್ತಂಭಗಳಾಗಿವೆ. ಇವುಗಳ ಮೂಲದಲ್ಲಿ ಪದ್ಮದಿಂದ ಕೂಡಿದ ಪೀಠ, ಅದರ ಮೇಲೆ ಪಾಲಿಕಾ ಇದ್ದು, ಸುತ್ತಲೂ ಚಿತ್ರಪಟ್ಟಿಕೆಗಳ ಮೇಲೆ ಹಂಸ, ಸಿಂಹಮುಖ, ಗಂಧರ್ವರು ಇತ್ಯಾದಿ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಮೂಲದಿಂದ ತುದಿಯವರೆಗೂ ಮೊಗ್ಗುಗಳಿಂದ ಕೂಡಿದ್ದು, ಚಿತ್ರಪಟ್ಟಿಗಳ ಮೇಲೆ ಮತ್ತು ಕೆಳಗೆ ಮೊಗ್ಗುಗಳಿವೆ. ಅಂತರದಲ್ಲಿ ಗ್ರೀವದ ಭಾಗಗಳಾವುವು ಇರದೆ, ಪುಷ್ಪಬೋದಿಗೆಯನ್ನು ಮಾತ್ರ ನಿರ್ಮಿಸಿರುವುದು ಕಂಡುಬರುತ್ತದೆ. ಕಲ್ಯಾಣಮಂಟಪಕ್ಕೆ ಹತ್ತಿಹೋಗಲು ನಾಲ್ಕು ಮೆಟ್ಟಿಲುಗಳಿವೆ. ಇದಕ್ಕೆ ಹೊಂದಿಕೊಂಡಂತೆ ಎಡಭಾಗದಲ್ಲಿ ಮೂವತ್ತು ಸ್ತಂಭಗಳ ಮಾಲಿಕ ರಚನೆಯ ಮಂಟಪಗಳಿವೆ. ಇದರಲ್ಲಿ ಹತ್ತು ಸ್ತಂಭಗಳನ್ನು ಪ್ರಾಕಾರಕ್ಕೆ ಹೊಂದಿಸಿ ನಿಲ್ಲಿಸಿಲಾಗಿದೆ. ಪ್ರಧಾನ ದೇವಾಲಯದ ಮುಂದೆ ಬಲಭಾಗದಲ್ಲಿ ೨೭ ಸ್ತಂಭಗಳ ಮಂಟಪವಿದೆ. ಇದಕ್ಕೆ ಮೂರು ಮೆಟ್ಟಿಲುಗಳಿವೆ. ಈ ಮಂಟಪದ ಮುಂದೆ ಒಂದು ನೀರಿನ ತೊಟ್ಟಿಯಿದೆ. ಮಹಾದ್ವಾರದ ಮುಂದೆ ಬಲಭಾಗದಲ್ಲಿ ಆರುಸ್ತಂಭಗಳ ಒಂದು ಚಿಕ್ಕ ಮಂಟಪವಿದೆ. ಇದರ ಬಾಗಿಲು ಹೊರಗಿದ್ದು ಸರಳವಾಗಿದೆ.

ಪ್ರಮುಖವಾದ ಈ ದೇವಾಲಯದಲ್ಲಿ ಪೂಜಾ ಕೈಂಕರ್ಯಗಳು ಹಾಗೂ ಉತ್ಸವಾದಿಗಳು ಅಧಿಕಸಂಖ್ಯೆಯಲ್ಲಿ ನಡೆಯುತ್ತಿದ್ದುದನ್ನು ಶಾಸನಗಳಿಂದ ತಿಳಿಯಬಹುದು.[೬೬] ದೇವಾಲಯದಲ್ಲಿ ಅಮೃತಪಡಿನೈವೇದ್ಯ, ಅಂಗರಂಗ ವೈಭವ, ನಿತ್ಯನೈಮಿತ್ತಿಕ, ಮಾಸಪೂಜೆ, ಪಂಚಪರ್ವ ಪುಣ್ಯತಿಥಿಗಳು ಮತ್ತು ಮಹಾಪೂಜೆ ನೈವೇದ್ಯ ಕೈಂಕರ್ಯಗಳು ನಡೆಯುತ್ತಿದ್ದವು. ಅಲ್ಲದೆ, ರಥಸಪ್ತಮಿ ಪುಣ್ಯಕಾಲದ ಚೈತ್ರಮಾಸ ರಥೋತ್ಸವ ಮತ್ತು ಊಟಿಯಹಬ್ಬ, ಸಂಕ್ರಾಂತಿಯ ಕರಿಯಾಬೇಟೆ, ಪುಷ್ಯಯಾಗ ಉತ್ಸವಗಳು ದೇವಾಲಯದಲ್ಲಿ ನಡೆಯುತ್ತಿದ್ದವು. ಈ ಉತ್ಸವಗಳಲ್ಲಿ ವಾಹನಗಳ ಮೇಲೆ ಶೇಷ ೧, ಪುಷ್ಪಮಂಟಪ ೧, ಸಿಂಹ ೧, ಗರುಡ ೧, ಗಜ ೧, ರಥಗಾಲಿ ೧, ಅಶ್ವರೋಹಣ ೧, ಅವಭೃತ ಚೂರ್ನೋತ್ಸವ ೧, ಊಟಿಹಬ್ಬದ ಗರುಡಾರೋಹಣ ೧, ಸಂಕ್ರಾಂತಿಯ ಅಶ್ವಾರೋಹಣ ೧, ಪುಷ್ಯಯಾಗ ೧ ಈ ವಾಹನಗಳ ಮೇಲೆ ಉತ್ಸವ ಮೂರ್ತಿಯನ್ನು ಕೂಡಿಸಿ ದೇವಾಲಯದ ಸುತ್ತಲೂ ಮೆರವಣಿಗೆ ಮಾಡಲಾಗುತ್ತಿದ್ದಿತು.[೬೭] ಇದು ಒಂದು ಧಾರ್ಮಿಕ ಕೇಂದ್ರವಾಗಿದ್ದುದಲ್ಲದೆ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೂ ಆಗಿತ್ತು.


ದೇವಾಲಯದಲ್ಲಿ ದೇವರ ಕಾರ್ಯವನ್ನು ನೋಡಿಕೊಳ್ಳಲು ಹಲವು ಜನರು ನಿಯುಕ್ತರಾಗಿರುತ್ತಿದ್ದರು. ಅವರುಗಳನ್ನು ಶಾಸನದಲ್ಲಿ, ಕಾರ್ಯಕರ್ತ ಅಲ್ಲಮರಸ, ಆಗಮಿಕ ನಾರಾಯಣಭಟ್ಟ, ಸ್ಥಾನಿಕ ಮಾಧವಯ,



ಛಾ ಚಿ ೫೫. ರಾಮಚಂದ್ರ ದೇವಾಲಯದ ಸಮಗ್ರ ಚಿತ್ರಣ, ಹಂಪಿ



ಛಾ ಚಿ ೫೬. ಹೊರಮುಖ ಪ್ರಾಕಾರಗೋಡೆ, ರಾಮಚಂದ್ರ ದೇವಾಲಯ, ಹಂಪಿ




ನಕ್ಷೆ- ೧೬ ರಾಮಚಂದ್ರ ದೇವಾಲಯದ ತಲನಕ್ಷೆ







ಪ್ರಾಕಾರಗೋಡೆ ಮತ್ತು ದ್ವಾರಬಾಗಿಲು, ಉತ್ತರ ದಿಕ್ಕು



ನಕ್ಷೆ- ೧೭ ಪ್ರಾಕಾರಗೋಡೆ ಮತ್ತು ದ್ವಾರಬಾಗಿಲು, ಪೂರ್ವ ದಿಕ್ಕು



ನಕ್ಷೆ, ೧೮ ಹೊರ ಪ್ರಾಕಾರಗೋಡೆಯ ಚಿತ್ರಪಟ್ಟಿ, ಪೂರ್ವ ದಿಕ್ಕು







ಛಾ ಚಿ ೫೭. ಪ್ರಾಕಾರಗೋಡೆ ಒಳಭಾಗದ ಚಿತ್ರಪಟ್ಟಿಕೆಗಳು, ಹಂಪಿ




ಛಾ ಚಿ ೫೮. ಉತ್ಸವ ಮಂಟಪ, ರಾಮಚಂದ್ರ ದೇವಾಲಯ, ಹಂಪಿ



ನಕ್ಷೆ. ೧೯ ಉತ್ಸವ ಮಂಟಪದ ಹೊರ ಮತ್ತು ಒಳನೋಟ



ಸಿಂಹಯಾಳಿ



ನಕ್ಷೆ- ೨೦ ರಾಮಚಂದ್ರ ದೇವಾಲಯದ ನವರಂಗ ಸ್ತಂಭ




ಭಾ ಚಿ ೫೯. ರಾಮಚಂದ್ರ ದೇವಾಲಯದ ವಿಮಾನ, ಹಂಪಿ



ಭಾ ಚಿ ೬೦. ಕೋಷ್ಠಕ, ರಾಮಚಂದ್ರ ದೇವಾಲಯ, ಹಂಪಿ



ಭಾ ಚಿ ೬೧. ಕುಂಭಲತಾ, ರಾಮಚಂದ್ರ ದೇವಾಲಯ, ಹಂಪಿ



ನಕ್ಷೆ-೨೧ ರಾಮಚಂದ್ರ ದೇವಾಲಯದ ಒಳ ಮತ್ತು ಹೊರನೋಟ







ಛಾ ಚಿ ೬೨. ಸೀತಾ ದೇವಾಲಯದ ವಿಮಾನ, ರಾಮಚಂದ್ರ ದೇವಾಲಯ, ಹಂಪಿ



ಛಾ ಚಿ ೬೩. ಸೀತಾ ದೇವಾಲಯದ ಅಧಿಷ್ಠಾನ, ರಾಮಚಂದ್ರ ದೇವಾಲಯ, ಹಂಪಿ

ಸೇನಬೋವ ನರಸಯ್ಯ ಮುಂತಾದವರ ಹೆಸರು ಮತ್ತು ಹುದ್ದೆಗಳು ಶಾಸನದಲ್ಲಿ ಉಲ್ಲೇಖವಾಗಿವೆ.[೮] ಅಲ್ಲದೆ ಶಾಸನವನ್ನು ಸೇನಬೋವ ಮಾಗುಡಿ ಕಾಮರಸನ ಮಗ ಬೋಕಪ ಶಿಂಘರಸನು ಬರೆದುದು ಮೇಲಿನ ಶಾಸನದಿಂದ ತಿಳಿದುಬರುತ್ತದೆ.

ಈ ದೇವಾಲಯವು ಸಂಗಮರ ಕಾಲದಲ್ಲಿ ನಿರ್ಮಾಣಹೊಂದಿ ಚಿಕ್ಕ ದೇವಾಲಯವಾಗಿ ಬೆಳೆದು ಮುಂದೆ ಬಂದ ತುಳುವ ಅರಸನಾದ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಅನೇಕ ದಾನದತ್ತಿಗಳನ್ನು ಪಡೆದು, ದೇವಾಲಯಕ್ಕೆ ಹೊಸ ಭಾಗಗಳು ಸೇರ್ಪಡೆಯಾಗುವುದರೊಂದಿಗೆ ದೊಡ್ಡ ದೇವಾಲಯವಾಗಿ ಮಾರ್ಪಾಡುಹೊಂದಿತು. ಇಲ್ಲಿನ ಶಿಲ್ಪಕಲೆಗಳಿಗೆ ಈ ದೇವಾಲಯವು ಪ್ರಸಿದ್ಧಿ ಪಡೆದಿದೆ. ಇದು ಖಾಸಗಿ ದೇವಾಲಯವಾಗಿ ಅನೇಕ ರೀತಿಯ ಉತ್ಸವಾದಿಗಳು ನಡೆಯುವ ಕೇಂದ್ರವಾಗಿ ಪ್ರಸಿದ್ಧಿಯನ್ನು ಪಡೆದಿದ್ದಿತು. ದೇವಾಲಯವು ಇಂದಿಗೂ ಹಾಳಾಗದೇ ಸುಂದರವಾಗಿ ಉಳಿದುಕೊಂಡು ಬಂದಿದೆ.

೨. ವಿಠ್ಠಲ ದೇವಾಲಯ, ಹಂಪಿ

ವಿಜಯನಗರ ಸಾಮ್ರಾಜ್ಯದ ಶಿಲ್ಪಕೆತ್ತನೆಯ ಭವ್ಯವಾದ ದೇವಾಲಯವಾಗಿದೆ. ಇದು ೫೦೦ ಅಡಿ ಉದ್ದ, ೩೦೦ ಅಡಿ ಅಗಲವಿರುವ ವಿಶಾಲವಾದ ಆವರಣದಲ್ಲಿ ನಿರ್ಮಾಣವಾಗಿದೆ (ನಕ್ಷೆ - ೨೨). ವಿದೇಶೀ ಪ್ರವಾಸಿಗರ, ಬರಹಗಾರರ ಮನಸೆಳೆದಿರುವ ಈ ದೇವಾಲಯ ಅಲಂಕಾರಗಳಿಂದ ಕೂಡಿದ, ವಿಜಯನಗರಶೈಲಿಯ ಅತ್ಯುತ್ತಮ ಮಾದರಿಯೆನ್ನಬಹುದು. ಶಿಲ್ಪಕಲೆಯಲ್ಲಿ ಇದನ್ನು ಮೀರಿಸುವ ಭವ್ಯಮಂದಿರವು ಇಡೀ ದಕ್ಷಿಣಭಾರತದಲ್ಲಿಯೇ ಮತ್ತೊಂದಿಲ್ಲವೆಂದು ಹೇಳಬಹುದು. ತುಂಗಭದ್ರಾ ಪ್ರದೇಶದಲ್ಲಿ ವಿಪುಲವಾಗಿ ದೊರೆಯುವ ಶಿಲಾ ಸಮೂಹವು ಈ ದೇವಾಲಯದ ನಿರ್ಮಾಣಕ್ಕೆ ಸಹಾಯವಾಯಿತು. ವಿಜಯನಗರದ ಶಿಲ್ಪಿಗಳ ಕಲಾತ್ಮಕ ಕೈಗಳಲ್ಲಿ ಈ ಶಿಲಾರೂಪಗಳು ಸುಂದರ ಮೂರ್ತಿಗಳಾಗಿಯೂ ಭವ್ಯ ದೇವಾಲಯಗಳಾಗಿಯೂ ನಿರ್ಮಾಣಗೊಂಡವು. ತುಂಗಭದ್ರೆಯನ್ನು ಹರಿಹರ ಮಹಾಕವಿಯು,

ಇಂತಿಂತು ನೋಡುತುಂಬರೆ
ಮುಂತಿರ್ದುದು ತರಳ ತರತರಂಗ ಪ್ರಯುತಾ
ನಂತನವಫೇನ ಜಲಚರ
ಸಂತಾನಂ ತುಂಗಭದ್ರೆ ಗಂಗಾಪ್ರಾಯಂ ||
ನೆನೆದನೆ ಧನ್ಯಂ ನೋಡಿದ
ನನಘಂ ಸೋಂಕಿದವನಮರ ನಘಮರ್ಷಣಮಿ
ರ್ದನೆ ಮುಕ್ತಂಕೇಳ ತುಂಗಭದ್ರೆಯ ಜಳಮಂ || ಎಂದು ತುಂಗಭದ್ರೆಯನ್ನು ಮುಕ್ತಕಂಠದಿಂದ

ಹೊಗಳಿದ್ದಾನೆ. ಅಂತಹ ತುಂಗಭದ್ರೆಯ ಬಲದಂಡೆಯ ಮೇಲೆ ನಿಂತಿರುವ ವಿಜಯವಿಠಲ ದೇವಾಲಯವು ಹಂಪೆಯ ಧಾರ್ಮಿಕ ಕಟ್ಟಡಗಳಲ್ಲೇ ತುಂಬಾ ಭವ್ಯವಾದುದು. ಆದರೆ, ವಿಠಲನ ಮೂರ್ತಿಯು ದೇವಾಲಯದಲ್ಲಿ ಪ್ರತಿಷ್ಠಾಪನೆಯಾಗಲಿಲ್ಲವೆಂಬ ಒಂದು ವಾಡಿಕೆಯಿದೆ. ಇದಕ್ಕೆ ಪೂರಕವಾಗಿ ಪಂಡರಾಪುರದಿಂದ ಬಂದ ಪಾಂಡುರಂಗ

ವಿಠಲನು ಶ್ರೀನಿವಾಸನಾದರೂ ದೇವಾಲಯದ ಭವ್ಯತೆ, ವೈಶಾಲ್ಯ ಮತ್ತು ಕಲಾಶ್ರೀಗಳನ್ನು ಕಂಡು ಅಲ್ಲಿ ನೆಲೆಸಲು ನಿರಾಕರಿಸಿ ತನ್ನ ಸರಳವಾದ ನಿವಾಸಕ್ಕೆ ಹಿಂದಿರುಗಿದನೆಂದು ಹೇಳುವ ದಂತಕಥೆಯೊಂದು ಪ್ರಚಲಿತದಲ್ಲಿದೆ.

ತಾಳಿಕೋಟೆ ಯುದ್ಧದಲ್ಲಿ ಸಾಮ್ರಾಜ್ಯವು ಪತನವಾಗುವವರೆಗೂ ವಿಠಲನ ಪೂಜೆಯು ನಿರಂತರವಾಗಿ ನಡೆಯುತ್ತಿದ್ದುದು ಶಾಸನಗಳಲ್ಲಿ ವ್ಯಕ್ತವಾಗುತ್ತದೆ. ವಿಠಲ ದೇವಾಲಯದ ರಚನೆಯ ಬಗೆಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯ ಕಂಡುಬಂದಿಲ್ಲ. ದೇವಾಲಯಕ್ಕೆ ಸಂಬಂಧಿಸಿದಂತೆ ಶಾಸನ, ಪುರಾಣ, ಕಾವ್ಯಬರಹ ಹಾಗೂ ವಿದೇಶಿಯರ ಬರಹಗಳಿಂದ ಆಧಾರಗಳು ದೊರೆಯುತ್ತವೆ. ವಾಸ್ತವಿಕವಾಗಿ ದೇವಾಲಯದಲ್ಲಿ ದೊರೆಯುವ ಮೊಟ್ಟಮೊದಲನೆಯ ಶಾಸನವೆಂದರೆ, ಕೃಷ್ಣದೇವರಾಯನು ದೇವಾಲಯಕ್ಕೆ ನೀಡಿದ ದತ್ತಿಶಾಸನವಾಗಿದೆ. ಇದು ಕ್ರಿ.ಶ. ೧೫೧೩ರ ಉಲ್ಲೇಖವಿರುವ ನವರಂಗದ ಹೊರ ಬಾಗಿಲು ಬದಿಗಳಲ್ಲಿ ಬರೆದುದಾಗಿದೆ. ಈ ಶಾಸನದ ಹಿಂದಿನ ಯಾವುದೇ ಶಾಸನಗಳು ಇದುವರೆಗೂ ಎಲ್ಲಿ ಲಭ್ಯವಾಗಿಲ್ಲ. ಆದರೆ, ಈ ದೇವಾಲಯವು ವಿಜಯನಗರದ ಪ್ರಥಮ ಆಳ್ವಿಕೆಯ ಮನೆತನವಾದ ಸಂಗಮರ ಕಾಲದಲ್ಲಿ ನಿರ್ಮಾಣವಾಯಿತೆಂಬುದು ಕೆಲ ವಿದ್ವಾಂಸರ ಅಭಿಪ್ರಾಯ.[೮೯] ಈ ದೇವಾಲಯವನ್ನು ಸಂಗಮವಂಶದ ಒಂದನೇ ದೇವರಾಯನು ಕಟ್ಟಲು ಪ್ರಾರಂಭಿಸಿದನೆಂದು ಕ್ರಿ.ಶ. ೧೪೦೭ರ ತೀರ್ಥಹಳ್ಳಿಯ ಶಾಸನದ ಉಲ್ಲೇಖ ನೀಡುತ್ತಾ ವಸುಂಧರಾ ಫಿಲಿಯೋಜಾ ಅವರು ಹೇಳುತ್ತಾರೆ.[೯೦] ಈ ವಿಠ್ಠಲೇಶ್ವರ ಹಂಪಿಯಲ್ಲಿರುವ ವಿಠಲೇಶ್ವರನೇ ಎಂದು ಹೇಳಿದ್ದಾರೆ. ಕ್ರಿ.ಶ. ೧೬ನೆಯ ಶತಮಾನದ ತೆಲುಗು ಬರಹದಲ್ಲಿ ಪ್ರೌಢದೇವರಾಯನ ದಂಡನಾಯಕನಾಗಿದ್ದ ಪ್ರೋಲುಗಂಟಿತಿಪ್ಪನು ಈ ದೇವಾಲಯಕ್ಕೆ ಭೋಗಮಂಟಪವನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ.[೯೧] ಅಲ್ಲದೆ, ಅಣ್ಣಾಮಾಚಾರ್ಯನು ತನ್ನ ಸಂಕೀರ್ತನೆಯಲ್ಲಿ ವಿಠ್ಠಲ ಮತ್ತು ರುಕ್ಮಿಣಿಯರು ವೆಂಕಟಾದ್ರಿಯಿಂದ ಬಂದು ತುಂಗಭದ್ರಾ ತೀರದಲ್ಲಿ ನೆಲೆನಿಂತರೆಂದು ವರ್ಣಿಸಿದ್ದಾನೆ.[೯೨] ಮತ್ತೊಬ್ಬ ವಿದ್ವಾಂಸರಾದ ರಾಜಶೇಖರ ಸಿಂದಗಿ ಅವರು. 'ವಿಜಯವಿಠಲದ ದೇವಾಲಯ ಹಂಪೆ - ವಿಜಯನಗರಗಳಲ್ಲೆ ಭವ್ಯವಾದ ದೇವಾಲಯವಾಗಿದ್ದು, ಸಂಗಮರ ಕಾಲದಲ್ಲಿ ಒಂದು ಸಣ್ಣ ದೇವಾಲಯವಾಗಿ ಅಸ್ತಿತ್ವದಲ್ಲಿ ಬಂದ ದೇವಾಲಯವು ಕಾಲಾನುಕ್ರಮದಲ್ಲಿ ವಿಸ್ತೀರ್ಣಗೊಳ್ಳುತ್ತಾ ವಿಶಾಲವಾದ ಒಂದು ಸಂಕೀರ್ಣವಾಗಿ ಪರಿವರ್ತನೆಗೊಂಡಿತ್ತೆಂದು ಅವರ ಅಭಿಪ್ರಾಯವಾಗಿದೆ.[೯೩] ಜಾರ್ಜ್‌ಮಿಶೆಲ್‌ರವರು ತಮ್ಮ ಲೇಖನವೊಂದರಲ್ಲಿ ವಿಠ್ಠಲದೇವಾಲಯವು ಐತಿಹಾಸಿಕವಾಗಿ ಸಾಳುವ ಆಳ್ವಿಕೆಯಲ್ಲಿ ಆದರೆ, ದೇವಾಲಯದ ನಿರ್ಮಾಣ ತುಳುವ ವಂಶದವರ ಕಾಲದಲ್ಲಿ ರಚನೆಯಾಗಿದೆ ಎಂದು ಉಲ್ಲೇಖಿಸಿದ್ದಾರೆ.[೯೪] ಈ ದೇವಾಲಯದ ನಿರ್ಮಾಣದ ಬಗೆಗೆ ಸದ್ಯಕ್ಕೆ ವಿದ್ವಾಂಸರಲ್ಲಿ ಒಮ್ಮತ ಆಧಾರವಿಲ್ಲದಿರಬಹುದು. ಆದರೆ, ದೊರೆತ ಸುಮಾರು ೩೦ ಶಾಸನಗಳಿಂದ ಎಸ್.ವೈ.ಸೋಮಶೇಖರ ಅವರು, ಕೃಷ್ಣದೇವರಾಯನ ಕಾಲದಲ್ಲಿಯೇ ದೇವಾಲಯವನ್ನು ಕಟ್ಟಲು ಪ್ರಾರಂಭಿಸಿರಬೇಕು. ನವರಂಗದ ಬಲಭಾಗದ ದ್ವಾರದ ಮೇಲೆ ತನ್ನ ತಂದೆ - ತಾಯಿಗಳಿಗೆ ಪುಣ್ಯವಾಗಲೆಂದು ಹಾಕಿಸಿದ ಶಾಸನವಿದ್ದು, ಇದು ಈ ಕಾಲದ ನಿರ್ಮಾಣವೇ ಆಗಿದ್ದಿರಬಹುದೆಂದು ತಿಳಿಸಿದ್ದಾರೆ.[೯೫] ಈ ಎಲ್ಲಾ ವಿದ್ವಾಂಸರ ಹೇಳಿಕೆಗಳನ್ನು ಗಮನಿಸಿದಾಗ ಇತ್ತೀಚೆಗೆ ಮತ್ತೊಂದು ವಿಠಲ ದೇವಾಲಯವು ತುಂಗಭದ್ರಾ ನದಿಯ ಚಕ್ರತೀರ್ಥದ ಬಳಿ ಇರುವುದು ಕಂಡುಬಂದಿದೆ. ಈ ದೇವಾಲಯವು ಚಿಕ್ಕದಾಗಿದ್ದು, ಪಿರಮಿಡ್ಡಿನ ಗೋಪುರವನ್ನು

ಹೊಂದಿದೆ. ಈ ದೇವರನ್ನು ಅಲ್ಲಿನ ಎರಡು ಶಾಸನಗಳು ‘ವಿಠ್ಠಲೇಶ್ವರ’ ಮತ್ತು ‘ಪ್ರಾತವಿಠ್ಠಲ’ ಎಂದು ಕರೆದಿವೆ.[೪] ಕ್ರಿ.ಶ. ೧೪೦೬ರ ತೀರ್ಥಹಳ್ಳಿಯ ಶಾಸನದ ಪಠ್ಯವು ಈ ದೇವಾಲಯಕ್ಕೆ ಹೆಚ್ಚು ಅನ್ವಯವಾಗುತ್ತದೆ. ಇದು ತುಂಗಭದ್ರಾ ನದಿ ದಂಡೆಯಲ್ಲಿದ್ದು, ಮಂಟಪವನ್ನು ಒಳಗೊಂಡಿರುವುದರಿಂದ ಇದೇ ಮಂಟಪವು ನರಸಿಂಹ ಪುರಾಣದಲ್ಲಿ ಹೇಳಿದ ಭೋಗಮಂಟಪವಾಗಿರುವ ಸಾಧ್ಯತೆಯಿದೆ. ಇದು ಸದ್ಯಕ್ಕೆ ಖಚಿತತೆ ಇಲ್ಲ. ವಿಠಲ ದೇವಾಲಯವು ತುಳುವ ಪ್ರಾರಂಭಿಕ ಅರಸರ ಕಾಲದಲ್ಲಿ ಒಂದು ಚಿಕ್ಕ ಮಂದಿರವಾಗಿ ನಿರ್ಮಾಣಗೊಂಡಿರಬೇಕು. ಮೂಲ ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗವನ್ನು ಹೊಂದಿದೆ. ನವರಂಗದಲ್ಲಿ ಕಂಡುಬರುವ ನಾಲ್ಕು ಚಿತ್ರಕಾಂಡಸ್ತಂಭಗಳ ಕೆಳಗೆ ಪೀಠವಿದೆ ಮತ್ತು ಈ ಸ್ತಂಭಗಳ ಮೇಲಿರುವ ಬೋದಿಗೆಗಳು ಸಾದಾರೀತಿಯ ಬೋದಿಗೆಗಳಾಗಿವೆ. ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣವಾದ ಬಾಲಕೃಷ್ಣ ದೇವಾಲಯ ಹಾಗೂ ನಾಗೇನಹಳ್ಳಿಯ ನಾಗೇಂದ್ರಶಯನ ದೇವಾಲಯಗಳ ನವರಂಗದ ಸ್ತಂಭಗಳ ಮೇಲೆ ಪುಷ್ಪಬೋದಿಗೆಗಳನ್ನು ಅಳವಡಿಸಲಾಗಿದೆ. ವಾಸ್ತುರಚನೆಯನ್ನು ಗಮನಿಸಿದಾಗ ಈ ಸ್ತಂಭಗಳ ಚತುರಸ್ರರಚನೆಯು ವಿಠ್ಠಲ ದೇವಾಲಯದ ಸ್ತಂಭಗಳ ರಚನೆಗೆ ಬಹಳ ವ್ಯತ್ಯಾಸ ಕಂಡುಬರುತ್ತದೆ. ಅಲ್ಲದೆ, ಸಾಂಧಾರ ರೀತಿಯ ಪ್ರದಕ್ಷಿಣಪಥವನ್ನು ನಂತರ ಕಾಲದಲ್ಲಿ ಜೀರ್ಣೋದ್ಧಾರ ಮಾಡಿರುವುದು ಅಲ್ಲಿನ ವಾಸ್ತುರಚನೆಯಿಂದ ಸ್ಪಷ್ಟವಾಗುತ್ತದೆ. ಒಟ್ಟಾರೆಯಾಗಿ ಈ ದೇವಾಲಯವು ಕೃಷ್ಣದೇವರಾಯನ ಆಳ್ವಿಕೆಗಿಂತ ಮುಂಚಿತವಾಗಿ ನವರಂಗದವರೆಗೆ ನಿರ್ಮಾಣವಾಗಿರಬೇಕು. ತದನಂತರ ಕೃಷ್ಣದೇವರಾಯನ ಆಳ್ವಿಕೆ ಮತ್ತು ನಂತರ ಕಾಲದಲ್ಲಿ ಹೆಚ್ಚು ವಿಸ್ತಾರಗೊಳ್ಳುತ್ತಾ ಕ್ರಿ.ಶ. ೧೫೬೪ರವರೆಗೆ ಜೀರ್ಣೋದ್ಧಾರಗೊಂಡು ಭವ್ಯ ದೇವಾಲಯವಾಗಿ ಬೆಳೆಯಿತು.

ವಿಜಯನಗರ ಅರಸರ ಆಳ್ವಿಕೆಯಲ್ಲಿ ದ್ರಾವಿಡ ಮತ್ತು ಹೊಯ್ಸಳ ಶೈಲಿಗಳ ಸಂಯೋಜನೆಯನ್ನು ರೂಢಿಸಿ ರೂಪಿಸಿಕೊಂಡ ವಿಜಯನಗರ ಶಿಲ್ಪಿಗಳು ‘ವಿಜಯನಗರಶೈಲಿ’ ಯೆಂದೇ ಕರೆಯಲಾದ ನವೀನವೂ ಖಚಿತವೂ ಆದ ಶೈಲಿಯ ಪ್ರವರ್ತಕರಾದರು. ಈ ಶೈಲಿಯಲ್ಲಿ ಕುಶಲಶಿಲ್ಪಿಗಳು ಶ್ರಮವಹಿಸಿ ಬಹು ಎಚ್ಚರದಿಂದ ರಚಿಸಿದ ಕಟ್ಟಡವೇ ಜಗತ್ಪ್ರಸಿದ್ಧ ವಿಠ್ಠಲನ ದೇವಾಲಯ. ಇದರಲ್ಲಿ ವಿಸ್ತಾರವಾದ ಆವರಣ, ಭವ್ಯಮಂಟಪಗಳು, ಸ್ತಂಭಗಳ ಕೆತ್ತನೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯ -ಇವು ವಿಜಯನಗರದ ಶೈಲಿಯ ಪ್ರಮುಖ ಲಕ್ಷಣಗಳಾಗಿ ಕಂಡುಬಂದಿವೆ. ವಿಜಯನಗರದ ವಾಸ್ತುಶೈಲಿಯ ಭವ್ಯತೆಯ ಪರಾಕಾಷ್ಠತೆಯು ಈ ದೇವಾಲಯದಲ್ಲಿ ಕಂಡುಬರುತ್ತದೆ. ೧೬೪ x ೯೪.೫ ಮೀ. ವಿಸ್ತಾರ ದೀರ್ಘ ಚತುರಸ್ರಾಕಾರದ ಆವರಣದಲ್ಲಿರುವ ಈ ದೇವಾಲಯವು ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಉತ್ತುಂಗವಾದ ದ್ವಾರಗೋಪುರಗಳನ್ನು ಹೊಂದಿದೆ. ವಿಠಲದೇವಾಲಯದ ಪ್ರಾಂಗಣದ ಮಧ್ಯೆ ಗರ್ಭಗೃಹ, ಪ್ರದಕ್ಷಿಣೆಪಥ, ಸುಕನಾಸಿ, ನವರಂಗ, ಮಹಾಮಂಪಟಗಳಲ್ಲದೆ, ಎಡಬದಿಯಲ್ಲಿ ಅಮ್ಮನವರ ಗುಡಿ, ಮುಂದೆ ಕಲ್ಲಿನರಥ (ಗರುಡಮಂಟಪ), ಅದರ ಅಕ್ಕದಲ್ಲಿ ಕಲ್ಯಾಣಮಂಟಪ, ಭಜನೆಮಂಟಪ, ಉತ್ಸವಮಂಟಪ, ನೂರು ಸ್ತಂಭಗಳ ಸಭಾಮಂಟಪವನ್ನು ಹೊಂದಿದೆ (ಛಾಯಾಚಿತ್ರ - ೬೪). ಈ ದೇವಾಲಯದಲ್ಲಿ ೧೨.೨ ಮೀ. ಎತ್ತರದ ದೀಪಸ್ತಂಭ ಇದ್ದಿತಾದರೂ ಅದು ಇಂದು ಮುರಿದು ತುಂಡಾಗಿದೆ. ಸಾಳುವರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯವು ಕೃಷ್ಣದೇವರಾಯನಿಂದ ಸದಾಶಿವರಾಯನ ಕಾಲದವರೆಗೂ ಈ ದೇವಾಲಯಕ್ಕೆ

ಮಂಟಪಗಳು ಹಾಗೂ ಉಳಿದ ಭಾಗಗಳನ್ನು ಸೇರಿಸುವ ಕಾರ್ಯ ನಡೆದೇ ಇದ್ದಿತು. ದೇವಾಲಯವು ಪೂರ್ವಕ್ಕೆ ಮುಖಮಾಡಿದ್ದು ಮುಂದಿನ ಭಾಗದಲ್ಲಿ ವಿಸ್ತಾರವಾದ ರಥಬೀದಿಯಿದೆ. ಇದರ ಅಕ್ಕಪಕ್ಕದಲ್ಲಿ ತೆರೆದಮಂಟಪಗಳ ಸಾಲುಗಳಿದ್ದು, ರಥಬೀದಿಯ ಎಡಬದಿಯಲ್ಲಿ ವಿಠ್ಠಲದೇವರ ತೆಪ್ಪೋತ್ಸವಕ್ಕೆಂದು ಕಟ್ಟಿಸಿದ ವಿಶಾಲವಾದ ಕೊಳವಿದೆ. ಈ ದೇವಾಲಯದ ರಥಬೀದಿಯು ಒಂದು ದೊಡ್ಡ ಬಜಾರು ಆಗಿತ್ತೆಂದು ಅಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಈ ದೇವಾಲಯದಲ್ಲಿ ಯಾವ ವಿಗ್ರಹವೂ ಇರಲಿಲ್ಲವೆಂದೂ ಪೂಜಾದಿಗಳು ನಡೆಯುತ್ತಿರಲಿಲ್ಲವೆಂದೂ ಪ್ರತೀತಿ ಇದೆ. ಆದರೆ ಇದು ಸತ್ಯಕ್ಕೆ ದೂರವಾದ ಊಹೆ. ಕ್ರಿ.ಶ. ೧೫೬೮ರ ವರೆಗೂ ಇಲ್ಲಿ ಪೂಜೆ ಹಾಗೂ ಉತ್ಸವಗಳು ನಡೆಯುತ್ತಿದ್ದವೆನ್ನಲು ಖಚಿತವಾದ ಶಾಸನಾಧಾರಗಳಿವೆ.[೬೬]

ವಿಠ್ಠಲದೇವಾಲಯವು ಐದು ಅಡಿ ಎತ್ತರದ ಬಹುಕೋನಗಳುಳ್ಳ ಜಗುಲಿಯ ಮೇಲೆ ನಿರ್ಮಾಣವಾಗಿದೆ. ಗರ್ಭಗೃಹವು ಪೂರ್ವಾಭಿಮುಖವಾಗಿದ್ದು ಇದಕ್ಕೆ ಹೊಂದಿದ ಮಂಟಪಗಳೆಲ್ಲ ಸೇರಿ ಹೆಚ್ಚು (೬.೭ ಮೀ. ಎತ್ತರ, ೭೦ ಮೀ. ಉದ್ದ) ಎತ್ತರವಲ್ಲದ ಉದ್ದನೆಯ ಒಂದು ಕಟ್ಟಡದ ಗುಂಪು ಎನಿಸಿಕೊಳ್ಳುತ್ತದೆ. ಮುಚ್ಚಿದ ಪ್ರದಕ್ಷಿಣಾಪಥ ಇದಕ್ಕೆ ಸಾಂಧಾರ ಪ್ರದಕ್ಷಿಣೆಪಥವೆಂತಲೂ ಕರೆಯುತ್ತಾರೆ. ಅಂತರಾಳ, ಮುಚ್ಚಿದ ಅರ್ಧಮಂಟಪ ಮತ್ತು ತೆರೆದ ಮಹಾಮಂಟಪಗಳು ಗರ್ಭಗೃಹಕ್ಕೆ ಹೊಂದಿಕೊಂಡಿವೆ (ನಕ್ಷೆ ೨೨). ಮಹಾಮಂಟಪದ ಪಕ್ಕದ ಗೋಡೆಗಳು ಸಮಪ್ರಮಾಣದ ಹಿಂಜರಿತಗಳಿಂದ ಕೂಡಿದ್ದು ಇದರ ಅತಿಯಾದ ಉದ್ದ ಅಗಲದ ಭಾಗ ೩೦.೫ ಮೀಟರ್ ಅಳತೆಯುಳ್ಳದ್ದಾಗಿದೆ. ಗರ್ಭಗುಡಿಯ ಒಳಗೆ ಕೇವಲ ಎರಡು ಪೀಠಗಳಿವೆ. ಈ ಗರ್ಭಗುಡಿಯು ಚೌಕಕಾರವಾಗಿದ್ದು ಇದರಲ್ಲಿರುವ ಪೀಠಗಳು ಇಂದು ಬಂಡೆಯ ಮೇಲಿವೆ. ಇವುಗಳ ಕೆಳಭಾಗದ ಹಾಸುಬಂಡೆಗಳಲ್ಲಿ ಸಣ್ಣ ಸಣ್ಣ ರಂಧ್ರಗಳನ್ನು ಕೊರೆಯಲಾಗಿದೆ. ಗರ್ಭಗುಡಿಯ ಭುವನೇಶ್ವರಿಯಲ್ಲಿ ಅರಳಿದ ಕಮಲವನ್ನು ಕೆತ್ತಲಾಗಿದ್ದು ಮಧ್ಯದಲ್ಲಿ ಮೊಗ್ಗನ್ನು ಕೆಳಮುಖವಾಗಿ ಇಳಿಬಿಡಲಾಗಿದೆ. ಇದರಲ್ಲಿರುವ ಪೀಠಗಳು ಎರಡು ಅಡಿ ಎತ್ತರವಾಗಿದ್ದು, ಈ ಗರ್ಭಗೃಹದ ಬಾಗಿಲಿನ ಒಳಗಡೆ ಕದಗಳನ್ನು ಮುಚ್ಚಲು ಮೇಲುಗಡೆಯ ಕಲ್ಲಿನಲ್ಲಿ ರಂಧ್ರಗಳನ್ನು ಕೊರೆದಿದ್ದಾರೆ. ದ್ವಾರಬಾಗಿಲಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳು ಇಂದು ನಾಶವಾಗಿವೆ. ದ್ವಾರಬಾಗಿಲಿನ ತೋಳಿನಲ್ಲಿ ಬಳ್ಳಿಗಳನ್ನು ಸಣ್ಣ ಪ್ರಮಾಣದ ಕೆತ್ತನೆಯ ವಿನ್ಯಾಸದಲ್ಲಿ ಚಿತ್ರಿಸಿರುವರು. ಇಂದು ಲಲಾಟಬಿಂಬವು ಮುರಿದುಬಿದ್ದುಹೋಗಿರುವುದರಿಂದ ಅದರಲ್ಲಿ ಯಾವ ಶಿಲ್ಪವಿದ್ದಿತ್ತೆಂಬುದು ತಿಳಿದುಬರುವುದಿಲ್ಲ.

ಗರ್ಭಗೃಹದ ಮುಂದೆ ಸುಕನಾಸಿಯಿದ್ದು ಅದರಲ್ಲಿ ಅರ್ಧಕಂಬಗಳನ್ನು ನಿಲ್ಲಿಸಲಾಗಿದೆ. ಇದರ ದ್ವಾರದ ಬದಿಗಳಲ್ಲಿ ಜಯವಿಜಯ ದ್ವಾರಪಾಲಕರ ಮೂರ್ತಿಗಳನ್ನು ಕೆತ್ತಲಾಗಿದೆ. ಮುಂದೆ ತೆರೆದ ಮಂಟಪವಿದೆ. ಇದರ ಎರಡು ಬದಿಗಳಲ್ಲಿ ಎರಡು ಚಿಕ್ಕ ದ್ವಾರಗಳನ್ನು ನಿರ್ಮಿಸಿರುವರು. ಅವುಗಳ ಮೂಲಕ ಆರು ಮೆಟ್ಟಿಲುಗಳನ್ನು ಇಳಿದು ಒಳ ನಡೆದರೆ ತಗ್ಗಿನಲ್ಲಿ ಪ್ರದಕ್ಷಿಣೆ ಪಥವನ್ನು ಗರ್ಭಗುಡಿಯ ಸುತ್ತ ನಿರ್ಮಿಸಲಾಗಿದೆ. ಈ ಪ್ರದಕ್ಷಿಣೆಪಥವು ಸಾಂಧಾರ ರೀತಿಯದ್ದಾಗಿದೆ. ಪ್ರದಕ್ಷಿಣೆಪಥದ ಸುತ್ತಲೂ ಗೋಡೆಯನ್ನು ನಿರ್ಮಿಸಿ ಇದರಲ್ಲಿ ಅರ್ಧಕಂಬಗಳು ಮಾತ್ರ ಕಂಡುಬರುತ್ತವೆ. ಈ ಸ್ತಂಭಗಳ ಮೇಲೆ ಸಾಧಾರಣರೀತಿಯ ಬೋದಿಗೆಗಳಿವೆ. ಗರ್ಭಗುಡಿಯ ಮತ್ತು ಅದರ ಸುತ್ತಲಿನ ಗೋಡೆಯ ಮಧ್ಯದಲ್ಲಿ ಸಾಧಾರಣ ರೀತಿಯ ಹನ್ನೆರಡು ಕಂಬಗಳನ್ನು ನಿಲ್ಲಿಸಿರುವರು. ಅವುಗಳ

ಮೇಲೆ ಸರಳ ರೀತಿಯ ಬೋದಿಗೆಗಳಿವೆ. ಈ ಪ್ರದಕ್ಷಿಣೆಪಥದಲ್ಲಿ ಒಳಗಡೆ ಬೆಳಕು ಮತ್ತು ಗಾಳಿಬರಲು ಜಾಲಾಂಧ್ರಗಳನ್ನು ಅಲ್ಲಲ್ಲಿ ಅಳವಡಿಸಲಾಗಿದೆ. ಈ ಎಲ್ಲಾ ಕಂಬಗಳ ಕೆಳಭಾಗದಲ್ಲಿ ಪೀಠವನ್ನು ಜೋಡಿಸಲಾಗಿದೆ. ಗರ್ಭಗುಡಿಯ ಸುತ್ತಲೂ ಹೊರಮೈ ಕೆಳಗೆ ಅಧಿಷ್ಠಾನವಿದ್ದು, ಅದರ ಸುತ್ತಲೂ ನೀರಿನ ಹೊರಹರಿವುಗಾಗಿ ವ್ಯವಸ್ಥೆ ಮಾಡಲಾಗಿದೆ. ಈ ಅಧಿಷ್ಠಾನದಲ್ಲಿ ಅರ್ಧಕಂಬ, ಕಪೋತ, ಗಳ, ಕಂಪ, ಉಪಾನ, ನಾಸಿಗಳನ್ನು ಕೆತ್ತಲಾಗಿದೆ. ಗರ್ಭಗುಡಿಯ ಭಿತ್ತಿಯಲ್ಲಿ ಕೋಷ್ಠಕ ಮತ್ತು ಅರಳಿದ ಕುಂಭ ಪಂಜರಗಳಿವೆ. ಅರ್ಧಕಂಬಗಳ ಮೇಲೆ ಫಲಕವನ್ನು ಇಡಲಾಗಿದ್ದು, ಕೆಳಗೆ ಸಣ್ಣ ಉಬ್ಬುಶಿಲ್ಪಗಳಿವೆ. ಗರ್ಭಗುಡಿಯ ಅಭಿಷೇಕದ ನೀರು ಹೊರಗೆ ಹೋಗಲು ಎಡಭಾಗದಲ್ಲಿ ಸಿಂಹ ವಕ್ತ್ರಪ್ರಣಾಳವನ್ನು ಅಳವಡಿಸಲಾಗಿದೆ. ಗರ್ಭಗುಡಿಯ ಸುತ್ತಲಿರುವ ಗೋಡೆಯ ಒಳಭಾಗದಲ್ಲಿ ಎತ್ತರದ ಕೋಷ್ಠಕಗಳನ್ನು ನಿರ್ಮಿಸಿ, ಪ್ರದಕ್ಷಿಣೆ ಪಥದ ಸೋಪಾನಗಳ ಪಕ್ಕದಲ್ಲಿ ಹಸ್ತಿಹಸ್ತವನ್ನು ಜೋಡಿಸಲಾಗಿದೆ.

ಅರ್ಧಮಂಟಪದ ಮುಂದೆ ಮೂರು ಸೋಪಾನಗಳಿವೆ. ಇವುಗಳ ಮುಂಭಾಗದಲ್ಲಿ ನವರಂಗವಿದ್ದು ಇದರಲ್ಲಿ ಹದಿನಾರು ಸ್ತಂಭಗಳನ್ನು ನಿಲ್ಲಿಸಿರುವರು (ಛಾಯಾಚಿತ್ರ - ೬೫). ಇವು ಚಚೌಕವಾಗಿದ್ದು ಮೂರುಹಂತಗಳಲ್ಲಿವೆ. ಈ ಸ್ತಂಭಗಳು ಚಿತ್ರಕಾಂಡ ಸ್ತಂಭಗಳಾಗಿದ್ದು ಎರಡೂ ಕಡೆ ದೊಡ್ಡದಾದ ಪೀಠಗಳಿವೆ. ಇವುಗಳಲ್ಲಿ ದ್ವಾರಪಾಲಕನಾದ ಜಯನ ಆರು ಅಡಿ ಎತ್ತರದ ದೊಡ್ಡ ಮೂರ್ತಿಶಿಲ್ಪವನ್ನು ನಿಲ್ಲಿಸಲಾಗಿದೆ (ಛಾಯಾಚಿತ್ರ - ೬೬). ಇನ್ನೊಬ್ಬ ದ್ವಾರಪಾಲಕನಾದ ವಿಜಯನ ಮೂರ್ತಿಯು ಹಾಳಾಗಿದೆ. ರಂಗಮಂಟಪದಲ್ಲಿ ಒಟ್ಟು ನಾಲ್ಕು ನಾಲ್ಕರಂತೆ ನಾಲ್ಕು ಸಾಲು ಸ್ತಂಭಗಳಿವೆ. ರಂಗಮಂಟಪದ ಮಧ್ಯದಲ್ಲಿ ನಾಲ್ಕು ಸ್ತಂಭಗಳು ರಂಗಸ್ಥಳದ ನಾಲ್ಕು ದಿಕ್ಕಿನಲ್ಲಿವೆ. ಈ ಎಲ್ಲಾ ಸ್ತಂಭಗಳು ಚಚ್ಚೌಕವಾಗಿದ್ದು ನಾಲ್ಕು ಭಾಗಕ್ಕೂ ಮೂರು ಮೂರರಂತೆ ಭಾಗಮಾಡಿರುವುದರಿಂದ ಮೂರು ಮಧ್ಯಪಟ್ಟಿಗಳನ್ನು ಎರಡು ಚತುರಸ್ರಗಳು ಬೇರ್ಪಡಿಸಿವೆ. ಇವುಗಳಲ್ಲಿ ೮ x ೧೬ x ೮ x ೧೬ ಮುಖದ ಚತುರಸ್ರವಿದೆ. ಈ ಸ್ತಂಭಗಳ ಮಧ್ಯಪಟ್ಟಿಗಳಲ್ಲಿ ರಾಮಾಯಣ ಭಾಗವತಶಿಲ್ಪಗಳನ್ನು ಕೊರೆದಿದ್ದಾರೆ. ಈ ಸ್ತಂಭಗಳನ್ನು ಪೀಠಗಳ ಮೇಲೆ ನಿಲ್ಲಿಸಿರುವರು. ರಂಗಮಂಟಪದ ಮೇಲ್ಛಾವಣಿಯನ್ನು ಜೀರ್ಣೋದ್ಧಾರ ಮಾಡಲಾಗಿದ್ದು, ಇಂದು ಸ್ತಂಭಗಳ ಮೇಲಿರುವ ಬೋದಿಗೆಗಳು ಸರಳವಾಗಿವೆ. ಈ ಸ್ತಂಭಗಳಲ್ಲಿ ಗೋವರ್ಧನ ಗಿರಿಧಾರಿ, ನರಸಿಂಹವಧೆ, ಸ್ತ್ರೀಶಿಲ್ಪ, ವಾದ್ಯಗಾರರು, ನೃತ್ಯಗಾರ್ತಿಯರು, ಗಜ, ಸಿಂಹದೊಂದಿಗೆ ಕಾದಾಡುವ ವ್ಯಕ್ತಿ, ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ಶಿಲ್ಪಗಳು, ಹನುಮಂತನು ರಾಮನಿಗೆ ಸೀತೆಯ ಚೂಡಾಮಣಿಕೊಡುವ ಚಿತ್ರ, ನಾಟ್ಯಗಣಪತಿ ಇತ್ಯಾದಿ ಉಬ್ಬುಶಿಲ್ಪಗಳಿವೆ. ಈ ನವರಂಗಕ್ಕೆ ಮೂರುದ್ವಾರ ಬಾಗಿಲಿದ್ದು ಪ್ರಧಾನದ್ವಾರವು ಪೂರ್ವಕ್ಕಿದೆ. ಉತ್ತರ ಮತ್ತು ದಕ್ಷಿಣದ ದ್ವಾರಬಾಗಿಲ ಮುಂದೆ ಎರಡು ಸ್ತಂಭಗಳಿಂದ ಕೂಡಿದ ಪಾರ್ಶ್ವ ಮಂಟಪವಿದೆ. ಈ ಭಾಗವು ದೇವಾಲಯ ಗೋಡೆಯಿಂದ ಹೊರಚಾಚಿದೆ. ಈ ಸ್ತಂಭಗಳು ಕೂಡ ಚಿತ್ರಕಾಂಡ ಸ್ತಂಭಗಳಾಗಿವೆ. ಇದರ ಮುಂದೆ ಸೋಪಾನಗಳಿದ್ದು ಸಿಂಹಾವ್ಯಾಳಿಯನ್ನು ಬದಿಯಲ್ಲಿ ಜೋಡಿಸಿರುವರು (ಛಾಯಾಚಿತ್ರ - ೬೭). ಈ ನವರಂಗದ ದಕ್ಷಿಣ ದ್ವಾರದ ಗೋಡೆಯಲ್ಲಿ ಕೃಷ್ಣದೇವರಾಯನ ಕಾಲವಿರುವ ಶಾಸನಗಳಿವೆ.

ರಂಗಮಂಟಪದ ಮುಂದಿನ ಮಂಟಪವು ಡೋಲೋತ್ಸವ ಮಂಟಪವಾಗಿದೆ. ಇದನ್ನು ಮಹಾಮಂಟಪವೆಂದು ಕರೆಯುವರು (ಛಾಯಾಚಿತ್ರ - ೬೮). ಈ ಮಂಟಪದ ಕೆತ್ತನೆ ಕೆಲಸವು ಅಸದಳ, ಅನಾದೃಶ್ಯವಾಗಿ ಮೂಡಿಬಂದಿದೆ. ಇಲ್ಲಿ ವಿಜಯನಗರದ ಶಿಲ್ಪಿಗಳ ಅತ್ಯಂತ ನಾಜೂಕಾದ ಮತ್ತು ನವಿರಾದ ಶಿಲ್ಪಕಲಾ ಕೌಶಲ್ಯವನ್ನು ಕಾಣಬಹುದು. ಈ ಮಂಟಪದ ಸ್ತಂಭಗಳು ಶ್ರೀಮಂತ ಸೌಂದರ್ಯಕ್ಕೆ ಕಾರಣವಾಗಿವೆ. ಮಹಾಮಂಟಪದಲ್ಲಿ ಒಟ್ಟು ೫೬ ಸ್ತಂಭಗಳಿದ್ದು ಅವುಗಳಲ್ಲಿ ೪೦ ಸ್ತಂಭಗಳು ಸಮಾನಾಂತರವಾಗಿ ಮಂಟಪವನ್ನು ಹಜಾರಗಳಾಗಿ ವಿಂಗಡಿಸಲಾಗಿದೆ. ಉಳಿದ ೧೬ ಸ್ತಂಭಗಳು ಮಧ್ಯದ ಅಂಕಣದಲ್ಲಿವೆ. ಈ ೪೦ ಸ್ತಂಭಗಳನ್ನು ಮಂಟಪದ ನಾಲ್ಕು ಬದಿಗಳಲ್ಲಿ ಹೊರ ಮುಖಮಾಡಿ ನಿಲ್ಲಿಸಿರುವರು. ಒಂದೊಂದು ಸ್ತಂಭಗಳು ಬೃಹದ್ಗಾತ್ರವಾಗಿದ್ದು ಕ್ರಿಯಾಪ್ರಧಾನ ಶಿಲ್ಪವಿನ್ಯಾಸದ ಉತ್ಕೃಷ್ಟ ಮಾದರಿಗಳಾಗಿವೆ. ಏಕಶಿಲೆಯ ಈ ಸ್ತಂಭಗಳಲ್ಲಿ ಶಿಲೆಯಕಾಂಡ ಮಧ್ಯದಲ್ಲಿ ಆಸರೆಯಾಗಿದ್ದು ಸುತ್ತಲೂ ವಿಗ್ರಹಗಳನ್ನು ಒಂದೊಕ್ಕೊಂದು ಸೇರಿಸಿ ಕೆತ್ತಲಾಗಿದೆ. ಇನ್ನೊಂದು ಸ್ತಂಭವಿನ್ಯಾಸದಲ್ಲಿ ಮಧ್ಯಕಾಂಡ ಸುತ್ತಲೂ ತೆಳುವಾದ ಮೂಲೆಗಂಭಗಳಂತಿರುವ ಸ್ತಂಭಗಳು ಸುತ್ತುವರಿದಿವೆ. ಇವುಗಳನ್ನು 'ಉಪಪಾದ'ಗಳೆಂದು ಕರೆಯಬಹುದು (ಛಾಯಾಚಿತ್ರ - ೬೯). ಈ ಸಣ್ಣ ಸಣ್ಣ ಸ್ತಂಭಗಳನ್ನು ಬಿಡಿ ಬಿಡಿಯಾಗಿ ಕೊರೆದು ನಿರ್ಮಿಸಿ, ಅವುಗಳಲ್ಲಿ ಸಪ್ತಸ್ವರಗಳು ಹೊಮ್ಮಿಬರುವಂತೆ ಅಳವಡಿಸಿರುವುದು ಅತ್ಯಂತ ಅಭೂತಪೂರ್ವವಾದ ಅಂಶವೆಂದು ಲಾಂಗ್ ಹರ್ಸ್ಟ್‌ರವರು ಉದ್ಗರಿಸಿದ್ದಾರೆ. ಈ ಸ್ತಂಭಗಳ ಅದ್ಭುತ ಕಲ್ಪನೆಯೇ ವಿಜಯನಗರದ ಶೈಲಿಯ ವಿಶಿಷ್ಟ ಅಂಶಗಳಲ್ಲೆಲ್ಲಾ ಪ್ರಧಾನವಾದುದೆಂದರೆ ತಪ್ಪಾಗಲಾರದು. ಈ ಸ್ತಂಭಗಳನ್ನು ಮಾನಸಾರ ಗ್ರಂಥವು 'ಸಂಯೋಗ ಸ್ತಂಭ' ಎಂದು ಕರೆದಿದೆ.[೮೮]

ಈ ಮಹಾಮಂಟಪವನ್ನು ಬಹುಕೋನಗಳ ಮೇಲುಪಾಯದ ಮೇಲೆ ನಿರ್ಮಿಸಿ ಅದರ ಮೇಲ್ಭಾಗದಲ್ಲಿ ಸಂಯುಕ್ತಸ್ತಂಭಗಳನ್ನು ಬಹುಸೂಕ್ಷ್ಮವಾಗಿ ಏಕಶಿಲೆಯಲ್ಲಿ ಕೊರೆದು ನಿಲ್ಲಿಸಿದ್ದಾರೆ. ಅಡಿಪಾಯದ ಅಡ್ಡಪಟ್ಟಿಗಳ ಮೇಲೂ ಕೆತ್ತನೆ ಮಾಡಿ ಮಧ್ಯೆ ಮಧ್ಯೆ ಇರುವ ಗೂಡುಗಳಲ್ಲಿ 'ಭದ್ರಮಂಟಪ'ಗಳ ರೀತಿಯಲ್ಲಿ ದೇವಾನುದೇವತೆಗಳ ಸಣ್ಣ ಉಬ್ಬು ಚಿತ್ರಗಳನ್ನು ಕೊರೆದಿದ್ದಾರೆ. ಮಂಟಪದ ಅಧಿಷ್ಠಾನದ ಮೇಲೆ ಕೆತ್ತಿರುವ ಕುದುರೆಗಳು, ಸೈನಿಕರು ಮತ್ತು ಹಂಸಗಳ ಸಾಲು ಚಿತ್ರಗಳು ಬಹಳ ಚಮತ್ಕಾರದಿಂದ ಕೂಡಿವೆ. ಈ ಅಧಿಷ್ಠಾನದ ಪಟ್ಟಿಗಳಲ್ಲಿ ಉಪಾನ, ಜಗತಿ, ಕಂಪ ಇದರಲ್ಲಿ ಹಂಸಗಳ ಸಾಲುಗಳಿವೆ. ಮಹಾಪದ್ಮ, ಪದ್ಮ, ಕಂಪ, ಊರ್ಧ್ವಪದ್ಮ, ಬಳೆಯಕಾರದ ಕುಮುದ, ಗಳ ಇದರಲ್ಲಿ ಗಳಪಟ್ಟಿಕಾಗಳಿವೆ. ಈ ಪಟ್ಟಿಕಾಗಳಲ್ಲಿ ನೃತ್ಯಗಾರ್ತಿಯರು, ಸೈನಿಕರ ಉಬ್ಬುಶಿಲ್ಪಗಳನ್ನು ರಚಿಸಿರುವರು. ಇದರ ಮೇಲೆ ಕಪೋತವಿದ್ದು ಇದರಲ್ಲಿ ನಾಸಿಗಳನ್ನು ಕೊರೆದಿದ್ದಾರೆ (ಛಾಯಾಚಿತ್ರ - ೭೦). ಇವುಗಳನ್ನು ಕಪೋತನಾಸಿ ಎಂತಲೂ ಕರೆಯಬಹುದು. ಈ ಮಂಟಪದ ದಕ್ಷಿಣ ಭಾಗದ ಸ್ತಂಭಗಳಲ್ಲಿ ಯಾಳಿಯ ಶಿಲ್ಪಗಳನ್ನು ಮತ್ತು ಉತ್ತರ ಭಾಗದ ಸ್ತಂಭಗಳಲ್ಲಿ ವಿಷ್ಣುವಿನ ಅವತಾರದ ಶಿಲ್ಪಗಳನ್ನು ಕಾಣಬಹುದು. ಇವುಗಳಲ್ಲಿ ಬೆಣ್ಣೆಕೃಷ್ಣ, ಉದ್ಭವನರಸಿಂಹ, ಉಗ್ರನರಸಿಂಹ, ನಾಟ್ಯನರಸಿಂಹ, ತ್ರಿವಿಕ್ರಮ, ಲಕ್ಷ್ಮೀನರಸಿಂಹ, ಪ್ರಸನ್ನನರಸಿಂಹ ಮೂರ್ತಿಗಳನ್ನು ಒಂದೊಂದು ಸ್ತಂಭಗಳಲ್ಲಿ ಒಂದೊಂದರಂತೆ ರಚಿಸಿದ್ದಾರೆ (ಛಾಯಾಚಿತ್ರ - ೭೧). ಅದೇ ರೀತಿ ಮಂಟಪದ ಮಧ್ಯ ಅಂಕಣದ ಮುಂದಿನ ಭಾಗದ ಆರುಸ್ತಂಭಗಳಲ್ಲಿ ಮೃದಂಗ, ತಾಳ, ನೃತ್ಯ, ವಾದ್ಯ, ಡಮರುಗ,

ಡೋಲು ಹಿಡಿದ ಶಿಲ್ಪಗಳನ್ನು ಮುಂಚಾಚಿದ ಪಾದ ಭಾಗದಲ್ಲಿ ಕೊರೆದಿದ್ದಾರೆ (ಛಾಯಾಚಿತ್ರ - ೭೨). ಈ ಮಂಟಪದ ಮೇಲ್ಛಾವಣಿಯು ಹಾಳಾಗಿದ್ದು, ಕಮಲಗಳ ಚಿತ್ರಗಳಿಂದ ಕೂಡಿದ ಛಾವಣಿಯ ಬಂಡೆಗಳು ಕೆಳಗಡೆ ಬಿದ್ದಿವೆ. ಈ ಹಜಾರವು ವಿಶೇಷ ದಿನಗಳ ಸಂದರ್ಭದಲ್ಲಿ ನರ್ತಕಿಯರು ನಾಟ್ಯವಾಡುವ ಅಂಕಣವಾಗಿ ಮಾರ್ಪಡುತ್ತಿದ್ದಿತು.

ಮಂಟಪದ ಮಧ್ಯಭಾಗದಲ್ಲಿ ಒಂದರ ಮೇಲೊಂದರಂತೆ ಎರಡೆರಡು ಮತ್ತು ಮೂರರಂತೆ ಬೋದಿಗೆ, ಪಟ್ಟಿಕೆ, ಉದ್ದವಾದ ಕಲ್ಲಿನ ಹಲಗೆಗಳಿವೆ. ಇವುಗಳ ಮಧ್ಯಕ್ಕಿರುವ ಹೂಕಲ್ಲಿನ ಗುಂಡು ಇವೆಲ್ಲವುಗಳ ಮೇಲೂ ಕಲಾಕುಸುರಿನ ಕೆಲಸ ರಾಮಾಯಣ, ಭಾಗವತಗಳಷ್ಟೇ ಅಲ್ಲದೆ, ಅಲ್ಲಲ್ಲಿ ಪುರಂದರ ದಾಸರ ಕೃತಿ ಸಹ ಚಿತ್ರಿತಗೊಂಡಿದೆ. ಉತ್ತರ ಹಾಗೂ ದಕ್ಷಿಣದ ಮಂಟಪಗಳು ಭದ್ರವಾಗಿ ನಿಂತುಕೊಂಡಿವೆ. ಈ ಮಂಟಪದಲ್ಲಿನ ಸ್ತಂಭಗಳ ಮೇಲೆ ಎತ್ತರದ ಬೋದಿಗೆಗಳನ್ನಿಟ್ಟು ಅದರ ಮೇಲೆ ಮೇಲ್ಛಾವಣಿಗೆ ಉದ್ದವಾದ ಕಲ್ಲಿನ ಬಂಡೆಗಳನ್ನು ಜೋಡಿಸಿದ್ದಾರೆ. ಮಧ್ಯಮಂಟಪದ ಛಾವಣಿಯ ಕಲ್ಲಿನ ಬಂಡೆಯು ೧೨ ಮೀ. ಉದ್ದ ೭೫ ಸೆಂ.ಮೀ. ಅಗಲ. ೧೨ ಸೆಂ.ಮೀ. ಎತ್ತರವಿದ್ದು ಇದು ಸುಮಾರು ಏಳು ಟನ್ ತೂಗಬಹುದು. ಉತ್ತರ ಹಾಗೂ ದಕ್ಷಿಣದ ಮಂಟಪಗಳ ಮಧ್ಯೆಛಾವಣಿಯಲ್ಲಿ ಸುಂದರವಾದ ಗೋಲಾಕಾರದಲ್ಲಿ ಕೊರೆದ ಹೂಕಲ್ಲು ಬಂಡೆಗಳಿವೆ. ಈ ಕಲ್ಲಿನ ಸುತ್ತಲೂ ಜೋಡು ಬೋದಿಗೆ ಜೋಡಿಸಿರುವುದು ಕಂಡುಬರುತ್ತದೆ.

ಈ ಮಹಾಮಂಟಪಕ್ಕೆ ಮೂರು ಸೋಪಾನಗಳಿದ್ದು ಪ್ರಧಾನ ಸೋಪಾನವು ಪೂರ್ವದಿಕ್ಕಿಗಿದೆ. ಇವುಗಳ ಅಕ್ಕಪಕ್ಕದಲ್ಲಿ ಕೆತ್ತಿರುವ ಆನೆ, ಸಿಂಹ ವ್ಯಾಳಿಗಳಿವೆ (ಛಾಯಾಚಿತ್ರ - ೭೩). ಮಂಟಪದ ಪ್ರಸ್ತಾರದಲ್ಲಿ ಎಸ್ (S) ಆಕಾರದ ಮಂಜೂರಿದ್ದು ಇದರಲ್ಲಿ ಹೆಚ್ಚು ಅಲಂಕರಣೆಯನ್ನು ಮಾಡಲಾಗಿದೆ. ಕಾರ್ನೀಸಿನಿಂದ ಜೋಲುತ್ತಾ ಉದ್ದಕ್ಕೆ ಹರಿದಿರುವ ಮತ್ತು ಕಲ್ಲಿನ ಸಲಾಕೆಗಳಿಂದ ಒಟ್ಟಿಗೆ ಹಿಡಿದಿಡಲ್ಪಟ್ಟಿರುವ ಕಮಲದ - ಎಲೆಗಳು, ಕಮಲ, ಕಮಲನಾಳಗಳನ್ನು ಕಚ್ಚಿ ಹಾರುತ್ತಿರುವಂತಹ ಹಂಸಗಳನ್ನು ಕೆತ್ತಿರುವ ಕಾರ್ನೀಸು, ಅನೇಕ ಜಟಿಲ ವಿನ್ಯಾಸಗಳಲ್ಲಿ ಕಾಣಿಸಿಕೊಳ್ಳುವ ಕಲ್ಪಲತೆಗಳು, ಬಹು ಸುಂದರವಾಗಿ ಕೋರೆದಿರುವ ಯೋಗಾಸನಗಳ ಅಕ್ಕಪಕ್ಕಗಳಲ್ಲಿ ಅಲ್ಲಲ್ಲಿ ಕೆತ್ತಿರುವ ಕೊಕ್ಕರೆ ಮುಂತಾದ ನೀರು ಹಕ್ಕಿಗಳು, ಭವಿಷ್ಯ-ಜಾತಕಗಳು, ತುದಿಯಲ್ಲಿ ಎದ್ದು ಕಾಣುವಂತೆ ಅಲ್ಲಲ್ಲಿ ಗೋಚರವಾಗುವ ಸಣ್ಣ ಗೋಪುರಗಳು ವಿಜಯನಗರದ ಶೈಲಿಯ ಲಕ್ಷಣಗಳನ್ನು ಬಿಂಬಿಸುತ್ತವೆ.

ಗರ್ಭಗುಡಿಯು ಎತ್ತರದ ಅಧಿಷ್ಠಾನವನ್ನು ಹೊಂದಿದ್ದು ಭಿತ್ತಿಯಲ್ಲಿ ಕೋಷ್ಠ, ಕುಂಭಲತಾ ಮತ್ತು ಅರ್ಧ ಕಂಬಗಳಿವೆ. ಅದೇ ರೀತಿ ಅಧಿಷ್ಠಾನದ ಭಾಗಗಳು ಭಿತ್ತಿಯಲ್ಲಿಯೂ ಮುಂದುವರೆದಿವೆ. ಈ ಕೋಷ್ಠಕಗಳ ಮೇಲೆ ಶಾಲಾ ರಚಿಸಿರುವರು. ಪ್ರಸ್ತರದಲ್ಲಿ ಕಪೋತವಿದ್ದು ನಾಸಿಗಳಿಂದ ಅಲಂಕೃತಗೊಂಡಿದೆ. ಗರ್ಭಗೃಹದ ಮೇಲೆ ತ್ರಿತಲ ವಿಮಾನವಿದೆ (ಛಾಯಾಚಿತ್ರ - ೭೪). ಹೊರಗೋಡೆಗಳ ಅಲಂಕಾರಿಕ ದೇವಕೋಷ್ಠಕಗಳಲ್ಲಿ ಒಳಗೆ ಗಾರೆಯ ಶಿಲ್ಪಗಳನ್ನು ರಚಿಸಿರುವರು. ತಲಗಳ ಕೊನೆಯ ಭಾಗದ ನಾಲ್ಕು ಮೂಲೆಗಳಲ್ಲಿ ಕರ್ಣಕೂಟಗಳಿವೆ. ಗ್ರೀವದಲ್ಲಿ ಹೆಚ್ಚು ಅಲಂಕರಣೆ ಇದ್ದು, ಮೇಲೆ ಸ್ತೂಪಿ ದುಂಡಾಕಾರವಾಗಿದೆ. ಸ್ತೂಪಿಯ ಮೇಲಿನ ಕಳಸವು ಬಿದ್ದುಹೋಗಿದ್ದು ಇಂದು ವಿಮಾನವು ಜೀರ್ಣಸ್ಥಿತಿಯಲ್ಲಿದೆ.

ಕಲ್ಲಿನ ರಥ

ದೇವಾಲಯದ ಮುಂಭಾಗದಲ್ಲಿ ಗರುಡನಿಗಾಗಿ ನಿರ್ಮಿಸಿದ ಕಲ್ಲಿನ ರಥವಿದೆ. ಸಾಮಾನ್ಯವಾಗಿ ವೈಷ್ಣವ ದೇವಾಲಯಗಳ ಮುಂದೆ ಗರುಡನಿಗೆಂದು ಒಂದು ಸಣ್ಣ ಗುಡಿಯನ್ನು ನಿರ್ಮಿಸಿರುತ್ತಾರೆ. ಆದರೆ ಇಲ್ಲಿ ಈ ರಥವೇ ಗರುಡನ ಗುಡಿಯಾಗಿ ಪರಿಣಮಿಸಿದೆ (ಛಾಯಾಚಿತ್ರ - ೭೫). ಏಕಶಿಲೆಯಲ್ಲಿ ಕೊರೆದು ನಿರ್ಮಿಸಿರುವ ೨೬ ಅಡಿ ಎತ್ತರದ ಕಲ್ಲಿನ ರಥವಾಗಿದೆ. ಶಿಲೆಯಲ್ಲಿ ರಥ ಪ್ರತಿಕೃತಿಯನ್ನು ಅತ್ಯಂತ ಸೂಕ್ಷ್ಮ ಕೆತ್ತನೆಗಳಿಂದ ಶಿಲ್ಪಿ ಖಂಡರಿಸಿದ್ದಾನೆ. ಇದೊಂದು ಸಂಕೀರ್ಣ, ಸ್ವಾರಸ್ಯಕರ ಶಿಲ್ಪಕಲೆಯಾಗಿದೆ. ರಥದ ಒಳಗಡೆ ಗರ್ಭಗೃಹದಲ್ಲಿ ಗರುಡ ವಿಗ್ರಹವಿದೆ. ದೇವಾಲಯಗಳ ಉತ್ಸವ ಸಂದರ್ಭಗಳಲ್ಲಿ ಹೊರಡಿಸುವ ಮರದ ರಥಗಳನ್ನು ಇದು ಹೋಲುತ್ತದೆ. ರಥದ ಮೇಲೆ ವಿಮಾನವು ಇದ್ದು ಅದು ಇಂದು ಹಾಳಾಗಿದೆ. ಬಹುಮಟ್ಟಿಗೆ ಈ ರಥದ ನಿರ್ಮಾಣಕ್ಕೆ ಸ್ಫೂರ್ತಿ ಕೊನಾರ್ಕದ ಸೂರ್ಯ ರಥವಾಗಿರಬೇಕು. ಕಳಿಂಗ ದಿಗ್ವಿಜಯದ ಸಂದರ್ಭದಲ್ಲಿ ಕಂಡ ದೇವಾಲಯದ ರಥವನ್ನು ಸಣ್ಣ ಪ್ರಮಾಣದಲ್ಲಿ ಇಲ್ಲಿ ನಿರ್ಮಿಸಿರಬೇಕು. ಈ ರಥಕ್ಕೆ ಕಲ್ಲಿನ ಚಕ್ರಗಳಿದ್ದು ಅವುಗಳನ್ನು ಮೊದಲಿಗೆ ತಿರುಗಿಸಬಹುದಾಗಿದ್ದಿತು. ಆದರೆ ಇಂದು ತಿರುಗಿಸಲು ಸಾಧ್ಯವಾಗದಂತೆ ಸಿಮೆಂಟಿನಿಂದ ಭದ್ರಗೊಳಿಸಿದ್ದಾರೆ. ರಥವನ್ನು ಗಜಗಳೆರಡು ಎಳೆಯುತ್ತಿರುವಂತೆ ಕೆತ್ತಿರುವರು. ಕಲ್ಲಿನ ಇರಚಿಯ ತುದಿಯಲ್ಲಿ ತಿರುಗುವ ಕಮಲದ ಆಕಾರದಲ್ಲಿ ಕೆತ್ತಲಾಗಿರುವ ಚಿತ್ರಗಳು ಕಲ್ಪನೆಗೂ ಮೀರಿವೆ. ಕಲಾ ವಿಮರ್ಶಕರಾದ ಪರ್ಸಿಬ್ರೌನ್‌ರವರು "ಇದು ಜಗತ್ತಿನ ಆಶ್ಚರ್ಯಗಳಲ್ಲಿ ಒಂದೆಂದು ಪರಿಗಣಿಸಿದ್ದಾರೆ." ರಥಕ್ಕೆ ಏರಲು ಕಲ್ಲಿನ ಏಣಿಯನ್ನು ಜೋಡಿಸಲಾಗಿದೆ. ನಾಲ್ಕು ಕಲ್ಲಿನ ಚಕ್ರಗಳ ಮೇಲೆ ರಥವು ನಿಂತಿದೆ. ಈ ರಥದ ಮೇಲೆ ವಿಷ್ಣುವಿನ ಲೀಲೆ, ಕೃಷ್ಣಾವತಾರದ ಚಿತ್ರಗಳಿವೆ. ಸುಂದರವಾದ ಎಲೆ ಹೂಬಳ್ಳಿಗಳ ಚಿತ್ರಗಳಿದ್ದು ಇವುಗಳಿಗೆ ಅಂದಿನ ವೈಭವದ ಕಾಲಕ್ಕೆ ಬಣ್ಣ ಕೊಡಲಾಗಿತ್ತು. ಇಂದಿಗೂ ಅಲ್ಲಲ್ಲಿ ಈ ಬಣ್ಣ ಕಂಡುಬರುತ್ತದೆ. ರಥದ ಹಿಂಭಾಗದಲ್ಲಿ ದೀಪ ಸ್ತಂಭ, ಧ್ವಜ ಸ್ತಂಭ, ಬಲಿಪೀಠ, ತುಳಸಿಕಟ್ಟೆಯನ್ನು ಕಲ್ಲಿನಿಂದ ನಿರ್ಮಿಸಿದ್ದು, ಇಂದು ಪೀಠಗಳು ಮಾತ್ರ ಉಳಿದು ಬಂದಿವೆ.

ಅಮ್ಮನವರ ದೇವಾಲಯ

ವಿಠಲ ದೇವಾಲಯದ ವಾಯುವ್ಯ ದಿಕ್ಕಿನಲ್ಲಿ ಶ್ರೀದೇವಿ-ಭೂದೇವಿಯರ ದೇವಾಲಯವಿದೆ. ಮುಖ್ಯ ದೇವರ ದೇವಾಲಯದ ಎಡಕ್ಕೆ ಯಾವಾಗಲೂ ದೇವಿಯ ಗುಡಿ ಇರುವುದು ವಾಡಿಕೆ. ಈ ಪರಿವಾರಾಲಯವು ಶಾಸ್ತ್ರೋಕ್ತವಾಗಿದ್ದು, ನಿಶ್ಚಿತವಾದ ಸ್ಥಾನಗಳಲ್ಲಿರುತ್ತದೆ; ಇದು ಮೂಲ ದೇವಾಲಯದಿಂದ ಪ್ರತ್ಯೇಕವಾಗಿದ್ದರೂ ಪ್ರಾಕಾರದೊಳಗೆ ಇರುತ್ತದೆ (ಮಾನಸಾರ ೩೨:೧). ಇದಲ್ಲದೆ ಪ್ರತ್ಯೇಕವಾಗಿ ರಚಿಸಲಾದ ಪರಿವಾರಾಲಯಗಳು ದೇವಾಲಯದ ಆವರಣದಲ್ಲಿ ಹಲವು ಇವೆ. ಈ ದೇವಾಲಯವು ಶ್ರೀದೇವಿಯ ಆಲಯವೆಂದು ತಿಳಿದರೂ ಅದೇ ದೇವಾಲಯದ ದಕ್ಷಿಣ ಗೋಡೆಯ ಮೇಲಿನ ಶಿಲಾಶಾಸನದಲ್ಲಿ ಕ್ರಿ.ಶ. ೧೫೪೯ರಲ್ಲಿ ಬೆಜವಾಡದ ಸಾಳ್ವನರಸಯ್ಯನ ಮಗ ಸಾಳ್ವನರಸಯ್ಯ ಆದಿನಾರಾಯಣ ದೇವರಿಗೆ ದಾನಬಿಟ್ಟ ವಿವರವಿದೆ.[೧೮] ಇದರಿಂದ ಸ್ಪಷ್ಟವಾಗಿ ಈ ದೇವಾಲಯವನ್ನು ನಾರಾಯಣ ದೇವಾಲಯವೆಂದು ಕರೆಯಲು ಬರುವುದಿಲ್ಲ. ಶಾಸನವು ಮೂಲಗರ್ಭ ಗುಡಿಯ ಹೊರಗೋಡೆಗಿದ್ದರೆ ಮುಂದಿನ ದೇವಾಲಯದ ಭಾಗವು ನಂತರಕಾಲದಲ್ಲಿ ಸೇರಿಸಿರುವ ಸಾಧ್ಯತೆಯಿದೆ. ಅಂದರೆ,

ಈ ದೇವಾಲಯದಲ್ಲಿ ಎರಡು ಗರ್ಭಗೃಹಗಳಿವೆ. ಈ ಗರ್ಭಗೃಹಗಳಲ್ಲಿ ಮೂರ್ತಿಗಳು ಕಂಡುಬರುವುದಿಲ್ಲ. ಪೂರ್ವಕ್ಕೆ ಮುಖ ಮಾಡಿರುವ ಗರ್ಭಗೃಹಕ್ಕೆ ಸುಕನಾಸಿ, ಅಂತರಾಳ ಹಾಗೂ ರಂಗಮಂಟಪಗಳಿವೆ. ಅಂತರಾಳ ಮತ್ತು ರಂಗಮಂಟಪವನ್ನು ಅನಂತರ ಜೋಡಿಸಿರುವ ಸಾಧ್ಯತೆ ಇದೆ. ಹಾಗೆಯೇ ರಂಗಮಂಟಪ ಜೋಡಿಸುವಾಗ ಶಾಸ್ತ್ರಗ್ರಂಥಗಳ ಪ್ರಕಾರ ಉತ್ತರಕ್ಕೊಂದು ಗರ್ಭಗುಡಿಯನ್ನು ಭೂದೇವಿಗೆ ಕಟ್ಟಿರುವ ಸಾಧ್ಯತೆಗಳಿವೆ. ಈ ದೇವಾಲಯವನ್ನು ಮೂರು ಹಂತಗಳಲ್ಲಿ ನಿರ್ಮಿಸಿರುವ ಸಾಧ್ಯತೆಯಿದೆ. ತದನಂತರ ತೆರೆದ ರಂಗಮಂಟಪ ಜೋಡಿಸಿರುವರು. ಗರ್ಭಗೃಹ ಮತ್ತು ಅಂತರಾಳದ ದ್ವಾರಬಾಗಿಲಿನ ಲಲಾಟ ಬಿಂಬವು ಸರಳ ರೀತಿಯಲ್ಲಿದ್ದು ಬಾಗಿಲುವಾಡವು ಸಣ್ಣ ಪ್ರಮಾಣದ ಚಿತ್ರಗಳ ಕೆತ್ತನೆಯನ್ನು ಒಳಗೊಂಡಿದೆ. ಇದರ ಮುಂದಿನ ಭಾಗದ ಅರ್ಧ ಮಂಟಪವು ಎರಡು ಸ್ತಂಭಗಳನ್ನು ಹೊಂದಿ, ಇವು ಚಿತ್ರಕಾಂಡ ಸ್ತಂಭಗಳಾಗಿವೆ. ಇವುಗಳ ಮಧ್ಯ ಪಟ್ಟಿಗಳಲ್ಲಿ ಹೂಬಳ್ಳಿ, ಶಂಖ, ಚಕ್ರ, ಬಾಲಕೃಷ್ಣನ ಮೂರ್ತಿ ಚಿತ್ರಗಳಿವೆ. ಇದರ ಮುಂದಿನ ನವರಂಗವು ನಾಲ್ಕು ಸ್ತಂಭಗಳನ್ನು ಹೊಂದಿದ್ದು ಇಲ್ಲಿ ಸಾಧಾರಣವಾದ ಮೇಲ್ಛಾವಣಿ ಇದೆ. ಈ ಸ್ತಂಭಗಳೂ ಕೂಡ ಚಿತ್ರಕಾಂಡ ಸ್ತಂಭಗಳಾಗಿವೆ. ಇವುಗಳಲ್ಲಿ ಹೂಬಳ್ಳಿ, ಕುಳಿತಿರುವ ಯಾಳಿಗಳು, ಮಂಡಲ ರಚನೆ, ಕೈಯಲ್ಲಿ ಬಿಂದಿಗೆ ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ಬಡಿಗೆ ಹಿಡಿದಿರುವ ವ್ಯಕ್ತಿಯ ಶಿಲ್ಪ, ನಂದಿ, ನೃತ್ಯಗಾರ್ತಿ, ಬಾಲಕೃಷ್ಣ, ಯೋಗಾಸನ ಭಂಗಿಯಲ್ಲಿರುವ ವ್ಯಕ್ತಿ ಇತ್ಯಾದಿ ಉಬ್ಬುಶಿಲ್ಪಗಳಿವೆ.

ಈ ನವರಂಗದಲ್ಲಿ ದಕ್ಷಿಣಕ್ಕೆ ಮುಖಮಾಡಿರುವ ಇನ್ನೊಂದು ದೇವಾಲಯವಿದ್ದು ಇದು ಗರ್ಭಗುಡಿಯನ್ನು ಮಾತ್ರ ಹೊಂದಿದೆ. ಇದರಲ್ಲಿ ಭೂದೇವಿ ಮೂರ್ತಿಯೂ ಇದ್ದಿರಬಹುದು. ಬಾಗಿಲವಾಡದಲ್ಲಿ ದ್ವಾರಪಾಲಕರ ವಿಗ್ರಹಗಳನ್ನು ಮತ್ತು ಅವುಗಳಿಗೆ ಗಾರೆಯ ಲೇಪವನ್ನು ಮಾಡಲಾಗಿದೆ. ಈ ದ್ವಾರಪಾಲಕರ ತಲೆಯ ಮೇಲೆ ಪ್ರಭಾವಳಿ ಕಂಡುಬರುತ್ತದೆ. ಈ ಪ್ರಭಾವಳಿಯ ಮೇಲೆ ಕೋತಿಯನ್ನು ಗಾರೆಯಿಂದ ನಿರ್ಮಿಸಿದ್ದಾರೆ. ಇದರ ಮೇಲೆ ಎರಡೂ ಬದಿಯಲ್ಲಿ ಉಬ್ಬುಶಿಲ್ಪಗಳಿದ್ದು ಅವುಗಳು ಅಸ್ಪಷ್ಟತೆಯಿಂದ ಕೂಡಿವೆ. ಈ ದ್ವಾರಬಾಗಿಲು ಇಂದು ಸಂಪೂರ್ಣ ಹಾಳಾಗಿದೆ. ಗರ್ಭಗುಡಿಯಲ್ಲಿ ಯಾವುದೇ ಮೂರ್ತಿ ಇರುವುದಿಲ್ಲ. ನವರಂಗದ ಸ್ತಂಭಗಳು ಉಪ ಪೀಠವನ್ನು ಹೊಂದಿದ್ದು ಈ ಸ್ತಂಭಗಳನ್ನು ಮೂರು ಭಾಗಗಳಾಗಿ ರಚಿಸಿ ಅವುಗಳ ಮಧ್ಯ ಪಟ್ಟಿಗಳಲ್ಲಿ ಶಿಲ್ಪಗಳನ್ನು ಖಂಡರಿಸಿದ್ದಾರೆ. ಇವುಗಳ ಮೇಲಿನ ಬೋದಿಗೆ ಸಾಧಾರಣವಾಗಿವೆ. ಸಾಧಾರಣ ರೀತಿಯಲ್ಲಿರುವ ನವರಂಗದ ದ್ವಾರಬಾಗಿಲ ಮುಂದೆ ತೆರೆದ ಹದಿನಾರು ಸ್ತಂಭಗಳಿಂದ ಕೂಡಿದ ಮಂಟಪವಿದೆ. ಈ ಸ್ತಂಭಗಳಲ್ಲಿ ಶಂಖ, ಚಕ್ರ, ಮಹಿಳೆ, ಬಾಲಕೃಷ್ಣ, ಹನುಮಾನ್, ಸೈನಿಕ, ಸಿಂಹ, ಕುಬ್ಜ ವಿಗ್ರಹ, ನವಿಲು, ಹಸು, ವಿಷ್ಣುನಾಮ, ಹೂಬಳ್ಳಿ, ಸೂರ್ಯನನ್ನು ನುಂಗುವ ಹನುಮಂತನ ಉಬ್ಬುಶಿಲ್ಪ, ಆಮೆ, ಕುರುಬ ಇತ್ಯಾದಿ ಶಿಲ್ಪಗಳನ್ನು ಕಂಡರಿಸಲಾಗಿದೆ.

ಲಕ್ಷ್ಮೀನಾರಾಯಣ ದೇವಾಲಯ

ವಿಠಲ ದೇವಾಲಯದ ಹಿಂಭಾಗ ಪಶ್ಚಿಮ ಪ್ರಾಕಾರ ಗೋಡೆಗೆ ಹೊಂದಿಕೊಂಡಂತಿರುವ ಶಿಥಿಲ ದೇವಾಲಯವು ಗರ್ಭಗೃಹವನ್ನು ಹೊಂದಿದ್ದು ಎದುರಿಗೆ ಕಂಬಗಳ ಮಂಟಪವನ್ನು ಜೋಡಿಸಿರುವರು. ಇಲ್ಲಿ

ವೈಭವದ ಕಾಲಕ್ಕೆ ಲಕ್ಷ್ಮೀನಾರಾಯಣ ದೇವಾಸ್ಥನವಿತ್ತೆಂದು ಅಲ್ಲಿರುವ ಶಾಸನದಿಂದ ತಿಳಿದುಬರುತ್ತದೆ.[೯೦] ಗರ್ಭಗೃಹವು ಇಂದು ಹಾಳಾಗಿದ್ದು ಮಂಟಪವು ಮಾತ್ರ ಉಳಿದುಕೊಂಡು ಬಂದಿದೆ. ಗರ್ಭಗೃಹದ ಬಾಗಿಲ ಮೇಲೆ ಶಿಲಾಶಾಸನವಿದ್ದು ಕ್ರಿ.ಶ. ೧೫೪೫ರಲ್ಲಿ ಈ ದೇವಾಲಯವನ್ನು ಜಂಬಲದಿನ್ನೆ ಶ್ರೀರಂಗರಾಜನ ಮಗ ಚಿಕ್ಕರಾಜುಗಾರು ದಾನಬಿಟ್ಟ ವಿವರ ಮಾತ್ರವಿದೆ. ಅಂದರೆ, ಈ ದೇವಾಲಯ ಇದಕ್ಕಿಂತ ಪೂರ್ವದಲ್ಲಿ ನಿರ್ಮಾಣಗೊಂಡಿರಬೇಕು. ಈ ಶಾಸನದ ಕೆಳಗೆ ದ್ವಾರಪಾಲಕರಿದ್ದು ಬಾಗಿಲು ಚೌಕಟ್ಟಿನ ಮೇಲೆ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಈ ದೇವಾಲಯವನ್ನು ಮೂರು ಅಡಿ ಅದಿಷ್ಠಾನದ ಮೇಲೆ ನಿರ್ಮಿಸಿದ್ದು ಗರ್ಭಗುಡಿಯು ಪ್ರಾಕಾರ ಮಂಟಪದಲ್ಲಿದೆ. ಈ ಗರ್ಭಗುಡಿಯಲ್ಲಿ ಪೀಠವಾಗಲಿ ಅಥವಾ ಮೂರ್ತಿಯಾಗಲಿ ಕಂಡುಬರುವುದಿಲ್ಲ. ಈ ಮಂಟಪದ ಮುಂದುಗಡೆ ಕೆಳಭಾಗದಲ್ಲಿ ಹದಿನೆಂಟು ಕಂಬಗಳಿಂದ ಕೂಡಿದ ತೆರೆದ ಮಂಟಪವಿದೆ. ಈ ಕಂಬಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದ್ದು ಅವುಗಳು ಸಾದಾರಣ ರೀತಿಯಲ್ಲಿವೆ. ಇವುಗಳು ಯಾವುದೇ ರೀತಿಯ ಮೂರ್ತಿಶಿಲ್ಪಗಳನ್ನು ಒಳಗೊಂಡಿರುವುದಿಲ್ಲ. ಮುಂದಿನ ಆರು ಕಂಬಗಳಲ್ಲಿ ಮಾತ್ರ ಮೂರು ಭಾಗಗಳ ಪಾದಭಾಗದಲ್ಲಿ ಉಬ್ಬುಶಿಲ್ಪಗಳನ್ನು ಖಂಡರಿಸಲಾಗಿದೆ. ಅವುಗಳಲ್ಲಿ ಸಿಂಹ, ಹನುಮಾನ್, ಮಂಗ, ನರಸಿಂಹ, ಯಾತ್ರಿಕರು, ಕೃಷ್ಣ, ಸೇವಕರ ಶಿಲ್ಪಗಳಿವೆ. ಈ ಕಂಬಗಳ ಬೋದಿಗೆಗಳು ಸರಳವಾಗಿ ಸಾಮಾನ್ಯ ರೀತಿಯಲ್ಲಿವೆ. ಈ ಮಂಟಪದ ಪ್ರಸ್ತರದಲ್ಲಿ ಮಂಜೂರನ್ನು ಅಳವಡಿಸಿರುವುದು ಕಂಡುಬರುತ್ತದೆ.

ಶಿಥಿಲ ದೇವಾಲಯ

ಈ ದೇವಾಲಯವು ನೂರು ಕಾಲುಮಂಟಪದ ಹಿಂದಿನ ಭಾಗದಲ್ಲಿದೆ. ಇಂದು ಶಿಥಿಲಾವಸ್ಥೆಯಲ್ಲಿದ್ದು ದೇವಾಲಯವು ಗರ್ಭಗೃಹ, ಸುಕನಾಸಿ, ತೆರೆದ ಮಂಟಪವನ್ನು ಹೊಂದಿದೆ. ದೇವಾಲಯದ ಅಧಿಷ್ಠಾನವು ಮೂರು ಅಡಿ ಎತ್ತರವಾಗಿದ್ದು ಗರ್ಭಗುಡಿಯಲ್ಲಿ ಪೀಠ ಮಾತ್ರವಿದೆ. ದೇವಾಲಯದ ಬಾಗಿಲಲ್ಲಿ ಅಪೂರ್ಣವಾಗಿ ಕೊರೆದಿರುವ ಗರುಡ ಹಾಗೂ ಹನುಮಂತನ ಚಿತ್ರಗಳಿವೆ. ದೇವಾಲಯದ ಮಂಟಪದಲ್ಲಿ ಎರಡು ಕಂಬಗಳನ್ನು ನಿಲ್ಲಿಸಿ ಮಂಟಪವನ್ನು ರಚಿಸಲಾಗಿದೆ. ಭಿತ್ತಿಯಲ್ಲಿ ತಿಪಟ್ಟಕುಮುದ, ಗಳ, ಬಳೆಯಾಕಾರದ ಕುಮುದ, ಅರ್ಧಕಂಬ, ಕೋಷ್ಟಕ, ಅರಳಿದ ಕುಂಭಲತೆಗಳನ್ನು ಖಂಡರಿಸಿರುವರು. ದೇವಾಲಯದ ಮೇಲೆ ಶಿಖರವಿದ್ದು ಇಂದು ಹಾಳಾಗಿದೆ. ಇದರಲ್ಲಿ ಗಾರೆಯಶಿಲ್ಪಗಳು ಕಂಡುಬರುವುದಿಲ್ಲ. ಈ ಶಿಖರವನ್ನು ಇಟ್ಟಿಗೆ ಮತ್ತು ಗಾರೆಗಚ್ಚಿನಿಂದ ನಿರ್ಮಿಸಲಾಗಿದೆ. ಈ ದೇವಾಲಯವು ಪರಿಪೂರ್ಣಗೊಂಡಂತೆ ಕಂಡುಬರುವುದಿಲ್ಲ.

ಸಭಾ ಮಂಟಪ

ವಿಠಲದೇವಾಲಯದ ಬಲಭಾಗದಲ್ಲಿರುವ ಸಭಾಮಂಟಪವನ್ನು ಕೃಷ್ಣದೇವರಾಯನು ಕ್ರಿ.ಶ. ೧೫೧೬ರಲ್ಲಿ ಕಟ್ಟಿಸಿದನೆಂದು ತಿಳಿಸುವ ಶಾಸನ ಮಂಟಪದ ಉತ್ತರಗೋಡೆಯ ಮೇಲಿದೆ.[೯೧] ಈ ಮಂಟಪವನ್ನು ಶಾಸನದಲ್ಲಿ ನೂರುಕಾಲುಮಂಟಪವೆಂದು ಕರೆದಿರುವರು (ಛಾಯಾಚಿತ್ರ - ೭೬). ಪಯಾಸ್‌ನು ಒಂದು ಮಂಟಪವನ್ನು ವರ್ಣಿಸುತ್ತ ಹೀಗೆ ಹೇಳುತ್ತಾನೆ: ಮಂಟಪ ಅಗಲಕ್ಕಿಂತ ಉದ್ದ ಹೆಚ್ಚಾಗಿದೆ. ಮಂಟಪದಲ್ಲಿ ಒಂದು ನೂರು ಅಥವಾ ಅದಕ್ಕಿಂತ ಹೆಚ್ಚಿನ ಕಂಬಗಳಿದ್ದು ಇಲ್ಲಿಗೆ ಸ್ತ್ರೀಯರನ್ನು ನರ್ತನ ಕಲಿಯಲು ಅರಸು ಕಳಿಸುವನು[೯೨] ಎಂದಿದ್ದಾನೆ. ಈ ಮಂಟಪವು

ಪಯಾಸ್ ಹೇಳಿದ ವಿವರಕ್ಕೆ ಸರಿಹೊಂದುತ್ತದೆಂಬುದು ಫಿಲಿಯೋಜಾರ ಅಭಿಪ್ರಾಯ. ಕಂಬಗಳ ಮೇಲಿನ ನರ್ತನ ಶಿಲ್ಪಗಳು ಇದಕ್ಕೆ ಪುಷ್ಠಿ ನೀಡುತ್ತವೆ. ಈ ಮಂಟಪದಲ್ಲಿ ನೂರುಕಂಬಗಳನ್ನು ಕೆತ್ತಲಾಗಿದ್ದು ಹಿಂದಿನ ಭಾಗದಲ್ಲಿ ಎತ್ತರವಾದ ವೇದಿಕೆಯಿದೆ. ಇದರಲ್ಲಿ ಚಿತ್ರಕಾಂಡ ಸ್ತಂಭಗಳನ್ನು ನಿರ್ಮಿಸಿರುವರು. ಅವುಗಳಲ್ಲಿ ಕೆಲವು ಸಂಯುಕ್ತ ಸ್ತಂಭಗಳಿವೆ. ವೇದಿಕೆಯ ಸ್ತಂಭಗಳಲ್ಲಿ ವೆಂಕಟೇಶ, ನೃತ್ಯಗಾರ್ತಿಯರು, ಮಿಥುನ ಶಿಲ್ಪಗಳು, ನರಸಿಂಹ, ಶಂಖಚಕ್ರ, ಹೂಬಳ್ಳಿ, ಗೋವರ್ಧನ ಗಿರಿಧಾರಿ, ಗೋಪಿಕೃಷ್ಣ, ಗರುಡ, ನವಿಲು, ಮೇಕೆ, ಮಂಗ, ಬೇಟೆಗಾರ್ತಿ, ಗಣೇಶ, ಹನುಮಾನ್, ವಾದ್ಯಗಾರ, ಕುಬ್ಜವಿಗ್ರಹ, ರಾಮ, ವಿಷ್ಣು, ಛಾಮರದಾರಿ, ಹಸು, ಸಾಧು, ಉಗ್ರನರಸಿಂಹ, ಲಕ್ಷ್ಮೀನರಸಿಂಹ, ಯೋಗನರಸಿಂಹ, ಲಕ್ಷ್ಮೀ, ಖಡ್ಗದಾರಿ, ಶಿವಲಿಂಗ, ವಾಮನ, ಅಂಗೈಯಲ್ಲಿ ಶಿವಲಿಂಗ ಹಿಡಿದ ಸ್ತ್ರೀ, ವರಹ ಇತ್ಯಾದಿ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ವೇದಿಕೆಯ ಕೆಳಗಿನ ಮಂಟಪದ ಕಂಬಗಳು ಚಿತ್ರಕಾಂಡ ಸ್ತಂಭಗಳಾಗಿದ್ದು ಮೇಲೆ ಎರಡು ಮುಖದಲ್ಲಿ ಮಾತ್ರ ಪುಷ್ಪಬೋದಿಗೆಯನ್ನು ಕೆತ್ತಲಾಗಿದೆ. ಛಾವಣಿಯು ಸರಳವಾಗಿದ್ದು ಮಂಟಪದ ಸುತ್ತಲಿರುವ ಸ್ತಂಭಗಳು ಮಾತ್ರ ಸಂಯುಕ್ತ ಸ್ತಂಭಗಳಾಗಿವೆ. ಈ ಸ್ತಂಭಗಳಲ್ಲಿ ಯಾಳಿಗಳು, ಬೆಣ್ಣೆಕೃಷ್ಣ, ಶಂಖ, ಶಟ್ಟಿಯಾರ್, ಅಳ್ವಾರ, ಚಕ್ರ, ಗರುಡ, ಅಂಜಲಿಮುದ್ರೆಯ ಗರುಡ, ಮಾಲೆಗಿತ್ತಿ, ಬಿಲ್ಲುಗಾರ್ತಿ, ಹೂಬಳ್ಳಿ, ಲಜ್ಜೆಗೌರಿ, ನವಿಲು, ಸ್ತ್ರೀ, ಅಂಜಲಿಮುದ್ರೆವೀರ, ರಾಮ, ಕಾಳಿಂಗಮರ್ದನಕೃಷ್ಣ, ಛಾಮರದಾರಿ, ಸಿಂಹ, ಸಾಧು, ಗೋವು, ನಾಗಕನ್ಯೆ, ಸುಖಸಂಭಾಷಿಣಿ, ನಾಗರ, ಕುರುಬ, ಭೈರವ, ನಗ್ನಶಿಲ್ಪಗಳಲ್ಲದೆ ಯಾತ್ರಿಕ, ದೇವತೆಗಳು, ಶಿವ ಇತ್ಯಾದಿ ಶಿಲ್ಪಗಳನ್ನು ಮಧ್ಯಪಟ್ಟಿಗಳಲ್ಲಿ ಖಂಡರಿಸಲಾಗಿದೆ. ಈ ಮಧ್ಯಪಟ್ಟಿಗಳ ಮಧ್ಯದ ಎರಡು ಭಾಗದಲ್ಲಿ ಚತುರಸ್ರವನ್ನು ಕೆತ್ತಲಾಗಿದೆ. ಮಂಟಪದಲ್ಲಿರುವ ಸಂಯುಕ್ತ ಸ್ತಂಭಗಳಲ್ಲಿ ಮಧ್ಯ ಸ್ತಂಭದ ಸುತ್ತಲು ಒಂದರಿಂದ ಮೂರು ಉಪಪಾದಗಳನ್ನು ಕೆತ್ತಲಾಗಿದೆ. ಮಂಟಪದ ಮೇಲೆ ಎಸ್ (S) ಆಕಾರದ ಮಂಜೂರನ್ನು ಜೋಡಿಸಲಾಗಿದ್ದು ಇದರ ಮೇಲೆ ಶಿಲ್ಪಗಳ ಅಲಂಕರಣೆಯ ಕಲ್ಲನ್ನು ಸುತ್ತಲೂ ಇಡಲಾಗಿದೆ. ಈ ಮಂಟಪದ ಅಧಿಷ್ಠಾನವು ಮೂಲದೇವರ ಅಧಿಷ್ಠಾನ ರೀತಿಯಲ್ಲಿ ಮುಂದುವರೆದಿದೆ. ಇದರಲ್ಲಿ ಗಳಪಟ್ಟಿಕೆ, ಅರ್ಧಕಂಬ, ಕೋಷ್ಠಕಗಳನ್ನು ರಚಿಸಿ ಮೇಲೆ ಶಾಲಾವಿದೆ. ಈ ಮಂಟಪವನ್ನು ಪ್ರಾಕಾರಕ್ಕೆ ಸೇರಿಸಿ ಕಟ್ಟಲಾಗಿದ್ದು ಇಂದು ರಕ್ಷಣಾ ಗೋಡೆಗಳನ್ನು ಅಲ್ಲಲ್ಲಿ ಹೊಸದಾಗಿ ನಿರ್ಮಿಸಿರುವರು.

ಕಲ್ಯಾಣ ಮಂಟಪ

ದೇವಾಲಯದ ಆವರಣದಲ್ಲಿ ಆಗ್ನೇಯದಿಕ್ಕಿನಲ್ಲಿರುವ ಶಿಲಾಮಂಟಪವು ವಿವಿಧ ರೀತಿಯ ಶಿಲ್ಪಕಲಾ ಕೇಂದ್ರದಂತಿದ್ದು ಇದನ್ನು ಕ್ರಿ.ಶ. ೧೫೫೪ ರಲ್ಲಿ ಸದಾಶಿವರಾಯನು ವಿಜಯನಗರವನ್ನು ಆಳುತ್ತಿರುವಾಗ ನಿರ್ಮಿಸಿದನೆಂದು ಶಾಸನವು ತಿಳಿಸುತ್ತದೆ.[೬] ಶಾಸನದಲ್ಲಿ ಈ ಮಂಟಪವನ್ನು ಉಯ್ಯಾಲೆ ಮಂಟಪವೆಂದು ಕರೆದಿರುವುದು ವಿಶೇಷವಾಗಿದೆ (ಛಾಯಾಚಿತ್ರ - ೭೭). ಇದೊಂದು ತೆರೆದ ಮಂಟಪವಾಗಿದ್ದು ಮಧ್ಯದಲ್ಲಿ ಎತ್ತರದ ಚಚ್ಚೌಕ ಪೀಠವಿದೆ. ಈ ಪೀಠದ ಸುತ್ತ ನಾಲ್ಕರಂತೆ ನಾಲ್ಕು ದಿಕ್ಕಿಗೆ ಸ್ತಂಭಗಳಿವೆ. ವೇದಿಕೆಯ ಮೇಲಿನ ಸ್ತಂಭಗಳ ಮೇಲೆ ಹಿಂಗಾಲಿನಿಂದ ಕುಪ್ಪಳಿಸಿ ಮೇಲೆದ್ದಿರುವ ಯಾಳಿಗಳ ಮೇಲೆ ಕುಳಿತಿರುವ ವಿಜಯನಗರ ರಾವುತರು ಮತ್ತು ಒಮ್ಮೊಮ್ಮೆ ದೇವತೆಗಳ ವಿಗ್ರಹಗಳಿವೆ (ಛಾಯಾಚಿತ್ರ - ೭೮). ಸಿಂಹಗಳ ಮೇಲೆ ಕುಳಿತಿರುವ ಸವಾರರಲ್ಲಿ ಕೆಲವರು

ಪೋರ್ಚುಗೀಸರೆಂದು ಕಂಡುಬರುತ್ತಾರೆ. ಈ ಮಂಟಪದ ಸ್ತಂಭಗಳನ್ನು ಒಂದೇ ಕಲ್ಲಿನಲ್ಲಿ ಕೆತ್ತಲಾಗಿದ್ದು ಮೇಲಕ್ಕೆ ಹೋದಂತೆ ಆಕೃತಿಗಳು ಚಿಕ್ಕದಾಗುತ್ತಾ ಬಂದಿವೆ. ಈ ಸ್ತಂಭಗಳ ಮೇಲೆ ಒಂದರ ಮೇಲೊಂದರಂತೆ ನಾಲ್ಕು ಬೋದಿಗೆಗಳಿವೆ. ಬೋದಿಗೆಗಳ ಮೇಲೆ ಕಲ್ಲಿನ ಬಂಡೆಗಳನ್ನಿಟ್ಟು ಮಧ್ಯದಲ್ಲಿ ಅರ್ಧವೃತ್ತಾಕಾರದ ಹೂಕಲ್ಲಿದೆ. ಈ ಹೂಕಲ್ಲಿನ ಮಧ್ಯದಲ್ಲಿ ಗಿಳಿಗಳು ಕೆಳಮುಖವಾಗಿ ಅರಳುತ್ತಿರುವ ಕಮಲದ ಮೊಗ್ಗನ್ನು ತಮ್ಮ ಚುಂಚಿನಲ್ಲಿ ಹಿಡಿದಿರುವುದನ್ನು ಕೆತ್ತಲಾಗಿದೆ. ವೇದಿಕೆ ಮೇಲಿನ ಸ್ತಂಭಗಳು ಸಾಶ್ರಯ ಸ್ತಂಭಗಳಾಗಿವೆ. ವೇದಿಕೆ ಕೆಳಗಡೆ ೩೨ ಸ್ತಂಭಗಳನ್ನು ನಿಲ್ಲಿಸಿ ಇವುಗಳಲ್ಲಿ ಕೋಷ್ಟಕ, ಸಾಶ್ರಯ ಸ್ತಂಭಗಳನ್ನು ನಿರ್ಮಿಸಲಾಗಿದೆ. ಮೂಲಪಾದದ ಕೋಷ್ಠಗಳನ್ನು ರಚಿಸಿ ಅಲಂಕರಿಸಿರುವರು (ಛಾಯಾಚಿತ್ರ - ೭೯). ಈ ವಿಧದ ಸ್ತಂಭದಮೇಲೆ ಕೋಷ್ಠ, ಅದರಲ್ಲಿ ನಾಸಿಯುಕ್ತ ಪಂಜರವಿದ್ದು ಅದರ ಮೇಲೆ ಪ್ರಸ್ತರದ ಅಂಗಗಳು ಕಂಡುಬರುತ್ತವೆ. ಪ್ರಸ್ತರದ ಮೇಲೆ ವೇದಿಯನ್ನು ರಚಿಸಿ ಈ ವೇದಿಯಮೇಲೆ ನಾಸಿಯುಕ್ತ ಶಾಲಾಶಿಖರಗಳಿದ್ದು ಮೇಲೆ ಸ್ತೂಪಿಯಿದೆ. ಈ ಕೋಷ್ಟಕದ ಅಕ್ಕಪಕ್ಕದಲ್ಲಿ ಕ್ಷುದ್ರಪಾದವಿದ್ದು ಅದನ್ನು ವಿವಿಧ ರೀತಿಯಲ್ಲಿ ಬಿಡಿಸಿರುವರು. ಮೂಲಪಾದವು ಮೇಲಿನವರೆಗೆ ಈ ಎಲ್ಲಾ ಅಂಗಗಳಿಂದ ಕೂಡಿ ಅಲಂಕೃತಗೊಂಡಿದ್ದು ಅಂತ್ಯದಲ್ಲಿ ಪುಷ್ಪಬೋದಿಗೆಗಳಿವೆ.

ಕಲ್ಯಾಣಮಂಪಟದ ಚತುಷ್ಕೋನದ ಸ್ತಂಭಗಳ ಮೇಲೆ ಪ್ರತಿಮುಖದಲ್ಲೂ ಮೂರು ಹಂತಗಳಲ್ಲಿ ಸಣ್ಣ ಉಬ್ಬುಶಿಲ್ಪಗಳು ಈ ರೀತಿ ಕಂಡುಬರುತ್ತವೆ. ಗೋಪಿಕಾಸ್ತ್ರೀಯರ ವಸ್ತ್ರಾಪಹರಣ, ದಶಾವತಾರ, ಮಜ್ಜಿಗೆ ಕಡೆಯುವ ಸ್ತ್ರೀ, ಬೆಣ್ಣೆಕೃಷ್ಣ, ಹನುಮಾನ್, ಕೊಳಲುಕೃಷ್ಣ, ಗರುಡ ನಾಗನನ್ನು ಕೈಯಲ್ಲಿ ಹಿಡಿದಶಿಲ್ಪ, ಪುಂಗವಿ, ನವಜೋಡಿಗಳು, ನಗ್ನಚಿತ್ರ, ಗರುಡ, ಹನುಮಂತನು ಸಂಜೀವಿನಿ ಪರ್ವತ ಹೊತ್ತು ತರುವ ಶಿಲ್ಪ, ವಿಠ್ಠಲ, ವೆಂಕಟೇಶ್ವರ, ರಾಮ, ಮಯೂರ, ಆಳ್ವಾರ, ಉಧ್ಭವನರಸಿಂಹ, ಹಿರಣ್ಯಕಶ್ಯಪು ಸಂಹಾರ, ಸೂರ್ಪನಕೆಯ ಮೂಗುಕೊಯ್ಯುವ ಲಕ್ಷ್ಮಣ, ರಾಮಯಣದ ಚಿತ್ರಣಶಿಲ್ಪ, ಪುತೀನ ಸಂಹಾರ, ಕಾಳಿಂಗಮರ್ದನ ಕೃಷ್ಣ, ಲಂಕಾದಹನ ಚಿತ್ರಣ, ಲಕ್ಷ್ಮೀನರಸಿಂಹ, ದ್ವಾರಪಾಲಕರು, ವಾದ್ಯಗಾರರು, ನೃತ್ಯಗಾರ್ತಿಯರು ಇತ್ಯಾದಿ ಉಬ್ಬುಶಿಲ್ಪಗಳಿವೆ. ಕಲ್ಯಾಣಮಂಟಪದ ಪ್ರಸ್ತರದಲ್ಲಿ ಮಂಜೂರವನ್ನು ನಿರ್ಮಿಸಿ ಅದರ ಮೇಲ್ಭಾಗದಲ್ಲಿ ಹಂಸ ಮತ್ತು ಹೂಬಳ್ಳಿಗಳನ್ನು ಕೆತ್ತಿರುವರು. ಕೆಳಗಿನ ಭಾಗವನ್ನು ಹಿಡಿಕೆಯ ರೀತಿಯಲ್ಲಿ ಕೆತ್ತಲಾಗಿದ್ದು ಇವುಗಳನ್ನು ವಿಶೇಷ ದಿನಗಳಲ್ಲಿ ನಡೆಯುವ ಉತ್ಸವಗಳಂದು ತಳಿರುತೋರಣ ಕಟ್ಟಲು ಉಪಯೋಗಿಸುತ್ತಿದ್ದರು. ಈ ಮಂಜೂರದ ತುದಿಯಲ್ಲಿ ಬಳೆಯಾಕಾರವಾಗಿ ಕೆತ್ತಿದ್ದಾರೆ. ಈ ಮಂಟಪದ ಮೇಲೆ ಇಟ್ಟಿಗೆ ಮತ್ತು ಗಾರೆಗಚ್ಚಿನಿಂದ ಕೂಟ, ಚಿಕ್ಕಚಿಕ್ಕ ಗೋಪುರ, ಅರ್ಧಕಂಬ, ಪ್ರಭಾವಳಿಗಳನ್ನು ನಿರ್ಮಿಸಿದ್ದಾರೆ. ಪ್ರಭಾವಳಿಯ ಮಧ್ಯದಲ್ಲಿ ಗಾರೆಯ ಶಿಲ್ಪಗಳನ್ನು ನಿರ್ಮಿಸಿರುವರು. ಅವುಗಳು ಇಂದು ನಾಶವಾಗಿವೆ. ಮಂಟಪದ ಅಧಿಷ್ಠಾನದಲ್ಲಿ ಗಜಕಾಳಗ, ಬಿಲ್ಲುಗಾರರ ಉಬ್ಬುಶಿಲ್ಪಗಳನ್ನು ಖಂಡರಿಸಲಾಗಿದ್ದು ಮಂಟಪದ ಮೂರು ದಿಕ್ಕಿಗೆ ಅಂದರೆ, ಪೂರ್ವಕ್ಕೆ ಗಜವ್ಯಾಳಿಸೋಪಾನ, ಪಶ್ಚಿಮ ಮತ್ತು ಉತ್ತರಕ್ಕೆ ಶಾರ್ದೂಲ ಸೋಪಾನಗಳನ್ನು ನಿರ್ಮಿಸಿರುವರು.

ಉತ್ಸವ ಮಂಟಪ

ವಿಠ್ಠಲದೇವಾಲಯದ ಮುಂದೆ ಎಡಭಾಗದಲ್ಲಿ ದೊಡ್ಡಮಂಟಪವಿದ್ದು ಮಧ್ಯದಲ್ಲಿ ವೇದಿಕೆಯಿದೆ. ಈ ಮಂಟಪಕ್ಕೆ ಎರಡು ದ್ವಾರಸೋಪಾನಗಳು ದಕ್ಷಿಣ ಮತ್ತು ಪಶ್ಚಿಮಕ್ಕೆ ಇವೆ. ಈ ಮಂಟಪವು ಎತ್ತರವಾದ ಪೀಠವನ್ನು ಹೊಂದಿ ಮಧ್ಯದ ವೇದಿಕೆಯ ಮೇಲೆ ನಾಲ್ಕು ಕೋಷ್ಟಕ ಸ್ತಂಭಗಳನ್ನು ನಿಲ್ಲಿಸಲಾಗಿದೆ. ಈ ಸ್ತಂಭಗಳ ಮೇಲೆ ಬೋದಿಗೆಯಿದ್ದು, ಇದು ಬಾಳೆಯ ಮೊಗ್ಗಿನಕಾರದಲ್ಲಿ ಇಳಿಜಾರಾಗಿದೆ. ಮಂಟಪದ ಮೇಲ್ಛಾವಣಿಯ ಮಧ್ಯದಲ್ಲಿ ಕಪೋತ ಮತ್ತು ಮಧ್ಯದಲ್ಲಿ ಕಮಲದ ದಳದಿಂದ ಕೂಡಿದ ಹೂಕಲ್ಲು ಕೆಳಮುಖವಾಗಿದೆ. ಅದರ ಸುತ್ತಲೂ ನಾಲ್ಕು ಗಿಳಿಗಳು ಕಮಲವನ್ನು ಹಿಡಿದುಕೊಂಡಿದ್ದು ಸುತ್ತಲೂ ಮಯೂರಗಳಿವೆ. ಈ ಮಯೂರಗಳ ಸುತ್ತಲೂ ಕೋಲಾಟದ ಉಬ್ಬುಶಿಲ್ಪಗಳಿವೆ. ಪೀಠದ ಮೇಲೆ ಸುತ್ತಲೂ ಸಾಶ್ರಾಯಸ್ತಂಭ ಮತ್ತು ಸಂಯುಕ್ತ ಸಂಭಗಳನ್ನು ರಚಿಸಿರುವರು. ಮುಂದೆ ತೆರೆದಮಂಟಪವನ್ನು ಜೋಡಿಸಲಾಗಿದೆ. ಈ ಮಂಟಪವು ಮೊದಲಿಗೆ ಚಿಕ್ಕ ತೆರೆದ ಮಂಟಪವಾಗಿದ್ದು ನಂತರ ಅದನ್ನು ಬೆಳಸಿ ಗರ್ಭಗೃಹವನ್ನು ಜೋಡಿಸಿರುವರು. ಈ ಗರ್ಭಗೃಹವು ಪೂರ್ವದಿಕ್ಕಿಗಿದ್ದು ಇಂದು ದ್ವಾರಬಾಗಿಲು, ದ್ವಾರಚೌಕಟ್ಟು ಅದರ ಮೇಲೆ ಗಜಲಕ್ಷ್ಮಿ, ಬಾಗಿಲಲ್ಲಿ ಹೂಬಳ್ಳಿಗಳ ಕೆತ್ತನೆ, ದ್ವಾರದ ಕೆಳಭಾಗದಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು ಒಳಗೊಂಡಿದೆ. ಗರ್ಭಗೃಹವು ಇಂದು ನೆಲಸಮವಾಗಿದೆ. ಈ ಮಂಟಪದ ಉತ್ತರಕ್ಕೆ ಗೋಡೆಯನ್ನು ನಿರ್ಮಿಸಲಾಗಿದೆ.

ವೇದಿಕೆಗೆ ಹತ್ತಿಹೋಗಲು ಎರಡು ಬದಿಯಲ್ಲಿ ಸೋಪಾನಗಳಿವೆ. ಇವುಗಳ ಹದಿಬದಿಯಲ್ಲಿ ಸಿಂಹವ್ಯಾಳಿಗಳನ್ನು ನಿಲ್ಲಿಸಲಾಗಿದೆ. ಅದೇ ರೀತಿ ತೆರೆದ ಮಂಟಪಕ್ಕೆ ಹೋಗಲು ಗಜಸೋಪಾನಗಳನ್ನು ನಿಲ್ಲಿಸಿರುವರು. ಈ ಮಂಟಪಕ್ಕೆ ಮಂಜೂರವನ್ನು ಅಳವಡಿಸಿ ಮಂಟಪದ ಸ್ತಂಭಗಳ ಮೇಲೆ ಬಾಲಕೃಷ್ಣನ ವಿಗ್ರಹ, ಹನುಮಾನ್, ಶಂಖ, ಚಕ್ರ, ಆಳ್ವಾರರ ಶಿಲ್ಪ, ನೃತ್ಯ ಹಾಗೂ ವಾದ್ಯಗಾರರಶಿಲ್ಪಗಳು, ಗೋಪಿಕಾಸ್ತ್ರೀಯರ ವಸ್ತ್ರಾಪಹರಣ, ವಿಠಲನಶಿಲ್ಪ ಇತ್ಯಾದಿ ಉಬ್ಬುಶಿಲ್ಪಗಳಿವೆ. ಮಂಟಪದ ಮೇಲ್ಛಾವಣಿಯ ಮೇಲೆ ಪ್ರಸ್ತರವನ್ನು ಚಪ್ಪಟೆಯಾಗಿ ನಿರ್ಮಿಸಿರುವರು. ಅಧಿಷ್ಠಾನದಲ್ಲಿ ಕುಬ್ಜವಿಗ್ರಹಗಳು, ನೃತ್ಯಗಾರ್ತಿಯರು, ವಾದ್ಯಗಾರರು, ಕೋಲಾಟದವರು, ಸ್ತ್ರೀಯರು, ದೇವತಾಮೂರ್ತಿಗಳು, ನವಿಲುಗಳ ಉಬ್ಬುಶಿಲ್ಪಗಳನ್ನು ಸಾಲಾಗಿ ಚಿತ್ರಿಸಿದ್ದಾರೆ.

ಯೋಗಾವರದ ನರಸಿಂಹ ದೇವಾಲಯ

ವಿಠ್ಠಲದೇವಾಲಯದ ಹಿಂದೆ ಉತ್ತರದಲ್ಲಿ ಒಂದು ಪೀಠವಿದ್ದು ಇಲ್ಲಿ ವ್ಯಾಸರಾಯರು ಕ್ರಿ.ಶ. ೧೫೩೨ರಲ್ಲಿ ವರದ ನರಹರಿಮೂರ್ತಿಯನ್ನು ಪ್ರತಿಷ್ಠಾಪಿಸಿದರೆಂದು ಅಲ್ಲಿನ ಶಾಸನದಲ್ಲಿ ಹೇಳಲಾಗಿದೆ.[೪] ಇಂದು ಪೀಠ ಮಾತ್ರ ಉಳಿದಿದ್ದು ದೇವಾಲಯವು ಹಾಳಾಗಿದೆ.

ಆಳ್ವಾರರ ದೇವಾಲಯ

ವಿಠ್ಠಲದೇವಾಲಯದ ಉತ್ತರದಿಕ್ಕಿನ ಗೋಪುರದ ಆವರಣದಲ್ಲಿ ಪೂರ್ವಕ್ಕೆ ಒಂದು ವೇದಿಕೆಯಿದೆ. ಈ ನಾಲ್ಕು ಅಂಕಣದ ವೇದಿಕೆಯಲ್ಲಿ ಕ್ರಿ.ಶ. ೧೫೩೪ರಲ್ಲಿ ಗಂಧದ ತಿಪ್ಪಿಶೆಟ್ಟಿಯು ಅಚ್ಯುತರಾಯನಿಗೆ

ಪುಣ್ಯವಾಗಬೇಕೆಂದು ೧೨ ಆಳ್ವಾರರು ಮತ್ತು ತಿರುಕಂಚಿನಂಬಿಯಾಳ್ವಾರರ ಒಂದು ವಿಗ್ರಹ ಸೇರಿದಂತೆ ಒಟ್ಟು ೧೩ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿದನೆಂಬುದು ಶಾಸನದಿಂದ ತಿಳಿದುಬರುತ್ತದೆ.[೯೫] ಈ ಹಿಂದೆ ಈ ದೇವಾಲಯಕ್ಕೆ ಮೇಲ್ಛಾವಣಿಯಿದ್ದು ಕಂಬಗಳು ಕೂಡಾ ಇದ್ದಿರಬಹುದು. ಇಂದು ಎಲ್ಲವೂ ಹಾಳಾಗಿದ್ದು ವೇದಿಕೆ ಮಾತ್ರ ಕಂಡುಬರುತ್ತದೆ. ಈ ದೇವರಿಗೆ ನಿತ್ಯ ನೈವೇದ್ಯ, ಹೂವಿನದಂಡೆ ವೆಚ್ಚಕ್ಕಾಗಿ ೧೦೦ ವರಹ ಗದ್ಯಾಣಗಳನ್ನು ಪುದುವಟ್ಟಾಗಿ ನೀಡಿರುವುದು ಅದೇ ಶಾಸನದಲ್ಲಿ ಉಲ್ಲೇಖಗೊಂಡಿದೆ.

ಪಾಕ ಶಾಲೆ

ವಿಠಲ ದೇವಾಲಯದ ಆಗ್ನೇಯ ದಿಕ್ಕಿನಲ್ಲಿ ಪ್ರಾಕಾರಕ್ಕೆ ಹೊಂದಿಕೊಂಡಂತೆ ಒಳಭಾಗದಲ್ಲಿ ಪಾಕಶಾಲೆ ಇದೆ. ಇದು ಪಶ್ಚಿಮಕ್ಕೆ ಮುಖಮಾಡಿದ್ದು, ಹೊಗೆ ಹೋಗಲು ಮೇಲ್ಭಾಗದಲ್ಲಿ ಜಾಲಾಂಧ್ರವನ್ನು ಬಿಟ್ಟಿರುವುದು ಕಂಡುಬರುತ್ತದೆ. ಈ ಮಂಟಪವು ಸರಳವಾಗಿದ್ದು ಯಾವುದೇ ಅಲಂಕಾರ ಹೊಂದಿರುವುದಿಲ್ಲ.

ಪ್ರಾಕಾರ ಗೋಪುರಗಳು

ವಿಠಲ ದೇವಾಲಯವು ದೊಡ್ಡ ಪ್ರಾಕಾರವನ್ನು ಹೊಂದಿದ್ದು ಇದಕ್ಕೆ ಹೊಂದಿಕೊಂಡಂತೆ ಪೂರ್ವ, ದಕ್ಷಿಣ ಹಾಗೂ ಉತ್ತರಕ್ಕೆ ಮೂರು ದ್ವಾರಗೋಪುರಗಳಿವೆ. ಪೂರ್ವದ ಗೋಪುರವು ಮುಖ್ಯದ್ವಾರ ಗೋಪುರವಾಗಿದ್ದು ಇದು ತೇರುಬೀದಿಗೆ ಮುಖಮಾಡಿದೆ. ಉತ್ತರ ದಿಕ್ಕಿನ ದ್ವಾರಗೋಪುರವು ನದಿತೀರಕ್ಕೆ ಹೋಗುವ ಮಾರ್ಗದಲ್ಲಿದ್ದರೆ, ದಕ್ಷಿಣ ದಿಕ್ಕಿನ ದ್ವಾರಗೋಪುರವು ವಿರೂಪಾಕ್ಷಪುರಕ್ಕೆ ಹೋಗುವ ದ್ವಾರಬಾಗಿಲಾಗಿದೆ. ಈ ಗೋಪುರಗಳನ್ನು ಕ್ರಿ.ಶ. ೧೫೧೩ರಲ್ಲಿ ಕೃಷ್ಣದೇವರಾಯನ ರಾಣಿಯರಾದ ಚಿನ್ನಾದೇವಿ ಹಾಗೂ ತಿರುಮಲ ದೇವಿಯರು ಕಟ್ಟಿಸಿದರೆಂದು ಉಲ್ಲೇಖಿಸುವ ಶಾಸನ ದೇವಾಲಯದಲ್ಲಿದೆ.[೯೬] ದೇವಾಲಯದ ಪ್ರಾಕಾರಗೋಡೆಯನ್ನು ಕೆಳಭಾಗದಲ್ಲಿ ಕಲ್ಲಿನ ಬಂಡೆಗಳಿಂದ ನಿರ್ಮಿಸಿ ಮೇಲೆ ಇಟ್ಟಿಗೆ, ಗಾರೆಯಿಂದ ಕಟ್ಟಲಾಗಿದೆ. ಇದು ಹದಿನೈದು ಅಡಿಗಳಷ್ಟು ಎತ್ತರದ ಗೋಡೆಯಾಗಿದೆ. ಈ ದ್ವಾರ ಗೋಪುರಗಳು ಅಧಿಷ್ಠಾನ, ಭಿತ್ತಿಯನ್ನು ಹೊಂದಿದ್ದು ಮೊದಲ ತಲ ಕಲ್ಲಿನದು. ಮೇಲಿನ ಐದು ತಲಗಳು ಇಟ್ಟಿಗೆ ಮತ್ತು ಗಾರೆಗಚ್ಚಿನಿಂದ ನಿರ್ಮಿಸಲಾಗಿರುವುದು. ಈ ಗೋಪುರಗಳ ಭಿತ್ತಿಗಳಲ್ಲಿ ಕೋಷ್ಠಕ, ಅರ್ಧಕಂಬ, ಶಿಲ್ಪ ಮೂರ್ತಿಗಳ ಕೆತ್ತನೆಗಳಿವೆ. ಕಲ್ಲಿನ ದ್ವಾರದ ಮೇಲೆ ಗೋಪುರವನ್ನು ಇಟ್ಟಿಗೆಯಿಂದ ಕಟ್ಟಲಾಗಿದ್ದು ಈ ತಲಗಳು ಎತ್ತರವಾದಂತೆಲ್ಲಾ ಚಿಕ್ಕದಾಗಿ ಕೊನೆಗೆ ಶಾಲಾದಲ್ಲಿ ಕೊನೆಗೊಳ್ಳುತ್ತವೆ. ಈ ಗೋಪುರಗಳ ಮೇಲೆ ಬಂಗಾರದ ಕಳಸಗಳಿದ್ದಂತೆ ಶಾಸನಗಳಲ್ಲಿ ಉಲ್ಲೇಖವಿದೆ.[೯೭] ಈ ದ್ವಾರಗೋಪುರಗಳ ತಲಗಳಲ್ಲಿ ವಿಷ್ಣುವಿಗೆ ಸಂಬಂಧಿತ ಗಾರೆ ಶಿಲ್ಪಗಳಿವೆ. ಇದರಲ್ಲಿ ವಿಠಲನ ವಿಗ್ರಹಗಳದೇ ಮೇಲುಗೈಯಾಗಿದೆ. ಅಲ್ಲದೆ, ಇನ್ನು ಅನೇಕ ಸ್ತ್ರೀಯರು ಹಾಗೂ ಸಾಮಾಜಿಕ ಚಿತ್ರಣಗಳ ಗಾರೆ ಶಿಲ್ಪಗಳನ್ನು ನಿರ್ಮಿಸಿದ್ದು, ಅವು ಇಂದು ಹಾಳಾಗಿವೆ.

ಪೂರ್ವದಿಕ್ಕಿನ ದ್ವಾರಗೋಪುರದಲ್ಲಿ ಕೃಷ್ಣನ ಲೀಲೆಗಳಿಗೆ ಸಂಬಂಧಿಸಿದ ಮೂರ್ತಿಗಳು ಹಾಗೂ ದುರ್ಗೆಯರ ಗಾರೆ ಶಿಲ್ಪಗಳು ಕಂಡುಬಂದರೆ, ದಕ್ಷಿಣ ದಿಕ್ಕಿನ ಗೋಪುರದ ಪೂರ್ವ ಹಾಗೂ ಪಶ್ಚಿಮಕ್ಕೆ ಮನುಷ್ಯನಾಕಾರದ ವಿಠಲ ಮೂರ್ತಿಗಳನ್ನು ಇಟ್ಟಿಗೆ ಹಾಗೂ ಗಚ್ಚುಗಾರೆಗಳಲ್ಲಿ ನಿರ್ಮಿಸಲಾಗಿದೆ. ಈ ಮೂರ್ತಿಗಳೆಲ್ಲ ಮೈತುಂಬ

ಬಟ್ಟೆ ಧರಿಸಿದ್ದು, ಆಭರಣದಿಂದ ಅಲಂಕೃತಗೊಂಡಿವೆ. ಈ ಎಲ್ಲಾ ದ್ವಾರ ಗೋಪುರದ ಅಂತ್ಯದಲ್ಲಿ ಶಾಲಾ ಶಿಖರವಿದ್ದು ಕಳಸಗಳಿರುವವು. ಶಾಲಾದ ಪಾರ್ಶ್ವಗಳಲ್ಲಿ ಪ್ರಭಾವಳಿ ಸಿಂಹಶಿಖಾದಿಂದ ಅಲಂಕರಿಸಲಾಗಿದೆ. ಪ್ರಾಕಾರದ ಒಳಭಾಗದಲ್ಲಿ ಪೌಳಿಗೆ ಹೊಂದಿಕೊಂಡಂತೆ ಮಾಲಿಕರಚನೆಯನ್ನು ನಿರ್ಮಿಸಲಾಗಿದೆ. ಇದರಲ್ಲಿ ಸಂಯುಕ್ತ ಸ್ತಂಭಗಳನ್ನು ಮುಂದಿನಭಾಗದಲ್ಲಿ ನಿಲ್ಲಿಸಲಾಗಿದ್ದರೆ ಹಿಂದಿನ ಭಾಗದಲ್ಲಿ ಸರಳ ರೀತಿಯ ಸಾಧಾರಣ ಸ್ತಂಭಗಳಿವೆ. ಈ ಮಂಟಪಗಳ ಅಧಿಷ್ಠಾನದಲ್ಲಿ ಆನೆಗಳ ಕಾಳಗ ಚಿತ್ರಸಾಲುಗಳನ್ನು ಕೆತ್ತಲಾಗಿದೆ.

ಗರುಡ ಸ್ತಂಭ

ವಿಠಲ ದೇವಾಲಯದ ಪೂರ್ವದಿಕ್ಕಿನ ಗೋಪುರದ ಮುಂದೆ ವಿಷ್ಣುವಿನ ವಾಹನವಾದ ಗರುಡ ಹೆಸರಿನ ಕಲ್ಲಿನ ಸ್ತಂಭವಿದ್ದಂತೆ ಅಲ್ಲಿ ಬಿದ್ದಿರುವ ಸ್ತಂಭದಿಂದ ತಿಳಿದುಬರುತ್ತದೆ. ಈ ಗರುಡ ಸ್ತಂಭವು ವೈಷ್ಣವ ದೇವಾಲಯಗಳಲ್ಲಿ ಕಂಡುಬರುವುದು ಸಹಜವಾದುದಾಗಿದೆ. ಈ ಸ್ತಂಭದ ಕೆಳಗೆ ಪೀಠವಿದ್ದು ಅದು ಇಂದು ಹಾಳಾಗಿದೆ. ಸ್ತಂಭವು ಕೂಡ ಒಡೆದು ಹೋಗಿ ಅಲ್ಲೇ ನೆಲಕ್ಕೆ ಬಿದ್ದಿರುವುದು ಕಂಡುಬರುತ್ತದೆ. ಈ ಸ್ತಂಭವನ್ನು ನೋಡಿದಾಗ ಬಹು ಎತ್ತರವಾದ ಸ್ತಂಭವಾಗಿರಲಿಕ್ಕೆ ಸಾಧ್ಯತೆಯಿದೆ.

ಪುಷ್ಕರಿಣಿ

ದೇವಾಲಯದ ಎಡಭಾಗದಲ್ಲಿ ದೊಡ್ಡ ಕೊಳವಿರುವುದು ಗಮನಾರ್ಹ. ಕೊಳದಲ್ಲಿ ಹಬ್ಬಗಳ ಸಮಯದಲ್ಲಿ ತೆಪ್ಪವನ್ನು ಕಟ್ಟಿ ಪ್ರಮುಖ ದೇವರ ಉತ್ಸವ ಮೂರ್ತಿಯನ್ನಿಟ್ಟು ಉತ್ಸವ ನಡೆಸುತ್ತಿದ್ದರು. ಇದನ್ನು ಕೊಳದ ಮಧ್ಯೆ ಇರುವ ಉತ್ಸವ ಮಂಟಪ ಹಾಗೂ ಸುತ್ತಲಿನ ಮಂಟಪಗಳಿಂದಲೂ ಗುರುತಿಸಬಹುದು (ಛಾಯಾಚಿತ್ರ - ೮೦). ಸಾಲುಮಂಟಪಗಳ ಕಂಬಗಳ ಮೇಲೆ ವೈಷ್ಣವ ಪಂಥಕ್ಕೆ ಸಂಬಂಧಿಸಿದ ಉಬ್ಬುಶಿಲ್ಪಗಳಿವೆ. ತೆಪ್ಪಕೊಳದ ಮಧ್ಯದಲ್ಲಿರುವ ಉತ್ಸವ ಮಂಟಪವನ್ನು ವೇದಿಕೆಯಮೇಲೆ ನಾಲ್ಕು ಕಂಬಗಳಿಂದ ಕಟ್ಟಲಾಗಿದ್ದು, ಮೇಲೆ ಶಿಖರವಿದೆ. ಇದನ್ನು ಇಟ್ಟಿಗೆ, ಗಚ್ಚುಗಾರೆಯಿಂದ ನಿರ್ಮಿಸಿರುವರು. ಇದರ ಸುತ್ತಲಿರುವ ಮಂಟಪಗಳು ಹಾಳಾಗಿದ್ದು ಇಂದು ಜೀರ್ಣೋದ್ಧಾರ ಕಾರ್ಯವನ್ನು ಕೈಗೊಳ್ಳಲಾಗಿದೆ.

ರಾಮಾನುಜ ಕೂಟ

ವಿಠಲಾಪುರದಲ್ಲಿ ವಿಠಲ ದೇವರ ದೇವಾಲಯದ ಸುತ್ತಮುತ್ತ ರಾಮಾನುಜ ಕೂಟಗಳಿವೆ. ದೇವಾಲಯದ ಸುತ್ತಲೂ ಮಠಗಳಿದ್ದು, ಅವುಗಳಲ್ಲಿ ವೈಷ್ಣವ ಸಂತರಾದ ಆಳ್ವಾರರು ನೆಲೆಸಿರುತ್ತಿದ್ದರು. ಇಂತಹ ಕಡೆಗಳಲ್ಲಿ ರಾಮಾನುಜ ಕೂಟವು ಬಹುದೊಡ್ಡ ಮಠವಾಗಿದ್ದಿತು. ಅಲ್ಲಿ ಭಕ್ತಾದಿಗಳಿಗೆ ದಾಸೋಹ ಕಾರ್ಯ ನಡೆಸುತ್ತಿದ್ದರೆಂದು ಕ್ರಿ.ಶ. ೧೫೧೪ರ ಸದಾಶಿವರಾಯನ ಕಾಲದ ಶಾಸನವು ತಿಳಿಸುತ್ತದೆ.[೮] ಸದಾಶಿವರಾಯನು ಈ ದೇವಾಲಯಕ್ಕೆ ದಾನ ದತ್ತಿಗಳನ್ನು ಬಿಟ್ಟು ಇವುಗಳ ಆದಾಯದಲ್ಲಿ ಒಂದು ಪಾಲನ್ನು ರಾಮಾನುಜ ಕೂಟಕ್ಕೆ ನಿತ್ಯ ಕಾರ್ಯ ಹಾಗೂ ಪ್ರಸಾದಕ್ಕೆ ನೀಡಲಾಗಿದ್ದಿತು.[೯] ಈ ಮಠಗಳು ದಾಸೋಹದ ಜೊತೆಗೆ ಧರ್ಮ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದವೆಂದು ಇದರಿಂದ ತಿಳಿದುಬರುತ್ತದೆ.

ಪರಾಂಕುಶ ಮಂಟಪ

ವಿಠ್ಠಲದೇವರ ರಥಬೀದಿಯ ಪೂರ್ವದಲ್ಲಿ ಪರಾಂಕುಶಮಂಟಪವನ್ನು ಕ್ರಿ.ಶ. ೧೫೫೬ರಲ್ಲಿ ವಿಠಲದ ನಮ್ಮಾಳುವಾರರು ಎಂಬುವರು ದೇವರ ಉತ್ಸವಕ್ಕೆಂದು ಕಟ್ಟಿಸಿದರು (ಛಾಯಾಚಿತ್ರ - ೮೧). ಇದಕ್ಕೆ ಪರಾಂಕುಶಮಂಟಪವೆಂದು ಶಾಸನದಲ್ಲಿ ಉಲ್ಲೇಖವಾಗಿದೆ.[೧೦೦] ಈ ಮಂಟಪದ ಮಧ್ಯದಲ್ಲಿ ವೇದಿಕೆಯಿದ್ದು ನಾಲ್ಕು ಮೂಲೆಯಲ್ಲಿ ನಾಲ್ಕುಸ್ತಂಭಗಳಿವೆ. ಮೇಲ್ಛಾವಣಿಯಲ್ಲಿ ದುಂಡಾದ ಹೂಕಲ್ಲನ್ನು ಜೋಡಿಸಲಾಗಿದೆ. ಈ ಕಲ್ಲಿನ ಸುತ್ತಲೂ ನಾಲ್ಕುದಿಕ್ಕಿಗೆ ವಿಠಲ, ಗೋಪಾಲಕೃಷ್ಣ ಮುಂತಾದ ಚಿತ್ರಗಳಿವೆ. ಈ ಮಂಟಪದ ಮಧ್ಯದ ವೇದಿಕೆಯ ಸುತ್ತಲೂ ಹನ್ನೆರಡು ಸ್ತಂಭಗಳಿದ್ದು, ಇದರ ಪ್ರವೇಶವು ಪಶ್ಚಿಮಕ್ಕೆ ಮುಖವಾಗಿದೆ. ಅಕ್ಕಪಕ್ಕದಲ್ಲಿ ಸಿಂಹವ್ಯಾಳಿಯನ್ನು ಸೋಪಾನಗಳ ಪಕ್ಕದಲ್ಲಿ ನಿಲ್ಲಿಸಲಾಗಿದೆ. ಈ ಮಂಟಪದ ಕೆಳಗೆ ನಾಲ್ಕು ಚಿತ್ರಕಾಂಡ ಸ್ತಂಭಗಳನ್ನು ನಿಲ್ಲಿಸಿದ್ದಾರೆ. ಮಂಟಪದ ಪ್ರಸ್ತರದಲ್ಲಿ ಸಾದಾ ರೀತಿಯ ಮಂಜೂರವನ್ನು ಅಳವಡಿಸಿ ಮೇಲೆ ಸುತ್ತಲೂ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ ಗೋಡೆಯಿದ್ದು ಮಧ್ಯ ಮಧ್ಯದಲ್ಲಿ ಕೋಷ್ಠಕಗಳಿವೆ. ಇವುಗಳ ಮೇಲೆ ಗೋಪುರದ ರಚನೆಯನ್ನು ನಿರ್ಮಿಸಿದ್ದಾರೆ. ಮಂಟಪದ ಮಧ್ಯದಲ್ಲಿ ಮೇಲೆ ತ್ರಿತಲ ವಿಮಾನವಿದ್ದು ಕೋಷ್ಠ, ಕರ್ಣಕೂಟ, ಶಾಲಾ, ಕಪೋತ, ಅರ್ಧಕಂಭ, ನಾಸಿಗಳಿಂದ ಅಲಂಕರಿಸಿರುವರು. ಕೊನೆಯಲ್ಲಿ ದುಂಡಾದ ಆಮಲಕವಿದ್ದು ನಾಸಿಗಳನ್ನು ಇದರ ಮೇಲೆ ಚಿತ್ರಿಸಿ ಅಲಂಕರಿಸಲಾಗಿದೆ. ಇಂದು ಈ ಮಂಟಪವು ಸುರಕ್ಷಿತವಾಗಿ ಉಳಿದು ಬಂದಿದೆ. ದೇವಾಲಯದ ವಿಶೇಷದಿನಗಳಲ್ಲಿ ನಡೆಸುವ ರಥೋತ್ಸವದ ದಿನದಂದು ರಥವನ್ನು ದೇವಾಲಯದ ಮುಂಬದಿಯಿಂದ ಈ ಮಂಟಪದವರೆಗೂ ಎಳೆದುತರುತ್ತಿದ್ದರು. ವರ್ಷದಲ್ಲಿ ೧೪೨ ದಿನಗಳಂದು ವಿಠ್ಠಲನ ಮೂರ್ತಿಯನ್ನು ಈ ಪರಾಂಕುಶಮಂಟಪಕ್ಕೆ ತರಲಾಗುತ್ತಿದ್ದಿತ್ತೆಂದು ಶಾಸನದಿಂದ ತಿಳಿದುಬರುತ್ತದೆ.[೧೦೧]

ವಿಠ್ಠಲ ಬಜಾರು

ವಿಠ್ಠಲದೇವಾಲಯದ ಪೂರ್ವಗೋಪುರದ ಮುಂಭಾಗದಿಂದ ಪರಾಂಕುಶಮಂಟಪದವರೆಗೆ ವಿಸ್ತಾರವಾಗಿ ನೆಲೆಗೊಂಡಿರುವ ಬೀದಿಯೇ ವಿಠ್ಠಲಬಜಾರು. ಇದನ್ನು ಶಾಸನದಲ್ಲಿ ತೇರುಬೀದಿಯೆಂದು ಕರೆಯಲಾಗಿದೆ.[೧೦೨] ವಿಠ್ಠಲ ಬಜಾರು ತುಂಗಭದ್ರಾನದಿ ಬಲದಂಡೆಯ ವಿಶಾಲಪ್ರದೇಶದಲ್ಲಿ ನಿರ್ಮಾಣವಾಗಿದೆ. ಇದರ ಉದ್ದ ೯೪೫ ಮೀ. ಅಗಲ ೩೯೬ ಮೀ.[೧೦೩] ಹಂಪೆಯ ಇತರ ಬಜಾರಗಳಿಗಿಂತ ಇದು ದೊಡ್ಡದಾಗಿದೆ (ಛಾಯಾಚಿತ್ರ - ೮೨). ಇದು ದೇವಾಲಯದ ಉತ್ತರಕ್ಕೆ ವಿಸ್ತಾರವಾಗಿದ್ದು, ಇಲ್ಲಿ ಈ ಬಜಾರಿನ ಉದ್ದ ೧೨೨ ಮೀ. ಅಗಲ ೧೬.೩ ಮೀ. ಬೀದಿಯ ಇಕ್ಕೆಲಗಳಲ್ಲೂ ಸಾಲು ಕಲ್ಲಿನ ಮಂಟಪಗಳಿದ್ದು, ಇಂದು ಇವುಗಳ ಅವಶೇಷಗಳನ್ನು ಮಾತ್ರ ಕಾಣಬಹುದು. ವಿಠಲ ಬಜಾರು ವಿಠ್ಠಲದೇವಾಲಯ ಸ್ಥಾಪನೆಯಾದ ನಂತರ ನಿರ್ಮಾಣವಾದುದಾಗಿದೆ. ವಿಠ್ಠಲ ಬಜಾರಿನಲ್ಲಿ ರಥೋತ್ಸವ ನಡೆಯುತ್ತಿದ್ದಿತು. ವಿಠ್ಠಲಬಜಾರು ಒಂದು ಮಾರುಕಟ್ಟೆ ಪ್ರದೇಶವಾಗಿ ಸರಕುಸಾಮಾಗ್ರಿಗಳು ಬೇರೆ ಬೇರೆ ಭಾಗಗಳಿಂದ ಇಲ್ಲಿಗೆ ಬರುತ್ತಿದ್ದವು. ವ್ಯಾಪಾರಿಗಳು ಮತ್ತಿತರರಿಗೆ ಈ ದೇವಾಲಯವು ಸಾಲನೀಡುತ್ತಿದ್ದಿತು. ವಿಠ್ಠಲ ದೇವಾಲಯದ ಕ್ರಿ.ಶ. ೧೫೩೬ ರಲ್ಲಿಯ ಶಾಸನವು,

"- - - - - - - ದೇವರ ಭಂಡಾರಕ್ಕೆ ಸಮರ್ಪಿಸಿದ ರೊಕ್ಕ
ಘಟ್ಟಿವರಹ ಯಿನ್ನೂರು ವರಹನೂ ಇವರಹಕಂ
ಬಡ್ಡಿತಿಂಗಳು ೧ಕ್ಕೆ ಘಟಿ ವರಹ ೫ಕ್ಕೆ ಸಲೆ
ಚಕ್ರ೧ಗ ೫೦ ಎಂದು ತಿಳಿಸುತ್ತದೆ."[೧೦೪]

ಇದರಲ್ಲಿ ಹೇಳಿರುವ ಬಡ್ಡಿಯು ಸಾಲವಾಗಿ ಕೊಟ್ಟಿದ್ದ ಹಣದಿಂದ ಬಂದಿರಬೇಕು. ವ್ಯಾಪಾರ ವ್ಯವಹಾರಗಳಿಗೆ ದೇವಾಲಯವು ಪ್ರೋತ್ಸಾಹ ನೀಡುತ್ತಿದ್ದುದೂ ಇದರಿಂದ ವ್ಯಕ್ತವಾಗುತ್ತದೆ. ಅಲ್ಲದೆ ವ್ಯಾಪಾರಿಗಳು ದೇವಾಲಯ ಹಾಗೂ ಮಠಗಳಿಗೆ ಮಂಟಪಗಳನ್ನು ಕಟ್ಟಲು ಮತ್ತು ಉತ್ಸವ ಪೂಜಾವಿಧಿಗಳಿಗೆ ದಾನದತ್ತಿಯನ್ನು ನೀಡಿರುವುದು ಶಾಸನಗಳಲ್ಲಿ ಉಲ್ಲೇಖವಿದೆ.[೧೦೫] ಇದರಿಂದ ದೇವಾಲಯದಲ್ಲಿ ಬಜಾರವು ಒಂದು ದೊಡ್ಡ ಮಾರುಕಟ್ಟೆಯಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತಿದ್ದಿತು. ವಿಠಲ ಬಜಾರು ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಉನ್ನತಿಯನ್ನು ಸಾಧಿಸಿದ್ದಿತು.

ಸಾಂಸ್ಕೃತಿಕ ಚಿತ್ರಣ

ವಿಠಲದೇವಾಲಯವು ಅಂದಿನ ದೊಡ್ಡ ಧಾರ್ಮಿಕ ಕೇಂದ್ರ, ಸಾಮಾಜಿಕ ಸಂಸ್ಥೆ, ಸಾಂಸ್ಕೃತಿಕ ಚಟುವಟಿಕೆಗಳು ನಡೆಯುವ ತಾಣವಾಗಿದ್ದುದು ಶಾಸನದಿಂದ ತಿಳಿಯುತ್ತದೆ. ದೇವಾಲಯವು ಬೃಹತ್ತಾಗಿ ಬೆಳೆದುದರಿಂದ ಅಲ್ಲಿನ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ದೊಡ್ಡ ಪರಿಚಾರಕವರ್ಗವೇ ಬೆಳೆಯಿತು. ಅಂದಿನ ಆದಾಯವೆಚ್ಚ, ಪೂಜೆಪುನಸ್ಕಾರಗಳು, ಉತ್ಸವ ರಥೋತ್ಸವಗಳು, ಹಬ್ಬಹರಿದಿನಗಳು ವಿಶೇಷವಾಗಿ ಇವೆಲ್ಲವುಗಳನ್ನು ನೋಡಿಕೊಳ್ಳಲು ಸ್ಥಾನಿಕ ಎನ್ನುವ ವ್ಯಕ್ತಿಯು ನಿಯುಕ್ತನಾಗಿದ್ದನು. ಈ ದೇವಾಲಯದ ಅಂದಿನ ಎಲ್ಲಾ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬರಲು ದಾನಿಗಳು, ಅರಸರು ಹಲವು ದಾನದತ್ತಿಗಳನ್ನು ನೀಡಿರುವುದು ದೇವಾಲಯದಲ್ಲಿರುವ ಶಾಸನಗಳಿಂದ ತಿಳಿದುಬರುತ್ತದೆ. ಈ ದೇವಾಲಯಕ್ಕೆ ಕ್ರಿ.ಶ. ೧೫೬೪ರ ವರೆಗೆ ದಾನದತ್ತಿ ಬಿಟ್ಟಿರುವುದು ಗಮನಾರ್ಹ.

ಸಾಮಾಜಿಕ ಸ್ಥಿತಿ

ದೇವಾಲಯವು ದೊಡ್ಡ ಸಂಸ್ಥೆಯಾಗಿ ಬೆಳೆದುದರಿಂದ ಅಂದು ದೇವಾಲಯದ ಕಾರ್ಯದಲ್ಲಿ ಸಮಾಜದ ಅನೇಕ ಜನರು ಭಾಗವಹಿಸುತ್ತಿದ್ದರು. ಸಮಾಜದ ಜನರು ಒಗ್ಗೂಡುವ ಸ್ಥಳವೆಂದರೆ ಈ ದೇವಾಲಯಗಳೇ ಆಗಿದ್ದವು. ದೇವಾಲಯದ ಕೆಲಸಕಾರ್ಯಗಳನ್ನು ನಿರ್ವಹಿಸಲು ಅರಸರು, ದಾನಿಗಳು ಒಬ್ಬ ಮುಖ್ಯಸ್ಥನನ್ನು ನೇಮಿಸುತ್ತಿದ್ದರು. ಇವನನ್ನು ಸ್ಥಾನಿಕ ಅಥವಾ ಸ್ಥಾನದವರೆಂದು ಕರೆಯಲಾಗುತ್ತಿದ್ದಿತು. ದೇವಾಲಯದ ಸ್ಥಾನಿಕ ಮುಂತಾದವರು ಹೆಸರುಗಳನ್ನು ಶಾಸನದಲ್ಲಿ ಉಲ್ಲೇಖಿಸಿದ್ದು ಅವರೇ, ದೇಮಯ, ನರಸಯ್ಯ, ವೀರಪ್ಪ, ಚಿಕ್ಕವೀರಪ್ಪ ಮತ್ತು ಪುರಷೋತ್ತಮ.[೧೦೬] ಸ್ಥಾನಿಕನು ದೇವಾಲಯದ ಮುಖ್ಯಸ್ಥನಾಗಿರುತ್ತಿದ್ದು ಇವನ ಮುಖಾಂತರ ಆಡಳಿತವೆಲ್ಲ ನಡೆಯುತ್ತಿದ್ದಿತು. ದೇವಾಲಯದ ಪರಿಚಾರಕರನ್ನು ದಾನಿಗಳು ಮತ್ತು ಸ್ಥಾನಿಕರು ನೇಮಿಸುತ್ತಿದ್ದರು. ಸ್ಥಾನಿಕರ

ಸಹಾಯಕ್ಕೆ ದೇವಾಲಯದ ಭಂಡಾರದವರು, ವಾದ್ಯಗಾರರು, ಪರಿಚಾರಕರು, ದೇವಾಲಯದ ದೇವರ ಆಭರಣಗಳನ್ನು ಮತ್ತು ದೇವಾಲಯದ ಬೀಗಮುದ್ರೆಯನ್ನು ನೋಡಿಕೊಳ್ಳಲು ಜನರಿರುತ್ತಿದ್ದರು. ಭಂಡಾರದ ಹಿರಿಯ ತಿಮ್ಮಯ್ಯನು ವಿಠಲದೇವರ ನಾನಾ ಆಭರಣಗಳನ್ನು ಮತ್ತು ಬೀಗಮುದ್ರೆಯನ್ನು ನೋಡಿಕೊಳ್ಳಲು ನಿಯುಕ್ತನಾಗಿದ್ದನು.[೧೦೭] ಅಲ್ಲದೆ, ದೇವಾಲಯಕ್ಕೆ ಹೂವನ್ನು ಒದಗಿಸುವವರು, ಸೇನಭೋವರು, ನಟುವರರು, ಸ್ವಯಂಪಾಕಿಗಳು, ಗಳಿಯಾರದವರು, ಕರಣಿಕದವರು, ಸಂಕೀರ್ತನಕಾರರು, ಲೆಕ್ಕಿಗರು ಮುಂತಾದವರು ಸ್ಥಾನಿಕನ ಸಹಾಯಕ್ಕಿರುತ್ತಿದ್ದರು. ಇವರೆಲ್ಲರು ಮಾಡಬೇಕಾದ ವೃತ್ತಿಗಳನ್ನು ದೇವಾಲಯದಲ್ಲಿರುವ ಶಾಸನಗಳು ಉಲ್ಲೇಖಿಸುತ್ತವೆ.[೧೦೮]

ಆರ್ಥಿಕ ಸ್ಥಿತಿ

ವಿಠಲದೇವಾಲಯವು ಕಾಲಾನುಕ್ರಮದಲ್ಲಿ ಬೆಳೆದುದರಿಂದ ಒಂದು ದೊಡ್ಡ ಸಂಕೀರ್ಣವಾಗಿ ರೂಪುಗೊಂಡಿದೆ. ಅಂದಿನ ಧಾರ್ಮಿಕ ಪ್ರಸಾರ ಕಾರ್ಯಗಳಿಗೆ ದೇವಾಲಯವನ್ನು ಉಪಯೋಗಿಸುತ್ತಿದ್ದುದರಿಂದ ಧಾರ್ಮಿಕ ಚಟುವಟಿಕೆಗಳಿಗೆ ಹೇರಳವಾಗಿ ಹಣವು ಬೇಕಾಗುತ್ತಿದ್ದಿತು. ಈ ವೆಚ್ಚವನ್ನು ದೇವಾಲಯದ ನಿರ್ಮಾಪಕರು ಮತ್ತು ದಾನಿಗಳು ಭರಿಸುತ್ತಿದ್ದರು. ಅಲ್ಲದೆ, ದೇವಾಲಯದಲ್ಲಿ ನಡೆಯುವ ನಾನಾಪೂಜಾಕಾರ್ಯಗಳಿಗಾಗಿ ದಾನಿಗಳು ದಾನವನ್ನು ನೀಡುತ್ತಿದ್ದುದರಿಂದ ದೇವಾಲಯಕ್ಕೆ ಯಥೇಚ್ಛವಾಗಿ ಆದಾಯ ಬರುತ್ತಿದ್ದಿತು. ಈ ಆದಾಯದಿಂದ ದೇವಾಲಯದ ಖರ್ಚುವೆಚ್ಚವನ್ನು ಭರಿಸುತ್ತಿದ್ದರು.

ಆದಾಯ

ದೇವಾಲಯದ ಪೂಜೆಪುನಸ್ಕಾರಗಳಿಗಾಗಿ ಮತ್ತು ಉತ್ಸವಕಾರ್ಯಗಳಿಗೆ ದಾನಿಗಳು, ಅರಸರು, ದೇವಾಲಯದ ನಿರ್ಮಾಪಕರು ದಾನದತ್ತಿಗಳನ್ನು ನೀಡಿರುವುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಕೃಷ್ಣದೇವರಾಯನು ವಿಠ್ಠಲದೇವರ ಪೂಜಾಕಾರ್ಯ ಮತ್ತು ರಥೋತ್ಸವಗಳಿಗೆ ಗದ್ದೆ ಮತ್ತು ಮೂರು ಗ್ರಾಮಗಳನ್ನು ದಾನವಾಗಿ ನೀಡಿದ್ದನು.[೧೦೯] ಕೃಷ್ಣದೇವರಾಯನ ಪಟ್ಟದ ಅರಸಿಯರು ವಿಠಲದೇವರಿಗೆ ಗೋಪುರಗಳನ್ನು ಕಟ್ಟಿಸಿ ದೇವರಿಗೆ ಚಿನ್ನದ ಪೂಜಾಸಾಮಾನುಗಳನ್ನು ದಾನವಾಗಿ ನೀಡಿರುವರು.[೧೧೦] ಅದೇ ರೀತಿಯಾಗಿ ಕೋನೇಟಿ ಕೊಂಡರಾಜಯ್ಯನು ವಿಠ್ಠಲ ದೇವರಿಗೆ ತಿರುನಾಳಚೆರುಪನ್ನು ಮಾಡಿಸಲು ಪುದುವಟ್ಟು ನೀಡಿದ್ದನು. ಇದಕ್ಕಾಗಿ ಹತ್ತುಕೊಳಗ ಗದ್ದೆಯನ್ನು ದತ್ತಿಯಾಗಿ ಬಿಟ್ಟಿದ್ದಾನೆ.[೧೧೧] ನಮ್ಮಾಳ್ವಾರನು ದೇವರ ಉದಯಕಾಲದ ನೈವೇದ್ಯವನ್ನು ತನಗೆ ಕಳುಹಿಸಬೇಕೆಂದು ಭಂಡಾರಕ್ಕೆ ೬೦ ಗಟ್ಟಿ ವರಹಗಳನ್ನು ಸಮರ್ಪಿಸಿದ್ದನು.[೧೧೨] ಉದಯಗಿರಿಯ ತಿಮ್ಮರಾಜದೇವನು ದೇವಾಲಯದಲ್ಲಿ ನಡೆಯುವ ನಾನಾ ಜಯಂತಿಗಳಲ್ಲಿ ಮಾಡುವ ನೈವೇದ್ಯಕ್ಕಾಗಿ ಗ್ರಾಮವನ್ನು ದಾನವಾಗಿ ನೀಡಿರುವನು.[೧೧೩] ತಾಳಪಾಕ ತಿರಮಲಯ್ಯನು ವಿಠಲದೇವರಿಗೆ ಮೂರುಗ್ರಾಮಗಳ ಉತ್ಪತ್ತಿಯನ್ನು ದೇವರ ಕಾರ್ಯಗಳಿಗೆ ನೀಡಿದ್ದನು.[೧೧೪] ವರದಪ್ಪ ನಾಯಕನು ದೇವರ ಭಂಡಾರಕ್ಕೆ ಹತ್ತು ಗಟ್ಟಿವರಹಗಳನ್ನು ಸಮರ್ಪಿಸಿರುವನು.[೧೧೫] ಊಳಿಗದ ಹಿರಿಯ ಮಲ್ಲಪ್ಪನಾಯಕನು ವಿಠ್ಠಲದೇವರ ಅವಸರದ ನೈವೇದ್ಯಕ್ಕಾಗಿ ದೇವರಭಂಡಾರಕ್ಕೆ ೨೦೦ ಗಟ್ಟಿವರಹಗಳನ್ನು ಸಮರ್ಪಿಸಿರುವನು.[೧೧೬] ಕೃಷ್ಣದೇವರಾಯನು ವಿಠಲದೇವರ ಅಮೃತಪಡಿ ನೈವೇದ್ಯಕ್ಕೆ ಎರಡು ಗ್ರಾಮ, ತೋಟ,

ಹತ್ತು ಗ್ರಾಮಗಳ ಸಕಲ ಆದಾಯವನ್ನು ಸಮರ್ಪಿಸಿದುದು ಅಲ್ಲಿನ ಶಾಸನದಲ್ಲಿ ಉಲ್ಲೇಖವಾಗಿದೆ.[೧೧೭] ಈ ದೇವಾಲಯದ ಆದಾಯವು ಅನೇಕ ರೀತಿಯದಾಗಿದ್ದು ಅದರಲ್ಲಿ ಗ್ರಾಮ, ತೆರಿಗೆ, ಧಾನ್ಯ, ಧನ, ಸುವರ್ಣ, ಸಲಕರಣೆ, ಭೂದಾನ ಇತ್ಯಾದಿಗಳಿಂದ ಆದಾಯ ಬರುತ್ತಿದ್ದುದು ಶಾಸನಗಳಿಂದ ತಿಳಿಯುತ್ತದೆ.

ಭಂಡಾರ

ವಿಠ್ಠಲದೇವಾಲಯವು ಆರ್ಥಿಕವಾಗಿ ಶ್ರೀಮಂತ ಸಂಸ್ಥೆಯಾಗಿ ಬೆಳೆದಿದ್ದಿತು. ದಾನಿಗಳು ನೀಡುವ ಆದಾಯವನ್ನು ಸಂಗ್ರಹಿಸಲು ವಿಠಲ ದೇವಾಲಯದಲ್ಲಿ ಶ್ರೀಭಂಡಾರವನ್ನು ಸ್ಥಾಪಿಸಿದ್ದು ದೇವಾಲಯಕ್ಕೆ ಬಂದ ಆದಾಯವನ್ನು ಇದು ನೋಡಿಕೊಳ್ಳುತ್ತಿತ್ತು. ದೇವಾಲಯಕ್ಕೆ ಕೆಲವರು ದಾನನೀಡುವಾಗ ಹಣ, ಭೂಮಿ ಮತ್ತು ಗ್ರಾಮಗಳನ್ನು ದಾನಮಾಡಿ ಅದನ್ನು ಪುದವಟ್ಟಾಗಿ ಪರಿಗಣಿಸಿ ಅದರ ಮೇಲಿನ ಬಡ್ಡಿಯನ್ನು ದೇವರ ಸೇವೆಗಳಿಗೆ ಉಪಯೋಗಿಸಬೇಕೆಂದು ನಿಬಂಧನೆಗಳನ್ನು ವಿಧಿಸುತ್ತಿದ್ದು ಇಂತಹ ಹಣವನ್ನು ದೇವರ ಭಂಡಾರದಲ್ಲಿಟ್ಟು ಅದನ್ನು ಸಾಲವಾಗಿ ನೀಡಿ ಬಂದ ಬಡ್ಡಿಯಿಂದ ಸೇವೆಯನ್ನು ನಡೆಸಲಾಗುತ್ತಿತ್ತು. ಈ ವ್ಯವಹಾರದಲ್ಲಿ ದೇವಾಲಯವು ಇಂದಿನ ಬ್ಯಾಂಕಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಿತು. ಈ ಭಂಡಾರವನ್ನು ನೋಡಿಕೊಳ್ಳಲು ದೇವಾಲಯದಲ್ಲಿ ಭಂಡಾರದವರಿದ್ದರು. ಹಿರಿಯ ತಿಮ್ಮಯ್ಯನು ದೇವರ ಭಂಡಾರವನ್ನು ಮತ್ತು ನಾನಾ ಆಭರಣಗಳು, ಬೀಗಮುದ್ರೆಯನ್ನು ನೋಡಿಕೊಳ್ಳುತ್ತಿದ್ದನು.[೧೧೮] ವರದಪ್ಪನಾಯಕನು ದೇವರಭಂಡಾರಕ್ಕೆ ೧೦ ಗಟ್ಟಿವರಹಗಳನ್ನು ಪುದುವಟ್ಟಾಗಿ ನೀಡಿರುವುದು ಶಾಸನದಿಂದ ತಿಳಿದುಬರುತ್ತದೆ.[೧೧೯] ಈ ರೀತಿಯಾಗಿ ಶ್ರೀಭಂಡಾರಕ್ಕೆ ಬಂದ ಹಣ ಮತ್ತು ಬಡ್ಡಿಯನ್ನು ಮೊದಲೇ ಲೆಕ್ಕಹಾಕಿ ಬಂದಂತಹ ಬಡ್ಡಿಯ ಹಣದಿಂದ ದೇವರ ಕಾರ್ಯಗಳಿಗೆ ಎಷ್ಟೆಷ್ಟು ಯಾವ ಯಾವ ಖರ್ಚುವೆಚ್ಚಗಳಿಗೆ ಉಪಯೋಗಿಸಬೇಕೆಂದು ದಾನಿಗಳೇ ನಿಗದಿಪಡಿಸುತ್ತಿದ್ದರು. ಶ್ರೀಭಂಡಾರದವರು ದೇವಾಲಯದ ಎಲ್ಲ ಸಕಲಭಂಡಾರ ಮತ್ತು ಆದಾಯದ ಮೇಲ್ವಿಚಾರಕರಾಗಿ ಕೆಲಸ ನಿರ್ವಹಿಸುತ್ತಿದ್ದರು.

ಉಗ್ರಾಣ

ವಿಠ್ಠಲದೇವಾಲಯದಲ್ಲಿ ಒಂದು ದೊಡ್ಡ ಉಗ್ರಾಣವಿದ್ದುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಈ ಉಗ್ರಾಣದಲ್ಲಿ ದಾನಿಗಳು ನೀಡುವ ಧಾನ್ಯಗಳನ್ನು ಸಂಗ್ರಹಿಸಲಾಗುತ್ತಿತ್ತು. ಇದೇ ಉಗ್ರಾಣದಿಂದ ದೇವರ ನೈವೇದ್ಯ ಮತ್ತು ಇತರೆ ಸೇವೆಗೆ ಬೇಕಾಗುವ ವಸ್ತುಗಳನ್ನು ಇದರಿಂದ ನೀಡಲಾಗುತ್ತಿದ್ದಿತು. ಉಗ್ರಾಣವು ಅಂದಿನ ದೊಡ್ಡ ದೇವಾಲಯಗಳಲ್ಲಿ ಅವಶ್ಯಕವಾಗಿ ಇದ್ದುದು ಕಂಡುಬರುತ್ತದೆ.[೧೨೦]

ವೆಚ್ಚ

ವಿಠಲದೇವಾಲಯದ ಆದಾಯದಲ್ಲಿ ದೇವಾಲಯದ ಆಡಳಿತ ಕಾರ್ಯಕ್ಕೆ ಮತ್ತು ಪೂಜಾವಿಧಿವಿಧಾನಗಳಿಗೆ ಶ್ರೀಭಂಡಾರದಿಂದ ವೆಚ್ಚಮಾಡಲಾಗುತ್ತಿತ್ತು. ದೇವಾಲಯವು ಉದ್ಯೋಗ ನೀಡುವ ಸಂಸ್ಥೆಯಾಗಿ ಬೆಳೆದು ಸ್ಥಾನಿಕರಿಂದ ಹಿಡಿದು ಅಲ್ಲಿನ ಸಹಾಯಕರಾದ ಪರಿಚಾರಕವರ್ಗದವರಿಗೆ ಸಂಬಳವನ್ನು ಇಂತಿಷ್ಟು ಎಂದು ನೀಡಲಾಗುತ್ತಿದ್ದಿತು. ಅಲ್ಲದೆ, ದಾನಿಗಳು ದೇವಾಲಯಕ್ಕೆ ನೀಡಿರುವ ಭೂಮಿಗಳಲ್ಲಿ ಸೇವಾವರ್ಗದವರಿಗೆ

ಹಂಚುತ್ತಿದ್ದರು. ದೇವಾಲಯದಲ್ಲಿ ನಡೆಯುವ ಪೂಜಾವಿಧಾನಗಳಿಗೆ, ಹಬ್ಬಹರಿದಿನ, ಮಾಸ, ಪಕ್ಷ, ನೈಮಿತ್ತಿಕ, ಸಂವತ್ಸರೋತ್ಸವ, ನೈವೇದ್ಯಕ್ಕಾಗಿ ಹಣವನ್ನು ಹಾಗೂ ಉಗ್ರಾಣದಲ್ಲಿರುವ ಧಾನ್ಯಗಳನ್ನು ವೆಚ್ಚಮಾಡಲಾಗುತ್ತಿತ್ತು. ದೇವಾಲಯದ ವೆಚ್ಚವು ಅಧಿಕವಾದಂತೆಲ್ಲ ದಾನಿಗಳು ಹೇರಳವಾಗಿ ದಾನದತ್ತಿಗಳನ್ನು ನೀಡಿರುವುದು ಕಂಡುಬರುತ್ತದೆ. ವಿಠಲದೇವಾಲಯದಲ್ಲಿ ಶ್ರೀವೈಷ್ಣವರಿಗಾಗಿ ಊಟದ ವ್ಯವಸ್ಥೆಯನ್ನು ದೇವಾಲಯಗಳೇ ಮಾಡುತ್ತಿದ್ದವು. ವಿಠಲ ದೇವಾಲಯದಲ್ಲಿ ಧಾರ್ಮಿಕ ಚಟುವಟಿಕೆಗಳಿಗೆ ಅಲ್ಲದೆ, ಆಡಳಿತದ ವೆಚ್ಚಕ್ಕಾಗಿ ಧನ, ಧಾನ್ಯವನ್ನು ಹೇರಳವಾಗಿ ಖರ್ಚು ಮಾಡಲಾಗುತ್ತಿದ್ದಿತು.

ದೇವಾಲಯದಲ್ಲಿ ಅಂದು ಅನೇಕ ರೀತಿಯ ಧಾರ್ಮಿಕ ಕಾರ್ಯಕ್ರಮಗಳು ಜರುಗುತ್ತಿದ್ದವು. ದಿನಂಪ್ರತಿ ಒಂದಾದರೂ ಕಾರ್ಯಕ್ರಮಗಳು ನಡೆಯುತ್ತಲಿದ್ದವು. ನಿತ್ಯಪೂಜೆ, ನೈಮಿತ್ತಿಕ, ಪಕ್ಷ, ಮಾಸ, ಸಂವತ್ಸರ ರಥೋತ್ಸವಗಳು ಮುಂತಾದವು ಮುಖ್ಯವಾಗಿವೆ. ದಿನನಿತ್ಯದ ಪೂಜೆಯಲ್ಲಿ ದೀಪಹಚ್ಚುವುದು, ಅಭಿಷೇಕ, ಹೂವು ಅರ್ಪಿಸುವುದು, ಅಂಗಭೋಗ, ರಂಗಭೋಗ, ನೈವೇದ್ಯ, ಆರತಿ ಬೆಳಗುವುದು ಮುಂತಾದವುಗಳು ಒಳಗೊಂಡಿದ್ದವು. ವಿಠಲದೇವರ ದೀಪಾರಾಧನೆಗೆ ಕೃಷ್ಣದೇವರಾಯನ ಅರಸಿಯರು ದೇವರ ಆರೋಗಣೆಗೆ ಒಂದು ಚಿನ್ನದ ಹರಿವಾಣ, ಒಂಬತ್ತು ಬೆಳ್ಳಿಯ ನಿರಾಂಜನದ ಹಲಿಗೆ, ಎಂಟು ಹಿರಿಯ ಆರತಿ, ಒಂದು ಪುರುಷಾಮೃಗ ಆರತಿ, ಮೂರು ನಾಗಾರತಿ, ಒಂದು ಧೂಪಾರತಿ, ಎರಡು ಕಬಡಿಬರ್ತಿ, ಒಂದು ಪ್ರತುವೆ ಆರತಿಯನ್ನು ದೇವರಿಗೆ ಸಮರ್ಪಿಸಿದ್ದರು.[೧೨೧] ದೇವರಿಗೆ ಪ್ರತಿನಿತ್ಯ ನಡೆಯುವ ಅಂಗಭೋಗ ಸೇವೆಯಲ್ಲಿ ದೇವರ ವಿಗ್ರಹಕ್ಕೆ ಅಭಿಷೇಕವಾದ ಬಳಿಕ ಸುಗಂಧದ್ರವ್ಯ, ಕರ್ಪೂರ, ಕುಂಕುಮ ಕೇಸರಿ ಇತ್ಯಾದಿಗಳನ್ನು ಲೇಪಿಸುವುದು ಅಂಗಭೋಗ ಸೇವೆಯಾಗಿದೆ. ರಂಗಭೋಗದ ಸೇವೆಯು ವಿಠಲದೇವಾಲಯದಲ್ಲಿ ನಡೆಯುವ ಮಹತ್ವವಾದ ಸೇವೆಯಾಗಿ ಪರಿಗಣಿತವಾಗಿತ್ತು. ದೇವರ ಅಂಗಭೋಗದ ಸೇವೆಯು ಮುಗಿದ ನಂತರ ದೇವರ ವಿಗ್ರಹದ ಎದುರಿನಲ್ಲಿ ನೃತ್ಯ, ಸಂಗೀತ, ಗಾಯನ, ಭಜನೆ ಮುಂತಾದವುಗಳ ಸೇವೆ ಸಲ್ಲಿಸಲಾಗುತ್ತಿತ್ತು. ಇದು ರಂಗಭೋಗದ ಸೇವೆಯಾಗಿ ಪ್ರಸಿದ್ಧಿಹೊಂದಿದೆ. ಈ ಎಲ್ಲಾ ಕಾರ್ಯಕ್ರಮಗಳು ಪ್ರತಿನಿತ್ಯದಲ್ಲೂ ನಡೆಯುತ್ತಿದ್ದವು. ಇದೇ ಸಂದರ್ಭದಲ್ಲಿ ಪವಿತ್ರ ಗ್ರಂಥಗಳನ್ನು ಪಠಣಮಾಡಲಾಗುತ್ತಿತ್ತು. ಪೂಜೆಯ ನಂತರ ಧ್ವಜಾರೋಹಣ ಮಾಡಿ ನೈವೇದ್ಯವನ್ನು ಮಾಡುತ್ತಿದ್ದರು. ದೇವರ ನೈವೇದ್ಯಕ್ಕೆ ಅಕ್ಕಿ, ಹೆಸರು, ಉದ್ದು, ಹೆಸರುಬೇಳೆ, ಕಡಲೆಬೇಳೆ, ಉಪ್ಪು, ಮೆಣಸು, ಸಂಬಾರಮಸಾಲೆ, ಬೆಲ್ಲ, ಸಕ್ಕರೆ, ಜೀರಿಗೆ ಮುಂತಾದ ಪಡಿತರಗಳನ್ನು ಉಪಯೋಗಿಸಲಾಗುತ್ತಿದ್ದಲ್ಲದೆ, ತುಪ್ಪ, ಮೊಸರು, ಹಾಲು, ಬೆಣ್ಣೆಗಳನ್ನು ಉಪಯೋಗಿಸುತ್ತಿದ್ದರು. ನೈವೇದ್ಯ ಭಕ್ಷ್ಯಗಳಲ್ಲಿ ಕಜ್ಜಾಯ, ದೋಸೆ, ಮೊಸರನ್ನ, ಸುಖ ನೈವೇದ್ಯವನ್ನು ಚಿನ್ನದ ಹರಿವಾಣದಲ್ಲಿಟ್ಟು ಅರ್ಪಿಸಲಾಗುತ್ತಿತ್ತು. ಅಲ್ಲದೆ, ಎಳೆನೀರು, ಬಾಳೆಹಣ್ಣು, ಅಡಿಕೆ, ವೀಳ್ಯದೆಲೆ ಇತ್ಯಾದಿ ಫಲನೈವೇದ್ಯವನ್ನು ಬಳಸುತ್ತಿದ್ದರು.[೧೨೨] ದೇವಾಲಯದಲ್ಲಿ ನಡೆಯುವ ಪುಣ್ಯತಿಥಿಗಳಲ್ಲಿ ಮಹಾಪೂಜೆ ಮತ್ತು ಮಹಾನೈವೇದ್ಯ ಸೇವೆಯು ಪ್ರಮುಖ ಸೇವೆಯಾಗಿ ಪರಿಗಣಿಸಲ್ಪಟ್ಟಿತ್ತು.[೧೨೩]


ಸಾಂಸ್ಕೃತಿಕ ಸ್ಥಿತಿ

ವಿಠಲದೇವಾಲಯ ಸಾಂಸ್ಕೃತಿಕಕೇಂದ್ರವಾಗಿ ಪ್ರಸಿದ್ಧಿಯನ್ನು ಹೊಂದಿದ್ದಿತು. ಪಕ್ಷ, ಮಾಸೋತ್ಸವ, ಸಂವತ್ಸರೋತ್ಸವ, ಮಹಾಕಾರ್ತಿಕ ದೀಪೋತ್ಸವ, ಪಂಚಪರ್ವ, ವೈಶಾಖ, ಮಾರ್ಗಶಿರ ಮತ್ತು ಪಾಲ್ಗುಣ

ಮಾಸಗಳಲ್ಲಿ ನಡೆಯುವ ರಥೋತ್ಸವಗಳು ಸಂಸ್ಕೃತಿಯ ಪ್ರತೀಕಗಳಾಗಿದ್ದವು. ವಿಠಲದೇವಾಲಯದ ಉಯ್ಯಾಲೆ ಮಂಟಪವನ್ನು ಕಟ್ಟಿಸಿದ ಉದಯಗಿರಿ ತಿಮ್ಮರಾಜಯ ದೇವನು ತಾನು ಕಟ್ಟಿಸಿದ ಮಂಟಪದಲ್ಲಿ ಉಯ್ಯಾಲೆತಿರುನಾಳು, ಕೊಡೆತಿರುನಾಳು, ತಿರುವಧ್ಯಾನ ತಿರುನಾಳು, ತೇರು ತಿರುನಾಳಧ್ವಜಾರೋಹಣ, ಶ್ರೀಪುಶ್ಪಯಾಗ, ಶ್ರೀರಾಮ, ನಾರಸಿಂಹ, ಕೃಷ್ಣ, ವಾಮನ ಜಯಂತಿಗಳನ್ನು ನಡೆಯುವ ಏರ್ಪಾಡನ್ನು ಮಾಡಿ ಗ್ರಾಮವನ್ನು ದಾನವಾಗಿ ನೀಡಿದ್ದನು.[೧೫] ವಿಠಲದೇವಾಲಯದ ಮುಂದೆ ಮೂರುದಿಕ್ಕಿಗೆ ರಥಬೀದಿಯಿದ್ದು ಪೂರ್ವದ ರಥಬೀದಿಯು ಪ್ರಮುಖ ಉತ್ಸವ ಬೀದಿಯಾಗಿದ್ದಿತು. ಇದು ದೇವಾಲಯದ ಪೂರ್ವಗೋಪುರದಿಂದ ಪರಾಂಕುಶಮಂಟಪದವರೆಗೆ ವಿಸ್ತರಿಸಿದೆ. ರಥೋತ್ಸವವನ್ನು ಸಂವತ್ಸರ ಉತ್ಸವವಾಗಿ ನಡೆಸಲಾಗುತ್ತಿತ್ತು. ರಥೋತ್ಸವದ ತೇರಿನಲ್ಲಿ ಉತ್ಸವಮೂರ್ತಿಯನ್ನು ಇಟ್ಟುಕೊಂಡು ರಥಬೀದಿಯಲ್ಲಿ ಮೆರವಣಿಗೆ ನಡೆಸಲಾಗುತ್ತಿತ್ತು. ಈ ರಥೋತ್ಸವದಲ್ಲಿ ದೇವಾಲಯದ ವಾದ್ಯದವರು, ಮೇಳದವರು ಇದರಲ್ಲಿ ಗಂಡುಮೇಳ ಹೆಣ್ಣುಮೇಳಗಳು ಭಾಗವಹಿಸುತ್ತಿದ್ದುವು. ಅಲ್ಲದೆ, ಸತಿಗೆ ಪತಾಕಿಗಳು ತೇರಸಿಂಗಾರಕ್ಕೆ ಸೀರೆ ಮತ್ತು ಕರಿಮಣಿಗಳನ್ನು ಕಟ್ಟಲಾಗುತ್ತಿತ್ತು.[೧೬]

ವಿಠ್ಠಲದೇವರ ರಥೋತ್ಸವವು ತೇರುಬೀದಿಯ ಕೊನೆಯಲ್ಲಿರುವ ಪರಾಂಕುಶಮಂಟಪದವರೆಗೆ ಜರುಗುತ್ತಿದ್ದಿತು. ಈ ಪರಾಂಕುಶಮಂಟಪದ ಮುಂದೆ ಚಪ್ಪರಹಾಕಿ ಮಂಟಪವನ್ನು ಸಿಂಗರಿಸಲಾಗುತ್ತಿತ್ತು. ವಿಠಲದೇವರನ್ನು ಪರಾಂಕುಶಮಂಟಪಕ್ಕೆ ವರ್ಷದಲ್ಲಿ ೧೪೨ ದಿನಗಳಲ್ಲಿ ತೆಗೆದುಕೊಂಡು ಹೋಗಲಾಗುತ್ತಿತ್ತು.[೧೭] ರಥೋತ್ಸವದ ವರ್ಣನೆಯು ನ್ಯೂನಿಜ್, ಪಾಯಸ್, ಬಾರ್ಬೋಸ ಮುಂತಾದ ವಿದೇಶಿಪ್ರವಾಸಿಗರ ಕಥನದಲ್ಲಿ ವಿವರವಾಗಿ ಚಿತ್ರಣಗೊಂಡಿದೆ. ರಥೋತ್ಸವದಲ್ಲಿ ಪ್ರಮುಖ ಸೇವೆಯಾಗಿ ಸಿಡಿಹಾಡುವುದು ಒಂದು ಭಕ್ತಿಯ ಉನ್ನತ ಸೇವೆಯಾಗಿ ಪರಿಗಣಿಸಲ್ಪಟ್ಟಿದ್ದಿತು. ವಿಠಲದೇವಾಲಯಕ್ಕೆ ಸಂಬಂಧಿಸಿದ ಶಾಸನಗಳಲ್ಲಿ ವಿಜಯನಗರದ ವೈಭಯುತ ಕಾಲದಲ್ಲಿ ಪೂಜೆ, ಉತ್ಸವ, ರಥೋತ್ಸವಗಳು ವೈಭವಯುತವಾಗಿ ನಡೆಯುತ್ತಿದ್ದವು. ಈ ಉತ್ಸವಗಳೆಲ್ಲವೂ ರಂಗಮಂಟಪ, ಮಹಾಮಂಟಪ, ಸಭಾಮಂಟಪ, ಉಯ್ಯಾಲೆಮಂಟಪ, ಪರಾಂಕುಶ ಮಂಟಪಗಳಲ್ಲಿ ನಡೆಯುತ್ತಿದ್ದವು.

ಒಟ್ಟಿನಲ್ಲಿ ವಿಠಲದೇವಾಲಯವು ವಾಸ್ತುಶಿಲ್ಪ, ಶಿಲ್ಪಕಲೆಗಳಿಗೆ ಪ್ರಸಿದ್ಧಿಯನ್ನು ಹೊಂದಿ, ದೇವಾಲಯದ ಆಡಳಿತದಲ್ಲಿ ಸಮಾಜದ ಎಲ್ಲಾ ವರ್ಗದವರು ಭಾಗವಹಿಸುವ ಕೇಂದ್ರವಾಗಿತ್ತು. ಇದರಲ್ಲಿ ಬ್ರಾಹ್ಮಣರು ಅರ್ಚನಾವೃತ್ತಿಯನ್ನು ನಡೆಸುತ್ತಿದ್ದರೆ, ಉಳಿದ ವರ್ಗದವರು ಇನ್ನುಳಿದ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ದೇವಾಲಯವು ಅಂದು ಆರ್ಥಿಕವಾಗಿ ಪ್ರಬಲವಾಗಿರುತ್ತಿದ್ದರಿಂದ ಆದಾಯ ಮತ್ತು ವೆಚ್ಚಗಳು ಅಧಿಕವಾಗಿದ್ದವು. ಅಂದು ದೇವಾಲಯದಲ್ಲಿ ನಡೆಯುತ್ತಿದ್ದ ಧಾರ್ಮಿಕ ಚಟುವಟಿಕೆಗಳು ಮತ್ತು ಸಾಂಸ್ಕೃತಿಕ ಉತ್ಸವಗಳು ತುಂಬಾ ಪ್ರಸಿದ್ಧಿಯನ್ನು ಪಡೆದು ನಾಡಿನ ಎಲ್ಲಾ ಜನರು ಸೇರುವ ತಾಣವಾಗಿತ್ತು. ವಿಠ್ಠಲ ದೇವಾಲಯವು ಅಂದಿನ ಅಗ್ರಮಾನ್ಯ ದೇವಾಲಯವಾಗಿ ರಾಜಧಾನಿಯಲ್ಲಿ ಪ್ರಸಿದ್ಧಿ ಪಡೆದಿದ್ದಿತು.



ನಕ್ಷೆ- ೨೨ ವಿಠಲ ದೇವಾಲಯದ ತಲನಕ್ಷೆ





ಭಾ ಚಿ ೬೪. ವಿಠಲ ದೇವಾಲಯದ ಸಮಗ್ರ ಚಿತ್ರಣ, ಹಂಪಿ



ಭಾ ಚಿ ೬೫. ನವರಂಗ ಸ್ತಂಭ, ವಿಠಲ ದೇವಾಲಯ, ಹಂಪಿ



ಭಾ ಚಿ ೬೬. ದ್ವಾರಪಾಲಕ, ವಿಠಲ ದೇವಾಲಯ, ಹಂಪಿ




ಛಾ ಚಿ ೬೭. ಸಿಂಹವ್ಯಾಳಿ, ವಿಠಲ ದೇವಾಲಯ, ಹಂಪಿ



ಛಾ ಚಿ ೬೮. ಮಹಾಮಂಟಪ, ವಿಠಲ ದೇವಾಲಯ, ಹಂಪಿ



ಛಾ ಚಿ ೭೯. ಸಂಯೋಗ ಸ್ತಂಭ, ವಿಠಲ ದೇವಾಲಯ, ಹಂಪಿ



ಛಾ ಚಿ ೭೦. ಮಹಾಮಂಟಪದ ಅಧಿಷ್ಠಾನ, ವಿಠಲ ದೇವಾಲಯ, ಹಂಪಿ



ಭಾ ಚಿ ೭೧. ತ್ರಿವಿಕ್ರಮ, ವಿಠಲ ದೇವಾಲಯ, ಹಂಪಿ




ಭಾ ಚಿ ೭೨. ವಾದ್ಯಗಾರಶಿಲ್ಪ, ವಿಠಲ ದೇವಾಲಯ, ಹಂಪಿ



ಭಾ ಚಿ ೭೩. ಗಜಸೋಪಾನ, ವಿಠಲ ದೇವಾಲಯ, ಹಂಪಿ










ಛಾ ಚಿ ೨೪. ವಿಠಲ ದೇವಾಲಯದ ಹಿಂಭಾಗ, ಹಂಪಿ



ಛಾ ಚಿ ೨೫. ಕಲ್ಲಿನರಥ (ಗರುಡಮಂಟಪ), ವಿಠಲ ದೇವಾಲಯ, ಹಂಪಿ



ಛಾ ಚಿ ೭೬. ನೂರುಕಾಲು ಮಂಟಪ, ವಿಠಲ ದೇವಾಲಯ, ಹಂಪಿ



ಛಾ ಚಿ ೭೭. ಕಲ್ಯಾಣ ಮಂಟಪ, ವಿಠಲ ದೇವಾಲಯ, ಹಂಪಿ



ಛಾ ಚಿ ೭೮. ಸಾಶ್ರಯಸ್ತಂಭ, ಕಲ್ಯಾಣ ಮಂಟಪ



ಛಾ ಚಿ ೭೯. ಕೋಷ್ಠಕಸ್ತಂಭ, ಕಲ್ಯಾಣ ಮಂಟಪ



ಛಾ ಚಿ ೮೦. ಪುಷ್ಕರಣಿ, ವಿಠಲ ದೇವಾಲಯ, ಹಂಪಿ









ಭಾ ಚಿ ೮೧. ಪರಾಂಕುಶ ಮಂಟಪ, ವಿಠಲ ದೇವಾಲಯ, ಹಂಪಿ



ಭಾ ಚಿ ೮೨. ವಿಠಲ ಬಜಾರು ಸಮಗ್ರ ನೋಟ, ಹಂಪಿ

೩. ವೆಂಕಟೇಶ್ವರ ದೇವಾಲಯ, ತಿರುಮಲ


ಈ ದೇವಾಲಯವು ಆಂದ್ರಪ್ರದೇಶದ ಚಿತ್ತೂರು ಜಿಲ್ಲೆಯ ತಿರುಮಲದಲ್ಲಿ ಬರುವ ಪುರಾಣ ಪ್ರಸಿದ್ಧ ಕ್ಷೇತ್ರವಾಗಿದೆ. ಇದು ೭-ಲನೆಯ ಶತಮಾನದಲ್ಲೇ ಮೂಲದೇವಾಲಯವು ನಿರ್ಮಾಣಗೊಂಡಿದ್ದರೂ ದಕ್ಷಿಣ ಭಾರತವನ್ನು ಆಳಿದ ಹಲವಾರು ಅರಸು ಮನೆತನಗಳ ಸುಪರ್ದಿಗೆ ಒಳಪಟ್ಟಂತ ದೇವಾಲಯವಾಗಿತ್ತು. ಆಳರಸರ ಕೃಪೆಗೆ ಒಳಗಾಗಿ ಈ ದೇವಾಲಯವು ಹಂತಹಂತವಾಗಿ ಜೀರ್ಣೋದ್ಧಾರವನ್ನು ಪಡೆಯುತ್ತ ವಿಸ್ತಾರವಾಗಿ ರೂಪುಗೊಂಡ ದೇವಾಲಯವಾಗಿದೆ. ಕ್ರಿ.ಶ.೧೪ - ೧೬ನೆಯ ಶತಮಾನದಲ್ಲಿ ಆಳಿದ ವಿಜಯನಗರ ಸಾಮ್ರಾಜ್ಯದ ಅರಸರ ಆಡಳಿತಕ್ಕೆ ಒಳಪಟ್ಟು ಈ ದೇವಾಲಯವು ಅನೇಕ ದಾನದತ್ತಿಗಳನ್ನು ಪಡೆದು ಜೀರ್ಣೋದ್ಧಾರಗೊಂಡಿತು. ತುಳುವ ವಂಶದ ಕೃಷ್ಣದೇವರಾಯನು ತನ್ನ ಆಳ್ವಿಕೆಯಲ್ಲಿ ಸುಮಾರು ಏಳುಸಾರಿ ತಿರುಮಲೆ ಯಾತ್ರೆಯನ್ನು ಕೈಗೊಂಡು ಅನೇಕ ರೀತಿಯ ದಾನದತ್ತಿಗಳನ್ನು ನೀಡಿದುದಲ್ಲದೆ ದೇವಾಲಯದ ಪೂರ್ವದಿಕ್ಕಿನ ರಾಯಗೋಪುರವನ್ನು ಕಟ್ಟಿಸಿದ್ದನು.[೨೨] ಇದು ಅಧಿಷ್ಠಾನ, ಭಿತ್ತಿ, ಪ್ರಸ್ತರ, ಐದುತಲಗಳ ಗೋಪುರವನ್ನು ಒಳಗೊಂಡು ಮೇಲೆ ಶಾಲಾಶಿಖರವನ್ನು ಹೊಂದಿದೆ (ಛಾಯಾಚಿತ್ರ - ೮೩). ಅಧಿಷ್ಠಾನದಲ್ಲಿ ಕುಡ್ಯ ಸ್ತಂಭಗಳು ಮೇಲೆ ಕಪೋತ ನಂತರ ಪದ್ಮ, ಕುಮುದ ಇನ್ನಿತರ ಭಾಗಗಳು ಭಿತ್ತಿಯಲ್ಲಿ ಕಂಡುಬರುತ್ತವೆ. ಅಲ್ಲದೆ, ಕುಡ್ಯಸ್ತಂಭಗಳನ್ನು ಭಿತ್ತಿಯಲ್ಲಿ ಅಳವಡಿಸಿರುವರು. ಮೇಲೆ ಕಪೋತವು ಪ್ರಸ್ತರದಲ್ಲಿದ್ದು ನಾಸಿಗಳನ್ನು ಹೊಂದಿದೆ. ಮೇಲಿನ ಐದು ತಲಗಳ ಗೋಪುರವನ್ನು ಇಟ್ಟಿಗೆ ಗಾರೆಗಚ್ಚಿನಿಂದ ನಿರ್ಮಿಸಿ ಇದರಲ್ಲಿ, ಕುಡ್ಯಸ್ತಂಭ, ಕರ್ಣಕೂಟ, ಕೋಷ್ಠಕ, ಶಾಲಾ, ಕಪೋತ, ಗಾರೆಯಶಿಲ್ಪಗಳಿಂದ ಅಲಂಕರಿಸಿದ್ದಾರೆ. ಈ ಗಾರೆಯ ಶಿಲ್ಪಗಳಲ್ಲಿ ವಿಷ್ಣುವಿನ ಅವತಾರಕ್ಕೆ ಸಂಬಂಧಿಸಿದ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ದ್ವಾರಪಾಲಕರು, ಸ್ತ್ರೀಯರು, ವಾದ್ಯಗಾರರು, ನಾಟ್ಯಗಾರರು ಇನ್ನಿತರ ಗಾರೆಯ ಶಿಲ್ಪಗಳನ್ನು ರಚಿಸಿದ್ದಾರೆ. ಈ ಗೋಪುರವು ಮೇಲೆ ಹೋದಂತೆಲ್ಲಾ ಚಿಕ್ಕದಾಗಿ ಶಾಲಾದಲ್ಲಿ ಕೊನೆಗೊಂಡಿದೆ. ಶಾಲಾದ ಮೇಲೆ ನಾಸಿಗಳನ್ನು ಅಲಂಕರಿಸಿ ಏಳು ಬಂಗಾರದ ಕಳಸಗಳನ್ನು ಇಡಲಾಗಿದೆ. ಶಾಲಾದ ಪಾರ್ಶ್ವದಲ್ಲಿ ಪ್ರಭಾವಳಿಯಿದ್ದು ಕೀರ್ತಿಮುಖವನ್ನು ಮಧ್ಯದಲ್ಲಿ ರಚಿಸಿರುವರು. ಇಂದು ಸುರಕ್ಷಿತವಾಗಿ ಈ ದ್ವಾರಗೋಪುರವು ಉಳಿದುಕೊಂಡಿದೆ. ಇದಲ್ಲದೆ, ಕೃಷ್ಣದೇವರಾಯನು ವೆಂಕಟೇಶ್ವರ ದೇವಾಲಯದ ಗರ್ಭಗುಡಿಯ ಮೇಲಿರುವ ಪುಣ್ಯಕೋಟಿ ವಿಮಾನಕ್ಕೆ ಬಂಗಾರದ ಮೆರಗನ್ನು ಹಾಕಿಸಲೆಂದು ೩೦,೦೦೦ ಗಟ್ಟಿಬಂಗಾರದ ವರಹಗಳ ಹಣವನ್ನು ಸಮರ್ಪಿಸಿದನು.[೨೩] ಈ ವಿಮಾನವು ಈ ಮೊದಲೇ ನಾಲ್ಕು ಸಾರಿ ಬಂಗಾರದ ಲೇಪನವನ್ನು ಹೊಂದಿದ್ದಿತು (ಛಾಯಾಚಿತ್ರ - ೮೪). ತಿರುಮಲೆಯ ವೆಂಕಟೇಶ್ವರ ದೇವಾಲಯಕ್ಕೆ ರಾಯನು ತನ್ನ ಭಕ್ತಿಯ ಸೇವೆಗೆ ಸದಾ ಸಿದ್ಧನಿರುವಂತೆ ತನ್ನ ಮತ್ತು ಇಬ್ಬರು ಪತ್ನಿಯರ ತಾಮ್ರದ ಮೂರ್ತಿಗಳನ್ನು ಅರ್ಪಿಸಿದ್ದನು. ಇವುಗಳು ಇಂದಿಗೂ ಕೃಷ್ಣದೇವರಾಯನ ಹೆಸರಿರುವ ಮಂಟಪದಲ್ಲಿ ಕಂಡುಬರುತ್ತವೆ.

೪. ವರದರಾಜ ದೇವಾಲಯ, ಕಂಚಿ

ತಮಿಳುನಾಡಿನಲ್ಲಿರುವ ಈ ದೇವಾಲಯವು ಐತಿಹಾಸಿಕವಾಗಿ ಸು. ೮ - ೯ನೇ ಶತಮಾನದಲ್ಲಿ ನಿರ್ಮಾಣಗೊಂಡಂತ ದೇವಾಲಯವಾಗಿದೆ. ಈ ದೇವಾಲಯವು ಮುಂದೆ ವಿಜಯನಗರ ಸಾಮ್ರಾಜ್ಯದ ಸುಪರ್ದಿಗೆ



ಭಾ ಚಿ ೮೩. ದ್ವಾರಗೋಪುರ
ವೆಂಕಟೇಶ್ವರ ದೇವಾಲಯ, ತಿರುಮಲ



ಭಾ ಚಿ ೮೪. ಬಂಗಾರದ ಶಿಖರ
ವೆಂಕಟೇಶ್ವರ ದೇವಾಲಯ, ತಿರುಮಲ

ಒಳಪಟ್ಟು ದಾನದತ್ತಿಯನ್ನು ಪಡೆಯುವುದರ ಮೂಲಕ ಜೀರ್ಣೋದ್ಧಾರವನ್ನು ಹೊಂದಿತು. ಕೃಷ್ಣದೇವರಾಯನು ತನ್ನ ಆಳ್ವಿಕೆಯಲ್ಲಿ ವರದರಾಜಸ್ವಾಮಿ ದೇವಾಲಯದ ಪುಣ್ಯಕೋಟಿ ವಿಮಾನಕ್ಕೆ ಲೋವೆಯಿಂದ ಕಳಸದವರೆಗೂ ಅಪರಂಜಿ ಚಿನ್ನದಲ್ಲಿ ಹೊದಿಕೆ ಹಾಕಿಸಿದುದು ಶಾಸನದಿಂದ ತಿಳಿದುಬರುತ್ತದೆ.[೨೯]

೫. ಶ್ರೀರಂಗನಾಥ ದೇವಾಲಯ, ಶ್ರೀರಂಗಂ

ಶ್ರೀರಂಗನಾಥ ದೇವಾಲಯವು ಪ್ರಸಿದ್ಧ ವೈಷ್ಣವಕೇಂದ್ರವಾಗಿ ದಕ್ಷಿಣಭಾರತದಲ್ಲಿ ಪ್ರಸಿದ್ಧಿಯನ್ನು ಹೊಂದಿದೆ. ಈ ದೇವಾಲಯವು ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಅನೇಕ ದಾನದತ್ತಿಗಳನ್ನು ಪಡೆದುಕೊಂಡಿದ್ದಿತ್ತು. ಶ್ರೀರಂಗನಾಥದೇವರ ಮುಖಮಂಟಪದ ಬಾಗಿಲನ್ನು ರಾಯನು ಕ್ರಿ.ಶ. ೧೫೨೪ರಲ್ಲಿ ಬಂಗಾರದ ತಗಡುಗಳಿಂದ ಅಲಂಕರಿಸಿರುವುದು ಶಾಸನದಿಂದ ತಿಳಿಯುತ್ತದೆ.[೩೦] ಅಲ್ಲದೆ ರಂಗನಾಥನ ದೇವಾಲಯದ ದಕ್ಷಿಣದಿಕ್ಕಿನ ಏಳನೆಯ ದ್ವಾರಗೋಪುರವನ್ನು ರಾಯನು ನಿರ್ಮಿಸಿದ್ದನು.[೩೧] ಈ ದ್ವಾರಗೋಪುರವು ಹನ್ನೊಂದು ತಲಗಳನ್ನು ಒಳಗೊಂಡ ಬೃಹತ್ ಪ್ರಮಾಣದ ರಾಯ ಗೋಪುರವಾಗಿದೆ (ಛಾಯಾಚಿತ್ರ - ೮೫). ಕೆಳಹಂತವು ಕಲ್ಲಿನಿಂದ ನಿರ್ಮಿತವಾಗಿದ್ದು ಇದರಲ್ಲಿ ಅಧಿಷ್ಠಾನ ಮತ್ತು ಭಿತ್ತಿ, ಪ್ರಸ್ತರವನ್ನು ಹೊಂದಿದೆ. ಭಿತ್ತಿಯಲ್ಲಿ ಕುಂಭಪಂಜರ ಕೋಷ್ಠಕ, ಶಾಲಾವನ್ನು ಅಲಂಕರಿಸಿರುವರು. ಪ್ರಸ್ತರದಲ್ಲಿ ಕಪೋತವಿದ್ದು ನಾಸಿಗಳನ್ನು ಅಳವಡಿಸಿದ್ದಾರೆ. ಇವುಗಳನ್ನು ಕಪೋತನಾಸಿಗಳೆಂದು ಕರೆಯಬಹುದು. ಹನ್ನೊಂದು ತಲಗಳು ಮೇಲೆ ಹೋದಂತೆಲ್ಲಾ ಚಿಕ್ಕದಾಗುತ್ತಾ ಶಾಲಾದಲ್ಲಿ ಕೊನೆಗೊಳ್ಳುತ್ತವೆ. ತಲಗಳ ಹದಿಬದಿಯಲ್ಲಿ ದ್ವಾರಪಾಲಕರ ಗಾರೆಯಶಿಲ್ಪಗಳಿವೆ. ಪ್ರತಿಯೊಂದು ತಲಗಳ ಮೇಲೆ ಪ್ರಭಾವಳಿ ಮತ್ತು ಕೀರ್ತಿಮುಖಗಳನ್ನು ಅಳವಡಿಸಿದ್ದಾರೆ. ಮಧ್ಯದಲ್ಲಿ ಶಾಲಾಗಳಿದ್ದು, ಪ್ರತಿಯೊಂದು ಹಂತದಲ್ಲಿ ಕುಡ್ಯಸ್ತಂಭಗಳು, ಕೋಷ್ಠಕ, ಕರ್ಣಕೂಟ, ನಾಸಿ, ಶಾಲಾ, ಪ್ರಭಾವಳಿಗಳನ್ನು ರಚಿಸಿರುವರು. ಮೇಲಿನ ಶಾಲಾದಲ್ಲಿ ೧೩ ಕಳಸಗಳನ್ನು ಇಟ್ಟಿದ್ದಾರೆ. ಪಾರ್ಶ್ವದಲ್ಲಿ ಪ್ರಭಾವಳಿಯಿದ್ದು ಮಧ್ಯದಲ್ಲಿ ಕೀರ್ತಿಮುಖಗಳಿವೆ. ಇಂದು ಆಧುನಿಕವಾಗಿ ಬಣ್ಣವನ್ನು ಇಡೀ ಗೋಪುರಕ್ಕೆ ಬಳಿದಿರುವರು. ಒಟ್ಟಾರೆಯಾಗಿ ಈ ದ್ವಾರಗೋಪುರವು ಸುರಕ್ಷಿತವಾಗಿ ಉಳಿದಿದೆ. ಕೃಷ್ಣದೇವರಾಯನು ತನ್ನ ಕಾಲದಲ್ಲಿ ಶ್ರೀರಂಗನಾಥನ ದೇವಾಲಯದ ರಂಗವಿಲಾಸ ಮಂಟಪವನ್ನು ನಿರ್ಮಿಸಿದನು.[೩೧A] ಅಲ್ಲದೆ, ರಾಯನ ಕಾಲದಲ್ಲಿ ಅನೇಕ ರೀತಿಯ ಗ್ರಾಮದತ್ತಿಯನ್ನು ಮತ್ತು ಪುದುವಟ್ಟು ಹಣವನ್ನು ಯಥೇಚ್ಛವಾಗಿ ದೇವಾಲಯವು ಪಡೆದದು ಅಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ.[೩೧B] ದೇವಾಲಯದ ನೈವೇದ್ಯಕ್ಕಾಗಿ ಕ್ರಿ.ಶ. ೧೫೨೪ರಲ್ಲಿ ತನ್ನೆವನ್ ಬ್ರಹ್ಮರಯ್ಯರ್‌ನು ೧೭೪ ಹಸುಗಳನ್ನು ದಾನವಾಗಿ ನೀಡಿದುದು ಅಲ್ಲೇ ಇರುವ ಶಾಸನಗಳಲ್ಲಿ ಉಲ್ಲೇಖವಾಗಿದೆ.[೩೧C] ಈ ದೇವಾಲಯವು ಅಂದಿನ ವೈಷ್ಣವಧರ್ಮದ ಮುಖ್ಯ ಕೇಂದ್ರವಾಗಿದ್ದುದರಿಂದ ವಿಜಯನಗರದ ಅರಸರು ಭಕ್ತಿಯಿಂದ ನಡೆದುಕೊಳ್ಳುತ್ತಿರುವ ಪುಣ್ಯಕ್ಷೇತ್ರವಾಗಿದ್ದಿತು.

೬. ಚನ್ನಕೇಶವ ದೇವಾಲಯ, ಬೇಲೂರು

ಬೇಲೂರಿನ ಚನ್ನಕೇಶವ ದೇವಾಲಯವು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದರೂ ಮುಂದೆ ಬಂದಂತಹ ವಿಜಯನಗರ ಸಾಮ್ರಾಜ್ಯದ ಸುಪರ್ದಿಗೆ ಒಳಪಟ್ಟ ಪ್ರದೇಶದಲ್ಲಿದ್ದಿತು. ಈ ದೇವಾಲಯವು ವಿಷ್ಣುವರ್ಧನನಿಂದ

ನಿರ್ಮಿಸಲ್ಪಟ್ಟು ಹಂತ ಹಂತವಾಗಿ ಜೀರ್ಣೋದ್ಧಾರಪಡೆಯುತ್ತ ಬಂದಿರುವುದು ಕಟ್ಟಡಗಳ ಶೈಲಿಯಿಂದ ಕಂಡುಬರುವುದು. ಅದೇ ರೀತಿಯಾಗಿ ವಿಜಯನಗರದ ಆಳ್ವಿಕೆಯಲ್ಲಿ ನಿರ್ಮಿಸಲಾದ ಗೋಪುರ ಮತ್ತು ತೆಪ್ಪಕೊಳ ಹಾಗೂ ವಸಂತ ಮಂಟಪಭಾಗಗಳು ಮುಖ್ಯವಾಗಿವೆ. ಶ್ರೀಕೃಷ್ಣದೇವರಾಯನು ಆಳ್ವಿಕೆ ಮಾಡುತ್ತಿದ್ದಾಗ ರಾಯರ ಊಳಿಗದ ಚಿಕ್ಕಣ್ಣನಾಯಕರ ಮಕ್ಕಳಾದ ಬಸವಪ್ಪನಾಯಕರು ತಮ್ಮ ಸೇವೆಗೆ ಸಮರ್ಪಿಸಿದ ಗ್ರಾಮಗಳನ್ನು ಬೇಲೂರಿನ ಚನ್ನಕೇಶವಸ್ವಾಮಿ ದೇವಾಲಯದ ಪೂಜೆ ಹಾಗೂ ಉತ್ಸವಕ್ಕಾಗಿ ದತ್ತಿ ನೀಡಿದರು. ಇದಕ್ಕಾಗಿ ತಮ್ಮ ತಂದೆ ಜಕ್ಕಣ್ಣನಾಯಕರಿಗೆ ತಾಯಿ ತಿಪ್ಪಮ್ಮನವರಿಗೆ ಹಾಗೂ ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲೆಂದು ವಿಷ್ಣುಸಮುದ್ರದ (ಕೆರೆ) ಪಕ್ಕದಲ್ಲಿ ತೆಪ್ಪಕೊಳವನ್ನು ಕಟ್ಟಿಸಿ ವಸಂತಮಂಟಪವನ್ನು ಸಹ ಕಟ್ಟಿಸಿದನು. ಫಾಲ್ಗುಣ ಶು. ೧೦ ದಿನದಲ್ಲಿ ತೆಪ್ಪತಿರುನಾಳ ಉತ್ಸವವನ್ನು ನಡೆಸಲು ತಮ್ಮ ಸೇವೆಯನ್ನು ಸಮರ್ಪಿಸಿದರು. ಸೇವೆಯಲ್ಲಿ ನಾರಾಯಣಪುರ, ಹಲುಮಿರಿಯ ಗ್ರಾಮಗಳನ್ನು ಸಕಲ ಆದಾಯ ಹಾಗೂ ಬೇಲೂರಿನ ತಳವಾರಿಕೆಯನ್ನು ನೀಡಿದರು.[೧೫೨]

ಮುಖ್ಯದೇವಾಲಯದ ಬಲಗಡೆಯ ವಿಷ್ಣುಸಮುದ್ರದ ಪಕ್ಕದಲ್ಲಿ ಕಟ್ಟಿಸಿದಂತ ತೆಪ್ಪಕೊಳವು ಚೌಕಾಕಾರವಾಗಿದ್ದು, ಸುತ್ತಲೂ ಕಲ್ಲಿನ ಮೆಟ್ಟಿಲುಗಳನ್ನು ಜೋಡಿಸಿರುವರು. ಕೊಳದ ಮಧ್ಯಭಾಗದಲ್ಲಿ ಸರಳ ರೀತಿಯ ಅಧಿಷ್ಠಾನದ ಮೇಲೆ ಸುಮಾರು ನಾಲ್ಕು ಅಡಿಗಳು ಎತ್ತರವಿರುವ ನಾಲ್ಕು ಕಂಬಗಳ ಮಂಟಪವಿದೆ (ಛಾಯಾಚಿತ್ರ ೮೬). ಈ ಕಂಬಗಳು ಪೀಠಗಳನ್ನು ಹೊಂದಿದ್ದು ಎರಡು ಮಧ್ಯಪಟ್ಟಿಗಳಿವೆ. ಇವು ಚೌಕಾಕಾರವಾಗಿ ನಾಲ್ಕು ಮುಖಗಳನ್ನು ಹೊಂದಿವೆ. ಮಧ್ಯದಲ್ಲಿ ಅಷ್ಟಮುಖದ ಚತುರಶ್ರವಿದೆ. ಇದರ ಮೇಲೆ ದುಂಡಾಕಾರದ ಫಲಕವಿದ್ದು ಸರಳ ರೀತಿಯ ಬೋಧಿಗೆಯನ್ನು ಹೊಂದಿವೆ. ಪ್ರಸ್ತರದಲ್ಲಿ ಚೌಕಾಕಾರದ ಕಲ್ಲನ್ನು ಜೋಡಿಸಿರುವರು. ಈ ಮಂಟಪದ ನಾಲ್ಕು ಮೂಲೆಯಲ್ಲಿ ಕುಳಿತ ಸಿಂಹಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ್ದು ಚಿಕ್ಕ ಚಿಕ್ಕ ಗೂಡುಗಳ ಅಲಂಕಾರವನ್ನು ಮಾಡಲಾಗಿದೆ. ಮೇಲೆ ಅದೇ ರೀತಿಯ ಅಲಂಕರಣದ ಭಾಗವಿದ್ದು ಅದರ ಮೇಲೆ ನಾಲ್ಕು ದಿಕ್ಕಿಗೆ ಮೂಲೆಗಳಲ್ಲಿ ಸಿಂಹಗಳಿದ್ದರೆ, ಮಧ್ಯದಲ್ಲಿ ದೇವರ ವಿಗ್ರಹಗಳಿವೆ. ಮಧ್ಯಭಾಗದ ಕೊನೆಯಲ್ಲಿ ದುಂಡನೆಯ ಸ್ತೂಪಿಯಿದ್ದು ಅದರ ಮೇಲೆ ಕಳಸವನ್ನು ಇಡಲಾಗಿದೆ. ಈ ಮಂಟಪದ ಮಧ್ಯ ಭಾಗದಲ್ಲಿ ಒಂದೂವರೆ ಅಡಿ ಎತ್ತರದ ಪೀಠವಿದ್ದು ಉತ್ಸವದ ಸಂದರ್ಭದಲ್ಲಿ ಮೂರ್ತಿಯನ್ನು ಇಡಲು ಬಳಸಲಾಗುತ್ತಿತ್ತು. ಇಂದು ಈ ತೆಪ್ಪಕೊಳವು ಹಾಳುಬಿದ್ದುಹೋಗಿದೆ. ಕೊಳದ ಸುತ್ತಲೂ ಮೂರು ಕಡೆಯಲ್ಲಿ ನಾಲ್ಕು ಮಂಟಪಗಳನ್ನು ಕಟ್ಟಲಾಗಿದ್ದು, ಒಂದರಲ್ಲಿ ಆಂಜನೇಯ ಮೂರ್ತಿಯಿದ್ದರೆ, ಉಳಿದ ಎರಡು ಖಾಲಿಮಂಟಪಗಳಾಗಿವೆ.

ಬೇಲೂರಿನ ಚನ್ನಕೇಶವಸ್ವಾಮಿ ದೇವಾಲಯದಲ್ಲಿರುವ ಗರುಡಸ್ತಂಭವನ್ನು ಕ್ರಿ.ಶ ೧೫೧೪ರಲ್ಲಿ ಊಳಿಗದ ಜಕ್ಕಣ್ಣ ನಾಯಕನ ಮಗ ತಿಮ್ಮನು ನಿರ್ಮಿಸಿ; ಅದಕ್ಕೆ ಬಂಗಾರದ ತಗಡನ್ನು ಹೊದಿಸಿದನು.[೧೫೩] ಇದನ್ನು ಅಲ್ಲಿ ಕೆತ್ತಿರುವ ಶಾಸನದಿಂದ ತಿಳಿದುಬರುತ್ತದೆ. ಹೀಗೆ ಹಳೆಯ ದೇವಾಲಯಗಳನ್ನು ಹೆಚ್ಚಿನದಾಗಿ ಜೀರ್ಣೋದ್ಧಾರ ಮಾಡಿರುವುದು ಇದರಿಂದ ಕಂಡುಬರುತ್ತದೆ.




ಭಾ ಚಿ ೮೫. ದ್ವಾರಗೋಪುರ
ಶ್ರೀರಂಗನಾಥ ದೇವಾಲಯ, ಶ್ರೀರಂಗಂ



ಭಾ ಚಿ ೮೬. ಪುಷ್ಕರಿಣಿ, ಚನ್ನಕೇಶವ ದೇವಾಲಯ, ಬೇಲೂರು





೭. ನರಸಿಂಹಸ್ವಾಮಿ ದೇವಾಲಯ, ಚಿನ್ನಅಹೋಬಿಲಂ

ಆಹೋಬಿಲಂ ಕ್ಷೇತ್ರವು ಪ್ರಸಿದ್ಧವಾದ ವೈಷ್ಣವ ಕ್ಷೇತ್ರವಾಗಿದ್ದು, ಆಂಧ್ರಪ್ರದೇಶದಲ್ಲಿನ ಪ್ರಮುಖ ವೈಷ್ಣವ ಕೇಂದ್ರವಾಗಿದೆ. ಇಲ್ಲಿ ಚಿನ್ನಆಹೋಬಿಲಂ ಮತ್ತು ಪೆದ್ದಆಹೋಬಿಲಂ ಎನ್ನುವ ಎರಡು ಕ್ಷೇತ್ರಗಳು ಪ್ರಸಿದ್ಧವಾಗಿವೆ. ಪೆದ್ದಆಹೋಬಿಲಂ ಕ್ಷೇತ್ರವು ನಾರಸಿಂಹನ ಜನ್ಮಸ್ಥಾನವಾಗಿ ಹಿರಣ್ಯಕಶ್ಯಪು ಸಂಹಾರ ಮಾಡಿದ ನಂತರ ಚಿನ್ನಆಹೋಬಿಲಂಗೆ ಬಂದು ಲಕ್ಷ್ಮೀ ಸಮೇತ ಆಸನನಾಗಿರುವ ಮೂರ್ತಿಯ ದೊಡ್ಡ ದೇವಾಲಯವಿದೆ. ಈ ದೇವಾಲಯಕ್ಕೆ ಪುರಾಣದ ಐತಿಹ್ಯಗಳಿದ್ದರೂ ಇದನ್ನು ಕಾಕತೀಯರ ಕಾಲದಲ್ಲಿ ನಿರ್ಮಿಸಿರುವುದು ಅಲ್ಲಿನ ಶಾಸನ ಹಾಗೂ ವಾಸ್ತುಶೈಲಿಯಿಂದ ತಿಳಿಯಬಹುದು. ಈ ದೇವಾಲಯವು ಕಾಲಾನುಘಟ್ಟದಲ್ಲಿ ಜೀರ್ಣೋದ್ಧಾರವನ್ನು ಪಡೆದುಕೊಂಡು ಮುಂದೆ ವಿಜಯನಗರ ವಾಸ್ತುಶೈಲಿಯ ಹಲವಾರು ಮಂಟಪ, ಗೋಪುರಗಳು ನಿರ್ಮಿತವಾಗಿರುವುದು ಕಂಡುಬರುತ್ತದೆ. ಮೂಲದೇವಾಲಯದ ಗರ್ಭಗುಡಿ, ಅಂತರಾಳ, ಮುಖಮಂಟಪ, ನವರಂಗಗಳು ಹಿಂದಿನ ಕಾಲದ ವಾಸ್ತುಶೈಲಿಯಲ್ಲಿದ್ದರೆ, ಅದಕ್ಕೆ ಹೊಂದಿಕೊಂಡಿರುವ ಬೃಹತ್ ಪ್ರಮಾಣದ ಮಹಾಮಂಟಪವು ನಂತರ ಕಾಲದಲ್ಲಿ ಅಂದರೆ ತುಳುವ ವಂಶದ ಶ್ರೀಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿತವಾದ ಮಂಟಪವಾಗಿದೆ (ಛಾಯಾಚಿತ್ರ ೮೭).

ಶ್ರೀಕೃಷ್ಣದೇವರಾಯನು ತನ್ನ ಆಳ್ವಿಕೆಯ ಸಂದರ್ಭದಲ್ಲಿ ಮೊಟ್ಟಮೊದಲ ಬಾರಿಗೆ ನರಸಿಂಹಸ್ವಾಮಿಯ ದರ್ಶನವನ್ನು ಕ್ರಿ.ಶ. ೧೫೧೫ರಂದು ಪಡೆದುಕೊಂಡು ಕಳಿಂಗವಿಜಯದ ಸವಿನೆನಪಿಗಾಗಿ ದೇವರಿಗೆ ಆಭರಣ, ವಜ್ರ, ಮಾಣಿಕ್ಯ, ಸಾವಿರ ವರಹಗಳನ್ನು ದಾನವಾಗಿ ನೀಡಿದುದಲ್ಲದೆ, ದೇವರ ಅಮೃತಪಡಿ ನೈವೇದ್ಯಕ್ಕೆ ಅಂಗರಂಗವೈಭೋಗಕ್ಕೆ ಮಧೂರ ಗ್ರಾಮವನ್ನು ದತ್ತಿಬಿಟ್ಟಿದ್ದು ಅಲ್ಲಿನ ಶಾಸನದಿಂದ ತಿಳಿದುಬರುತ್ತದೆ.[೧೩೪] ಅದೇ ರೀತಿಯಲ್ಲಿ ಈ ಕ್ಷೇತ್ರದ ಮೇಲೆ ಮೊದಲಿನಿಂದಲೂ ಒಲವು ಮೂಡಿಸಿಕೊಂಡ ಅರಸನು ತನ್ನ ಕಾಲಾವಧಿಯಲ್ಲಿ ಮುಂದೆ ಈ ದೇವಾಲಯದ ಮಹಾಮಂಪಟದ ನಿರ್ಮಾಣಕ್ಕೆ ತೊಡಗಿಸಿಕೊಂಡು ಸುಮಾರು ವರ್ಷಗಳವರೆಗೆ ಈ ಕಟ್ಟಡವನ್ನು ನಿರ್ಮಿಸಲ್ಪಟ್ಟರೂ, ರಾಯನ ಅಂತ್ಯದೊಂದಿಗೆ ಈ ಕಟ್ಟಡವು ಪರಿಪೂರ್ಣ ಹೊಂದಲಿಲ್ಲ. ಈ ಮಂಟಪವು ವಿಜಯನಗರ ಶೈಲಿಯ ಪ್ರಾರಂಭ ಹಂತದಲ್ಲಿದ್ದು, ಈ ಸಾಮ್ರಾಜ್ಯದ ವಿಶೇಷ ಸೃಷ್ಠಿ ಎನಿಸಿದ ಸಂಯುಕ್ತ ಸ್ತಂಭಗಳು ಪ್ರಾರಂಭದ ಹಂತದಲ್ಲಿವೆ. ಇಲ್ಲಿ ಪ್ರಯೋಗಾತ್ಮಕವಾಗಿ ಇವುಗಳನ್ನು ರೂಪಿಸಿರುವುದು ಕಂಡುಬರುತ್ತದೆ. ಈ ಮಂಟಪದ ವಾಸ್ತುಶಿಲ್ಪವು ಅಧಿಷ್ಠಾನ, ಸ್ತಂಭಗಳಿಂದ ಕೂಡಿದ ವಿತಾನ ಮೇಲೆ ಪ್ರಸ್ತರವನ್ನು ಒಳಗೊಂಡಿದೆ.

ಮಹಾಮಂಟಪವು ಎಂಬತ್ತೆಂಟು ಸ್ತಂಭಗಳಿಂದ ಕೂಡಿದ ದೊಡ್ಡ ಸಭಾಮಂಟಪವಾಗಿದೆ (ನಕ್ಷೆ ೨೩). ಇದರಲ್ಲಿ ಎಡ ಮತ್ತು ಬಲಭಾಗದಲ್ಲಿ ಎರಡು ವೇದಿಕೆಗಳಿದ್ದು, ಇವು ವಿಶೇಷ ಉತ್ಸವದ ದಿನಗಳಲ್ಲಿ ಪೂಜೆಯನ್ನು ನೆರವೇರಿಸುವ ಹಾಗೂ ರಂಗಭೋಗದ ಕಾರ್ಯಕ್ಕೆ ಬಳಸಬಹುದಾದ ಮಂಟಪವಾಗಿರಬಹುದು. ಅಧಿಷ್ಠಾನವು ಸುಮಾರು ನಾಲ್ಕು ಅಡಿಗಳಷ್ಟು ಎತ್ತರವಾಗಿದ್ದು ಇದರಲ್ಲಿ ಉಪಾನ, ಜಗತಿ ಇದರಲ್ಲಿ ಬಳ್ಳಿ ಅಲಂಕಾರ ಮತ್ತು ಆನೆ, ಸೈನಿಕರು, ಕುದುರೆಗಳ ಉಬ್ಬುಶಿಲ್ಪಗಳಿದ್ದು, ಇವುಗಳು ಕಳಿಂಗ ದಿಗ್ವಿಜಯದ ಸನ್ನಿವೇಶದ ಯುದ್ಧಚಿತ್ರಗಳಾಗಿವೆ

(ಛಾಯಾಚಿತ್ರ ೮೮). ಇದರ ಮೇಲೆ ಹಂಸಗಳ ಸಾಲಿರುವ ಪಟ್ಟಿಯ ಮೇಲೆ ಸರಪಳಿಯ ಕೆತ್ತನೆ, ಮಹಾಪದ್ಮ, ಪದ್ಮ, ಕಂಪ, ಊರ್ಧ್ವಪದ್ಮ, ಬಳೆಯಕಾರದ ವೃತ್ತ ಕುಮುದ, ಗಳ ಈ ಭಾಗದಲ್ಲಿ ಸಿಂಹಗಳು ಉಬ್ಬುಶಿಲ್ಪಗಳ ಪಟ್ಟಿಗಳಿವೆ. ಮೇಲೆ ಕಪೋತವಿದ್ದು ನಾಸಿಗಳಿಂದ ರಚಿಸಲಾಗಿದೆ. ಇದರಲ್ಲಿ ಲೈಂಗಿಕ ಶಿಲ್ಪಗಳನ್ನು ಕೆತ್ತಿರುವರು. ಪ್ರತಿಯೊಂದು ಭಾಗದಲ್ಲಿ ಚಿಕ್ಕದಾದ ಗುಡಿಯಂತ ಕೋಷ್ಠಕವಿದ್ದು ಮಧ್ಯದಲ್ಲಿ ಕೈಮುಗಿದು ನಿಂತಿರುವ ಉಬ್ಬುಶಿಲ್ಪಗಳನ್ನು ಕೆತ್ತಿರುವರು. ಇದರ ಮೇಲೆ ಗೋಪುರದ ಹಾಗೇ ಇದ್ದು ಕೊನೆಯಲ್ಲಿ ಶಾಲಾಶಿಖರವನ್ನು ರಚಿಸಿ ಮೂರು ಕಳಸಗಳನ್ನು ಕೆತ್ತಲಾಗಿದೆ. ಮಧ್ಯದಲ್ಲಿ ನಾಸಿ, ಅರ್ಧಕಂಭಗಳಿಂದ ಈ ಕೋಷ್ಠಕವನ್ನು ಅಲಂಕರಿಸಿರುವರು. ಈ ಮಾದರಿಯು ಹೊಯ್ಸಳರ ಪ್ರಭಾವವೆನ್ನಬಹುದು.

ಈ ಮಹಾಮಂಟಪದಲ್ಲಿ ಒಟ್ಟಾರೆ ೭೪ ಸ್ತಂಭಗಳನ್ನು ಅಧಿಷ್ಠಾನದ ಮೇಲೆ ನಿಲ್ಲಿಸಿದ್ದರೆ, ೮ ಸ್ತಂಭಗಳನ್ನು ಎರಡು ವೇದಿಕೆಗಳ ಮೇಲೆ ನಿಲ್ಲಿಸಿರುವರು. ಒಟ್ಟು ೮೨ ಸ್ತಂಭಗಳನ್ನು ಈ ಮಂಟಪವು ಒಳಗೊಂಡಿದೆ. ಈ ಮಂಟಪವು ಹಂಪಿಯಲ್ಲಿರುವ ವಿಜಯವಿಠ್ಠಲ ದೇವಾಲಯದ ಮಹಾಮಂಟಪದಂತೆ ಸ್ಪಷ್ಟವಾಗಿ ಹೋಲಿಕೆಯಾಗುತ್ತದೆ. ಆದರೆ ಇದು ಮೊದಲಹಂತವನ್ನು ಪಡೆದುಕೊಂಡ ಮಂಟಪವಾದರೆ ಅದು ತದನಂತರದಲ್ಲಿ ನಿರ್ಮಾಣಗೊಂಡಿರುವುದು. ಇದನ್ನು ಅಲ್ಲಿನ ಕೆತ್ತನೆಗಳ ಸೂಕ್ಷ್ಮತೆಯಿಂದ ಸರಳವಾಗಿ (ಸುಲಭವಾಗಿ) ಗುರುತಿಸಬಹುದು. ಈ ಸ್ತಂಭಗಳಲ್ಲಿ ಚಿತ್ರಕಾಂಡಸ್ತಂಭ, ಸಾಶ್ರಾಯಸ್ತಂಭ, ಸಂಯುಕ್ತ ಸ್ತಂಭಗಳನ್ನು ಕೆತ್ತಲಾಗಿದೆ. ಶಿಲ್ಪಿಯು ಈ ಸ್ತಂಭಗಳ ಕೆತ್ತನೆಯಲ್ಲಿ ಬಹಳ ಚಾಕ ಚಕ್ಯತೆಯನ್ನು ತೋರಿಸಿದ್ದು ಬೃಹತ್ತಾದ ಏಕಶಿಲೆಯಲ್ಲಿ ಹೆಚ್ಚು ಅಲಂಕರಣೆಯನ್ನು ಮಾಡಿರುವುದು ಗಮನಾರ್ಹ. ಏಕಶಿಲೆಯಲ್ಲಿ ಪೀಠವನ್ನು ನಿರ್ಮಿಸಿ ಅದರ ಮೇಲೆ ಉಬ್ಬುಶಿಲ್ಪ, ಕುಬ್ಬು, ನರ್ತನಶಿಲ್ಪಗಳನ್ನು ಕೆತ್ತಿ ಹಲವು ಮುಖಗಳನ್ನು ನಿರ್ಮಿಸಿದ್ದಾರೆ. ಇದರಲ್ಲಿ ಲೈಂಗಿಕಶಿಲ್ಪಗಳನ್ನು ಕೂಡಾ ಅಳವಡಿಸಿರುವರು. ಏಕಶಿಲೆಯ ಸಂಯುಕ್ತಸ್ತಂಭದಲ್ಲಿ ಮಧ್ಯಭಾಗವು ಚಿಕ್ಕ ಚಿಕ್ಕ ಸ್ತಂಭಗಳನ್ನು ಅಕ್ಕಪಕ್ಕಗಳಲ್ಲಿ ಮೂರರಿಂದ ಹದಿನಾರು ಸ್ತಂಭಗಳನ್ನು ಕೆತ್ತಲಾಗಿದೆ. ಅವಶ್ಯಕತೆಗೆ ಅನುಗುಣವಾಗಿ ಪೀಠವನ್ನು ಒಂದುಭಾಗದಲ್ಲಿ ಮುಂಚಾಚಿ ಪಾದ ಭಾಗದಲ್ಲಿ ಪ್ರಾಣಿಗಳನ್ನು ಬಿಡಿಸಲಾಗಿದೆ. ಇದರಲ್ಲಿ ದಂಡಾಗ್ರ ಭಾಗವು ಇರುವುದಿಲ್ಲ. ಇದು ಸಂಯೋಗಸ್ತಂಭವಾಗಿ ಕಂಡುಬರುತ್ತದೆ.

ಈ ಮಂಟಪದ ೭೪ ಸ್ತಂಭಗಳಲ್ಲಿ ಅ ಎಂದು ಸೂಚಿಸಿದ ಸ್ತಂಭಗಳು ಸಾಶ್ರಾಯ ಸ್ತಂಭಗಳಾಗಿದ್ದು, ಆ ಎಂದು ಸೂಚಿಸಿರುವವು ಸಂಯುಕ್ತ ಸ್ತಂಭಗಳಾಗಿವೆ. ಇ ಎಂದು ಸೂಚಿಸಿದ ಸ್ತಂಭಗಳು ಚಿತ್ರಕಾಂಡ ಸ್ತಂಭಗಳಾಗಿದ್ದು, ಈ ಎಂದು ಸೂಚಿಸಿದ ಸ್ತಂಭಗಳು ಶಿಲ್ಪಗಳನ್ನೊಳಗೊಂಡ ಸಂಯುಕ್ತ ಸ್ತಂಭಗಳಾಗಿವೆ (ನಕ್ಷೆ ೨೩). ಮಂಟಪದ ಎರಡು ವೇದಿಕೆಗಳ ಮೇಲಿರುವ ೮ ಸ್ತಂಭಗಳು ಚಿತ್ರಕಾಂಡ ಸ್ತಂಭಗಳಾಗಿದ್ದು, ಮೂರು ಮಧ್ಯಪಟ್ಟಿಗಳನ್ನೊಳಗೊಂಡು ಚತುರಶ್ರವನ್ನು ಎರಡುಭಾಗದಲ್ಲಿ ಕೆತ್ತಲಾಗಿದೆ. ಮೇಲೆ ಮಂಟಪವಿದ್ದು ಇದರ ಮಧ್ಯದಲ್ಲಿ ಅರಳಿದ ಪದ್ಮದಳವನ್ನು ಕಂಡಿರಿಸಿದೆ. ಈ ಚೌಕಟ್ಟಿನಲ್ಲಿ ಮೊಗ್ಗು ಕೆಳಮುಖವಾಗಿದ್ದು ಸುತ್ತಲೂ ಹಂಸ ಹಾಗೂ ಪಕ್ಷಿಗಳ ಸಾಲುಗಳಿರುವವು. ಈ ಸ್ತಂಭಗಳ ಮೇಲಿರುವ ಬೋದಿಗೆಗಳು ಪುಷ್ಪಬೋಧಿಗೆಗಳಾಗಿದ್ದು ಮೊಗ್ಗುಗಳು ಚಿಕ್ಕದಾಗಿ ಮೂಡಿಬಂದಿವೆ. ಈ ಮೊಗ್ಗುಗಳು ಪ್ರಾರಂಭದ ರಚನೆಯಾಗಿ ಕಂಡುಬರುತ್ತವೆ. ಈ ಮಂಟಪದ

ಬಲಗಡೆಯ ವೇದಿಕೆ ಸುತ್ತಲಿರುವ ಸ್ತಂಭಗಳು ಸಂಯುಕ್ತ ಸ್ತಂಭಗಳನ್ನೊಳಗೊಂಡ ಶಿಲ್ಪ ಮೂರ್ತಿಗಳನ್ನು ಹೊಂದಿವೆ. ಇವುಗಳಲ್ಲಿ ರಾಮಾಯಣಕ್ಕೆ ಸಂಬಂಧಪಟ್ಟ ಎಂಟು ಶಿಲ್ಪ ಮೂರ್ತಿಗಳನ್ನು ಸ್ತಂಭದ ಮಧ್ಯದಲ್ಲಿ ಕೆತ್ತಲಾಗಿದೆ. ಅವುಗಳಲ್ಲಿ ರಾಮ, ಸೀತಾ, ಭರತ, ಶತ್ರುಘ್ನ, ಅಂಜಲಿಹಸ್ತದಲ್ಲಿ ಕುಳಿತಿರುವ ಆಂಜನೇಯ, ಸುಗ್ರೀವ, ಚಾಮರಧಾರಿಶಿಲ್ಪ, ಲಕ್ಷ್ಮಣ ಮೂರ್ತಿಗಳನ್ನು ಒಂದೊಂದು ಸ್ತಂಭಗಳಲ್ಲಿ ಒಂದೊಂದನ್ನು ಕೆತ್ತಲಾಗಿದೆ. ಅದೇ ಮಂಟಪದ ಎಡಭಾಗದ ಪೀಠಿಕೆಯ ಸುತ್ತಲಿರುವ ಸ್ತಂಭಗಳಲ್ಲಿ ನರಸಿಂಹನ ಅವತಾರಗಳನ್ನು ಒಂದೊಂದು ಸ್ತಂಭಗಳಲ್ಲಿ ಕೆತ್ತಲಾಗಿದೆ. ಅವುಗಳಲ್ಲಿ ಯೋಗನರಸಿಂಹ, ವರಹಾನರಸಿಂಹ, ಶೇಷಶಾಯಿ ಲಕ್ಷ್ಮೀನರಸಿಂಹ, ಚೆಂಚುಲಕ್ಷ್ಮೀನರಸಿಂಹ, ಉಗ್ರಸ್ತಂಭ ನರಸಿಂಹ, ಹಿರಣ್ಯವಧಾನರಸಿಂಹ, ಅಷ್ಟಭುಜದಜ್ವಾಲಾನರಸಿಂಹ, ಶಾಂತಲಕ್ಷ್ಮೀನರಸಿಂಹ ಮೂರ್ತಿಗಳಿವೆ. ಅಲ್ಲದೆ ಮುಂದಿನ ಭಾಗದಲ್ಲಿ ಎಂಟು ಸಾಶ್ರಾಯ ಶಿಲ್ಪಸ್ತಂಭಗಳಲ್ಲಿ ಪದಕ ಹಿಡಿದ ನಾಟ್ಯಭಂಗಿಯ ಸ್ತ್ರೀ, ಮೃದಂಗಪುರುಷ ಶಿಲ್ಪ, ತುಂಬುರಪುರುಷ ಶಿಲ್ಪ, ಡಮರುಗಶಿಲ್ಪಮೂರ್ತಿ, ತಾಳಹಿಡಿದಿರುವ ಶಿಲ್ಪಮೂರ್ತಿ, ನಾಟ್ಯಗಾರ್ತಿ ಹಾಗೂ ಕೃಷ್ಣದೇವರಾಯನೆನ್ನುವ ಅಂಜಲಿಹಸ್ತದ ಶಿಲ್ಪವು ಬಲಗಡೆಯಲ್ಲಿದ್ದರೆ, ಎಡಭಾಗದಲ್ಲಿ ಮಂತ್ರಿ ತಿಮ್ಮರಸುವಿನ ಶಿಲ್ಪವೆನ್ನುವ ಮೂರ್ತಿಯನ್ನು ಕೆತ್ತಲಾಗಿದೆ (ಛಾಯಾಚಿತ್ರ ೮೯). ಈ ಶಿಲ್ಪಗಳ ಮೇಲೆ ಪ್ರಭಾವಳಿಯಿದ್ದು ಮೇಲೆ ಕೀರ್ತಿಮುಖಗಳನ್ನು ಕಂಡರಿಸಿರುವರು. ಈ ಎರಡು ಶಿಲ್ಪಗಳು ಆಭರಣ, ರಾಜವಸ್ತ್ರಗಳನ್ನು ತೊಟ್ಟು ಬಲಗಾಲಲ್ಲಿ ಕಡಗಗಳಿದ್ದು ಅಂಜಲಿಹಸ್ತದಲ್ಲಿ ನಿಂತುಕೊಂಡ ಶಿಲ್ಪಗಳಾಗಿವೆ. ತಲೆಯಲ್ಲಿ ಎತ್ತರದ ಕಿರೀಟವಿದ್ದು ಹೆಚ್ಚು ಅಲಂಕರಣೆಯಿಂದ ಕೂಡಿದೆ.

ಮಹಾಮಂಟಪದಲ್ಲಿರುವ ಸಂಯುಕ್ತ ಸ್ತಂಭಗಳು ಪ್ರಯೋಗಾತ್ಮಕವಾಗಿದ್ದು, ಪ್ರಾರಂಭಿಕ ಹಂತದಲ್ಲಿವೆ (ಛಾಯಾಚಿತ್ರ ೯೦). ಇವುಗಳಲ್ಲಿನ ಚಿಕ್ಕ ಸ್ತಂಭಗಳು ಅಷ್ಟೇನು ನಾಜೂಕಲ್ಲದ ಚೌಕಕಾರವಾಗಿವೆ. ಕೆಲವೊಂದು ಸ್ತಂಭಗಳನ್ನು ಮೂಲಸ್ತಂಭದಿಂದ ಬಿಡಿಸಿದ್ದರೆ, ಇನ್ನೂ ಕೆಲವು ಸ್ತಂಭಗಳು ಹಾಗೆಯೇ ಉಳಿದುಕೊಂಡಿವೆ. ಈ ಸ್ತಂಭಗಳು ದೊಡ್ಡಗಾತ್ರವನ್ನು ಹೊಂದಿದ್ದು ಹಲವು ಮುಖಗಳಿಂದ ಕೂಡಿವೆ. ಸಂಯುಕ್ತ ಸ್ತಂಭಗಳಲ್ಲಿಯೂ ಸಾಶ್ರಾಯಸ್ತಂಭಗಳನ್ನು ಒಂದುಭಾಗದಲ್ಲಿ ನಿರ್ಮಿಸಿ, ಸಿಂಹಾವ್ಯಾಳಿಯು ತನ್ನೆರಡು ಕಾಲುಗಳನ್ನು ಮೇಲೇತ್ತಿದ್ದರೆ (ಛಾಯಾಚಿತ್ರ ೯೧), ಕೆಳಗಡೆ ಕುಬ್ಜರ ಉಬ್ಬುಶಿಲ್ಪವು ಸೊಗಸಾಗಿ ಮೂಡಿಬಂದಿದೆ. ಸಿಂಹಗಳ ಬಾಯಿಂದ ಬಳ್ಳಿಯು ಹೊರಬಂದಿದೆ. ಈ ಸಂಯುಕ್ತ ಸ್ತಂಭಗಳಲ್ಲಿ ಮೇಲೆ ಬಳ್ಳಿಯ ಚಿತ್ರವನ್ನು ಕೆತ್ತಿ ಅಲಂಕರಿಸಿರುವರು. ಕೆಲವು ಸ್ತಂಭಗಳಲ್ಲಿ ಚಿಕ್ಕಸ್ತಂಭಗಳು ನಾಲ್ಕುಮುಖಹೊಂದಿದ್ದರೆ, ಇನ್ನೂ ಕೆಲವು ಸ್ತಂಭಗಳಲ್ಲಿ ಅಷ್ಟಮುಖಗಳಿವೆ. ಈ ಸ್ತಂಭಗಳನ್ನೆಲ್ಲ ಮೂರುಭಾಗಗಳಾಗಿ ನಿರ್ಮಿಸಿ, ಮೇಲೆ ಪುಷ್ಪಬೋದಿಗೆಗಳನ್ನು ಅಳವಡಿಸಿದ್ದಾರೆ. ಕೆಲವೊಂದು ಸ್ತಂಭಗಳನ್ನು ಚೌಕಕಾರದ ಕಲ್ಲಿನ ವೇದಿಕೆಯ ಮೇಲೆ ನಿರ್ಮಿಸಿದ್ದು ಕಂಡುಬರುತ್ತದೆ. ಇವುಗಳ ಮೇಲಿರುವ ಬೋಧಿಗೆಗಳು ಸರಳವಾಗಿವೆ. ಈ ಮಂಟಪವು ಪರಿಪೂರ್ಣಗೊಂಡಂತೆ ಕಂಡುಬರುವುದಿಲ್ಲ. ಇಲ್ಲಿನ ಕಟ್ಟಡವನ್ನು ನೋಡಿದಾಗ ಹೊಸದಾಗಿ ಈ ಮಂಟಪದ ಛತ್ತನ್ನು ಹಾಕಲಾಗಿದ್ದು, ಇದನ್ನು ಕ್ರಿ.ಶ. ೧೮೬೪ರಲ್ಲಿ ಬಾಂಗೊಡ್ ಶೇಟ್ ಎನ್ನುವ ವ್ಯಾಪಾರಿಯು ಜೀರ್ಣೋದ್ಧಾರಗೊಳಿಸಿದಂತೆ ಅಲ್ಲೇ ಇರುವ ಒಂದು ಶಾಸನ ತಿಳಿಸುತ್ತದೆ.




ಭಾ ಚಿ ೮೭. ಮಹಾಮಂಟಪ, ನರಸಿಂಹ ದೇವಾಲಯ, ಚಿನ್ನಅಹೋಬಿಲಂ



ಭಾ ಚಿ ೮೮. ಮಹಾಮಂಟಪದ ಅಧಿಷ್ಠಾನ, ಚಿನ್ನಅಹೋಬಿಲಂ



ಭಾ ಚಿ ೮೯. ಕೃಷ್ಣದೇವರಾಯ ಶಿಲ್ಪಸ್ತಂಭ, ಚಿನ್ನಅಹೋಬಿಲಂ



ನಕ್ಷೆ- ೨೨ ನರಸಿಂಹ ದೇವಾಲಯದ ಮಹಾಮಂಟಪದ ತಲನಕ್ಷೆ





ಛಾ ಚಿ ೯೦. ಸಂಯುಕ್ತಸ್ತಂಭ, ಚಿನ್ನಅಹೋಬಿಲಂ



ಛಾ ಚಿ ೯೧. ಸಾಶ್ರಾಯಸ್ತಂಭ, ಚಿನ್ನಅಹೋಬಿಲಂ

ಈ ಮಂಟಪದ ವೇದಿಕೆಯ ಮೇಲಿರುವ ಸ್ತಂಭಗಳು ಚಿತ್ರಕಾಂಡ ಸ್ತಂಭಗಳಾಗಿದ್ದು, ಮೂರುಪಟ್ಟಿಗಳನ್ನು ಹೊಂದಿವೆ. ಮಧ್ಯದಲ್ಲಿ ಹದಿನಾರು ಮುಖದ ಚತುರಸ್ರವಿದ್ದು ಪಟ್ಟಿಗಳನ್ನು ಮೂರುಭಾಗವಾಗಿ ಮಾಡಿದೆ. ಈ ಪಟ್ಟಿಗಳಲ್ಲಿ ಉಬ್ಬುಶಿಲ್ಪಗಳನ್ನು ಕಂಡರಿಸಿದ್ದು, ಇವೆಲ್ಲವುಗಳಲ್ಲಿ ದೇವರ, ನಾಟ್ಯಗಾರರ, ಪ್ರಾಣಿಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಸ್ತಂಭಗಳ ಮೇಲಿರುವ ವಿತಾನವು ಸಾಧಾರಣ ಶಿಲೆಯಿಂದ ಕೂಡಿದ್ದು ಇದರ ಮೇಲೆ ಯಾವುದೇ ಅಲಂಕಾರ ಮಾಡಿರುವುದಿಲ್ಲ. ಮೇಲಿನ ಮಾಡನ್ನು (ಛತ್ತು) ಉದ್ದನೆಯ ಕಲ್ಲಿನ ಬಂಡೆಗಳಿಂದ ಮುಚ್ಚಲಾಗಿದೆ. ಇವುಗಳೆಲ್ಲ ಸರಳವಾಗಿ ಕಂಡುಬರುತ್ತವೆ. ಈ ಮಂಟಪಕ್ಕೆ ಮೇಲೆ ಸುತ್ತಲೂ ಎಸ್ (S) ಆಕಾರದ ಮಂಜೂರವನ್ನು ಹೊದಿಸಿದ್ದು ಮಳೆಯನೀರಿನಿಂದ ಮಂಟಪವನ್ನು ರಕ್ಷಿಸುವುದಾಗಿದೆ. ಇದರ ಮೇಲೆ ಸಾಧಾರಣವಾದ ಗೋಡೆಯನ್ನು ನಿರ್ಮಿಸಿ ಮಳೆಯನೀರು ಹೊರಗೆ ಹೋಗಲು ಡೋಣಿಗಳನ್ನು ಇಡಲಾಗಿದೆ. ಈ ಮಂಟಪದ ಮುಖ್ಯ ದ್ವಾರದ ಮೇಲೆ ಚಿಕ್ಕದಾದ ಗೂಡನ್ನು ನಿರ್ಮಿಸಿ ಅದರ ಒಳಗಡೆ ನಾಮಶಂಖಾಚಕ್ರಗಳನ್ನು ಗಾರೆಯಿಂದ ನಿರ್ಮಿಸಿರುವರು. ಒಟ್ಟಾರೆಯಾಗಿ ಈ ಮಂಟಪವು ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣಗೊಂಡಿದ್ದರೂ, ಮುಂದೆ ಅದು ಜೀರ್ಣೋದ್ಧಾರಗೊಂಡು ಪರಿಪೂರ್ಣಗೊಂಡಂತೆ ಕಂಡುಬರುತ್ತದೆ.

✲

ಟಿಪ್ಪಣಿಗಳು

೧. ಇಂಗ್ಲೀಷ್ - ಕನ್ನಡ ನಿಘಂಟು, ಮೈಸೂರು ವಿಶ್ವವಿದ್ಯಾಲಯ, ನಿರ್ದೇಶಕರು, ಪ್ರಸಾರಾಂಗ, ೧೯೯೯
೨. ರಾಮಚಂದ್ರರಾವ್ ಎಸ್.ಕೆ, ಭಾರತದ ದೇವಾಲಯ ನೆಲೆ-ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಪು. ೬
೩. ಶಿವರಾಮಕಾರಂತ ಕೆ. ಭಾರತೀಯ ಶಿಲ್ಪ, ಬೆಂಗಳೂರು, ೧೯೭೫, ಪು. ೧೫
೪. ಎ.ಕ. XV, ಮೊಳಕಾಲ್ಮೂರು, ೨೭, ಕ್ರಿ.ಶ. ೯೭೨
೫. S.R. Rao, J.O.E.S.I. Vol,13, Pp.82
೬. ಅದೇ, A Proto Historic Inscription from the sea near bet duaraka
೭. ಸರ್ಕಾರ್ ಡಿ.ಸಿ. ಸೆಲೆಕ್ಟ್ ಇನ್ಸ್‌ಸ್ಕ್ರಿಪ್ಷನ್ಸ್, ಕಲ್ಕತ್ತಾ, ೧೯೪೨, ಪು. ೯೦ - ೯೧
೮. ಅದೇ, ಪುಟ ೯೧-೯೨
೯. Agarwal P.K. Temple Architecture in Gupta period, ವಾರಣಾಸಿ, ೧೯೭೮, ಪು. ೩೫ - ೩೬, ೪೨
೧೦. ಭಾರತದ ದೇವಾಲಯ ನೆಲೆ - ಹಿನ್ನೆಲೆ, ಪು. ೧೬
೧೧. ವೆಂಕೋಬರಾವ್. ಬಿ. ಮೈಸೂರು ದೇಶದ ವಾಸ್ತುಶಿಲ್ಪ, ಪು. ೨೩ - ೨೪
೧೨. ಭಾರತದ ದೇವಾಲಯ ನೆಲೆ - ಹಿನ್ನೆಲೆ, ಪು. ೨೩
೧೩. ಅದೇ, ಪುಟ ೨೨
೧೪. ಬಾಜಪೈ ಕೆ.ಡಿ. Evolution of Stupa, J.O.E.S.I. Vol-12, Ludres list No-14, D-3, Jenart Mathura Inscriptions, Pp. 157-158
೧೫. ಅದೇ, ಪು. ೧೧೬
೧೬. ಶಿವರಾಮಕಾರಂತರು, ಚಾಲುಕ್ಯ ವಾಸ್ತುಶಿಲ್ಪಕಲೆ, ಪು. ೧೦
೧೭. ಚಿ.ಮೂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೧೯೬೬, ಪುಟ ೧೭೩
೧೮. ಎ.ಕ. VII, ಶಿಕಾರಿಪುರ, ೧೭೭, ಕ್ರಿ.ಶ.ಸು. ೪೫೦
೧೯. A.Sundhra, The Early Kadamba temple Architecture, Rn, Q.J.M.S. LXXV-3, Pp-264
೨೦. ಗೋಪಾಲ್ ಬಾ.ರಾ. ಬನವಾಸಿ ಕದಂಬರು, ಪು. ೨೧
೨೧. ಗೋಪಾಲ್ ಬಾ.ರಾ. ಶ್ರೀಕಂಠಶಾಸ್ತ್ರಿ, ಗುಡ್ನಾಪುರ ಇನ್ಸ್‌ಸ್ಕ್ರಿಪ್ಷನ್ಸ್ ಆಫ್ ಕಂದಬ ರವಿವರ್ಮ, ಪು. ೭೭
೨೨. ಶ್ರೀಕಂಠಶಾಸ್ತ್ರೀ ಎಸ್. ಹೊಯ್ಸಳ ವಾಸ್ತುಶಿಲ್ಪ, ಪು. ೧

೨೩. ಅ.ಸುಂದರ, ಮೇಲಿನದೆ. ಪು. ೨೬೫
೨೪. ಅದೇ, ಪು. ೨೬೬
೨೫. ಎ.ಕ. XII, ತುಮಕೂರು ೭೮, ಕ್ರಿ.ಶ. ೪೦೦
೨೬. ಪ್ರಭಾಕರ್ ಎಂ.ಎಸ್. ದೇವಾಲಯ ವಾಸ್ತುಚಂದ್ರಿಕೆ, ೨೦೦೦, ಪು. ೨೦
೨೭. ಗುಪ್ತ ಆರ್.ಎಸ್. ದಿ ಆರ್ಟ್ ಅಂಡ್ ಆರ್ಕಿಟೆಕ್ಚರ್ ಆಫ್ ಐಹೊಳೆ, ಬೊಂಬಾಯಿ, ೧೯೬೭, ಪು. ೧೧
೨೮. ರಾವ್ ಆರ್.ಎಸ್. ದಿ ನೋಟ್ ಆನ್ ದಿ ಕ್ರಾನಾಲಜಿ ಆಫ್ ಅರ್ಲಿ ಚಾಲುಕ್ಯನ್ ಟೆಂಪಲ್ಸ್, ಲಲಿತಕಲಾ, ಸಂಚಿಕೆ, ೧೫, ನವದೆಹಲಿ, ೧೯೭೨, ಪು. ೯
೨೯. ಗೋಪಾಲ್ ಬಾ.ರಾ. ಕರ್ನಾಟಕದ ಕಲೆಗಳು, ವಾಸ್ತು, ಸಂ, ೪, ಬೆಂಗಳೂರು, ಪು. ೩
೩೦. ಶೀಲಾಕಾಂತ ಪತ್ತಾರ್, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪು. ೨೫೮
೩೧. ಗುಡಿಜನರ ಜೀವನಾಡಿ, ದಯಾನಂದ ಪೈ ಇತಿಹಾಸ ಸಂಶೋಧನಾ ಕೇಂದ್ರ, ಮೈಸೂರು, ೧೯೯೪, ಪು. ೪೮
೩೨. ಅಪರಾಜಿತಪೃಚ್ಛ, ಅಧ್ಯಾಯ ೧೪೬, ಶ್ಲೋಕ, ೩೬-೩೭, ಪು. ೨೬೭
೩೩. ವೆಂಕೋಬರಾವ್ ಬಿ. ಮೈಸೂರು ದೇಶದ ವಾಸ್ತುಶಿಲ್ಪ, ಪು. ೩೩
೩೪. ಶಿವರಾಮಕಾರಂತರು, ಚಾಲುಕ್ಯವಾಸ್ತು ಮತ್ತು ಶಿಲ್ಪ, ಪು. ೧೮
೩೫. ಗುಡಿಜನರ ಜೀವನಾಡಿ, ಪೂರ್ವೋಕ್ತ, ಪು. ೪೯
೩೬. ಸ್ಟೆಲ್ಲಾಕ್ರಾಮರಿಷ್, ದಿ ಹಿಂದೂ ಟೆಂಪಲ್, ಸಂ, ೧, ಪು. ೨೯೧
೩೭. ಢಾಕಿ ಎಂ.ಎ. ದಿ ಇಂಡಿಯನ್ ಟೆಂಪಲ್ ಫಾರಮ್ಸ್, ಪು. ೨೬
೩೮. ಪ್ರಭಾಕರ್ ಎಂ.ಎಸ್. ದೇವಾಯ ವಾಸ್ತುಚಂದ್ರಿಕೆ, ಪು. ೧೪
೩೯. ಚಿ.ಮೂ. ಕನ್ನಡಸಂಸ್ಕೃತಿ - ನಮ್ಮಹೆಮ್ಮೆ, ೧೯೮೭, ಪು. ೧೪
೪೦. ರಾಜಶೇಖರ್ ಎಸ್. ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ೧೯೮೮, ಪು. ೬೭
೪೧. ಶ್ರೀಕಂಠಶಾಸ್ತ್ರೀ ಎಸ್. ಹೊಯ್ಸಳ ವಾಸ್ತುಶಿಲ್ಪ, ೧೯೮೫, ಪು. ೧೮
೪೨. ನಾಗರಾಜ್ ರಾವ್ ಎಚ್.ಎಂ. ಹೊಯ್ಸಳ ವಾಸ್ತುಶಿಲ್ಪ, ೧೯೮೫, ಪು. ೧೮
೪೩. Percy brown, Indian Architecture, Vol- I, Bombay,1965, P.91
೪೪. ಇತಿಹಾಸ ದರ್ಶನ, ಸಂ-೧, ಪು. ೪೮
೪೫. Percy Brown, Indian Architecture, Vol- I, Bombay,1965, P. 91
೪೬. ಕೃಷ್ಣರಾವ್ ಎಂ.ವಿ. ಇತರರು, ಕರ್ನಾಟಕ ಇತಿಹಾಸ ದರ್ಶನ, ೧೯೬೦, ಪು. ೧೦೪೭
೪೭. SII, IX, Pt, ii, No. 504
೪೮. ಕವಿಶಾಸಂ - ೧, ಬಳ್ಳಾರಿ ಜಿಲ್ಲೆ, ಹೊಸ, ಸಂಚಿಕೆ, ೨೯, ಅನಂತಶಯನಗುಡಿ
೪೯. Sewell, A forgoten Empire, P.244
೫೦. MER,1923, APPB, P,683, P.47
೫೧. EC- IX, ಹೊಸಕೋಟೆ, ಸಂಚಿಕೆ, ೫೫
೫೨. MER. 1923, APPB. No. 682, 684
೫೩. ಕವಿಶಾಸಂ - ೩, ಹಂಪಿ, ಸಂಚಿಕೆ, ೭೩, ೭೪
೫೪. ಕವಿಶಾಸಂ - ೩, ಹಂಪಿ, ಸಂಚಿಕೆ, ೭೭, ೭೮
೫೫. ಮೋಹನತರಂಗಿಣಿ, ಪದ್ಯ ೬೧, ಪು. ೩೪
೫೬. SII, Vol,4, No.262
೫೭. ಮಹೋಸಾ ವಿಜಯನಗರ, ಪು. ೩೦೩
೫೮. ಕವಿಶಾಸಂ - ೩, ಹಂಪಿ, ಸಂಚಿಕೆ, ೭೩, ೭೪
೫೯. ಕವಿಶಾಸಂ - ೩, ಹಂಪಿ, ಸಂಚಿಕೆ, ೭೮
೬೦. ಕವಿಶಾಸಂ - ೩, ಹಂಪಿ, ಸಂಚಿಕೆ, ೭೭
೬೧. ಕವಿಶಾಸಂ - ೩, ಹಂಪಿ, ಸಂಚಿಕೆ, ೭೩, ೭೪
೬೨. ಕವಿಶಾಸಂ - ೩, ಹಂಪಿ, ಸಂಚಿಕೆ, ೭೩
೬೩. ಕವಿಶಾಸಂ - ೩, ಸಂಚಿಕೆ, ೭೩, ಗಂಗಾವತಿ, ಕೆಸರಟ್ಟಿ
೬೪. ARIE-1970-71, No.130

೬೫. AR, No.824 of 1922, A.D. 1527

೬೬. SII, XVI, No. 68

೬೭. SII, XVI, No. 68

೬೮. ಕವಿಶಾಸಂ, ೧, ಸಂಡೂರು, ಸಂಖ್ಯೆ, ೧೩, ರಾಮಘಡ

೬೯. ಕವಿಶಾಸಂ, ೩, ಸಂಖ್ಯೆ, ೨೨೯, ಹಂಪಿ

೭೦. ಕವಿಶಾಸಂ, ೩, ಹಂಪಿ, ಸಂಖ್ಯೆ, ೮೧

೭೧. EC, Vol, VII, Pt, ii, SK, No.54

೭೨. ARIE,1976-77 No. 160

೭೩. ಕವಿಶಾಸಂ - ೫, ಭಾಗ ೧, ಸಂಖ್ಯೆ ೧೮೫, ಶ್ರೀರಂಗಪುರಂ

೭೩ಎ. SII, IX, pt.II, No. 508

೭೪. ಎಸ್. ರಾಜಶೇಖರ್, op.cit, p. 27, p. 4, 16-17 and 67

೭೫. SII, Vol. IV, No. 20
ಕವಿಶಾಸಂ - ೩, ಹಂಪಿ, ಸಂಖ್ಯೆ ೨೫೭, ಕ್ರಿ.ಶ. ೧೫೨೧

೭೬. ಕವಿಶಾಸಂ - ೩, ಹಂಪಿ, ಸಂಖ್ಯೆ ೨೫೭, ೨೫೮, ೨೬೫

೭೭. ಕವಿಶಾಸಂ - ೩, ಹಂಪಿ, ಸಂಖ್ಯೆ ೨೫೭

೭೮. ಕವಿಶಾಸಂ - ೩, ಹಂಪಿ, ಸಂಖ್ಯೆ ೨೫೭

೭೯. Filliozat and Filliozat, 1988, opcit, Pp. 20-21
A. Verghese, Religious Traditions at Vijayanagara, A study of the monuments, New Delhi, 1994

೮೦. E.C.- VIII, ತೀರ್ಥಹಳ್ಳಿ, ಸಂಖ್ಯೆ ೨೨೨

೮೧. Further Sources of Vijaynagara History, Madras, 1946, Vol. III, Pp. 46-47

೮೨. Tirupati Devastnam tallapakam telugu works Sringara Sankirtanalu.

೮೩. S.Rajasekhara, op.cit, Pp. ೨೪- ೨೬, p.೪, ೧೮- ೨೩, ೬೬, ೬೮, ೬೯, ೭೧, ೭೨

೮೪. Hemakuta, C.T.M. Kotraiah Felicitation Volume, ii, 2001, Foundation date of the Vitthala Temple at Vijayanagara, George mechell, Pp. ೩೨೭

೮೫. ಹಂಪೆಯ ಬಜಾರುಗಳು, ಪು.೧೮

೮೬. D.V. Devaraj and S.C.Patil, Vijayanagara progress of Research, 1984-87, Mysore, 1991, Nos, 69 and 7, Pp. 41-42

೮೭. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೧, ೧೮೨, ೨೦೪

೮೮. ಮಾನಸಾರ, ಅಧ್ಯಾಯ ೧೫, ಶ್ಲೋಕ ೧೧೫ - ೧೨೩

೮೯. ಕವಿಶಾಸಂ - ೩, ಹಂಪಿ, ಸಂಖ್ಯೆ ೨೧೫

೯೦. ಕವಿಶಾಸಂ - ೩, ಹಂಪಿ, ಸಂಖ್ಯೆ ೨೦೫

೯೧. ಕವಿಶಾಸಂ - ೩, ಹಂಪಿ, ಸಂಖ್ಯೆ ೨೦೭

೯೨. ಅಳಿದುಳಿದ ಹಂಪೆ, ಪು. ೭೯

೯೩. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೬

೯೪. ಕವಿಶಾಸಂ - ೩, ಹಂಪಿ, ಸಂಖ್ಯೆ ೨೧೩

೯೫. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೯

೯೬. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೧

೯೭. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೭, ೧೯೮

೯೮. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೬

೯೯. SII, Vol. 9, No. 607

೧೦೦. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೧

೧೦೧. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೧

೧೦೨. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೧

೧೦೩. ಹಂಪೆಯ ಬಜಾರುಗಳು, ಪು. ೧೮

೧೦೪. SII, Vol. 9, ii, No. 668
೧೦೫. SII, Vol. 9, ii, No. 566
೧೦೬. ಕವಿಶಾಸಂ - ೩, ಹಂಪಿ, ಸಂಖ್ಯೆ, ೧೯೬
೧೦೭. ಕವಿಶಾಸಂ - ೩, ಹಂಪಿ, ಸಂಖ್ಯೆ ೨೦೮
೧೦೮. ಕವಿಶಾಸಂ - ೩, ಹಂಪಿ, ಸಂಖ್ಯೆ ೨೦೯
೧೦೯. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೧
೧೧೦. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೨
೧೧೧. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೩
೧೧೨. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೫
೧೧೩. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೭
೧೧೪. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೦
೧೧೫. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೩
೧೧೬. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೪
೧೧೭. ಕವಿಶಾಸಂ - ೩, ಹಂಪಿ, ಸಂಖ್ಯೆ ೨೦೮
೧೧೮. ಕವಿಶಾಸಂ - ೩, ಹಂಪಿ, ಸಂಖ್ಯೆ ೨೦೮
೧೧೯. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೩
೧೨೦. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೩
೧೨೧. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೨
೧೨೨. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೫, ೧೮೭, ೧೯೧, ೧೯೩
೧೨೩. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೧
೧೨೪. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೭
೧೨೫. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೧
೧೨೬. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೧
೧೨೭. ಕೃಷ್ಣದೇವರಾಯನ ಜೀವನ - ಸಾಧನೆಗಳು, ಪು. ೧೦೧
೧೨೮. ಕವಿಶಾಸಂ - ೫, ಭಾಗ - ೧, ಸಂಖ್ಯೆ ೨೬೬
TTDI, Vol. 1, No. 77
೧೨೯. SII, IX, ii, No. 499
೧೩೦. SII, XXIV, Nos. 170 and 393
೧೩೧. ಕೃಷ್ಣದೇವರಾಯನ ಜೀವನ - ಸಾಧನೆಗಳು, ಪು. ೧೦೧
೧೩೧ಎ. SII, XXIV, No. 369, A.D. 1515
೧೩೧ಬಿ. SII, XXIV, No. 362, 363, 366, 368, 370, 371, 372, 373, 374, 375, 376, 377, 380, 381,
೧೩೧ಸಿ. SII, XXIV, No. 376, A.D. 1524
೧೩೨. EC, Vol.9, No.159, A.D. 1524
೧೩೩. EC, Vol, IX, Rev, BI, No. 93
೧೩೪. SII, Vol, XVI, No. 53

❑❑

ಅಧ್ಯಾಯ ೫

ವೈಷ್ಣವ ದೇವಾಲಯಗಳ ಸಾಂಸ್ಕೃತಿಕ ಚಿತ್ರಣ

೨೮

ವೈಷ್ಣವ ದೇವಾಲಯಗಳ ಸಾಂಸ್ಕೃತಿಕ ಚಿತ್ರಣ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಉದ್ದೇಶ ಸ್ವಶಕ್ತಿಯನ್ನು ಸಂವರ್ಧಿಸಿ ಹಿಂದೂಧರ್ಮ ಹಾಗೂ ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದು ಅಂದಿನ ಪ್ರಮುಖ ಧ್ಯೇಯವಾಗಿತ್ತು. ಸಾಮ್ರಾಜ್ಯದಲ್ಲಿ ಧರ್ಮಪ್ರಚಾರಕ್ಕಾಗಿ ದೇವಾಲಯಗಳನ್ನು ಮಾಧ್ಯಮಗಳಾಗಿ ಉಪಯೋಗಿಸಿಕೊಳ್ಳಲಾಯಿತು. ಹಿಂದೂ ಸಂಸ್ಕೃತಿಯ ಎಲ್ಲಾ ವೈಶಿಷ್ಟ್ಯಗಳನ್ನು ಸಂರಕ್ಷಿಸಿ, ಪುನಃಶ್ಚೇತನಗೊಳಿಸಿ ವೈಭವೋಪೇತವಾಗಿ ಮಾಡುವುದು ಅಂದಿನ ಅರಸರ ಪ್ರಮುಖ ಉದ್ದೇಶವಾಗಿತ್ತು.

ವಿಜಯನಗರದ ಅರಸರು ತಮ್ಮ ಆಳ್ವಿಕೆಯಲ್ಲಿ ದೇವಾಲಯಗಳಿಗೆ ಎತ್ತರವಾದ ಗೋಪುರಗಳನ್ನು ನಿರ್ಮಿಸುವುದು, ಅನೇಕ ಮಂಟಪಗಳು, ವಿಶಾಲವಾದ ಪ್ರಾಂಗಣ ಮೊದಲಾದವುಗಳಿಂದ ಕೂಡಿದ ಭವ್ಯದೇವಾಲಯ ಗಳನ್ನು ಕಟ್ಟಿಸಿರುವುದು ಕಂಡುಬರುತ್ತದೆ. ಇದರ ಜೊತೆಗೆ ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವುದು, ದೇವಾಲಯ ಮತ್ತು ಮಠಗಳಿಗೆ ಉದಾರ ದಾನದತ್ತಿಗಳನ್ನು ಕೊಡುವುದು ಮೊದಲಾದ ಕಾರ್ಯಗಳನ್ನು ಅವರು ಕೈಗೊಂಡರು. ಈ ಸ್ಪರ್ಧಾತ್ಮಕ ಪ್ರೋತ್ಸಾಹದಿಂದ ಆ ಕಾಲದ ದೇವಾಲಯಗಳು ಹೊಸ ಸ್ವರೂಪವನ್ನು ಪಡೆದವು. ಅನೇಕ ದೇವಾಲಯಗಳು ಶ್ರೀಮಂತ ಸಂಸ್ಥೆಗಳಾದವು. ಹಿಂದಿದ್ದ ನಿತ್ಯನೈಮಿತ್ತಿಕ ಪೂಜೆಗಳ ಜೊತೆಗೆ ಕಲ್ಯಾಣೋತ್ಸವ, ಮಹಾನವಮಿ ಉತ್ಸವ, ವಸಂತೋತ್ಸವ ಹಾಗೂ ವಾರ್ಷಿಕ ರಥೋತ್ಸವ ಇವೇ ಮೊದಲಾದ ಉತ್ಸವಗಳನ್ನು ಆಚರಿಸುವುದು ರೂಢಿಗೆ ಬಂದಿತು. ದೇವಾಲಯಗಳು ವ್ಯಕ್ತಿಗತ ಧಾರ್ಮಿಕ ಅವಶ್ಯಕತೆಯನ್ನು ಪೂರೈಸುವುದಕ್ಕಿಂತ ಹೆಚ್ಚಾಗಿ ಸಂಪತ್ತಿನ ಪ್ರದರ್ಶನ ಹಾಗೂ ಮನರಂಜನೆಯ ತಾಣಗಳಾದವು. "ಕೆಲವು ದೇವಾಲಯಗಳಲ್ಲಿ ಪುರಾಣ, ಹರಿಕಥೆ ಮುಂತಾದ ಧರ್ಮಪ್ರಸರಣ ಕಾರ್ಯಗಳು ವ್ಯವಸ್ಥೆಗೊಂಡಿದ್ದರೂ ಇವಕ್ಕಿಂತ ಹೆಚ್ಚಾಗಿ ವೈಭವಯುತ ಪೂಜೆ, ಉತ್ಸವಗಳು, ಕನಕರತ್ನಾಭರಣಗಳ ಅರ್ಪಣೆ, ನೂರಾರು ಜನರಿಗೆ ಅನ್ನದಾನ ಏರ್ಪಾಡು ಇಂಥ ಕಾರ್ಯಗಳಿಗೆ ಗಮನ ಹೆಚ್ಚಾಯಿತು."[೧]

ಸಮಾಜದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಬದಲಾವಣೆಗಳಿಂದ ದೇವಾಲಯಗಳು ಕೇವಲ ಒಂದು ದೇವತೆಯ ವಾಸಸ್ಥಾನವಾಗಿರದೆ, ನೂರಾರು ಹಬ್ಬಹರಿದಿನಗಳ ಆಚರಣೆಯ ಪ್ರಮುಖಕೇಂದ್ರಗಳಾಗಿದ್ದವು. ಇದೊಂದು ಸಾಮಾಜಿಕ ಜೀವನದ ಮುಖ್ಯ ಬಿಂದುವೂ ಆಯಿತು. ವಿಜಯನಗರ ಕಾಲದ ವೈಷ್ಣವ ದೇವಾಲಯಗಳು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದ್ದು ಹಿಂದಿನ ಸಮಾಜದಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದವು. ಅವುಗಳ ಕಾರ್ಯಕಲಾಪಗಳನ್ನು ನಾವು ಅನೇಕ ಶಾಸನ, ಸಾಹಿತ್ಯ ಕೃತಿಗಳು ಹಾಗೂ ಪ್ರವಾಸಿ ಕಥನಗಳಿಂದ ತಿಳಿದುಕೊಳ್ಳಬಹುದು. ಶಾಸನಗಳಲ್ಲಿ ಅರ್ಧಕ್ಕಿಂತ ಹೆಚ್ಚು ದಾನಶಾಸನಗಳು ಸಿಗುತ್ತವೆ. "ಯಜ್ಞಯಾಗಾದಿಗಳ ಪ್ರಾಬಲ್ಯ ನಿಂತುಹೋದ ಮೇಲೆ, ಅವುಗಳಿಂದ ಪಡೆಯಬಹುದೆಂದು ಭಾವಿಸಿದ್ದ ಪುಣ್ಯವನ್ನು ದಾನಗಳಿಂದ ಪಡೆಯಬಹುದೆಂಬುದು ಅಂದಿನ ಜನರ ಪರಿಕಲ್ಪನೆಯಾಗಿತ್ತು."[೨] ದಾನಕ್ಕೆ ವಿಜಯನಗರದ ಕಾಲದಲ್ಲಿ ಜನರು ಹೆಚ್ಚಿನ ಮಹತ್ವ ನೀಡಿದ್ದರು.

೧. ಸಾಮಾಜಿಕ ಸ್ಥಿತಿ

ವಿಜಯನಗರ ಕಾಲದ ಅರಸರು ದೇವಾಲಯಗಳನ್ನು ಕಟ್ಟಲು ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ದೇವಸ್ಥಾನಗಳ ನಿರ್ಮಾಣಕಾರ್ಯದಲ್ಲಿ ಅರಸರು, ರಾಣಿಯರು, ಆಡಳಿತದ ವಿವಿಧ ಅಧಿಕಾರಿಗಳು, ವರ್ತಕರು, ಸಾಮಾನ್ಯ ಜನರು ಯಾವ ಭೇದಭಾವವಿಲ್ಲದೆ ಸಾಮೂಹಿಕವಾಗಿಯೂ, ವೈಯಕ್ತಿಕವಾಗಿಯೂ ನಿರ್ಮಿಸಿ ದಾನದತ್ತಿಗಳನ್ನು ಬಿಟ್ಟಿದ್ದಾರೆ. ಜೀವನದಲ್ಲಿ ಒಂದಾದರೂ ಗುಡಿಯನ್ನು ಕಟ್ಟಿಸಬೇಕು ಇಲ್ಲವೆ ಕಟ್ಟಿಸಿದ ಗುಡಿಗಳಿಗೆ ದಾನವನ್ನಾದರೂ ಕೊಡಬೇಕೆಂಬುದು ಆಗಿನವರ ಧಾರ್ಮಿಕ ಭಾವನೆಯಾಗಿದ್ದಿತು. ಧರ್ಮದ ಮಹತ್ವದ ಬಗ್ಗೆ ಹಂಪೆ ಶಾಸನವು "ಪಡೆದೊಡಮೆಯಪ್ಪುದೆಂತುಂಕಿಡುವದೆ ಕಿಡದೊಡಮೆ ಧರ್ಮವೆಂದಾರ್ಜಿಸುವರ್ತ್ತಡೆಯದೆ ಧರ್ಮಾದ"[೩] ಎಂದು ಹೇಳುತ್ತದೆ.

ಅಂದಿನ ವೈಷ್ಣವ ದೇವಾಲಯಗಳು ಒಂದು ಸಾಮಾಜಿಕ ಸಂಸ್ಥೆಯಾಗಿ ಕೆಲಸ ಮಾಡುತ್ತಿದ್ದವು. ಇದರಲ್ಲಿ ಎಲ್ಲಾ ರೀತಿಯ ಜನರು ಭಾಗವಹಿಸುತ್ತಿದ್ದು, ಇಲ್ಲಿ ಮೇಲು-ಕೀಳು, ಬಡವ-ಬಲ್ಲಿದ ಎಂಬ ಭಾವನೆ ಕಂಡುಬರುತ್ತಿರಲಿಲ್ಲ. ದೇವಾಲಯವು ದೊಡ್ಡ ಸಂಸ್ಥೆಯಾಗಿ ಬೆಳೆದುದರಿಂದ ಆಡಳಿತ ನಿರ್ವಹಣೆಯಲ್ಲಿ ಹಲವಾರು ಜನರು ಭಾಗಿಯಾಗಬೇಕಾಯಿತು. ಸ್ಥಾನಿಕ, ಆಡಳಿತ ಮಂಡಳಿ, ಅರ್ಚಕರು, ಪರಿಚಾರಕರು ಇತ್ಯಾದಿಯಾಗಿ ದೇವಾಲಯದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಇವರ ನೇಮಕ, ಸಂಬಳ, ದೇವಾಲಯದ ಆಡಳಿತ, ಕರ್ತವ್ಯ ಗಳನ್ನು ನೋಡಿಕೊಳ್ಳಲು ಸ್ಥಾನಿಕ ನೇಮಕವಾದನು. ದೇವಾಲಯಗಳ ನಿರ್ಮಾಪಕರು ಅನೇಕ ದಾನದತ್ತಿಗಳನ್ನು ನೀಡುತ್ತಿದ್ದರು. ಈ ಎಲ್ಲಾ ಕೆಲಸಕಾರ್ಯಗಳನ್ನು ನಿರ್ವಹಿಸುವ ಜವಾಬ್ದಾರಿ ಸ್ಥಾನಿಕನದೆ ಆಯಿತು. ಮಧ್ಯಯುಗೀನ ದಕ್ಷಿಣ ಭಾರತದ ರಾಜ್ಯಾಡಳಿತ ಕ್ರಮದಲ್ಲಿ ದೇವಸ್ಥಾನದ ಆಡಳಿತವು ಸ್ಥಳೀಯ ಸರಕಾರದ ಒಂದು ಮುಖ್ಯ ಅಂಗವಾಗಿತ್ತು. ದೇವಾಲಯವು ಒಂದು ಸ್ಥಳೀಯ ಪ್ರದೇಶದಲ್ಲಿ ಮತೀಯ ಜೀವನದ ಒಂದು ಮುಖ್ಯ ಕೇಂದ್ರವಾಗಿದ್ದುದಲ್ಲದೆ, ಅದು ಸಾಮಾಜಿಕ ಸಂಸ್ಥೆಯೂ ಆಗಿದ್ದಿತು. ಅದು ಪಟ್ಟಣದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನ ಚಟುವಟಿಕೆಗಳಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದಿತು.[೪]

ಕೃಷ್ಣದೇವರಾಯನ ಕಾಲದಲ್ಲಿ ಅರಸರು, ಸಾಮಂತರು, ಪುರೋಹಿತರು, ಅಧಿಕಾರಿಗಳು, ಜನಸಾಮಾನ್ಯರು ದೇವಾಲಯಗಳ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಾಮ್ರಾಜ್ಯದಾದ್ಯಂತ ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಅದರ ಜೊತೆಗೆ ಹಿಂದಿನ ದೇವಾಲಯಗಳಿಗೆ ಹೊಸಭಾಗಗಳನ್ನು ಸೇರಿಸಿ ಜೀರ್ಣೋದ್ಧಾರಗೊಳಿಸಿದರು. ಅನೇಕ ದೇವಾಲಯಗಳಿಗೆ ಗ್ರಾಮದಾನ, ಭೂದಾನ, ಆಭರಣ, ಹಣ, ಸುಂಕ, ಧಾನ್ಯ, ಪರಿಕರಗಳ ದಾನದತ್ತಿಯನ್ನು ನೀಡುತ್ತಿದ್ದರು. ಇವುಗಳನ್ನು ಮುಂದಿನ ಕೋಷ್ಟಕಗಳಲ್ಲಿ ತೋರಿಸಲಾಗಿದೆ :

ಕೋಷ್ಟಕ - ೧ ವೈಷ್ಣವ ದೇವಾಲಯಗಳ ನಿರ್ಮಾಣ ಸೂಚಿ.

ಕೋಷ್ಟಕ - ೨ ವೈಷ್ಣವ ದೇವಾಲಯಗಳ ಜೀರ್ಣೋದ್ಧಾರ ಸೂಚಿ.

ಕೋಷ್ಟಕ - ೩ ವೈಷ್ಣವ ದೇವಾಲಯಗಳ ಗ್ರಾಮದಾನ ಸೂಚಿ.

ಕೋಷ್ಟಕ - ೪ ವೈಷ್ಣವ ದೇವಾಲಯಗಳ ಇತರೆ ದಾನದತ್ತಿ ಪಡೆದ ಸೂಚಿ.

ವೈಷ್ಣವ ದೇವಾಲಯಗಳ ಸಾಮಾಜಿಕ ಚಿತ್ರಣದಲ್ಲಿ ದಾನಿಗಳು ನೀಡಿದ ಕೊಡುಗೆಗಳ ವಿವರ ನೀಡಲಾಗಿದೆ. ಸಮಾಜದ ಎಲ್ಲಾ ನಾಗರೀಕರು ದೇವಾಲಯದ ಕಾರ್ಯದಲ್ಲಿ ಭಾಗಿಯಾಗುತ್ತಿದ್ದರು ಎನ್ನುವುದು ಈ ಮುಂದಿನ ಕೋಷ್ಟಕಗಳಿಂದ ತಿಳಿಯುತ್ತದೆ.

ಕೋಷ್ಟಕ - ೧

ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳ ಸೂಚಿ

ಸಂ.	ಶಾಸನ	ಗ್ರಾಮ / ಊರು	ದೇವಾಲಯ	ನಿರ್ಮಿಸಿದವರು	ಕಾಲ (ಕ್ರಿ.ಶ.)	ವಿಷಯ
೧.	ಕವಿಶಾಸಂ - ೩, ಸಂಖ್ಯೆ - ೭೩	ಹಂಪಿ - ಹೊಸಪೇಟೆ ತಾ.	ಬಾಲಕೃಷ್ಣ	ಕೃಷ್ಣದೇವರಾಯ	೧೫೧೩	ಆಭರಣ, ಪೂಜಾ ಸಾಮಗ್ರಿಗಳು, ಗ್ರಾಮಗಳ ದಾನದತ್ತಿ.
೨.	ಕವಿಶಾಸಂ - ೩, ಸಂಖ್ಯೆ - ೮೧	ಹಂಪಿ	ಶ್ರೀ ಲಕ್ಷ್ಮೀನರಸಿಂಹ	ಆರ್ಯಕೃಷ್ಣಭಟ	೧೫೨೯	ಎರಡು ಗ್ರಾಮಗಳ ದಾನ
೩.	ಕವಿಶಾಸಂ - ೩, ಸಂಖ್ಯೆ - ೨೧೫	ಹಂಪಿ	ನಾರಾಯಣ ದೇವರು	ಸಾಳುವ ನರಸಯ್ಯ	೧೫೨೯	ಧಾನ್ಯದಾನ
೪.	ಕವಿಶಾಸಂ - ೨, ಸಂಖ್ಯೆ - ೭೩, ಗಂಗಾವತಿ ತಾ. ದಾನ	ಕೆಸರಟ್ಟಿ	ಕೃಷ್ಣ	ಕೃಷ್ಣಯ್ಯ	೧೫೨೭	ಹೊಲ, ಗದ್ದೆ, ತೋಟ,
೫.	ಕವಿಶಾಸಂ - ೧, ಸಂಖ್ಯೆ - ೨೮, ಹೊಸಪೇಟೆ ತಾ.	ನಾಗೇನಹಳ್ಳಿ	ನಾಗೇಂದ್ರಶಯನ	ರಂಗನಾಥದೀಕ್ಷಿತ	೧೫೧೬	ಗ್ರಾಮದ ವೃತ್ತಿದಾನ
೬.	ಕವಿಶಾಸಂ - ೧, ಸಂಖ್ಯೆ - ೨೯, ಹೊಸಪೇಟೆ ತಾ.	ಅನಂತಶಯನಗುಡಿ	ಅನಂತಪದ್ಮನಾಭ	ಶ್ರೀಕೃಷ್ಣದೇವರಾಯ	೧೫೨೪	ಭೂದಾನ
೭.	ಕವಿಶಾಸಂ - ೧, ಸಂಖ್ಯೆ - ೧೩, ಸಂಡೂರು ತಾ.	ರಾಮಘಡ	ರಾಮನಾಥ	ಗೋಪಾಯಿ ಮತ್ತು ರಾಮಣ	೧೫೨೭	ಪೂಜಾಸಾಮಾಗ್ರಿಗಳ ದಾನ
೮.	ಆ ಪ್ರ. ಕವಿಶಾಸಂ - ಸಂಖ್ಯೆ - ೫ ಭಾಗ - ೧ - ಸಂಖ್ಯೆ - ೨೭೪ - ಆದೋನಿ	ಆದೋನಿ (ಆ.ಪ್ರ)	ಪ್ರಸನ್ನರಾಮದೇವ	ರಾಮಣ್ಣನಾಯಕ	೧೫೧೮	-
೯.	A R- No. 824 of 1922	ಕೊಮ್ಮೂರು (ಆ.ಪ್ರ)	ಪ್ರಸನ್ನ ಕೇಶವ ಪೆರುಮಾಳ್	ಲಕ್ಷ್ಮೀಕಾಂತರಸು	೧೫೧೭	ದಾನದತ್ತಿ
೧೦.	A R- No-623 of 1915	ಅನ್ನೂರಿ ಗ್ರಾಮ (ತ.ನಾ)	ವರದರಾಜ ಪೆರುಮಾಳ್	ಪೆದ್ದರಾಜುಗಾರು	೧೫೧೯	ಭೂದಾನ
೧೧.	ಕವಿಶಾಸಂ - ೩, ಸಂಖ್ಯೆ - ೨೨೯, ಹೊಸಪೇಟೆ ತಾ. ಹಂಪಿ	ಹಂಪಿ	ರಘುನಾಥದೇವರು	ಗೋಪಿನಾಥ ದೀಕ್ಷಿತನು	೧೫೨೪	ಧಾನ್ಯ ದಾನ, ಹೊನ್ನುದಾನ
೧೨.	ARIE-1970 - 71, ಸಂಖ್ಯೆ - ೧೩೦, ಶಿರಗುಪ್ಪಿ ಹುಬ್ಬಳ್ಳಿ ತಾ. - ಧಾರವಾಡ ಜಿಲ್ಲೆ	ಶಿರಗುಪ್ಪಿ	ಹುಡೇದ ಹನುಮಂತ	ಐರಾಪೀಳನು	೧೫೧೯	-
೧೩.	ARIE-1976-77, No. 160 ದಕ್ಷಿಣಕನ್ನಡ - KN-1005- ಹೆಬ್ರಿ	ಹೆಬ್ರಿ	ಅನಂತದೇವ	ವಿಠ್ಠರಸ ಒಡೆಯರು	೧೫೨೭	ಭೂದಾನ
೧೪.	ಕವಿಶಾಸಂ - ೫, ಭಾಗ - ೧, ಸಂಖ್ಯೆ - ೧೮೫ ಶ್ರೀರಂಗಾಪುರಂ - ಕಲ್ಯಾಣದುರ್ಗ ತಾ. ಅನಂತಪುರ ಜಿಲ್ಲೆ	ಶ್ರೀರಂಗಾಪುರಂ (ಆ.ಪ್ರ)	ಶ್ರೀರಂಗನಾಥ	ಶ್ರೀರಂಗಯ್ಯ	೧೫೦೯ - ೩೦	ಭೂದಾನ

ಕೋಷ್ಟಕ - ೨

ಕೃಷ್ಣದೇವರಾಯನ ಕಾಲದಲ್ಲಿ ಜೀರ್ಣೋದ್ಧಾರಗೊಂಡ ವೈಷ್ಣವ ದೇವಾಲಯಗಳು

ಸಂ.	ಶಾಸನ	ಗ್ರಾಮ / ಊರು	ದೇವಾಲಯ	ಜೀರ್ಣೋದ್ಧಾರಗೊಳಿಸಿದವರು	ಕಾಲ (ಕ್ರಿ.ಶ.)	ವಿಷಯ
೧.	SII- XVI- ಸಂಖ್ಯೆ - ೫೬ - ಕವಿಶಾಸಂ - ೩ - ಹಂಪಿ - ಸಂಖ್ಯೆ - ೧೮೧, AR-49 - of 1889, SII- IV- No-278	ಹಂಪಿ	ವಿಠಲೇಶ್ವರ	ಕೃಷ್ಣದೇವರಾಯ ಅವನ ರಾಣಿಯರು	೧೫೧೩	ಗ್ರಾಮಗಳ ದಾನ
೨.	SII- XVI- No- 57	ವಿಷ್ಣುಕಂಚಿ (ತ.ನಾ)	ವರದರಾಜದೇವರು	ಕೃಷ್ಣದೇವರಾಯ ಅವನ ರಾಣಿಯರು	೧೫೧೭	ಗ್ರಾಮದಾನ
೩.	SII- XVII- No- 679-680	ನಾಗಲಾಪುರಂ (ತ.ನಾ)	ಕರಿಯಾ ಮಾಣಿಕ್ಯ ಪೆರುಮಾಳ್	ಅನ್ನೆತ್ರಲಗನ್‌ಕೊಂಡ ಹರಿದಾಸಾರ್	೧೫೨೦	೧೦೦೦ ಹೊನ್ನುದಾನ
೪.	ಕವಿಶಾಸಂ - ೩ - ಸಂಖ್ಯೆ - ೨೫೭ - ಹಂಪಿ	ಹಂಪಿ	ರಾಮಚಂದ್ರ ದೇವರು	ತಿಮ್ಮರಾಜನು	೧೫೨೧	ಭೂದಾನ
೫.	EC-9- No-159 ಉತ್ಪತ್ತಿಹಳ್ಳಿ	ಬೇಲೂರು	ಚೆನ್ನಕೇಶವನಾಥ ದೇವರು	ಬಸವಪ್ಪನಾಯಕರು	೧೫೨೪	ಗ್ರಾಮದಾನ
೬.	EC- X- MB-3- ಕೋಲಾರ ಜಿಲ್ಲೆ - KN-1466	ಮುಳಬಾಗಿಲು	ಹನುಮಂತದೇವರು	ಸಿದ್ದಣ್ಣ ಒಡೆಯನು	೧೫೨೧	ಗ್ರಾಮದಾನ
೭.	EC- IV- (Rev-1975) Ch- No-100	ಉಮ್ಮತ್ತೂರು	ರಂಗನಾಥಸ್ವಾಮಿ	ಲಕ್ಕರಾಜು	೧೫೨೭	-
೮.	SII- XXIV- No-369	ಶ್ರೀರಂಗಂ (ತ.ನಾ)	ವಿಠಲೇಶ್ವರ ಆಳ್ವಾರ್ ಮಧುರಕವಿ	ಮಾಧವಯಂಗಾರ್	೧೫೧೫	-
೯.	SII- Vol- XVI- No-70	ಡೊಮ್ಮರ ನಂದ್ಯಾಲ (ಆ.ಪ್ರ)	ಚೆನ್ನಕೇಶವಸ್ವಾಮಿ	-	-	-
೧೦.	SII- XX- No-235	ಸೌದತ್ತಿ	ಯಲ್ಲಮ್ಮ	ಬಾಗಿಲ ತಿಮ್ಮಪ್ಪನಾಯಕ	೧೫೧೪	-

ಕೋಷ್ಟಕ - ೩

ಕೃಷ್ಣದೇವರಾಯನ ಕಾಲದಲ್ಲಿ ಗ್ರಾಮ ದಾನದತ್ತಿ ಪಡೆದ ವೈಷ್ಣವ ದೇವಾಲಯಗಳು

ಸಂ.	ಶಾಸನ	ಗ್ರಾಮ / ಊರು	ದೇವಾಲಯ	ಗ್ರಾಮ ದಾನದತ್ತಿ ನೀಡಿದವರು	ಕಾಲ (ಕ್ರಿ.ಶ.)	ದಾನದ ವಿವರ - ಗ್ರಾಮ
೧.	SII- IX- ii- NO. 485	ಹಿರಿಯಧಾಳಿವಟ	ಆಹೋಬಲ ನರಸಿಂಹ	ಊಳಿಗದ ಮಲ್ಲಯ್ಯನು	೧೫೧೨	ಉಪ್ಪಡಿಹಳ್ಳಿ
೨.	SII- XXVI- No. 714	ಶ್ರೀರಂಗಂ	ಶ್ರೀರಂಗನಾಥ	ಕೃಷ್ಣದೇವರಾಯ	೧೫೧೨	ಉಪ್ಪೂರುಹಳ್ಳಿ
೩.	ಎ.ಕ. - iii- ನಂಜನಗೂಡು - ಸಂಖ್ಯೆ - ೧೯೦ ರಾಮಸೆಟ್ಟಿಪುರ	ಒಡೆಯೂರು	ಜನಾರ್ಧನ	ಮಂಡಳೇಶ್ವರ ಕೃಷ್ಣವರ್ಮ	೧೫೧೨	ದಾಸನೂರು,
೪.	ಕವಿಶಾಸಂ - ೨ - ಕೊಪ್ಪಳ - ಸಂಖ್ಯೆ - ೧೬೦	ಹಂಪಿ	ವಿಠಲೇಶ್ವರ	ಕೃಷ್ಣದೇವರಾಯ	೧೫೧೩	ಹರಿಹರಪುರ
೫.	SII- IX- ii- No. 494	ಪುಷ್ಪಗಿರಿ	ಚೆನ್ನಕೇಶ್ವರ	ಕೃಷ್ಣದೇವರಾಯ	೧೫೧೪	ಚೆನ್ನಮಾಂಚುಪಲ್ಲಿ
೬.	SII- XVVI- No-677	ಅರಿಗಂಡಪುರಂ	ಕರಿಯಾಮಾಣಿಕ್ಯ ಪೆರುಮಾಳ್	ಕೃಷ್ಣದೇವರಾಯ	೧೫೧೪	ಕೃಷ್ಣರಾಯಪುರಂ
೭.	ಕವಿಶಾಸಂ - ೨ - ಕೊಪ್ಪಳ - ಸಂಖ್ಯೆ - ೧೬೧	ಹಂಪಿ	ಬಾಲಕೃಷ್ಣ	ಕೃಷ್ಣದೇವರಾಯ	೧೫೧೫	ಅತ್ತಿವಟ್ಟಿ
೮.	SII- XVI- No. 67	ದುಗ್ಗಿ	ವೆಂಕಟೇಶ್ವರ	ಪೆದಸಿಂಗಮನಾಯಕನು	೧೫೧೮	ಗುಂಡ್ಲಾಲ
೯.	ಕವಿಶಾಸಂ - ೨ - ಕೊಪ್ಪಳ - ಸಂಖ್ಯೆ - ೩೯	ಕೊಪ್ಪಳ	ಚೆನ್ನಕೇಶ್ವರ	ಭಂಡಾರದ ತಿಮ್ಮಪ್ಪಯ್ಯ	೧೫೨೧	ಹಿರಿಯಸಿನ್ದೋಗಿ
೧೦.	SII- XVI- No. 70	ನಂದ್ಯಾಲ	ಚೆನ್ನಕೇಶ್ವರ	ಕತ್ತಿತಿಪ್ಪನಾಯುಡು ಪಾಪನಾಯುಡು ಯರ್ರಮನಾಯುಡು	೧೫೨೧	ರೇನಾಟ ನಂದ್ಯಾಲ
೧೧.	EC-9 - No. 11 ಗಂಗಾವರ,ಮಳವಳ್ಳಿ,ಕುಸುವರ	ಬೇಲೂರು	ಚೆನ್ನಕೇಶವ	ಸಿಂಗಪ್ಪನಾಯಕ	೧೫೨೨	
೧೨.	SII- XVI- No. 73	ಕುಂಡೂರೂ	ಪುರುಷೋತ್ತಮ	ಮಹಾಮಂಡಳೇಶ್ವರ ಸರ್ವಯದೇವಚೂಡ ಮಹಾರಾಜರು	೧೫೨೨	ಕುಂಡೂರೂ
೧೩.	SII- XVI- No. 74	ವೆಂಪಲಪರ್ತಿ	ತಿರುವೇಂಗಳನಾಥ	ತಿಮ್ಮನಾಯಕ	೧೫೨೨	ಭೈರಾಸಮುದ್ರಂ
೧೪.	EC-7- No.123-124	ಕಾಳಿಂಗರಾಯನಹಳ್ಳಿ	ಚೆಲಪಿಳೆಯದೇವರು	ಚೋಳಪಯ್ಯ	೧೫೨೬	ಕಾಳಿಂಗರಾಯನಹಳ್ಳಿ

ಸಂ.	ಶಾಸನ	ಗ್ರಾಮ / ಊರು	ದೇವಾಲಯ	ಗ್ರಾಮ ದಾನದತ್ತಿ ನೀಡಿದವರು	ಕಾಲ (ಕ್ರಿ.ಶ.)	ದಾನದ ವಿವರ - ಗ್ರಾಮ
೧೫.	EC- ೩- No. 298	ಉಮ್ಮತ್ತೂರು	ಶ್ರೀರಂಗನಾಥ	ಅಪ್ಪಣ್ಣದೇವಗಳು	೧೫೨೬	ರಂಗನಾಥಪುರ
೧೬.	SII- XVI- No. 84	ಕತ್ರಕಾಂಡ್ಲ	ಚೆನ್ನಕೇಶ್ವರ	ಎಲ್ಲನರಸಯ್ಯ	೧೫೨೯	ನುವ್ವಸೂಳೆಪಾಡು
೧೭.	SII- XVI- No. 85	ಮಾರವಪಳ್ಳಿ ಅಗ್ರಹಾರಂ	ತಿರುವೇಂಗಳನಾಥ	ಕೇಶವನಾಥ ಮತ್ತು ಮಾಚಿರಾಜು ತಮ್ಮ ೨೪ ಕುಲದ ಜನರು	೧೫೨೯	ದೊಂಪರಿಪನ್ನು
೧೮.	SII- XVI- No. 45	ಕುಂಡಲ್ಕೊಡು	ರಂಗನಾಥ	ಬೆಜವಾಡದ ಮಾಧವವರ್ಮ	೧೫೦೯	ಕುಂಡಲ್ಕೊಡು
೧೯.	ಕವಿಶಾಸಂ - ೧ - ಹೊಸ - ಸಂಖ್ಯೆ - ೨೫	ಹಂಪಿ	ವಿಠಲದೇವರು	ಕೃಷ್ಣದೇವರಾಯ	೧೫೧೨	ವಿರುಪಾಪುರ
೨೦.	ಕವಿಶಾಸಂ - ೨ - ಗಂಗಾವತಿ - ಸಂಖ್ಯೆ - ೮೦	ಕನಕಗಿರಿ	ಕನಕಗಿರಿನಾಥ	ಕೃಷ್ಣದೇವರಾಯ	೧೫೧೨	ಚೆನ್ನಪುರ, ಕಳಸಗ್ರಾಮ, ಬಾರಪುರ
೨೧.	ಕವಿಶಾಸಂ - ೩ - ಸಂಖ್ಯೆ - ೨೦೮ SII- IV- No. 277 ಹರಿಯಾಲಪುರ	ಹಂಪಿ	ವಿಠಲದೇವರು	ಕೃಷ್ಣದೇವರಾಯ	೧೫೧೩	ಸಿಂಘಾಪುರ,
೨೨.	ಕವಿಶಾಸಂ - ೫ - ಭಾಗ - ೧ - ಸಂಖ್ಯೆ - ೨೬೧, TTDI- Vol- III- No. 91	ತಿರುಮಲೆ	ತಿರುವೇಂಗಳನಾಥ	ತಿರುಮಲೆಯ ಸ್ಥಾನದವರು	೧೫೧೫	ಗಂಗಲಪೂಂಡಿ
೨೩.	ಕವಿಶಾಸಂ - ೫ - ಭಾಗ ೨ - ಸಂಖ್ಯೆ - ೪೭೨	ಆಲಂಪುರ	ಯೋಗನಂದಾನಾರಸಿಂಹ	ನಾರಾಯಣಯ್ಯ	೧೫೨೧	ನಾರಸಿಂಹಪುರ
೨೪.	ಕವಿಶಾಸಂ - ೫ - ಭಾಗ - ೨ - ಸಂಖ್ಯೆ - ೬೨೦	ಉದಯಗಿರಿ	ರಾಮಚಂದ್ರ	ಕೃಷ್ಣದೇವರಾಯ	೧೫೧೩	ಚಿನುಪರೆ
೨೫.	EC- ೩- ಸಂಖ್ಯೆ - ೧೧೯	ತೆರಕಾಣಂಬಿ	ರಾಮಭದ್ರ	ಪ್ರಧಾನಮಂತ್ರಿ ಸಾಳುವ ಗೋವಿಂದರಾಜಯ್ಯ	೧೫೨೧	ತೆರಕಾಣಂಬಿ
೨೬.	SII- XV- No. 251	ಗಾಡಗೋಳಿ	ಹನುಮಂತ	ಕೃಷ್ಣದೇವರಾಯ	೧೬ನೇ ಶತಮಾನ	ಗ್ರಾಮದಾನ
೨೭.	ಧಾರವಾಡ ಜಿಲ್ಲೆ ಶಾಸನ ಸೂಚಿ - ಬ್ಯಾಡಗಿ ತಾಲೂಕು - ಕಳಗೊಂಡ	ಕಳಗೊಂಡ	ಗುಡ್ಡದ ತಿರುಮಲ	ಕೃಷ್ಣದೇವರಾಯ	೧೬ನೇ ಶತಮಾನ	ಗ್ರಾಮದಾನ

ಕೋಷ್ಟಕ - ೪

ಕೃಷ್ಣದೇವರಾಯನ ಕಾಲದಲ್ಲಿ ಇತರೆ ದಾನದತ್ತಿ ಪಡೆದ ವೈಷ್ಣವ ದೇವಾಲಯಗಳು

ಸಂ.	ಶಾಸನ	ಗ್ರಾಮ / ಊರು	ದೇವಾಲಯ	ಇತರ ದಾನದತ್ತಿ ನೀಡಿದವರು	ಕಾಲ (ಕ್ರಿ.ಶ.)	ದಾನದ ವಿವರ - ಗ್ರಾಮ
೧.	SII- XXII- Part- I- No. 240	ತಿರುಪ್ಪಂಗಾಡು	ಧ್ಯೆಯಾರ	ಯಲ್ಲಪ್ಪನಾಯಕ	೧೫೧೦	ತೆರಿಗೆಗಳು
೨.	SII- XVI- No. 66	ಕೊಕಟನ್	ಚೆನ್ನಕೇಶವ ಮತ್ತು ಹನುಮಾನ್	ಅಲ್ಲಸಾನಿ ಚೊಕ್ಕಯ್ಯ	೧೫೧೮	ಗ್ರಾಮದ ವೃತ್ತಿ
೩.	EC-3 - No. 119 ಎ.ಕ. XIV- ಗುಪೇ - ಸಂಖ್ಯೆ - ೮೧	ತೆರಕಣಾಂಬಿಹಳ್ಳಿ	ಅವರುದೇವ	ಮಹಾಪ್ರಧಾನಿ ಸಾಳುವ ಗೋವಿಂದರಾಜಯ್ಯ	೧೫೨೧	ಹಣ
೪.	SII- XVI- No. 71	ಕಂಚಿ	ವರದರಾಜ	ರಾಯಸಂ ಶ್ರಿಪತಿರಾಯ	೧೫೨೧	ಬೆಳ್ಳಿಯ ಆಭರಣ, ೩೦೦ ಮಡಸ್
೫.	SII- XVI- No. 78-79	ಕತ್ರಕಂಡ್ಲ	ಚೆನ್ನಕೇಶ್ವರ	ಅನ್ನಜಯ್ಯ	೧೫೨೫	ಭೂದಾನ - ಗ್ರಾಮದಾನ
೬.	SII- XVI- No. 81	ಕೊರ್ರಪಾಡು	ಚೆನ್ನಕೇಶವ	ಮಾಧವರಾಜು ಮತ್ತು ಕೇಶವರಾಜು	೧೫೨೬	೧ ವರಹಾ ಗದ್ಯಾಣ
೭.	SII- XVI- No. 83	ಕದಿರಿ	ನರಸಿಂಹ	ದೇವಮಿಕೊನಪ್ಪನಾಯುಡು	೧೫೨೯	ಭೂದಾನ
೮.	EC- V- No. 2	ಟಿ.ನರಸೀಪುರ	ನರಸಿಂಹ	ರಾಚಿರಾಜು	೧೬ನೇ ಶತಮಾನ	ಭೂದಾನ
೯.	SII- XVI- No. 51	ಕಂಚಿ	ಅರುಳಾಲ್ ಪೆರುಮಾಳ್	ಕೃಷ್ಣದೇವರಾಯ	೧೫೧೨	ಬಂಗಾರ, ವಜ್ರ, ಹಣದಾನ
೧೦.	SII- XVI- No. 53	ಆಹೋಬಲಂ	ನರಸಿಂಹಸ್ವಾಮಿ	ಕೃಷ್ಣದೇವರಾಯ	೧೫೧೯	ಬಂಗಾರ, ೧೦೦೦ ವರಹಾ
೧೧.	SII- XVI- No. 57	ವಿಷ್ಣುಕಂಚಿ	ವರದರಾಜ	ಚಿನ್ನಾದೇವಿ ಮತ್ತು ತಿರುಮಲದೇವಿ	೧೫೧೬	೧೦೦೦ ವರಹಾ
೧೨.	SII- XVI- No. 76	ಕಂಚಿ	ವರದರಾಜ	ಶ್ರೀಪತಿರಾಯ	೧೫೨೪	ವಜ್ರ, ವೈಡೂರ್ಯ, ಮಾಣಿಕ್ಯ, ಮುತ್ತುಗಳು, ಕೆಂಪು, ಪದಕ
೧೩.	ಕವಿಶಾಸಂ - ೩, ಸಂಖ್ಯೆ - ೩೨೦	ವಿಜಯನಗರ	ಕರಿಯತಿರುವೇಂಗಳನಾಥ	ತಿರುಮಲದೇವಿ	೧೫೧೮	ಭೂಮಿ

ಸಂ.	ಶಾಸನ	ಗ್ರಾಮ / ಊರು	ದೇವಾಲಯ	ಇತರ ದಾನದತ್ತಿ ನೀಡಿದವರು	ಕಾಲ (ಕ್ರಿ.ಶ.)	ದಾನದ ವಿವರ - ಗ್ರಾಮ
೧೪.	ಕವಿಶಾಸಂ - ೫, ಭಾಗ - ೧, ಸಂಖ್ಯೆ - ೨೫೫ TTDI- Vol- III- No. 33	ತಿರುಮಲೆ	ತಿರುವೇಂಗಳನಾಥ	ಕೃಷ್ಣದೇವರಾಯ	೧೫೧೩	ನವರತ್ನ ಕಿರೀಟ, ಇತರ ವಸ್ತುಗಳು
೧೫.	ಕವಿಶಾಸಂ - ೫, ಭಾಗ - ೧, ಸಂಖ್ಯೆ - ೨೫೭	ತಿರುಮಲೆ	ತಿರುವೇಂಗಳನಾಥ	ಚಿನ್ನಜಿ ಅಮ್ಮನವರು	೧೫೧೩	ಚಿನ್ನದ ಬಟ್ಟಲು
೧೬.	ಕವಿಶಾಸಂ - ೫, ಭಾಗ - ೧, ಸಂಖ್ಯೆ - ೨೬೩ TTDI- Vol- III- No. 62	ತಿರುಮಲೆ	ತಿರುವೇಂಗಳನಾಥ	ಕೃಷ್ಣದೇವರಾಯ	೧೫೧೩	ಉತ್ಸವಮೂರ್ತಿಗಳಿಗೆ ಕಿರೀಟಗಳು, ಆಭರಣಗಳು
೧೭.	TTDI- Vol- III- No. 67	ತಿರುಮಲೆ	ತಿರುವೇಂಗಳನಾಥ	ಕೃಷ್ಣದೇವರಾಯ	೧೫೧೪	೩೦,೦೦೦ ವರಹ
೧೮.	ಎಸ್.ಕೆ. ರಾಮಚಂದ್ರರಾವ್, ತಿರುಪತಿ ತಿಮ್ಮಪ್ಪ, TTDI- ಪುಟ - ೧೩೯ - ೧೪೦	ತಿರುಮಲೆ	ತಿರುವೇಂಗಳನಾಥ	ಕೃಷ್ಣದೇವರಾಯ	೧೫೧೫	ಪ್ರಭಾವಳಿ
೧೯.	ಎಸ್.ಕೆ. ರಾಮಚಂದ್ರರಾವ್, ತಿರುಪತಿ ತಿಮ್ಮಪ್ಪ, TTDI- ಪುಟ - ೧೪೦	ತಿರುಮಲೆ	ತಿರುವೇಂಗಳನಾಥ	ಕೃಷ್ಣದೇವರಾಯ	೧೫೧೭	೩೦,೦೦೦ ವರಹ, ಸುಂಕ
೨೦.	TTDI- Vol- III- No. 83 ಕುಲಾವಿ,	ತಿರುಮಲೆ	ತಿರುವೇಂಗಳನಾಥ	ಕೃಷ್ಣದೇವರಾಯ ಮತ್ತು ತಿರುಮಲದೇವಿ	೧೫೨೧	ನವರತ್ನ ಪೀತಾಂಬರ, ಚಾಮರ, ೧೦.೦೦೦ ವರಹ, ನವರತ್ನ ಪದಕ

ಆಡಳಿತ

ಸಾಮೂಹಿಕ ಕೇಂದ್ರಗಳಾದ ದೇವಾಲಯಗಳು ಸಮಾಜದ ವಿಭಿನ್ನ ಅಂಗವಾಗಿ ರೂಪುಗೊಳ್ಳುತ್ತಾ ಬಂದವು. ನಿರ್ಮಾಣವಾದ ದೇವಾಲಯದೊಳಗಿನ ದೇವರಿಗೆ ಪೂಜೆ, ಪುನಸ್ಕಾರಗಳು, ಅದನ್ನು ನೆರವೇರಿಸುವ ಪೂಜಾರಿವರ್ಗ, ಅವರಿಗೆ ನೆರವಾಗುವ ಸೇವಕರು ಅವರೆಲ್ಲರ ಜೀವನ ನಿರ್ವಹಣೆ - ಹೀಗೆ ದೇವಾಲಯ ಜವಾಬ್ದಾರಿ ಬೆಳೆಯುತ್ತಾ ಹೋಯಿತು. ದೇವಾಲಯಗಳ ನಿರ್ವಹಣೆ ಸಂಕೀರ್ಣವಾಯಿತು. ದೇವಸ್ಥಾನಗಳು ವಿದ್ಯಾಕೇಂದ್ರಗಳಾಗಿ ಮತ್ತು ಮಠಗಳಾಗಿ ಕಾರ್ಯ ನಿರ್ವಹಿಸತೊಡಗಿದ ನಂತರ ಅದರ ಜವಾಬ್ದಾರಿ ಮತ್ತಷ್ಟು ಹೆಚ್ಚಿತು. ಸಾಮೂಹಿಕ ಪೂಜಾ ಸ್ಥಳವಾಗಿ ಉಗಮಗೊಂಡ ದೇವಾಲಯವು ಕ್ರಮೇಣ ಸಮಾಜದ ಕೇಂದ್ರಬಿಂದುವಾಯಿತು. ವಿದ್ಯಾಭ್ಯಾಸ, ಧರ್ಮ, ಕಲೆ, ನ್ಯಾಯದಾನ ಇತ್ಯಾದಿ ಸಾಂಸ್ಕೃತಿಕ ಅಂಶಗಳ ಬೆಳವಣಿಗೆಯ ಮೂಲಸ್ಥಾನವಾಯಿತು.

ದೇವಾಲಯಗಳನ್ನು ನಿರ್ಮಿಸಿದ ವ್ಯಕ್ತಿಗಳು ಅದರ ಕಾರ್ಯಚಟುವಟಿಕೆಗಳು ನಡೆಯುವುದಕ್ಕೆ ಹೇರಳವಾಗಿ ದಾನದತ್ತಿಗಳನ್ನು ಬಿಡುತ್ತಿದ್ದರು. ಹೀಗೆ ಬಂದ ದಾನದತ್ತಿಗಳು ಅಲ್ಲಿನ ಕೆಲಸಕಾರ್ಯಗಳು, ಅವುಗಳ ನಿರ್ವಹಣಾ ವಿಧಾನ, ಪೂಜಾಕೈಂಕರ್ಯಗಳು, ಪೂಜೆ ಮಾಡುವ ಮತ್ತು ಅವರಿಗೆ ಸಹಾಯಮಾಡುವ ಜನರ ಜೀವನನಿರ್ವಹಣೆ, ಪೂಜಾವಿಧಿಯಲ್ಲಿ ಆಗಬೇಕಾಗಿದ್ದ ಖಂಡ ಸ್ಫುಟಿತ ಜೀರ್ಣೋದ್ಧಾರ... ಇತ್ಯಾದಿ ಕಾರ್ಯಗಳ ವ್ಯವಸ್ಥೆ ಮತ್ತು ನಿರ್ವಹಣೆ ಮುಂತಾದ ಜವಾಬ್ದಾರಿಗಳನ್ನು ಗಂಭೀರವಾಗಿ ಪರಿಗಣಿಸಬೇಕಾದದ್ದು ಅವಶ್ಯವಾಯಿತು. ಇದರಿಂದ ದೇವಾಲಯದ ಆಡಳಿತಾತ್ಮಕ ಜವಾಬ್ದಾರಿಯನ್ನು ಒಬ್ಬವ್ಯಕ್ತಿಯು ಒಪ್ಪಿಕೊಂಡು ನಿರ್ವಹಿಸುವುದು ಅನಿವಾರ್ಯವಾಯಿತು. ಹೀಗೆ ದೇವಾಲಯಗಳ ಜವಾಬ್ದಾರಿ ಹೊತ್ತ ಮುಖ್ಯಸ್ಥನೇ 'ಸ್ಥಾನಪತಿ' ಅಥವಾ ಸ್ಥಾನಿಕ.[೫]

ಸ್ಥಾನಿಕ

ಪಿ. ಗುರುರಾಜಭಟ್ಟರು ಅವಲೋಕಿಸಿರುವಂತೆ 'ಸ್ಥಾನಿಕ' ಎಂಬ ಪದವು ಅಧಿಕಾರ ಸೂಚಕವಷ್ಟೇ ಹೊರತು ಜಾತಿ ಸೂಚಕವಲ್ಲ.[೬] ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ 'ಸ್ಥಾನಿಕ' ಎಂಬುವವನು ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಳ್ಳುವ ಅಧಿಕಾರಿ. ಕಾಲಕಳೆದಂತೆ ದೇವಾಲಯದ ಸ್ಥಿರ ಆಸ್ತಿ ಮತ್ತು ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿಯನ್ನು 'ಸ್ಥಾನಿಕ' ಎಂದೇ ಪರಿಗಣಿಸಲಾಗಿದೆ. ಸ್ಥಾನಿಕ ಎಂಬ ಅಧಿಕಾರವು ಜೈನ, ಶ್ರೀವೈಷ್ಣವ, ಕಾಳಾಮುಖ ಹಾಗೂ ಶೈವರಲ್ಲಿ ಗೌರವದ ಸ್ಥಾನವಾಗಿ ಪರಿಗಣಿತವಾಗಿತ್ತು.

ದೇವಾಲಯಗಳ ಆಡಳಿತಾತ್ಮಕ ಮತ್ತು ಆರ್ಥಿಕ ಜವಾಬ್ದಾರಿಯನ್ನು ಒಪ್ಪಿಕೊಂಡಿದ್ದ 'ಸ್ಥಾನಿಕ' ಅಥವಾ 'ಸ್ಥಾನಪತಿ'ಯನ್ನು ರಾಜನಾಗಲಿ ಅಥವಾ ಅಧಿಕಾರಿಯಾಗಲಿ ನೇಮಿಸುತ್ತಿದ್ದಂತೆ ಉಲ್ಲೇಖಗಳಿಲ್ಲ. ಆದರೆ ದೇವಾಲಯದ ನಿರ್ಮಾತೃಗಳಾದ ದಾನಿಗಳೇ ಸ್ಥಾನಿಕರನ್ನು ನೇಮಿಸುವುದು ಕೆಲವೊಂದು ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಕೊಂಡಚೆಟಿಯ ಮಗ ಕೃಷ್ಣಯ್ಯನು ಕೆಸರಟ್ಟಿಯಲ್ಲಿ ಕೃಷ್ಣದೇವರನ್ನು ಪ್ರತಿಷ್ಠೆ ಮಾಡಿಸಿ ಕೊಮಾರಪೆರುಮಾಳೆ ಮತ್ತು ಆತನ ತಮ್ಮ ರಾಮಾಂಜಯ್ಯನಿಗೆ ಸ್ಥಾನಿಕ ಪದವಿಯನ್ನು ನೀಡುತ್ತಾನೆ.[೭] ಕೃಷ್ಣಯ್ಯನು ತನ್ನ ಮಾತಿನಂತೆ ನಡೆಯಬೇಕೆಂದು ಸ್ಥಾನಿಕರಿಗೆ ಕಟ್ಟಳೆ ವಿಧಿಸುತ್ತಾನೆ.

ಇಲ್ಲಿ ದೇವಾಲಯದ ನಿರ್ಮಾಣವು ದಾನಿಗಳಿಂದ ಕೈಗೊಂಡಾಗ ಹೊಸ ದೇವಾಲಯಕ್ಕೆ 'ಸ್ಥಾನಿಕ'ರನ್ನು ನೇಮಿಸುವ ಜವಾಬ್ದಾರಿ ದಾನಿಗಳಿಗೆ ಇದ್ದಿತು. ಅವರ ನೇಮಕಾತಿಯಿಂದ ಹಿಡಿದು ದೇವಾಲಯಗಳ ಸೇವಾವರ್ಗ ಮತ್ತು ದೇವಾಲಯದ ಪೂಜೆಯು ಸುಗಮವಾಗಿ ನಡೆದುಕೊಂಡು ಹೋಗಲು ಹಲವು ದತ್ತಿಗಳನ್ನು ನೀಡಿ ಅವರನ್ನು ನೇಮಿಸುತ್ತಿದ್ದನು.

ಕೃಷ್ಣದೇವರಾಯನು ಹಂಪಿಯಲ್ಲಿ ಉದಯಗಿರಿಯಿಂದ ತಂದ ಬಾಲಕೃಷ್ಣ ಪ್ರತಿಮೆಗೆ ದೇವಾಲಯವನ್ನು ಕಟ್ಟಿಸಿ ಅದರ ನಿರ್ವಹಣೆಗೆ ಇಬ್ಬರು ಸ್ಥಾನಿಕರನ್ನು ಆಯ್ಕೆಮಾಡಿದ.[೮] ದೇವಾಲಯದ ನಿರ್ಮಾತೃಗಳು ಸ್ಥಾನಿಕರನ್ನು ಆಯ್ಕೆಮಾಡುತ್ತಿದ್ದರು. ಅವರು ತಮ್ಮ ಹೇಳಿಕೆಗಳಿಗೆ ಅನುಸಾರವಾಗಿ ನಡೆದುಕೊಂಡು ಬರಲು ಕಟ್ಟಳೆಗಳನ್ನು ವಿಧಿಸಿರುವುದು ಉಲ್ಲೇಖವಾಗಿದೆ. ಹೊಸ ದೇವಾಲಯವನ್ನು ನಿರ್ಮಾಣ ಮಾಡಿದಾಗ ಹೊಸ ಸ್ಥಾನಿಕರನ್ನು ನೇಮಿಸುವುದು ಕಲವು ಶಾಸನಗಳಲ್ಲಿ ಕಂಡುಬಂದರೆ ಇನ್ನೂ ಹಳೆಯ ದೇವಾಲಯಗಳ ಸ್ಥಾನಿಕರಿಗೆ ಹೊಸ ದೇವಾಲಯಗಳ ನಿರ್ವಹಣಾ ಜವಾಬ್ದಾರಿ ನೀಡಿರುವುದು ಹಲವು ಶಾಸನಗಳಲ್ಲಿ ಕಂಡುಬರುತ್ತದೆ.

ರಂಗುಭಟ್ಟನು ಹಂಪಿಯ ವಿಠಲದೇವಾಲಯದಲ್ಲಿ ಆಳ್ವಾರರ ದೇವಾಲಯದ ಪೂಜೆ ಮತ್ತು ದೇವಾಲಯದ ವ್ಯವಸ್ಥೆಯನ್ನು ನೋಡಿಕೊಳ್ಳಲು ಆಯಿರಾಮಜಯ್ಯನ ಮಕ್ಕಳಿಗೆ ಸ್ಥಾನಿಕರಾದ ಹಿರಿಯವಲಭಯ್ಯ ಮತ್ತು ಚಿಕ್ಕವಲಭಯ್ಯರಿಗೆ ಒಪ್ಪಿಸಿದುದು ತಿಳಿದುಬರುತ್ತದೆ.[೯] ಇವರು ಸ್ಥಾನಿಕ ಪದವಿಯ ಜೊತೆಗೆ ಪೂಜೆ, ನೈವೇದ್ಯ ಮಾಡಿಕೊಂಡು ಬರಬೇಕೆಂದು ಹೇಳಿದ್ದು ವಿಶೇಷವಾಗಿದೆ. ಇದು ಹೆಚ್ಚಿನ ಕಡೆ ಕಂಡುಬಂದಿಲ್ಲದ ಕಾರಣ ಸ್ಥಾನಿಕವು ವಂಶಪಾರಂಪರ್ಯವಾಗಿ ಅಥವಾ ಶಿಷ್ಯಪರಂಪರೆಯನ್ನು ಮುಂದುವರಿಸುತ್ತಾ ಬಂದ ಅಧಿಕಾರವಾಗಿತ್ತು.

ಸ್ಥಾನಪತಿಯು ದೇವರಿಗೆ, ದೇವಾಲಯಕ್ಕೆ, ಮಠಕ್ಕೆ ನೀಡಲ್ಪಟ್ಟ ದಾನಗಳನ್ನು ಸ್ವೀಕರಿಸುವ ಅಧಿಕಾರವನ್ನು ಪಡೆದಿದ್ದನು. ದಾನಿಗಳಿಂದ ಪಡೆದ ದಾನವನ್ನು ವ್ಯವಸ್ಥಿತವಾಗಿ ವಿನಿಯೋಗಿಸುವ ಆರ್ಥಿಕ ಜವಾಬ್ದಾರಿಯು ಇವನದಾಗಿತ್ತು. ದೇವಾಲಯಗಳಿಗೆ ಸಂಬಂಧಿಸಿದಂತೆ ಸ್ಥಾನಪತಿಯದೇ ಪ್ರಥಮಾಧಿಕಾರವಾಗಿತ್ತು. ಆತನು ಗುರುಸ್ಥಾನದಲ್ಲಿರುತ್ತಿದ್ದುದರಿಂದ ಗುರು ಅಥವಾ ಆಚಾರ್ಯಸ್ಥಾನವೂ ಜೊತೆಗೂಡಿ, ದೇವಸ್ಥಾನವೇ ಅವನ ಮಾತುಗಳಿಗೆ ಬದ್ಧವಾಗಿರುತ್ತಿತ್ತು. ದೇವಾಲಯ ಆಡಳಿತವರ್ಗದ ಅಧಿಕಾರ ಸ್ಥಾನದಲ್ಲಿ ಸ್ಥಾನಿಕನೇ ವಿನಃ ಮತ್ತಾರೂ ದೇವಾಲಯವನ್ನು ಪ್ರತಿನಿಧಿಸುತ್ತಿರಲಿಲ್ಲ. ನಾಡನ್ನಾಳುವ ಅರಸು, ಊರೊಡೆಯರು, ವರ್ತಕವರ್ಗ...ಇತ್ಯಾದಿ ಊರಪ್ರಮುಖರು, ಮಹಾಜನರು ಸ್ಥಾನಪತಿಯ ಜೊತೆಗೆ ದೇವಸ್ಥಾನದ ಆಡಳಿತಾತ್ಮಕ ವಿಷಯಗಳಲ್ಲಿ ಸಹಕರಿಸುತ್ತಿದ್ದರು; ಆದರೂ ದೇವಾಲಯದ ಆಡಳಿತ ಪ್ರತ್ಯಕ್ಷ ಪರಮಾಧಿಕಾರವು ಸ್ಥಾನಪತಿಯದೇ ಆಗಿರುತ್ತಿತ್ತು.

ದೇವಾಲಯಗಳ ನಿರ್ವಹಣೆ ನೋಡಿಕೊಳ್ಳುತ್ತಿದ್ದ ಸ್ಥಾನಿಕರ ಬಗ್ಗೆ ಹಲವು ಶಾಸನಗಳು ಉಲ್ಲೇಖಿಸುತ್ತವೆ. ಹಂಪಿಯಲ್ಲಿನ ರಾಮಚಂದ್ರದೇವರ ದೇವಾಲಯದಲ್ಲಿ ಮಾಧವಯ್ಯ ಎಂಬ ಸ್ಥಾನಿಕನು ದೇವಾಲಯದ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದನು.[೧೦] ಕುಂದುರ್ಪಿ ತಿಮ್ಮನಾಯಕನು ವೆಂಪಲಪರ್ತಿ ತಿರುವೇಂಗಳನಾಥ ದೇವರ ಕಾರ್ಯಕ್ಕೆ ಸ್ಥಾನಿಕರನ್ನಾಗಿ ಕಲುಕಡ ಚೆನ್ನಮಯ್ಯನ ಮಕ್ಕಳು ಶ್ರೀರಾಮಯ್ಯ, ಅನಂತಯ್ಯನ ಕುಪ್ಪಳೆಮ್ಮರನ್ನು ನೇಮಿಸಿದನು.[೧೧] ಇದಲ್ಲದೆ ದೇವಾಲಯದ ಆಡಳಿತದ ಕೆಲಸಕಾರ್ಯಗಳನ್ನು ನಿರ್ವಹಿಸಲು ಒಬ್ಬ ಸ್ಥಾನಿಕನಲ್ಲದೆ

ಅನೇಕ ಸ್ಥಾನಿಕರಿದ್ದುದು ಕಂಡುಬರುತ್ತದೆ. 'ಹಂಪಿಯ ವಿಠಲ ದೇವಾಲಯದಲ್ಲಿ ದೇಮಯ, ನರಸಯ್ಯ, ವೀರಪ, ಚಿಕ್ಕವೀರಪ ಮತ್ತು ಪುರುಷೋತ್ತಮ - ಈ ಐದು ಜನ ಸ್ಥಾನಿಕರಾಗಿದ್ದರು.[೧೨] ದೊಡ್ಡ ದೇವಾಲಯಗಳಲ್ಲಿ ಆಡಳಿತದ ನಿರ್ವಹಣೆ ಹೆಚ್ಚು ಇದ್ದುದರಿಂದ ಬೇರೆ ಬೇರೆ ಕೆಲಸಗಳನ್ನು ನೋಡಿಕೊಳ್ಳಲು ಹಲವು ಸ್ಥಾನಿಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು.

ಕಾರ್ಯನಿರ್ವಹಣೆ

ಇಡೀ ದೇವಾಲಯವು ಸ್ಥಾನಿಕರ ಅಧೀನದಲ್ಲಿದ್ದು, ದಾನಿಗಳು ಕೊಡಲ್ಪಟ್ಟ ವಸ್ತುಗಳನ್ನು ದಾಖಲಿಸಿ ಅವನ್ನು ರಕ್ಷಿಸಲು ವಾಗ್ದಾನ ಮಾಡುತ್ತಿದ್ದರು. ಸ್ಥಾನಿಕನ ಆಜ್ಞೆಯ ಮೇರೆಗೆ ಅದನ್ನು ದೇವಾಲಯದ ಲೆಕ್ಕಿಗ ದೇವಾಲಯಗಳ ಗೋಡೆಯ ಮೇಲೆ ಬರೆದು ಕೊಟ್ಟರೆ ಶಿಲ್ಪಿಗಳು ಅದನ್ನು ಖಂಡರಿಸುತ್ತಿದ್ದರು. ಇದಕ್ಕೆಂದೆ ದೇವಾಲಯಗಳಲ್ಲಿ ಶಾಸನಶಿಲ್ಪಿಗಳು ಇರುತ್ತಿದ್ದರು. ಇದು ದಾನ ನೀಡಿದವರ ಮತ್ತು ಸ್ಥಾನಿಕರ ನಡುವೆ ಆದ ಒಡಂಬಡಿಕೆಯಾಗಿತ್ತು. ಕ್ರಿ.ಶ. ೧೫೧೩ರಲ್ಲಿ ತಿರುವೆಂಕಟ ಮುದಲಿಯ್ಯರ್ ಮಾಡಿದ ಒಂದು ದಾನವನ್ನು ತಿರುಪತಿಯ ಸ್ಥಾನತ್ತಾರ್ ದಾಖಲೆ ಮಾಡಿದನು.[೧೩] ಆತನು ಹಲವು ಸೇವೆಗಳಿಗೆ ೧೫೦ 'ನರ್ ಪಣಂ' ಗಳನ್ನು ಕೊಟ್ಟನು. ಕ್ರಿ.ಶ. ೧೫೨೮ರಲ್ಲಿ ಪೆವುಲ ಮುನ್ನಪ್ಪಯರ್ ದೇವಸ್ಥಾನದ ಖಜಾನೆಗೆ ಸಲ್ಲಿಸಿದ ೩೦೦ 'ಪಣಂ'ಗಳನ್ನು ದಾಖಲೆ ಮಾಡಿಕೊಂಡನು.[೧೪] ಈ ಹಣವನ್ನು ದೇವಾಲಯದ ಗ್ರಾಮಗಳಲ್ಲಿ ನೀರಾವರಿ ಕೆರೆ ಮತ್ತು ಕಾಲುವೆಗಳನ್ನು ತೋಡಲು ಉಪಯೋಗಿಸಬೇಕಾಗಿತ್ತು. ಇದರಿಂದ ಬಂದ ಫಸಲನ್ನು ಶ್ರೀ ವೆಂಕಟೇಶ್ವರನ ಹಲವು ಸೇವೆಗಳಿಗೆ ಉಪಯೋಗಿಸಬೇಕೆಂದು ಏರ್ಪಾಡು ಮಾಡಲಾಯಿತು.

ತಿರುಮಲೆ ಶಾಸನದ ಪ್ರಕಾರ ಶ್ರೀಕೃಷ್ಣದೇವರಾಯ ತಿರುಮಲೆಯ ತಿರುವೇಂಗಳನಾಥ ದೇವಾಲಯಕ್ಕೆ ಭೇಟಿಕೊಟ್ಟು ದಾನದತ್ತಿಗಳನ್ನು ನೀಡಿದ ಶಾಸನಗಳಿವೆ. ಸ್ಥಾನಿಕರು ದೇವಾಲಯದ ಲೆಕ್ಕಿಗನ ಜೊತೆ ಶಾಸನಗಳನ್ನು ಬರೆಯಿಸುತ್ತಿದ್ದರು.[೧೫] ಕ್ರಿ.ಶ. ೧೫೧೧ರಲ್ಲಿ 'ಸ್ಥಾನತ್ತಾರ್ ' ಸಾಳುವ ತಿಮ್ಮರಸಯ್ಯರ್ ದೇವಸ್ಥಾನಕ್ಕೆ ಪರಂತಲೂರು ಗ್ರಾಮವನ್ನು ದಾನಮಾಡಿದುದಕ್ಕೆ ಕಲ್ಲಿನ ಮೇಲೆ ಒಂದು ಶಾಸನವನ್ನು ಬರೆಯಿಸಿದನು.[೧೬] 'ಸ್ಥಾನತ್ತಾರ್'ನು ದಾನಿಗಳು ದಾನನೀಡಿರುವುದನ್ನು ಕಲ್ಲಿನಬಂಡೆ, ಹಸ್ತಪ್ರತಿ ಅಥವಾ ತಾಮ್ರಪಟಗಳ ಮೇಲೆ ಬರೆಸುತ್ತಿದ್ದನು.

ಅದರಂತೆ ಸಾಮಂತರು ಮತ್ತು ಸ್ಥಾನವತ್ತಾರ್ ನಡುವೆ ಒಡಂಬಡಿಕೆಯ ಶಾಸನಗಳನ್ನು ಉಲ್ಲೇಖಿಸಬಹುದು. ಕ್ರಿ.ಶ. ೧೫೧೮ರಲ್ಲಿ ಬಹೂರ್ ಮಲ್ಲರಸಯ್ಯರ್ ದೇವಸ್ಥಾನದ ಗ್ರಾಮಗಳಲ್ಲಿ ನೀರಾವರಿ ಕಾಲುವೆಗಳನ್ನು ತೋಡಲು ೩೬೦ 'ಪಣಂ'ಗಳನ್ನು ಕೊಟ್ಟನು.[೧೭] ಇದರಿಂದ ಬರುವ ವರಮಾನದಿಂದ 'ಸ್ಥಾನತ್ತಾರ್' ಶ್ರೀ ತಿರುವೇಂಗಳನಾಥನಿಗೆ ಹಲವು ನೈವೇದ್ಯಗಳನ್ನು ತಯಾರಿಸಲು ಸಾಮಗ್ರಿಗಳನ್ನು ಒದಗಿಸಬೇಕಾಯಿತು. ದಾನಿಗಳು ದೇವಾಲಯಗಳಿಗೆ ಆದಾಯದ ಮೂಲಗಳನ್ನು ಒದಗಿಸಿಕೊಟ್ಟು ತಮ್ಮ ಸೇವೆಗಳಿಗೆ ಸಾಮಾಗ್ರಿಗಳನ್ನು ದೇವಾಲಯದ ಉಗ್ರಾಣದಿಂದ ನೀಡಬೇಕೆಂದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಇದರಿಂದ ದೇವಾಲಯಗಳು ಆಗಿನ ಕಾಲದಲ್ಲಿ ದಾಸ್ತಾನು ಮಳಿಗೆಗಳೂ ಆಗಿದ್ದವು.

ಕ್ರಿ.ಶ. ೧೫೨೧ರಲ್ಲಿ ಲಕ್ಕನಾಯಕ್ಕರ್ ದೇವಸ್ಥಾನದ ಖಜಾನೆಗೆ ೧೫೦೦ ಪಣಂಗಳನ್ನು ಕೊಟ್ಟನು.[೧೮] ಅದೇ ರೀತಿ ಸುಬುದ್ಧಿರಾಮದಾಸರ್ ತಂದಲಂ ಮತ್ತು ಅಂಬಿಕಮುಡುಸಿಲ ತದಪಲಂ ಗ್ರಾಮಗಳನ್ನು ದಾನಮಾಡಿದ್ದನ್ನು ದೇವಸ್ಥಾನದ ಲೆಕ್ಕಿಗನು ದಾಖಲು ಮಾಡಿದ್ದಾನೆ.[೧೯] ಈ ಸ್ಥಾನಿಕ ಪದವಿ ನೈಷ್ಠಿಕ ಬ್ರಹ್ಮಚಾರಿಗಳಿಗೆ ಮಾತ್ರ ಅವಕಾಶವಿತ್ತು. ಸ್ಥಾನಚಾರ್ಯರು ಹಾದಿತಪ್ಪಿದಾಗಲೆಲ್ಲಾ ಅವರನ್ನು ಜನರು ಎಚ್ಚರಿಸುತ್ತಿದ್ದರು. ಸ್ಥಾನಿಕರನ್ನು ನೇಮಿಸಿರುವವರು ಕೆಲವೊಂದು ಕಟ್ಟಳೆಯನ್ನು ಹಾಕಿ ನೇಮಿಸಿರುವುದು ಕೆಸರಟ್ಟಿ ಶಾಸನದಿಂದ ತಿಳಿಯುತ್ತದೆ.

ವಿಜಯನಗರ ಕಾಲದ ಸ್ಥಾನಿಕರ ಕರ್ತವ್ಯಗಳನ್ನು ಎನ್. ವೆಂಕಟರಮಣಯ್ಯನವರು ಈ ಪ್ರಕಾರವಾಗಿ ಹೇಳಿರುವರು. "ದೇವಾಲಯಗಳಿಗೆ ಸೇರಿದ ಭೂಮಿಗಳನ್ನು ನೋಡಿಕೊಳ್ಳುವುದು; ದೇವಸ್ಥಾನದ ಪರವಾಗಿ ಧನರೂಪದ, ಭೂಮಿರೂಪದ ದತ್ತಿಯನ್ನು ಸ್ವೀಕರಿಸುವುದು; ಭೂಮಿಯನ್ನು ಕೊಂಡು ದೇವಾಲಯದ ಆಸ್ತಿಯನ್ನು ಹೆಚ್ಚಿಸುವುದು; ಉತ್ಸವಗಳಿಗೆ ಹಣ ಬೇಕಾದಾಗ ಭೂಮಿಯನ್ನು ಮಾರುವುದು; ಹೊಲದ ಆಧಾರದ ಮೇಲೆ ದೇವಾಲಯದ ಹಣವನ್ನು ಬಡ್ಡಿಗೆ ಸಾಲವಾಗಿ ಕೊಡುವುದು; ಸಾಲತೀರದಿದ್ದಾಗ ಅಡವಿಟ್ಟಿದ್ದ ಹೊಲವನ್ನು ವಶಪಡಿಸಿಕೊಳ್ಳುವುದು; ದೇವಸ್ಥಾನದ ಭೂಮಿಯನ್ನು ರೈತರಿಗೆ ಗೇಣಿಯಾಗಿ ಕೊಡುವುದು; ದೇವಾಲಯದ ಐಶ್ವರ್ಯದ ಮೇಲ್ವಿಚಾರಣೆ ನೋಡಿಕೊಳ್ಳುವುದಾಗಿತ್ತು."[೨೦] ಅಲ್ಲದೆ ಪರಿಚಾರಕ ವರ್ಗದವರನ್ನು ಹಾಗೂ ಅರ್ಚಕರನ್ನು ನೇಮಕ ಮಾಡಿಕೊಳ್ಳುವ ಕೆಲಸ ನಿರ್ವಹಿಸುತ್ತಿದ್ದರು.

ಮಂಡಳಿ

ದೇವಾಲಯಗಳಲ್ಲಿ ಸ್ಥಾನಿಕ ಮತ್ತು ಪರಿಚಾರಕರಲ್ಲದೆ ದೇವಾಲಯದ ನಿರ್ವಹಣೆಗೆ ಕೆಲವೊಂದು ದೇವಾಲಯದಲ್ಲಿ 'ದೇವಸ್ಥಾನ ಮಂಡಳಿ'ಯು ಕೆಲಸಮಾಡುತ್ತಿತ್ತು. ಈ ಮಂಡಳಿಗಳಲ್ಲಿ ಸದಸ್ಯರಿದ್ದು ದೇವಾಲಯದ ನಿರ್ವಹಣೆಯಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದರು. ಹಂಪಿಯ ಬಾಲಕೃಷ್ಣ ದೇವಾಲಯದಲ್ಲಿ ದೇವಾಲಯದ ಸದ್ಯಸರಿರುವುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಶಿಲಾದೀಕ್ಷಿತ, ನರಸಿಂಹದೀಕ್ಷಿತ, ಭಾನುಭಟ್ಟ, ವಿರೂಪಾಕ್ಷಭಟ್ಟ, ಲಿಂಗಭಟ್ಟ - ಈ ಐವರು ಸದಸ್ಯರಾಗಿದ್ದರು. ಇವರಿಗೆ ಕೃಷ್ಣದೇವರಾಯನು ತಲಾ ಅರ್ಧರ್ಧ ಖಂಡುಗ ಗದ್ದೆಯನ್ನು ನೀಡಿದ್ದನು.[೨೧] ಇದರಿಂದ ದೇವಾಲಯಗಳಲ್ಲಿ ಹೆಚ್ಚಿನ ಕಾರ್ಯನಿರ್ವಹಣೆಗೆ ಸ್ಥಾನಿಕರಿಗೆ ಸಹಾಯ ಮಾಡಲು 'ದೇವಾಲಯಮಂಡಳಿ' ಇರುತ್ತಿದ್ದುದು ಗೊತ್ತಾಗು ತ್ತದೆ. ಮಂಡಳಿಗಳಲ್ಲಿ ಖಾಯಂ ಆಗಿ ಇಷ್ಟೆ ಸದಸ್ಯರಿರಬೇಕೆಂದು ಯಾವುದೇ ಶಾಸನದಲ್ಲಿ ಹೇಳಿಲ್ಲ. ಒಟ್ಟಿನಲ್ಲಿ ದೇವಾಲಯದ ಕಾರ್ಯಾಚರಣೆಗಳಲ್ಲಿ ಸ್ಥಾನಿಕರ ಜೊತೆಗೆ ಮಂಡಳಿಯೂ ಇರುತ್ತಿದ್ದುದು ಗಮನಿಸಬೇಕಾದ ಅಂಶ.

ಅರ್ಚಕ

ದೇವಾಲಯಗಳಲ್ಲಿ ದೇವರ ಪೂಜೆ ಮಾಡುವ ಸಲುವಾಗಿ ಊರಿನ ಮಹಾಜನರು, ಅರಸರು ಮತ್ತು ದಾನಿಗಳಿಂದ ಅವರ ಅಭಿಮತದಂತೆ ನಿಯಾಮಿತನಾದ ವ್ಯಕ್ತಿಯೇ ಅರ್ಚಕ. ಕೆಲವೊಂದು ಬಾರಿ ಸ್ಥಾನಿಕನು ಅರ್ಚಕನನ್ನು ನೇಮಿಸುತ್ತಿದ್ದನು. ಪೂಜಾರಿಯ ಅಧಿಕಾರವು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿಯೇ

ಮುಂದುವರಿಯುತ್ತಿತ್ತು. ದೇವಸ್ಥಾನ ಮತ್ತು ದೇವತಾ ಸಾನ್ನಿಧ್ಯವು ಆಕರ್ಷಕವಾಗಿರಲು ಅರ್ಚಕನೂ ಮುಖ್ಯ ಕಾರಣ ಎಂಬುದು ಶೈವಾಗಮದ ಅಭಿಪ್ರಾಯ. ಆಗಮೋಕ್ತ ಕ್ರಮದಲ್ಲಿ ಪ್ರತಿನಿತ್ಯ ದೇವರ ವಿಗ್ರಹಕ್ಕೆ ಪೂಜೆ ಸಲ್ಲಿಸುವುದು ಪೂಜಾರಿಯ ಕರ್ತವ್ಯವಾಗಿತ್ತು. ಬೇರಾವ ವಿಷಯಕ್ಕೂ ಅವನು ಜವಾಬ್ದಾರನಾಗಿರಲಿಲ್ಲ. ಅವನ ಸೇವೆಗಾಗಿ ಭೂಮಿ ಮತ್ತು ಹಣದ ರೂಪದಲ್ಲಿ ಸಂಭಾವನೆಯನ್ನು ನೀಡಲಾಗುತ್ತಿತ್ತು.

"ಅರ್ಚಕಸ್ಯತು ಮಹಾತ್ಮ್ಯಾತ್ ಪೂಜ್ಯ ಬಿಂಬಸ್ಯ ಸೌಷ್ಮವಾತ್

ಪೂಜೋಪಕರಣಾಚ್ಚೈವ ತ್ರಿಭಿಸ್ಸಾನ್ನಿಧ್ಯಮುಚ್ಯತೇ"[೨೨] ಎಂದಿದೆ.

ಇದರರ್ಥ ಅರ್ಚಕನು ಸದಾಚಾರ ಸಂಪನ್ನನಾಗಿ, ಸುಶಿಕ್ಷಿತನಾಗಿ, ತಪಸ್ವಿಯಾಗಿ, ನಿಗ್ರಹಾನುಗ್ರಹ ಸಾಮರ್ಥ್ಯ ಶಾಲಿಯಾಗಿರಬೇಕೆಂಬುದೇ ಆಗಿದೆ.

ದಾನಿಗಳು ಪೂಜಾರಿಯ ಜೀವನ ನಿರ್ವಹಣೆಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದ್ದರು; ಅಷ್ಟೇ ಅಲ್ಲದೆ ಭಕ್ತರ ವಿಶೇಷ ಗೌರವಾದರಗಳಿಗೆ ಸುಲಭವಾಗಿ ಪಾತ್ರನಾಗುತ್ತಿದ್ದ ವ್ಯಕ್ತಿ ಪೂಜಾರಿಯಾಗಿದ್ದನು. ಅರ್ಚಕನು ಸ್ಥಾನಪತಿಯ ಅಧೀನನಾಗಿಯೇ ಕಾರ್ಯನಿರ್ವಹಿಸಬೇಕಾಗುತ್ತಿತ್ತು. ಬಹುದೊಡ್ಡ ದೇವಾಲಯಗಳಲ್ಲಿ ಬೇರೆ ಬೇರೆ ವಿಧಿಗಳನ್ನು ಪೂರೈಸಲು ಹೆಚ್ಚಿನ ಅರ್ಚಕರು ಬೇಕಾಗುತ್ತಿದ್ದರು. ಇವರು ಸಾಮಾನ್ಯವಾಗಿ ಬ್ರಾಹ್ಮಣರಾಗಿರುತ್ತಿದ್ದರು. ದೇವರ ಪೂಜೆ - ಪುನಸ್ಕಾರಗಳನ್ನು ನೆರವೇರಿಸಿ ದೇವರ ಉತ್ಸವಗಳನ್ನು ಕರಾರುವಕ್ಕಾಗಿ ನಡೆಸಿಕೊಂಡು ಬರುತ್ತಿದ್ದರು. ದೇವಾಲಯದ ಅರ್ಚಕನಿಗೆ ಕೆಲವು ವಿಶೇಷ ಗುಣಗಳಿರಬೇಕೆಂದು ಶಾಸ್ತ್ರಗ್ರಂಥಗಳು ಹೇಳುತ್ತವೆ. "ಅರ್ಚಕರಿಗೆ ತಪಸ್ಸು, ನಿಷ್ಠೆ, ನಿಯಮ ಹಾಗೂ ಶೀಲಗಳಿರಬೇಕು ಅದಕ್ಕೆ 'ಅರ್ಚಕಸ್ಯ ತಪೋಬಲಾತ್' ಎಂದು ಹೇಳಿವೆ."

ಕೃಷ್ಣದೇವರಾಯನು ೩೭ ಬ್ರಾಹ್ಮಣರನ್ನು ಬಾಲಕೃಷ್ಣ ದೇವರ ಪೂಜೆಕಾರ್ಯಗಳಿಗಾಗಿ ನೇಮಿಸಿದನು.[೨೩] ಒಂದೇ ದೇವಾಲಯದಲ್ಲಿ ಪೂಜೆ ವಿಧಿಗಳಿಗೆ ಹಲವಾರು ಅರ್ಚಕರಿರುತ್ತಿದ್ದುದು ತಿಳಿಯುತ್ತದೆ. ಬ್ರಾಹ್ಮಣರ ಮೇಲೆ ರಾಯನು ಸದಾ ಗೌರವವುಳ್ಳವನಾಗಿದ್ದನು. 'ಬ್ರಾಹ್ಮಣರು ನೀತಿವಂತರೂ ಪ್ರಾಮಾಣಿಕರೂ ಕಾರ್ಯ ಸಮರ್ಥರೂ ಆಗಿದ್ದುದರಿಂದ ರಾಯನಿಗೆ ಅಂತಹ ಬ್ರಾಹ್ಮಣರಲ್ಲಿ ಹೆಚ್ಚಿನ ಭಕ್ತಿಯಿತ್ತು ಮತ್ತು ನಂಬಿಕೆಯಿದ್ದಿತು. ಇದನ್ನು ತನ್ನ ಕೃತಿಯಾದ ಆಮುಕ್ತಮಾಲ್ಯದದಲ್ಲಿ ಹೇಳಿಕೊಂಡಿದ್ದಾನೆ.[೨೪] ಅವರು ವೇದಾಧ್ಯಯನ ಸಂಪನ್ನರೂ ಜಪಯಜ್ಞಶೀಲರೂ ಆಗಿದ್ದರು. ಕೇವಲ ಐಶ್ವರ್ಯಾಕಾಂಕ್ಷಿಗಳಾಗಿರಲಿಲ್ಲ. ಇಂದ್ರ ಕುಬೇರರು ದಾನ ಕೊಟ್ಟರೂ ಅವರು ದಾನಕ್ಕಾಗಿ ಕೈಯೊಡ್ಡುವವರಾಗಿರಲಿಲ್ಲ ಎಂದು ಕೃಷ್ಣರಾಯ ಹೇಳಿರುವನು. "ಬ್ರಾಹ್ಮಣರು ವಿದ್ವತ್ತಿನಿಂದಲೂ, ವೈದಿಕ ವೃತ್ತಿಯಿಂದಲೂ ಜೀವನ ಮಾಡುತ್ತಿದ್ದರು. ದೇವಾಲಯದಲ್ಲಿ ಅರ್ಚಕರಾಗಿ, ಪುರೋಹಿತರಾಗಿ, ಜ್ಯೋತಿಷ್ಯರಾಗಿ ಜೀವನ ನಡೆಸುತ್ತಿದ್ದರು. ಅವರಿಗೆ ದೇವಾಲಯದ ಛತ್ರದಲ್ಲಿ ಉಚಿತ ಭೋಜನ ಸಿಗುತ್ತಿತ್ತು"[೨೫] ಎಂದು ರಾಯನು ಆಮುಕ್ತಮಾಲ್ಯದದಲ್ಲಿ ಹೇಳಿದ್ದಾನೆ.

ಪರಿಚಾರಕರು

ವಿಜಯನಗರ ಕಾಲದಲ್ಲಿ ಅನೇಕ ಹೊಸ ದೇವಾಲಯಗಳು ನಿರ್ಮಾಣಗೊಂಡು, ಹಳೆಯ ದೇವಾಲಯಗಳು ಜೀರ್ಣೋದ್ಧಾರ ಪಡೆದವು. ದೇವಾಲಯದಲ್ಲಿ ಹೊಸ ಪೂಜಾ ಪದ್ಧತಿಗಳು ಹುಟ್ಟಿಕೊಂಡು ಅವುಗಳ ನಿರ್ವಹಣೆಗೆ ಹಲವು ಪರಿಚಾರಕ ವರ್ಗದವರು ಬೇಕಾದರು. ದೇವಾಲಯದ ಆಡಳಿತದ ಜವಾಬ್ದಾರಿ ನೋಡಿಕೊಳ್ಳಲು ಸ್ಥಾನಿಕರಿಗೆ ಸಹಾಯಕರಾಗಿ ಸೇವಾವರ್ಗದವರು ನೇಮಕಗೊಂಡರು. ಇವರು ದೇವಾಲಯದ ಆಡಳಿತದಲ್ಲಿ, ಕೆಲಸಕಾರ್ಯಗಳಲ್ಲಿ ಹೊಣೆಯನ್ನು ಹೊತ್ತು ದೇವರ ನಿತ್ಯ ಕೈಂಕರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು.

ದೇವಾಲಯಗಳಲ್ಲಿ ದೇವರ ಅಂಗಭೋಗ, ರಂಗಭೋಗ, ಸೇವಾವರ್ಗ ಮತ್ತು ಪ್ರತಿನಿತ್ಯದ ಸೇವೆಗಳಿಗೆ ಮತ್ತು ಅಲ್ಲಿನ ವಿಶೇಷ ಉತ್ಸವ, ಪರ್ವಗಳ ಆಚರಣೆಗೂ ಸೂಕ್ತವಾದ ಏರ್ಪಾಡು ಮಾಡುತ್ತಿದ್ದುದರಿಂದ ಆಡಳಿತದಲ್ಲಿ ನಿರಂತರವಾದ ಸೇವಾವರ್ಗವು ಇರುತ್ತಿತ್ತು. ದೇವಾಲಯದ ಸೇವಾವರ್ಗವು ಸ್ಥಾನಪತಿಯ ಮೂಲಕ ಅಥವಾ ದಾನಿಯು ನೇರವಾಗಿ ನೇಮಿಸುತ್ತಿದ್ದನು. ಇವರಿಗೆ ದಾನ-ದತ್ತಿಗಳನ್ನು, ಧನ, ಧಾನ್ಯ ಮತ್ತು ಭೂಮಿಯ ರೂಪದಲ್ಲಿ ಸಂಭಾವನೆ ನೀಡಿರುವುದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ದೇವಾಲಯದ ಪರಿಚಾರಕರಲ್ಲಿ ಮುಖ್ಯವಾದವರು 'ದೇವರ ಸೇವೆಗೆ ಬೇಕಾದ ಆಚಾರ್ಯರು, ಪೌರಾಣಿಕರು, ಜ್ಯೋತಿಷ್ಯಗಳು, ಮಂಡಳಿಯ ಸದಸ್ಯರು, ಬ್ರಹ್ಮ (ಮುಖ್ಯಪೂಜಾರಿ ಹಬ್ಬಗಳಲ್ಲಿ), ವೇದಪರಾಯಣ ಮಾಡುವವರು, ಮಂತ್ರಪುಷ್ಪದವರು, ಪವಮಾನಾಭಿಷೇಕ ಮತ್ತು ನಾಮಾತ್ರೇಯರು, ಇವರು ತಿರುವೇಂಗಳನಾಥ ದೇವಾಲಯದ ಆರ್ಚಕವರ್ಗದವರಾಗಿದ್ದರು.[೨೬] ಇವರಲ್ಲಿ ಪೂಜಾರಿಗಳು ಅತಿ ಅಗತ್ಯವಾದ ವರ್ಗದವರಾಗಿದ್ದರು. ಇವರಲ್ಲದೆ ಶಾಸನಗಳಲ್ಲಿ ಹಲವಾರು ಪರಿಚಾರಕರನ್ನು ಹೆಸರಿಸಿವೆ. ದೇವಾಲಯ ಪರಿಚಾರಕರಲ್ಲಿ ಸೇನಭೋವ ಎಂಬುವವನ ಹೆಸರು ವೈಷ್ಣವ ದೇವಾಲಯಗಳಲ್ಲಿ ಲೆಕ್ಕಾಧಿಕಾರಿಯಾಗಿ ದಾಖಲೆಗಳಲ್ಲಿ ಕಂಡುಬರುತ್ತದೆ.[೨೭] ಹಂಪಿಯ ರಾಮಚಂದ್ರ ದೇವಾಲಯದ ಕಾರ್ಯಗಳನ್ನು ನೋಡಿಕೊಳ್ಳಲು ಕರಣಿಕ ಎನ್ನುವ ಅಧಿಕಾರಿ ಇದ್ದನು. ಇವನು ದೇವಾಲಯದ ಲೆಕ್ಕವನ್ನು ನೋಡಿಕೊಳ್ಳುತ್ತಿದ್ದನು.[೨೮] ಅಲ್ಲದೆ ದೇವಾಲಯಗಳಲ್ಲಿ ದಾಖಲೆಗಳನ್ನು ಬರೆಯುವ ಮತ್ತು ಲೆಕ್ಕಗಳನ್ನು ಇಡುತ್ತಿದ್ದ ಲೆಕ್ಕಿಗನು ಇರುತ್ತಿದ್ದನು.[೨೯] ಕೃಷ್ಣದೇವರಾಯನ ಕಾಲದಲ್ಲಿ ತಿರುಮಲೆಯ ತಿರುವೇಂಗಳನಾಥನ ದೇವಾಲಯದಲ್ಲಿದ್ದ ಪರಿಚಾರಕವರ್ಗ ದವರೆಂದರೆ ತಿರುವಿನ್ನಾರುಡೈಯಾರ್‌ಗಳ್, ಕುಪ್ಪ ವೆಂಕಟ್ಟರಸು, ಅಪ್ಪಕೊಂಡಾರ್, ಶ್ರೀನಿವಾಸನ್, ಕುಪ್ಪಯಂ, ವಿಲ್ಲಿಯಾರ್ ಇತ್ಯಾದಿ ಅಧಿಕಾರಿಗಳಿದ್ದರು.

ಹಂಪಿಯ ವಿಜಯವಿಠಲ ದೇವಾಲಯದಲ್ಲಿ ಭಂಡಾರದ ಹಿರಿತಿಮ್ಮಯ್ಯನು ದೇವರ ನಾನಾಭರಣಗಳನ್ನು ಮತ್ತು ದೇವಾಲಯದ ಬೀಗಮುದ್ರೆಯನ್ನು ನೋಡಿಕೊಳ್ಳುತ್ತಿದ್ದನು.[೩೦] ಈ ದೇವಾಲಯದ ಸೇವಾವರ್ಗದವರೆಂದರೆ ಸ್ಥಾನಿಕರು, ಭಂಡಾರದವರು, ವಾದ್ಯದವರು, ಪರಿಚಾರಕರು, ಆಡುಗೆಯವರು, ಹಿಟ್ಟು ಕುಟ್ಟುವವರು, ಗೋದಿ ಬೀಸುವವರು, ಹೂವುಕಟ್ಟುವವರು, ಗಂಧಪರಿಮಳ ದವರು, ದೊಡವರು, ಎಣ್ಣೆ ಪಂಜು ಹಿಡಿಯುವವರು, ನಟುವ ರಂಗದವರು, ಸೇನಭೋವ, ಅನಂತಯಭಾರವರು, ಸ್ವಯಂಪಾಕಿ, ಘಳಿಯಾರದವರು, ಲೆಕ್ಕಿಗ, ಸಂಕೀರ್ತನೆಹಾಡುವವರು, ಕರಣಿಕರು, ಅಧಿಕಾರಿಗಳು ಇರುತ್ತಿದ್ದುದು ಶಾಸನಗಳಲ್ಲಿ ಉಲ್ಲೇಖವಾಗಿದೆ.[೩೧]

ದೇವಾಲಯಗಳಿಗೆ ಬರುವ ದಾನದತ್ತಿಗಳಲ್ಲಿ ಆಭರಣಗಳು, ಹೊನ್ನು ಮುಖ್ಯವಾಗಿವೆ. ಅವುಗಳನ್ನು ನೋಡಿಕೊಳ್ಳಲು ಪ್ರತ್ಯೇಕ ಅಧಿಕಾರಿಗಳು ನೇಮಕ ವಾಗುತ್ತಿದ್ದರು. ಇವರು ಆಭರಣದ ಜವಾಬ್ದಾರಿಯನ್ನು ಹೊತ್ತು ಅವುಗಳನ್ನು ಪೂಜೆ ಮತ್ತು ಉತ್ಸವ ಸಂದರ್ಭಗಳಲ್ಲಿ ಮಾತ್ರ ನೀಡುತ್ತಿದ್ದರು.

ಇವರಲ್ಲದೆ ದೇವಾಲಯದ ಸೇವಾವರ್ಗದವರಲ್ಲಿ 'ಪಾತ್ರ' (ಪಾತರ) ದವರು ಮುಖ್ಯವಾಗಿದ್ದರು. "ದೇವರನ್ನು ಪ್ರತಿಮಾರೂಪದಲ್ಲಿ ಅರ್ಚಿಸುವಾಗ, ಮನುಷ್ಯರಿಗೆ ಅತಿಥಿ ಸ್ಥಾನದಲ್ಲಿ ದೊರಕುವ ಎಲ್ಲಾ ಗೌರವ, ಆದರ, ಸತ್ಕಾರಗಳು ಲಭ್ಯವಾಗುತ್ತವೆ. ದೇವರನ್ನು ಜೀವಂತ ವ್ಯಕ್ತಿ ಎಂಬಂತೆಯೇ ಸ್ವಾಗತಿಸಿ, ಸತ್ಕರಿಸಿ, ಚಕ್ರವರ್ತಿಯೊಬ್ಬರಿಗೆ ಸಲ್ಲುವ ಎಲ್ಲಾ ಭೋಗಗಳನ್ನು ಸಾಂಕೇತಿಕವಾಗಿ ಒದಗಿಸುವುದು ಈಗಲೂ ರೂಢಿಯಲ್ಲಿದೆ."[೨೧] ಆದ್ದರಿಂದ ದೇವರ ಪೂಜಾ ಸಂದರ್ಭದಲ್ಲಿ ದೇವರಿಗೆ ತೃಪ್ತಿಪಡಿಸಲು ಸಂಗೀತ, ನಾಟ್ಯ, ಗಾಯನ, ಮೇಳಗಳು ಹುಟ್ಟಿಕೊಂಡು ಮುಂದೆ ಅವು ಅಂಗಭೋಗ, ರಂಗಭೋಗದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡವು. ದೇವರ ಮುಂದಿನ ರಂಗಮಂಟಪದ ಮೇಲೆ ನಡೆಯುವ ಕಲಾ ಸೇವೆಯೇ 'ರಂಗಸೇವೆ'. ಈ ಸೇವೆಯ ಸಮಯದಲ್ಲಿ ಸಂಗೀತ ಮತ್ತು ನೃತ್ಯಗಳು ಬಹಳ ಮುಖ್ಯವಾಗಿದ್ದವು. ನೃತ್ಯದ ಮೂಲಕ ಸೇವೆಸಲ್ಲಿಸುವ ನರ್ತಕ ಅಥವಾ ನರ್ತಕಿಯು ಯಾವುದೋ ಒಂದು ಪುರಾಣದ ಪಾತ್ರವಾಗಿ ಅಭಿನಯದ ಮೂಲಕ ನೃತ್ಯ ಪ್ರದರ್ಶನ ಮಾಡುತ್ತಿದ್ದ ಕಾರಣದಿಂದ ಅಂತಹವರನ್ನು 'ಪಾತ್ರದವರು' ಎಂದು ಕರೆಯುತ್ತಾರೆ.

ಸೂಳೆಯರಿದ್ದ ದೇವಾಲಯಗಳಲ್ಲಿ 'ಸೂಳೆವಳ' ಇರುತ್ತಿದ್ದನು. ಇವನು ಸೂಳೆಯರ ಮೇಲ್ವಿಚಾರಕ, ಜೊತೆಗೆ ಇವನು ನೃತ್ಯಶಿಕ್ಷಕನೂ ಆಗಿರುತ್ತಿದ್ದನು. ದೇವಾಲಯಗಳ ಸೇವಾ ವರ್ಗಕ್ಕೆ ಒದಗಿಸಿರುವ ದಾನವನ್ನು ಗಮನಿಸಿದಾಗ ಅದರಲ್ಲೂ ರಂಗಭೋಗದ ಸೇವೆಗಾಗಿ ದೊರೆತ ಪ್ರೋತ್ಸಾಹವು ಗಣನೀಯವಾದದ್ದು. ಅಂತೆಯೇ ಕ್ರಿ.ಶ. ೧೫೭೫ರ ಒಂದು ಶಾಸನವು ತಿರುಮಲೆಯ ದೇವಾಲಯದ ಆಡಳಿತದಲ್ಲಿನ ಪರಿಚಾರಕ ವರ್ಗದವರನ್ನು ಈ ಕೆಳಗಿನಂತೆ ತಿಳಿಸುತ್ತದೆ.[೨೨]

ಸ್ಥಾನತ್ತಾರ್	:	ದೇವಾಲಯದ ಪ್ರಧಾನ ಆಡಳಿತ ನಿರ್ವಹಣೆಯನ್ನು ನೋಡಿಕೊಳ್ಳುವವ.
ನಂಬಿಮಾರರು	:	ದೇವಸ್ಥಾನ ಅರ್ಚಕ ವೃತ್ತಿಯಲ್ಲಿರುವವರು, ದೇವಾಲಯದ ಪೂಜೆ-ಪುನಸ್ಕಾರ ಮತ್ತು ಉತ್ಸವಗಳನ್ನು ನೋಡಿಕೊಳ್ಳುವವರು.
ಅನುಸಂಧಾನಂ	:	ದೇವಾಲಯದಲ್ಲಿ ಪೂಜೆಯಾದ ಮೇಲೆ ವೇದಗಳ ಪಠನ ಮತ್ತು ಪ್ರಬಂಧಗಳನ್ನು ಹೇಳುವವರು.
ತೇವೈ	:	ದೇವಸ್ಥಾನದ ಪರಿಚಾರಕದವರು, ಇವರು ಅರ್ಚಕರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು.
ಕಂಗಾಣಿಪ್ಪಾನ್	:	ಆಡಳಿತದ ಮೇಲ್ವಿಚಾರಕ.
ತಿರುಪ್ಪಣಿಪಿಳ್ಳೈ	:	ದೇವಸ್ಥಾನದ ರಿಪೇರಿ ಕೆಲಸವನ್ನು ಮಾಡುವವರು.
ಅಧಿಕಾರಿ	:	ಪರಿಚಾರಕರ ಮುಖ್ಯಸ್ಥ.
ಕೈ ಕೋಳರು	:	ದೇವಾಲಯದ ಸೇವಕ.
ಶಿಪ್ಪಿಯಾರ್	:	ದೇವಾಲಯದ ಅಭಿವೃದ್ಧಿಗೆ ಬೇಕಾದ ಮಂಟಪಗಳನ್ನು ಕಟ್ಟುವವ.
ಮಂಟಪಕೊಟ್ಟಿರ್	:	ಮಂಟಪಗಳನ್ನು ರಿಪೇರಿ ಮಾಡುವವ.
ತಿರುವಿಧಿಶಾನಿ	:	ದೇವಸ್ಥಾನದಲ್ಲಿ ಪೂಜೆಯ ನಂತರ ರಂಗಮಂಟಪದಲ್ಲಿ ನಾಟ್ಯ ಮಾಡುವವರು.

ಶಾಸನಗಳಲ್ಲಿ ಉಲ್ಲೇಖಿಸಿರುವ ಹಾಗೇ ತಿರುಮಲೆ ಮತ್ತು ತಿರುಪತಿಯಲ್ಲಿನ ರಾಮಾನುಜಕೂಟಗಳಲ್ಲಿ (ಅನ್ನಸತ್ರಗಳು) ಮೇಲ್ವಿಚಾರಕ ಇರುತ್ತಿದ್ದನು.[೩೪] ಚಿನ್ನದ ಖಜಾನೆಯನ್ನು ನೋಡಿಕೊಳ್ಳಲು ಖಜಾನೆಪಾಲಕ[೩೫] ಮತ್ತು ಹೂತೋಟದ ಮೇಲ್ವಿಚಾರಕರು [೩೬] ಇರುತ್ತಿದ್ದರು.

ದೇವಾಲಯಗಳ ಕರ್ತವ್ಯಗಳು

ದೇವಾಲಯದ ಅಧಿಕಾರವರ್ಗವು ಒಂದು ದೊಡ್ಡ ಹಿಡುವಳಿಯಾಗಿದ್ದು ವ್ಯವಸಾಯದ ಹಿತವನ್ನು ಕಾಪಾಡುತ್ತಿತ್ತು. ಅದು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದುದಲ್ಲದೆ, ಸಾಗುವಳಿ ಮಾಡದ ಭೂಮಿಯನ್ನು ವ್ಯವಸಾಯಕ್ಕೆ ಅಚ್ಚುಕಟ್ಟು ಮಾಡುತ್ತಿದ್ದಿತು. ಶಾಸನಗಳಲ್ಲಿ ಕಂಡುಬರುವಂತೆ ದೇವಾಲಯವು ಕೆರೆ, ಕಾಲುವೆಗಳನ್ನು ತೋಡುವುದಕ್ಕೆ ಮಾಡುತ್ತಿದ್ದ ವೆಚ್ಚ ಭೂಮಿಯನ್ನು ಸಮಮಾಡಿ ಸಾಗುವಳಿ, ಫಸಲನ್ನು ಹೆಚ್ಚಿಸುತ್ತಿದ್ದ ವಿವರಗಳನ್ನು ನೀಡುತ್ತವೆ. ಉದಾ : ಕ್ರಿ.ಶ. ೧೫೦೭ರಲ್ಲಿ 'ಸ್ಥಾನತ್ತರ್' ಒಂದು ಶಿಲಾಶಾಸನವನ್ನು ಕೊಟ್ಟರು. ಇದರ ಪ್ರಕಾರ ತಿರುಪತಿಯ ಉಪನಗರದಲ್ಲೊಂದಾದ ನರಸಿಂಗರಾಯಪುರದಲ್ಲಿ ವಾಸಿಸುತ್ತಿದ್ದ ವ್ಯಾಪಾರಿಗಳಲ್ಲೊಬ್ಬನಾದ ತಿಪ್ಪುಶೆಟ್ಟಿ ದೇವಸ್ಥಾನಕ್ಕೆ ಕೊಟ್ಟ ೬೩೦೫ 'ಪಣಂ'ಗಳನ್ನು ದೇವಸ್ಥಾನಗಳ ಗ್ರಾಮಗಳಲ್ಲಿರುವ ಕೆರೆ ಮತ್ತು ಕಾಲುವೆಗಳನ್ನು ಉತ್ತಮಪಡಿಸಲು ಮತ್ತು ಇತರ ಉದ್ದೇಶಗಳಿಗೆ ಉಪಯೋಗಿಸಬೇಕೆಂದು ದಾಖಲೆ ಮಾಡಿದರು.[೩೭] ಹೀಗೆ ದೇವಾಲಯಗಳು ಹಳ್ಳಿ ಪುನರ್ವಸತಿಗೆ ಕೆಲಸ ಮಾಡುತ್ತಿದ್ದವು. ಕ್ರಿ.ಶ. ೧೫೧೭ರಲ್ಲಿ 'ಸ್ಥಾನತ್ತಾರ್' ಬರೆಯಿಸಿದ ಶಿಲಾಶಾಸನದ ಪ್ರಕಾರ ಧರ್ಮಪುರದ ಸಿತ್ತಮುಸೆಟ್ಟಿ ತನ್ನ ಸ್ವಂತ ವೆಚ್ಚದಲ್ಲಿ ಒಂದು ನೀರಾವರಿ ಕೆರೆಯನ್ನು ನಿರ್ಮಿಸಿದನು.[೩೮]

ವಿಜಯನಗರ ಕಾಲದಲ್ಲಿ ದೇವಾಲಯಗಳು ಒಂದು 'ಶ್ರೀ ಭಂಡಾರ'ವನ್ನು ಹೊಂದಿದ್ದು, ಅದು ಬ್ಯಾಂಕಾಗಿ ಕೆಲಸ ಮಾಡುತಿತ್ತು. ದಾನಿಗಳು ಪುದುವಟ್ಟು (ಠೇವಣಿ) ಆಗಿ ನೀಡಿದ ಹಣವನ್ನು ಬಡ್ಡಿರೂಪದಲ್ಲಿ ನೀಡಿ ಅದರ ಮೇಲಿನ ಬಡ್ಡಿಯನ್ನು ದೇವರ ಸೇವೆಗೆ ಉಪಯೋಗಿಸುವ ನಿಬಂಧನೆಗಳನ್ನು ವಿಧಿಸುತ್ತಿದ್ದರು. ಇಂತಹ ಹಣವನ್ನು ದೇವರ ಭಂಡಾರದಲ್ಲಿಟ್ಟು ಅದನ್ನು ಸಾಲವಾಗಿ ಕೊಟ್ಟು ಬಡ್ಡಿಯನ್ನು ಗಳಿಸುತ್ತಿದ್ದರು. ಭಂಡಾರವನ್ನು ನೋಡಿಕೊಳ್ಳಲು ಭಂಡಾರದವರಿದ್ದರು. ಹಿರಿಯ ತಿಮ್ಮಯನು ಹಂಪೆಯ ವಿಠಲದೇವಾಲಯದ ಶ್ರೀ ಭಂಡಾರದವನಾಗಿ ದೇವರ ನಾನಾ ಆಭರಣಗಳು ಮತ್ತು ಬೀಗಮುದ್ರೆಯನ್ನು ಕಾಯ್ದುಕೊಂಡು ಬರುತ್ತಿದ್ದನು.[೩೯]

ದೇವಾಲಯಗಳಿಗೆ ವಸ್ತುರೂಪದಲ್ಲಿ ಬಂದ ಕಾಣಿಕೆ, ಸುಂಕ ಅಥವಾ ದಾನಗಳು ಅವಶ್ಯಕ ಸಂದರ್ಭದಲ್ಲಿ ಉಪಯೋಗಿಸಲ್ಪಡುತ್ತಿದ್ದವು. ದೇವಾಲಯದ ದೇವರ ನಿಧಿಗೆ 'ಶ್ರೀ ಭಂಡಾರ' ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ದೇವರ ಭಂಡಾರದಿಂದ ಅವಶ್ಯಕತೆ ಇದ್ದವರಿಗೆ ಸಾಲ ನೀಡಿ ಬಂದ ಬಡ್ಡಿಯನ್ನು ನಿರ್ದಿಷ್ಟ ಸೇವೆಗಳಿಗಾಗಿ ಬಳಸಿಕೊಳ್ಳಲಾಗುತ್ತಿತ್ತು. ಕೆಲವೊಮ್ಮೆ ದಾನಗಳು ನಿರ್ದಿಷ್ಟ ಸೇವೆಯ ಸಲುವಾಗಿಯೇ ಹಣದ ರೂಪದಲ್ಲಿ ದತ್ತಿನೀಡಿ, ಅದರ ಬಡ್ಡಿಯಿಂದ ಸೇವೆ ನಡೆಸುವ ವ್ಯವಸ್ಥೆ ಮಾಡುತ್ತಿದ್ದರು. ಉದಾಹರಣೆಗೆ 'ಕ್ರಿ.ಶ. ೧೫೨೭ರಲ್ಲಿ ತಿರುಪತಿಯ ಒಬ್ಬ ವ್ಯಾಪಾರಿ, ಶರಣುಸೆಟ್ಟಿಯಾರ್ ೩೭೦೦ 'ನರ್ ಪಣಂ'ಗಳನ್ನು ಅಸಲಾಗಿ ದೇವಸ್ಥಾನಕ್ಕೆ ಕೊಟ್ಟನು. ಇದರ ಉದ್ದೇಶ ಅದರ ಬಡ್ಡಿಯಿಂದ ಹಲವು ಸೇವೆಗಳನ್ನು ನಡೆಸುವುದಾಗಿತ್ತು.'[೪೦] ಈ ಕಾರ್ಯವು ನಂತರದ ಅರಸರ

ಶಾಸನಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕ್ರಿ.ಶ. ೧೫೩೭ರಲ್ಲಿ ಶಿಂಗರಾಜನು ೧೫೦೦ 'ನರ್ ಪಣಂ' ಠೇವಣಿಯಾಗಿ ಹಲವು ಸೇವೆಗಳಿಗೆ ಕೊಟ್ಟನು.[೪೧] ದೇವಾಲಯಗಳು ಹೆಚ್ಚಿನ ಆದಾಯವನ್ನು ಬಡ್ಡಿರೂಪದಲ್ಲಿ ನೀಡಿ ದೇವಾಲಯದ ಭಂಡಾರವನ್ನು ಹೆಚ್ಚಿಸಿಕೊಳ್ಳುತ್ತಿದ್ದವು.

ದೇವಾಲಯಗಳು ಪಾಂಡಿತ್ಯಕ್ಕೆ ಪ್ರೋತ್ಸಾಹಕೊಡುತ್ತಿದ್ದವು. ದೇವಾರಾಂ ಮತ್ತು ಇತರ ಮತೀಯ ಸಾಹಿತ್ಯವನ್ನು ಹೇಳಲು, ವೇದಗಳನ್ನು ಹೇಳಲು ಮತ್ತು ಪುರಾಣ ಶ್ರವಣಕ್ಕೆ ಏರ್ಪಾಡು ನಡೆಯುತ್ತಿತ್ತು. ದೇವಾಲಯಗಳಲ್ಲಿ ವಿಶೇಷದಿನಗಳಂದು ನಡೆಯುವ ಕಾರ್ಯಕ್ರಮದಲ್ಲಿ ಪುರಾಣ ಹೇಳುವವರಿಗೆ ದಾನನೀಡಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೫೧೩ರಲ್ಲಿ ಕೃಷ್ಣದೇವರಾಯನು ಹಂಪಿ ಬಾಲಕೃಷ್ಣ ದೇವಾಲಯಕ್ಕೆ ಪವಮಾನಾಭಿಷೇಕದ ೧೨ ಜನ ಪುರಾಣ ಹೇಳುವವರಿಗೆ ಬೇರೆ ಬೇರೆ ಕಡೆಗಳಲ್ಲಿ ಗದ್ದೆಯನ್ನು ಉಂಬಳಿಯಾಗಿ ನೀಡಿರುತ್ತಾನೆ.[೪೨]

ದೇವಾಲಯಗಳು ವ್ಯಾಸಂಗದ ಕೇಂದ್ರಗಳಾಗಿದ್ದ ಮಠಗಳಿಗೆ ಬೆಂಬಲ ನೀಡಿ ವಿದ್ಯೆಯನ್ನು ಪ್ರೋತ್ಸಾಹಿಸುತ್ತಿದ್ದವು. ಕ್ರಿ.ಶ. ೧೫೨೪ರಲ್ಲಿ ತಿರುಮಲೆಯ 'ಸ್ಥಾನತ್ತಾರ್' ಶ್ರೀಮತ್ ವ್ಯಾಸತೀರ್ಥ ಶ್ರೀಪಾದ ಒಡೆಯರಿಗೆ ಅವರ ಮಠವನ್ನು ಕಟ್ಟಲು ಒಂದು ಮನೆ ನಿವೇಶನವನ್ನು ಕೊಟ್ಟರು.[೪೩] ದೇವಾಲಯಗಳು ಸ್ಥಳೀಯ ಆಡಳಿತದಲ್ಲಿ ಭೂಮಾಲಿಕ ಮತ್ತು ಧಣಿಯಾಗಿ ಹಣಕಾಸು ವ್ಯವಹಾರ ನೋಡಿಕೊಳ್ಳುವ ಬ್ಯಾಂಕಾಗಿ, ವಿದ್ಯೆಗೆ ಪ್ರೋತ್ಸಾಹ ನೀಡುವ ಮೂಲಕ ಮತೀಯ ಜೀವನದ ಕೇಂದ್ರವಾಗಿ ಪ್ರಮುಖ ಪಾತ್ರ ವಹಿಸುತ್ತಿದ್ದವು.

೨. ಆರ್ಥಿಕ ಸ್ಥಿತಿ

ವಿಜಯನಗರ ಕಾಲದ ದೇವಾಲಯಗಳಿಗೆ ಸಂಪತ್ತು ಧಾರಾಳವಾಗಿ ಹರಿದುಬರುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ರಾಯನ ಕಾಲದಲ್ಲಿ ದೇವಾಲಯಗಳು ಶ್ರೀಮಂತ ಸಂಸ್ಥೆಗಳಾಗಿ ಬೆಳೆದು ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳ ತಾಣಗಳಾಗಿದ್ದವು. ದೇವಾಲಯಗಳಿಗೆ ಭೂಮಿ ಮತ್ತು ಹಣದ ರೂಪದಲ್ಲಿ ಹೇರಳವಾಗಿ ದಾನದತ್ತಿಗಳು ದೊರೆಯುತ್ತಿದ್ದವು. ದೇವಾಲಯಗಳು ದಾನಿಗಳಿಂದ ಬಂದ ಆದಾಯದಿಂದ ದೇವಸ್ಥಾನದ ಭಂಡಾರವನ್ನು ಹೆಚ್ಚಿಸಿ ಖರ್ಚುವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದವು. ಅರಸರು, ಸಾಮಂತರು, ಅಧಿಕಾರಿಗಳು, ವ್ಯಾಪಾರಿಗಳು, ಜನಸಾಮಾನ್ಯರಿಂದಲೂ ದತ್ತಿಯನ್ನು ಪಡೆದು, ದೇವರ ಪೂಜಾ ಉತ್ಸವಗಳನ್ನು ನಡೆಸಿಕೊಂಡು ಹೋಗುತ್ತಿದ್ದಿತು. ದೇವಸ್ಥಾನಕ್ಕೆ ನಾನಾ ಮೂಲಗಳಿಂದ ಆದಾಯವು ಬರುತ್ತಿದ್ದು, ಅದರಿಂದ ವೆಚ್ಚ ಹಾಗೂ ಇತರ ಸೇವೆಗಳಿಗೆ ಬಳಸಲಾಗುತ್ತಿತ್ತು. ಈ ಆದಾಯವು 'ಶ್ರೀ ಭಂಡಾರ'ಕ್ಕೆ ಸೇರಿದ್ದಿತು.

ಆದಾಯ

ದೇವಾಲಯದ ಆದಾಯ ಮೂಲಗಳಲ್ಲಿ ಮುಖ್ಯವಾದದ್ದು ಗ್ರಾಮದತ್ತಿ. ದಾನಿಗಳು ದೇವಾಲಯದ ನಿರ್ಮಾಣವನ್ನು ಕೈಗೊಂಡು ಅದರ ಪೂಜಾ ಸೇವೆಗಳಿಗಾಗಿ ಗ್ರಾಮಗಳನ್ನು ದತ್ತಿಯಾಗಿ ನೀಡುತ್ತಿದ್ದರು. ಅಂತಹ ಗ್ರಾಮಗಳಿಂದ ಬರುವ ಸಕಲ ಆದಾಯ, ತೆರಿಗೆ, ಸುಂಕಗಳನ್ನು ದೇವಾಲಯಕ್ಕೆ ನೀಡಬೇಕಾಗಿತ್ತು. ಅರಸರು

ಗ್ರಾಮಗಳ ಹೆಸರನ್ನು ಪ್ರತಿನಾಮಕರಣ ಮಾಡಿ ಅವುಗಳನ್ನು ದೇವರ ಸೇವೆಗೆ ಕೊಡುತ್ತಿದ್ದರು. ದಾನಿಗಳು ಒಂದು ಗ್ರಾಮವನ್ನಲ್ಲದೆ ಒಂದೇ ದೇವಾಲಯಕ್ಕೆ ಹಲವು ಗ್ರಾಮಗಳನ್ನು ನೀಡುತ್ತಿದ್ದುದುಂಟು. ಒಂದೇ ದೇವಾಲಯಕ್ಕೆ ಹಲವು ಬಾರಿ ಗ್ರಾಮಗಳನ್ನು ದತ್ತಿಯಾಗಿ ನೀಡಿರುವುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಗ್ರಾಮಾದಾಯದಿಂದ ಬರುವ ಆದಾಯವು ದೊಡ್ಡ ಉತ್ಪನ್ನದ ಮೂಲವಾಗಿತ್ತು.

ಕ್ರಿ.ಶ. ೧೫೧೩ರಲ್ಲಿ ಕೃಷ್ಣದೇವರಾಯನು ಹಂಪಿಯ ವಿಠಲ ದೇವಾಲಯದ ಪೂಜೆ ಉತ್ಸವಗಳನ್ನು ನಡೆಸಿಕೊಂಡು ಬರಲು ಹಲವು ಗ್ರಾಮಗಳನ್ನು ದಾನವಾಗಿ ಕೊಟ್ಟನು.[14] ರಾಯನ ರಾಣಿಯಾದ ಚಿನ್ನಾದೇವಿ ಅಮ್ಮನವರು ತಿರುಮಲೆಯ ವೆಂಕಟೇಶ್ವರ ದೇವರಿಗೆ ಆಭರಣಗಳನ್ನು ನೀಡಿ, ಬ್ರಾಹ್ಮಣರಿಗೆ ಸತ್ರದ ಭೋಜನಕ್ಕೆ ತೊಂಡ್ಯೆಮಂಡಲದ 'ಮೂಡಿಯೂರ' ಗ್ರಾಮವನ್ನು ದತ್ತಿಯಾಗಿ ನೀಡಿದ್ದಳು.[15] ದಾನಿಗಳು ದೇವರ ಸೇವೆಗೆ ಗ್ರಾಮಗಳೇ ಅಲ್ಲದೆ ಅದರ ಜೊತೆಗೆ ಆಭರಣಗಳನ್ನು ದತ್ತಿಯಾಗಿ ಕೊಡುವುದು ಮತ್ತು ದೇವಾಲಯದ ಸತ್ರಗಳಿಗೆ ಅದರಲ್ಲಿನ ಪಾಲನ್ನು ನೀಡಲಾಗುತ್ತಿತ್ತು. ಕೃಷ್ಣದೇವರಾಯನು ವರದರಾಜ ಪೆರುಮಾಳ್ ದೇವಾಲಯದ ಕಾರ್ಯಕ್ಕೆ ವರದರಾಜಪುರಂ ಗ್ರಾಮ ಮತ್ತು ಅನ್ನೂರು ಗ್ರಾಮಗಳನ್ನು ಉಂಬಳಿಯಾಗಿ ನೀಡಿದನು.[16]

ಹಂಪಿಯ ಬಾಲಕೃಷ್ಣದೇವರ ಶ್ರೀಕಾರ್ಯ ಸೇವೆಗೆ ಅತ್ತಿವಟೆಯಗ್ರಾಮ, ಮುದಲಾಪುರ, ದೇವಲಾಪುರ, ಹರಿಯಸಮುದ್ರ, ತೊಗಲಗಲ್ಲು, ಬಾದನಹಟ್ಟಿ, ರುದ್ರಪಾದ ಗ್ರಾಮಗಳನ್ನು ರಾಯನು ಸಮರ್ಪಿಸಿದನು.[17] ಕ್ರಿ.ಶ. ೧೫೧೩ರಲ್ಲಿ ಹಂಪಿಯ ರಾಮಚಂದ್ರ ದೇವಾಲಯಕ್ಕೆ ಹಲವು ಹಳ್ಳಿಗಳನ್ನು ರಾಯ ದತ್ತಿ ನೀಡಿದ.[18] ಕೃಷ್ಣದೇವ ರಾಯನು ಪಾರ್ಥಿವ ಸಂವತ್ಸರದ ಕಾರ್ತಿಕ ಶು. ೧ ರಲ್ಲಿ ತೊಗಲಗಲ್ಲು ಗ್ರಾಮವನ್ನು ಅನಂತಶಯನ ದೇವರಿಗೆ ಪೂಜಾ ಸೇವೆಗೆ ಸಮರ್ಪಿಸಿದನು.[19] ಶ್ರೀರಂಗಂಗೆ ಕ್ರಿ.ಶ. ೧೫೧೬-೧೭ರಲ್ಲಿ ರಾಯನು ರಂಗನಾಥ ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ಕಾರ್ಯಕ್ಕೆ ಐದು ಹಳ್ಳಿಗಳನ್ನು ದಾನಮಾಡಿದನು.[20] ಬೇಲೂರಿನ ಚೆನ್ನಕೇಶ್ವರ ದೇವರ ಸೇವೆಗೆ ನಾರಾಯಣಪುರ, ಹಲುಮಿರಿಯ ಗ್ರಾಮಗಳನ್ನು ಅದಕ್ಕೆ ಸಲ್ಲುವ ಗದ್ದೆ ಬೆದ್ದಲು ತೋಟ ತುಡಿಕೆ ಸಕಲ ಸುವರ್ಣಾದಾಯ ಸಕಲ ಭತ್ತದಾಯವನ್ನು ಸಮರ್ಪಿಸಲಾಗಿದೆ.[21] ದಾನಿಗಳು ಯಾವುದೇ ಗ್ರಾಮಗಳನ್ನು ದಾನದತ್ತಿ ನೀಡುವಾಗ ಅಂತಹ ಗ್ರಾಮಗಳ ಆದಾಯವನ್ನು ಮೊದಲೇ ನಿಗದಿಮಾಡಿ ಯಾವ ಬಗೆಯ ಆದಾಯಗಳನ್ನು ಮಾತ್ರ ತೆಗೆದುಕೊಳ್ಳಬೇಕೆನ್ನುವ ತೀರ್ಮಾನಗಳನ್ನು ದಾನಿಗಳೇ ಮಾಡುತ್ತಿದ್ದರು.

ದಾನಿಗಳು ದೇವಾಲಯಗಳಿಗೆ ಹಳ್ಳಿಗಳನ್ನು ದತ್ತಿ ಬಿಡುವಾಗ ಕೆಲವು ಬಾರಿ ಆದಾಯವನ್ನು ನಿಗದಿಮಾಡಿ ವರಾಹಗಳ ರೂಪದಲ್ಲೂ ನೀಡುತ್ತಿದ್ದುದುಂಟು. ಶಾಸನವೊಂದರಲ್ಲಿ ಹೇಳುವಂತೆ, "ಕೃಷ್ಣದೇವರಾಯನು ವಿಷ್ಣುಕಂಚಿಯ ವರದರಾಜ ದೇವರ ಕಾರ್ಯಕ್ಕೆ ವೇಶ್ಶಾರು, ತಿರುಪ್ಪಾಲುಕಡಲು, ಗೋವಿಂದಚೆರಿ, ನೂರಪ್ಪಂದಾಂಗಲು, ಪಳೂರು ಗ್ರಾಮಗಳನ್ನು ಈ ಉಭಯ ಗ್ರಾಮಗಳ ೧೫,೦೦೦ ವರಹಗಳ ಆದಾಯವನ್ನು ದೇವರಿಗೆ ನೀಡಲಾಯಿತು."[22]

ಕೃಷ್ಣದೇವರಾಯನು ಕ್ರಿ.ಶ. ೧೫೧೨ರಲ್ಲಿ ಶ್ರೀರಂಗಂನ ಶ್ರೀರಂಗನಾಥ ದೇವಾಲಯಕ್ಕೆ ದೇವರ ಉತ್ಸವಗಳನ್ನು ನಡೆಸುತ್ತಿದ್ದರಿಂದ ಮತ್ತು ಶ್ರೀ ವೈಷ್ಣವರಿಂದ ತೋಟದಲ್ಲಿ ಗಿಡನೆಟ್ಟಿದ್ದಕ್ಕಾಗಿ ಉಪ್ಪೂರು ಗ್ರಾಮವನ್ನು ಕಾಣಿಕೆಯಾಗಿ

ನೀಡಿದನು.[೫೨] ದೇವಾಲಯಗಳಲ್ಲಿ ನಡೆಯುವ ಹಲವಾರು ಉತ್ಸವಗಳನ್ನು ವೈಭವದಿಂದ ನಡೆಸಲು ಮತ್ತು ದೇವಾಲಯದ ಸೇವಾವರ್ಗದವರು ಕೈಗೊಂಡ ಸಾಮಾಜಿಕ ಕಾರ್ಯ ಹಾಗೂ ಪ್ರೋತ್ಸಾಹಕ್ಕಾಗಿ ನೀಡಿದ ಗ್ರಾಮದತ್ತಿ ಶಾಸನ ಇದಾಗಿದೆ.

ಮೇಲುಗೋಟೆಯ ಚೋಳಪಯನವರ ಶ್ರೀಹಸ್ತದಿಂದ ತಿಮ್ಮಯ್ಯನ ಮಗ ಮಲಪನಾಯ್ಕರು ಕಾಳಿಂಗನಹಳ್ಳಿಯ ಚೆಲಪಿಳೆಯನ ಪೂಜೆ ಕೈಂಕರ್ಯಕ್ಕೆ ತೆಂಕಲ ಭಾಗವನ್ನು ನೀಡಲಾಗಿದೆ.[೫೩] ಈ ಶಾಸನವು ದಾನಿಗಳು ಒಂದೇ ಗ್ರಾಮದಲ್ಲಿ ಕಾಲುಭಾಗವನ್ನು ಮಾತ್ರ ನೀಡಿರುವರು. ಇದರಿಂದ ಬಂದಂತಹ ಆದಾಯದಿಂದ ದೇವರ ಸೇವೆಗಳನ್ನು ನಡೆಸಿಕೊಂಡು ಹೋಗಲು ಅನುಮತಿಯಿತ್ತಿದ್ದರು. ಅದೇ ಕಾಳಿಂಗರಾಯನ ಹಳ್ಳಿಯನ್ನು ಹಿರಿಯತಿರುಮಲ ದೇವರ ದೇವಾಲಯಕ್ಕೆ ದಾನವಾಗಿ ನೀಡಿದುದು; ಇಲ್ಲಿ ಒಂದೇ ಹಳ್ಳಿಯನ್ನು ಬೇರೆ ಬೇರೆ ದೇವಾಲಯಕ್ಕೆ ದತ್ತಿಯಾಗಿ ಬಿಡುತ್ತಿದ್ದುದು ಕಂಡುಬರುತ್ತದೆ. ಒಂದೇ ಹಳ್ಳಿಯ ಆದಾಯವನ್ನು ವಿಭಜಿಸುತ್ತಿದ್ದ ಪದ್ಧತಿಯನ್ನು ಇಲ್ಲಿ ಕಾಣಬಹುದು.

ಕ್ರಿ.ಶ. ೧೫೨೧ರಲ್ಲಿ ಕೃಷ್ಣದೇವರಾಯನು ರಾಜ್ಯಭಾರ ಮಾಡುವಾಗ ಭಂಡಾರದ ಅಪ್ಪರಸಯ್ಯನ ಮಗ ಭಂಡಾರದ ತಿಮ್ಮಪ್ಪಯ್ಯನವರಿಗೆ ಪಾಲಿಸಿದ ಕೊಪಣದ ಸೀಮೆಯ 'ಹಿರಿಯಸಿನ್ದೋಗಿ' ಗ್ರಾಮವನ್ನು ಕೊಪಣದ ಚೆನ್ನಕೇಶವ ದೇವರ ಪೂಜಾಕಾರ್ಯ ಹಾಗೂ ಅಮೃತಪಡಿ, ಅಂಗರಂಗ ವೈಭೋಗ, ಮಾಸೋತ್ಸವ ಮುಂತಾದವುಗಳಿಗೆ ವ್ಯಯಿಸಬೇಕೆಂದಿದೆ.[೫೪] ಒಂದೇ ಗ್ರಾಮದಿಂದ ಬಂದ ಆದಾಯದಿಂದ ದೇವರ ಎಲ್ಲಾ ಕಾರ್ಯಗಳನ್ನು ನಡೆಸಲು ಖರ್ಚುಮಾಡಬೇಕೆಂದು ದತ್ತಿಯಲ್ಲಿ ತಿಳಿಸಲಾಗಿದೆ. ದಾನಿಯು ಹೇಳಿದ ಕಾರ್ಯಗಳನ್ನು ಮಾತ್ರ ನಡೆಸಲಿಕ್ಕೆ ಕಟ್ಟಳೆಯನ್ನು ದಾನಿಯು ದಾನಮಾಡುವಾಗ ತಿಳಿಸಿದ್ದಾನೆ.

ರಾಯನ ಕಾಲದಲ್ಲಿ ಸಾಮಂತನಾದ ಸಾಳುವ ಗೋವಿಂದರಾಜರು ಕ್ರಿ.ಶ. ೧೫೧೯ರಲ್ಲಿ ನರಸಿಂಹ ದೇವರಿಗೆ ಹೊಸಪುರ ಗ್ರಾಮವನ್ನು ದತ್ತಿಯಾಗಿ ನೀಡಿದರು.[೫೫] ಇವನ ಕಾಲದ ಮಡಲವವಾಡಿ ಗೋಪಿನಾಥರು ರಾಜನಿಗೆ ಪುಣ್ಯವಾಗಲೆಂದು ಚೌರಿರಾಜ ದೇವರಿಗೆ ನಿತ್ಯಕಾರ್ಯಗಳನ್ನು ತಪ್ಪದೇ ನಡೆಸಿಕೊಂಡು ಬರಲು ಕೃಷ್ಣಸಾಗರ ಹಳ್ಳಿಯನ್ನು ದಾನ ನೀಡಿದನು.[೫೬] ದಾನಿಗಳು ತಮ್ಮ ಹಿತಬಂಧುಗಳ ಶ್ರೇಯಸ್ಸಿಗಾಗಿ ದಾನ ಮಾಡುತ್ತಿದ್ದುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವರದಾಚಾರ್ಯರು ಅನಂತಚಾರ್ಯನಿಗೆ ಪುಣ್ಯವಾಗಬೇಕೆಂದು ಮೆಂತೆಯ ವೆಂಕಟೇಶ ದೇವರ ಪೂಜೆಗೆ ಹೂವಿನ ಹಾರವನ್ನು ಅರ್ಪಿಸಲು ಮೆಂತೆಯೆ ಗ್ರಾಮವನ್ನು ಕೃಷ್ಣರಾಯಪುರ ಎಂದು ಮರುನಾಮಕರಣ ಮಾಡಿ ಚಿಕ್ಕಮೆಂತೆಯ ಕಲ್ಲುಹಳ್ಳಿ, ಹೊಸಹಳ್ಳಿ, ತಂಡಸಹಳ್ಳಿ ಮತ್ತು ಕೊನೇಹಳ್ಳಿಗಳನ್ನು ವಿಶೇಷ ದಿನದಂದು ಗ್ರೀತಪರ್ವತ ದಾನಕ್ಕೆ ಈ ಹಳ್ಳಿಗಳನ್ನು ದಾನ ನೀಡಿರುವನು.[೫೭]

ಅರಸರು ಯುದ್ಧವನ್ನು ಕೈಗೊಂಡು ಅದರಲ್ಲಿ ಜಯಶಾಲಿಗಳಾದಾಗ ಅದರ ನೆನಪಿಗಾಗಿ ದೇವರ ಕಾರ್ಯಗಳಿಗೆ ದತ್ತಿಗಳನ್ನು ನೀಡುತ್ತಿದ್ದರು. ಕೃಷ್ಣದೇವರಾಯನು ಉದಯಗಿರಿಯನ್ನು ಗೆದ್ದು ಹಿಂತಿರುಗುವಾಗ ಉದಯಗಿರಿಯ ರಾಮಚಂದ್ರದೇವರಿಗೆ ಪ್ರಭಾಕರಪಟ್ಟಣ ಸೀಮೆಯ 'ಕನುಪರೆ' ಗ್ರಾಮವನ್ನು ದತ್ತಿಯಾಗಿ ನೀಡಿ,

ಈ ಗ್ರಾಮಗಳ ಹಣ, ಧಾನ್ಯಗಳಿಂದ ದೇವರಿಗೆ ಪೂಜೆಯನ್ನು ಮಾಡಲು ನೀಡಿದುದಾಗಿದೆ.[೫೯] ಕುಂದುರ್ಪಿ ತಿಮ್ಮಿನಾಯಕನು ರಾಯಸಂ ಕೊಂಡಮರಸಯ್ಯ ಹಾಗೂ ತಮ್ಮ ತಂದೆಗೆ ಪುಣ್ಯವಾಗಲಿ ಎಂದು ಕೊಗರಿನಾಡು ಒಳಗಣ 'ಭೈರಾಸಮುದ್ರಂ' ಗ್ರಾಮವನ್ನು ವೆಂಪಲಪರ್ತಿತಿರುವೇಂಗಳನಾಥ ದೇವರ ಸೇವೆಗೆ ನೀಡಿದ ದತ್ತಿಯಾಗಿದೆ.[೬೦] ರಾಯನ ಆಳ್ವಿಕೆಯ ಮಹಾಮಂಡಲೇಶ್ವರ ಸರ್ವಯದೇವ ಚೂಡಮಹಾರಾಜರಿಗೆ ವಿನಿಕೊಂಡ ಸೀಮೆಯೊಳಗಿನ ಕೊನುಡುರಟ್ಟ ಗ್ರಾಮವನ್ನು ನಾಯಕತನಕೆ ಕೊಟ್ಟಿದ್ದು ಈ ಗ್ರಾಮವನ್ನು ಕುಂಡ್ರೂರು ಪುರುಷೋತ್ತಮ ದೇವಾಲಯದ ಪುಣ್ಯಕಾರ್ಯಕ್ಕೆ ಹಣ ಹಾಗೂ ಭೂಮಿಯನ್ನು ಸಮರ್ಪಿಸಿದನು.[೬೧] ರಾಯನ ಕಾಲದ ಕೆಂಚಸೋಮಣ್ಣ ನಾಯಕನು ಕೃಷ್ಣದೇವರಾಯನಿಗೆ ಪುಣ್ಯವಾಗಲಿ ಎಂದು ಕೆಂಚನಕೋಟೆಯ ಹರಿಹರ ದೇವರ ಕಾರ್ಯಕ್ಕೆ ಕೊಟ್ಟ 'ಕೊಟ್ಟಪುರ' ಗ್ರಾಮ.[೬೨] ರಾಯನು ಕ್ರಿ.ಶ. ೧೫೧೩ರಲ್ಲಿ ಹಂಪಿಯ ವಿಠಲದೇವರ ಶ್ರೀಕಾರ್ಯಕ್ಕೆ ರಾಯದುರ್ಗದ ಸೀಮೆಯಲ್ಲಿನ ದೇವಸಮುದ್ರ, ಉರುತಹಾಳ, ಮುರುವಡಿ, ದಡುಗೂರು, ಪೋಕುರುಕೆ, ಜಂಬಲಮಡಿಕೆ, ಧಾಕವಾಡಿ, ಚೌವುಡಲಾಪುರ ಮತ್ತು ಹೊಸವೂರ ಮಾಗಣೆಯ ವಿರುಪಾಪುರ, ಜಂತಗಲ್ಲು ಮಾಗಣೆಯ ಮುಪ್ಪೂರು, ಕುಂಟೋಜಿಗಳನ್ನು ದತ್ತಿಯಾಗಿ ನೀಡಿದ್ದನು.[೬೩]

ದೇವಾಲಯಕ್ಕೆ ಅರಸರಲ್ಲದೆ ರಾಣಿಯರು ಸಹ ದಾನದತ್ತಿಯನ್ನು ಅರ್ಪಿಸುತ್ತಿದ್ದರು. 'ಕೃಷ್ಣದೇವರಾಯನ ರಾಣಿಯಾದ ತಿರುಮಲದೇವಿಯು ನಾಗಲಾಪುರಂನ ಕೃಷ್ಣಮಾಣಿಕ್ಯ ದೇವರಿಗೆ ಅಮಾನ್ ಪಕ್ಕಂ, ಕೊಟ್ಟಲತ್ತೂರು, ನಿನ್ನಯೂರುನಾಡು ಮತ್ತು ವೆಂಕಲತ್ತೂರು ಗ್ರಾಮಗಳನ್ನು ದಾನಮಾಡಿದಳು.[೬೪] ರಾಯರ ಕಾಲದಲ್ಲಿ ರಾಜಯದೇವನು ಅರಿಗಂಡಪುರದ ಕರಿಯಾಮಾಣಿಕ್ಯ ಪೆರುಮಾಳ್ ದೇವರಿಗೆ ರಾಯಕುಪ್ಪಂ ಎಂಬ ಗ್ರಾಮವನ್ನು ಕೃಷ್ಣರಾಯಪುರಂ ಎಂದು ಪ್ರತಿನಾಮಕರಣವನ್ನು ಮಾಡಿ ಈ ಗ್ರಾಮವನ್ನು ಸರ್ವಮಾನ್ಯವಾಗಿ ನೀಡಿದ್ದನು.[೬೫]

ವೈಷ್ಣವ ದೇವಾಲಯಗಳ ಮೂಲ ಆದಾಯವು ದಾನಿಗಳು ನೀಡಿದ ಗ್ರಾಮಗಳ ಆದಾಯದಿಂದ ಬರುತ್ತಿದ್ದಿತು. ಇಲ್ಲಿ ಕಂಡಬರುವುದೇನೆಂದರೆ ದಾನಿಗಳು ದೇವಾಲಯಗಳನ್ನು ಕಟ್ಟಿಸುವಾಗ, ಇಲ್ಲವೆ ಕಟ್ಟಿಸಿದ ದೇವಾಲಯಗಳಿಗೆ ದಾನದತ್ತಿಯನ್ನು ಕೊಡುವಾಗ ಗ್ರಾಮಗಳನ್ನು ನೀಡಿದ್ದಾರೆ. ಕೆಲವು ಶಾಸನಗಳಲ್ಲಿ ಗ್ರಾಮಗಳನ್ನು ಮಾತ್ರ ಹೆಸರಿಸಿದರೆ, ಹಲವು ಶಾಸನಗಳಲ್ಲಿ ಆಯಾಯ ಗ್ರಾಮಗಳಲ್ಲಿನ ಸರ್ವ ಆದಾಯವನ್ನು ನೀಡಿರುವುದು ತಿಳಿದುಬರುತ್ತದೆ. ಗ್ರಾಮಗಳ ಸುಂಕ, ಭತ್ತಾದಾಯ, ತಳವಾರಿಕೆ, ಜೋಡಿ ಬಿರಾಡ, ಸುವರ್ಣದಾಯ ಇತ್ಯಾದಿಯಾಗಿ ಹೆಸರಿಸಿದ್ದಾರೆ. ಇವುಗಳಿಂದ ಬಂದ ಆದಾಯದಿಂದ ತಾವು ನಿಗದಿಪಡಿಸಿದ ದೇವರ ಸೇವಾಕಾರ್ಯಗಳನ್ನು ನಡೆಸಿಕೊಂಡು ಹೋಗಲು ದಾನಿಗಳು ದತ್ತಿಗಳನ್ನು ನೀಡುತ್ತಿದ್ದರು.

ದಾನಿಗಳು ಕೆಲವು ಬಾರಿ ಒಂದೇ ದೇವಾಲಯಕ್ಕೆ ಹಲವಾರು ಹಳ್ಳಿಗಳನ್ನು ಅವುಗಳಿಗೆ ಸಂಬಂಧಿಸಿದ ಆದಾಯವನ್ನು ಹಣದ ರೂಪದಲ್ಲಿ ಲೆಕ್ಕಹಾಕಿ ದಾನವನ್ನು ನೀಡಿರುವ ಶಾಸನಗಳು ನಮಗೆ ಲಭ್ಯವಿವೆ. ಹಣದ ಆದಾಯದಲ್ಲಿ ಇಂತಿಂಥ ಕಾರ್ಯಗಳಿಗೆ ಇಷ್ಟಿಷ್ಟು ಖರ್ಚು ಮಾಡಬೇಕೆಂದು ತಿಳಿಸಲಾಗಿರುತ್ತದೆ. ದಾನದತ್ತಿಯನ್ನು ನೀಡುವಾಗ ವಿಶೇಷ ದಿನಗಳಲ್ಲಿ, ಯುದ್ಧದಲ್ಲಿ ಗೆದ್ದ ಸಂದರ್ಭದಲ್ಲಿ ಹಾಗೂ ರಾಜರಿಗೆ ಅವರ ಸಂಬಂಧಿಕರಿಗೆ ಪುಣ್ಯ ದೊರೆಯಲಿ ಎಂದು ಬಿಟ್ಟದತ್ತಿಗಳು ಹೆಚ್ಚಾಗಿ ಕಂಡುಬರುತ್ತವೆ. ರಾಯನ ಕಾಲದ ಸಾಮ್ರಾಜ್ಯದಾದ್ಯಂತ

ಬಿಟ್ಟ ದತ್ತಿಶಾಸನಗಳಲ್ಲಿ ಗ್ರಾಮದಾನ ಮಾಡಿದ ಶಾಸನಗಳದೇ ಮೇಲುಗೈಯಾಗಿದೆ. ಹೀಗೆ ದೇವಾಲಯಗಳ ಆದಾಯದ ಪ್ರಥಮ ಮೂಲವೆಂದರೆ ಗ್ರಾಮದತ್ತಿಯಾಗಿದೆ. ಗ್ರಾಮಗಳನ್ನು ದೇವರಿಗೆ, ದೇವಾಲಯಕ್ಕೆ, ಸೇವಾವರ್ಗದವರಿಗೆ ಕೂಡಾ ದತ್ತಿಬಿಡಲಾಗಿದೆ.

ಭೂದಾನ ಆದಾಯ

ದೇವಾಲಯಗಳ ಆದಾಯದ ಉತ್ಪನ್ನವು ಭೂಮಿದಾನದಿಂದಲೂ ಸಹ ಬರುತ್ತಿದ್ದುದು ಶಾಸನಗಳಲ್ಲಿ ಉಲ್ಲೇಖವಾಗಿದೆ. ದಾನಿಗಳು ದೇವರ ಸೇವೆಗೆ ತಮ್ಮ ಕೈಲಾದ ಮಟ್ಟಿಗೆ ಭೂದಾನವನ್ನು ನೀಡುತ್ತಿದ್ದರು. ದಾನಿಗಳು ನೇರವಾಗಿ ಭೂಮಿಗಳನ್ನು ದೇವಾಲಯದ ಸ್ಥಾನಿಕರಿಗೆ ನೀಡಿ ಅವರ ಜೊತೆ ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದರು. ಇಂಥ ಭೂಮಿಗಳನ್ನು ಸಾಗುವಳಿಗೆ ಕೊಟ್ಟು, ಬಂದ ಹಣದಲ್ಲಿ ದಾನಿಗಳು ನಿಗದಿಪಡಿಸಿರುವ ಸೇವೆಗಳನ್ನು ನೆರವೇರಿಸುತ್ತಿದ್ದರು. ಕೆಲವು ಬಾರಿ ದಾನದತ್ತಿಗಳಲ್ಲಿ ಧಾನ್ಯಗಳನ್ನು ಸಹ ನೀಡುತ್ತಿದ್ದರು. ಇಂತಹ ಧಾನ್ಯಗಳನ್ನು ಸಂಗ್ರಹಿಸಲು ದೇವಾಲಯಗಳಲ್ಲಿ ಪ್ರತ್ಯೇಕವಾದ ಉಗ್ರಾಣಗಳು ಇರುತ್ತಿದ್ದವು.[೬೬] ಈ ಧಾನ್ಯಗಳಿಂದ ದೇವಾಲಯದ ಪೂಜೆ, ಉತ್ಸಾವಾದಿಗಳಿಗೆ ಉಪಯೋಗಿಸಿ ಮಿಕ್ಕವುಗಳನ್ನು ದೇವಾಲಯದ ಪರಿಚಾರಕರಿಗೆ ಧಾನ್ಯದ ರೂಪದಲ್ಲಿ ಕೂಲಿಯನ್ನು ನೀಡಲಾಗುತ್ತಿತ್ತು. ಈ ಪ್ರದೇಶದ ಮುಖ್ಯ ಬೆಳೆಯಾದ ಭತ್ತವನ್ನು ಖಂಡುಗದ ಅಳತೆಯಲ್ಲಿ ದಾನ ನೀಡಿರುವ ಉಲ್ಲೇಖಗಳಿವೆ. ಇದರಿಂದ ದೇವಾಲಯಗಳಿಗೆ ಧಾನ್ಯರೂಪದಲ್ಲಿಯೂ ಆದಾಯ ಬರುತ್ತಿತ್ತು. ದಾನಿಗಳು ವೈಷ್ಣವ ದೇವಾಲಯಗಳಿಗೆ ಭೂದಾನ ಮಾಡಿದುದನ್ನು ಸಾಮ್ರಾಜ್ಯದಾದ್ಯಂತ ಸಿಕ್ಕಿರುವ ಹಲವಾರು ಶಾಸನಗಳಿಂದ ತಿಳಿಯಬಹುದು.

ಕ್ರಿ.ಶ. ೧೫೧೩ ರಲ್ಲಿ ಕೃಷ್ಣದೇವರಾಯನು ಹಂಪಿಯ ವಿಠಲ ದೇವಾಲಯಕ್ಕೆ ದೇವರಪೂಜೆ ಮತ್ತು ಇವರ ಸೇವೆಗಾಗಿ ಕೆಲವೊಂದು ಭೂಮಿಯನ್ನು ದಾನಮಾಡಿದನು.[೬೭] ಭಾರದ್ವಜ ಗೋತ್ರದ ಜೆಟಿಯ್ಯನ ಮಗ ತಿಮ್ಮಯ, ಗೌತಮಗೋತ್ರದ ಕೋಕತಿಜೆಟಿಯ ಮಗ ಹಜಪಯ್ಯ ಇವರಿಬ್ಬರು ಕೆಸರಟ್ಟಿಯ ಕೃಷ್ಣದೇವರ ಅಮೃತಪಡಿಗೆ ಇಕ್ಕುಲದ ಹೊಲ, ನಾಗುಳದ ಗದ್ದೆ ಹಾಗೂ ತೋಟವೊಂದನ್ನು ದತ್ತಿಯಾಗಿ ನೀಡಿದರು.[೬೮] ಕ್ರಿ.ಶ. ೧೫೧೮ರಲ್ಲಿ ಅಲ್ಲಸಾನಿ ಚೊಕ್ಕಯ್ಯಂಗಾರು ಕೊಕಟನ ಚೆನ್ನಕೇಶವ ಮತ್ತು ಹನುಮಾನ್ ದೇವರಿಗೆ ಗೋಚರ್ಮಾ ಪ್ರದೇಶದ ಭೂಮಿಯನ್ನು ನೀಡಿದನು.[೬೯] ಅದೇ ದೇವಾಲಯಕ್ಕೆ ಅಗಸಲ ಮಲ್ಲೋಜನು ಭೂಮಿಯನ್ನು ದಾನ ನೀಡಿದ್ದು ಅದೇ ಶಾಸನದಲ್ಲಿ ಉಲ್ಲೇಖಿಸಿದೆ.

ಕ್ರಿ.ಶ. ೧೫೧೮ ರಲ್ಲಿ ರಾಯನ ಆಳ್ವಿಕೆಯಲ್ಲಿ ಅಂಜನಾದ್ರಿಯ ಕರಿಯತಿರುವೇಂಗಳನಾಥ ದೇವರಿಗೆ ರಾಣಿತಿರುಮಲದೇವಿಯು ವಿಜಯನಗರ ಪಟ್ಟಣದ ಕುಂಬಾರಕುಂಟೆ ಭೂಮಿಯನ್ನು ದೇವರ ಪೂಜೆ ಕೈಂಕರ್ಯಕ್ಕೆ ತಿರುಮಲರಾಯನಿಗೆ ಪುಣ್ಯವಾಗಲೆಂದು ದಾನ ನೀಡಿದಳು.[೭೦] ಕ್ರಿ.ಶ. ೧೫೨೯ ರಲ್ಲಿ ವೆಂಕಟನಾಯುಡು ಅಳಿಯನಾದ ದೇವಮಕೋನಪ್ಪನು ಕದಿರಿಯ ನರಸಿಂಹದೇವ ದೇವಾಲಯಕ್ಕೆ ಕೆಲವು ಭೂಮಿಗಳನ್ನು ನೀಡಿ ಇದರಿಂದ ಬಂದ ಆದಾಯದಿಂದ ದೇವರ ಪೂಜಾಕಾರ್ಯಗಳನ್ನು ನಡೆಸಬೇಕೆಂದು ದಾನ ನೀಡಿರುವನು.[೭೧] ದ್ವಾಶರನ್ ದೇಮರಸನು ಕತ್ರೆಕಾಂಡ್ಲ ಗ್ರಾಮದ ಚೆನ್ನಕೇಶವ ದೇವರಿಗೆ ಚೆನ್ನವರಂ ಮತ್ತು ಕತ್ರೆಕಾಂಡ್ಲದಲ್ಲಿನ ಕೆಲವು ಭೂಮಿಗಳನ್ನು

ದತ್ತಿಯಾಗಿ ನೀಡಿದನು.[೨] ಪ್ರಧಾನಮಂತ್ರಿ ಸಾಳುವ ಗೋವಿಂದಾಜು ಅವರ ಪುತ್ರ ರಾಚಿರಾಜುರವರು ನರಸಿಂಹ ದೇವಾಲಯಕ್ಕೆ ಭೂದಾನವನ್ನು ದೇವರ ಕಾರ್ಯಕ್ಕೆ ದಾನ ಮಾಡಿದನು.[೩]

ಕೃಷ್ಣದೇವರಾಯನು ಏಳು ಕೊಳಗ ಗದ್ದೆಯನ್ನು ದೇಮಣಜೋಯಿಸರ ಮಗನಾದ ರಂಗಭಟನಿಗೆ ಉಂಬಳಿಯಾಗಿ ನೀಡಿದನು. ರಂಗಭಟನು ಅದರಲ್ಲಿ ಆರು ಮುಡಿ ಭೂಮಿಯನ್ನು ಆಳ್ವಾರರ ದೇವರಿಗೆ ದಾನಮಾಡಿದನು. ಇದರಿಂದ ಬಂದ ಆದಾಯದಿಂದ ದೇವರ ಪೂಜೆ, ದೇವಸ್ಥಾನದ ವ್ಯವಸ್ಥೆಯನ್ನು ನೋಡಿಕೊಳ್ಳಲಾಗುತ್ತಿತ್ತು.[೪] ರಾಯನ ಆಳ್ವಿಕೆಯಲ್ಲಿ ಮಂಚಪ್ಪನಾಯಕನ ಮಗ ಸಿಂಗಪ್ಪನಾಯಕನು ವೇಲಾಪುರಿಯ ಚೆನ್ನಕೇಶವ ದೇವಾಲಯದ ಕಾರ್ಯಕ್ಕೆ ಹಣ ಹಾಗೂ ಭತ್ತವನ್ನು ನೀಡಿದ್ದನು.[೫]

ದೇವಾಲಯಗಳಿಗೆ ಹರಿದು ಬರುವ ಆದಾಯದಲ್ಲಿ ಮೂರನೆ ಪಾಲು ಒಡವೆಗಳದ್ದು. ದಾನಿಗಳು ತಮ್ಮ ಸೇವೆಯಲ್ಲಿ ದೇವಾಲಯಗಳಿಗೆ ಬಂಗಾರ, ಬೆಳ್ಳಿ, ಮುತ್ತು, ರತ್ನ, ವಜ್ರ, ವೈಡೂರ್ಯಗಳನ್ನು ತಮ್ಮ ನೆಚ್ಚಿನ ದೇವತೆಗಳಿಗೆ ನೀಡಿದುದು ಶಾಸನಗಳಿಂದ ತಿಳಿದುಬರುತ್ತದೆ. ಈ ದತ್ತಿಯಲ್ಲಿ ಒಡವೆಗಳದೆ ಸಿಂಹಪಾಲು. ಇಲ್ಲಿ ರಾಜರಿಂದ ಹಿಡಿದು ರಾಣಿಯರು, ಮಂತ್ರಿಗಳು, ದಂಡನಾಯಕರು, ಗುರುಗಳು, ವ್ಯಾಪಾರಿಗಳು, ಸಾಮಂತರು, ಸಾರ್ವಜನಿಕರು ಕೂಡ ದಾನದತ್ತಿ ಬಿಟ್ಟಿರುವುದನ್ನು ಕಾಣಬಹುದು. ರಾಯನು ತಿರುಮಲೆಯ ಏಳನೆಯ ಭೇಟಿಯ ಸಂದರ್ಭದಲ್ಲಿ ವೆಂಕಟೇಶ್ವರನಿಗೆ ನೀಡಿದ ಆಭರಣಗಳು ಅಸಂಖ್ಯವಾಗಿವೆ. ಅವನ ರಾಣಿಯರು ಕೂಡ ತಿರುವೇಂಗಳನಾಥನ ಭಕ್ತರಾಗಿ ಸಲ್ಲಿಸಿದ ಸೇವೆ ಮಹತ್ವದ್ದಾಗಿದೆ. ಇದನ್ನು ತಿರುಪತಿ ತಿರುಮಲೆ ದೇವಸ್ಥಾನದ ಶಾಸನಗಳಲ್ಲಿ ನೋಡಬಹುದು.

ಸ್ಥಾನಿಕರು ದೇವರ ಸೇವೆಗೆ ಬೇಕಾದ ಒಡವೆಗಳನ್ನು 'ಭಂಡಾರ'ದಲ್ಲಿ ಇಟ್ಟುಕೊಂಡು ಉತ್ಸವಗಳ ಸಂದರ್ಭದಲ್ಲಿ ಮಾತ್ರ ಉಪಯೋಗಿಸು ತ್ತಿದ್ದರು. 'ರತ್ನಾಭರಣ'ಗಳನ್ನು ನೋಡಿಕೊಳ್ಳುವುದಕ್ಕೆ ದೇವಾಲಯಗಳಲ್ಲಿ ಪ್ರತ್ಯೇಕ ಸೇವಕರಿರುತ್ತಿದ್ದರು. 'ಹಂಪಿಯ ವಿಜಯವಿಠಲ ದೇವಾಲಯದ ಭಂಡಾರದ ಹಿರಿತಿಮ್ಮಯ್ಯನು ದೇವರ ನಾನಾ ಆಭರಣಗಳನ್ನು ಮತ್ತು ದೇವಾಲಯದ ಬೀಗಮುದ್ರೆಯನ್ನು ನೋಡಿಕೊಳ್ಳುತ್ತಿದ್ದನು.'[೬] ಕೃಷ್ಣದೇವರಾಯನ ಕಾಲದಲ್ಲಿ ವೈಷ್ಣವ ದೇವಾಲಯಗಳಿಗೆ ನಾನಾ ಕಡೆಗಳಲ್ಲಿ ಒಡವೆಗಳನ್ನು ದಾನವಾಗಿ ನೀಡಿರುವುದು ಶಾಸನಗಳಲ್ಲಿ ಉಲ್ಲೇಖವಾಗಿವೆ. ಅವು ಈ ಕೆಳಗಿನಂತಿವೆ :

ಕ್ರಿ.ಶ. ೧೫೧೩ ರಲ್ಲಿ ಕೃಷ್ಣದೇವರಾಯನು ರಾಜಧಾನಿಯಲ್ಲಿ ಉದಯಗಿರಿಯಿಂದ ತಂದ ಬಾಲಕೃಷ್ಣದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿ, ದೇವರಿಗೆ ನವರತ್ನ ಖಚಿತವಾದ ನಾನಾ ವಿಧದ ಆಭರಣಗಳನ್ನು, ಚಿನ್ನ ಬೆಳ್ಳಿಯ ಪರಿಕರಗಳನ್ನು ಅರ್ಪಿಸಿದನು.[೭] ಅದೇ ರೀತಿ ರಾಯನು ಕ್ರಿ.ಶ. ೧೫೨೪ರಲ್ಲಿ ಶ್ರೀರಂಗಂನ ರಂಗನಾಥದೇವರ ದರ್ಶನಕ್ಕೆ ಹೋಗಿ ಮುಖಮಂಟಪದ ಬಾಗಿಲನ್ನು ಬಂಗಾರದ ತಗಡುಗಳಿಂದ ಅಲಂಕರಿಸಿದನು.[೮] ರಾಯನು ಶ್ರೀರಂಗಂಗೆ ಮೊದಲು ಭೇಟಿ ನೀಡಿದಾಗ ವಜ್ರ ವೈಢೂರ್ಯಗಳನ್ನು ದಾನ ಮಾಡಿದ್ದನು. "ಕ್ರಿ.ಶ. ೧೫೨೪ರಲ್ಲಿ ರಾಯನು ಶ್ರೀಪತಯಮಾ ಕೈಂಕರ್ಯವು ಕಂಚಿಯ ವರದರಾಜ ದೇವರಿಗೆ ಸಮರ್ಪಿಸಿದ ಪದಕಕ್ಕೆ ಕೆಂಪುಗಳು ೯, ವೈಡೂರ್ಯಗಳು ೨, ವಜ್ರ ೨೦, ಪಚ್ಚೆಮಾಣಿಕ್ಯ ೮, ಮುತ್ತುಗಳು ೪, ಅಂತರಾಳು ಮುತ್ತುಗಳು ೪೩,

ಹೋಮಸಲಕರಣೆಗಳ ಸಹ ತೂಕ ೨೪ ಸಮರ್ಪಿಸಿದನು.''[೭೯] ಅಲ್ಲದೆ, ''ಕ್ರಿ.ಶ. ೧೫೨೧ರಲ್ಲಿ ರಾಯನ ಅಧಿಕಾರಿಗಳಾದ ರಾಯಸಂ ಶ್ರೀಪತಾಯ, ನಾರಯ್ಯನವರು ಕಂಚಿಯ ವರದರಾಜ ದೇವರಿಗೆ ಐದು ಬೆಳ್ಳಿಯ ತಟ್ಟೆಗಳನ್ನು ದೇವರ ಕಾರ್ಯಕ್ಕೆ ನೀಡಿದರು.''[೮೦]

''ಕ್ರಿ.ಶ. ೧೫೨೬ ರಲ್ಲಿ ಗೋಪಾಯಿ ಮತ್ತು ರಾಮಣನು ರಾಮಘಡದ ಕುಮಾರರಾಮದೇವರ ದೇವಾಲಯಕ್ಕೆ ಗಂಟೆ, ಜಾಗಟೆ, ಹರಿವಾಣ, ಚೆಂಬು ಮೇಲೆ ಹೊನ್ನನ್ನು ಸಮರ್ಪಿಸಿದರು.[೮೧] ಚಿನ್ನಾದೇವಿ ಮತ್ತು ತಿರುಮಲದೇವಿ ಅಮ್ಮನವರು ಹಂಪಿಯ ವಿಠಲ ದೇವಾಲಯದ ಗೋಪುರಗಳನ್ನು ಕಟ್ಟಿಸಿ, ದೇವರಿಗೆ ಚಿನ್ನದ ಹರಿವಾಣ, ಬೆಳ್ಳಿಯ ೯ ನೀರಾಂಜನ ಹಲಗೆ, ನಾಲ್ಕು ರೀತಿಯ ಆರತಿಗಳನ್ನು ದೇವರ ದೀಪಾರಾಧನೆಗೆ ಅರ್ಪಿಸಿದರು.''[೮೨]

ಕೃಷ್ಣದೇವಮಹಾರಾಯನು ಕ್ರಿ.ಶ. ೧೫೦೯ರಲ್ಲಿ ಪಟ್ಟವೇರಿದ ನಾಲ್ಕು ವರ್ಷಗಳಲ್ಲೇ ಹಲವಾರು ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲೆಲ್ಲ ತನ್ನ ಕೈಂಕರ್ಯಗಳನ್ನು ಅರ್ಪಿಸಿದನು. ಮೊದಲಬಾರಿಗೆ ತಿರುಮಲೆಯ ಬೆಟ್ಟವೇರಿ ಬಂದು ದೇವರ ದರ್ಶನ ಮಾಡಿದುದು ಕ್ರಿ.ಶ. ೧೫೧೩ರಲ್ಲಿ. ತಿರುಮಲೆಯ ತಿರುವೇಂಗಳನಾಥ (ವೆಂಕಟೇಶ್ವರ) ದೇವಾಲಯಕ್ಕೆ ಕೊಟ್ಟಷ್ಟು ದಾನ ಧರ್ಮಗಳು ಬೇರೆಲ್ಲಿಯೂ ನೀಡಲಿಲ್ಲ.

ರಾಯನು ಕ್ರಿ.ಶ. ೧೫೧೩ರಲ್ಲಿ ಮೊದಲ ಬಾರಿಗೆ ಬೆಟ್ಟಕ್ಕೆ ತನ್ನ ರಾಣಿಯರ ಜೊತೆಯಲ್ಲಿಯೇ ಬಂದಿದ್ದನು. ಇವನ ಜೊತೆಯಲ್ಲಿ ರಾಣಿಯರು ದೇವರಿಗೆ ದಾನಧರ್ಮವನ್ನು ಮಾಡಿದರು. ದೇವರಿಗೆ ನವರತ್ನ ಖಚಿತವಾದ ಕಿರೀಟ, ಮೂರೆಳೆ ಮುತ್ತಿನ ಸರ, ಮುತ್ತಿನ ಪದಕ, ಇಪ್ಪತ್ತೈದು ಬೆಳ್ಳಿಯ ಆರತಿ ತಟ್ಟೆಗಳನ್ನು ನೀಡಿದರು. ಕಿರೀಟದಲ್ಲಿ ೧೫೫೫ ತೂಕದ ಬಂಗಾರದ ಕಟ್ಟಡ, ೧೦೬೬ ತೂಕದ ಕುಂದಣಬಂಗಾರ, ೨೮೨೨ ಕೆಂಪುಗಳು, ೧೬೦ ಪಚ್ಚೆ, ೪೨೩ ಹಳೆಯ ವಜ್ರ, ೩ ಮಾಣಿಕ್ಯಗಳು, ೧೦ ನೀಲಗಳು, ೧೬ ವೈಡೂರ್ಯ, ಗೋಮೇಧಿಕ ಎಲ್ಲವೂ ಸೇರಿ ೩,೧೩೦ ತೂಕ; ೧೬೩ ಕ್ಯಾರೆಟ್ ತೂಗುವ ಮುತ್ತುಗಳು ಕಟ್ಟಿದ ಬಂಗಾರದ ಸರಿಗೆ - ಸರ; ಕಿರೀಟದ ಒಟ್ಟು ತೂಕ ೩,೩೦೮. ಮುತ್ತಿನ ಮೂರಳೆ ಸರದಲ್ಲಿ ೧,೩೬೦ ಜರಿಮುತ್ತುಗಳಿದ್ದವು, ಒಂದು ಮಾಣಿಕ್ಯವಿದ್ದಿತು, ಎರಡು ನೀಲಮಣಿಗಳಿದ್ದವು, ಹದಿನೈದು ಅಡ್ಡಿಗೆಗಳಿದ್ದವು; ಇದರ ಒಟ್ಟು ತೂಕ ೨೨೫ ಕ್ಯಾರೆಟ್ ಗಳು. ಪದಕದಲ್ಲಿ ೬ ಮುತ್ತುಗಳು, ೬೦ ವಜ್ರಗಳು, ೧೧ ಪಚ್ಚೆಗಳು, ಮೂರು ಮಾಣಿಕ್ಯಗಳು, ಐದು ಕೆಂಪುಗಳು ಇದ್ದು ಅದರ ಒಟ್ಟು ತೂಕ ೯೧ ರಷ್ಟು ಇದ್ದಿತು. ಕೃಷ್ಣದೇವರಾಯನ ರಾಣಿಯರು ಚಿನ್ನಾದೇವಿ ಮತ್ತು ತಿರುಮಲದೇವಿ ಅಮ್ಮನವರು ತಿರುವೇಂಗಳನಾಥ ದೇವರ ರಾತ್ರಿಯ ಹಾಲಿನ ನೈವೇದ್ಯ ಅವಸರಕ್ಕೆ ೩.೨೪ ತೂಕದ ೨ ಬಂಗಾರದ ಬಟ್ಟಲುಗಳನ್ನು ಇಬ್ಬರೂ ಸಮರ್ಪಿಸಿದರು.[೮೩]

ರಾಯನು ಎರಡನೆಯ ಬಾರಿ ಕ್ರಿ.ಶ. ೧೫೧೩ರ ಮೇ ತಿಂಗಳಲ್ಲಿ ದೇವರ ದರ್ಶನಕ್ಕೆ ಬಂದಾಗ ಮೂಲ ದೇವರಿಗೆ ಹಲವು ತಿರುವಾಭರಣಗಳನ್ನೂ, ಉತ್ಸವಮೂರ್ತಿಗಳಿಗೆ ಮೂರು ಕಿರೀಟಗಳನ್ನು ಸಮರ್ಪಿಸಿದ್ದನು.[೮೪] ಕ್ರಿ.ಶ. ೧೫೧೩ರ ಜೂನ್ ತಿಂಗಳಲ್ಲಿ ೩ನೇ ಬಾರಿ ಬಂದಾಗ ತಂದೆ - ತಾಯಿಗಳಿಗೆ ಧರ್ಮವಾಗಬೇಕೆಂದು ತಿರುವೇಂಗಳನಾಥನಿಗೆ ನವರತ್ನ ಖಚಿತವಾದುದನ್ನು ದಾನ ಮಾಡಿದ ವಿವರವಿಲ್ಲ. ಶಾಸನ ಅಕ್ಷರದ ಕಲ್ಲುಚಕ್ಕೆ ಕಳಚಿದೆ. ಆದುದರಿಂದ ದಾನದ ವಿಷಯ ಗೊತ್ತಾಗುವುದಿಲ್ಲ. ರಾಯನು ನಾಲ್ಕನೆಯ ಬಾರಿ ಕ್ರಿ.ಶ. ೧೫೧೪ ರಲ್ಲಿ

ಉದಯಗಿರಿ ದುರ್ಗವನ್ನು ವಶಪಡಿಸಿಕೊಂಡು ಬರುವಾಗ ತಿರುಮಲೆಯ ದೇವರ ದರ್ಶನ ಪಡೆದು ದೇವರಿಗೆ ಕನಕಾಭಿಷೇಕವನ್ನು ಮಾಡಿದನು. ಇದರಲ್ಲಿ ೩೦,೦೦೦ ಬಂಗಾರದ ವರಹಗಳಿದ್ದವು. ೪೮೦ ಚಿನ್ನದ ಕುಸುರಿ, ೧೬೦ ಅಡಕಟ್ಟು ಇದ್ದು ಒಟ್ಟು ೨೫೦ ತೂಗುವ ತ್ರಿಸರವನ್ನು ಸಲ್ಲಿಸಿದನು; ೩೨೨ ವಜ್ರಗಳನ್ನು, ನೂರು ಮಾಣಿಕ್ಯಗಳನ್ನು ಕಟ್ಟಿದ್ದು ೨೬೫ ತೂಗುವ ಕಡಗಗಳ ಜೋಡಿಯನ್ನು ಅರ್ಪಿಸಿದನು. "ಇದೇ ಸಮಯದಲ್ಲಿ ಅವನೊಂದಿಗೆ ಬಂದಿದ್ದ ರಾಣಿ ಚಿನ್ನಾದೇವಿಯು ದೇವರಿಗೆ ಪಚ್ಚೆ ವಜ್ರಗಳಿಂದ ಕೂಡಿಸಿದ ಪದಕದೊಂದಿಗೆ ಕಂಠಮಾಲೆಯನ್ನು ಕೊಟ್ಟು ದೇವರ ಅಮೃತಪಡಿ ನೈವೇದ್ಯಕ್ಕೆ ಏರ್ಪಾಟನ್ನೂ ಮಾಡಿದಳು."[೮೫]

ರಾಯನು ೫ನೇ ಬಾರಿ ತಿರುಮಲೆಗೆ ಕ್ರಿ.ಶ. ೧೫೧೬ ರಲ್ಲಿ ಭೇಟಿ ನೀಡಿದನು. ಪೂರ್ವದ ದಿಗ್ವಿಜಯಗಳನ್ನು ಕೈಗೊಂಡು ವಿಜಯನಗರಕ್ಕೆ ಹಿಂತಿರುಗಿದ ಮೇಲೆ ತಿರುವೇಂಗಳನಾಥನಿಗೆ ನವರತ್ನ ಪ್ರಭಾವಳಿಯನ್ನು ಕಳುಹಿಸಿದ್ದನು. ಈ ಪ್ರಭಾವಳಿಯಲ್ಲಿ ೮೧ ಮಾಣಿಕ್ಯಗಳು, ೧೦೭೯೪ ಕೆಂಪುಗಳು, ೭೫೪ ಪಚ್ಚೆಗಳು, ೫೩೦ ನೀಲಮಣಿಗಳೂ, ೪೦ ವೈಢೂರ್ಯಗಳು, ೪೫ ಗೋಮೇಧಿಕಗಳು, ೭೪ ಪುಷ್ಯರಾಗಗಳು, ೯೨೦ ಹಳೆಯವಜ್ರಗಳು, ೩೯೩೩ ಮುತ್ತುಗಳು, ೪ ಗರಣಿನೀಲಗಳು, ೬ ಹರಳುಗಳು, ೩೦ ಶಂಖಗಳೂ ಇದ್ದವು. ಈ ಪ್ರಭಾವಳಿಯ ಒಟ್ಟು ತೂಕ ೩೧.೧೨೪ ಕಿಲೋ ಗ್ರಾಂ. ಇದನ್ನು ಸಮರ್ಪಿಸಲು ರಾಯನು ತಿರುಮಲೆಗೆ ಭೇಟಿ ನೀಡದೆ ಪ್ರಭಾವಳಿಯನ್ನು ಕಳುಹಿಸಿಕೊಟ್ಟಂತೆ ಕಾಣುತ್ತದೆ. ಅಲ್ಲದೆ ಗರ್ಭಗುಡಿಯ ಮೇಲಿರುವ ವಿಮಾನಕ್ಕೆ ಬಂಗಾರದ ಮೆರಗನ್ನು ಹಾಕಿಸಲೆಂದು ೩೦ ಸಾವಿರ ಗಟ್ಟಿ ಬಂಗಾರದ ವರಾಹಗಳನ್ನು ಸಲ್ಲಿಸಿದನು. ಈ ಸಮಯದಲ್ಲೇ ಗುಡಿಯ ಹೊರಬಾಗಿಲಿನ ಪಕ್ಕದಲ್ಲಿ ತನ್ನ ಮತ್ತು ಇಬ್ಬರು ರಾಣಿಯರ ತಾಮ್ರದ ಪುತ್ಥಳಿಗಳನ್ನು ಅಂಜಲಿಬದ್ಧ ಮುದ್ರೆಯಲ್ಲಿ ಮಾಡಿಸಿ ಸಲ್ಲಿಸಿದನು.[೮೬] ಈ ವಿವರವು 'ರಾಯವಾಚಕಮು' ಎಂಬ ತೆಲುಗು ಗ್ರಂಥದಿಂದ ಸ್ಪಷ್ಟವಾಗುತ್ತದೆ.

ಕೃಷ್ಣದೇವರಾಯನು ೬ನೆಯ ಬಾರಿ ಕ್ರಿ.ಶ. ೧೫೧೮ ರಲ್ಲಿ ತಿರುಮಲೆಗೆ ಬಂದನು. ಇದು ವಿಮಾನದ ಕೈಂಕರ್ಯವು ಮುಗಿದ ಮೇಲೆ ಬಂದುದಾಗಿದೆ. ಆದರೆ ಇಲ್ಲಿ ದಾನಧರ್ಮಗಳನ್ನು ನೀಡಿದ ವಿವರ ತಿಳಿದು ಬರುವುದಿಲ್ಲ. ಆದರೆ ೭ನೆಯ ಬಾರಿ ದರ್ಶನಕ್ಕೆ ಹೋಗಿದ್ದುದು ಕ್ರಿ.ಶ. ೧೫೨೧ ರಲ್ಲಿ. ರಾಯನು ದೇವರ ದರ್ಶನ ಮಾಡಿ ದೇವರಿಗೆ ನವರತ್ನ ಖಚಿತವಾದ ಪೀತಾಂಬರವನ್ನೂ ಮುತ್ತು ಮಾಣಿಕ್ಯ ನೀಲ ಪಚ್ಚೆಯಿಕ್ಕಿದ ಕುಲ್ಲಾಯ ೧, ನವರತ್ನ ಖಚಿತವಾದ ಚಾಮರ, ಕಾಣಿಕೆಗೆ ೧೦,೦೦೦ ವರಹವನ್ನೂ, ಒಂದು ಪದಕವನ್ನೂ ಸಮರ್ಪಿಸಿ, ತಮ್ಮ ರಾಣಿಯಾದ ತಿರುಮಲೆದೇವಿಯರ ಕೈಯಲ್ಲಿ ನವರತ್ನ ಪದಕವನ್ನೂ ಸಮರ್ಪಣೆ ಮಾಡಿ ಬರೆಸಿದುದು ಶಾಸನಗಳಲ್ಲಿ ಉಲ್ಲೇಖವಾಗಿದೆ.[೮೭] ತಿರುಮಲೆಯ ದೇವರು ರಾಯನ ಆರಾಧ್ಯ ದೈವವಾಗಿದ್ದು ಒಟ್ಟು ೭ ಬಾರಿ ದರ್ಶನ ಪಡೆದಿರುವನು. ರಾಯನು ತನ್ನ ಜೀವಿತದ ಕಾಲದಲ್ಲಿ ಎಲ್ಲ ಪುಣ್ಯಕ್ಷೇತ್ರಗಳಿಗಿಂತ ಹೆಚ್ಚು ಬಾರಿ ತಿರುಮಲೆಯ ವೆಂಕಟೇಶ್ವರನ ದರ್ಶನಕ್ಕೆ ಹೋಗಿ ಅಸಂಖ್ಯ ರೀತಿಯ ಆಭರಣ, ಒಡವೆಗಳನ್ನು ಸಮರ್ಪಿಸಿದ್ದಾನೆ. ಹೀಗಾಗಿ ನಮ್ಮ ಪ್ರಾಚೀನ ದೇವಾಲಯಗಳಲ್ಲಿ ಕೂಡಿಟ್ಟ ಆಸ್ತಿ ಎಂದರೆ ಒಡವೆ ಆಭರಣಗಳೇ ಆಗಿದ್ದವು. ದೇವಾಲಯಗಳಿಗೆ ಒಡವೆ ಗಳಿಂದ ಬಹುದೊಡ್ಡ ಆದಾಯವು ಹರಿದುಬರುತ್ತಿತ್ತು. ರಾಯನಲ್ಲದೇ ಸಾಮ್ರಾಜ್ಯದಲ್ಲಿ ನಾನಾ ಜನರು ದೇವಾಲಯಗಳಿಗೆ ಆಭರಣಗಳನ್ನು ಧರ್ಮವಾಗಿ ನೀಡಿರುವುದು ಕಂಡುಬರುತ್ತದೆ.

ತೆರಿಗೆ - ಹಣ - ಸುಂಕ

ದೇವಾಲಯ ಆದಾಯದ ಮೂಲಗಳಲ್ಲಿ ಮುಖ್ಯವಾದವುಗಳೆಂದರೆ ತೆರಿಗೆ, ಸುಂಕ ಮತ್ತು ದೇಣಿಗೆಯನ್ನು ನೀಡುತ್ತಿದ್ದುದು. ಆಯಾಯ ಗ್ರಾಮಗಳ ತೆರಿಗೆ, ಮಾರುಕಟ್ಟೆಗಳಲ್ಲಿನ ಧಾನ್ಯ ಅಂಗಡಿಗಳಿಂದ ಬರುವ ಸುಂಕ ಹಾಗೂ ದಾನಿಗಳು ನೀಡುವ ಹಣದಿಂದ ಆದಾಯವು ಬರುತ್ತಿದ್ದುದು ಶಾಸನಗಳಿಂದ ತಿಳಿಯುತ್ತದೆ. ಸುಂಕಗಳಲ್ಲಿ ನಾನಾ ವಿಧಗಳಿದ್ದು ಅವುಗಳಲ್ಲಿ ಸ್ಥಳಸುಂಕ, ಎಮ್ಮೆಸುಂಕ, ಹಸಿರುವಾಣಿ ಸುಂಕ, ಉತ್ಪನ್ನ ಸುಂಕ, ತಳವಾರಿಕೆ ಸುಂಕ, ಜೋಡಿ ಬಿರಾಡ, ಸುವರ್ಣಾದಾಯ ಇನ್ನಿತರ ಸುಂಕಗಳಿಂದ ಬಂದ ಆದಾಯವು ದೇವಾಲಯಗಳಿಗೆ ಸೇರುತ್ತಿತ್ತು. ಇವುಗಳನ್ನು ಉಲ್ಲೇಖಿಸುವ ಹಲವು ಶಾಸನಗಳು ಲಭ್ಯವಿವೆ.

ದ್ವಾಶರನ್ ದೇಮರಸನು ಕತ್ರೆಕಾಂಡ್ಲದ ಚೆನ್ನಕೇಶ್ವರ ದೇವರಿಗೆ ನಲ್ಲೆಡ್ಡು, ಅಚ್ಚುವಿಳಲು ತೆರಿಗೆಗಳನ್ನು ದಾನ ನೀಡಿದನು. ಉಭಯ ನರ್ಗಂ ತೆರಿಗೆ ಹಾಗೂ ವ್ಯಾಪಾರಿಗಳ ಸುಂಕವನ್ನು ದೇವಾಲಯಕ್ಕೆ ನೀಡಿದನು.[೮೮] ರಾಯನು ಕ್ರಿ.ಶ. ೧೫೧೩ರಲ್ಲಿ ಹಂಪಿಯ ಬಾಲಕೃಷ್ಣ ದೇವರ ಕಾರ್ಯಕ್ಕೆ ಕೃಷ್ಣಾಪುರದ ಸ್ಥಳಸುಂಕವನ್ನು ಸಮರ್ಪಿಸಿ ಮತ್ತೊಂದು ಬಾರಿ ದೇವರ ಪೂಜೆಗಾಗಿ ರಾಯದುರ್ಗ ಸೀಮೆಗೆ ಸಲ್ಲುವ ಬ್ರಹ್ಮಸಮುದ್ರ ಮತ್ತು ಅದಕ್ಕೆ ಸಲ್ಲುತ್ತಿದ್ದ ಕೆಲವು ತೆರಿಗೆಗಳು, ತಿರುಮಲದೇವಿಪಟ್ಟಣಕ್ಕೆ ಸೇರಿದ ರಾಮಾಪುರದ ಕೆಲವು ಗದ್ದೆಗಳು, ಎಮ್ಮೆ ಸುಂಕ, ಹಸಿರುವಾಣಿ ಸುಂಕವನ್ನು ಬಿಡುತ್ತಾನೆ.[೮೯] ಅದೇ ದೇವಾಲಯಕ್ಕೆ ರಾಯನು ಅತ್ತಿವಟ್ಟೆ ಗ್ರಾಮಕ್ಕೆ ಸಲ್ಲುವ ನೀರಾರಂಭ, ಕಾಡರಂಭ, ಬಾಲಾಗೊಸಹಳ್ಳಿ, ಸೆಣಬಿನಕಟ್ಟೆಗೆಪೇಟೆ ಮುಂತಾದವುಗಳ ಉತ್ಪನ್ನ ಸುಂಕ, ತಳವಾರಿಕೆ ಸುಂಕ, ಸುವರ್ಣಾದಾಯ, ಭತ್ತದಾದಾಯ ಮುಂತಾದವುಗಳನ್ನು ಅರ್ಪಿಸಿದ್ದನು.[೯೦]

ರಾಯನು ಕ್ರಿ.ಶ. ೧೫೧೩ ರಲ್ಲಿ ಹಂಪಿಯ ವಿಠಲದೇವರ ಕೈಂಕರ್ಯಕ್ಕೆ ಹುಲಿಗಿ ಮಾಗಣೆಗೆ ಸೇರುವ ಹರಿಹರವನ್ನು ಸಮರ್ಪಿಸಿ, ಈ ಗ್ರಾಮಕ್ಕೆ ಸೇರುವ ತಳವಾರಿಕೆ ಸುಂಕ, ಜೋಡಿಬಿರಾಡ, ಸಕಲಸುವರ್ಣಾದಾಯ, ಭತ್ತದಾದಾಯವನ್ನು ಸಮರ್ಪಿಸಿದನು.[೯೧] ದಾನಿಗಳು ಗ್ರಾಮಗಳನ್ನು ದತ್ತಿಯಾಗಿ ನೀಡುವಾಗ ಆದಾಯದ ಮೂಲಗಳಾದ, ಸುಂಕಗಳನ್ನು ಮೊದಲೇ ನಿಗದಿಮಾಡುವುದರಿಂದ ಆಯಾಯ ತೆರಿಗೆಗಳಿಂದ ಮಾತ್ರ ಆದಾಯವು ಬರುತ್ತಿತ್ತು.

ಅದೇ ರೀತಿ ಸುಂಕಗಳ ಜೊತೆಗೆ ಹಣವನ್ನು ದಾನಿಗಳು ನೀಡುತ್ತಿದ್ದರು. ಇದರಿಂದ ತಮ್ಮ ಸೇವೆಗಳನ್ನು ನಡೆಸಿಕೊಂಡು ಹೋಗಲು ಅನುಮತಿ ನೀಡುತ್ತಿದ್ದರು. ಕ್ರಿ.ಶ. ೧೫೨೪ ರಲ್ಲಿ ರಾಯನು ಅನಂತಶಯನ ದೇವರ ದೇವತಾಕಾರ್ಯಗಳಿಗೆ ಮತ್ತು ದೇವಾಲಯದ ನಿರ್ವಹಣೆಗೆ ೧೦,೦೦೦ ವರಾಹಗಳ ವರಮಾನದ ಭೂಮಿಯನ್ನು ದತ್ತಿಕೊಟ್ಟನು.[೯೨]

ಕ್ರಿ.ಶ. ೧೫೧೨ರಲ್ಲಿ ರಾಯನು ಕನಕಗಿರಿಯ ಕನಕಗಿರಿನಾಥ ದೇವರ ದೇವಾಲಯದ ಅಮೃತಪಡಿಗೆ ಕನಕಗಿರಿಪೇಟೆಯ ಸ್ಥಳದ ಸುಂಕ, ತಳವಾರಿಕೆ ಸುಂಕವನ್ನು ಬಿಟ್ಟುಕೊಟ್ಟನು.[೯೩] ರಾಯರ ಆಳ್ವಿಕೆಯ ತಿಪ್ಪಿನಾಯಡು, ಪಾಪನಾಯುಡು, ಏರ್ರಮನಾಯುಡು ರೆನಾಟಿನಂದ್ಯಾಲ ಚೆನ್ನಕೇಶ್ವರ ದೇವರಿಗೆ ನಂದ್ಯಾಲದ ಸ್ಥಳಸುಂಕವನ್ನು ದೀಪಾರಾಧನೆಗೆ ಸಮರ್ಪಿಸಿದರು.[೯೪]

ಉನ್ನತವರ್ಗದವರಲ್ಲದೆ ಸಾಮಾನ್ಯ ಜನರು, ಅಧಿಕಾರಿಗಳು ಸಹ ದತ್ತಿಯನ್ನು ನೀಡುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿ 'ರಾಯನ ಎದುರಿನಲ್ಲಿ ಬೆಳ್ಳಿಕಟ್ಟಿಗೆಯನ್ನು ಹಿಡಿದು ನಡೆದು ಹೋಗುವ ತಮ್ಮುನಾಯಕ್ಕರ್ ಎಂಬುವವನು ಜಿಲೇಳ್ಳಿ - ಬಸವ - ನಾಯಕರ ಮಗ; ಶ್ರೀ ವೈಷ್ಣವ ಆಚಾರ್ಯರಾಗಿದ್ದ ಅನುಸಂಧಾನಂ ರಾಮಾನುಜ - ಅಯ್ಯನ ಶಿಷ್ಯ. ಈತನು ತನ್ನ ಧಮವೆಂದು ಗುಡಿಯ ಶ್ರೀ ಭಂಡಾರಕ್ಕೆ ಕ್ರಿ.ಶ. ೧೫೧೩ರಲ್ಲಿ ೧೨೦೦ ಪಣಂಗಳನ್ನು ಒಪ್ಪಿಸಿದನು.'[೯೫]

ಊಡಿಯಂ ಎಲ್ಲಪ್ಪನಾಯಕನು ಕೃಷ್ಣದೇವರಾಯನ ಊಳಿಗದ ಎಡಬಲಸೇವಕ. ಇವನು ತಿರುಮಲೆಯ ದೇವರ ಶ್ರೀಭಂಡಾರಕ್ಕೆ ೪೬೦೦ ಪಣಂಗಳನ್ನು ಸಲ್ಲಿಸಿದನು.[೯೬] ಕ್ರಿ.ಶ. ೧೫೨೪ ರಲ್ಲಿ ವ್ಯಾಸತೀರ್ಥರು ಬೆಟ್ಟದ ಮೇಲೆ ಮಠವಾಗಿಸಿದ ಮನೆಯೆದುರು ಮಂಟಪವೊಂದನ್ನು ಕಟ್ಟಿಸಿ, ದೇವರ ಶ್ರೀಭಂಡಾರಕ್ಕೆ ೧೪,೦೦೦ ನರ್ - ಪಣಗಳನ್ನು ಕೊಟ್ಟು ಪ್ರತಿವರ್ಷವೂ ವಿಶೇಷ ದಿನಗಳಲ್ಲಿ ಒಟ್ಟು ೩೫೪ ಅಪ್ಪಪಡಿಗಳನ್ನು ದೇವರಿಗೆ ಸಮರ್ಪಿಸುವ ವ್ಯವಸ್ಥೆ ಮಾಡಿದ್ದರು.[೯೭]

ಆಹೋಬಲಮಠದ ಗುರುಗಳಾಗಿದ್ದ ಶ್ರೀಮಾನ್ ನಾರಾಯಣ - ಜೀಯರು ಬೆಟ್ಟದ ಗುಡಿಗೆ ೧,೮೬೦ ನರ್ ಪಣಗಳನ್ನು ಸಲ್ಲಿಸಿ ಅವರ ಹೆಸರಿನಲ್ಲಿ ತಿರುಮಲೆಯ ದೇವಾಲಯದಲ್ಲಿ ನಡೆಯುವ ಅಧ್ಯಯನೋತ್ಸವದ ಸಂದರ್ಭದಲ್ಲಿ ತಿರುಮೋಳಿ - ಪಡಿಗೆ ಸಮರ್ಪಿಸುವ ವ್ಯವಸ್ಥೆ ಮಾಡಿದರು.[೯೮] ಅದೇ ವರ್ಷ ತಿರುಪತಿಯ ಗೋವಿಂದರಾಜನಿಗೂ ಕೆಲವು ಸೇವೆಗಳನ್ನು ಸಲ್ಲಿಸಬೇಕೆಂದು ದೇವಾಲಯದ ಶ್ರೀಭಂಡಾರಕ್ಕೆ ೩,೮೦೦ ಪಣಂಗಳನ್ನು ಸಲ್ಲಿಸಿದರು.[೯೯] ದೇವಾಲಯಗಳಿಗೆ ದಾನಿಗಳು ದತ್ತಿ ಮತ್ತು ಧರ್ಮವನ್ನು ಮಾಡಿದಾಗ ಅದರಲ್ಲಿ ಗ್ರಾಮ, ಭೂದಾನ, ತೆರಿಗೆ, ಸುಂಕಗಳು, ಧಾನ್ಯ, ಹಣವು ಸೇರಿ ಹಲವು ಕಡೆಯಿಂದ ಸಂಪತ್ತು ಹರಿದುಬರುತ್ತಿದ್ದಿತು. ಅಂದಿನ ಕಾಲದಲ್ಲಿ ಜನರು ದೇವಾಲಯಗಳ ಬಗ್ಗೆ ಇಟ್ಟಿದ್ದ ನಂಬಿಕೆಗಳೇ ಧಾರ್ಮಿಕ ವಲಯದಲ್ಲಿ ದೇವಾಲಯಗಳು ಉನ್ನತಸ್ಥಾನಗಳಿಸಿದ್ದವು. ಅರಸರಿಂದ ಜನಸಾಮಾನ್ಯರವರೆಗೆ ಸಾಮ್ರಾಜ್ಯದ ವಿವಿಧ ಕಡೆಗಳಲ್ಲಿ ತಮ್ಮ ಶಕ್ತ್ಯಾನುಸಾರ ದಾನದತ್ತಿಯನ್ನು ನೀಡಿದ್ದು ಶಾಸನಗಳಲ್ಲಿ ಉಲ್ಲೇಖವಾಗಿದೆ. ದೇವಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿ ಸ್ಥಳೀಯ ಆಡಳಿತದಲ್ಲಿ ಮಹತ್ವದ ಸ್ಥಾನ ಹೊಂದಿದ್ದವು. ಹೊಸ ಬಗೆಯ ಪೂಜೆ, ಉತ್ಸವಗಳು ಪ್ರಾರಂಭವಾಗಿ ಹಲವಾರು ಚಟುವಟಿಕೆಗಳ ತಾಣಗಳಾದುದರಿಂದ ಅಂದಿನ ಕಾಲದ ವೈಷ್ಣವ ದೇವಾಲಯಗಳಿಗೆ ವಿವಿಧ ಮೂಲಗಳಿಂದ ಸಂಪತ್ತು ಹರಿದುಬರುತ್ತಿತ್ತು.

ಖರ್ಚು - ವೆಚ್ಚ

ವೈಷ್ಣವ ದೇವಾಲಯಗಳು ರಾಯರ ಕಾಲದಲ್ಲಿ ಬಹು ಶ್ರೀಮಂತ ದೇವಾಲಯಗಳಾಗಿ ಮಾರ್ಪಟ್ಟವು. ಅರಸರ ಉದಾರ ಧಾರ್ಮಿಕ ನೀತಿಗಳಿಂದಾಗಿ ಪೂಜಾ ಕೈಂಕರ್ಯಗಳು ಉತ್ಸವಗಳು ಏರ್ಪಟ್ಟು ಆಡಳಿತ ಹಾಗೂ ಕೆಲಸಗಳನ್ನು ನೋಡಿಕೊಳ್ಳುವ ಸೇವಾವರ್ಗವು ಬೆಳೆಯಿತು. ಇದರಿಂದ ಅವರ ಸೇವೆಗೆ ನೀಡಬೇಕಾದ ವೆಚ್ಚವು ಅಧಿಕವಾಗಿ ದೇವಾಲಯಗಳಿಗೆ ಯಥೇಚ್ಛವಾಗಿ ಹಣವನ್ನು ಖರ್ಚುಮಾಡಬೇಕಾಗಿತ್ತಲ್ಲದೆ ಬಿಟ್ಟು ಒಟ್ಟು ಉತ್ಪನ್ನವೂ ವ್ಯವಸ್ಥಿತವಾಗಿ ಧಾರ್ಮಿಕ ವಿಧಿಗಳಿಗೆ ಹಾಗೂ ಅಲ್ಲಿನ ಪರಿಚಾರಕ ವರ್ಗದವರಿಗೆ ಹಂಚಬೇಕಾಗುತ್ತಿತ್ತು.

ಧಾರ್ಮಿಕ ವಿಧಿ-ವಿಧಾನ

ವೈಷ್ಣವ ದೇವಾಲಯಗಳಲ್ಲಿ ನಡೆಯುತ್ತಿದ್ದ ಧಾರ್ಮಿಕ ವಿಧಿಗಳೆಂದರೆ ನಿತ್ಯ, ನೈಮಿತ್ತಿಕ, ಮಾಸ, ಸಂವತ್ಸರ, ಹಬ್ಬ, ಹುಣ್ಣಿಮೆ, ಜಾತ್ರೆ ಉತ್ಸವಗಳನ್ನು ತಪ್ಪದೆ ಅಂದಿನ ಕಾಲದಲ್ಲಿ ನಡೆಸುತ್ತಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ. ರಾಯನ ಕಾಲದ ಒಟ್ಟು ದೇವಾಲಯಗಳಲ್ಲಿ ನಡೆಯುವ ಪೂಜೆ-ಪುನಸ್ಕಾರಗಳನ್ನು ಸಂಭ್ರಮದಿಂದ ಆಚರಿಸುವುದು ಹಲವು ಶಾಸನಗಳು, ವಿದೇಶಿ ಪ್ರವಾಸಿಗರ ಕಥನಗಳು, ಸಾಹಿತ್ಯ ಚಿತ್ರಣಗಳಲ್ಲಿ ಕಂಡುಬರುತ್ತವೆ. ಹೊಸ ಹೊಸ ಧಾರ್ಮಿಕ ಆಚರಣೆಗಳು ರೂಪುಗೊಂಡು ದೇವಾಲಯಗಳು ಧಾರ್ಮಿಕ ಕೇಂದ್ರಗಳಾಗಿದ್ದವು. ದೊರೆತ ಹಲವು ಶಾಸನಗಳನ್ನು ಪರಿಶೀಲಿಸಲಾಗಿ ಧಾರ್ಮಿಕ ವಿಧಿಗಳಿಗೆ ದೇವಾಲಯದ ಮೂಲ ಹಣವನ್ನು ವೆಚ್ಚ ಮಾಡದೆ ಹೆಚ್ಚಾಗಿ ದಾನಿಗಳು ನೀಡುವ ವಿವಿಧ ರೀತಿಯ ಸಂಪತ್ತನ್ನು ಉತ್ಸವಗಳ ವೆಚ್ಚಕ್ಕೆ ಬಳಸುತ್ತಿದ್ದರು. ಕೆಲವೊಂದು ಶಾಸನಗಳಲ್ಲಿ ನಿತ್ಯ ನೈವೇದ್ಯಕ್ಕೆ ಬೇಕಾಗುವ ಸಾಮಾನುಗಳನ್ನು ಹೆಸರಿಸಿರುವುದು ತಿಳಿದುಬರುತ್ತದೆ. ದಿನಪೂಜೆಗೆ ಬೇಕಾಗುತ್ತಿದ್ದ ಸಾಮಾನುಗಳೆಂದರೆ ಎಣ್ಣೆ, ತುಪ್ಪ, ಹಾಲು, ಗಂಧ, ಧೂಪ, ಬತ್ತಿಹತ್ತಿ, ಅಡಕೆ, ವೀಳ್ಯದೆಲೆ, ಹಣ್ಣು, ತೆಂಗಿನಕಾಯಿ, ಹೂವು ಮುಂತಾದವುಗಳಿಗೆ ದಿನಂಪ್ರತಿಯಾಗಿ ದೇವಾಲಯಕ್ಕೆ ನೀಡಿದ ಹಣದಿಂದ ಖರ್ಚಾಗುತ್ತಿದ್ದಿತು. ಧಾರ್ಮಿಕ ವಿಧಿಗಳಲ್ಲಿ ನಿತ್ಯೋತ್ಸವ, ನೈಮಿತ್ತಿಕ, ಅಮೃತಪಡಿ ನೈವೇದ್ಯ, ಮಾಸಪೂಜೆ, ಅಂಗ-ರಂಗವೈಭವ, ಧೂಪ-ದೀಪ, ಉತ್ಸವ, ರಥೋತ್ಸವಗಳಿಗೆ ದೇವಾಲಯಗಳು ಹಣವನ್ನು ವೆಚ್ಚಮಾಡಬೇಕಾಗುತ್ತಿದ್ದಿತು. ವಿವಿಧ ರೀತಿಯ ಪೂಜೆಗಳಿಗಾಗಿ ತಗಲುವ ವೆಚ್ಚವನ್ನು ಭರಿಸಲು ವಿಶೇಷ ಪ್ರಕಾರಕ್ಕಾಗಿ ಧಾರ್ಮಿಕ ದತ್ತಿಗಳನ್ನು ನೀಡಿರುವ ಉಲ್ಲೇಖಗಳು ಕೆಲವು ಶಾಸನಗಳಲ್ಲಿ ದೊರೆಯುತ್ತವೆ. ಈ ಹಿನ್ನೆಲೆಯಲ್ಲಿ ನೋಡಿದಾಗ "ರಾಯನು ನಿತ್ಯನೈಮಿತ್ತಿಕಗಳು ಕ್ರಮವಾಗಿ ನಡೆಯುವಂತೆ ಗ್ರಾಮಗಳನ್ನು ದತ್ತಿಯಾಗಿ ನೀಡಿ, ಆ ಗ್ರಾಮಗಳಿಂದ ಬಂದ ಆದಾಯದಿಂದ ಈ ಸೇವೆಗಳನ್ನು ನಡೆಸಬೇಕು ಎಂದು ದತ್ತಿಯನ್ನು ನೀಡಿರುವನು."[೧೦೦] "ವಿಠಲ ದೇವಾಲಯದಲ್ಲಿ ದೇವರ ಅಮೃತಪಡಿ ನೈವೇದ್ಯ, ನಿತ್ಯನೈಮಿತ್ತಿಕ ದೀಪಾರಾಧನೆ, ಅಂಗ-ರಂಗ ವೈಭೋಗಗಳನ್ನು"[೧೦೧] ನಡೆಸಲು ಗ್ರಾಮಗಳನ್ನು ದತ್ತಿಬಿಡಲಾಗಿದೆ.

"ರಾಮಚಂದ್ರ ದೇವಾಲಯದಲ್ಲಿ ಮಾಸಪೂಜೆ ಕೆಲವು ಪುಣ್ಯತಿಥಿಗಳನ್ನು ಮಾಡಲು ಗ್ರಾಮಗಳನ್ನು ಸಮರ್ಪಿಸಿದ್ದು,"[೧೦೨] ಇದರಿಂದ ಬಂದ ಆದಾಯದಲ್ಲಿ ಈ ಉತ್ಸವಗಳನ್ನು ನಡೆಸಿಕೊಂಡು ಬರಲು ಹೇಳಿದೆ. ಅಂದು ದಾನ ನೀಡಿದ ಶಾಸನಗಳಲ್ಲಿ ಏಕಪೂಜೆಗೆ ಹಲವು ದೇವಾಲಯಗಳಲ್ಲಿ ದತ್ತಿಬಿಟ್ಟಿರುವುದು ಕಂಡುಬರುತ್ತದೆ. ಅಮೃತಪಡಿ,[೧೦೩] ಅಂಗರಂಗವೈಭವ,[೧೦೪] ರಥೋತ್ಸವ,[೧೦೫] ಧೂಪದೀಪ,[೧೦೬] ಪೂಜಾಕಾರ್ಯ, ವಿಶೇಷಪೂಜೆ ಇತ್ಯಾದಿ ಉತ್ಸವಗಳಿಗಾಗಿ ಹಣವನ್ನು ಖರ್ಚುಮಾಡಬೇಕಾಗಿತ್ತು. ಅಲ್ಲದೆ ದೇವಾಲಯದಲ್ಲಿ ನಡೆಯತಕ್ಕ ಅನ್ನಸತ್ರಕ್ಕೆ ಹಣವನ್ನು ಉಪಯೋಗಿಸುತ್ತಿದ್ದರು.

ಇದುವರಿಗೆ ದೊರೆತಿರುವ ಶಾಸನಗಳ ಹಿನ್ನೆಲೆಯಲ್ಲಿ ಅಂದಿನ ಕಾಲದ ವೈಷ್ಣವ ದೇವಾಲಯಗಳಲ್ಲಿ ನಡೆಯುವ ಧಾರ್ಮಿಕ ವಿಧಿಗಳು ಒಂದೇ ತೆರನಾಗಿದ್ದು, ಈ ಧಾರ್ಮಿಕ ಕಾರ್ಯಗಳು ನಡೆಯುವುದಕ್ಕೆ ದಾನಿಗಳು ಹಲವು ರೀತಿಯಲ್ಲಿ ದತ್ತಿಯನ್ನು ಬಿಡುತ್ತಿದ್ದರು. ಇಂತಹ ದತ್ತಿಯನ್ನು ಪಡೆದು ಸ್ಥಾನಿಕರು ದಿನಂಪ್ರತಿ ಈ ಉತ್ಸವಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಪರಿಚಾರಕರ ವೆಚ್ಚ

ಅಂದಿನ ಕಾಲದ ವೈಷ್ಣವ ದೇವಾಲಯಗಳ ಆದಾಯದ ಬಹುಭಾಗವು ಧಾರ್ಮಿಕ ವಿಧಿಗಳ ಆಚರಣೆ ಹಾಗೂ ಮೇಲ್ಪಿಚಾರಕ ವರ್ಗದ ವೇತನಕ್ಕೆ ಖರ್ಚಾಗುತ್ತಿದ್ದಿತು. ಪರಿಚಾರಕರಲ್ಲಿ ಸ್ಥಾನಿಕರಿಂದ ಹಿಡಿದು ಪೂಜಾರಿ ಕೆಲಸಮಾಡುವವರೆಗೆ ಎಲ್ಲಾ ವರ್ಗದವರ ಸೇವೆಗೆ ಪ್ರತಿಯಾಗಿ ಧಾನ್ಯ, ಹಣ, ಗದ್ದೆ ಇತ್ಯಾದಿಗಳ ರೂಪದಲ್ಲಿ ಸಂಬಳ ನೀಡಲಾಗುತ್ತಿತ್ತು. ಅಂದಿನ ಅರಸರ ಪ್ರೋತ್ಸಾಹದ ಫಲವಾಗಿ ಹೊಸ ಹೊಸ ಧಾರ್ಮಿಕ ವಿಧಿಗಳು, ಕಟ್ಟಳೆಗಳು ಬೆಳೆದುದರಿಂದ ಅವುಗಳನ್ನು ನೆರವೇರಿಸಿಕೊಂಡು ಹೋಗಲು ಅಧಿಕ ಪರಿಚಾರಕರು ಬೇಕಾಗಿದ್ದರಿಂದ ಅವರೆಲ್ಲರಿಗೂ ಸಂಬಳದ ವ್ಯವಸ್ಥೆ ಅಥವಾ ಸೇವೆಗೆ ಪ್ರತಿಯಾಗಿ ಏನನ್ನಾದರೂ ನೀಡಬೇಕಾಗಿತ್ತು. ಕೃಷ್ಣದೇವರಾಯನ ಕಾಲದ ಶಾಸನಗಳನ್ನು ಗಮನಿಸಿ ನೋಡಿದಾಗ ದೇವಾಲಯಗಳ ಪರಿಚಾರಕರಿಗೆ ನೇರವಾಗಿ ದಾನಿಗಳೇ ನಿಗದಿಮಾಡಿ ಬಿಟ್ಟ ದತ್ತಿ ಹಣವನ್ನು ನೋಡಬಹುದು. ದೇವಾಲಯಗಳಲ್ಲಿ ಸೇವಾವರ್ಗದವರನ್ನು ನೇಮಿಸುವಾಗ ಅವರಿಗೆ ಇಂತಿಷ್ಟು ಆದಾಯವನ್ನು ನೀಡುವ ವ್ಯವಸ್ಥೆಯನ್ನು ದಾನಿಯು ಮಾಡುತ್ತಿದ್ದನು. ಇದನ್ನು ಸಮರ್ಥಿಸುವ ಅನೇಕ ಶಾಸನಗಳು ಸಿಗುತ್ತವೆ :

"ಕೃಷ್ಣದೇವರಾಯನು ಹಂಪಿಯ ಬಾಲಕೃಷ್ಣದೇವರ ದೇವಾಲಯದ ಆಚಾರ್ಯತ್ವಕ್ಕೆ ತಿಮ್ಮಣಾಚಾರ್ಯ, ರಾಮಣಾಚಾರ್ಯ ಮತ್ತು ಮುಳುವಾಗಿಲ ರಂಗಯ್ಯನ ಮಗ ತಿಮಣಾಚಾರ್ಯನಿಗೆ ಅತ್ತಿವಟ್ಟೆಯಲ್ಲಿ ಗದ್ದೆ ೧ ಖಂಡುಗ, ಮುದ್ದಲಾಪುರದಲ್ಲಿ ೧ ಖಂಡುಗ ಮತ್ತು ದೇವಲಾಪುರದಲ್ಲಿ ೧ ಖಂಡುಗ ಗದ್ದೆಯನ್ನು ನೀಡುತ್ತಾನೆ. ಅದೇ ರೀತಿ ದೇವಾಲಯದ ಬ್ರಹ್ಮತ್ವಕ್ಕೆ ನಂಜನಾಥನ ಮಗ ರಂಗನಾಥದೀಕ್ಷಿತನಿಗೆ ಮುದ್ದಲಾ ಪುರದ ನರಹರಿಗದ್ದೆಯಲ್ಲಿ ಅರ್ಧ ಖಂಡುಗ ಗದ್ದೆಯನ್ನು ನೀಡುತ್ತಾನೆ. ದೇವಾಲಯದ ಸದಸ್ಯರಾದ ಶೀಲಾದೀಕ್ಷಿತ, ನರಸಿಂಹದೀಕ್ಷಿತ, ಭಾನುಭಟ್ಟ, ವಿರೂಪಾಕ್ಷಭಟ್ಟ, ಲಿಂಗಾಭಟ್ಟರಿಗೆ ತಲಾ ಅರ್ಧಖಂಡುಗ ಗದ್ದೆಯನ್ನು ಬೇರೆ ಬೇರೆ ಕಡೆಗಳಲ್ಲಿ ನೀಡಿದ್ದನು. ಪವಮಾನಭಿಷೇಕದವರು, ೧೨ ಜನ ಪುರಾಣ ಹೇಳುವವರು, ಜ್ಯೋತಿಷ್ಯರು, ಘಳಿಯಾರದವರು, ಮಂತ್ರಪುಷ್ಪದವರು, ವಿದ್ವಾಂಸರು ಮುಂತಾದವರಿಗೆ ಬೇರೆ ಬೇರೆ ಕಡೆಗಳಲ್ಲಿ ಗದ್ದೆಯನ್ನು ನೀಡುತ್ತಾನೆ."[೧೦೭] ಇಲ್ಲಿ ದಾನಿಯು ಅರಸನಾಗಿದ್ದು, ದೇವಾಲಯವನ್ನು ಕಟ್ಟಿಸುವ ಸಮಯದಲ್ಲಿ ಪರಿಚಾರಕರನ್ನು ನೇಮಿಸಿ ಅವರ ಸೇವೆಗೆ ಗದ್ದೆರೂಪದಲ್ಲಿ ದಾನಿಯೇ ದತ್ತಿ ನೀಡಿರುವುದು ಕಂಡುಬರುತ್ತದೆ. ಒಂದೇ ದೇವಾಲಯದಲ್ಲಿ ಹಲವು ಜನ ಪರಿಚಾರಕರಿಗೆ ಒಂದೇ ತೆರನಾದ ದಾನವನ್ನು ಇಲ್ಲಿ ಮಾಡಲಾಗಿದೆ.

ಅದೇ ರೀತಿ "ಹಂಪಿಯ ವಿಠಲ ದೇವಾಲಯದ ಪೂಜೆಯ ಹೂವಿನ ಹಾರ ತಯಾರಿಸಿದವರು ಮತ್ತು ದೇವಾಲಯವನ್ನು ಕಾಯುವವರಿಗೆ ತಲಾ ೩ ಪಡಿ ಪ್ರಸಾದವನ್ನು ನೀಡಲಾಗಿದೆ."[೧೦೮] ಈ ಶಾಸನದಲ್ಲಿ ವಿಶೇಷವಾಗಿ ಕೆಲಸಮಾಡುವ ವರ್ಗದವರಿಗೆ ದಿನಾಲು ಪ್ರಸಾದವನ್ನು ನೀಡುವ ವ್ಯವಸ್ಥೆಯನ್ನು ದಾನಿಯು ಮಾಡಿದ್ದಾನೆ.

"ಅರಸನು ಬಾಲಕೃಷ್ಣದೇವರ ತಿರುವೀಧಿ ವಿನಿಯೋಗದ ಬ್ರಾಹ್ಮಣರ ನಿವೇಶನಗಳಿಗೆ ಹಾಗೂ ಪೇಟೆಯ ಮನೆಗಳಿಗಾಗಿ ನೆಳಲಹುಣಿಸೆಯ ಬ್ರಾಹ್ಮಣರಿಗೆ ಅಲ್ಲಿನ ಗದ್ದೆಗಳನ್ನು ಬಿಡಿಸಿಕೊಂಡು ದಾನ ನೀಡಲಾಗಿದೆ."[೧೦೯]

ಇಲ್ಲಿ ಪೂಜಾ ವರ್ಗದವರಾದ ಬ್ರಾಹ್ಮಣರಿಗೂ ಅವರ ಉಪಜೀವನಕ್ಕಾಗಿ ಗದ್ದೆಯನ್ನು ನೀಡಲಾಗಿದೆ. ಹಿರಿಯ ಕಾಲುವೆಯ ರಘುನಾಥದೇವರ ಸೇವೆ ಮಾಡುವ ಬ್ರಾಹ್ಮಣರಿಗೆ ೧೦ ಕೊಳಗ ಗದ್ದೆಯನ್ನು ನೀಡಿದ ಉಲ್ಲೇಖ ಶಾಸನದಲ್ಲಿದೆ.[೧೧೦] ದೇವಾಲಯಗಳ ಸೇವಾವರ್ಗದವರಿಗೆ ಬಿಡಿಬಿಡಿಯಾಗಿ ದಾನದತ್ತಿಗಳು ನೀಡಿರುವ ಅನೇಕ ಶಾಸನಗಳು ಸಿಗುತ್ತವೆ. ಅವುಗಳಲ್ಲಿ "ವೆಂಪಲಪರ್ತಿ ತಿರುವೇಂಗಳನಾಥ ದೇವಾಲಯದ ಸ್ಥಾನಿಕರು ಕಲುಕಡ ಚೆನ್ನಮಯ್ಯ ಮಕ್ಕಳು ಶ್ರೀ ರಾಮಯ್ಯ, ಅನಂತಯ್ಯನ ಕುಪ್ಪಳೆಮ್ಮ ಸಮಗಪಿನ ಅನಂತಯ್ಯಗಾರರಿಗೆ ಅರ್ಚನಾ ವೃತ್ತಿವಹಿಸಿ ಭೈರಾಸಮುದ್ರದ ಚತುಸೀಮೆಯೊಳಗಿನ ಸಕಲ ಆದಾಯದಲಿ ಅರ್ಚನಾ ವೃತ್ತಿಗೆ ಅರ್ಧಪಾಲನ್ನು ಧಾರೆಯರೆದು ನೀಡಲಾಗಿದೆ."[೧೧೧]

"ಕೃಷ್ಣದೇವರಾಯನು ವಿಠಲಸ್ವಾಮಿ ದೇವಾಲಯಕ್ಕೆ ಭಂಡಾರದ ಹಿರೆತಿಮ್ಮಯ್ಯನು ದೇವರ ನಾನಾ ಆಭರಣಗಳ ಬೀಗಮುದ್ರೆಯನ್ನು ಕಾದುಕೊಂಡು ಬರಬೇಕೆಂದು ಅದಕ್ಕಾಗಿ ಕಂಪಿಲೆ ಮಾಗಣಿಯ ಸಾಯಣಪುರವನ್ನು ನೀಡಿದಂತೆಯೂ"[೧೧೨] ಶಾಸನವು ಉಲ್ಲೇಖಿಸುವುದರಿಂದ ಇಲ್ಲಿ ದೇವಾಲಯದ ಸೇವಾವರ್ಗದವರಿಗೆ ಅವರು ವಹಿಸಿದ ಕೆಲಸದ ನಿರ್ವಹಣೆಗೆ ಪ್ರತಿಫಲವಾಗಿ ಗ್ರಾಮವನ್ನು ಬಿಡುತ್ತಿದ್ದರು. ಈ ಗ್ರಾಮಗಳ ಆದಾಯದಿಂದ ಅವರು ಜೀವನ ನಡೆಸಿಕೊಂಡು ಸೇವೆಯನ್ನು ಸಲ್ಲಿಸುತ್ತಿದ್ದರು.

ಕುಂದುರ್ಪಿ ತಿಮ್ಮನಾಯಕನು ತಿರುವೇಂಗಳನಾಥ ದೇವರಿಗೆ ಗ್ರಾಮದ ಅರ್ಧ ಪಾಲನ್ನು ನೀಡಿ ಅದರಲ್ಲಿ ಮಂತ್ರಪುಷ್ಪದವರಿಗೆ ಇನ್ನೂ ಅರ್ಧ ಪಾಲನ್ನು ನೀಡಿದ್ದನು.[೧೧೩] ಈ ಶಾಸನದ ಹಿನ್ನೆಲೆಯಲ್ಲಿ ಒಂದೇ ಗ್ರಾಮದಲ್ಲಿ ದೇವರಿಗೆ ಮತ್ತು ಸೇವಾವರ್ಗಕ್ಕೆ ಗ್ರಾಮವನ್ನು ಅರ್ಧರ್ಧ ಪಾಲನ್ನಾಗಿ ನೀಡಲಾಗಿದೆ. ದಾನಿಗಳು ಆಗಿನ ಸಂದರ್ಭದಲ್ಲಿ ಅಲ್ಪದಾನದತ್ತಿಯಲ್ಲಿ ಹಲವಾರು ಸೇವೆಗಳನ್ನು ನಡೆಸುತ್ತಿದ್ದರು.

ಕೃಷ್ಣದೇವರಾಯನ ಕಾಲದ ಒಂದು ಶಾಸನದಲ್ಲಿ ರಂಗಭೋಗದ ಸೇವಾವರ್ಗದವರಿಗೂ ದತ್ತಿಯನ್ನು ನೀಡಲಾಗಿದೆ. ವೇದಮಲ್ಲಣ್ಣನು ನಾಗಲಾಪುರಂನ ನೀಲಮಾಣಿಕ್ಯ ದೇವರ ದೇವಾಲಯದ ನೃತ್ಯ, ಸಂಗೀತಗಾರರು ಮತ್ತು ಹಾಡುವವರಿಗೆ ಗ್ರಾಮದ ಕೆಲವು ಆದಾಯವನ್ನು ದಾನಮಾಡಲಾಗಿದೆ."[೧೧೪] ಒಂದೇ ಗ್ರಾಮದ ಹಲವು ಆದಾಯದಲ್ಲಿ ಅನೇಕ ಜನರಿಗೆ ತಮ್ಮ ಸೇವಾಕಾರ್ಯಕ್ಕೆ ಪ್ರತಿಯಾಗಿ ದಾನಿಯು ದತ್ತಿಯನ್ನು ನೀಡುತ್ತಿದ್ದ. ಈ ಮೇಲಿನ ಹೇಳಿಕೆಯಲ್ಲಿ ಅಂದಿನ ವೈಷ್ಣವ ದೇವಾಲಯಗಳ ರಂಗಭೋಗದಲ್ಲಿ ಹಲವು ಜನರು ಸೇವೆ ಸಲ್ಲಿಸುತ್ತಿದ್ದುದು ಕಂಡುಬರುತ್ತದೆ.

ಮತ್ತೊಂದು ಶಾಸನದಲ್ಲಿ ನೈವೇದ್ಯದ ಸೇವೆಯನ್ನು ನಡೆಸಿಕೊಂಡು ಹೋಗಲು ಅನೇಕ ಜನರಿಗೆ ಧಾನ್ಯ, ಹಣವನ್ನು ಧರ್ಮವಾಗಿ ನೀಡಿದ ಉಲ್ಲೇಖ ಸಿಗುತ್ತದೆ.[೧೧೫] ಸಿಂಗಪ್ಪನಾಯಕನು ಬೇಲೂರಿನ ಚೆನ್ನಕೇಶವ ದೇವರಿಗೆ ೩ ಗ್ರಾಮಗಳನ್ನು ದೇವರ ಅವಸರದ ನೈವೇದ್ಯಕ್ಕಾಗಿ ಬಿಟ್ಟು, ಈ ಗ್ರಾಮದಿಂದ ಬರತಕ್ಕ ಭತ್ತ ಖಂಡುಗ ೧೪೦ನೂ ಹರಿಹೆಬ್ಬಾರುವರ ಮಕ್ಕಳು ಅಕಣಹೆಬಾರುವರು. ಅಪ್ಪಯ ಹೆಬಾರುವರ ಮಗ ಚೆನ್ನಣಹೆಬಾರುವರು, ಅಣಪಯಗಳ ಮಕ್ಕಳು ಲಕ್ಷೀಪತಿ ಅಯಾಗಳು, ಚೆನ್ನಪ್ಪರಾಧ್ಯರು ಈ ನಾಲ್ವರು ಗಂಗಾವರ ಮಳವಳ್ಳಿಯ ಭತ್ತ ಮತ್ತು ಹಣವನ್ನು ಸಮವಾಗಿ ತೆಗೆದುಕೊಂಡು ಸ್ವಾಮಿಯ ನೈವೇದ್ಯವನ್ನು ನಡೆಸಿಕೊಂಡು ಬರಲು ಹೇಳಿದೆ.

ದೇವಾಲಯಗಳ ಸೇವಾವರ್ಗಕ್ಕೆ ಬಿಟ್ಟಂತಹ ದಾನವನ್ನು ಗಮನಿಸಿದಾಗ, ದಾನಿಗಳಲ್ಲಿದ್ದ ಮಾನವೀಯ ಭಾವನೆಗಳನ್ನು ಗುರುತಿಸಬಹುದು. ಕ್ರಿ.ಶ. ೧೫೧೪ರ ಶಾಸನವೊಂದರಲ್ಲಿ ಪೋತವರದ ನಟುವ ತಿಮ್ಮಯ್ಯನ ಮಗಳು ಪಾತ್ರಿಗೂನೂ ತಾಯಿಕುಂಡ ನಾಟಕದ ಚಾಗಯ್ಯನ ಮಗ ನಟುವ ನಾಗಯ್ಯನಿಗೆ ತಿರಪತ್ತೂರ ಸೋಮರಸರ ಮಕ್ಕಳು ಕರಣಿಕ ಬಸವಯ್ಯಗಳು ಜಲಸಿಂಗದೇವರ ಸನ್ನಿಧಿಯಲ್ಲಿ ಶ್ರೀವೀರ ಕೃಷ್ಣದೇವಮಹಾರಾಯರಿಗೆ ಪುಣ್ಯವಾಗಬೇಕೆಂದು ಭೂಮಿ ದಾನವನ್ನು ನೀಡಲಾಗಿದೆ.[೧೮]

ಕೃಷ್ಣದೇವರಾಯನ ಕಾಲದ ಸಾಮಾಜಿಕ, ಧಾರ್ಮಿಕ ಆಡಳಿತದಲ್ಲಿ ವೈಷ್ಣವ ದೇವಾಲಯಗಳು ಮಹತ್ವದ ಪಾತ್ರವಹಿಸಿದ್ದವು. ಅಂದಿನ ದೇವಾಲಯಗಳು ದಾನಿಗಳು ನೀಡಿ ದಾನದತ್ತಿಯಿಂದ ತಮ್ಮ ವೆಚ್ಚವನ್ನು ಭರಿಸಿಕೊಳ್ಳುತ್ತಿದ್ದವು. ಇಲ್ಲಿ ಸ್ಥಾನಿಕರಿಗಿಂತ ದಾನಿಗಳೇ ಅಲ್ಲಿನ ಪರಿಚಾರಕರಿಗೆ ವೇತನ ಮತ್ತು ದತ್ತಿಯನ್ನು ನಿಗದಿಮಾಡಿ ಅವರನ್ನು ನೇಮಿಸುತ್ತಿದ್ದರು. ಶಾಸನಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ದಾನಿಗಳು ಸೇವಕರಿಗೆ ಕೊಟ್ಟ ದತ್ತಿ-ದಾನವನ್ನು ಸ್ಥಾನಿಕರು ಪಡೆದು ಅವರಿಗೆ ಕ್ರಮವಾಗಿ ನೀಡುತ್ತಿದ್ದರು. ಈ ಪದ್ಧತಿಯಲ್ಲಿ ಸ್ಥಾನಿಕನೇ ಮುಖ್ಯಸ್ಥ. ದೇವಾಲಯದಲ್ಲಿ ಸ್ಥಾನಿಕರಿಂದ ಹಿಡಿದು ಪರಿಚಾರಕವರ್ಗ ಮತ್ತು ಧಾರ್ಮಿಕ ವಿಧಿಗಳಿಗೆ ಅಧಿಕವಾಗಿ ಸಂಪತ್ತು ಖರ್ಚಾಗುತ್ತಿದ್ದಿತು. ಆಳರಸರ ಹಾಗೂ ಜನಸಾಮಾನ್ಯರ ಧಾರ್ಮಿಕ ಪ್ರಜ್ಞೆ ಜಾಗೃತಗೊಂಡು ದೇವಾಲಯಗಳು ಕೇವಲ ಧಾರ್ಮಿಕ ವಿಧಿ-ವಿಧಾನಗಳಿಗಷ್ಟೇ ಸೀಮಿತವಾಗಿರದೇ ಸಂಗೀತ-ನೃತ್ಯ-ಸಾಹಿತ್ಯ-ಕಲೆಗಳನ್ನು ಪ್ರೋತ್ಸಾಹಿಸುವ, ಜನರ ನಡೆ-ನುಡಿಗಳನ್ನು ತಿದ್ದುವ ಸಾಂಸ್ಕೃತಿಕ ಕೇಂದ್ರಗಳಾಗಿ ಪರಿವರ್ತನೆ ಹೊಂದಿದವು.

೩. ಧಾರ್ಮಿಕ ಸ್ಥಿತಿ

ಮಧ್ಯಕಾಲೀನ ದಕ್ಷಿಣಭಾರತದಲ್ಲಿ ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳನ್ನು ಗಮನಿಸಿದಾಗ ಅರಸರ ಪ್ರೋತ್ಸಾಹದ ಫಲವಾಗಿ ವೈಷ್ಣವ ದೇವಾಲಯಗಳು ಶ್ರೀಮಂತ ಸಂಸ್ಥೆಗಳಾದವು. ಹಿಂದಿದ್ದ ಸಂಪ್ರದಾಯ, ಪೂಜಾಪದ್ಧತಿಗಳ ಜೊತೆಗೆ ಕಲ್ಯಾಣೋತ್ಸವ, ವಸಂತೋತ್ಸವ, ವೈಮಾಳಿಗೋತ್ಸವ, ಮೊದಲಾದ ನಾನಾ ಉತ್ಸವಗಳನ್ನು ಆಚರಿಸಲು ಪ್ರಾರಂಭಿಸಿದರು. ಕೆಲವು ದೇವಾಲಯಗಳಲ್ಲಿ ಪುರಾಣ, ಹರಿಕಥೆ ಮುಂತಾದ ಧರ್ಮಪ್ರಸರಣ ಕಾರ್ಯಗಳು ವ್ಯವಸ್ಥೆಗೊಂಡಿದ್ದರೂ ವೈಭಯುತ ಪೂಜೆ, ಉತ್ಸವಗಳು, ಕನಕರತ್ನಾಭರಣಗಳ ಅರ್ಪಣೆ, ನೂರಾರು ಜನರಿಗೆ ಅನ್ನದಾನ ಏರ್ಪಾಡು ಮೊದಲಾದ ಕಾರ್ಯಗಳಿಗೆ ಹೆಚ್ಚಿನ ಗಮನ ಕೊಡಲಾಯಿತು.

ನಮ್ಮ ನಾಡಿನ ದೇವಾಲಯಗಳಲ್ಲಿ ನಡೆಯುವ ಪೂಜೆ ಯಾವುದಾದರೊಂದು ನಿರ್ದಿಷ್ಟವಾದ ಪದ್ಧತಿಯಲ್ಲಿದ್ದುದು ಆಗಮಶಾಸ್ತ್ರಗಳಲ್ಲಿ ಕಂಡುಬರುತ್ತದೆ. ವೈಷ್ಣವ ಆಗಮದಲ್ಲಿ ವೈಖಾನಸ, ಪಾಂಚರಾತ್ರ ಎಂಬ ಎರಡು ವಿಧಗಳಿವೆ. ದಕ್ಷಿಣಭಾರತದಲ್ಲಿ ಮಧ್ಯಕಾಲದಿಂದಲೂ ಈ ಪೂಜಾಪದ್ಧತಿಗಳು ಹೆಚ್ಚಾಗಿ ನಡೆಯುತ್ತಿದ್ದವು. ವೈಖಾನಸ ಪದ್ಧತಿಗೆ ವೈದಿಕ ಹಿನ್ನೆಲೆಯಿದ್ದು, ವೇದೋಕ್ತವಾದ ಕರ್ಮಾನುಷ್ಠಾನದಲ್ಲಿ ಅವರ ಆದರ ಹೆಚ್ಚು; ಪಾಂಚರಾತ್ರರಿಗೆ ಜಾನಪದ ಸಂಪರ್ಕ ಹೆಚ್ಚು. ಈ ಪದ್ಧತಿಯು ರಾಮಾನುಜರ ಪ್ರಭಾವದಿಂದ ಈ ಕಡೆಗಳಲ್ಲಿ ಬಲವಾಗಿ ಬೇರೂರಿತು. ಶ್ರೀರಂಗಂ ಪಾಂಚರಾತ್ರ ಪದ್ಧತಿಯ ಮುಖ್ಯ ಕೇಂದ್ರವಾಗಿ ಬೆಳೆಯಿತು.

ವೈಖಾನಸ ಪದ್ಧತಿಯು ದೇವರನ್ನು ಒಲಸಿಕೊಳ್ಳುಲು ಜಪ, ಹೋಮ, ಧ್ಯಾನ ಮತ್ತು ಅರ್ಚನೆ ಎಂಬ ನಾಲ್ಕು ಬಗೆಯ ಪೂಜೆಸಂಪ್ರದಾಯಗಳನ್ನು ಮುಖ್ಯವಾಗಿ ಪರಿಗಣಿಸಿತು. ಇವುಗಳಲ್ಲಿ ಅರ್ಚನೆಯು ಮಹತ್ವದ್ದಾಗಿದೆ. ಅರ್ಚಾವಿಧಿಗಳು ವೇದೋಕ್ತವಾಗಿರಬೇಕೆಂಬುದು ವೈಖಾನಸರ ಅಭಿಪ್ರಾಯ. ತಿರುಪತಿಯಲ್ಲಿ ಮೊದಲಿನಿಂದಲೂ ವೈಖಾನಸ ಪೂಜಾ ಪದ್ಧತಿಗಳೇ ನಡೆದುಬಂದರೆ, ಶ್ರೀರಂಗಂ ಹಾಗೂ ಇತರ ಕಡೆಗಳಲ್ಲಿ ಪಾಂಚರಾತ್ರ ಪದ್ಧತಿಯೂ ನಡೆಯುತ್ತಿದೆ.

ಪೂಜೆ

ಮಧ್ಯಕಾಲೀನ ವೈಷ್ಣವ ದೇವಾಲಯಗಳಲ್ಲಿ ನಡೆಯುವ ಪೂಜೆಗಳನ್ನು ಹೆಸರಿಸಿರುವುದು ಹಲವು ಶಾಸನಗಳಲ್ಲಿ ಉಲ್ಲೇಖಗಳು ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ದೇವರ ಕಾರ್ಯಸೇವೆಯಲ್ಲಿನ ಪೂಜಾವಿಧಿಗಳೆಂದರೆ ನಿತ್ಯ ನೈವೇದ್ಯಗಳು, ದೀಪಾರಾಧನೆ, ಫಲಪೂಜಾ, ನೈಮಿತ್ತಿಕ ಪಂಚಪರ್ವ, ಅಮೃತಪಡಿ, ಅಂಗವೈಭವ, ರಂಗ ವೈಭೋಗ, ನಿತ್ಯ ಮಹಾವಾದ್ಯ, ಮಾಸ ಪೂಜೆ, ಪುಣ್ಯತಿಥಿಗಳಲ್ಲಿ ಮಾಡುವ ಮಹಾಪೂಜೆ ನೈವೇದ್ಯ ಇತ್ಯಾದಿ ಪೂಜಾಕೈಂಕರ್ಯಗಳು ನಡೆಯುತ್ತಿದ್ದವೆಂದು ಹೇಳಬಹುದು. ದೇವಾಲಯದ ಕಾರ್ಯಗಳನ್ನು ನೋಡಿಕೊಳ್ಳಲು ಬ್ರಾಹ್ಮಣ ಅರ್ಚಕರಿರುತ್ತಿದ್ದರು. ಇವರು ದೇವರ ಪೂಜೆಪುನಸ್ಕಾರಗಳನ್ನು ನೆರವೇರಿಸಿ ದೇವರ ಉತ್ಸವಗಳನ್ನು ಕರಾರುವಕ್ಕಾಗಿ ನಡೆಸಿಕೊಂಡು ಬರುತ್ತಿದ್ದರು. ದೇವಾಲಯಗಳಲ್ಲಿ ತ್ರಿಕಾಲ ಪೂಜೆಯು ನಡೆಯುತ್ತಿದ್ದಿತು.

ನಿತ್ಯಪೂಜೆ : ನಿತ್ಯಪೂಜೆಯಲ್ಲಿ ಪ್ರಧಾನವಾಗಿ ಆವಾಹನ, ಅರ್ಚನ, ನಿವೇದನೆ ಎಂಬ ತ್ರಿವಿಧೋಪಚಾರಗಳು ಇರುತ್ತಿದ್ದವು. "ಅಷ್ಟೋಪಚಾರ, ದಶೋಪಚಾರ, ಷೋಡಶೋಪಚಾರ, ಚತುರ್ವಿಂಶತ್ಯುಪಚಾರ, ದ್ವಾಂತ್ರಿಂಶತ್ಯುಪಚಾರ, ಚತುಷ್ಪಷ್ಟ್ಯುಪಚಾರ, ಅಷ್ಟೋತ್ತರಶತೋಪಚಾರ, ಸಹಸ್ರವಿಧೋಪಚಾರಗಳು ಭಕ್ತಜನ ಭಾವನೋಪ ಕಲ್ಪಿತ ಲೀಲೋಪಚಾರಗಳು ಎಂದು ವಿವೇಕ ಚಿಂತಾಮಣಿಯು ಉಲ್ಲೇಖಿಸಿದೆ."[೧೧೭] ಇವುಗಳಲ್ಲಿ ಸ್ಮೃತ್ಯಾಗಮ ಸಮ್ಮತವಾದವು ದ್ವಾತ್ರಿಂಶದೋಪಚಾರಗಳು. ಅವು ಯಾವುವೆಂದರೆ : ಧ್ಯಾನ, ಆವಾಹನ, ಆಸನ, ಪಾದ್ಯ, ಆರ್ಘ್ಯ, ಆಚಮನ, ಸ್ನಾನ, ವಸ್ತ್ರ, ಯಜ್ಞಸೂತ್ರ, ಭೂಷಣ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ಮುಖವಾಸನ, ನೀರಾಜನ, ದರ್ಪಣ, ಫಲಾರ್ಪಣ, ತಾಂಬೂಲ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ, ಪುರಾಣದಿಪಠನ, ಛತ್ರ, ಚಾಮರ, ವ್ಯಜನ, ಶಯ್ಯಾ, ಸಂಗೀತ, ನೃತ್ಯವಾದ್ಯ, ಆರ್ತಾರೋಪಣ ಮುಖ್ಯವಾದವುಗಳು. ಪೂಜೆಯು ಮುಖ್ಯವಾಗಿ ದೀಪಹಚ್ಚುವುದು, ಅಭಿಷೇಕ, ಹೂವು ಅರ್ಪಿಸುವುದು, ಅಂಗಭೋಗ, ರಂಗಭೋಗ, ನೈವೇದ್ಯ, ಆರತಿ ಬೆಳಗುವುದು ಮುಂತಾದವುಗಳು ಒಳಗೊಂಡಿರುತ್ತಿತ್ತು.[೧೧೮] ದೀಪಾರಾಧನೆಯಲ್ಲಿ ಎಣ್ಣೆದೀವಿಗೆ, ತುಪ್ಪದ ದೀವಿಗೆಗಳನ್ನು ದೇವರ ಮುಂದೆ ಉರಿಸುತ್ತಿದ್ದರು.

ನೈವೇದ್ಯ : ದೇವಾಲಯಗಳ ಪೂಜೆಯ ಸಂದರ್ಭದಲ್ಲಿ ದೇವರಿಗೆ ನೈವೇದ್ಯ ಅರ್ಪಿಸುವುದು ಒಂದು ಪದ್ಧತಿಯಾಗಿದೆ. ಇದರಲ್ಲಿ ನೈವೇದ್ಯಕ್ಕೆ ಬೇಕಾದ ತಿನಿಸುಗಳನ್ನು ಹಲವಾರು ಶಾಸನದಲ್ಲಿ ದಾನಿಗಳೇ ಮಾಡಬೇಕಾದ ನೈವೇದ್ಯದ ಬಗ್ಗೆ ಹೇಳಿರುವುದು ಕಂಡುಬರುತ್ತದೆ. ಈ ಶಾಸನಗಳ ಹಿನ್ನೆಲೆಯಲ್ಲಿ ನೈವೇದ್ಯಕ್ಕೆ ಬಳಸುವ ದವಸಧಾನ್ಯ, ಹಣ್ಣುಗಳು, ಭಕ್ಷ್ಯಗಳೆಂದರೆ, 'ಅಕ್ಕಿ, ಹೆಸರು, ಉದ್ದು, ಹೆಸರುಬೇಳೆ, ಕಡಲೆಬೇಳೆ, ಉಪ್ಪು, ಮೆಣಸು,

ಸಂಬಾರಮಸಾಲೆ, ಮೇಲೋಗರ (ಕಾಯಿಪಲ್ಲೆ), ಬೆಲ್ಲ, ಸಕ್ಕರೆ, ಜೀರಿಗೆ ಮುಂತಾದವುಗಳನ್ನು'[೧೧೯] ಉಪಯೋಗಿಸುತ್ತಿದ್ದರೆ "ಫಲನೈವೇದ್ಯದಲ್ಲಿ ಎಳನೀರು, ತೆಂಗಿನಕಾಯಿ, ಬಾಳೆಹಣ್ಣು, ಕಬ್ಬು, ಅಡಕೆ, ವೀಳ್ಯದೆಲೆ" ಇತ್ಯಾದಿಗಳು ಇರುತ್ತಿದ್ದವು.[೧೨೦] ನೈವೇದ್ಯ ಭಕ್ಷ್ಯಗಳಲ್ಲಿ ಎಣ್ಣೆ ಹೂರಿಗೆ ಕಜಾಯ, ಕರುಚಿಯ ಅಪ್ಪ, ಅತಿರಸ, ಸುಖಿನಪ, ದೊಸೆ, ಮೊಸರನ್ನ, ವಡೆ, ನೆನಗಡಲೆ ಇತ್ಯಾದಿಗಳು[೧೨೧] ಭಕ್ಷ್ಯ ನೇವೇದ್ಯದ ಜೊತೆಗೆ ತುಪ್ಪ, ಮೊಸರು, ಹಾಲುಗಳನ್ನು ನೇವೇದ್ಯದಲ್ಲಿ ಬಳಸುತ್ತಿದ್ದರು. ನೈವೇದ್ಯವನ್ನು ಚಿನ್ನದ ಹರಿವಾಣದದಲ್ಲಿಟ್ಟು ಸಮರ್ಪಿಸುತ್ತಿದ್ದುದು ಶಾಸನಗಳಿಂದ ತಿಳಿದುಬರುತ್ತದೆ.[೧೨೨]

ವೈಷ್ಣವ ದೇವಾಲಯಗಳಲ್ಲಿ "ವಿಶೇಷ ಪುಣ್ಯ ತಿಥಿಗಳಲ್ಲಿ ಮಹಾಪೂಜೆ ಮಹಾನೈವೇದ್ಯವನ್ನು ಸಮರ್ಪಿಸುತ್ತಿದ್ದರು."[೧೨೩] ಇದರ ಉಲ್ಲೇಖವನ್ನು ಹಂಪಿಯ ವಿಠಲ ದೇವಾಲಯದಲ್ಲಿ ಈ ಪೂಜೆಯು ನಡೆಯುತ್ತಿದ್ದುದು ಶಾಸನಗಳಿಂದ ತಿಳಿಯಬಹುದು. "ರಾಯನು ತಿರುಮಲೆಯ ತಿರುವೇಂಗಳನಾಥನ ನೈವೇದ್ಯಕ್ಕೆ ತಾಳ್ಳಪಾಕ ಗ್ರಾಮವನ್ನು ಬಿಟ್ಟುಕೊಟ್ಟು ಈ ಗ್ರಾಮದಿಂದ ಬಂದ ಆದಾಯದಲ್ಲಿ ದೇವರಿಗೆ ನೈವೇದ್ಯವನ್ನು ಮಾಡಿ ಉಳಿದ ನೈವೇದ್ಯದಲ್ಲಿ ತನ್ನ ಪುರೋಹಿತರಾದ ರಂಗಾದೀಕ್ಷಿತ ಹಾಗೂ ಶಿವದೀಕ್ಷಿತನಿಗೂ ನೀಡಬೇಕಾಗಿದ್ದಿತು.[೧೨೪] ಇನ್ನುಳಿದ ಪ್ರಸಾದವನ್ನು ಬ್ರಾಹ್ಮಣರ ಸತ್ರ ಭೋಜನಕ್ಕೆ ಕಳುಹಿಸಲು ಏರ್ಪಾಡು ಮಾಡಿದನು.

ಕ್ರಿ.ಶ. ೧೫೧೩ರಲ್ಲಿ ರಾಯನು ಪ್ರಥಮ ಬಾರಿಗೆ ತಿರುಮಲೆಯ ತಿರುವೇಂಗಳನಾಥನ ದರ್ಶನಕ್ಕೆ ಹೋದಾಗ ೨೫ ಬೆಳ್ಳಿ ಆರತಿ ತಟ್ಟೆಗಳನ್ನು ದೇವರ ಸೇವೆಗೆ ಅರ್ಪಿಸಿದರೆ, ಅವನ ರಾಣಿಯರು ದೇವರ ಸೇವೆಗೆ ಜಿಲಪಾಲ - ನೈವೇದ್ಯ ಅವಸರಕ್ಕೆ ೩೨೪ ತೂಕದ ಬಂಗಾರದ ಬಟ್ಟಲನ್ನು ಸಮರ್ಪಿಸಿದರು.[೧೨೫] ವೈಷ್ಣವ ದೇವಾಲಯಗಳ ನೈವೇದ್ಯಕ್ಕೆ ನೀಡಿದ ವಿವರವುಳ್ಳ ಹಲವು ಶಾಸನಗಳು ಕಂಡುಬರುತ್ತವೆ. ಅವು ಈ ಕೆಳಗಿನಂತೆ ಇವೆ :

ರಾಯನು ವಿಠಲದೇವರ ನೈವೇದ್ಯದಲ್ಲಿ ಗುರುಗಳಾದ ವ್ಯಾಸರಾಯರಿಗೆ ೩ ಪಾಲು ನೀಡಬೇಕೆಂದು ಗ್ರಾಮವನ್ನು ದತ್ತಿಬಿಟ್ಟನು.[೧೨೬] ತಿರುಮಲೆಯಲ್ಲಿ ಮಠದ ಧರ್ಮಕ್ಕೆಂದು ರಾಯನ ಹೆಸರಿನಲ್ಲಿ ದೇವರಿಗೆ ಸಲ್ಲುವ ನೈವೇದ್ಯ ಪ್ರಸಾದದ ಒಂದು ಪಾಲನ್ನು ವ್ಯಾಸತೀರ್ಥರಿಗೆ ಸಲ್ಲಬೇಕೆಂದೂ ಹೇಳುವ ಶಾಸನವು ಕ್ರಿ.ಶ. ೧೫೨೪ ರ ಕಾಲದ್ದು.[೧೨೭] ಗೌರವ ನರಸಪ್ಪಯ್ಯನವರು ಶ್ರೀರಂಗನಾಥ ದೇವರ ಅರ್ಚನೆ, ಧೂಪದೀಪ ನೈವೇದ್ಯದ ಸಲುವಾಗಿ ರಂಗನಾಥಪುರವನ್ನು ದಾನವಾಗಿ ನೀಡಿದರು.[೧೨೮] ರಾಯನು ಪುಷ್ಪಗಿರಿಯ ಚೆನ್ನಕೇಶವ ದೇವರ ದೇವಾಲಯದ ಸೇವೆಗೆ, ನೈವೇದ್ಯಕ್ಕೆ ಚಿನುಮಾಂಚುಪಲ್ಲಿ ಗ್ರಾಮವನ್ನು ದತ್ತಿಯಾಗಿ ನೀಡಿದನು.[೧೨೯] ತಿರುಮಲೆಯ ಸ್ಥಾನದವರೂ ಅಗ್ರಹಾರ ಕಂಪ ಸಮುದ್ರದ ತತ್ಸಪಾದಿ ತಿಮ್ಮಣ್ಣಗಳ ಮಕ್ಕಳು ನಾರಾಯಣದೇವರಿಗೆ ತಿರಮಲೆಯ ತಿರುವೇಂಗಳನಾಥ ದೇವರಿಗೆ ನಿತ್ಯಪಡಿಯಾಗಿ ಮೂರು ಹರಿವಾಣವನ್ನು ತಮ್ಮ ಪುಲಿಯೊಟ್ಟಾಗಿ ನೈವೇದ್ಯ ನಡೆಸಿಕೊಂಡು ಬರಲು ಗಂಗಲಪೊಂಡಿಯ ಗ್ರಾಮವನ್ನು ಸಮರ್ಪಿಸಿದರು.[೧೩೦]

ಈ ಮೇಲಿನ ಶಾಸನಗಳಲ್ಲಿ ಕಂಡುಬರುವ ಅಂಶಗಳ ಆಧಾರದಿಂದ ವೈಷ್ಣವ ದೇವಾಲಯಗಳಿಗೆ ನೀಡಿದ ದಾನದತ್ತಿಯಲ್ಲಿ ನೈವೇದ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿರುವುದು ಕಂಡುಬರುತ್ತದೆ. ವಿಶೇಷವಾಗಿ ದಾನಿಗಳು ದೇವರ ನೈವೇದ್ಯಕ್ಕೆ ದತ್ತಿಬಿಟ್ಟು ನೈವೇದ್ಯ ಪ್ರಸಾದದ ಭಾಗವನ್ನು ತಮ್ಮ ಗುರುಗಳು ಮತ್ತು ಪುರೋಹಿತರಿಗೆ

ನೀಡುತ್ತಿದ್ದುದು ತಿಳಿಯುತ್ತದೆ. ನೈವೇದ್ಯವು ಮಹಾಪ್ರಸಾದವೆಂದು ಅಂದಿನ ಜನರ ನಂಬಿಕೆಯಾಗಿತ್ತು. ಯಾವುದೇ ದೇವಾಲಯಗಳಿಗೆ ಭೇಟಿ ನೀಡಿದಾಗ ದೇವರ ದರ್ಶನವಾದ ನಂತರ ನೈವೇದ್ಯವನ್ನು ನೀಡುವ ಪರಿಪಾಠ ಇಂದಿಗೂ ದೇವಾಲಯಗಳಲ್ಲಿ ಉಳಿದುಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಪೂಜೆಗಳ ಜೊತೆಗೆ ನೈವೇದ್ಯಕ್ಕೆ ಕೂಡಾ ದತ್ತಿಯನ್ನು ನೀಡುತ್ತಿದ್ದುದು ಗಮನಾರ್ಹ.

ನೈಮಿತ್ತಿಕ : ನೈಮಿತ್ತಿಕ ಪೂಜೆಗಳು ಸಾಮಾನ್ಯವಾಗಿ ಅಮಾವಾಸ್ಯೆ, ಪೌರ್ಣಿಮೆ, ಚೌತಿ, ಏಕಾದಶಿ, ದ್ವಾದಶಿ ಮುಂತಾದ ನಿರ್ದಿಷ್ಟ ತಿಥಿಗಳಲ್ಲಿ ನಡೆಯುತ್ತಿದ್ದವು. ವಿಶೇಷ ಪೂಜೆಗಳಲ್ಲಿ ಅಂಕುರಾರ್ಪಣ, ಕಾಮ್ಯಾರ್ಚನೆ, ಹೋಮ ಇತ್ಯಾದಿ ಪರ್ವ ಹಬ್ಬಗಳು ಸೇರುತ್ತವೆ. ಅಧ್ಯಯನದಲ್ಲಿ ದೊರೆತಿರುವ ಶಾಸನಗಳ ಹಿನ್ನೆಲೆಯಲ್ಲಿ ನೈಮಿತ್ತಿಕ ಪೂಜೆಗಳಿಗಾಗಿ ವೈಷ್ಣವ ದೇವಾಲಯಗಳಿಗೆ ದಾನದತ್ತಿ ನೀಡಿರುವುದು ತಿಳಿದುಬಂದಿದೆ.

ಕೃಷ್ಣದೇವರಾಯನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಹಂಪಿಯ ವಿಠಲ ದೇವಾಲಯದ ಅಮೃತಪಡಿ ನೈವೇದ್ಯ, ಅಂಗ-ರಂಗವೈಭೋಗ, ನಿತ್ಯ ನೈಮಿತ್ತಿಕ, ದೀಪಾರಾಧನೆ ಮುಂತಾದ ಪುಣ್ಯತಿಥಿಗಳಲ್ಲಿ ಮಾಡುವ ಮಹಾಪೂಜೆ, ಮಹಾನ್ನೈವೇದ್ಯಕ್ಕೆಂದು ಹುಲಿಗಿ ಮಾಗಣಿಯ ಹರಿಹರಪುರವನ್ನು ಸಮರ್ಪಿಸಿದುದು ಶಾಸನದಲ್ಲಿ ಉಲ್ಲೇಖವಾಗಿದೆ.[೧೩೧] ಅದೇ ರೀತಿ ಕೇಶವನಾಥ ಮತ್ತು ಮಾಚಿರಾಜರು ಸೇರಿ ತಮ್ಮ ಜಾತಿಯ ೨೪ ಕುಲಗಳ ಜನರು ಸೇರಿಕೊಂಡು ತಿರುವೇಂಗಳನಾಥನಿಗೆ ಉಭಯ ಏಕಾದಶಮಿ, ದ್ವಾದಶಮಿ ಮಹೋತ್ಸವಕ್ಕೆ, ಪೂರ್ಣಮಿ, ಸಂಕ್ರಾಂತಿ, ಧನುರ್ಮಾಸ, ಕಾರ್ತಿಕ, ದೀಪಾರಾಧನೆ, ವಸಂತೋತ್ಸವ ಮೊದಲಾದ ಪುಣ್ಯಕಾರ್ಯಗಳಿಗೆ ೨೪ ಕುಲದವರಿಗೆ ಪುಣ್ಯವಾಗಲಿ ಎಂದು ಬುಕ್ಕರಾಯಪುರಂ ಗ್ರಾಮವನ್ನು ದೌಂಮರಿಪನ್ನು ತಿರುವೇಂಗಳನಾಥ ದೇವರಿಗೆ ಕೊಟ್ಟು ಧರ್ಮಶಾಸನವನ್ನು ಹಾಕಿಸಿದ್ದಾರೆ.[೧೩೨] ಈ ಶಾಸನದಲ್ಲಿ ಅಂದಿನ ಸಮಾಜದ ಒಂದೇ ವರ್ಗಕ್ಕೆ ಸೇರಿದವರು ತಮ್ಮ ಕುಲದ ಒಳತಿಗಾಗಿ ದೇವರ ಪುಣ್ಯಕಾರ್ಯಕ್ಕೆ ದಾನನೀಡಿರುವುದು ತಿಳಿಯುತ್ತದೆ. ಸಾಮೂಹಿಕವಾಗಿಯೂ ಒಂದೇ ದೇವರಿಗೆ ಹಲವು ಪೂಜಾಕಾರ್ಯಗಳ ಸಲುವಾಗಿ ಗ್ರಾಮದ ಆದಾಯವನ್ನು ನೀಡುತ್ತಿದ್ದರು.

ಶ್ರೀಕಾರ್ಯ : ದೇವಾಲಯಗಳಲ್ಲಿ ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಎಲ್ಲಾ ಒಳ್ಳೆಯ ಕೆಲಸಗಳನ್ನು 'ಶ್ರೀಕಾರ್ಯ' ಎಂದೇ ಪರಿಗಣಿಸಲಾಗಿದೆ. "ಹಂಪಿಯ ಬಾಲಕೃಷ್ಣ ದೇವಾಲಯದ ಶಾಸನದಲ್ಲಿ 'ಶ್ರೀಕಾರ್ಯಕ್ಕಾಗಿ' ಎಂದು ಉಲ್ಲೇಖಿಸಿರುವುದು ಕಂಡುಬರುತ್ತದೆ."[೧೩೩] ಈ ಹಿನ್ನೆಲೆಯಲ್ಲಿ ಯಾವುದೇ ದೇವಾಲಯ ದಲ್ಲಿ ಎಲ್ಲಾ ಪೂಜಾವಿಧಿಗಳಿಗೆ ಶ್ರೀಕಾರ್ಯ ಎಂದು ಕರೆಯುತ್ತಿದ್ದರು.

ನಂದಾದೀವಿಗೆ : ದೇವಾಲಯದಲ್ಲಿ ಸದಾ ಉರಿಯುವ ದೀಪವೇ ನಂದಾದೀಪ ಅಥವಾ ನಂದಾದೀವಿಗೆ ಆಗಿದೆ. ಹೆಚ್ಚಿನ ಶಾಸನಗಳಲ್ಲಿ ದೀಪಾರಾಧನೆಗಾಗಿ ದಾನದತ್ತಿಯನ್ನು ನೀಡಲಾಗಿದೆ. ಕೃಷ್ಣದೇವರಾಯನ ಸೇನಾಧಿಪತಿಯಾದ ಓಬಳನಾಯಕ್ಕರ್ ಕ್ರಿ.ಶ. ೧೫೨೪ರ ಸುಮಾರಿಗೆ ತಿರುಮಲೆಯ ದೇವರೆದುರು ತುಪ್ಪದ ದೀಪಗಳನ್ನು ಉರಿಸುವ ಸಲುವಾಗಿ ಒಮ್ಮೆ ೨೦೦ ಹಸುಗಳನ್ನು ಇನ್ನೊಮ್ಮೆ ೫೦ ಹಸುಗಳನ್ನು ಇವನು ಬೆಟ್ಟದ ದೇವಾಲಯಕ್ಕೆ ದಾನಮಾಡಿದನು.[೧೩೪] ಅದೇ ರೀತಿಯಲ್ಲಿ ಇನ್ನೊಂದು ಶಾಸನದಲ್ಲಿ ರಾಯನ ರಾಣಿಯರಾದ

ತಿರುಮಲದೇವಿ ಮತ್ತು ಚಿನ್ನಾದೇವಿಯರು ಹಂಪಿಯ ವಿಠಲ ದೇವರಿಗೆ ೨೫ ಆರತಿಗಳನ್ನು ಸಮರ್ಪಿಸಿದರು.[೧೩೫] ಅವುಗಳು ಹೀಗಿವೆ : ನೀರಾಂಜನ ಹಲಿಗೆ ೯, ಹಿರಿಯ ಆರತಿ ೮, ಪುರುಷಾಮೃಗದ ಆರತಿ ೩, ನಾಗಾರತಿ ೧, ಧೂಪಾರತಿ ೧, ಕಬಡಿಬರ್ತಿ ೨, ಪ್ರತುಮೆ ಆರತಿ ೧. ಈ ಹಿನ್ನೆಲೆಯಲ್ಲಿ ವಿವಿಧ ಬಗೆಯ ಆರತಿಗಳನ್ನು ದೇವರ ಎದುರಲ್ಲಿ ದೀಪಾರಾಧನೆಗೆ ಬಳಸುತ್ತಿದ್ದರು. ಇದಕ್ಕಾಗಿ ಹಸುಗಳನ್ನು ದೇವಾಲಯಕ್ಕೆ ಬಿಡುತ್ತಿದ್ದು, ಅವುಗಳನ್ನು ದೇವಾಲಯಗಳಲ್ಲಿ ಸಾಕಲಾಗುತ್ತಿತ್ತು.

ಧ್ವಜಾರೋಹಣ : ವೈಷ್ಣವ ದೇವಾಲಯಗಳಲ್ಲಿ ಧ್ವಜಸ್ತಂಭಗಳು ಕರಾರುವಕ್ಕಾಗಿ ಇರುತ್ತಿದ್ದವು. ದೇವರ ಸನ್ನಿಧಿ ಖಚಿತಪಡಿಸುವ ಸಲುವಾಗಿ ದೇವಾಲಯದಲ್ಲಿ ಧ್ವಜಾರೋಹಣವನ್ನು ಮಾಡುತ್ತಿದ್ದರು. ಇದನ್ನು ಕೆಲವು ವಿಶೇಷ ದಿನಗಳಲ್ಲಿ ಮಾತ್ರ ನಡೆಸುತ್ತಿದ್ದರು. ಧ್ವಜಸ್ತಂಭದ ಮೇಲೆ ಧ್ವಜಾರೋಹಣವಾದ ನಂತರವೇ ದೇವರಿಗೆ ನೈವೇದ್ಯವನ್ನು ಮಾಡುತ್ತಿದ್ದರು.[೧೩೬] ದಕ್ಷಿಣಭಾರತದ ದೊಡ್ಡ ದೇವಾಲಯಗಳಲ್ಲಿ ಈಗಲೂ ಧ್ವಜಸ್ತಂಭಗಳು ಕಂಡುಬರುತ್ತವೆ. ಇದು ಮೂಲತಃ ಉತ್ತರಭಾರತದ ಸಂಪ್ರದಾಯವಾಗಿದೆ.

ವೇದಾಧ್ಯಯನ : ವೈಷ್ಣವ ದೇವಾಲಯಗಳಲ್ಲಿ ವಿಷ್ಣುವಿನ ಶ್ಲೋಕವನ್ನೊಳಗೊಂಡ ವೇದಾ ಪರಾಯಣ ನಡೆಯುತ್ತಿದ್ದಿತು. ಇದನ್ನು ರಂಗಭೋಗ ಸೇವೆ ಸಲ್ಲಿಸಿದ ಮೇಲೆ 'ತಿರುವಧ್ಯಾನ' ಅಂದರೆ ಪವಿತ್ರ ಗ್ರಂಥಗಳ ಪಠಣವು ನಡೆಯುತ್ತಿತ್ತು.[೧೩೭] ಇದನ್ನು ಉಲ್ಲೇಖಿಸಿರುವ ಒಂದು ಶಾಸನವು ಕಂಡುಬರುತ್ತದೆ. ಆಹೋಬಲಮಠದ ಗುರುಗಳಾಗಿದ್ದ ಶ್ರೀಮಾನ್ ನಾರಾಯಣ - ಜೀಯರು ಬೆಟ್ಟದ ದೇವಾಲಯಕ್ಕೆ ೧,೮೬೦ ನರ್ ಪಣಗಳನ್ನು ಸಲ್ಲಿಸಿ ತನ್ನ ಹೆಸರಿನಲ್ಲಿ ಬೆಟ್ಟದ ದೇವಾಲಯದಲ್ಲಿ ದೇವರಿಗೆ ನಡೆಯುವ ಅಧ್ಯಯನೋತ್ಸವದ ಸಂದರ್ಭದಲ್ಲಿ ತಿರುವೊಲಕ್ಕಂ, ಅತಿರಸ-ಪಡಿ, ಗೋದಿಪಡಿ, ಸುಖಿಯಾನ್ ಪಡಿ, ಇಡ್ಲಲಿ-ಪಡಿ ಇಷ್ಟನ್ನು ತಿರುವೊಳಿಪಡೆಯೆಂದು ಸಮರ್ಪಿಸಿದುದು ತಿಳಿದುಬರುತ್ತದೆ."[೧೩೮] ಈ ಹಿನ್ನೆಲೆಯಲ್ಲಿ ಕಂಡುಬರುವುದೇನೆಂದರೆ ವೇದಾಧ್ಯಯನಕ್ಕೆ ದಾನಿಗಳು ದತ್ತಿಯನ್ನು ನೀಡುತ್ತಿದ್ದರು. ಇಂದಿಗೂ ಇದನ್ನು ತಿರುಮಲೆಯ ದೇವರ ದೇವಾಲಯದಲ್ಲಿ ವೇದಾಧ್ಯಯನ ಮಾಡುವುದನ್ನು ಕಾಣುತ್ತೇವೆ.

ಮಹಾವಾದ್ಯ : ವೈಷ್ಣವ ದೇವಾಲಯಗಳಲ್ಲಿ ಪ್ರತಿಕಾಲದ ಪೂಜೆಯ ನೀರಾಜನ ಅಂದರೆ ಮಹಾಮಂಗಳಾರತಿ ಸಮಯದಲ್ಲಿ ವಾದ್ಯಗಳನ್ನು ಬಾರಿಸುವ ಪದ್ಧತಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದುದಾಗಿದೆ. ದೇವಾಲಯಗಳಲ್ಲಿ ಪಂಚಮಹಾವಾದ್ಯಗಳನ್ನು ಬಾರಿಸುತ್ತಿದ್ದರು. ಅವುಗಳಲ್ಲಿ ಕೊಂಬು, ತಮಟೆ, ಶಂಖ, ಭೇರಿ ಮತ್ತು ಜಯಘಂಟೆ ಮುಖ್ಯವಾಗಿವೆ. ಇವುಗಳನ್ನು ಪ್ರತಿದಿನ ಬಾರಿಸಲಾಗುತ್ತಿತ್ತು. ದೇವಾಲಯಗಳ ಪೂಜಾವೇಳೆಯಲ್ಲಿ ನಗಾರಿ ಕಹಳೆವಾದ್ಯಗಳು ಮೊಳಗುತ್ತಿದ್ದುದು ತಿಳಿಯುತ್ತದೆ.[೧೩೯] ಮಹಾವಾದ್ಯಗಳು ದೇವಾಲಯಗಳಲ್ಲಿ ಅವಶ್ಯಕವಾಗಿ ಬೇಕಾಗುತ್ತಿದ್ದವು ಎಂದು ಹೇಳಬಹುದು. ರಾಯನು ತನ್ನ ಅಮುಕ್ತಮಾಲ್ಯದದಲ್ಲಿ ವಾದ್ಯಗಳ ಬಗ್ಗೆ ಚಿತ್ರಣವನ್ನು ನೀಡಿರುವುದು ಕಂಡುಬರುತ್ತದೆ.

ಅಂಗರಂಗ ವೈಭೋಗ : ಮಧ್ಯಕಾಲೀನ ಭಾರತದ ದೇವಾಲಯಗಳಲ್ಲಿ ಬೆಳೆದುಬಂದ ನಾನಾ ರೀತಿಯ ಧಾರ್ಮಿಕ ವಿಧಿಗಳಲ್ಲಿ ಅಂಗರಂಗವೈಭವವೂ ಒಂದು. ವಿಜಯನಗರದ ಅರಸರ ಕಾಲದಲ್ಲಿ ದೇವಾಲಯಗಳು ಅಂಗರಂಗಭೋಗ ಸೇವೆಗಳನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಶಾಸನಗಳಲ್ಲಿ ಅಂಗ-ರಂಗ ವೈಭವಕ್ಕಾಗಿ ಸು. ೯೦ ರಷ್ಟು ಶಾಸನಗಳಲ್ಲಿ ದಾನದತ್ತಿಯನ್ನು ನೀಡಿದ್ದು ತಿಳಿಯುತ್ತದೆ. ದೇವಾಲಯಗಳಲ್ಲಿ ದೇವರಿಗೆ ಸಲ್ಲುವ ಪೂಜಾ ಸೇವೆಯಲ್ಲಿ ಬಹುಮುಖ್ಯವಾಗಿ ಎರಡು ವಿಧಗಳಿವೆ. ದೇವರ ಸ್ವರೂಪವೆಂದು ಪರಿಗಣಿತವಾದ ವಿಗ್ರಹಕ್ಕೆ ಸಲ್ಲಿಸುವ ಸೇವೆ ಅಂಗಭೋಗ. ಇದರಲ್ಲಿ ಸ್ನಾನ, ವಸ್ತ್ರ, ಗಂಧ, ಮಂಗಳ ದ್ರವ್ಯಗಳ ಲೇಪನ, ಧೂಪ, ದೀಪ, ಭೋಜನ, ತಾಂಬೂಲಗಳ ಸಮರ್ಪಣಾಕಾರ್ಯ ಇತ್ಯಾದಿಗಳು ಸೇರಿವೆ.

ಅಂಗಭೋಗ ಪೂಜಾ ಸೇವೆಯಲ್ಲಿ ಅರ್ಚಕರು ಮತ್ತು ಅವರ ಸೇವಕರು ಮಾತ್ರ ಪಾಲ್ಗೊಳ್ಳಲು ಅವಕಾಶವಿದ್ದು, ಇಲ್ಲಿ ಇತರೆ ಜನರಿಗೆ ಪ್ರವೇಶವಿರಲಿಲ್ಲ. ಅಂದರೆ ಅಂಗಭೋಗ ಪೂಜೆಯನ್ನು ಮಾಡುವವರು ಅರ್ಚಕರಾಗಿದ್ದರು. ಕ್ರಿ.ಶ. ೧೧ನೇ ಶತಮಾನದ ದೇವಾಲಯದಲ್ಲಿ ಅಂಗಭೋಗದ ಸೇವೆಗೆ ಭೋಗದ ಸೂಳೆಗೆ ಅವಕಾಶ ಮಾಡಿಕೊಡಲಾಗಿದ್ದುದು ಕಂಡುಬರುತ್ತದೆ. ಆದರೆ ವಿಜಯನಗರ ಶಾಸನಗಳಲ್ಲಿ ಇದರ ಸುಳಿವು ದೊರೆಯುವುದಿಲ್ಲ. ಹಲವಾರು ಶಾಸನಗಳಲ್ಲಿ ಅಂಗಭೋಗಕ್ಕೆ ದತ್ತಿ ನೀಡಿದ ಉಲ್ಲೇಖಗಳಿವೆ. ಆದರೆ ಈ ಶಾಸನಗಳಲ್ಲಿ ಪ್ರತ್ಯೇಕವಾಗಿ ಅಂಗಭೋಗಕ್ಕೆಂದು ನೀಡಿರುವ ದತ್ತಿಗಳು ಸಿಗುವುದಿಲ್ಲ. ಸೇವೆಗಳಲ್ಲಿ ಅಂಗ-ರಂಗ ವೈಭೋಗಕ್ಕೆ ಅಥವಾ ಅಂಗ-ರಂಗ ವೈಭವಕ್ಕೆಂದು ಉಲ್ಲೇಖಿಸಲಾಗಿದೆ. ಅಂಗ ಮತ್ತು ರಂಗ ವೈಭವಗಳಿಗೆ ಸೇರಿಸಿ ಹಲವಾರು ದತ್ತಿಗಳು ಬಿಟ್ಟಿರುವರು. ರಂಗಭೋಗ ವೈಭವವನ್ನು ಪ್ರತ್ಯೇಕವಾಗಿ ಈ ಕೆಳಗೆ ವಿವರಿಸಲಾಗಿದೆ.

ರಂಗಭೋಗ : ದೇವರ ಎದುರಿಗೆ ನವರಂಗದಲ್ಲಿ ಅರ್ಪಿತವಾಗುವ ಸೇವೆಯೇ ರಂಗಭೋಗ. ಪುರಾಣಪಠಣ, ಹಾಡುಗಾರಿಕೆ, ವಾದ್ಯಸಂಗೀತ ಮತ್ತು ನೃತ್ಯಸೇವೆಗಳು ರಂಗಭೋಗದಲ್ಲಿ ಸೇರುತ್ತವೆ. ಇದು ದೇವಾಲಯಗಳ ಪೂಜಾವಿಧಿಯಲ್ಲಿ ಬಹಳ ಗಮನ ಸೆಳೆಯುವಂಥದು. ರಂಗಭೋಗ ರಂಗದ ಮೇಲೆ ನರ್ತಕಿ ಅಥವಾ ದೇವದಾಸಿಯ ನಾಟ್ಯ ಪ್ರದರ್ಶನದ ಮೂಲಕ ನಡೆಯುವ ಪೂಜೆ. ಇದು ಪ್ರದರ್ಶನ ಪೂಜೆಯಾದುದರಿಂದ ಸಂಗೀತಕ್ಕೆ ಹೆಚ್ಚು ಮಹತ್ವವಿದೆ.

ದೇವಾಲಯಗಳಲ್ಲಿ ಭಗವಂತನನ್ನು ಜೀವಂತ ವ್ಯಕ್ತಿ ಎಂಬಂತೆ ಭಾವಿಸಿ, ವೈಭವದಲ್ಲಿ ಬಾಳುವ ಒಬ್ಬ ವ್ಯಕ್ತಿಯ ಎಲ್ಲಾ ಭೋಗಗಳನ್ನು ಭಗವಂತನಿಗೆ ಅರ್ಪಿಸುವುದು ರೂಢಿಯಲ್ಲಿದೆ.[೪೦] ರಂಗಭೋಗ ದೇವರ ವಿಗ್ರಹದ ಎದುರಿನಲ್ಲಿ ನೃತ್ಯ, ಸಂಗೀತ ಮೊದಲಾದವುಗಳ ಮೂಲಕ ಸಲ್ಲಿಸುವ ಸೇವೆ.[೪೧] ಇದು ಮಧ್ಯಕಾಲೀನ ದಿನಗಳಲ್ಲಿ ದೇವಾಲಯದ ಪ್ರಮುಖ ಆಕರ್ಷಣೆಯ ಕೇಂದ್ರಬಿಂದುವಾಗಿತ್ತು. ರಂಗಭೋಗದ ಉಲ್ಲೇಖವಿರುವ ಪ್ರಥಮ ಶಾಸನವೆಂದರೆ ಸೊರಬ ತಾಲೂಕಿನ ಹೆಚ್ಚೆ ಗ್ರಾಮದ ನೀಲಕಂಠ ದೇವಾಲಯದ ಬಳಿ ದೊರಕಿರುವ ಶಾಸನವಾಗಿದೆ.[೪೨] ದೇವಾಲಯದಲ್ಲಿ ನಡೆಯುತ್ತಿದ್ದ ರಂಗಭೋಗ ಸೇವೆಯು ಕ್ರಿ.ಶ. ೬ನೇ ಶತಮಾನದಲ್ಲಿ ಪ್ರಾರಂಭಗೊಂಡು ಕ್ರಿ.ಶ. ೧೧ನೇ ಶತಮಾನದ ನಂತರ ಹೆಚ್ಚಿನ ಮನ್ನಣೆ ಗಳಿಸಿಕೊಂಡಿರುವುದು ತಿಳಿಯುತ್ತದೆ. ೧೧ನೇ ಶತಮಾನದಿಂದೀಚೆಗೆ

ಶಾಸನಗಳಲ್ಲಿ ದೇವದಾಸಿಯರಲ್ಲಿ 'ಪಾತ್ರ' ಮತ್ತು 'ಸೂಳೆ' ಎಂದು ಎರಡು ವಿಭಾಗ ಮಾಡಿದಂತೆ ತೋರುತ್ತದೆ. ಕ್ರಿ.ಶ. ೯೭೫ರ ಶಾಸನದಲ್ಲಿ ಐವರು ಸೂಳೆ ಮತ್ತು ಒಂದು ಪಾತ್ರಕ್ಕೆ ಪ್ರತ್ಯೇಕವಾಗಿ ದಾನಗಳನ್ನು ಕೊಟ್ಟಿದೆ.[೧೪೩] ಪಾತ್ರ ಮತ್ತು ಸೂಳೆಯರಿಬ್ಬರೂ ಸೇವೆಗಾಗಿ ಮೀಸಲಿದ್ದರೂ, ಅವರಿಬ್ಬರಲ್ಲಿ 'ಪಾತ್ರ' ಶಬ್ದವು ನೃತ್ಯ, ಗೀತಾದಿಗಳಲ್ಲಿ ಪರಿಣತರಾದವರನ್ನು, 'ಸೂಳೆ' ಶಬ್ದವು ಉಳಿದ ಸೇವಾಕಾರ್ಯ ಮಾಡುವವರೆಂದು ಸೂಚಿಸುತ್ತದೆ.

ದೇವಾಲಯ ದತ್ತಿಗಳಲ್ಲಿ 'ಸೂಳೆ' ಎಂಬ ಮಾತು ಬಂದರೆ ಅದು ದೇವರ ದಾಸಿಯೆಂದು ತಿಳಿಯಬೇಕಾಗುತ್ತದೆ. ದೇವಾಲಯಗಳಿಗೆ ಬಿಟ್ಟ ದಾನಶಾಸನಗಳಲ್ಲಿ ರಂಗಭೋಗಕ್ಕೆ ದಾನಬಿಟ್ಟ ವಿವರವಿರುವುದರಿಂದ ಹಲವು ದೇವಾಲಯಗಳಲ್ಲಿ ರಂಗಚಟುವಟಿಕೆಗಳು ನಡೆಯುತ್ತಿದ್ದವೆಂದು ಹೇಳಬಹುದು. ದೇವಾಲಯಗಳಲ್ಲಿ ಸಂಗೀತ, ನೃತ್ಯ, ಗೀತ, ವಾದ್ಯದ ಹಿನ್ನೆಲೆಯಲ್ಲಿ ಸ್ತ್ರೀಪ್ರವೇಶಕ್ಕೆ ಅವಕಾಶ ಸಿಕ್ಕಂತಾಯಿತು. ದೇವಾಲಯಕ್ಕೆ ಹೆಚ್ಚಿನ ಸಂಖ್ಯೆಯ ಹೆಣ್ಣುಗಳನ್ನು ಹೊಂದುವುದು ಹೆಮ್ಮೆಯ ಸಂಗತಿಯೆಂದು ಮಧ್ಯಕಾಲೀನ ದೇವಾಲಯಗಳು ತಿಳಿದಿದ್ದವು.[೧೪೪]

ದೇವಾಲಯಗಳಲ್ಲಿ ದೇವಸ್ಥಾನದ ಸೇವೆಗಾಗಿ ನರ್ತಕಿಯರ ನೇಮಕವನ್ನು ಮೊದಮೊದಲು ಸಂಪ್ರದಾಯವಾದಿಗಳಾದ ಬ್ರಾಹ್ಮಣರು ವಿರೋಧಿಸಿದರೂ, ರಾಜರು ಒತ್ತಾಯ ಪೂರ್ವಕವಾಗಿ ಇದನ್ನು ಜಾರಿಗೆ ತಂದುದರ ಫಲವಾಗಿ ಅವರ ಪ್ರತಿಭಟನೆಯಿಂದ ಯಾವ ಪ್ರಯೋಜನವೂ ಆಗಲಿಲ್ಲವೆಂದು ಅಲ್ತೇಕರರು ಅಭಿಪ್ರಾಯ ಪಡುತ್ತಾರೆ.[೧೪೫] ರಂಗಭೋಗವು ಸಮಾಜದಲ್ಲಿ ಮಾನ್ಯತೆ ಪಡೆದರೂ ಅಂದು ಈ ಸೇವೆ ಎಲ್ಲಾ ದೇವಾಲಯಗಳಲ್ಲಿ ಕಂಡುಬರುವುದಿಲ್ಲ. ದೇವಾಲಯವು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದರೆ ವಿವಿಧ ಸೇವೆಗಳನ್ನು, ಹೊಸ ಹೊಸ ಪೂಜಾವಿಧಾನಗಳನ್ನು ಸಂಗೀತ, ನೃತ್ಯ, ಉತ್ಸವಾದಿಗಳನ್ನು ಅಳವಡಿಸಿಕೊಳ್ಳುತ್ತಿದ್ದವು. ರಂಗಭೋಗದ ಸೇವೆಗೆ ದೇವಾಲಯಗಳು ಸಾಕಷ್ಟು ವಿಸ್ತಾರವಾಗಿರಬೇಕಾಗಿರುವುದರಿಂದ ಸೇವೆಯನ್ನು ನೋಡಲು ಬಂದ ಭಕ್ತಜನರಿಗೆ ಸ್ಥಳಾವಕಾಶ ಒದಗಿಸಲು ದೇವಾಲಯಗಳ ಕಟ್ಟಡಗಳಲ್ಲಿ ಹೊಸ ಭಾಗಗಳು ನಿರ್ಮಾಣವಾದವು. ರಂಗಭೋಗಕ್ಕೆ ಪ್ರತ್ಯೇಕವಾದ ಮಹಾರಂಗಮಂಟಪ, ನೃತ್ಯಮಂಟಪ, ಭಜನೆ ಮಂಟಪಗಳು ನಿರ್ಮಾಣಗೊಂಡು ನೃತ್ಯ, ಸಂಗೀತಗಳಿಗೆ ಮೀಸಲಾದವು.

ರಂಗಭೋಗಕ್ಕೆ ಸಂಬಂಧಪಟ್ಟಂತೆ ಶಾಸನಗಳಲ್ಲಿ ಬರುವ ದಾನ ವಿವರಣೆಗಳಿಂದ ದೇವಾಲಯಗಳಲ್ಲಿ ನಡೆಯುತ್ತಿದ್ದ 'ರಂಗಭೋಗ'ದ ಪ್ರಾಶಸ್ತ್ಯ ನಮಗೆ ಅರಿವಾಗುತ್ತದೆ. ದಾನಿಗಳಲ್ಲಿದ್ದ ಮಾನವೀಯತೆಯ ಭಾವನೆಗಳನ್ನು ಗಮನಿಸಿದಾಗ ರಂಗಭೋಗದ ಸೇವಾವರ್ಗದವರಿಗೆ ದೊರೆತಿದ್ದ ಮನ್ನಣೆಯು 'ಕಲೆಗೆ' ಆ ಕಾಲದ ಜನತೆ ನೀಡಿದ ಪ್ರೋತ್ಸಾಹವು ವ್ಯಕ್ತವಾಗುತ್ತದೆ.

ರಂಗಭೋಗ ಸೇವಾವರ್ಗದಲ್ಲಿ ಹಾಡುವವರು, ಪರಿಕಾರರು, ನೃತ್ಯಗಾರ್ತಿಯರು, ವಾದ್ಯಗಾರರು, ಸೂಳೆಯರಲ್ಲದೆ ಪಾತ್ರಗಳೂ ಪ್ರಮುಖವಾಗಿದ್ದರು. 'ಪಾತ್ರ' ಶಬ್ದವು ನೃತ್ಯಗೀತಾದಿಗಳಲ್ಲಿ ಪರಿಣಿತಳಾದವಳನ್ನು... ಸೂಚಿಸುತ್ತದೆ ಎಂದಿಟ್ಟುಕೊಳ್ಳಬಹುದೆಂದು[೧೪೬] ಚಿದಾನಂದಮೂರ್ತಿಯವರ ಅಭಿಪ್ರಾಯ. "ಪಾತ್ರದವಳು ದೇವರಿಗೆ ಎದುರಾಗಿ ನೃತ್ಯಸೇವೆ ಮಾಡುತ್ತಿದ್ದಳು. ನೃತ್ಯಸೇವೆಯೆ ವಿನಃ ಮತ್ತಾವ ಕೆಲಸಕ್ಕೂ ಇವಳು ಜವಾಬ್ದಾರಳಾಗಿರ

ಲಿಲ್ಲ."[೧೪೭] ಒಂದು ದೇವಾಲಯದಲ್ಲಿ ಇಂತಿಷ್ಟು ಪಾತ್ರದವರು ಇರಬೇಕೆಂಬ ನಿಯಮವಿರಲಿಲ್ಲ. ದೇವಾಲಯದ ಆರ್ಥಿಕಸ್ಥಿತಿ ಆ ದೇವಾಲಯದಲ್ಲಿ ರಂಗಭೋಗಕ್ಕಿದ್ದ ಪ್ರಾಮುಖ್ಯತೆ ಮೇಲೆ ಅವಲಂಬಿತವಾಗಿರುತ್ತದೆ. ಉದಾ : "ಗುಜಾರಾತದ ಪ್ರಸಿದ್ಧ ಸೋಮನಾಥ ದೇವಾಲಯದಲ್ಲಿ ಐನೂರು ನರ್ತಕಿಯರಿದ್ದರು."[೧೪೮] ಅದೇ ರೀತಿಯಲ್ಲಿ ತಾಂಜಾವೂರಿನ ರಾಜರಾಜನು ದೇವಸ್ಥಾನವನ್ನು ನಿರ್ಮಿಸಿ ದೇವರ ಸೇವೆಗಾಗಿ ನಾಲ್ಕೂನೂರು ಜನ ನರ್ತಕಿಯರನ್ನು ಒದಗಿಸಿದ್ದನೆಂದು ಕಂಡುಬರುತ್ತದೆ.[೧೪೯] ವಿಜಯನಗರ ಕಾಲದ ರಾಯನ ಆಸ್ಥಾನದಲ್ಲಿ ೧೦೦೦ ನರ್ತಕಿಯರು, ೪೫೦೦೦ ಪುರುಷ ಗಾಯಕರು ಇದೇ ವೃತ್ತಿಯಲ್ಲಿದ್ದರು[೧೫೦] ಎಂದು ಟಾಮ್ ಪೀರೇಸ್ ತನ್ನ ಕಥನದಲ್ಲಿ ಹೇಳಿದ್ದಾನೆ. ಇದರಿಂದ ತಿಳಿದುಬರುವುದೇನೆಂದರೆ ವಿಜಯನಗರದಲ್ಲಿ ನರ್ತನ ಮತ್ತು ಸಂಗೀತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ದೇವಾಲಯ ಮತ್ತು ಆಸ್ಥಾನಗಳಲ್ಲಿ ಇವರಿಗೆ ತಮ್ಮ ಸೇವೆ ಮಾಡಲು ಅವಕಾಶ ನೀಡಿದ್ದುದು ಕಂಡುಬರುತ್ತದೆ.

ವಿಜಯನಗರದ ದೇವದಾಸಿಯರು ದೇವಾಲಯಗಳ ಪೂಜಾಸಮಯದಲ್ಲಿ ಸೇವೆಸಲ್ಲಿಸುತ್ತಿದ್ದರು. "ದೇವರ ಉತ್ಸವಗಳಲ್ಲಿ ವೇಶ್ಯೆಯರ ಮೇಳವಿರುತ್ತಿತ್ತು. ಪ್ರಭುಗಳು ಭಗವತ್ಸನ್ನಿಧಿಯಲ್ಲಿಯೂ ದೇವದಾಸಿಯರ ಲಾಸ್ಯ ನೈಪುಣ್ಯಗಳನ್ನು ಮೆಚ್ಚಿ ಅವರಿಗೆ ಬಹುಮಾನಗಳನ್ನಿತ್ತು ಗೌರವಿಸುತ್ತಿದ್ದರು"[೧೫೧] ಎಂದು ದೇವದಾಸಿಯರ ಬಗ್ಗೆ ರಾಯ ನಮಗೆ ವಿವರವಾದ ಮಾಹಿತಿಯನ್ನು ತನ್ನ ಗ್ರಂಥ ಆಮುಕ್ತಮಾಲ್ಯದದಲ್ಲಿ ವಿವರಿಸಿದ್ದಾನೆ. ಕನಕದಾಸರು ವಿಜಯನಗರದ ವಾರನಾರಿಯರಿಗೆ, ದೇವದಾಸಿಯರಿಗೆ ಸಮಾಜದಲ್ಲಿ ಗೌರವ ಸ್ಥಾನವಿತ್ತು ಎಂದು ಹೇಳಿ, ಕೃಷ್ಣದೇವರಾಯನ ರಾಜಧಾನಿಯ ಬೀದಿಯೊಂದರಲ್ಲಿ ವಾರಾಂಗನೆಯರ ಮನೆಗಳು ಶೋಭಿಸುತ್ತಿದ್ದವೆಂದು ತನ್ನ ಕೃತಿ 'ಮೋಹನತರಂಗಿಣಿ'ಯಲ್ಲಿ ತಿಳಿಸಿರುವನು.[೧೫೨]

ರಾಯನು ಸಂಗೀತ ಮತ್ತು ನೃತ್ಯಕ್ಕೆ ಹೆಚ್ಚಿನ ಮನ್ನಣೆ ನೀಡಿದ್ದನು. ದೇವಾಲಯದಲ್ಲಿ ಹೆಚ್ಚು ಶಿಲ್ಪಗಳು ಸಂಗೀತಕ್ಕೆ ಸಂಬಂಧಿಸಿದವು. ಲಲಿತಕಲೆಗಳಲ್ಲಿ ಒಂದಾದ ಸಂಗೀತ ಕಲೆಯೂ ಕೃಷ್ಣರಾಯನ ಆದರಾಭಿಮಾನ ಗಳಿಗೆ ಪಾತ್ರವಾಗಿ ಆಶ್ರಯವನ್ನು ಹೊಂದಿ ಅಭಿವೃದ್ಧಿಗೊಂಡಿತ್ತು. ರಾಯನು ಸಂಗೀತ ಪ್ರೇಮಿಯಷ್ಟೆ ಅಲ್ಲದೆ ಶಾಸ್ತ್ರೀಯ ಸಂಗೀತವನ್ನು ಅಭ್ಯಸಿಸಿ ಪ್ರಾವೀಣ್ಯತೆಯನ್ನು ಪಡೆದಿದ್ದನು. ಕೃಷ್ಣರಾಯನು ಅಪತ್ರಿಮ ಸಂಗೀತಗಾರನೆಂದು ಕೃಷ್ಣಾಪುರ ಶಾಸನಗಳಲ್ಲಿ ಹೇಳಿದೆ.[೧೫೩]

ರಾಯ ಕಾಲದಲ್ಲಿ ವಿಜಯನಗರಕ್ಕೆ ಬಂದ ಕ್ರಿಸ್ಟಾವೊ-ಡಿ-ಫಿಗ್ಯೆರೆಡೊ ಎಂಬ ಪೋರ್ಚುಗೀಸ್ ರಾಯಭಾರಿಯು ರಾಯನಿಗೆ ಕೆಲವು ಸಂಗೀತ ವಾದ್ಯಗಳನ್ನು ಕೊಟ್ಟನೆಂದು ಅದರಿಂದ ರಾಯನು ಸಂತೋಷಗೊಂಡನೆಂದು ಪೋರ್ಚುಗೀಸ್ ಪ್ರವಾಸಿ ಪಾಯೆಸ್ ಹೇಳಿರುವನು.[೧೫೪] ಇದರಿಂದ ರಾಯನು ಸ್ವತಃ ಸಂಗೀತ ಪ್ರೇಮಿಯಾಗಿದ್ದು ತನ್ನ ಕಾಲದಲ್ಲಿ ಸಂಗೀತಕ್ಕೆ ಹೆಚ್ಚಿನ ರಾಜಾಶ್ರಯವನ್ನು ನೀಡಿದ್ದನೆಂದು ತಿಳಿದುಬರುತ್ತದೆ. ದೇವಾಲಯಗಳಲ್ಲಿ ನೃತ್ಯ ಮತ್ತು ಸಂಗೀತಕ್ಕೆ ಸಮಾನವಾದ ಪ್ರೋತ್ಸಾಹ ನೀಡಲಾಗಿತ್ತು. ನೃತ್ಯವೂ ಕೃಷ್ಣದೇವರಾಯನ ಪೋಷಣೆಯನ್ನು ಪಡೆದಿತ್ತು. ರಾಯನ ಸಂಗೀತ ಗುರುವಾಗಿದ್ದ ಭಂಡಾರಂ ಲಕ್ಷ್ಮೀನಾರಾಯಣನು ಆಸ್ಥಾನದಲ್ಲಿ ನಾಟ್ಯಚಾರ್ಯನೂ ಆಗಿದ್ದನು. ರಾಯನ ಕಾಲದ ನೃತ್ಯಕಲೆಯ ಸ್ಥಿತಿಯನ್ನು ಅಂದಿನ ದೇವಾಲಯಗಳ ಶಿಲ್ಪಗಳಿಂದಲೂ, ಸಾಹಿತ್ಯ ಕೃತಿಗಳಿಂದಲೂ ತಿಳಿದುಕೊಳ್ಳಬಹುದು.

ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಸಂಗೀತ ಮತ್ತು ನೃತ್ಯಗಳು ರಂಗಭೋಗದ ಭಾಗಗಳಾಗಿದ್ದವು. ವಿಠಲ ಸ್ವಾಮಿ ದೇವಾಲಯದ ಸುತ್ತಲಿನ ಗೋಡೆಗಳ ಕೆಳಗಡೆಯಲ್ಲಿರುವ ಉಬ್ಬುಶಿಲ್ಪಗಳು ಸಂಗೀತ, ನೃತ್ಯಗಳಲ್ಲಿ ನಿರತವಾಗಿರುವಂತೆ ರೂಪಿತವಾಗಿವೆ. ಇಲ್ಲಿ ಕೆಲವು ಉಬ್ಬುಶಿಲ್ಪಗಳಲ್ಲಿ ಒಬ್ಬ ರಾಜನು, ಪ್ರಾಯಶಃ ಕೃಷ್ಣರಾಯನು ನರ್ತಕಿಯರ ಕಲಾನೈಪುಣ್ಯವನ್ನು ನೋಡಿ ಮೆಚ್ಚುತ್ತಾ ಕುಳಿತಿರುವಂತಿದೆ.[೨೫೫]

ವಿಠಲ ದೇವಾಲಯದ ಮಹಾರಂಗಮಂಟಪದ ಎಡಕ್ಕೆ ಉತ್ತರಕ್ಕಿರುವ ಒಂದು ಮಂಟಪದ ಮಧ್ಯಭಾಗದಲ್ಲಿ ಸಿಂಹಾಸನಕ್ಕಾಗಿರುವ ಒಂದು ಅಟ್ಟಣೆಯಿದೆ. ಇಲ್ಲಿ ಕುಳಿತುಕೊಂಡು ರಾಜನ ಸಮ್ಮುಖದಲ್ಲಿ ಸಂಗೀತಕೂಟಗಳು, ನೃತ್ಯಪ್ರದರ್ಶನಗಳೂ ನಡೆಯುತ್ತಿದ್ದವೆಂದು ಊಹಿಸಬಹುದು. ರಂಗಭೋಗದಲ್ಲಿ ವಾದ್ಯಗಾರರು ತಾಳ, ಮದ್ದಳೆ, ಆವುಜ, ಢಕ್ಕೆ, ತಂಬೂರಿ, ವೀಣೆ, ವೇಣು ಮೊದಲಾದವನ್ನು ನುಡಿಸುತ್ತಿದ್ದರು. ವಿಜಯನಗರ ಕಾಲದ ವಾದ್ಯಗಳನ್ನು ರಾಯನು ತನ್ನ ಕಾವ್ಯವಾದ ಆಮುಕ್ತಮಾಲ್ಯದ ಅಧ್ಯಾಯ ೪ ಹಾಗೂ ೩೫ರಲ್ಲಿ ಹೇಳಿದ್ದಾನೆ. ಇದರಲ್ಲಿ ದಂಡೆ, ತಾಳ, ಬುರುಮ, ಕಿನ್ನರ, ಸನ್ನಗಾಳೆ, ವೀಣೆ, ಮುಖವೀಣೆ, ವಾಸಕ್ರೋಲು, ಡೋಲು, ಮೌರಿ, ಭೇರಿ, ಗೌರು, ಗುಮ್ಮಟ, ಡುಕ್ಕ, ಡಕ್ಕಿ, ಚೆಕ್ಕಿ, ಚುಯ್ಯಾಂಕಿ, ಲೋನಗು, ನಸಂಖ್ಯಾತ, ವಾದಿತ್ರ, ತ್ರಿತಯ, ಪರಂಪರಲು... ಮೃದಂಗಾದಿ ವಾದ್ಯಗಳು ಹೆಚ್ಚಾಗಿ ಬಳಕೆಯಲ್ಲಿದ್ದವೆಂದು ಹೇಳಿರುವನು.

ರಾಯನ ಕಾಲದ ದೇವಾಲಯಗಳಲ್ಲಿ ಅಂಗರಂಗಭೋಗಕ್ಕೆ ಹೆಚ್ಚಿನ ಮನ್ನಣೆ ನೀಡಲಾಗಿತ್ತು. ಇವು ಅರಸರ ಔದಾರ್ಯ, ಜನರ ಪ್ರೋತ್ಸಾಹ, ದಾನಿಗಳ ಉದಾರತೆಯಿಂದ ದೇವಾಲಯಗಳು ಸಂಗೀತ ಮತ್ತು ನೃತ್ಯದ ಕೇಂದ್ರಗಳಾಗಿದ್ದವು. ಶಾಸನಗಳಲ್ಲಿ ರಂಗಭೋಗ ವರ್ಗದವರ ಬಗ್ಗೆ ಮಾಹಿತಿ ದೊರಕುವುದಿಲ್ಲ. ದೇವಾಲಯಗಳಲ್ಲಿ ರಂಗಭೋಗವನ್ನು ನಡೆಸಿಕೊಂಡು ಹೋಗಲು ದಾನದತ್ತಿ ನೀಡಿದ್ದು ಮಾತ್ರ ಗೊತ್ತಾಗುತ್ತದೆ. ಅಲ್ಲಿನ ಕಾರ್ಯಕಲಾಪಗಳನ್ನು ಉಲ್ಲೇಖಿಸುವ ಶಾಸನಗಳು ಕಂಡುಬರುವುದಿಲ್ಲ. ಸಂಗೀತ ಮತ್ತು ನೃತ್ಯಕ್ಕೆ ನೀಡಿದ ಪ್ರಾಮುಖ್ಯತೆಯನ್ನು ದೇವಾಲಯಗಳಲ್ಲಿನ ಉಬ್ಬುಶಿಲ್ಪಗಳಿಂದ ಕಂಡುಕೊಳ್ಳಬಹುದು.

ರಾಯನ ಕಾಲದಲ್ಲಿ ದೇವಾಲಯಗಳಿಗೆ ಹೊಸ ಮಹಾಮಂಟಪವನ್ನು ಸೇರಿಸಲಾಯಿತು. ಹಳೆಯ ದೇವಾಲಯಗಳಿಗೆ ಈ ಹೊಸಭಾಗವನ್ನು ಅಳವಡಿಸಿದರೆ, ಹೊಸ ದೇವಾಲಯಗಳ ನಿರ್ಮಾಣದಲ್ಲಿ ಈ ಭಾಗವನ್ನು ತಪ್ಪದೆ ಅಳವಡಿಸುತ್ತಿದ್ದರು. ಉದಾ : ಹಂಪೆಯ ವಿಠಲದೇವಾಲಯದಲ್ಲಿ ರಾಯನು ಮಹಾರಂಗಮಂಟಪವನ್ನು ಹಾಗೂ ಬಾಲಕೃಷ್ಣ, ಅನಂತಪದ್ಮನಾಭ ದೇವಾಲಯಗಳಲ್ಲಿ ದೊಡ್ಡದಾದ ಮಹಾಮಂಟಪವನ್ನು ಕಟ್ಟಿಸಿದುದು ಕಂಡುಬರುತ್ತದೆ. ಈ ಮಹಾಮಂಟಪದ ರಚನೆ ರಂಗಭೋಗಕ್ಕೆ ಸೀಮಿತವಾಗಿತ್ತು. ಅಲ್ಲಿ ಸಂಗೀತ ಮತ್ತು ನೃತ್ಯ ಪ್ರದರ್ಶನಗಳು ನಡೆಯುತ್ತಿದ್ದುದರಿಂದ ವಿಠಲದೇವಾಲಯದ ಮಹಾಮಂಟಪದಲ್ಲಿ ಸಪ್ತಸ್ವರ ಹೊರಡಿಸುವ ಸಂಯುಕ್ತ ಸಂಗೀತ ಸ್ತಂಭಗಳನ್ನು ಅಳವಡಿಸಿದ್ದಾರೆ. ಈ ಸ್ತಂಭಗಳಲ್ಲಿ ವಾದ್ಯಗಾರರ ಶಿಲ್ಪಗಳು, ನಾಟ್ಯಮಣಿಯರ ಶಿಲ್ಪಗಳನ್ನು ಬಹು ಸುಂದರ ಸಹಜ ರೀತಿಯಲ್ಲಿ ಕೆತ್ತಲಾಗಿದೆ. ಮಂಟಪದ ಅಧಿಷ್ಠಾನದ ಚಿತ್ರಪಟ್ಟಿಕೆಗಳಲ್ಲಿ ಕೋಲಾಟ, ನೃತ್ಯಭಂಗಿಯ ಮತ್ತು ವಾದ್ಯನುಡಿಸುವವರ ಉಬ್ಬುಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ.

ದೇವಾಲಯಗಳಲ್ಲಿ ನಡೆಯುವ ರಂಗಭೋಗಕ್ಕೆ ದಾನಿಗಳು ಹಲವಾರು ದಾನದತ್ತಿಗಳನ್ನು ನೀಡಿದುದು ಅನೇಕ ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಅಂತಹ ಶಾಸನಗಳು ಇಂತಿವೆ : ರಾಯನ ಪುರೋಹಿತನಾದ ರಂಗನಾಥ ದೀಕ್ಷಿತನು ನಾಗಲಾದೇವಿಪುರ ಎಂಬ ಅಗ್ರಹಾರ ಕಟ್ಟಿಸಿ ಅದರಲ್ಲಿ ನಾಗೇಂದ್ರಶಯನ ದೇವಾಲಯವನ್ನು ನಿರ್ಮಿಸಿದನು. ಈ ಪೂಜೆ ಮತ್ತು ಅಂಗರಂಗ ವೈಭವಕ್ಕೆ ಹಲವು ವೃತ್ತಿಯನ್ನು ಹಂಚಿದನು.[೧೫೬] ಈ ದಾನ ಶಾಸನಗಳಲ್ಲಿ ದೇವಾಲಯದ ನಿರ್ಮಾಣ, ಇತರ ಸೇವೆಗಳ ಜೊತೆಯಲ್ಲಿ ಅಂಗರಂಗವೈಭೋಗಕ್ಕೆ ದತ್ತಿಯನ್ನು ಬಿಟ್ಟಿದ್ದಾರೆ. ವಿಶೇಷ ದಿನಗಳಲ್ಲಿ ಮತ್ತು ತಮ್ಮ ಹಿರಿಯರಿಗೆ ಪುಣ್ಯವಾಗಲಿ ಎಂದು ಭಕ್ತಿಯಿಂದ ಸೇವೆಸಲ್ಲಿಸುವುದಕ್ಕೆ ದಾನದತ್ತಿಯನ್ನು ನೀಡಿದ ಉಲ್ಲೇಖಗಳೂ ಇವೆ.

"ಗೌರೆದಣ್ಣಾಯಕರ ನಾರಾಯಣಯ್ಯ ಎಂಬುವವನು ನಾರಸಿಂಹಪುರ ಎಂಬ ಪ್ರತಿನಾಮವಿದ್ದ ಭೈರಾಪುರ ಗ್ರಾಮವನ್ನು ದತ್ತಿಯಾಗಿ ಆಲಂಪುರ ಯೋಗಾನಂದನಾರಸಿಂಹ ದೇವರ ಸೇವೆಗೆ ಶ್ರೀಯಂಗದ ಅಮೃತಪಡಿ, ಅಂಗರಂಗವೈಭವಕ್ಕೆ ದತ್ತಿನೀಡಿದ್ದನು."[೧೫೭] ಕೃಷ್ಣದೇವರಾಯನು ಉದಯಗಿರಿಯಿಂದ ತಂದ ಬಾಲಕೃಷ್ಣದೇವರ ಮೂರ್ತಿಯನ್ನು ಕೃಷ್ಣಾಪುರದಲ್ಲಿ ಪ್ರತಿಷ್ಠೆ ಮಾಡಿಸಿ ದೇವಾಲಯವನ್ನು ಕಟ್ಟಿಸಿದನು. ದೇವರ ನಿತ್ಯಪೂಜೆ, ಅಂಗರಂಗವೈಭವಕ್ಕೆ ಅನೇಕ ಗ್ರಾಮಗಳನ್ನು ದಾನ ಮಾಡಿದನು.[೧೫೮] ಮಂಡಳೇಶ್ವರ ಕೃಷ್ಣವರ್ಮನು ಒಡೆಯೂರು ಸಿಂಧುಹರ ಶ್ರೀ ಜನಾರ್ಧನ ದೇವರ ಅಂಗರಂಗಭೋಗಕ್ಕೆ ರಾಮಸೆಟ್ಟಿಪುರ ಗ್ರಾಮಕ್ಕೆ ಸಲ್ಲುವ ಪ್ರಾಕುಪ್ರಮಾಣ ಸುವರ್ಣಾದಾಯಕ್ಕೆ ಸಲ್ಲುವ ಸರ್ವಮಾನ್ಯ ಸಹಿತವಾಗಿ ಧಾರೆಯೆರೆದುಕೊಟ್ಟ ಧರ್ಮಶಾಸನವಾಗಿದೆ.[೧೫೯] ಇಲ್ಲಿ ರಂಗಭೋಗವೈಭವಕ್ಕೆ ಅರಸರು, ಪುರೋಹಿತರು, ಮಂಡಳೇಶ್ವರರು, ಭಂಡಾರದವರು, ಸಾಮಂತರು, ಸಾಮಾನ್ಯ ಜನರು ಕೂಡಾ ದಾನದತ್ತಿ ನೀಡಿರುವುದು ವಿಶೇಷವಾಗಿ ಕಂಡುಬರುತ್ತದೆ. ಈ ಶಾಸನಗಳ ಹಿನ್ನೆಲೆಯಲ್ಲಿ ದಾನಿಯು ದಾನ ಅಥವಾ ದತ್ತಿಯನ್ನು ನೀಡುವಾಗ ಒಂದೇ ಉದ್ದೇಶದಿಂದ ನೀಡಿರುವುದು ಕಂಡುಬರುವುದಿಲ್ಲ. ಹಲವು ಸೇವೆಗಳನ್ನು ಒಟ್ಟಿಗೆ ಸೇರಿಸಿ ಎಲ್ಲಾ ಕಾರ್ಯಗಳನ್ನು ದೇವಾಲಯಗಳಲ್ಲಿ ನಡೆಸಿಕೊಂಡು ಬರಲು ತಮ್ಮ ಶಕ್ತಿಗೆ ಅನುಸಾರವಾಗಿ ದತ್ತಿಯನ್ನು ನೀಡಿರುವುದು ತಿಳಿದುಬರುತ್ತದೆ.

ಕೃಷ್ಣದೇವರಾಯನು ಆಹೋಬಲಂನ ನರಸಿಂಹ ದೇವರಿಗೆ ಅಮೃತಪಡಿ ನೈವೇದ್ಯ, ಅಂಗರಂಗವೈಭವಕ್ಕೆ ಮುಧೂರು ಗ್ರಾಮವನ್ನು ದತ್ತಿಯಾಗಿ ನೀಡಿರುವನು.[೧೬೦] ಪುಲಿವೆಂಡ್ಲು ರಂಗನಾಥಸ್ವಾಮಿ ದೇವಾಲಯದ ದೇವರ ನೈವೇದ್ಯ, ಅಂಗರಂಗವೈಭವಕ್ಕೆ ಬಿಜವಾಡದ ಮಾಧವವರ್ಮನು ಕುಂಡಲ್ಕೊಡು ಗ್ರಾಮವನ್ನು ಸಮರ್ಪಿಸಿದ್ದನು.[೧೬೧] ಪೆದಸಿಂಗಮನಾಯಕನು ದುಗ್ಗಿ ವೆಂಕಟೇಶ್ವರ ದೇವಾಲಯದ ಅಂಗರಂಗವೈಭವಕ್ಕೆ ಗ್ರಾಮವನ್ನು ದತ್ತಿಯಾಗಿ ನೀಡಿದ್ದನು.[೧೬೨] ಪಡವೀಟಿ ಅನ್ನಾಜಯ್ಯನು ಕತ್ರಕಾಂಡ್ಲ ಚೆನ್ನಕೇಶ್ವರ ದೇವರ ಅಂಗರಂಗವೈಭವಕ್ಕೆ ಚಿನ್ನವರಂ ಗ್ರಾಮವನ್ನು ಬಿಟ್ಟಿರುತ್ತಾನೆ.[೧೬೩] ಭಂಡಾರದ ತಿಪ್ಪಯ್ಯನು ಕೊಪಣದ ಚೆನ್ನಕೇಶವ ದೇವರಿಗೆ ಹಿರಿಯಸಿನ್ನೋಗಿ ಗ್ರಾಮವನ್ನು ದೇವರ ಅಮೃತಪಡಿ, ಅಂಗರಂಗವೈಭವಕ್ಕೆ ದತ್ತಿಯಾಗಿ ಸಮರ್ಪಿಸಿದ್ದನು."[೧೬೪] "ರಾಯನು ಕಂಚಿಯ ವರದರಾಜ ಪೆರುಮಾಳ್ ದೇವರ ಅಂಗರಂಗವೈಭವಕ್ಕೆ, ನಿತ್ಯನೈವೇದ್ಯ ಮತ್ತು ದೀಪರಾಧನೆಗೆ ದತ್ತಿಯನ್ನು ನೀಡಿದನು.[೧೬೫] ಅದೇ ರೀತಿ ರಾಯನು ತನ್ನ ತಂದೆ-ತಾಯಿಗಳಿಗೆ ಪುಣ್ಯವಾಗಬೇಕೆಂದು ಹಂಪಿಯ ವಿಠಲದೇವಾಲಯದ

ಅಂಗ-ರಂಗವೈಭೋಗಕ್ಕೆ ವಿರುಪಾಪುರ ಗ್ರಾಮವನ್ನು ಧರ್ಮವಾಗಿ ನೀಡಲಾಗಿದೆ."[೯೬] ಈ ಮೇಲಿನ ಎಲ್ಲಾ ಶಾಸನಗಳ ಹಿನ್ನೆಲೆಯಲ್ಲಿ ರಂಗವೈಭವವಲ್ಲದೆ ಹಲವು ಸೇವೆಗಳಿಗೆ ದತ್ತಿಗಳನ್ನು ನೀಡುತ್ತಿದ್ದುದನ್ನು ಕಾಣಬಹುದು.

ರಂಗಭೋಗ ಸೇವೆಯು ಪ್ರಮುಖ ದೇವಾಲಯಗಳಲ್ಲಿ ನಡೆದುಕೊಂಡು ಬರುತ್ತಿದ್ದಿತು. ವಿಜಯನಗರ ಕಾಲದ ಎಲ್ಲಾ ದೇವಾಲಯಗಳಲ್ಲಿ ರಂಗಭೋಗ ನಡೆಯುತ್ತಿದ್ದುದು ತಿಳಿಯುವುದಿಲ್ಲ. ದಾನಿಗಳು ದತ್ತಿಯನ್ನು ನೀಡುವಾಗ ಹಿಂದೆ ಇದ್ದ ಸೇವೆಗಳನ್ನು ಮುಂದುವರಿಸಿಕೊಂಡು ಹೋಗಲು, ದೇವಾಲಯಗಳಿಗೆ ದಾನದತ್ತಿಯನ್ನು ಬಿಟ್ಟಿದ್ದಾರೆಯೇ ವಿನಃ ರಂಗಭೋಗದ ಸೇವಾವರ್ಗದವರಿಗೆ ನೇರವಾಗಿ ದತ್ತಿಯನ್ನು ನೀಡಿರುವುದಿಲ್ಲ.

೪. ಸಾಂಸ್ಕೃತಿಕ ಚಿತ್ರಣ

ಮಾನವನು ಸಮಾಜ ಜೀವಿಯಾಗಿದ್ದು, ಸಾಮಾಜಿಕವಾಗಿ ಒಗ್ಗೂಡುವ ಕ್ರಿಯೆಗಳೇ ಸಾಂಸ್ಕೃತಿಕ ಚಟುವಟಿಕೆಗಳು. ಇದರಲ್ಲಿ ಬದುಕಿನ ಕಷ್ಟಗಳು ಹಾಗೂ ಮನಸ್ಸಿನ ಬೇಸರಗಳನ್ನು ನಿವಾರಿಸಿಕೊಳ್ಳಲು ಉತ್ಸವಗಳು ಅವಶ್ಯಕವಾಗಿವೆ. ಹೀಗಿರುವಲ್ಲಿ ದೇವತಾ ಸಾನ್ನಿಧ್ಯದಲ್ಲಿ ನೆರವೇರುವ ಉತ್ಸವಗಳಲ್ಲಿ ಜನರು ಭಾಗವಹಿಸುವುದರಿಂದ ಧಾರ್ಮಿಕ ಸಹಿಷ್ಣುತೆ ಮೂಡುತ್ತಿದ್ದಿತು. ವಿಜಯನಗರ ಸಾಮ್ರಾಜ್ಯದಲ್ಲಿ ದೇವಾಲಯಗಳು ಸಾಂಸ್ಕೃತಿಕ ಚಟುವಟಿಕೆಗಳನ್ನು ಧರ್ಮ ಪ್ರಚಾರಕ್ಕಾಗಿ ಉಪಯೋಗಿಸಿಕೊಂಡಿರುವುದನ್ನು ಕಾಣಬಹುದು.

ಹಿಂದೂ ಸಂಸ್ಕೃತಿಯ ಎಲ್ಲಾ ವೈಶಿಷ್ಟ್ಯಗಳನ್ನು ಸಂರಕ್ಷಿಸಿ, ಪುನಃಶ್ಚೇತನಗೊಳಿಸಿ ವೈಭವೋಪೇತವಾಗಿ ಮಾಡುವುದು ಅರಸರ ಪ್ರಮುಖ ಧ್ಯೇಯವಾಗಿತ್ತು. ಈ ದಿಶೆಯಲ್ಲಿ ದೇವಾಲಯಗಳು ವಿಶೇಷವಾಗಿ ಹಬ್ಬ, ಉತ್ಸವ, ರಥೋತ್ಸವಗಳನ್ನು ವಿವಿಧ ರೀತಿಯ ಧಾರ್ಮಿಕ ವಿಧಿಗಳನ್ವಯ ಪ್ರಚುರಪಡಿಸಿದವು.

ಸಾಮಾನ್ಯವಾಗಿ ಎಲ್ಲ ಉತ್ಸವಗಳಿಗೂ ಧಾರ್ಮಿಕ ಹಿನ್ನೆಲೆ ಹಾಗೂ ಹಬ್ಬಗಳ ಸಂಬಂಧವಿದೆ. ದೇವಸ್ಥಾನಗಳ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳು, ಮಕರಸಂಕ್ರಾತಿ, ಗೋಕುಲಾಷ್ಟಮಿ ಮೊದಲಾದ ಪರ್ವದಿನಗಳಲ್ಲಿ ನಡೆಯುತ್ತಿದ್ದ ಉತ್ಸವಗಳು ಅರಸರು, ಭಕ್ತಾದಿಗಳೂ ಕೊಟ್ಟ ದಾನದತ್ತಿಗಳಿಂದ ನಡೆಯುತ್ತಿದ್ದವೆಂಬುದಕ್ಕೆ ವಿಪುಲವಾದ ಶಾಸನಾಧಾರಗಳಿವೆ. ಈ ಉತ್ಸವಗಳೆಲ್ಲವೂ ಬಹುಮಟ್ಟಿಗೆ ಸಾರ್ವಜನಿಕ ಉತ್ಸವಗಳೇ ಆಗಿದ್ದವು. ದೇವಾಲಯದಲ್ಲಿ ನಡೆಯುವ ಉತ್ಸವಗಳು ಸಂದರ್ಭಕ್ಕೆ ತಕ್ಕಂತೆ ಭಕ್ತಾದಿಗಳಿಂದ ಆಗಾಗ ನಡೆಯುತ್ತಿದ್ದವು.

"ನ ದೇವಾಲಯೋ ಉತ್ಸವೈರ್ವಿನಾ" ಇದು ಶಾಸ್ತ್ರಗಳ ಹೇಳಿಕೆ. ಉತ್ಸವ ಇಲ್ಲದೆ ದೇವಸ್ಥಾನ ಇಲ್ಲ. ಉತ್ಸವ ಎಂದರೆ, 'ಉತ್ ಸಿತೇ' ಉತ್ ಎಂದರೆ ಪ್ರಸರಣ ಹರಡುವುದು. ಉತ್ಸವ ದೇವಾಲಯದಲ್ಲಿ ಕೇಂದ್ರಿಕೃತವಾಗಿರತಕ್ಕ ಶಕ್ತಿ. ಅದು ಅಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಕಲಾತ್ಮಕ ಸ್ವರೂಪದ್ದು. ಈ ಎಲ್ಲಾ ವಿಧವಾದ ಶಕ್ತಿಗಳ ಸಮುಚ್ಛಯವೇ ದೇವಾಲಯಗಳು.[೯೭] 'ಉತ್ಸವ'ಕ್ಕೆ ಕನ್ನಡ ನಿಘಂಟಿನಲ್ಲಿ ಹಬ್ಬ, ಸಮಾರಂಭ, ಸಂಭ್ರಮ, ಮೆರವಣಿಗೆ ಎಂಬ ಅರ್ಥಗಳಿವೆ.[೯೮] ವಿಜಯನಗರ ಕಾಲದಲ್ಲಿ ಹಬ್ಬಗಳ ಆಚರಣೆ ಜನರ ಧಾರ್ಮಿಕ ಜೀವನದ ಸಂಕೇತವಾಗಿ ಪರಿಗಣಿತವಾಗಿದ್ದವು. ಸಾಂಸ್ಕೃತಿಕವಾಗಿ ಹಬ್ಬ ಮತ್ತು ಉತ್ಸವಗಳ

ಆಚರಣೆಯು ಮಹತ್ವದ್ದಾಗಿದೆ. ಹಬ್ಬ ಮತ್ತು ಉತ್ಸವಗಳಲ್ಲಿ ಕೆಲವನ್ನು ನಾಡಹಬ್ಬ, ಸಾರ್ವಜನಿಕ ಹಬ್ಬ, ಪಂಥೀಯ ಹಬ್ಬ ಉತ್ಸವಗಳೆಂದು ಗುರುತಿಸಬಹುದು.

ವಿಜಯನಗರ ಕಾಲದ ಹಬ್ಬ ಮತ್ತು ಉತ್ಸವಗಳನ್ನು ತಿಳಿದುಕೊಳ್ಳಲು ಸಮಕಾಲೀನ ಶಾಸನಾಧಾರಗಳು, ವಿದೇಶಿಪ್ರವಾಸಿಕಥನಗಳು, ಅಂದಿನ ಕವಿಗಳ ಸಾಹಿತ್ಯ ಕೃತಿಗಳು ನೆರವಾಗಿವೆ. ವಿಜಯದಶಮಿ, ದೀಪಾವಳಿ, ವಸಂತೋತ್ಸವ, ಯುಗಾದಿ, ರಥಸಪ್ತಮಿ, ಮಕರಸಂಕ್ರಾಂತಿ, ಗೋಕುಲಾಷ್ಟಮಿ, ಶ್ರೀಜಯಂತಿ, ರಾಮನವಮಿ, ಏಕಾದಶಿ, ಚತುರ್ಮಾಸವ್ರತ, ಕಾರ್ತೀಕಮಾಸ, ಧನುರ್ಮಾಸ, ಸೋಮವಾರ ವ್ರತಗಳು, ಶ್ರೀರಾಮ, ನರಸಿಂಹ, ಕೃಷ್ಣ, ವಾಮನಜಯಂತಿಗಳನ್ನು ಅಂದು ಆಚರಿಸುತ್ತಿದ್ದುದು ತಿಳಿದುಬರುತ್ತದೆ. ಅಲ್ಲದೆ ದೇವಾಲಯಗಳಲ್ಲಿ ನೈಮಿತ್ತಿಕೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ, ಪುಷ್ಯಯಾಗ, ತೆಪ್ಪೋತ್ಸವ, ರಥೋತ್ಸವಗಳನ್ನು ನಡೆಸುತ್ತಿದ್ದ ಉಲ್ಲೇಖಗಳು ಸಿಗುತ್ತವೆ.

ದೇವಾಲಯಗಳು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಅರಸರು ಇತ್ತ ಪ್ರೋತ್ಸಾಹವೇ ಪ್ರಮುಖ ಕಾರಣವಾಗಿತ್ತು. ಕೃಷ್ಣದೇವರಾಯನ ಕಾಲದಲ್ಲಿ ಮಹಾನವಮಿ ಮಂಟಪವನ್ನು ನಿರ್ಮಿಸಲಾಯಿತು. ರಾಯನ ಕಾಲದಲ್ಲಿ ನವರಾತ್ರಿ ಉತ್ಸವವನ್ನು ಧಾರ್ಮಿಕವಾಗಿಯಷ್ಟೇ ಅಲ್ಲದೆ ರಾಜಕೀಯ ಪ್ರತಿಷ್ಠೆಯ ಸಂಕೇತವಾಗಿಯೂ ಪರಿಗಣಿಸಲಾಗಿತ್ತು.[೨೪] ದಾಸರು ತಮ್ಮ ಕೃತಿ 'ಮೋಹನತರಂಗಿಣಿ'ಯಲ್ಲಿ ಹೋಳಿಹಬ್ಬ ಮತ್ತು ವಸಂತೋತ್ಸವಗಳ ಬಗ್ಗೆ ವಿಶೇಷವಾಗಿ ವರ್ಣಿಸಿದ್ದಾರೆ. ವಿದೇಶಿಪ್ರವಾಸಿಗರ ಕಥನಗಳಲ್ಲಿ ವಿಶೇಷವಾಗಿ ಯುಗಾದಿ, ದೀಪಾವಳಿ, ನವರಾತ್ರಿ ಹಾಗೂ ಹೋಳಿಹಬ್ಬಗಳನ್ನು ಉಲ್ಲೇಖಿಸಲಾಗಿದೆ. ಅಂದಿನ ದೇವಾಲಯಗಳು ಸಾಂಸ್ಕೃತಿಕ ಚಟುವಟಿಕೆಗಳ ತಾಣಗಳಾಗಿದ್ದವು.

ಉತ್ಸವಗಳು

ದೇವಾಲಯಗಳಲ್ಲಿ ನಡೆಯುವ ಉತ್ಸವಗಳನ್ನು ನಿತ್ಯೋತ್ಸವ, ನೈಮಿತ್ತಿಕೋತ್ಸವ, ಕಾಲೋತ್ಸವ, ಶ್ರದ್ಧೋತ್ಸವ ಎಂದು ನಾಲ್ಕು ವಿಧವಾಗಿ ವಿಂಗಡಿಸಲಾಗಿದೆ. ದೇವರಿಗೆ ಗರ್ಭಗುಡಿಯಲ್ಲಿ ನಡೆಯುವ ಪೂಜೆಗೆ ನಿತ್ಯೋತ್ಸವ ಎನ್ನುವರು. ನೈಮಿತ್ತಿಕಾರ್ಚನೆ ಎಂದರೆ ಸಾಮ್ರಾಜ್ಯದಲ್ಲಿ ಕ್ಷೋಭೆ ಉಂಟಾದಾಗ ಆ ವಿಪತ್ತನ್ನು ಪರಿಹಾರ ಮಾಡುವುದಕ್ಕಾಗಿ ದೇವಾಲಯಗಳಲ್ಲಿ ಕೈಗೊಳ್ಳುವ ಪೂಜೆಯೇ ನೈಮಿತ್ತಿಕ ಪೂಜೆ. ಇದನ್ನು ಆಗಮಶಾಸ್ತ್ರದಲ್ಲಿ ನೈಮಿತ್ತಿಕೋತ್ಸವ ಎಂದು ಕರೆದಿದೆ. ಕಾಲೋತ್ಸವ ಎಂದರೆ ಆಯಾಯ ಕಾಲ ಮತ್ತು ಮಾಸದಲ್ಲಿ ನಿರ್ದಿಷ್ಟವಾದಂತಹ ಉತ್ಸವಗಳು; ಅವುಗಳಲ್ಲಿ ಧನುರ್ಮಾಸ, ವಸಂತೋತ್ಸವ, ನವರಾತ್ರಿ, ಶರನ್ನವರಾತ್ರಿ - ಇತ್ಯಾದಿಗಳು. ಅಲ್ಲದೆ ದೇವಾಲಯಗಳಲ್ಲಿ ವಾರ್ಷಿಕೋತ್ಸವವಾಗಿ ರಥೋತ್ಸವವನ್ನು ಆಚರಿಸುತ್ತಿದ್ದರು. ಈ ಉತ್ಸವದಲ್ಲಿ ಉತ್ಸವಮೂರ್ತಿಯನ್ನು ರಥದಲ್ಲಿಟ್ಟು ದೇವಾಲಯದ ರಥಬೀದಿಯಲ್ಲಿ ಮೆರವಣಿಗೆ ನಡೆಸುತ್ತಿದ್ದರು.

ನಿತ್ಯೋತ್ಸವವು ದಿನನಿತ್ಯದ ಪೂಜಾವಿಧಿಗಳನ್ನು ನಡೆಸಿಕೊಂಡು ಹೋಗುವುದಾಗಿದೆ. ಇದರಲ್ಲಿ ಪ್ರಧಾನವಾಗಿ ಆವಾಹನ, ಅರ್ಚನ, ನಿವೇದನೆ ಎಂಬ ತ್ರಿವಿಧೋಪಚಾರಗಳು ಇರುತ್ತವೆ. ಈ ಪೂಜೆಯು ಎಲ್ಲಾ ದೇವಾಲಯಗಳಲ್ಲಿ ಮಾಡಬೇಕಾದ ಧಾರ್ಮಿಕ ವಿಧಿಯಾಗಿದೆ.

ನೈಮಿತ್ತಿಕ ಉತ್ಸವ ಎಂದರೆ ಪುಣ್ಯ ಅಥವಾ ಕಷ್ಟದ ದಿನಗಳಲ್ಲಿ ಮಾಡುವ ಉತ್ಸವ. ಸಮಾಜದ ಒಳಿತಿಗಾಗಿ ದೇವಾಲಯಗಳಲ್ಲಿ ನಾನಾ ವಿಧದಲ್ಲಿ ವಿಶೇಷ ಪೂಜಾಪುನಸ್ಕಾರಗಳನ್ನು ಅಂದು ನಡೆಸಲಾಗುತ್ತಿತ್ತು. ನೈಮಿತ್ತಿಕೋತ್ಸವಗಳಿಗಾಗಿ ನಾಡಿನಲ್ಲಿ ದಾನದತ್ತಿಯನ್ನು ನೀಡಿರುವ ಅನೇಕ ಶಾಸನಗಳು ಲಭ್ಯವಿವೆ. ಅವುಗಳನ್ನು ಅರಸರಿಂದ ಸಾಮಾನ್ಯಜನರವರೆಗಿನ ಎಲ್ಲಾ ದಾನಿಗಳು ನೈಮಿತ್ತಿಕ ಪೂಜೆಯನ್ನು ವೈಷ್ಣವದೇವಾಲಯಗಳಲ್ಲಿ ನಡೆಸಿಕೊಂಡು ಹೋಗಲು ಧಾರಳವಾಗಿ ದಾನದತ್ತಿಯನ್ನು ನೀಡುತ್ತಿದ್ದರು. ಈ ಶಾಸನಗಳಲ್ಲಿ ನೈಮಿತ್ತಿಕ ಪೂಜೆ - ಉತ್ಸವಗಳನ್ನು ಇತರ ಪೂಜಾವಿಧಿಗಳ ಜೊತೆಗೆ ಸೇರಿಸಿ ದತ್ತಿಯನ್ನು ನೀಡಿದ್ದು, ಪ್ರತ್ಯೇಕವಾಗಿ ದಾನ ನೀಡಿರುವ ಉಲ್ಲೇಖಗಳು ದೊರೆಯುವುದಿಲ್ಲ.

ರಾಯನು ಹಂಪಿಯ ಬಾಲಕೃಷ್ಣದೇವರ ದೇವಾಲಯದಲ್ಲಿ ನಿತ್ಯ ನೈಮಿತ್ತಿಕ ಪೂಜೆಗಾಗಿ ಗ್ರಾಮಗಳನ್ನು ದತ್ತಿಯಾಗಿ ನೀಡಿರುವನು.[೨೦] ಜೊತೆಗೆ ವಿಠಲ ದೇವಾಲಯಕ್ಕೆ ನೈಮಿತ್ತಿಕ ಪೂಜೆಗಳನ್ನು ನಡೆಸಿಕೊಂಡು ಬರಲು ತನ್ನ ತಂದೆತಾಯಿಗಳಿಗೆ ಪುಣ್ಯವಾಗಲೆಂದು ಹರಿಹರಪುರ, ವಿರುಪಾಪುರ, ಗೋಪಿಶೆಟ್ಟಿಹಳ್ಳಿ ಗ್ರಾಮಗಳನ್ನು ನೀಡಿದ್ದನು.[೨೧] ವೈಷ್ಣವ ದೇವಾಲಯಗಳಲ್ಲಿ ನಿತ್ಯ, ನೈಮಿತ್ತಿಕ ಉತ್ಸವಗಳ ಜೊತೆಗೆ ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳು ನಡೆಯುತ್ತಿದ್ದವು. ತಿಂಗಳಲ್ಲಿ ಹದಿನೈದು ದಿನಗಳಿಗೆ ಒಂದರಂತೆ ದೇವಾಲಯಗಳಲ್ಲಿ ನಡೆಯುವ ಉತ್ಸವ ಪಕ್ಷೋತ್ಸವವಾಗಿದೆ. ಕೃಷ್ಣದೇವರಾಯನು ಹಂಪಿಯ ಬಾಲಕೃಷ್ಣ ದೇವರಿಗೆ ಪಕ್ಷೋತ್ಸವ ವೆಚ್ಚಕ್ಕಾಗಿ ಅತ್ತಿವಟ್ಟೆ ಗ್ರಾಮವನ್ನು ಸಮರ್ಪಿಸಿದನು.[೨೨] ಅದೇ ರೀತಿ ವಿಠಲದೇವಾಲಯದಲ್ಲಿ ಪಕ್ಷೋತ್ಸವಕ್ಕೆ ಮೂರುಗ್ರಾಮಗಳನ್ನು ದತ್ತಿಯಾಗಿ ಬಿಡಲಾಗಿದೆ.[೨೩] ವೈಷ್ಣವ ದೇವಾಲಯಗಳಲ್ಲಿ ಅಂದು ಸಾಮಾನ್ಯವಾಗಿ ಎಲ್ಲಾ ವಿಧದ ಹಬ್ಬ ಉತ್ಸವಗಳು ನಡೆಯುತ್ತಿದ್ದವು.

ಪ್ರಮುಖ ದೇವಾಲಯಗಳಲ್ಲಿ ಮಾಸೋತ್ಸವಕ್ಕೆ ಹಲವು ದಾನದತ್ತಿಗಳನ್ನು ಬಿಟ್ಟಿರುವುದು ಶಾಸನಗಳಲ್ಲಿ ಕಂಡುಬರುತ್ತದೆ. ಮಾಸೋತ್ಸವಗಳು ತಿಂಗಳಿಗೆ ಒಂದರಂತೆ ಆಯಾಯ ಮಾಸಗಳಲ್ಲಿ ವಿಶೇಷ ದಿನಗಳಂದು ನಡೆಸುತ್ತಿದ್ದರು. ಮಾಸೋತ್ಸವಗಳಲ್ಲಿ ಚೈತ್ರಾ, ಪಾಲ್ಗುಣ, ವೈಶಾಖ ಉತ್ಸವಗಳು ವೈಷ್ಣವ ದೇವಾಲಯಗಳಲ್ಲಿ ಜರುಗುತ್ತಿದ್ದವು. ಹಂಪಿಯ ವಿಠಲದೇವಾಲಯದಲ್ಲಿ ಚೈತ್ರಾಮಾಸ, ಪಾಲ್ಗುಣಮಾಸ, ವೈಶಾಖಮಾಸಗಳ ರಥೋತ್ಸವಕ್ಕೆ ವಿರುಪಾಪುರ ಮತ್ತಿತರ ಗ್ರಾಮಗಳನ್ನು ರಾಯನು ದತ್ತಿಯಾಗಿ ಬಿಟ್ಟನು.[೨೪] ಚೈತ್ರಾ ಮಾಸದ ರಥೋತ್ಸವವನ್ನು ರಾಮಚಂದ್ರ ದೇವಾಲಯದಲ್ಲಿ ನಡೆಸಲು ತಿಮ್ಮಯ್ಯನು ೧ ಖಂಡುಗ ಗದ್ದೆಯಲ್ಲಿ ಅರ್ಧಪಾಲನ್ನು ದೇವರ ಉತ್ಸವಗಳಿಗಾಗಿ ಬಿಟ್ಟುಕೊಟ್ಟನು.[೨೫] ಅದೇ ರೀತಿ ಬೇಲೂರಿನ ಚೆನ್ನಕೇಶ್ವರ ದೇವರ ದೇವಾಲಯದಲ್ಲಿ ಪಾಲ್ಗುಣಮಾಸದ ಉತ್ಸವಗಳನ್ನು ನಡೆಸಲು ಗ್ರಾಮಗಳನ್ನು ದತ್ತಿಯಾಗಿ ನೀಡಲಾಗಿದೆ.[೨೬]

ಗೌರದಣ್ಣಾಯಕರ ನಾರಾಯಣಯ್ಯ ಎಂಬುವವನು ಆಲಂಪುರ ಯೋಗಾನಂದ ನಾರಸಿಂಹ ದೇವರ ಮಾಸೋತ್ಸವ ಮತ್ತು ರಥೋತ್ಸವಗಳಿಗೆ ಭೈರಾಪುರ ಗ್ರಾಮವನ್ನು ನೀಡಿದ್ದನು.[೨೭] ಕೋಪಣದ ಚೆನ್ನಕೇಶ್ವರ ದೇವರಿಗೆ ಭಂಡಾರದ ತಿಮ್ಮಪ್ಪಯ್ಯನು ದೇವಾಲಯದಲ್ಲಿ ನಡೆಯುವ ಮಾಸೋತ್ಸವಕ್ಕೆ ಹಿರಿಯ ಸಿನ್ದೋಗಿ ಗ್ರಾಮವನ್ನು ಸಮರ್ಪಿಸಿದನು.[೨೮] ಅಂದಿನ ಕಾಲದ ಪ್ರತಿಯೊಂದು ವೈಷ್ಣವ ದೇವಾಲಯದ ಪುಣ್ಯತಿಥಿಗಳಲ್ಲಿ

ಹಲವು ಬಗೆಯ ಉತ್ಸವಗಳು ನಡೆಯುತ್ತಿದ್ದವು. ದಾನಿಗಳು ನೀಡಿದ ಗ್ರಾಮದತ್ತಿಗಳಿಂದ ಬರುವ ಆದಾಯವನ್ನು ಅವರು ಹೆಸರಿಸಿದ ದೇವರ ಉತ್ಸವ ಮತ್ತು ಪೂಜೆಗಳನ್ನು ತಪ್ಪದೆ ನಡೆಸುತ್ತಿದ್ದರು. ಇಲ್ಲಿ ತಿಂಗಳಿಗೆ ಒಂದರಂತೆ ಯಾವುದಾದರೊಂದು ಪೂಜೆ ಉತ್ಸವಗಳು ದೇವಾಲಯಗಳಲ್ಲಿ ನಿರಂತರವಾಗಿ ನಡೆಯುತ್ತಿದ್ದವು.

ರಥೋತ್ಸವ : ರಥೋತ್ಸವವು ವಾರ್ಷಿಕವಾಗಿ ಆಚರಿಸುವ ಉತ್ಸವವಾಗಿದೆ. ಇದಕ್ಕೆ ಜಾತ್ರೆ ಎಂತಲೂ ಕರೆಯುತ್ತಾರೆ. ಈ ವಾರ್ಷಿಕೋತ್ಸವದಲ್ಲಿ ಉತ್ಸವಮೂರ್ತಿಯನ್ನು ರಥದಲ್ಲಿ ಕುಳ್ಳಿರಿಸಿ ರಥೋತ್ಸವವನ್ನು ದೇವಾಲಯದ ರಥಬೀದಿಗಳಲ್ಲಿ ನಡೆಸುತ್ತಿದ್ದರು. ಇದು ಸಾಮಾಜಿಕವಾಗಿ ಹಲವು ವರ್ಗದವರು ಸೇರಿ ಮಾಡುವ ಉತ್ಸವ. ಯಾವುದೇ ತಾರತಮ್ಯವಿಲ್ಲದೆ ಭಕ್ತಿಯಿಂದ ಜನರು ಪಾಲ್ಗೊಳ್ಳುವ ಉತ್ಸವವೇ ಈ ರಥೋತ್ಸವ.

ಕೃಷ್ಣದೇವರಾಯನು ತನ್ನ ಆಮುಕ್ತಮಾಲ್ಯದ ಗ್ರಂಥದಲ್ಲಿ ಸಾಮ್ರಾಜ್ಯದಲ್ಲಿ ನಡೆಯುವ ದೇವಾಲಯಗಳ ಉತ್ಸವಗಳು ಮತ್ತು ಅಲ್ಲಿನ ರಥಗಳ ಬಗ್ಗೆ ಹೇಳುತ್ತಾ, ಊರಿನ ಮಧ್ಯದಲ್ಲಿ ದೇವಾಲಯಗಳು ಇದ್ದು ಪ್ರತಿ ದೇವಾಲಯದ ಬಳಿಯಲ್ಲಿ ರಥಗಳು ಇರುತ್ತಿದ್ದವು[೮೯] ಎಂದು ಹೇಳಿರುವನು. ರಥೋತ್ಸವ ಆಚರಣೆಯ ಸಂಪ್ರದಾಯ ನಮ್ಮ ನಾಡಿನಲ್ಲಿ ಬಹುಹಿಂದಿನಿಂದಲೂ ನಡೆದು ಬಂದ ಪದ್ಧತಿಯಾಗಿದೆ. ಈ ಪದ್ಧತಿಯನ್ನು ಇಂದು ನಾವು ಜಾತ್ರೆ ಎಂದು ಕರೆಯುತ್ತೇವೆ.

ಕೃಷ್ಣದೇವರಾಯನ ಕಾಲದ ಪ್ರಮುಖ ವೈಷ್ಣವ ದೇವಾಲಯಗಳಲ್ಲಿ ರಥೋತ್ಸವಗಳು ನಡೆಯುತ್ತಿದ್ದ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. ಅಲ್ಲದೆ ವಿದೇಶಿ ಪ್ರವಾಸಿಗರಿಂದ ಹೆಚ್ಚಿನ ಮಾಹಿತಿ ದೊರೆಯುತ್ತದೆ. ನಾಗೇಂದ್ರಶಯನ ದೇವಾಲಯದಲ್ಲಿ ರಥೋತ್ಸವವನ್ನು ನಡೆಸಿಕೊಂಡು ಬರಲು ರಂಗನಾಥ ದೀಕ್ಷಿತನು ನಾಗಲಾದೇವಿಪುರ ಅಗ್ರಹಾರವನ್ನು ಮಾಡಿಸಿ ಬ್ರಾಹ್ಮಣರಿಗೆ ೫ ವೃತ್ತಿಗಳನ್ನು ಹಂಚಿದ್ದನು.[೯೦] ಮಹಾಪ್ರಧಾನಮಂತ್ರಿ ಸಾಳುವ ಗೋವಿಂದ ರಾಜಯ್ಯನು ರಾಜನಿಗೆ ಧರ್ಮವಾಗಬೇಕೆಂದು ತೆರಕಣಾಂಬಿಯ ಅವರು ದೇವ ದೇವರಿಗೆ ತೆರಕಣಾಂಬಿಯ ಗ್ರಾಮದಿಂದ ೨ ಪಣಗಳನ್ನು ಸಂಗ್ರಹಿಸಿ ಬಂದ ಹಣದಿಂದ ದೇವರ ರಥೋತ್ಸವವನ್ನು ನಡೆಸಿಕೊಂಡು ಬರಲು ದಾನಮಾಡಿದನು.[೯೧] ಇದರಿಂದ ರಾಜಧಾನಿಯಲ್ಲಿ ಅಲ್ಲದೆ ಸಾಮ್ರಾಜ್ಯದ ವಿವಿಧೆಡೆಗಳಲ್ಲಿ ವೈಷ್ಣವ ದೇವಾಲಯಗಳ ರಥೋತ್ಸವವು ಪ್ರತಿ ಸಂವತ್ಸರದಲ್ಲಿ ಸಂಭ್ರಮದಿಂದ ನಡೆಯುತ್ತಿದ್ದವೆನ್ನಬಹುದು.

ವಿಜಯನಗರದಲ್ಲಿ ಮಹಾನವಮಿಯ ನಂತರ ವಿದೇಶಿ ಪ್ರವಾಸಿಗರನ್ನು ಬಹುವಾಗಿ ಆಕರ್ಷಿಸಿದುದು ರಥೋತ್ಸವವಾಗಿದೆ. ಈ ಕಾಲಕ್ಕೆ ಸಾಮ್ರಾಜ್ಯದ ವಿವಿಧ ಕಡೆಗಳಲ್ಲಿ ರಥೋತ್ಸವಗಳು ನಡೆಯುತ್ತಿದ್ದವು. ರಥೋತ್ಸವದಲ್ಲಿ ಊರಿನ ಎಲ್ಲಾ ನಾಗರೀಕರು ಪಾಲ್ಗೊಂಡು ಸಂಭ್ರಮದಿಂದ ಜಾತ್ರೆಯನ್ನು ಆಚರಿಸುತ್ತಿದ್ದರು. ರಥದ ಮುಂದೆ ಸಿಡಿಯಾಡುವುದು ಹಾಗೂ ರಥೋತ್ಸವ ವೇಳೆಯಲ್ಲಿ ರಥದ ಗಾಲಿಯ ಕೆಳಗೆ ಪ್ರಾಣತ್ಯಾಗ ಮಾಡುವುದು ಅಂದಿನ ಭಕ್ತಿಯ ಹಿರಿಮೆಯಾಗಿತ್ತು. ರಥದ ಗಾಲಿಯ ಕೆಳಗೆಬಿದ್ದು ಪ್ರಾಣವನ್ನು ಅರ್ಪಿಸಿದವರ ಸಂಗತಿ ಹಲವು ಶಾಸನಗಳಲ್ಲಿ ಬಂದಿದ್ದು ಅಂತಹವರನ್ನು ಪೂಜ್ಯದೃಷ್ಠಿಯಿಂದ ಕಾಣಲಾಗುತ್ತಿತ್ತು.

ನಿಕೋಲೋ-ಡಿ-ಕೊಂಟಿ ಪ್ರಕಾರ - ವಿಜಯನಗರದಲ್ಲಿಯೂ ವರ್ಷಕ್ಕೊಮ್ಮೆ ದೇವರ ವಿಗ್ರಹವನ್ನು ಎರಡು ರಥಗಳ ಮಧ್ಯೆ ಇಟ್ಟು ಮೆರವಣಿಗೆ ಮಾಡುತ್ತಾರೆ. ಈ ರಥಗಳಲ್ಲಿ ಸರ್ವಾಲಂಕೃತವಾದ ಗಾಯಕಿಯರು ದೇವರ ಭಜನೆ ಮಾಡುತ್ತಿರುತ್ತಾರೆ. ಜನಗಳ ಗುಂಪು ವಿಗ್ರಹಗಳನ್ನು ಹಿಂಬಾಲಿಸಿ ಹೋಗುತ್ತಿರುತ್ತದೆ. ವಿಶೇಷ ಭಕ್ತಿ ಇರುವ ಅನೇಕರು ರಥದ ಚಕ್ರಕ್ಕೆ ಮೈಯೊಡ್ಡಿ ಪ್ರಾಣತ್ಯಾಗ ಮಾಡುತ್ತಾರೆ. ಮತ್ತೆ ಕೆಲವರು ತಮ್ಮ ಪಕ್ಕೆಯಲ್ಲಿ ತೂತುಮಾಡಿ ಅದರಲ್ಲಿ ಹಗ್ಗವನ್ನು ಪೋಣಿಸಿ ರಥಕ್ಕೆ ಅಲಂಕಾರವಾಗಿ ತೂಗುಹಾಕಿಕೊಳ್ಳುತ್ತಾರೆ. ಈ ತರದ ಬಲಿದಾನ ಎಲ್ಲಾ ಬಲಿದಾನಗಳಿಗಿಂತ ಉತ್ಕೃಷ್ಟವೆಂದು ಇವರು ಭಾವಿಸುತ್ತಾರೆ.[೧೮೨] ಕೊಂಟಿ ಹೇಳಿಕೆಯ ಪ್ರಕಾರ ದೊಡ್ಡ ದೊಡ್ಡ ದೇವಾಲಯಗಳಲ್ಲಿ ಒಂದಕ್ಕಿಂತ ಹೆಚ್ಚು ರಥಗಳು ಇರುತ್ತಿದ್ದವು.

ರಥಗಳನ್ನು ಬಹು ಸುಂದರವಾಗಿ ಅಲಂಕರಿಸಿ ರಥ ಬೀದಿಯ ತುಂಬೆಲ್ಲಾ ಮೆರವಣಿಗೆ ಮಾಡುತ್ತಿದ್ದರು. ಈ ರಥಗಳು ಬಹುದೊಡ್ಡವಿದ್ದು, ಅದು ಸರಳವಾಗಿ ಇಕ್ಕಟ್ಟಾದ ರಸ್ತೆಗಳಲ್ಲಿ ಚಲಿಸುತ್ತಿರಲಿಲ್ಲ. ರಥಬೀದಿಗಳು ದೇವಾಲಯದ ಮುಂದೆ ತುಂಬಾ ವಿಶಾಲವಾಗಿ ಇರುತ್ತಿದ್ದವು. ಜನರು ಹೆಚ್ಚಿನ ಪ್ರಮಾಣದಲ್ಲಿ ನೆರೆಯುವುದಕ್ಕೆ ಅನುಕೂಲವಾದ ಪ್ರದೇಶವಿರುತ್ತಿತ್ತು. ಇಂದಿಗೂ ಹಳೆಯ ದೇವಾಲಯಗಳ ಮುಂದೆ ವಿಶಾಲವಾದ ರಥ ಬೀದಿಯಿದ್ದುದನ್ನು ಕೃಷ್ಣದೇವಾಲಯ, ವಿಠಲದೇವಾಲಯದ ಮುಂಭಾಗದಲ್ಲಿ ಕಾಣಬಹುದು.

ರಥೋತ್ಸವದಲ್ಲಿ ವಿಶಿಷ್ಟವಾದ ಭಕ್ತಿಯಿಂದ ನಡೆಯುವ ಸೇವೆ ಎಂದರೆ 'ಸಿಡಿಹರಕೆ' ಸಲ್ಲಿಸುವ ಕಾರ್ಯ ತಮ್ಮ ದೇಹವನ್ನು ರಥಕ್ಕೆ ನೇತಾಡುವಂತೆ ಸಿಡಿಗಳನ್ನು ಚುಚ್ಚಿಕೊಳ್ಳುವುದು. ಈ ಭಕ್ತಿಯ ಕಾರ್ಯಗಳನ್ನು ಈಗಲೂ ಕಾಣಬಹುದು. ಉದಾ : ಮೈಲಾರಲಿಂಗನ ಜಾತ್ರೆ, ಗತ್ತರಗಿಯ ಭಾಗಮ್ಮನ ದೇವಾಲಯದ ಜಾತ್ರೆ."[೧೮೩] ಸಿಡಿಕಾರ್ಯಕ್ರಮವು ಬಹು ಪ್ರಾಚೀನ ಕಾಲದಿಂದಲೂ ಆಚರಿಸುತ್ತಾ ಬಂದಿರುವ ಸೇವೆ. ಇದನ್ನು ಕ್ರಿ.ಶ. ೧೨ನೇ ಶತಮಾನದ ಶಾಸನಗಳಲ್ಲಿ ಕಾಣಬಹುದು. ವಿಜಯನಗರಕ್ಕೆ ಭೇಟಿಕೊಟ್ಟ ಪೋರ್ಚುಗೀಸ್ ಪ್ರವಾಸಿ ಬಾರ್ಬೋಸನು ತನ್ನ ಪ್ರವಾಸಕಥನದಲ್ಲಿ ಇಲ್ಲಿ ನಡೆಯುವ ಸಿಡಿಕಾರ್ಯಕ್ರಮದ ಬಗ್ಗೆ ವಿವರಗಳನ್ನು ನೀಡಿದ್ದಾನೆ. ಬಾರ್ಬೋಸನ ಹೇಳಿಕೆಯಲ್ಲಿ ಯಾರಾದರೂ ಮಹಿಳೆ ತನ್ನ ಇಷ್ಟ ಬಂದ ಯುವಕನ ಜೊತೆ ಮದುವೆಯಾಗಲೂ ಬಯಸಿದರೆ ಅವನನ್ನು ದೊರಕಿಸುವಂತೆ ದೇವರಲ್ಲಿ ಬೇಡಿಕೊಳ್ಳುತ್ತಾಳೆ ಮತ್ತು ಮುಂದೆ ಮದುವೆ ಏರ್ಪಟ್ಟಲ್ಲಿ ಸಿಡಿ ಆಚರಣೆ ಮಾಡುವುದಾಗಿ ಹರಕೆ ಕೋರುತ್ತಾಳೆ. ಮದುವೆಯಾದ ಮೇಲೆ ತನ್ನ ಗಂಡನಿಗೆ ತನ್ನನ್ನು ಅರ್ಪಿಸಿಕೊಳ್ಳುವ ಮೊದಲೇ ತನ್ನ ಹರಕೆಯನ್ನು ಗಂಡನಿಗೆ ತಿಳಿಸುತ್ತಾಳೆ. ಆಗ ಸಿಡಿ ಆಚರಣೆಗೆ ಒಂದು ಕಾಲವನ್ನು ನಿಗಧಿಮಾಡುತ್ತಾರೆ. ಆಗ ಆ ದಿನದಂದು ಸಿಡಿ ಆಚರಣೆಯನ್ನು ನಡೆಸುತ್ತಾರೆ.[೧೮೪] ಇಲ್ಲಿ ಭಕ್ತಿಯ ಪರಾಕಾಷ್ಠತೆಯನ್ನು ಸಿಡಿಕಾರ್ಯಕ್ರಮದಲ್ಲಿ ಕಾಣಬಹುದು. ಅಂದು ಸಿಡಿಕಾರ್ಯಕ್ರಮದಲ್ಲಿ ಅವರು ಇಟ್ಟ ನಂಬಿಕೆ ಅತ್ಯಂತ ಮಹತ್ವದ್ದು. ಇದು ರಥೋತ್ಸವದ ವಿಶೇಷವೂ ಹೌದು.

ವಿಜಯನಗರ ಕಾಲದ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಬಂದ ಡೋಮಿಂಗೋಪೆಯಾಸ್‌ನ ವರದಿಯಲ್ಲಿ ಅಂದಿನ ಉತ್ಸವಗಳ ಬಗ್ಗೆ ಸವಿಸ್ತಾರವಾದ ವರ್ಣನೆಯನ್ನು ಕಾಣಬಹುದು. "ಪ್ರತಿಯೊಂದು ದೇವಾಲಯದ ಬಳಿಯಲ್ಲಿ ಒಂದೊಂದು ದೊಡ್ಡ ರಥವನ್ನು ನಿಲ್ಲಿಸಿರುತ್ತಾರೆ. ಈ ರಥಗಳನ್ನು ಕಟ್ಟಿಗೆಗಳಿಂದ ಮಾಡಿದ್ದು,

ಸುಂದರವಾಗಿ ವಿವಿಧ ಕಲಾಕೃತಿಗಳನ್ನು ಅದರ ಮೇಲೆ ಕೆತ್ತಿರುತ್ತಾರೆ. ಈ ಸೂಕ್ಷ್ಮ ಕೆತ್ತನೆಯನ್ನು ನಾನು ಎಲ್ಲಿಯೂ ನೋಡಿಲ್ಲ. ಈ ರಥವನ್ನು ವರ್ಷದಲ್ಲಿ ಒಮ್ಮೆ ಮಾತ್ರ ಹೊರಗೆ ತಂದು ಊರಲ್ಲಿ ಎಳೆದುಕೊಂಡು ಹೋಗುತ್ತಾರೆ. ಅದರಲ್ಲಿ ದೇವರನ್ನು ಇಟ್ಟು ಹಾಡುಗಳನ್ನು ಹಾಡುತ್ತಾ, ನರ್ತಿಸುತ್ತಾ ಗಾಲಿಗಳ ಮೇಲೆ ಅದನ್ನು ಎಳೆದುಕೊಂಡು ಹೋಗುತ್ತಾರೆ. ಆದರೆ ಮುಂದೆ ಪೇಸ್‌ನು ನಾನು ಇದ್ದಷ್ಟು ದಿನ ಈ ರಥವನ್ನು ಎಳೆಯುವುದನ್ನು ಎಲ್ಲಿಯೂ ನೋಡಿಲ್ಲ ಎಂದು ಹೇಳಿದ್ದಾನೆ.[೧೮೫] ವಿಠ್ಠಲ ದೇವಾಲಯದ ಕಲ್ಲಿನ ರಥ (ಗರುಡ)ವನ್ನು ನೋಡಿ ಈ ಮಾತನ್ನು ಪೇಸನು ಹೇಳಿರುವ ಹಾಗಿದೆ. ಇದು ಚಲಿಸುವ ರಥವಾಗಿರಲಿಲ್ಲವೆಂಬುದನ್ನು ಗಮನಿಸಬೇಕು.

ವಿಜಯನಗರ ಕಾಲದಲ್ಲಿ ನಿರ್ಮಿಸಲಾದ ಪ್ರಮುಖ ದೇವಾಲಯಗಳ ಮುಂದೆ ವಿಶಾಲವಾದ ರಥಬೀದಿಯನ್ನು ಇಂದಿಗೂ ಕಾಣುತ್ತೇವೆ. ಈ ಬೀದಿಗಳನ್ನು ಅಂದು ರಥೋತ್ಸವಕ್ಕೆ ಬಳಸುತ್ತಿದ್ದು, ಇವುಗಳನ್ನು ಶಾಸನಗಳಲ್ಲಿ ರಥಬೀದಿಗಳೆಂದೇ ಕರೆಯಲಾಗುತ್ತಿತ್ತು. ಹಲವಾರು ದೇವಾಲಯಗಳ ಕಟ್ಟಡದ ಚಿತ್ರಪಟ್ಟಿಕೆಗಳಲ್ಲಿ, ಭಿತ್ತಿಯಲ್ಲಿ ಉಬ್ಬುಶಿಲ್ಪಗಳಲ್ಲಿ ರಥೋತ್ಸವವನ್ನು ನೋಡಬಹುದು. ಹಂಪಿಯ ವಿಜಯವಿಠಲ ದೇವಾಲಯದ ಮಹಾಮಂಟಪದ ಮುಂದೆ ಬಹು ಸುಂದರವಾದ ನಾಲ್ಕು ಗಾಲಿಗಳುಳ್ಳ ಕಲ್ಲಿನ ರಥವಿದೆ. ಅದರ ಮೇಲೆ ಇಟ್ಟಿಗೆ ಗಾರೆಯ ಗೋಪುರವು ಸಹ ಇದ್ದಿತು. ರಥದ ಮೇಲಿನ ಗೋಪುರ ಇಂದು ಹಾಳಾಗಿದೆ. ವಿಠಲ ದೇವಾಲಯದ ಭಿತ್ತಿಗಳಲ್ಲಿ ಸಾಗುತ್ತಿರುವ ರಥಗಳು ಕಂಡುಬರುತ್ತವೆ. ಪ್ರೌಢದೇವರಾಯನು ವಿರೂಪಾಕ್ಷ ದೇವರ ರಥೋತ್ಸವದ ಮುಖ್ಯ ದಾರಿಯನ್ನು ಇನ್ನಷ್ಟು ವಿಶಾಲವಾಗಿ ಮಾಡಿಸಿ ಅದನ್ನು ಸುವ್ಯವಸ್ಥೆಗೊಳಿಸಿ ರಥೋತ್ಸವದ ಕಾಲಕ್ಕೆ ಗಲಭೆಗದ್ದಲಗಳಾಗದಂತೆ ನೋಡಿಕೊಂಡನೆಂದೂ ಲಕ್ಕಣ್ಣದಂಡೇಶ ತನ್ನ 'ಶಿವತತ್ವಚಿಂತಾಮಣಿ'ಯಲ್ಲಿ ಹೇಳುತ್ತಾನೆ.[೧೮೬] ಇದರಿಂದ ಪ್ರೌಢದೇವರಾಯನಿಗಿಂತಲೂ ಹಿಂದಿನಿಂದ ರಥೋತ್ಸವಗಳು ರಾಜಧಾನಿಯಲ್ಲಿ ನಡೆಯುತ್ತಿದ್ದವೆಂದು ಗೊತ್ತಾಗುತ್ತದೆ. ರಥೋತ್ಸವದ ಬಗ್ಗೆ ಮಾಹಿತಿಯನ್ನು ನೀಡುವ ಹಲವಾರು ಶಾಸನಗಳನ್ನು ಕಾಣಬಹುದು.

ಮಹಾಪ್ರಧಾನಮಂತ್ರಿ ಸಾಳುವ ಗೋವಿಂದರಾಜಯ್ಯನವರು ರಾಜನಿಗೆ ಧರ್ಮವಾಗಲೆಂದು ತೆರಕಣಾಂಬಿಯ ಆವರು ದೇವ ದೇವರ ರಥೋತ್ಸವ ನಡೆಸಿಕೊಂಡು ಬರಲು ತೆರಕಣಾಂಬಿ ಗ್ರಾಮದ ಆದಾಯವನ್ನು ದತ್ತಿಯಾಗಿ ನೀಡಿದನು.[೧೮೭] ನಾಗೇನಹಳ್ಳಿಯ ನಾಗೇಂದ್ರಶಯನ ದೇವಾಲಯದಲ್ಲಿನ ರಥೋತ್ಸವವನ್ನು ನಡೆಸಿಕೊಂಡು ಬರಲು ರಾಯನ ಪುರೋಹಿತನಾದ ರಂಗನಾಥದೀಕ್ಷಿತನು ನಾಗಲಾದೇವಪುರ ಅಗ್ರಹಾರವನ್ನಾಗಿ ಮಾಡಿ ೫ ವೃತ್ತಿಗಳನ್ನು ಬ್ರಾಹ್ಮಣರಿಗೆ ಹಂಚಿದನು.[೧೮೮] ಶ್ರೀಕೃಷ್ಣದೇವರಾಯನು ಬಾಲಕೃಷ್ಣದೇವರ ಮೂರ್ತಿಯನ್ನು ಪ್ರತಿಷ್ಠೆಮಾಡಿಸಿ ದೇವರಿಗೆ ನವರತ್ನ ಆಭರಣಗಳನ್ನು ಪೂಜಾಕಾರ್ಯಕ್ಕೆ ನೀಡಿ, ಅದರ ಜೊತೆಗೆ ರಥೋತ್ಸವಕ್ಕೆ ಅಲ್ಲಿ ವಾಸಿಸುವ ಬ್ರಾಹ್ಮಣ ವಿನಿಯೋಗದವರಿಗೆ ಅತ್ತಿವಟ್ಟೆ, ಹೊಸೂರು, ಮುದಲಾಪುರ, ದೇವಲಾಪುರ, ಕಳಸಾಪುರ ಮುಂತಾದ ಗ್ರಾಮಗಳನ್ನು ದತ್ತಿಯಾಗಿ ಬಿಡಲಾಯಿತು.[೧೮೯] ಅದೇ ರೀತಿ ರಾಯನು ಹಂಪಿಯ ವಿಠಲ ದೇವರ ಅಮೃತಪಡಿ, ನೈವೇದ್ಯ, ಮಾಸೋತ್ಸವ, ನಿತ್ಯ, ಪಕ್ಷ, ಸಂವತ್ಸರೋತ್ಸವಕ್ಕೆ ಹರಿಹರಪುರ, ವಿರೂಪಾಕ್ಷಪುರ ಮುಂತಾದ ಹಳ್ಳಿಗಳನ್ನು ದತ್ತಿಯಾಗಿ ಬಿಟ್ಟುಕೊಟ್ಟನು.[೧೯೦] ಕೃಷ್ಣದೇವರಾಯನು ಅನಂತನಾಥ ದೇವರನ್ನು ಸಾಲೆತಿರುಮಲೆರಾಯ ಪಟ್ಟಣದಲ್ಲಿ ಪ್ರತಿಷ್ಠಾಪಿಸಿ ದೇವತಾಕಾರ್ಯಗಳಿಗೆ ಸಂವತ್ಸರದ ರಥೋತ್ಸವಕ್ಕೆ ೧೦,೦೦೦ ವರಾಹದ ವರಮಾನದ ಭೂಮಿಯನ್ನು ದತ್ತಿನೀಡಿದನು.[೧೯೧]

ಮೇಲಿನ ಶಾಸನಗಳ ಹಿನ್ನೆಲೆಯಲ್ಲಿ ಅರಸರು, ಪುರೋಹಿತರು, ಸಾಮಂತರು, ಅಧಿಕಾರಿಗಳು ತಮಗೆ ತಮ್ಮ ಸಂಬಂಧಿಕರು ಹಾಗೂ ಅರಸರಿಗೆ ಧರ್ಮವಾಗಲೆಂದು ದೇವಾಲಯಗಳ ರಥೋತ್ಸವಕ್ಕೆ ಹೇರಳವಾಗಿ ದಾನದತ್ತಿಯನ್ನು ಕೊಡುತ್ತಿದ್ದರು. ರಾಯನ ಕಾಲದ ಪ್ರಮುಖ ದೇವಾಲಯಗಳಲ್ಲಿ ರಥೋತ್ಸವವು ನಡೆಯುತ್ತಿದ್ದಿತು. ಹಂಪಿಯ ವಿಠಲ ದೇವಾಲಯದ ರಥೋತ್ಸವದ ಸಂದರ್ಭದಲ್ಲಿ ಸತಿಗೆ (ಕೊಡೆ), ಪತಾಕೆ (ಧ್ವಜ)ಗಳನ್ನು ಒಯ್ಯುತ್ತಿದ್ದರು. ದೇವಾಲಯದ ವಾದ್ಯದವರು, ಗಂಡುಮೇಳ, ಹೆಣ್ಣುಮೇಳ, ಪರಿಚಾರಕರು ಉತ್ಸವದಲ್ಲಿ ಭಾಗವಹಿಸುತ್ತಿದ್ದರು. ತೇರನ್ನು ಸೀರೆ, ಕರೆ ಮತ್ತು ಕರಿಮಣಿಗಳಿಂದ ಸಿಂಗರಿಸುತ್ತಿದ್ದರು. ದೇವಾಲಯದ ಪೂರ್ವಕ್ಕೆ ತೇರುಬೀದಿಯ ಕೊನೆಯಲ್ಲಿರುವ ಪರಾಂಕುಶ ಮಂಟಪದ ಮುಂದೆ ಚಪ್ಪರಹಾಕಿ ಅದನ್ನು ಅಲಂಕಾರಗೊಳಿಸುತ್ತಿದ್ದರು. ದೇವರನ್ನು ಪರಾಂಕುಶಮಂಟಪಕ್ಕೆ ವರ್ಷದಲ್ಲಿ ೧೪೨ ದಿನ ತೆಗೆದುಕೊಂಡು ಹೋಗುತ್ತಿದ್ದರು.[೧೯೨] ಇದರ ಉಲ್ಲೇಖವು ಸದಾಶಿವರಾಯನ ಕಾಲದ ಶಾಸನಗಳಲ್ಲಿ ಮಾಹಿತಿ ಸಿಗುತ್ತದೆ.

'ಅಮುಕ್ತಮಾಲ್ಯದ'ದಲ್ಲಿ ರಥೋತ್ಸವದ ಸಂದರ್ಭವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವುದು ಕಂಡುಬರುತ್ತದೆ. "ಬೇಸಿಗೆಯಲ್ಲಿ ರಥೋತ್ಸವ, ತೆಪ್ಪೋತ್ಸವಗಳನ್ನು ನೋಡಬಂದವರಿಗೆ ಶ್ರೋತ್ರಿಯರ ಮನೆಯಲ್ಲಿ ಪಾನಕಪೂಜೆ, ಪರಿಪಕ್ವವಾದ ಸುಗಂಧಬಾಳೆಹಣ್ಣು, ಹಲಸಿನ ತೊಳೆ, ತುಪ್ಪದ ಮುದ್ದೆಯಂತಿರುವ ಕರಬೂಸದ ಹಣ್ಣಿನ ಹೋಳುಗಳು, ಹಲವು ಬಗೆಯ ಮಾವಿನಹಣ್ಣಿನ ಹೋಳುಗಳು, ದ್ರಾಕ್ಷಿ ಇವುಗಳನ್ನು ಸೇರಿಸಿ ಮಾಡಿದ ರಸಾಯನ, ಹೆಸರುಬೇಳೆ ಕೋಸಂಬರಿ ಇವುಗಳನ್ನು ತಿಂದು ಪಾನಕ ಕುಡಿದು ಪೂಜಾರ್ಥವಾಗಿ ಕೊಟ್ಟ ಶ್ರೀಗಂಧವನ್ನು ಮೈಗಚ್ಚಿಕೊಂಡು, ಜುಟ್ಟಿಗೆ ಹೂ ಮುಡಿದು ಕರ್ಪೂರ ತಾಂಬೂಲವನ್ನು ಮೆಲ್ಲುತ್ತಾ ಬೆಳದಿಂಗಳಲ್ಲಿ ಮನೆಯ ಮುಂದಿನ ಅಂಗಳದ ಜಗಲಿಯ ಮೇಲೆ ಮಲಗಿ ಲೋಕಾಭಿರಾಮವಾದ ಮಾತುಗಳನ್ನು ಹಾಡಿಕೊಳ್ಳುತ್ತ ವಿಶ್ರಾಂತಿಯನ್ನು ಅನುಭವಿಸುವುದಕ್ಕೆ ಅವಕಾಶವಿತ್ತು"[೧೯೩] ಎಂದು ಹೇಳಿದೆ. ಎಲ್ಲ ಸಮುದಾಯದವರು ಸಮಾನವಾಗಿ ಪಾಲ್ಗೊಳ್ಳುವ ಸಾಮಾಜಿಕ ವ್ಯವಸ್ಥೆಯನ್ನು ಅಂದಿನ ಉತ್ಸವಗಳು ಒದಗಿಸಿಕೊಡುತ್ತಿದ್ದವು.

ವೈಷ್ಣವ ದೇವಾಲಯಗಳ ಉತ್ಸವದ ಸಂದರ್ಭದಲ್ಲಿ ಉತ್ಸವ ಮೂರ್ತಿಯನ್ನು ಹೊರಗೆ ತಂದು ಮೆರವಣಿಗೆ ಮಾಡಲಾಗುತ್ತಿತ್ತು. ಉತ್ಸವಮೂರ್ತಿಯನ್ನು ವಿವಿಧ ಅಲಂಕಾರಗಳಲ್ಲಿ ಸಿಂಗರಿಸುತ್ತಿದ್ದರು. ಸಿಂಹ, ಗರುಡ, ಗಜ, ರಥಗಾಲಿ, ಅಶ್ವವಾಹನಗಳಲ್ಲಿ ವಿಠಲದೇವರ ಉತ್ಸವಮೂರ್ತಿಯನ್ನು ಇವುಗಳ ಮೇಲೆ ಕೂಡಿಸಿ ಮೆರವಣಿಗೆ ಮಾಡಲಾಗುತ್ತಿತ್ತು.[೧೯೪] ಅದೇ ರೀತಿ ಹಂಪಿಯ ರಾಮಚಂದ್ರದೇವರ ಭಂಡಾರಕ್ಕೆ ತಿಮ್ಮಯ್ಯನು ಕೆಲವು ದಾನಗಳನ್ನು ನೀಡಿ, ಜೊತೆಗೆ ದೇವರ ಗುಡಿಯ ಮುಂದೆ ಉತ್ತರಕ್ಕೆ ಉತ್ಸವಮಂಟಪವನ್ನು ಕಟ್ಟಿಸುತ್ತಾನೆ. ತಾನು ನೀಡಿದ ಈ ಕಟುಮಾನ್ಯದಲ್ಲಿ ದೇವರಿಗೆ ಮಾಡುವ ಅನೇಕ ಉತ್ಸವಗಳನ್ನು ಮತ್ತು ನೈವೇದ್ಯಕ್ಕೆ ಮಾಡಬೇಕಾದ ತಿನಿಸುಗಳ ವಿವರಗಳಿವೆ.[೧೯೫] ಈ ಉತ್ಸವಗಳೆಂದರೆ ಶೇಷ ೧, ಪುಷ್ಪಮಂಟಪ ೧, ಸಿಂಹ ೧, ಗರುಡ ೧, ಗಜ ೧, ರಥಗಾಲಿ ೧, ಅಶ್ವರೋಹಣ ೧, ಪುಷ್ಯಯಾಗ ೧ ಉತ್ಸವಗಳನ್ನು ಮಾಡುವಾಗ ಈ ಅಲಂಕಾರ ವಾಹನಗಳಲ್ಲಿ ಉತ್ಸವ ಮೂರ್ತಿಯನ್ನು ಇಟ್ಟು ಮೆರವಣಿಗೆ ಮಾಡುತ್ತಿದ್ದರು. ಇದು ಉತ್ಸವಗಳನ್ನು ಪ್ರತಿವರ್ಷ ತಪ್ಪದೆ ಮಾಡಬೇಕೆಂದು ಕೊಟ್ಟ ದಾನ ಶಾಸನವಾಗಿದೆ.

ತೆಪ್ಪೋತ್ಸವ : ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳಲ್ಲಿ ತೆಪ್ಪೋತ್ಸವವನ್ನು ನೆರವೇರಿಸಲು ಪುಷ್ಕರಿಣಿ ಅಥವಾ ತೆಪ್ಪಕೊಳಗಳನ್ನು ದೇವಾಲಯದ ಈಶಾನ್ಯ ದಿಕ್ಕಿನಲ್ಲಿ ನಿರ್ಮಿಸುತ್ತಿದ್ದರು. ಈ ತೆಪ್ಪಕೊಳಗಳನ್ನು ಪ್ರಮುಖ ದೇವಾಲಯಗಳಲ್ಲಿ ಮಾತ್ರ ಕಟ್ಟಿಸಿರುವುದು ಕಂಡುಬರುತ್ತದೆ. ರಾಯನ ಕಾಲದಲ್ಲಿ ನಿರ್ಮಿತವಾದ ಹಂಪಿಯ ಬಾಲಕೃಷ್ಣ ದೇವಾಲಯದಲ್ಲಿ ತೆಪ್ಪಕೊಳವಿದೆ. ಅದರಲ್ಲಿ ತೆಪ್ಪೋತ್ಸವವನ್ನು ನಡೆಸುತ್ತಿದ್ದರು. ಅದೇ ರೀತಿಯಲ್ಲಿ ಹಂಪಿಯ ವಿಠಲದೇವಾಲಯದಲ್ಲಿ ತೇರುಬೀದಿಯ ಉತ್ತರಕ್ಕಿರುವ ಪುಷ್ಕರಿಣಿಯಲ್ಲಿ ತೆಪ್ಪೋತ್ಸವವನ್ನು ನಡೆಸಲಾಗುತ್ತಿತ್ತು. ತೆಪ್ಪೋತ್ಸವಗಳು ನಡೆಯುವಾಗ ಭಕ್ತರು ಹಲವು ಭಾಗಗಳಿಂದ ದೇವಾಲಯಗಳ ಉತ್ಸವಗಳನ್ನು ನೋಡಲು ಬರುತ್ತಿದ್ದರು. ಇದರ ಬಗ್ಗೆ ರಾಯನು ಆಮುಕ್ತಮಾಲ್ಯದಲ್ಲಿ ವಿವರಣೆಗಳನ್ನು ನೀಡಿದ್ದಾನೆ. ರಾಯನ ಆಳ್ವಿಕೆಯಲ್ಲಿ ಊಳಿಗದ ಬಸವಪ್ಪನಾಯಕನು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಬೇಲೂರಿನ ಚೆನ್ನಕೇಶ್ವರ ದೇವಾಲಯಕ್ಕೆ ತೆಪ್ಪಕೊಳವನ್ನು ಕಟ್ಟಿಸಿ, ವಸಂತಮಂಟಪವನ್ನು ನಿರ್ಮಿಸಿದನು. ಈ ತೆಪ್ಪಕೊಳದಲ್ಲಿ ಪಾಲ್ಗುಣ ೧೦ ದಿನದಲ್ಲಿ ತೆಪ್ಪತಿರುನಾಳು ಉತ್ಸವವನ್ನು ನಡೆಸಬೇಕೆಂದು ನಾರಾಯಣಪುರ, ಹಲುಮಿರಿಯ ಗ್ರಾಮಗಳ ಹುಟ್ಟುವಳಿಯನ್ನು ಶ್ರೀಪಾದಕ್ಕೆ ಸಮರ್ಪಿಸಿದರು.[೧೭]

ರಾಯನ ಆಳ್ವಿಕೆಯಲ್ಲಿ ಸಾಮ್ರಾಜ್ಯದಾದ್ಯಂತ ನಿರ್ಮಿತವಾದ ಪ್ರಮುಖ ವೈಷ್ಣವ ದೇವಾಲಯಗಳಲ್ಲಿ ಹೆಚ್ಚಾಗಿ ಪುಷ್ಕರಣಿಗಳು ಕಂಡುಬರುತ್ತವೆ. ದೇವಾಲಯವು ವಿಶಾಲವಾದ ಪ್ರದೇಶದಲ್ಲಿ ನಿರ್ಮಿಸಲ್ಪಟ್ಟರೆ ಭಕ್ತಾದಿಗಳು, ದಾನಿಗಳು ತೆಪ್ಪಕೊಳವನ್ನು ಕಟ್ಟಿಸಿ, ಅದರಲ್ಲಿ ಉತ್ಸವ ನಡೆಸಲು ಏರ್ಪಾಡು ಮಾಡಿ ಅದರ ವೆಚ್ಚಕ್ಕೆ ದಾನದತ್ತಿಗಳನ್ನು ನೀಡುತ್ತಿದ್ದರು. ತೆಪ್ಪೋತ್ಸವವನ್ನು ವಿಶೇಷ ದಿನಗಳಲ್ಲಿ ನಡೆಸುವ ಹಾಗೇ ದಾನಿಗಳು ಆ ದಿನವನ್ನು ಮೊದಲೇ ನಿಗದಿಮಾಡುತ್ತಿದ್ದರು. ಇದನ್ನು ಉಲ್ಲೇಖಿಸುವ ಶಾಸನವೊಂದರಲ್ಲಿ ವಿಠಲ ದೇವಾಲಯದ ತೆಪ್ಪೋತ್ಸವವನ್ನು ವರ್ಷದ ಪಾಲ್ಗುಣ ಮಾಸದ ೩ ದಿನಗಳಲ್ಲಿ ನಡೆಸುವಂತೆ ದಾನಿಯು ದತ್ತಿಯನ್ನು ನೀಡಿದ್ದಾನೆ.[೧೮] ಇದರಂತೆ ದೇವಾಲಯದ ಸ್ಥಾನಿಕರು ತಪ್ಪದೆ ಉತ್ಸವಗಳನ್ನು ನಡೆಸುತ್ತಿದ್ದರು. ಈ ಉತ್ಸವವು ವಿಜಯನಗರ ಕಾಲದ ದೇವಾಲಯಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ.

ಬ್ರಹ್ಮೋತ್ಸವ

ಕೃಷ್ಣದೇವರಾಯನು ಮೂರನೆಯ ಬಾರಿ ತಿರುಮಲೆಗೆ ಬಂದುದು ಕ್ರಿ.ಶ. ೧೫೧೩ ಜೂನ್ ೧೩ರಂದು. ತನ್ನ ತಂದೆ-ತಾಯಿಯರಿಗೆ ಧರ್ಮವಾಗಲೆಂದು ನವರತ್ನಖಚಿತವಾದ ಕಿರೀಟವನ್ನು ದಾನಮಾಡಿ, ತನ್ನ ತಂದೆ ತಾಯಿಯರ ಹೆಸರಿನಲ್ಲಿ ತ್ರೈಮಾಸವತ್ಸರೋತ್ಸವವನ್ನು ನಡೆಸುವ ಏರ್ಪಾಡು ಮಾಡಿದನು. ಅದಕ್ಕಾಗಿ ಐದು ಗ್ರಾಮಗಳನ್ನು ದೇವಾಲಯಕ್ಕೆ ಬಿಟ್ಟುಕೊಟ್ಟನು. ಅದೇರೀತಿ ವ್ಯಾಸತೀರ್ಥರು ಕ್ರಿ.ಶ. ೧೫೨೪ ನವಂಬರ್ ತಿಂಗಳಿನಲ್ಲಿ ಬೆಟ್ಟದ ಮೇಲೆ ಮಠವಾಗಿಸಿದ ಮನೆಯೆದುರು ಮಂಟಪವೊಂದನ್ನು ಕಟ್ಟಿಸಿ, ದೇವಾಲಯದ ಶ್ರೀಭಂಡಾರಕ್ಕೆ ೧೪,೦೦೦ ನರಪಣಗಳನ್ನು ಕೊಟ್ಟು ಪ್ರತಿವರ್ಷವು ವಿಶೇಷ ದಿನಗಳಲ್ಲಿ ಒಟ್ಟು ೩೫೪, ಅಪ್ಪಪಡಿಗಳನ್ನು ದೇವರಿಗೆ ಸಮರ್ಪಿಸುವ ವ್ಯವಸ್ಥೆ ಮಾಡಿದರು. ಅವರು ಪಟ್ಟಿ ಮಾಡಿರುವ ವಿಶೇಷ ದಿನಗಳಲ್ಲಿ ೮ ಬ್ರಹ್ಮೋತ್ಸವ, ೯೬ ದಿನಗಳ ಏಕಾದಶಿಯ ಪಟ್ಟಿ ನೀಡಿರುವರು :

೧. ಯುಗಾದಿ

೨. ದೀಪಾವಳಿ

೩. ಕಾರ್ತಿಕೋತ್ಸವ

೪. ಮಾಸ ಸಂಕ್ರಮಣಗಳು

೫. ಪವಿತ್ರೋತ್ಸವ

೬. ಅಧ್ಯಯನೋತ್ಸವ

೭. ಸಹಸ್ರ ಕಳಶಾಭಿಷೇಕೋತ್ಸವ

೮. ದೀಪೋತ್ಸವ ಮೊದಲಾದವು ಸೇರಿವೆ.[೧೬೨]

ತಿರುಮಲೆಯಲ್ಲಿ ನಡೆಯುವ ಉತ್ಸವಗಳಲ್ಲಿ ತುಂಬಾ ಹಳೆಯದು ಬ್ರಹ್ಮೋತ್ಸವ. ಕ್ರಿ.ಶ. ೯೦೦ ರ ಸುಮಾರಿಗೆ ಪಲ್ಲವರ ಕಾಲಕ್ಕೆ ನಡೆಯುತ್ತಿದ್ದಿತು. ಇದನ್ನು ಬ್ರಹ್ಮನೆ ಬೆಟ್ಟದೊಡೆಯನಿಗೆ ನಡೆಸುವ ಉತ್ಸವವಾಗಿದೆ. ಈ ಸಂದರ್ಭದಲ್ಲಿ ದಿನವೂ ಬೇರೆಬೇರೆ ವಾಹನಗಳ ಮೇಲೆ ಉತ್ಸವಮೂರ್ತಿಯ ಮುಂದೆ ಸಣ್ಣದೊಂದು ರಥವು ಹೊರಡುತ್ತದೆ. ಅದರೊಳಗೆ ಯಾವ ಮೂರ್ತಿಯೂ ಇರುವುದಿಲ್ಲ. ಸ್ವತಃ ಬ್ರಹ್ಮನೇ ಕುಳಿತು ಉತ್ಸವದ ಏರ್ಪಾಟುಗಳನ್ನು ನೋಡಿಕೊಳ್ಳುತ್ತಿದ್ದಾನೆ ಎನ್ನುವುದು ನಂಬಿಕೆ. ಇದು ನೇರವಾಗಿ ಬ್ರಹ್ಮನ ಎದುರಲ್ಲಿ ನಡೆಯುವ ಉತ್ಸವವಾಗಿದೆ. ಇದನ್ನು ಮೂಲದೇವರ ಜನ್ಮ ನಕ್ಷತ್ರದ ದಿನಕ್ಕೆ ಮುಂಚೆ ೯ ದಿನಗಳು ನಡೆಯುವ ಉತ್ಸವವಾಗಿದೆ. ಅಂಕುರಾರ್ಪಣದಿಂದ ಆರಂಭವಾಗಿ ಅವಭೃಥಸ್ನಾನದಲ್ಲಿ ಮುಗಿಯುತ್ತದೆ. ಒಂಬತ್ತು ದಿನಗಳ ಕಾಲ ಬೆಳಗ್ಗೆ ಮತ್ತು ಸಂಜೆ ಬೇರೆ ಬೇರೆ ವಾಹನಗಳ ಮೇಲೆ ಉತ್ಸವ ನಡೆಯುತ್ತದೆ. ರಾತ್ರಿಉಯ್ಯಾಲೆ, ಆಸ್ಥಾನಗಳು ನಡೆಯುತ್ತವೆ. ಉತ್ಸವಕ್ಕಿಂತ ಮೊದಲು ಧ್ವಜಾರೋಹಣವಾಗುತ್ತದೆ. ಬ್ರಹ್ಮೋತ್ಸವ ನಡೆಯುವುದು ಉತ್ಸವಮೂರ್ತಿಗೆ ಮೊದಲನೆಯ ದಿನ ಶೇಷವಾಹನ, ಚಿಕ್ಕಶೇಷವಾಹನ ಎರಡನೆಯ ದಿನ ಹಂಸವಾಹನ, ಮೂರನೆಯ ದಿನ ಬೆಳಗ್ಗೆ ಸಿಂಹವಾಹನ, ರಾತ್ರಿ ಮುತ್ತಿನ ಚಪ್ಪರದಲ್ಲಿ ಉತ್ಸವ. ನಾಲ್ಕನೆಯ ದಿನ ಹಗಲು ಕಲ್ಪವೃಕ್ಷ ವಾಹನ, ರಾತ್ರಿ ಸರ್ವಭೂಪಾಲ ವಾಹನ. ಐದನೆಯ ದಿನ ಬೆಳಗ್ಗೆ ಮೋಹಿನಿಯ ಅಲಂಕಾರದ ಪಲ್ಲಕ್ಕಿಯ ಉತ್ಸವ. ಅಂದು ರಾತ್ರಿ ಗರುಡೋತ್ಸವ. ಗರುಡವಾಹನ ಉತ್ಸವವಾದ ಕೂಡಲೇ ಹನುಮಂತನ ವಾಹನ ಮೇಲೆ ಉತ್ಸವ ನಡೆಯುತ್ತದೆ. ಇದು ಸರಳವಾಗಿರುತ್ತದೆ. ಆದಿನ ಸಂಜೆ ವಸಂತೋತ್ಸವ, ರಾತ್ರಿ ಗಜವಾಹನ. ಮುಂದೆ ಏಳನೆಯ ದಿನ ಬೆಳಗ್ಗೆ ಸೂರ್ಯಪ್ರಭ ವಾಹನ (ಛಾಯಾಚಿತ್ರ ೯೨), ರಾತ್ರಿ ಚಂದ್ರಪ್ರಭ ವಾಹನ. ಎಂಟನೆಯ ದಿನವೇ ರಥೋತ್ಸವ. ಬೆಳಗ್ಗೆ ಮಲೆಯಪ್ಪನನ್ನು ನಾಚ್ಚಿಯಾರರೊಡನೆ ಅಲಂಕೃತ ರಥದ ಮೇಲೆ ಕೂರಿಸಿ ಬೀದಿಗಳಲ್ಲಿ ಎಳೆಯುತ್ತಾರೆ (ಛಾಯಾಚಿತ್ರ ೯೩). ಆ ದಿನ ರಾತ್ರಿ ಅಶ್ವವಾಹನ ಉತ್ಸವ ನಡೆಯುತ್ತದೆ.

ಕಡೆಯ ದಿನ ಬೆಳಗ್ಗೆ ಉತ್ಸವಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಉತ್ಸವ ಮಾಡಿ ತೀರ್ಥವಾರಿ ತಿರುಮಂಜನ ಮಾಡಿಸುತ್ತಾರೆ. ಅನಂತರ ಉತ್ಸವಮೂರ್ತಿಯು ದೇವಾಲಯಕ್ಕೆ ಹಿಂತಿರುಗುತ್ತದೆ. ಅಲ್ಲಿಗೆ ಒಂಬತ್ತು ದಿನಗಳ ಉತ್ಸವ ಮುಗಿಯುತ್ತದೆ. ಈ ಬ್ರಹ್ಮೋತ್ಸವವನ್ನು ರಾಮಾನುಜರು ಬೆಟ್ಟದ ಮೇಲೆ ನಡೆಯುವ ಹಾಗೇ ಮೊಟ್ಟಮೊದಲಬಾರಿಗೆ ಏರ್ಪಾಟು ಮಾಡಿದಂತೆ ತಿಳಿಯುತ್ತದೆ.



ಛಾ ಚಿ ೯೨. ಸೂರ್ಯಪಥ ಉತ್ಸವ
ವೆಂಕಟೇಶ್ವರ ದೇವಾಲಯ, ತಿರುಮಲ



ಛಾ ಚಿ ೯೩. ಬ್ರಹ್ಮೋತ್ಸವ, ವೆಂಕಟೇಶ್ವರ ದೇವಾಲಯ, ತಿರುಮಲ

ಈ ಬ್ರಹ್ಮೋತ್ಸವ ಅಲ್ಲದೆ ಇನ್ನೊಂದು ಬ್ರಹ್ಮೋತ್ಸವವೂ ಕಾಲೋತ್ಸವವಾಗಿ ನಡೆಯುತ್ತದೆ. ಈ ಉತ್ಸವದಲ್ಲಿ ಧ್ವಜಾರೋಹಣ ಮತ್ತು ಅವಭೃದ್ಧ ವಿಧಿಗಳು ಜರುಗುವುದಿಲ್ಲ. ಕ್ರಿ.ಶ. ೧೫೫೧ರ ಶಾಸನದಲ್ಲಿ ತಿಳಿಸಿರುವಂತೆ ವರ್ಷದಲ್ಲಿ ೧೧ ಬ್ರಹ್ಮೋತ್ಸವಗಳು ನಡೆಯುತ್ತವೆಂದು ಕಂಡುಬರುತ್ತದೆ. ಇಂದು ವರ್ಷದಲ್ಲಿ ೪ ಬ್ರಹ್ಮೋತ್ಸವಗಳು ನಡೆಯುತ್ತವೆ. ಮೇಲೆ ಹೇಳಿದ ಬ್ರಹ್ಮೋತ್ಸವವು ಮುಖ್ಯವಾದುದು. ಇದಲ್ಲದೆ ಕಾರ್ತೀಕ ಮಾಸದ ಕೈಶಿಕ ಏಕಾದಶಿ, ಮುಕ್ಕೋಟಿ ದ್ವಾದಶಿ ಮತ್ತು ರಥಸಪ್ತಮಿ ಈ ದಿನಗಳಲ್ಲೂ ಬ್ರಹ್ಮೋತ್ಸವವು ನಡೆಯುತ್ತದೆ.

ನೈವೇದ್ಯದ ತಿನಿಸುಗಳು

ಉತ್ಸವಗಳ ಸಂದರ್ಭದಲ್ಲಿ ದೇವರ ನೈವೇದ್ಯಕ್ಕೆ ಮಾಡುವ ತಿನಿಸುಗಳು ಶಾಸನಗಳಿಂದ ತಿಳಿದುಬರುತ್ತದೆ. ಉತ್ಸವ ಒಂದಕ್ಕೆ ಗಂಧಹಲ ೧, ಪುಷ್ಪಮಾಲಾ ೧, ತುಳಸಿ ಮಾಲಾ ೧, ಧೂಪದೀಪ ನೈವೇದ್ಯಕ್ಕೆ ಆಹುತಿಗೆ ಮಾನ ೧, ತುಪ್ಪ, ಮೆವುಪರುಪು ೧, ಕರುಚಿಯ ಅಪ್ಪ ೫, ಅತಿರಸ ೫, ಸುಖಿನಪ ೫, ಎಣ್ಣೆಯೂರಿಗೆ ೫, ವಡೆ ೫, ನೆನಗಡಲೆ ಮಾ ೧, ಬೆಲ್ಲ, ೫೦ ಕಬ್ಬು, ತೆಂಗಿನಕಾಯಿ ೬, ಎಳನೀರು ೬, ಬಾಳೆಹಣ್ಣು ೧೦, ಅಡಕೆ ೩೦, ಎಲೆ ೪೦ ಈ ಎಲ್ಲಾ ತಿನಿಸುಗಳು ತಪ್ಪದೆ ನಡೆಸಿಕೊಂಡು ಹೋಗುತ್ತಿದ್ದರು.

ಬೇಲೂರಿನ ಚೆನ್ನಕೇಶವ ದೇವಾಲಯದ ತೆಪ್ಪತಿರುನಾಳ ಉತ್ಸವವನ್ನು ಪಾಲ್ಗುಣ ಭಾದ್ರಪದ ೧೦ ದಿನದಲ್ಲೂ ಉತ್ಸವಕ್ಕೆ ಚೆರಪು ಭೋಜನ ನಿತ್ಯ ಸ್ತುತಿಯಲ್ಲಿ ಸ್ವಾಮಿಗೆ ಉದಯದಲಿ ದೋಸೆ, ಬೆಣ್ಣೆ, ಸಕ್ಕರೆ, ಮದ್ಯಾಹ್ನದಲ್ಲಿ ಆರೋಗಣೆಯಾದ ಮೃಷ್ಟಾನ್ನ ಹರಿವಾಣದ ಛತ್ರ, ಬ್ರಾಹ್ಮಣರ ಜನ ೪ಂಕೆ ಏಕಾಂತದ ಪರಮಾನ್ನ ಚಿಲಿಪಾಲು ಕಷಾಯ, ಕರ್ಪೂರ, ವೀಳೆಯಗಳಿಗೆ ಗ್ರಾಮಗಳನ್ನು ದತ್ತಿಯಾಗಿ ನೀಡಿದೆ.[೧೫೮]

ತೆಪ್ಪೋತ್ಸವಗಳನ್ನು ನಡೆಸಲು ವಿಶೇಷವಾಗಿ ದಾನಿಗಳು ನೀಡಿರುವ ದತ್ತಿಗಳಲ್ಲಿ ಸ್ಥಾನಿಕರು ನಡೆಸಿಕೊಂಡು ಹೋಗುತ್ತಿದ್ದರು. ಈ ಉತ್ಸವಗಳನ್ನು ಅಂದು ಸಂಭ್ರಮದಿಂದ ಆಚರಿಸಲಾಗುತ್ತಿತ್ತು. ದೇವರನ್ನು ತೆಪ್ಪದಲ್ಲಿ ಕೂಡಿಸಿ ಅಲಂಕಾರಮಾಡಿ ಪುಷ್ಕರಣಿಯಲ್ಲಿ ತೆಪ್ಪದ ಮೆರವಣಿಗೆಯನ್ನು ಮಾಡಲಾಗುತ್ತಿತ್ತು. ಇದೊಂದು ಆಕರ್ಷಣೆಯ ಉತ್ಸವವಾಗಿತ್ತು.

ಹಬ್ಬಗಳು

ದೈವಭಕ್ತಿ ಉಜ್ವಲವಾಗಿದ್ದ ವಿಜಯನಗರ ಕಾಲದಲ್ಲಿ ಅರಸರು ದೇವಾಲಯಗಳಲ್ಲಿ ಉತ್ಸವ, ಹಬ್ಬಗಳನ್ನು ವೈಭವದಿಂದ ಆಚರಿಸುತ್ತಿದ್ದರು ಎನ್ನುವುದರಲ್ಲಿ ಯಾವ ಸಂದೇಹವು ಇಲ್ಲ. ಜನರು ಸುಖವಾಗಿದ್ದಾಗ ಹಬ್ಬಗಳನ್ನು ಆಚರಿಸಿ, ದೇವಾಲಯಗಳನ್ನು ಶೃಂಗರಿಸಿ ವಿಶೇಷೋತ್ಸವಗಳನ್ನು ನಡೆಸಿ ತಮ್ಮ ಆನಂದವನ್ನು ದೇವಾಲಯಗಳ ಮುಂದೆ ಪ್ರಕಟಿಸುತ್ತಿದ್ದರು. ಸಾಮಾನ್ಯವಾಗಿ ಹಬ್ಬಗಳಿಗೆ ಧಾರ್ಮಿಕ ಹಿನ್ನೆಲೆಯುಂಟು. ಧಾರ್ಮಿಕ ಭಾವನೆಯನ್ನು ಜನರಲ್ಲಿ ಮೂಡಿಸುವ ಹಾಗೂ ಸುಖ ಸಮೃದ್ಧಿಯನ್ನು ಸೂಚಿಸುವ ಸಾಮಾಜಿಕ ಆಚರಣೆಗಳೆಂದರೆ ಈ ಹಬ್ಬಗಳೇ ಆಗಿವೆ. ಜನರನ್ನು ಸಾಮೂಹಿಕವಾಗಿ ಒಗ್ಗೂಡಿಸುವ ಶಕ್ತಿ ಸಂದರ್ಭಗಳು ಈ ಹಬ್ಬಗಳಿಗೆ ಇವೆ. ದೇವಾಲಯ

ಮತ್ತು ಹಬ್ಬಗಳ ನಡುವೆ ವಿಶೇಷವಾದ ಸಂಬಂಧಗಳು ಉಂಟು. ದಾನಿಗಳು ಈ ಹಬ್ಬಗಳ ದಿನದಂದು ದೇವಾಲಯಗಳಿಗೆ ವಿಶೇಷವಾಗಿ ದಾನದತ್ತಿಯನ್ನು ನೀಡುತ್ತಿದ್ದರು. ದೇವಾಲಯಗಳು ಹಬ್ಬಗಳ ಸಂದರ್ಭದಲ್ಲಿ ಪೂಜೆಪುನಸ್ಕಾರಗಳನ್ನು ಆರಂಭಿಸಿ ಜನರನ್ನು ಆಕರ್ಷಿಸುತ್ತಿದ್ದವು. ವಿಜಯನಗರ ಕಾಲದ ಹಬ್ಬಗಳನ್ನು ಶಾಸನ, ವಿದೇಶಿ ಪ್ರವಾಸಿಗರ ಕಥನ, ಅಂದಿನ ಸಾಹಿತ್ಯ ಕೃತಿಗಳಲ್ಲಿ ವರ್ಣಿಸಿರುವ ವಿವರಣೆಗಳಿಂದ ದೊರೆಯುತ್ತವೆ.

ಹಬ್ಬಗಳನ್ನು ಆಚರಿಸುವ ಸಂಪ್ರದಾಯ ಪ್ರಾಚೀನ ಕಾಲದಿಂದಲೂ ಕಂಡುಬರುತ್ತದೆ. ಈ ದೃಷ್ಟಿಕೋನವನ್ನು ಮುಂದಿನವರೂ ಆಚರಿಸಿಕೊಂಡು ಹೋಗುವುದು ರೂಢಿಯಾಗಿದೆ. ಹಿಂದಿನವರ ಬಗ್ಗೆ ಇವರಲ್ಲಿ ಇರುವ ನಂಬಿಕೆಯಿಂದಲೇ ಹಬ್ಬಗಳನ್ನು, ವ್ರತಾಚರಣೆಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಯಾವುದೇ ಶುಭದಿನದಲ್ಲಿ ಈ ಹಬ್ಬಗಳಿಗೆ ದಿನವನ್ನು ಗೊತ್ತುಮಾಡಿ ಸಮಸ್ತ ಜನರು ಆಚರಿಸಿ ವ್ಯಕ್ತಿ ಸ್ವಾರ್ಥತೆಯನ್ನು ಮರೆತು ದೇವರ ಬಗ್ಗೆ ಒಂದಿಷ್ಟು ಯೋಚನೆ ಮಾಡುವ ಸಲುವಾಗಿ ಭಕ್ತಿಯಿಂದ ಹಬ್ಬಗಳನ್ನು ಆಚರಿಸುತ್ತಿದ್ದರು. ಈ ಶುಭ ಸಂದರ್ಭದಲ್ಲಿ ರಾಜರು, ದಾನಿಗಳು, ಆಸ್ತಿಕರು ಅನೇಕ ದತ್ತಿಗಳನ್ನು ಬಿಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಇದರಿಂದ ಅಂದಿನ ಜನರು ಎಷ್ಟೆಷ್ಟು ವಿಧದ ಹಬ್ಬ ಹುಣ್ಣಿಮೆಗಳನ್ನು ಆಚರಿಸುತ್ತಿದ್ದರು ಎಂಬುದರ ಸ್ವರೂಪ ಗೊತ್ತಾಗುತ್ತದೆ. ಅವುಗಳಲ್ಲಿ ಕೆಲವನ್ನು ಹೆಸರಿಸಬಹುದು :

ದೀಪಾವಳಿ : ವಿಜಯನಗರ ಕಾಲದ ಪ್ರಮುಖ ಹಬ್ಬಗಳಲ್ಲಿ ದೀಪಾವಳಿಯೂ ಒಂದು. ಶಾಸನಗಳು ಮತ್ತು ವಿದೇಶಿ ಪ್ರವಾಸಿ ಕಥನ ಹಾಗೂ ಸಾಹಿತ್ಯ ಕೃತಿಗಳಲ್ಲಿ ಈ ಹಬ್ಬದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಈ ಹಬ್ಬದಲ್ಲಿ ಎಲ್ಲಾ ವರ್ಗದ ಜನರು ಸಮಾನವಾಗಿ ದೇವಾಲಯ ಮತ್ತು ಮನೆಗಳಲ್ಲಿ ದೀಪಗಳನ್ನು ಹಚ್ಚಿ ಉರಿಸುತ್ತಿದ್ದರು.

ವಿಜಯನಗರ ಕಾಲದಲ್ಲಿ ದೀಪಾವಳಿಯನ್ನು ಅಶ್ವಯುಜ ಬಹುಳ, ಚತುರ್ದಶಿ ಅಮಾವಾಸ್ಯೆ ಕಾರ್ತಿಕ ಶುದ್ಧ ಪಾಡ್ಯದಂದು ಐದು ದಿನಗಳವರೆಗೆ ಆಚರಿಸುತ್ತಿದ್ದರು.[೧೯೯] ವಿದೇಶಿ ಪ್ರವಾಸಿಗನಾದ ನಿಕೊಲೋ ಕೊಂಟಿಯು ತನ್ನ ಕಥನದಲ್ಲಿ ವರ್ಷದಲ್ಲಿ ನಾಲ್ಕು ಸಲ ವಿಜಯನಗರದಲ್ಲಿ ವಿಶೇಷ ವೈಭವದ ಉತ್ಸವಗಳನ್ನು ಆಚರಿಸುತ್ತಾರೆ ಎಂದು ಹೇಳಿರುವನು. ಮೊದಲನೆಯದು ಯುಗಾದಿ, ಎರಡನೆಯದು ದೀಪಾವಳಿ, ಮೂರನೆಯದು ಮಹಾನವಮಿ, ನಾಲ್ಕನೆಯದು ಹೋಳಿಹಬ್ಬಗಳಾಗಿವೆ. ಇದರಲ್ಲಿ ಎರಡನೆಯದು ದೀಪಾವಳಿ ಇದು ಅಕ್ಟೋಬರ್ - ನವಂಬರ್ ತಿಂಗಳಲ್ಲಿ ನಡೆಯುವುದು. ದೇವಾಲಯಗಳ ಒಳಗೆ ಮತ್ತು ಮಾಳಿಗೆಯ ಮೇಲೆ ಸೂಸಿಮಣ್ಣಿನ ಎಣ್ಣೆಯ ಅಸಂಖ್ಯೆ ದೀಪಗಳನ್ನು ಹಚ್ಚಿ ಅವುಗಳನ್ನು ಹಗಲು ರಾತ್ರಿ ಉರಿಸುವರು ಎಂದು ಹೇಳಿದ್ದಾನೆ.[೨೦೦]

ಮತ್ತೊಂದು ಕಡೆ ನಿಕೊಲೋ ಕೊಂಟಿಯು ಹೀಗೆ ಹೇಳುತ್ತಾನೆ : "ದೀಪಾವಳಿ ಹಬ್ಬವು ಕಾರ್ತಿಕ ಮಾಸದಲ್ಲಿ ಬರುತ್ತದೆ ಮತ್ತು ಈ ಹಬ್ಬವನ್ನು ವಿಷ್ಣುದೇವನು ನರಕಾಸುರ ಮತ್ತು ಇತರ ಅಸುರರ ಮೇಲೆ ಸಾಧಿಸಿದ ವಿಜಯದ ನೆನಪಿಗೆ ಆಚರಿಸುತ್ತಾರೆ. ರಾತ್ರಿಯ ವೇಳೆಯಲ್ಲಿ ಅಸುರರನ್ನು ಕೊಂದಿರುವುದಕ್ಕಾಗಿ ಭೂಮಿಗೆ ಬೆಳಕನ್ನು ನೀಡಿದಕ್ಕಾಗಿ ಹಗಲು - ರಾತ್ರಿ ಸಾಲುಸಾಲಾಗಿ ದೀಪಗಳನ್ನು ದೇವಾಲಯ, ಮನೆ ಹಾಗೂ ಬೀದಿ ಬೀದಿಗಳಲ್ಲಿ ಛಾವಣಿಗಳ

ಮೇಲೆ ಕಟ್ಟೆಯ ಮೇಲೆ ಎಲ್ಲಾ ಕಡೆಯಿಂದಲೂ ದೀಪಗಳನ್ನು ಉರಿಸುತ್ತಾರೆ" ಎಂದು ಉಲ್ಲೇಖಿಸಿದ್ದಾನೆ.[೨೦೧] ಇಂದು ಸಹ ಈ ಪೂಜ್ಯಭಾವನೆಯಿಂದಲೇ ಅಸಂಖ್ಯ ದೀಪಗಳನ್ನು ಹಚ್ಚಿ ದೀಪಾವಳಿಯನ್ನು ಆಚರಿಸುವರು.

ಅಂದಿನ ಈ ಹಬ್ಬದಲ್ಲಿ ರಾಜರು, ರಾಣಿಯರು, ಸಾಮಂತರು, ದಂಡನಾಯಕರು, ಸಾಮಾನ್ಯಜನರು ದೀಪಾವಳಿ ಹಬ್ಬವನ್ನು ಉತ್ಸಾಹದಿಂದ ಆಚರಿಸಿ, ದೇವಾಲಯಗಳಿಗೆ ದತ್ತಿಯನ್ನು ನೀಡುತ್ತಿದ್ದರು. ರಾಯನ ಕಾಲದ ಶಾಸನಗಳಲ್ಲಿ ದೀಪಾವಳಿ ಹಬ್ಬದಂದು ದಾನ ನೀಡಿರುವುದು ಕಂಡುಬರುವುದಿಲ್ಲ. ಆದರೆ ವೈಷ್ಣವ ದೇವಾಲಯಗಳಲ್ಲಿ ದೀಪಾವಳಿ ಹಬ್ಬವನ್ನು ಆಚರಿಸುತ್ತಿದ್ದರು. ಸದಾಶಿವರಾಯನ ಕಾಲದ ಒಂದು ಶಾಸನದಲ್ಲಿ ದೀಪಾವಳಿಯ ೩ ದಿನ ಉತ್ಸವಗಳಲ್ಲಿ ಹಂಪಿಯ ವಿಠಲ ದೇವರನ್ನು ಪರಾಂಕುಶಮಂಟಪಕ್ಕೆ ತಂದಾಗ ಉತ್ಸವದ ಸೇವೆಗಾಗಿ ಗ್ರಾಮದಾನ ಮಾಡಿರುವುದು ಕಂಡುಬರುತ್ತದೆ.[೨೦೨]

ಪ್ರತಿಯೊಬ್ಬ ಅರಸನು ದೀಪಾವಳಿಯ ದಿನದಂದು ಮಾಡಬೇಕಾದ ಕರ್ತವ್ಯದ ಬಗ್ಗೆ ಆಕಾಶ ಭೈರವ ಕಲಾಪದ ಪ್ರಕಾರ "ಅರಸನಾದವನು ಪ್ರಾತಃಕಾಲದಲ್ಲಿ ಎದ್ದು ಅಭ್ಯಂಜನ ಸ್ನಾನಮಾಡಿ ಮುಂದೆ ದರ್ಭಾರಕ್ಕೆ ಬಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದನು. ಹಾಗೆಯೇ ಈ ಸಮಯದಲ್ಲಿ ಸಂಗೀತ, ನೃತ್ಯದ ವ್ಯವಸ್ಥೆ ಇರುತ್ತಿತ್ತು. ಕೊನೆಗೆ ಕಾಣಿಕೆಯನ್ನು ಹಂಚುತ್ತಿದ್ದನು. ಮೂರು ದಿನಗಳ ಕಾಲ ನಡೆಯುವ ಹಬ್ಬವನ್ನು ರಾತ್ರಿ ಸಮಯದಲ್ಲಿ ವಿವಿಧ ಬಣ್ಣದ ಪಟಾಕಿ ಮದ್ದುಗಳನ್ನು ಸುಡುವ ಮೂಲಕ ಸಂಭ್ರಮಿಸುತ್ತಿದ್ದರು.[೨೦೩] ಈ ಹಬ್ಬದಲ್ಲಿ ಪಗಡೆಯಾಟ ಆಡುವುದು ವಿಶೇಷವಾಗಿತ್ತು. ಅಂದಿನ ಅರಸರು ಪಗಡೆ ಆಟವನ್ನು ಆಡುತ್ತಿದ್ದರು. ಕೃಷ್ಣದೇವರಾಯನ ಮಗಳಾದ ಮೋಹನಾಂಗಿಯು ಪಗಡೆ ಆಟದಲ್ಲಿ ಅತಿ ಪ್ರಸಿದ್ಧಳಾಗಿದ್ದಳೆಂಬುದು ಅನೇಕ ಬರಹಗಳಿಂದ ಗೊತ್ತಾಗುತ್ತದೆ.[೨೦೪]

ಅಂದಿನ ಕಾಲದಲ್ಲಿ ದೀಪಾವಳಿ ಹಬ್ಬ ಮತ್ತು ಉತ್ಸವಗಳನ್ನು ೩ ರಿಂದ ೫ ದಿನಗಳವರೆಗೆ ಆಚರಿಸುತ್ತಿದ್ದರು. ಆ ಪುಣ್ಯದಿನದಂದು ತಮಗೂ ತಮ್ಮ ಹಿರಿಯರಿಗೂ ಪುಣ್ಯದೊರೆಯಲಿ ಎಂದು ದೇವಾಲಯಗಳಿಗೆ ದಾನದತ್ತಿಗಳನ್ನು ನೀಡುತ್ತಿದ್ದರು. ದೀಪಾವಳಿ ಹಬ್ಬವು ವಿಜಯನಗರ ಕಾಲದ ಮಹತ್ವದ ಹಬ್ಬಗಳಲ್ಲಿ ಒಂದಾಗಿತ್ತು.

ಮಕರ ಸಂಕ್ರಾಂತಿ : ಭಾರತೀಯರು ಪ್ರಾಚೀನ ಕಾಲದಿಂದಲೂ ಸಂಕ್ರಾಂತಿ ಹಬ್ಬವನ್ನು ಆಚರಿಸಿಕೊಂಡು ಬಂದಿದ್ದಾರೆ. ಈ ಹಬ್ಬವು ಸೂರ್ಯನ ಪಥ ಬದಲಾವಣೆಗೆ ಸಂಬಂಧಿಸಿದ ಪರ್ವದಿನವಾಗಿದೆ. ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ದಾಟುವ ಸಮಯವಾಗಿದೆ. ಮಕರದಿಂದ ಮೊದಲುಗೊಂಡು ಆರು ರಾಶಿಗಳಲ್ಲಿ ಉತ್ತರಾಭಿಮುಖವಾಗಿ ಸೂರ್ಯನು ಸಂಚಾರಕ್ಕೆ ತೊಡಗುವನೆಂದು ಮತ್ತೆ ಸೂರ್ಯನು ಮಕರ ರಾಶಿಯನ್ನು ಅಂದು ಪ್ರವೇಶಿಸುವುದರಿಂದ ಮಕರ ಸಂಕ್ರಾಂತಿ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಇಂಗ್ಲಿಶ್ ಪದ್ಧತಿಯ ಕ್ಯಾಲೆಂಡರಿನಂತೆ ಈ ದಿನವು ಜನವರಿ ತಿಂಗಳ ೧೪ ಅಥವಾ ೧೫ ನೆಯ ದಿನಾಂಕವಾಗಿರುತ್ತದೆ.[೨೦೫]

ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಚಿಕ್ಕತಿಮ್ಮಯ್ಯದೇವನ ಮಗ ತಿಮ್ಮರಾಜನು ಹಂಪಿಯ ಶ್ರೀರಾಮಚಂದ್ರ ದೇವರ ಭಂಡಾರಕ್ಕೆ ಕೆಲವು ದಾನಗಳನ್ನು ನೀಡುತ್ತಾನೆ. ಈ ದಾನದಲ್ಲಿ ರಾಜಮಾನ್ಯವಾಗಿ ಬರುವ ಪಾಲನ್ನು

ದೇವರ ಉತ್ಸವಗಳಿಗಾಗಿ ಬಿಡುತ್ತಾನೆ. ಸಂಕ್ರಾಂತಿಯ ಕರಿಯಬೇಟೆ ಸಂದರ್ಭದಲ್ಲಿ ಅಶ್ವಾರೋಹಣ ಉತ್ಸವವನ್ನು ನಡೆಸಬೇಕೆಂದು ಧರ್ಮಶಾಸನದಲ್ಲಿ ಉಲ್ಲೇಖವಿದೆ.[೨೦೬] ಮಾರವಪಳ್ಳಿ ತಿರುವೇಂಗಳನಾಥ ದೇವಾಲಯಕ್ಕೆ ಸಂಕ್ರಾಂತಿಯ ಉತ್ಸವಗಳಿಗೆ ಗ್ರಾಮದ ದತ್ತಿಯನ್ನು ನೀಡಿ ನಡೆಸಿಕೊಂಡು ಬರಲು ಹೇಳಿದೆ.[೨೦೭] ಕೃಷ್ಣದೇವರಾಯನು ಸಾಳುವ ಗೋವಿಂದರಾಜಗಳು ಅವರಿಗೆ ಕೊಟ್ಟ ನಾಯಕತನಕ್ಕೆ ತಾವು ಪಾಲಿಸಿದ ಕಡುಗನಾಡ ತೆರಕಣಾಂಬಿ ಸ್ಥಳದಲ್ಲಿ ಕೋಡಿಹಳ್ಳಿಯ ಕಾಲುವಳಿ ಅಣ್ಣೆಯೂರು, ಚೆನ್ನಯ್ಯಪುರ ಸಹ ಆ ಕೋಡಿಹಳ್ಳಿಯ ಗ್ರಾಮಕ್ಕೆ ಸಲ್ಲುವುದು ಇಲ್ಲಿ ವಿವಿಧ ವೃತ್ತಿಗಳ ಮೇಲೆ ತೆರಿಗೆ ವಸೂಲಿ ಮಾಡಿಕೊಂಡು ತೆರಕಣಾಂಬಿಯ ಲೆಕ್ಕದಲ್ಲಿ ಕೂಡಿಸಿ, ಮಕರಸಂಕ್ರಾಂತಿಯ ಪುಣ್ಯಕಾಲದಲ್ಲಿ ವಿರೂಪಾಕ್ಷದೇವರ ಸನ್ನಿಧ್ಧಿಗೆ ಕೊಡಲಾಯಿತ್ತು."[೨೦೮] ರಾಯನ ಕಾಲದಲ್ಲಿ ಮಕರಸಂಕ್ರಾಂತಿಯು ಒಂದು ಪುಣ್ಯದಿನವಾಗಿತ್ತು. ಅಂದು ದಾನದತ್ತಿಯನ್ನು ವಿವಿಧ ದೇವಾಲಯಗಳಿಗೆ ನೀಡಿರುವರು. ಅದನ್ನು ಮುಂದಿನ ಅರಸರು ಪಾಲಿಸಿಕೊಂಡು ಬಂದುದನ್ನು ಶಾಸನಗಳಲ್ಲಿ ಹೇಳಲಾಗಿದೆ. ಈ ಸಂಕ್ರಾಂತಿಯ ಹಬ್ಬವನ್ನು ವಿಶೇಷವಾಗಿ ವೈಷ್ಣವರು ಹೆಚ್ಚು ಆಚರಿಸುತ್ತಾರೆ. ಸಂಗಮರ ಕಾಲದಲ್ಲಿ ಈ ಹಬ್ಬವು ಅಷ್ಟೊಂದು ವಿಶೇಷತೆ ಪಡೆದಿರುವುದಿಲ್ಲ. ಆದರೆ ಮುಂದೆ ಬಂದಂತಹ ಸಾಳುವ, ತುಳುವರ ಕಾಲಕ್ಕೆ ಹೆಚ್ಚು ಆಚರಣೆಗೆ ಬಂದುದು ಶಾಸನಗಳಿಂದ ಗೊತ್ತಾಗುತ್ತದೆ.

ಏಕಾದಶಿ ಮತ್ತು ದ್ವಾದಶಿ : ಪ್ರಾಚೀನ ಕಾಲದಿಂದಲೂ ಪ್ರಥಮ ಏಕಾದಶಿಯ ಜೊತೆಯಲ್ಲಿ ಉತ್ಥಾನ ದ್ವಾದಶಿಯನ್ನು ಆಚರಿಸುತ್ತಾ ಬಂದಿದ್ದಾರೆ. ವಿಜಯನಗರ ಕಾಲದಲ್ಲಿ ಏಕಾದಶಿ, ದ್ವಾದಶಿಗಳಿಗೆ ಹೆಚ್ಚು ಮಹತ್ವಕೊಟ್ಟು ಅರಸರು ಮತ್ತು ನಾಡಿನ ಎಲ್ಲಾ ವರ್ಗದವರು ಆಚರಿಸುತ್ತಿದ್ದುದು ಶಾಸನಗಳಲ್ಲಿ ಕಂಡುಬರುತ್ತದೆ. ಪ್ರತಿವರ್ಷವು ಆಷಾಡಮಾಸ ಶುಕ್ಲಪಕ್ಷ ಏಕಾದಶಿ ತಿಥಿಯೂ ಪ್ರಥಮ ಏಕಾದಶಿ ಶಯನೀ ಏಕಾದಶಿ ಎಂದು ಧರ್ಮಶಾಸ್ತ್ರದಲ್ಲಿ ಪ್ರಸಿದ್ಧವಿದೆ. ಅಂದಿನ ದಿನ ಮಹಾವಿಷ್ಣು ನಾರಾಯಣನು ಶೇಷಶಾಯಿಯಾಗಿ ಮಲಗುತ್ತಾನೆ. ಆ ದಿನದಿಂದ ನಾಲ್ಕು ತಿಂಗಳಗಳವರೆಗೆ ಅವನ ಶಯನೋತ್ಸವವು ನಡೆಯುವುದು. ಆ ದಿನ ಎಲ್ಲಾ ಧರ್ಮದ ಜನರು ಉಪವಾಸ, ವ್ರತ, ಭಜನೆ, ಕೀರ್ತನೆಗಳನ್ನು ಮಾಡುತ್ತಾರೆ.

ಕ್ರಿ.ಶ. ೧೬ನೇ ಶತಮಾನದಲ್ಲಿ ವಿಜಯನಗರ ಕಾಲದಲ್ಲಿ ಪ್ರಥಮ ಏಕಾದಶಿ ಮತ್ತು ಉತ್ಥಾನ ದ್ವಾದಶಿಯು ಹೆಚ್ಚು ಮಹತ್ವವನ್ನು ಪಡೆದುಕೊಂಡಿದ್ದವು. ಸಾಳುವ ಮತ್ತು ತುಳುವ ವಂಶದ ದೊರೆಗಳು ವೈಷ್ಣವ ಧರ್ಮವನ್ನು ರಾಜಧರ್ಮವಾಗಿ ಸ್ವೀಕರಿಸಿದ ಮೇಲೆ ಈ ಏಕಾದಶಿ ಮತ್ತು ದ್ವಾದಶಿಯನ್ನು ವೈಭವದಿಂದ ಆಚರಿಸಲು ಪ್ರಾರಂಭಿಸಿದರು. ಕೃಷ್ಣರಾಯರು ಆಳ್ವಿಕೆ ಮಾಡುವಾಗ ತಿರುವೇಂಗಳನಾಥ ದೇವರಿಗೆ ದೌಂಮರಿಪನ್ನು ಧಾರೆಯರೆದು ನೀಡಿದ ಧರ್ಮಶಾಸನದಲ್ಲಿ, ಕೇಶವನಾಥ ಮತ್ತು ಮಾಚಿರಾಜು ಮೊದಲಾದ ತಮ್ಮ ಜಾತಿಯ ೨೪ ಕುಲಗಳ ಜನರು ತಿರುವೇಂಗಳನಾಥನಿಗೆ ಉಭಯ ಏಕಾದಶಿ ಮತ್ತು ದ್ವಾದಶಿ ಮಹೋತ್ಸವಕ್ಕೆ, ಪೂರ್ಣಿಮಿ ಸಂಕ್ರಾಂತಿ, ಧನುರ್ಮಾಸ ಕಾರ್ತೀಕ ದೀಪಾರಾಧನೆ, ವಸಂತೋತ್ಸವಕ್ಕೆ ೨೪ ಕುಲಗಳ ಜನರಿಗೆ ಪುಣ್ಯವಾಗಲೆಂದು ದಾನ ನೀಡಲಾಗಿದೆ.[೨೦೯]

ಶ್ರೀಕೃಷ್ಣದೇವರಾಯನು ಪ್ರಥಮ ಏಕಾದಶಿಯ ಪುಣ್ಯಕಾಲದಲ್ಲಿ ವಿಜಯನಗರ ಪಟ್ಟಣದ ಚಿಕ್ಕಹಂಪನಕೆರೆಯ ಹಿರಿಯ ತಿರುವೇಂಗಳನಾಥ ದೇವರ ಅಮೃತಪಡಿ ನೈವೇದ್ಯ, ಧೂಪದೀಪಕ್ಕೆ, ಅಂಗರಂಗವೈಭವಕ್ಕೆ ತುಂಗಭದ್ರಾ ತೀರದಲ್ಲಿರುವ ವಿಠಲೇಶ್ವರ ಸನ್ನಿಧಿಯಲ್ಲಿ ಹಿರಣ್ಯದಾನವನ್ನು ಮಾಡಿದನು.[೨೦]

ಕಾರ್ತೀಕ ಮಾಸದ ಶುಕ್ಲಪಕ್ಷ ದ್ವಾದಶಿ ತಿಥಿಗೆ ಉತ್ಥಾನ ದ್ವಾದಶಿ ಎಂದು ಕರೆಯುವರು. ಶ್ರೀ ಮಹಾವಿಷ್ಣುವು ಎಚ್ಚರಗೊಳ್ಳುವುದಕ್ಕೆ ಉತ್ಥಾನ ಎಂದು ಕರೆಯುತ್ತಾರೆ. ಉತ್ಥಾನ ದ್ವಾದಶಿಯಂದು ತುಳಸೀ ವೃಂದಾವನಕ್ಕೆ ಧೂಪ - ದೀಪ ಗಂಧಾಕ್ಷತೆಗಳಿಂದ ವಿಶೇಷ ಪೂಜೆ ಮಾಡುವರು. ವೃಂದಾದೇವಿಯ ಅನುಗ್ರಹಕ್ಕೆ ಪಾತ್ರರಾಗಲು ತ್ರಿಮೂರ್ತಿಗಳು ಅವರ ಪತ್ನಿಯರಾದ ಶಕ್ತಿದೇವಿಯರು ಇತರ ದೇವತೆಗಳು ಅಲ್ಲಿ ಸೇರುತ್ತಾರೆಂದು ತುಳಸಿ ಮಹಾತ್ಮೆಯಲ್ಲಿ ಹೇಳಿದೆ.[೨೧] ಉತ್ಥಾನ ದ್ವಾದಶಿಯೆಂದು 'ಮಿರತೂರು' ಚೆನ್ನಕೇಶವ ದೇವಾಲಯಕ್ಕೆ ದಳವಾಯಿ ಭಂಡಾರಿನಾಯಕ ತನಗೆ ಸರ್ವಮಾನ್ಯವಾಗಿ ಕೊಟ್ಟ ಭೂಮಿಯನ್ನು ತನ್ನ ತಂದೆ ತಾಯಿಗಳಿಗೆ ಪುಣ್ಯವಾಗಲೆಂದು ಚಿತ್ರಲಾ ಬೊಮ್ಮನಾಯಕನ ನೆನಪಿನಲ್ಲಿ ದಾನ ಮಾಡಿದನು.[೨೨] ವಿಜಯನಗರ ಕಾಲದಲ್ಲಿ ಪ್ರಥಮ ಏಕಾದಶಿ ಮತ್ತು ಉತ್ಥಾನ ದ್ವಾದಶಿಯನ್ನು ಹೆಚ್ಚು ವೈಷ್ಣವರು ಆರಾಧಿಸುತ್ತಿದ್ದುದು ಕಂಡುಬರುತ್ತದೆ. ಶಾಸನಗಳಲ್ಲಿ ಈ ವ್ರತಗಳನ್ನು ಆಚರಿಸುವುದು ಕಂಡುಬರುವುದಿಲ್ಲ, ಆದರೆ ದಾಸರ ಕೀರ್ತನೆಗಳಲ್ಲಿ ಉಪವಾಸ ವ್ರತಗಳನ್ನು ವಿಜಯನಗರ ಕಾಲದಲ್ಲಿ ಆಚರಿಸಲಾಗುತ್ತಿತ್ತು ಎಂದು ತಿಳಿದುಬರುತ್ತದೆ.

ರಥಸಪ್ತಮಿ : ಮಾಘಮಾಸ ಶುಕ್ಲಪಕ್ಷದ ಸಪ್ತಮಿ ತಿಥಿಗೆ ರಥಸಪ್ತಮಿ ಎಂದು ಕರೆಯುತ್ತಾರೆ. ಈ ರಥಸಪ್ತಮಿ ವ್ರತವನ್ನು ಹನ್ನೆರಡು ತಿಂಗಳವರೆಗೆ ಪ್ರತಿ ಶುಕ್ಲಪಕ್ಷ ಸಪ್ತಮಿ ದಿವಸ ವಿಶೇಷವಾಗಿ ರವಿವಾರವಿದ್ದಲ್ಲಿ ಪೂಜಾದಿಗಳನ್ನು ಮಾಡಬೇಕೆಂದು ಹೇಳುತ್ತಾರೆ. ಇದರಿಂದ ಜನರ ಆರೋಗ್ಯ ಹಾಗೂ ಸಾಂಸಾರಿಕ ಕಷ್ಟಗಳು ಬರಲಾರದೆಂದು ಆರೋಗ್ಯಶಾಸ್ತ್ರದಲ್ಲಿ ಹೇಳಿದೆ.

ರಥಸಪ್ತಮಿ ದಿವಸ ಸಪ್ತ ಅಶ್ವಗಳನ್ನು ಹೂಡಿದ ರಥದ ಸೂರ್ಯನು ಸಂಚರಿಸುತ್ತಾನೆಂಬುದು ಪುರಾಣಗಳ ಹೇಳಿಕೆಯಾಗಿದೆ. ಸಪ್ತ ಎಂಬ ಹೆಸರುಳ್ಳ ಒಂದೇ ಕುದುರೆಯು ಸೂರ್ಯನ ರಥವನ್ನು ಎಳೆಯುತ್ತದೆ ಎಂದು ಋಗ್ವೇದದ ಮತ. ಸೂರ್ಯನ ಉತ್ತರಾಯನ ಪಥಗಮನವು ಹಿಂದೆ ರಥಸಪ್ತಮಿಯಿಂದ ಪ್ರಾರಂಭವಾಗುತ್ತಿದ್ದಿರಬೇಕು.[೨೩] ರಥಸಪ್ತಮಿಯ ಪ್ರಯುಕ್ತ ಪುಣ್ಯಸ್ನಾನ ಮಾಡಿದ ಮೇಲೆ ಬಂಗಾರ, ಬೆಳ್ಳಿಯ ಹಾಗೂ ಕಂಚಿನ ದೀಪಗಳನ್ನು ಮಾಡಿ ನದಿಯ ದಂಡೆಯ ಮೇಲೆ ಇಟ್ಟು ಸೂರ್ಯನನ್ನು ಪೂಜಿಸಿ ಆ ದೀಪಗಳನ್ನು ನೀರಿನಲ್ಲಿಯೇ ಬಿಡುವ ವಾಡಿಕೆ ಇತ್ತು ಮತ್ತು ದೇವಾಲಯಗಳಿಗೆ ಅನೇಕ ದತ್ತಿಗಳನ್ನು ಸಹ ಕೊಡುತ್ತಿದ್ದರು.[೨೪]

ರಥಸಪ್ತಮಿಯು ಪ್ರಾಚೀನಕಾಲದಿಂದಲೂ ವಿಶಿಷ್ಟತೆಯನ್ನು ಪಡೆದುಕೊಂಡು ಬಂದ ಹಬ್ಬವಾಗಿದೆ. ವಿಜಯನಗರ ಕಾಲದಲ್ಲಿ ಕೆಲವು ಶಾಸನಗಳಿಂದ ರಥಸಪ್ತಮಿ ದಿನ ದಾನದತ್ತಿಯನ್ನು ಅನೇಕ ದೇವಾಲಯಗಳಿಗೆ ನೀಡಿದುದು ಕಂಡುಬಂದರೆ, ಇನ್ನೂ ರಥಸಪ್ತಮಿಯ ಹಬ್ಬವನ್ನು ಆಚರಿಸಲಿಕ್ಕೆ ದಾನನೀಡಿದುದು ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಈ ಹಿನ್ನೆಲೆಯಲ್ಲಿ ರಾಯನ ಕಾಲದಲ್ಲಿ ರಥಸಪ್ತಮಿಯನ್ನು ಆಚರಿಸಲಾಗುತ್ತಿತ್ತು ಎಂಬುದು ತಿಳಿದುಬರುತ್ತದೆ.

ಕ್ರಿ.ಶ. ೧೫೨೧ರಲ್ಲಿ ಶ್ರೀಕೃಷ್ಣದೇವರಾಯನ ಮಂಡಲೇಶ್ವರನಾದ ಚಿಕ್ಕತಿಮ್ಮಯ್ಯ ಅವರ ಮಗ ತಿಮ್ಮರಾಯನು ಸಂಡೂರು ಸೀಮೆಯೊಳಗೆ ಬರುವ ತಾಳೂರು ಗ್ರಾಮದಲ್ಲಿ ಕೆರೆಯನ್ನು ಕಟ್ಟಿಸಿ, ಹಂಪಿಯ ಶ್ರೀರಾಮಚಂದ್ರ ದೇವಾಲಯದಲ್ಲಿ ಉತ್ಸವಮಂಟಪವನ್ನು ಕಟ್ಟಿಸಿದನು. ತಾವು ಕಟ್ಟಿಸಿದ ಮಂಟಪದಲ್ಲಿ ಉತ್ಸವಗಳನ್ನು ನಡೆಸಬೇಕೆಂದು ತಮ್ಮ ತಂದೆ ತಾಯಿಗಳಿಗೆ ಪುಣ್ಯದೊರೆಯಲಿ ಎಂದು ರಥಸಪ್ತಮಿಯ ಪುಣ್ಯಕಾಲದಲ್ಲಿ ಶ್ರೀರಾಮಚಂದ್ರ ದೇವರ ಸೇವೆಗೆ ಗದ್ದೆಯನ್ನು ದಾನ ನೀಡಿದನು.[೨೧೫] ರಾಯನ ಆಳ್ವಿಕೆಯಲ್ಲಿ ರಥಸಪ್ತಮಿಯ ದಿನ ಕಾಲವೂರ ಎಂಬ ಹಳ್ಳಿಯನ್ನು ಕೃಷ್ಣಾಪುರ ಎಂದು ಮರುನಾಮಕರಣ ಮಾಡಿ ಅನೇಕ ಬ್ರಾಹ್ಮಣರಿಗೆ ದಾನದತ್ತಿಯನ್ನು ನೀಡಲಾಗಿದೆ.[೨೧೬] ಇಲ್ಲಿ ಮಹಾಮಂಡಲೇಶ್ವರರು ಭೂಮಿಯನ್ನು ದೇವಾಲಯಗಳಿಗೆ ದತ್ತಿಯಾಗಿ ನೀಡಿರುವುದನ್ನು ಶಾಸನಗಳು ತಿಳಿಸುತ್ತವೆ.

ವಸಂತೋತ್ಸವ : ಭಾರತದಲ್ಲಿ ಎಲ್ಲೆಡೆಯೂ ವಸಂತೋತ್ಸವವನ್ನು ಪಾಲ್ಗುಣ ಪೌರ್ಣಮಿಯಂದು ಆಚರಿಸುವರು. ಈ ಹಬ್ಬವನ್ನು ಪ್ರಾಚೀನ ಕಾಲದಿಂದಲೂ ಆಚರಿಸುತ್ತ ಬಂದಿರುವುದು ಕಂಡುಬರುತ್ತದೆ. ಇದು ಶ್ರೀಕೃಷ್ಣನು ಗೋಪಿಕಾಸ್ತ್ರೀಯರೊಡನೆ ಆಡಿದ ಆಟಗಳ ಅನುಕರಣೀಯವಾಗಿದೆ. ಈ ಹಬ್ಬದಲ್ಲಿ ತೂಗುಯ್ಯಾಲೆ ಆಟವನ್ನು ಆಡುತ್ತಾರೆ. ಅಂದರೆ ದೇವರ ಮೂರ್ತಿಯನ್ನು ಉಯ್ಯಾಲೆಯಲ್ಲಿ ಇಟ್ಟು ವಿಶೇಷವಾಗಿ ಸಿಂಗಾರ ಮಾಡಿ ಜೋಕಾಲಿಯನ್ನು ತೂಗುತ್ತಾ ಹಾಡುತ್ತಾರೆ. ಇದಕ್ಕಾಗಿಯೇ ವಿಶೇಷವಾದ ಹಾಡುಗಳನ್ನು ಕಟ್ಟಿರುತ್ತಾರೆ.[೨೧೭]

ವಸಂತೋತ್ಸವದ ಬಗ್ಗೆ ಪಿಟ್ರೋ - ಡೆಲ್ಲಾವಾಲೆ ಹೀಗೆ ಹೇಳಿದ್ದಾನೆ : ಪಾಲ್ಗುಣಮಾಸದ ಪೌರ್ಣಮಿಯ ದಿನದಂದು ಈ ಹಬ್ಬವನ್ನು ಆಚರಿಸುತ್ತಾರೆ. ಮತ್ತು ಈ ಹಬ್ಬ ವಸಂತಕಾಲದ ಆರಂಭದ ದ್ಯೋತಕವಾಗಿ ನಡೆಯುತ್ತದೆ. ಅಂದು ಎಲ್ಲರೂ ಒಬ್ಬರಿಗೊಬ್ಬರು ಓಕುಳಿಯನ್ನು ಎರಚುತ್ತಾರೆ. ಅದರ ಜೊತೆ ಹಾಡುವುದು, ಕುಣಿಯುವುದು ಮಾಡುತ್ತಾರೆ. ಶ್ರೀಮಂತ ಬಡವ ಎಂಬ ಭೇದವಿಲ್ಲದೆ ಈ ಆಟಗಳನ್ನು ಆಡುತ್ತಾರೆ.[೨೧೮] ವಿಜಯನಗರ ಕಾಲದಲ್ಲಿ ನವರಾತ್ರಿಯ ನಂತರ ವಸಂತೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಈ ಹಬ್ಬವನ್ನು ಮೂರು ಅಥವಾ ಐದು ದಿನಗಳವರೆಗೆ ಆಚರಿಸಲಾಗುತ್ತಿತ್ತು. ಓಕುಳಿಯಾಟವು ಕನ್ನಡಿಗರಲ್ಲಿ ಬಹುಕಾಲದಿಂದಲೂ ನಡೆದು ಬಂದ ಪರಂಪರೆಯಾಗಿತ್ತು.[೨೧೯] ಪಾಲ್ಗುಣ ಮಾಸದ ಹುಣ್ಣಿಮೆಯ ದಿನ ಹೋಳಿಹಬ್ಬಕ್ಕೂ ಒಬ್ಬರ ಮೇಲೊಬ್ಬರು ಪರಸ್ಪರವಾಗಿ ಓಕುಳಿಯನ್ನು ಹಾಕುವ ಹಬ್ಬವಾದ ವಸಂತೋತ್ಸವಕ್ಕೂ ಸಂಬಂಧವೇರ್ಪಟ್ಟು ಕಾಲಕ್ರಮದಲ್ಲಿ ವಸಂತೋತ್ಸವವೇ ಹೋಳಿಹಬ್ಬ ಎಂಬ ಕಲ್ಪನೆಯುಂಟಾಗಿ ಆಚರಣೆಯಲ್ಲಿದೆ.[೨೨೦] ಇಲ್ಲಿ ವಸಂತೋತ್ಸವ, ಹೋಳಿಹಬ್ಬ, ಕಾಮದಹನ ಈ ಮೂರು ಹಬ್ಬಗಳನ್ನು ಸೇರಿಸಿ ಆಚರಿಸುವುದು ಇಂದು ರೂಢಿಯಲ್ಲಿದೆ.

ವಿಜಯನಗರ ಕಾಲದಲ್ಲಿ ಎರಡು ರೀತಿಯ ವಸಂತೋತ್ಸವವನ್ನು ಆಚರಿಸಲಾಗುತ್ತಿತ್ತು. ಒಂದು 'ಬ್ರಹ್ಮೋತ್ಸವದ' ಅಂಗವಾಗಿ ಹಾಗೂ ಎರಡನೆಯದು ಸ್ವತಂತ್ರವಾಗಿ. ಬ್ರಹ್ಮೋತ್ಸವ ಉತ್ಸವದ ಆರನೆಯ ದಿನ ವಸಂತೋತ್ಸವವನ್ನು ಆಚರಿಸಲಾಗುತಿತ್ತು.[೨೨೧] ಈ ದಿವಸ ರಾತ್ರಿ ದೇವರನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ತೆಗೆದುಕೊಂಡು ಹೋಗಲಾಗುತ್ತಿತ್ತು. ಹಾಗೂ ಸಂತೋಷದ ಸಂಕೇತವಾಗಿ ಶ್ರೀಗಂಧದ

ಪುಡಿಯನ್ನು ಹಂಚಲಾಗುತ್ತಿದ್ದಿತು. ಈ ರೀತಿಯ ಬ್ರಹ್ಮೋತ್ಸವಂ ಉತ್ಸವದ ಭಾಗವಾಗಿ ನೆರವೇರಿಸುವ ವಸಂತೋತ್ಸವಗಳಲ್ಲದೆ ಸ್ವತಂತ್ರ ವಸಂತೋತ್ಸವಗಳನ್ನು ಪಾಲ್ಗುಣಮಾಸ ತಿಂಗಳಲ್ಲಿ ಆಚರಿಸಲಾಗುತ್ತಿತ್ತು. ಪ್ರತಿದಿನ ಬೇರೆ ಬೇರೆ ವಾಹನಗಳಲ್ಲಿ ಮೂರ್ತಿಯನ್ನು ಮೆರವಣಿಗೆ ಮಾಡಲಾಗುತ್ತಿತ್ತು. ಕ್ರಮವಾಗಿ ಅವುಗಳೆಂದರೆ -

ಮೊದಲನೆಯ ದಿನ - ಶೇಷವಾಹನ

ಎರಡನೆಯ ದಿನ - ಹಂಸವಾಹನ

ಮೂರನೆಯ ದಿನ - ಗರುಡವಾಹನ

ನಾಲ್ಕನೆಯ ದಿನ - ವೈಕುಂಠ ವಿಮಾನವಾಹನ

ಐದನೆಯ ದಿನ - ಗಜವಾಹನ

ಈ ರೀತಿಯಾಗಿ ಐದು ದಿನ ಬೇರೆ ಬೇರೆ ವಾಹನದಲ್ಲಿ ದೇವರ ಮೂರ್ತಿಯನ್ನು ಉತ್ಸವದಲ್ಲಿ ತೆಗೆದುಕೊಂಡು ಮೆರವಣಿಗೆ ಮಾಡಲಾಗುತ್ತಿತ್ತು.[೨೨೨] ಕೃಷ್ಣದೇವರಾಯನು ಪ್ರತಿವರ್ಷವೂ ವಸಂತೋತ್ಸವವನ್ನು ನಡೆಸುತ್ತಿದ್ದನು. ಇದನ್ನು ಕನಕದಾಸರ 'ಮೋಹನತರಂಗಿಣಿ'ಯಲ್ಲಿ, ನಂದಿತಿಮ್ಮಣ್ಣನ 'ಪಾರಿಜಾತಾಪರಣ' ಮಹಾಪ್ರಬಂಧದಲ್ಲಿ ಹಾಗೂ ವಿದೇಶಿಪ್ರವಾಸಿ ಕೋಂಟಿಯ ಬರಹದಲ್ಲಿ ವಸಂತೋತ್ಸವದ ಬಗ್ಗೆ ಮಹತ್ವವಾದ ವಿವರಣೆಯನ್ನು ನೋಡಬಹುದು.

ಪಾರಿಜಾತಾಪರಣ ಪ್ರಬಂಧದಲ್ಲಿ ನಂದಿತಿಮ್ಮಣ್ಣನು "ಪ್ರತಿವರ್ಷ ವಸಂತೋತ್ಸವ | ಕುತುಕಾಗತಸುಕವಿನಿಕರ ಗುಂಭೀತ ಕಾವ್ಯ ॥ ಸ್ಮೃತಿರೋಮಂಚವಿಶಂಕಿತ | ಚತುರಾಂತಃ ಪುರವಧೂ ಪ್ರಸಾದನ ರಸಿಕಾ ॥"[೨೨೩] ಎಂದು ವಿಶೇಷವಾಗಿ ಹೇಳಿರುವುದು ಗಮನಾರ್ಹವಾಗಿದೆ.

ಅದೇ ರೀತಿಯಾಗಿ ಹೋಳಿಹಬ್ಬವನ್ನು ಕುರಿತು ನಿಕೊಲೋ ಕೊಂಟಿ ಹೀಗೆ ಬರೆಯುತ್ತಾನೆ: Three festival days during which they sprinkle all passers by, even the king and queen themselves, with from water placed by all with much loughter ಎಂದು ವರ್ಣಿಸುತ್ತಾನೆ.[೨೨೪] ಅಲ್ಲದೆ ವಸಂತೋತ್ಸವದ ಉಲ್ಲೇಖ ಶಾಸನಗಳಲ್ಲಿಯೂ ಬಂದಿದೆ. ಕಾಳಹಸ್ತಿ ಶಾಸನದಲ್ಲಿ ಕೃಷ್ಣದೇವರಾಯನನ್ನು "ಪ್ರತಿವರ್ಷ ಪ್ರವರ್ತಿತಕನಕ ವಸಂತ ಮಹೋತ್ಸವೇನ" ಎಂದು ಹೊಗಳಿರುವುದೂ[೨೨೫] ಉಲ್ಲೇಖನಾರ್ಹವಾಗಿದೆ.

ವಿಜಯನಗರದ ಅರಸರು ತುಂಬಾ ವೈಭವದಿಂದ ಆಚರಿಸುವ ಸಾರ್ವಜನಿಕ ಉತ್ಸವಗಳಲ್ಲಿ ವಸಂತೋತ್ಸವ ಒಂದಾಗಿತ್ತು. ಇದು ಮೂರು ದಿನಗಳ ಕಾಲ ನಡೆಯುತ್ತಿದ್ದುದರಿಂದ ಜನರು ಬೀದಿಯಲ್ಲಿ ಹೋಗಿಬರುವವರ ಮೇಲೆಲ್ಲಾ ಸ್ವತಃ ರಾಜ - ರಾಣಿಯರ ಮೇಲೆ ಕೂಡಾ ಕೆಂಪು, ಕೇಸರಿ ಬಣ್ಣಗಳನ್ನು ಓಕುಳಿಗಳಿಂದ ಎರಚುವರು. ಇಂತಹ ಬಣ್ಣದಿಂದ ತುಂಬಿದ ಹಂಡೆ ಹಂಡೆಗಳನ್ನು ದಾರಿಯ ಮೇಲೆ ಇಟ್ಟಿರುವರು. ಈ ಬಣ್ಣದ ಎರಚಾಟದಲ್ಲಿ ನಗುತ್ತ ಒಂದಾಗುತ್ತಾ ಆನಂದದಿಂದ ಎಲ್ಲರೂ ಭಾಗವಹಿಸುತ್ತಿದ್ದರು.[೨೨೬]

ವಿಜಯನಗರದಲ್ಲಿ ನಡೆಯುತ್ತಿದ್ದ ವಿಶಿಷ್ಟ ಹಬ್ಬಗಳಲ್ಲಿ ವಸಂತೋತ್ಸವವೂ ಒಂದಾಗಿತ್ತು. ಇದನ್ನು ಕಾಮನಹಬ್ಬ ಅರ್ಥಾತ್ ಹೋಳಿಹಬ್ಬ ಎಂದು ಕರೆಯುತ್ತಿದ್ದರು. ವಿಜಯನಗರ ಕಾಲದಲ್ಲಿ ವೈಭವದಿಂದ

ನಡೆಯುತ್ತಿದ್ದ ವಸಂತೋತ್ಸವವನ್ನು ಕನಕದಾಸರು ತಮ್ಮ ಮೋಹನತರಂಗಿಣಿಯ ಒಂದು ಪ್ರಕರಣದಲ್ಲಿ ವರ್ಣಿಸಿರುವರು.[೨೭] ಶಾಸನಗಳಲ್ಲಿ ವಸಂತೋತ್ಸವ ಹಬ್ಬವನ್ನು ನಡೆಸಲು ಅರಸರು, ಸಾಮಂತರು ದಾನ - ದತ್ತಿಗಳನ್ನು ಬಿಟ್ಟಿರುವ ಉಲ್ಲೇಖಗಳು ಕಂಡುಬರುತ್ತದೆ. ರಾಯನ ಕಾಲದಲ್ಲಿ ಊಳಿಗದ ಬಸವಪ್ಪನಾಯಕನು ಬೇಲೂರು ಚೆನ್ನಕೇಶವ ದೇವಾಲಯದಲ್ಲಿ ತೆಪ್ಪೋತ್ಸವಕ್ಕೆ ಮತ್ತು ವಸಂತಮಂಟಪವನ್ನು ಕಟ್ಟಿಸಿ ಇದರಲ್ಲಿ ವಸಂತೋತ್ಸವದ ದಿನ ದೇವರ ಉತ್ಸವವನ್ನು ನಡೆಸಲು ಎರಡು ಗ್ರಾಮಗಳನ್ನು ಸಮರ್ಪಿಸಿದ್ದನು.[೨೮]

ರಾಯನು ಆಳ್ವಿಕೆ ಮಾಡುವಾಗ ಕೇಶವನಾಥ ಮತ್ತು ಮಾಚಿರಾಜು ಮೊದಲಾದ ತಮ್ಮ ಜಾತಿಯ ೨೪ ಕುಲಗಳವರು ಶ್ರೀ ತಿರುವೇಂಗಳನಾಥ ದೇವರಿಗೆ ಪೂರ್ಣಮಿ ಸಂಕ್ರಾಂತಿ, ಧರ್ನುಮಾಸ, ಕಾರ್ತಿಕ ದೀಪಾರಾಧನೆ, ವಸಂತೋತ್ಸವಗಳನ್ನು ನಡೆಸಲು ದೇವರಿಗೆ ದೌಂಮರಿಪ ಗ್ರಾಮವನ್ನು ಧಾರೆಯರೆದು ನೀಡಿದ ಉಲ್ಲೇಖವಿದೆ.[೨೯] ತೆಲುಗು ಕವಿಯಾದ ನಂದಿತಿಮ್ಮಣ್ಣನು ತಾನು ಬರೆದ ಪಾರಿಜಾತಪಹರಣದಲ್ಲಿ ಶ್ರೀಕೃಷ್ಣದೇವರಾಯ ಮತ್ತು ಅವನ ರಾಣಿಯರು ಹೋಳಿಹಬ್ಬ ಆಚರಿಸಿದ್ದನ್ನು ವಿವರಿಸಿದ್ದಾನೆ. ಸ್ವತಃ ಕೃಷ್ಣದೇವರಾಯನು ಬರೆದ ಜಾಂಬವತಿ ಕಲ್ಯಾಣ ಎಂಬ ನಾಟಕವನ್ನು ವಿರೂಪಾಕ್ಷ ದೇವರ ಚೈತ್ರೋತ್ಸವದಂದು ನಾಟಕ ಮಾಡಿ ಆಡಿದರೆಂದು ಉಲ್ಲೇಖಗಳಿವೆ.[೩೦] ರಾಯನ ಕಾಲದಲ್ಲಿ ವಸಂತೋತ್ಸವವು ಸಮಾಜದ ಎಲ್ಲಾ ವರ್ಗದ ಜನರು ಭಾಗವಹಿಸುವ ಸಾರ್ವಜನಿಕ ಉತ್ಸವವಾಗಿ ಏರ್ಪಟ್ಟಿತ್ತು. ಪುಣ್ಯ ಕಾಲದಲ್ಲಿ ದೇವಾಲಯಗಳಿಗಲ್ಲದೆ ವಸಂತೋತ್ಸವಕ್ಕೂ ಅನೇಕ ರೀತಿಯ ದತ್ತಿಯನ್ನು ನೀಡಲಾಗುತ್ತಿತ್ತು. ವಸಂತೋತ್ಸವ ಹಬ್ಬವೂ ಹೌದು, ಉತ್ಸವವೂ ಹೌದು.

ಮಹಾನವಮಿ : ವಿಜಯನಗರದ ಕಾಲದಲ್ಲಿ ರಾಜರು ಸರ್ವಧರ್ಮ ಸಮನ್ವಯ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದರು. ಜನರಿಗೆ ಸಾಮ್ರಾಜ್ಯದಲ್ಲಿ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದ್ದರು. ನವರಾತ್ರಿಯಲ್ಲಿ ಬರುವ ಮಹಾನವಮಿ ಹಬ್ಬವಂತೂ ವಿಜಯನಗರದಲ್ಲಿ ವಿಶೇಷ ಪ್ರಾಮುಖ್ಯತೆ ಗಳಿಸಿತ್ತು. ರಾಯನ ಕಾಲದಲ್ಲಿ ಮಹಾನವಮಿ ಉತ್ಸವವನ್ನು ನಾಡಹಬ್ಬವಾಗಿ ವೈಭವದಿಂದ ಆಚರಿಸುತ್ತಿದ್ದರು. ಇಂದಿಗೂ ಹಂಪೆಯಲ್ಲಿ ಉಳಿದುಬಂದಿರುವ ಮಹಾನವಮಿ ದಿಬ್ಬವು ಎತ್ತರದ ಚೌಕಾಕಾರದ ಪ್ರಾಂಗಣವನ್ನು ಹೊಂದಿದೆ. ಇದು ನವರಾತ್ರಿ ಉತ್ಸವ ಕೇಂದ್ರಬಿಂದುವಾಗಿತ್ತು. ಈ ಮಹಾನವಮಿ ದಿಬ್ಬವನ್ನು ಕೃಷ್ಣದೇವರಾಯನು ಕ್ರಿ.ಶ. ೧೫೧೭ ರಲ್ಲಿ ಒರಿಸ್ಸಾ ರಾಜ್ಯವನ್ನು ಗೆದ್ದ ಮೇಲೆ ಅದರ ನೆನಪಿಗಾಗಿ ಈ ಸಿಂಹಾಸನದ ವೇದಿಕೆಯನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ.

ಹಿಂದೂಗಳಲ್ಲಿ ಕೆಲವರಿಗೆ ನವರಾತ್ರಿ ರಾವಣಸಂಹಾರ ನಂತರ ಶ್ರೀರಾಮನು ಆಯೋಧ್ಯೆಗೆ ಹಿಂತಿರುಗಿ ಬಂದು ಪಟ್ಟಾಭಿಷಿಕ್ತನಾದ ದಿನದ ಜ್ಞಾಪಕಾರ್ಥವಾಗಿ ಆಚರಿಸುವ ರಾಮನವರಾತ್ರಿಯಾಗಿದೆ. ಇನ್ನೂ ಕೆಲವರಿಗೆ ಆದಿಶಕ್ತಿಯು ನಾನಾ ರೂಪಗಳನ್ನು ಧರಿಸಿ ದುಷ್ಟಶಕ್ತಿಗಳನ್ನು ದಮನ ಮಾಡಿದ ದೇವಿನವರಾತ್ರಿಯೂ ಆಗಿದೆ."[೩೧]

ಮಹಾನವಮಿ ದಿಬ್ಬದ ಮೇಲೆ ದೇವರ ಉತ್ಸವ ಮೂರ್ತಿಯನ್ನು ಕೂಡಿಸಿ ಅದರ ಪಕ್ಕದಲ್ಲಿ ಬ್ರಾಹ್ಮಣರು ಹಾಗೂ ಅರಸರು ಕುಳಿತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಿದ್ದರು. ಕೃಷ್ಣದೇವರಾಯನ ಕಾಲದಲ್ಲಿ ಈ ನವರಾತ್ರಿ ಹಬ್ಬವು ರಾಷ್ಟ್ರದ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸುವ ನಾಡಹಬ್ಬವಾಗಿ ಹೆಚ್ಚಿನ ಪ್ರಾಮುಖ್ಯತೆಯನ್ನು

ಪಡೆಯಿತು. ಸಾಲತೊರೆಯವರು ಹೇಳುವಂತೆ ಈ ಹಬ್ಬಕ್ಕೆ ಧಾರ್ಮಿಕ ವಾತಾವರಣವಿದ್ದರೂ, ರಾಜಕೀಯ ಮಹತ್ವವಿತ್ತು.[೨೩೨] ಅಬ್ದುಲ್ ರಜಾಕನು ಈ ಉತ್ಸವ ಮೂರು ದಿನ ಕಾಲ ನಡೆಯುತ್ತಿತ್ತೆಂದು ಹೇಳಿದ್ದಾನೆ.[೨೩೩] ಆದರೆ ಪೇಸ್ ಮತ್ತು ನ್ಯೂನೀಜ್‌ರು ಈ ನವರಾತ್ರಿ ಹಬ್ಬವು ಒಂಬತ್ತು ದಿನಗಳ ಹಬ್ಬವಾಗಿತ್ತು. ಪ್ರತಿದಿನವೂ ಪೂಜೆ, ಉತ್ಸವ, ಪ್ರದರ್ಶನ, ಸಭೆಸಮಾರಂಭಗಳು ನಡೆಯುತ್ತಿದ್ದವೆಂದು ಹೇಳುತ್ತಾರೆ.[೨೩೪]

ಭರತೇಶ ವೈಭವದ ೩೦೦ ಸಾಂಗತ್ಯ ಪದ್ಯಗಳಲ್ಲಿ ನವರಾತ್ರಿಯ ವೈಭವದ ವಿವರಪೂರ್ಣ ವರ್ಣನೆಗಳಿವೆ. "ಮಳೆಗಾಲ ಹೋಯಿತು, ಬೆಳದಿಂಗಳ ಕಾಲ ಬಂತು, ನವರಾತ್ರಿ ಹಬ್ಬದ ಸಡಗರ ಮೊದಲಾಯಿತು. ಪಟ್ಟಣದಲ್ಲಿ ಎಲ್ಲೆಲ್ಲಿಯೂ ಗುಡಿತೋರಣಗಳು, ಅಂದವಾಗಿ ಶೃಂಗರಿಸಿದ ಬೆಟ್ಟದಂತಹ ತೇರುಗಳು. ಊರ ಜನರು ಉತ್ಸಾಹದಿಂದ ದಾರಿಗಳಲ್ಲೆಲ್ಲ ಹೂವನ್ನು ಚೆಲ್ಲಿದರು. ಅಲ್ಲಲ್ಲಿ ಪೂಜೆ, ಅಭಿಷೇಕ, ಹೋಮ, ವಜ್ರಪಂಜರಯಜ್ಞ, ಬಲಸಿದ್ಧಿಯಜ್ಞ, ಅಭಯಸಿದ್ಧಿಯಜ್ಞಗಳು ನಡೆದವು. ಅಮಾತ್ಯನ ಪ್ರೇರಣೆಯಿಂದ ಅಭಿಷೇಕ, ಪೂಜೆ, ರಥೋತ್ಸವಗಳು ಒಂಭತ್ತು ದಿನಗಳೂ ನಡೆಯುತ್ತಿದ್ದವು. ಅನುಚರರು ತಮ್ಮ ತಮ್ಮ ಖಡ್ಗ ಮೊದಲಾದ ಆಯಧಗಳನ್ನು ಪೂಜಿಸಿದರು. ಆನೆ, ಕುದುರೆ, ರಥಗಳನ್ನು ಶೃಂಗರಿಸಿ ಪೂಜಿಸಿ ರಕ್ಷೆಗಳನ್ನು ಕಟ್ಟಿದರು. ನಗರ ಮಧ್ಯದ ದೇವಾಲಯದಲ್ಲಿ ರಾಜೇಂದ್ರನು ಪೂಜೆಗಳನ್ನು ಮಾಡಿದನು."[೨೩೫]

ನವರಾತ್ರಿ ಉತ್ಸವದಲ್ಲಿ ಒಂದೊಂದು ದಿನ (೯ ದಿನಗಳವರೆಗೆ) ರಾಜನ ಸನ್ನಿಧಿಯಲ್ಲಿ ೨೪ ಕೋಣಗಳನ್ನು ಮತ್ತು ೧೫೦ ಕುರಿಗಳನ್ನು ಬಲಿ ನೀಡುತ್ತಿದ್ದರು. ಕತ್ತಿಯ ಒಂದೇ ಏಟಿಗೆ ಈ ಮೂಕಪ್ರಾಣಿಗಳ ಶಿರಶ್ಛೇದನವಾಗುತ್ತಿತ್ತು.[೨೩೬] ಈ ಉತ್ಸವದಲ್ಲಿ ಅರಸರು, ಸಾಮಂತರು, ಅತಿಥಿಗಳು, ಗಣ್ಯರು, ದಂಡನಾಯಕ ಮುಂತಾದವರು ಭಾಗವಹಿಸುತ್ತಿದ್ದರು. ಒಂಬತ್ತು ದಿನಗಳ ಈ ಉತ್ಸವದಲ್ಲಿ ಹಲವಾರು ದೇವಾಲಯಗಳಲ್ಲಿ ಮಹಾನವಮಿಯ ದಿನ ಪೂಜೆ ಉತ್ಸವಗಳು ನಡೆಯುತ್ತಿದ್ದವು. ರಾಯನ ಕಾಲದ ಶಾಸನಗಳಲ್ಲಿ ಮಹಾನವಮಿ ಉತ್ಸವಕ್ಕೆ ದೇವಾಲಯಗಳಲ್ಲಿ ಪೂಜೆ ನಡೆಸಲು ದಾನದತ್ತಿ ನೀಡಿದ್ದು ಕಂಡುಬರುವುದಿಲ್ಲ. ಆದರೆ ರಾಜಧಾನಿಯ ಅನೇಕ ದೇವಾಲಯಗಳಲ್ಲಿ ಪೂಜೆ, ಅಭಿಷೇಕಗಳನ್ನು ನಡೆಸುತ್ತಿದ್ದರೆಂದು ಭರತೇಶವೈಭವ ಕಾವ್ಯದಲ್ಲಿ ಉಲ್ಲೇಖವಾಗಿದೆ. ಈ ಉತ್ಸವದಲ್ಲಿ ಮುಂದಿನ ಅರಸರು ದಾನದತ್ತಿ ಬಿಟ್ಟಿದ್ದುದು ತಿಳಿದುಬರುತ್ತದೆ.[೨೩೭]

ರಾಯ ಮತ್ತು ಅವನ ಪರಿವಾರವು ಈ ನವರಾತ್ರಿಯ ಹಬ್ಬದಲ್ಲಿ ನಸುಕಿನಿಂದ ಮಧ್ಯರಾತ್ರಿಯವರೆಗೆ ಉಪವಾಸವಿರುವುದು. ಮಧ್ಯರಾತ್ರಿಯೊಳಗೆ ಸಮಾರಂಭವನ್ನು ಮುಗಿಸಿ ಊಟಮಾಡಿ ಮಲಗುವರು. ಪುನಃ ಅರೋಣೋದಯಕ್ಕೆ ಎದ್ದು ಎರಡನೆಯ ದಿನದ ಸಮಾರಂಭದಲ್ಲಿ ಭಾಗಿಯಾಗುವರು. ಈ ಪ್ರಕಾರ ಒಂಭತ್ತು ದಿನಗಳ ನಡೆಯುವುದು. "ಕೊನೆಯ ದಿನ ೨೫೦ ಕೋಣಗಳನ್ನು ೪೫೦೦ ಕುರಿಗಳನ್ನು ಕಡಿದು ದೇವತೆಗಳನ್ನು ತೃಪ್ತಿಪಡಿಸುತ್ತಿದ್ದರು."[೨೩೮] ಹೀಗೆ ನವರಾತ್ರಿ, ಮಹಾನವಮಿ, ವಿಜಯದಶಮಿ ಹಬ್ಬ ಹಾಗೂ ಉತ್ಸವವನ್ನು ರಾಜಧಾನಿಯಲ್ಲಿ ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಕೃಷ್ಣರಾಯನ ಕಾಲಕ್ಕಂತೂ ಈ ಉತ್ಸವವು ತನ್ನ ವೈಭವವನ್ನು ಮೆರೆಯಿತು.

ಜನ್ಮಾಷ್ಟಮಿ : ವೈಷ್ಣವ ದೇವಾಲಯಗಳಲ್ಲಿ ವಿಷ್ಣುವಿನ ಅವತಾರದ ಶ್ರೀರಾಮ, ಕೃಷ್ಣ, ನಾರಸಿಂಹ, ವಾಮನ ಜಯಂತಿಗಳನ್ನು ಆಚರಿಸಲಾಗುತ್ತಿತ್ತು. ರಾಯನ ಕಾಲದ ಶಾಸನಗಳಲ್ಲಿ ಈ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಆದರೆ ಮುಂದಿನ ಅರಸನಾದ ಸದಾಶಿವರಾಯನ ಕಾಲದಲ್ಲಿ ಹಂಪಿಯ ವಿಠಲದೇವರ ದೇವಾಲಯದ ಪರಾಂಕುಶಮಂಟಪದಲ್ಲಿ ನಡೆಯುವ ಉತ್ಸವದಲ್ಲಿ ಗೋಕುಲಾಷ್ಟಮಿ ಉತ್ಸವ ೨, ವಾಮನಜಯಂತಿ ಉತ್ಸವ ದಿನ ೧, ಶ್ರೀರಾಮನವಮಿ ಉತ್ಸವ ದಿನ ೧ ಕ್ಕೆ ನಡೆಸಲು ದತ್ತಿಯನ್ನು ಬಿಡಲಾಗಿದೆ.[೨೬೯] ಅದೇ ರೀತಿ ಇವನ ಕಾಲದಲ್ಲಿ ತಿಮ್ಮರಾಜಯದೇವ ವಿಠಲ ದೇವಾಲಯದಲ್ಲಿ ಶ್ರೀರಾಮ, ನಾರಸಿಂಹ, ಕೃಷ್ಣಜಯಂತಿ ಉತ್ಸವಗಳಲ್ಲಿ ಮಾಡುವ ನೈವೇದ್ಯಕ್ಕಾಗಿ ಗ್ರಾಮಗಳನ್ನು ದತ್ತಿಯಾಗಿ ನೀಡಿರುವನು.[೨೭೦] ಈ ಶಾಸನಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ವೈಷ್ಣವ ದೇವಾಲಯಗಳಲ್ಲಿ ವಿಷ್ಣುವಿನ ಅವತಾರದ ಎಲ್ಲಾ ಜಯಂತಿಗಳು ನಡೆಯುತ್ತಿದ್ದವು ಎಂದು ಹೇಳಬಹುದು.

ಶ್ರೀರಾಮನ ಜನನದ ದಿವಸದಿಂದ ಒಂಬತ್ತು ದಿನಗಳವರೆಗೆ ರಾಮನವಮಿಯನ್ನು ಪ್ರಾಚೀನ ಕಾಲದಿಂದಲೂ ಭಾರತೀಯರು ಆಚರಿಸುತ್ತಾ ಬಂದಿದ್ದಾರೆ. ಚೈತ್ರಾ ಶುದ್ಧ ನವಮಿಯ ದಿನ ಎಲ್ಲೆಡೆಯೂ ಶ್ರೀರಾಮನ ಪೂಜೆ, ಭಜನೆ, ರಥೋತ್ಸವಗಳು, ಸಂಗೀತ, ನೃತ್ಯ, ಹರಿಕಥೆ ಸಮಾರಂಭಗಳು ಜರುಗುತ್ತವೆ. ರಾಮನನ್ನು ಕೂಡ ವಿಷ್ಣುವಿನ ಅವತಾರಗಳಲ್ಲಿ ಒಂದು ಎಂದು ತಿಳಿದು 'ಪಿತೃವಾಕ್ಯಪರಿಪಾಲನ' ಎಂಬ ಬಿರುದಿನಿಂದ ಗೌರವಿಸಿದ್ದಾರೆ.[೨೭೧]

ಭಾರತದ ಎಲ್ಲ ಕಡೆಗಳಲ್ಲಿಯೂ ರಾಮಾಯಣದ ದಿವ್ಯಪಾತ್ರಗಳ ಪರಿಚಯವನ್ನು ಸಾಹಿತ್ಯ, ಶಿಲ್ಪಕಲೆ, ಸಂಗೀತ, ಚಿತ್ರಕಲೆಯಲ್ಲಿ ನಾವು ಇಂದಿಗೂ ಕಾಣಬಹುದು. ವಿಜಯನಗರ ಕಾಲದಲ್ಲಿ ರಾಮಾಯಣ ಮತ್ತು ಮಹಾಭಾರತಗಳ ಪೂಜ್ಯವ್ಯಕ್ತಿಗಳ ಹೆಸರಿನಲ್ಲಿ ಅನೇಕ ದೇವಾಲಯಗಳಿರುವುದನ್ನು ಕಾಣುತ್ತೇವೆ. ರಾಮಚಂದ್ರ ದೇವಾಲಯದಲ್ಲಂತೂ ರಾಮಾಯಣದ ವಿವಿಧ ಸನ್ನಿವೇಶಗಳ ಉಬ್ಬುಶಿಲ್ಪ ಪಟ್ಟಿಕೆಗಳು ಗೋಡೆಗಳ ತುಂಬಾ ಇರುವುದು ಮಹತ್ವದ್ದಾಗಿದೆ. ತುಳುವ ವಂಶದ ಕಾಲದಲ್ಲಿ ವೈಷ್ಣವ ಧರ್ಮಕ್ಕೆ ಹೆಚ್ಚು ಒಲವು ತೋರಿಸಿದ್ದರಿಂದ ರಾಮನ ಅವತಾರದ ದೇವಾಲಯಗಳು ನಿರ್ಮಾಣಗೊಂಡು ವಿವಿಧ ಪೂಜೆ, ಉತ್ಸವಗಳನ್ನು ಆಚರಿಸಲಾಗುತ್ತಿತ್ತು. ನಂಜನಗೂಡಿನ ಶಾಸನದಲ್ಲಿ ರಾಮ ಮತ್ತು ವಿಠಲದೇವರ ಸಾಕ್ಷಿಯಾಗಿ ಕೆಲವು ಹಳ್ಳಿಗಳನ್ನು ಈ 'ರಾಮನವಮಿ'ಯ ಆಚರಣೆಗಾಗಿ ದತ್ತಿಬಿಡಲಾಗಿದೆ.[೨೭೨] ಅದೇ ರೀತಿ ಕೃಷ್ಣಜನ್ಮಾಷ್ಟಮಿಯನ್ನು ವಿಜಯನಗರದ ರಾಯನ ಕಾಲದಲ್ಲಿ ಭಕ್ತಿಯಿಂದ ಆಚರಿಸುತ್ತ ಬಂದಿದ್ದರು. ತಮ್ಮ ತಂದೆ ತಾಯಿಗಳಿಗೆ, ಹಿರಿಯರಿಗೆ ಧರ್ಮವಾಗಲೆಂದು ಮತ್ತು ಅರಸರಿಗೆ ಪುಣ್ಯವಾಗಿ ಸಮೃದ್ಧಿ ನೀಡಲೆಂದು ಶ್ರೀಕೃಷ್ಣಜಯಂತಿಯ ದಿನದಂದು ದಾನದತ್ತಿಯನ್ನು ನೀಡುತ್ತಿದ್ದರು. ಶ್ರೀಕೃಷ್ಣದೇವರಾಯನು ಹೆಗ್ಗೂಠಾರ ಎಂಬ ಗ್ರಾಮದ ಗೋಪಾಲಕೃಷ್ಣ ದೇವಾಲಯದೊಳಗೆ ಪ್ರತಿದಿವಸ ಪೂಜೆ, ನೈವೇದ್ಯ ಸೇವೆ ಮಾಡಲು ಕೃಷ್ಣಪುರವನ್ನು ದತ್ತಿಯಾಗಿ ನೀಡಿರುವುದು ಕಂಡುಬರುತ್ತದೆ.[೨೭೩]

ಈ ರೀತಿಯಾಗಿ ಕೃಷ್ಣಜನ್ಮದಿನ, ಶ್ರೀರಾಮನವಮಿ, ವಾಮನಜಯಂತಿ, ನಾರಸಿಂಹ ಜಯಂತಿಯನ್ನು ವಿಜಯನಗರದ ದೇವಾಲಯಗಳಲ್ಲಿ ಆಚರಿಸುತ್ತಿದ್ದರು. ಹೆಚ್ಚಾಗಿ ವೈಷ್ಣವರು ಪೂಜೆ, ಉಪವಾಸ ವ್ರತ, ಉತ್ಸವ, ಹರಿಕಥೆಗಳನ್ನು ನಡೆಸುತ್ತಿದ್ದರು. ಇದಕ್ಕೆ ಪೋಷಕರು ಹಲವಾರು ಗ್ರಾಮಗಳ ಆದಾಯವನ್ನು, ಭೂಮಿಯನ್ನು

ದಾನದತ್ತಿಯಾಗಿ ನೀಡುತ್ತಿದ್ದುದು ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳಿಗೆ ಬಿಟ್ಟ ಶಾಸನಗಳಿಂದ ಕಂಡುಬರುತ್ತದೆ. ಈ ಸಂಪ್ರದಾಯವನ್ನು ಮುಂದಿನ ಅರಸರೂ ಅನುಸರಿಸಿದರು. ಒಟ್ಟಾರೆ ರಾಮಾಯಣ ಮತ್ತು ಮಹಾಭಾರತದ ಪೂಜ್ಯ ವ್ಯಕ್ತಿಗಳ ದೇವಾಲಯದಲ್ಲಿ ಜನ್ಮಾಷ್ಟಮಿಗಳನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಇದನ್ನು ಇಂದು ವಾಸ್ತುಶಿಲ್ಪದಲ್ಲಿಯೂ ಕಾಣಬಹುದು.

ಮಧ್ಯಯುಗೀನ ಭಾರತದಲ್ಲಿ ಇಡೀ ದಕ್ಷಿಣಾವ್ಯಾಪ್ತಿ ಹರಡಿಕೊಂಡಿದ್ದ ವಿಜಯನಗರ ಸಾಮ್ರಾಜ್ಯವು ಕೃಷ್ಣದೇವರಾಯನ ಕಾಲದಲ್ಲಿ ಉನ್ನತ ಸ್ಥಿತಿಯನ್ನು ಮುಟ್ಟಿತು. ಅಂದಿನ ಕಾಲದಲ್ಲಿ ಅರಸರು ಧಾರ್ಮಿಕತೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ನೀಡಿದ ಅಮೋಘವಾದ ಪ್ರೋತ್ಸಾಹ ವಿಜಯನಗರದ ಹೆಸರು ಚಿರಸ್ಥಾಯಿಯಾಗಿ ಉಳಿಯಲು ಕಾರಣವಾಯಿತು. ಅಂದಿನ ಅರಸರ ಪ್ರಮುಖ ಧ್ಯೇಯವು ಹಿಂದೂಧರ್ಮವನ್ನು ಪುನರುಜ್ಜೀವನಗೊಳಿಸುವುದರ ಜೊತೆಗೆ ಧರ್ಮಸಮನ್ವಯವನ್ನು ಬೆಳೆಸುವಲ್ಲಿ ಅವರು ಕೈಗೊಂಡ ಕ್ರಮಗಳು ಉಲ್ಲೇಖನೀಯ. ಧಾರ್ಮಿಕ ಬೆಳವಣಿಗೆಯಲ್ಲಿ ದೇವಾಲಯಗಳನ್ನು ತೊಡಗಿಸಿಕೊಂಡು ಅವುಗಳ ನಿರ್ಮಾಣ, ಜೀರ್ಣೋದ್ಧಾರಕ್ಕೆ ಹೆಚ್ಚಿನ ದಾನದತ್ತಿಯನ್ನು ನೀಡಿ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು. ರಾಯನ ಕಾಲದಲ್ಲಿ ವೈಷ್ಣವ ಧರ್ಮಕ್ಕೆ ನೀಡಿದ ವಿಶೇಷ ಪ್ರೋತ್ಸಾಹದ ಫಲವಾಗಿ ದೇವಾಲಯಗಳು ದೊಡ್ಡ ಸಂಸ್ಥೆಯಾಗಿ ಬೆಳೆದು ಅಂದಿನ ಸ್ಥಳೀಯ ಆಡಳಿತದ ಕೇಂದ್ರಗಳಾಗಿ ರೂಪುಗೊಂಡವು.

ವೈಷ್ಣವ ದೇವಾಲಯಗಳು ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳಾಗಿ ರೂಪುಗೊಂಡ ಮೇಲೆ ಅವುಗಳ ಕಾರ್ಯವ್ಯಾಪ್ತಿ ವಿಸ್ತರಿಸಿತು. ಅವು ದಿನನಿತ್ಯದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪ್ರಾರಂಭಿಸಿದವು. ದೇವಾಲಯಗಳ ನಿರ್ಮಾಣದಲ್ಲಿ ಅರಸರಿಂದ ಹಿಡಿದು ಸಮಸ್ತ ಜನರು ಪಾಲ್ಗೊಳ್ಳುವ ಸಾಮೂಹಿಕ ಕೇಂದ್ರಗಳಾಗಿ ಪರಿವರ್ತನೆಯಾದವು. ದಾನಿಗಳು ನೀಡುವ ದಾನದತ್ತಿಗಳು ಬೆಳೆದಂತೆಲ್ಲಾ ದೇವಾಲಯಗಳು ಶ್ರೀಮಂತವಾಗಿ ಅವು ಆಧುನಿಕ ಬ್ಯಾಂಕುಗಳಾಗಿ ಕೆಲಸ ಮಾಡಲು ಪ್ರಾರಂಭಿಸಿದವು. ದೇವಾಲಯಗಳು ಬೆಳೆದಂತೆಲ್ಲಾ ಅದರ ಉಸ್ತುವಾರಿ ನೋಡಿಕೊಳ್ಳಲು ಸೇವಾವರ್ಗವೇ ನೇಮಕವಾಯಿತು. ಅವರ ನೇಮಕಾತಿಯಲ್ಲಿ ಉದ್ಯೋಗ ನೀಡುವ ದೊಡ್ಡ ಸಂಸ್ಥೆಯಾಗಿ ದೇವಾಲಯ ಬೆಳೆಯಿತು. ದೇವಾಲಯದ ಆಡಳಿತ, ಸೇವಾವರ್ಗ, ಆದಾಯ, ವೆಚ್ಚ, ಅಂದಿನ ಧಾರ್ಮಿಕ ವಿಧಿ-ವಿಧಾನ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಹೆಚ್ಚು ರೂಪುಗೊಂಡು ಸಮಾಜವನ್ನು ನಿಯಂತ್ರಿಸುವಷ್ಟು ದೊಡ್ಡ ಶಕ್ತಿಯಾಗಿ ಅಂದಿನ ದೇವಾಲಯಗಳು ಬೆಳೆದಿದ್ದವು.

ಹೊಸ ಹೊಸ ಪೂಜಾವಿಧಿ, ಉತ್ಸವ, ಹಬ್ಬಗಳು ಹೆಚ್ಚಿದಂತೆಲ್ಲ ದೇವಾಲಯಗಳು ಜನರನ್ನು ಆಕರ್ಷಿಸುವ ತಾಣಗಳಾದವು. ವಿಶೇಷವಾಗಿ ನೀಡುವ ದಾನದತ್ತಿಗಳು ವಿನೂತನ ದೇವಾಲಯಗಳನ್ನು ದೊಡ್ಡ ಪ್ರಮಾಣದಲ್ಲಿ ನಿರ್ಮಿಸಲು ಪ್ರೇರಣೆಯನ್ನು ನೀಡಿದವು. ಅಂದಿನ ಅರಸರ ಉದಾತ್ತ ಪ್ರೋತ್ಸಾಹ, ಜನಸಾಮಾನ್ಯರು ಧಾರ್ಮಿಕತೆಯಲ್ಲಿಟ್ಟಿದ್ದ ನಂಬಿಕೆಗಳು ಪ್ರಮುಖವಾಗಿ ವೈಷ್ಣವ ದೇವಾಲಯಗಳ ಅಭಿವೃದ್ಧಿಗೆ ಸಹಾಯಕವಾದವು.

*

ಟಿಪ್ಪಣಿಗಳು

೧. ಹಾ.ಮಾ.ನಾಯಕ ಮತ್ತು ಇತರರು, ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು ವಿಶ್ವವಿದ್ಯಾಲಯ, ೧೯೮೧, ಪು. ೨೦೨
೨. ಇಂಪಿರಿಯಲ್ ಗೆಝೆಟಿಯರ್ ಆಫ್ ಇಂಡಿಯಾ, ಪು. ೬೧
೩. ಎಸ್.ಐ.ಐ. IV, ಸಂಖ್ಯೆ ೨೬೦, ಹಂಪಿ, ಕ್ರಿ.ಶ. ೧೧೯೯
೪. ಟಿ.ವಿ. ಮಹಾಲಿಂಗಂ, ಅಡ್‌ಮಿನಿಸ್ಟ್ರೇಟಿವ್ ಅಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ, ಭಾಗ - ೨ ಮದ್ರಾಸ್, ೧೯೬೯ - ೭೬, ಪು. ೩೭೨
೫. ಆರ್.ವೆಂಕಟೇಶ್ ಮೂರ್ತಿ, ಇತಿಹಾಸ ದರ್ಶನ ಸಂ, ೭, ಪು. ೩೪
ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯ ದೇವಾಲಯಗಳ ಸಾಂಸ್ಕೃತಿಕ ಅಧ್ಯಯನ, ೧೯೯೩, ಪು. ೯೦
೬. ಪಿ.ಗುರುರಾಜಭಟ್ಟ, ತುಳುನಾಡು, ಪು. ೧೩೮ - ೧೪೦
೭. ಕವಿಶಾಸಂ - ೨, ಕೊಪ್ಪಳ ಜಿಲ್ಲೆ, ಗಂಗಾವತಿ, ಸಂಖ್ಯೆ ೭೩, ಕೆಸರಟ್ಟಿ, ಕ್ರಿ.ಶ. ೧೫೨೭
೮. SII, IV, ಸಂಖ್ಯೆ ೨೫೫
೯. ಕವಿಶಾಸಂ - ೩, ಹಂಪಿ, ಸಂಖ್ಯೆ ೨೧೦
೧೦. ಕವಿಶಾಸಂ - ೩, ಹಂಪಿ, ಸಂಖ್ಯೆ ೨೫೭
೧೧. ಎಸ್.ಐ.ಐ. - XVI, ಸಂಖ್ಯೆ ೭೪, ಕ್ರಿ.ಶ. ೧೫೨೨
೧೨. SII- IX- ii, ಸಂಖ್ಯೆ ೬೦೭
೧೩. ಟಿ.ಟಿ.ಡಿ.ಐ. iii, ಸಂಖ್ಯೆ ೩೧
೧೪. ಅದೇ ಪೂರ್ವೋಕ್ತ, ಸಂಖ್ಯೆ ೧೬೬
೧೫. ಟಿ.ಟಿ.ಡಿ.ಐ. iii- Nos ೩೨ to ೩೯
ಟಿ.ಟಿ.ಡಿ.ಐ. iii- No ೪೦ to ೫೦
ಟಿ.ಟಿ.ಡಿ.ಐ. iii- No ೬೦ to ೬೩
ಟಿ.ಟಿ.ಡಿ.ಐ. iii- No ೬೦
ಟಿ.ಟಿ.ಡಿ.ಐ. iii- Nos - No ೬೬ to ೬೮
ಟಿ.ಟಿ.ಡಿ.ಐ. iii- No ೮೦
ಟಿ.ಟಿ.ಡಿ.ಐ. iii- No ೮೩
೧೬. ಟಿ.ಟಿ.ಡಿ.ಐ. iii- Nos ೨೧ and ೨೨
೧೭. ಟಿ.ಟಿ.ಡಿ.ಐ. iii- ೧೨೭
೧೮. ಟಿ.ಟಿ.ಡಿ.ಐ. iii- No ೧೩೭
೧೯. ಟಿ.ಟಿ.ಡಿ.ಐ. iii- No ೧೪೭
೨೦. ಸ್ಟಡೀಸ್ ಇನ್ ದಿ ಹಿಸ್ಟರಿ ಆಫ್ ದಿ ಥರ್ಡ್ ಡೈನಾಸ್ಟಿ ಆಫ್ ವಿಜಯನಗರ, ಪು. ೩೩೨
೨೧. ಕವಿಶಾಸಂ - ೩ ಹಂಪಿ, ಸಂಖ್ಯೆ ೭೩
೨೨. ಶೈವಾಗಮ - ಸಿದ್ಧಾಂತ ಶೇಖರ ಮತ್ತು ಶ್ರೀಮದ್ಭಾಗವತ
೨೩. SII- IV - Nos 254 and 255
೨೪. ಆಮುಕ್ತಮಾಲ್ಯದ, ಆಶ್ವಾಸ ೪, ಪದ್ಯ ೨೦೭, ೨೧೧, ೨೫೫
೨೫. ನಿರುಪಮಾ, ಆಮುಕ್ತಮಾಲ್ಯದ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಆಶ್ವಾಸ ೪ - ೩೫
೨೬. SII, IX, Pt, ii, No 564
೨೭. SII, IV, Nos- 245, 250, 255
೨೮. SII, IV, Nos-250
೨೯. TTDI, ii, Nos - No. 4
೩೦. SII, IX, ii, No. 688
೩೧. ವಿಜಯನಗರದ ತುಳುವ ವಂಶದ ಹಂಪಿಯ ವಿಠಲದೇವಾಲಯದ ಶಾಸನಗಳಲ್ಲಿ ಈ ಎಲ್ಲಾ ಪರಿಚಾರಕ ವರ್ಗದವರ ಹೆಸರುಗಳು, ಸ್ಥಾನಗಳು ಉಲ್ಲೇಖಿಸಿರುವುದು ಕಂಡುಬರುತ್ತದೆ.
೩೨. ಎಚ್.ಎಸ್.ಗೋಪಾಲರಾವ್, ಪೂರ್ವೋಕ್ತ, ಪು. ೯೭
೩೩. TTDI, iii, No. 105

೩೪. TTDI, ii, No. 38
೩೫. TTDI, IV, No. 1
೩೬. TTDI, I, No. 187
೩೭. TTDI, iii, No. 127
೩೮. TTDI, iii, No. 118
೩೯. SII, IV, No. 277
೪೦. TTDI, iii, No. 171
೪೧. TTDI, IV, No. 88
೪೨. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೪೩. TTDI, iii, No. 157
೪೪. SII, IV, No. 273, 277, 278
SII, IX, ii, No. 534
೪೫. TTDI, Vol, iii, No. ೭೨, AD. 1514
SII, IV, No. 283
೪೬. SII, XVI, No. 68
೪೭. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩
೪೮. SII, IV, No. 253
೪೯. ಕವಿಶಾಸಂ - ೩, ಹಂಪಿ, ಸಂಖ್ಯೆ ೭೪
೫೦. SII, XXIV, Nos, 170 and 393
೫೧. EC- 9, ಬೇಲೂರು, ಸಂಖ್ಯೆ ೧೫೯
೫೨. SII, XVI, No. 57
೫೩. SII, XXVI, No. 714
೫೪. EC- 7, ಸಂಖ್ಯೆ ೧೨೩, ಕ್ರಿ.ಶ. ೧೫೨೬
EC- 7, ಸಂಖ್ಯೆ ೧೨೪
೫೫. ಕವಿಶಾಸಂ - ೨, ಕೊಪ್ಪಳ, ಸಂಖ್ಯೆ ೩೯, ಕ್ರಿ.ಶ. ೧೫೨೧
೫೬. EC-5, ಟಿ.ನರಸೀಪುರ, ಸಂಖ್ಯೆ ೨೮೯, ಕ್ರಿ.ಶ. ೧೫೧೯
೫೭. EC-3, ಗುಂಪೇ, ತಾಮ್ರಶಾಸನ, ಕ್ರಿ.ಶ. ೧೫೧೭
೫೮. EC-7, ಮಂಡ್ಯ, ಸಂಖ್ಯೆ ೧೧೫, ಕ್ರಿ.ಶ. ೧೫೧೬, ತಾಮ್ರಶಾಸನ
೫೯. ಕವಿಶಾಸಂ - ೫, ಭಾಗ - ೨, ಸಂಖ್ಯೆ ೬೨೦
೬೦. SII, XVI, No. 74
೬೧. SII, XVI, No. 73, ಕ್ರಿ.ಶ. ೧೫೨೨
೬೨. EC- XVI, ಸಿಕ್ಕಿಮೆಂಟರಿ, ತುಮ, ಸಂಖ್ಯೆ ೧೦೮
೬೩. ಕವಿಶಾಸಂ - ೩, ಹಂಪಿ, ಸಂಖ್ಯೆ ೨೦೮
೬೪. SII, XVII, No. 681
೬೫. SII, XVVI, No. 677
೬೬. ಹಂಪಿಯ ಬಾಲಕೃಷ್ಣ ದೇವಾಲಯದಲ್ಲಿ ಪ್ರಾಕಾರದ ಬಲಗಡೆಯಲ್ಲಿ ದೊಡ್ಡದಾದ ಉಗ್ರಾಣ ಇರುವುದು ನೋಡಬಹುದು.
೬೭. SII, IV, No. 273
೬೮. ಕವಿಶಾಸಂ - ೨. ಗಂಗಾವತಿ, ಕೆಸರಟ್ಟಿ, ಸಂಖ್ಯೆ ೭೩
೬೯. SII, XVI, No. 66, ಕ್ರಿ.ಶ. ೧೫೧೮
೭೦. SII, IX, pt, ii, No. 510, A.D. 1518
೭೧. SII, XVI, No. 83, ಕ್ರಿ.ಶ. ೧೫೨೯
೭೨. SII, XVI, No. 79
೭೩. EC, V, ಟಿ.ನರಸೀಪುರ, ಸಂಖ್ಯೆ ೨
೭೪. ಕವಿಶಾಸಂ - ೩, ಹಂಪಿ, ಸಂಖ್ಯೆ ೨೧೦

೭೫. EC-೯, ಸಂಖ್ಯೆ ೧೧, ಕ್ರಿ.ಶ. ೧೫೨೨

೭೬. SII, IX, ii, No. 688

೭೭. ಕವಿಶಾಸಂ - ೩, ಹಂಪಿ, ಸಂಖ್ಯೆ ೨೧೦

೭೮. SII, XXIV, Nos. 170 and 393

೭೯. SII, XVI, No. 76, ಕ್ರಿ.ಶ. ೧೫೨೪

೮೦. SII, XVI, No. 71

೮೧. ಕವಿಶಾಸಂ - ೧, ಸಂಡೂರು, ಸಂಖ್ಯೆ ೧೩, ರಾಮಘಡ, ಕ್ರಿ.ಶ. ೧೫೨೭

೮೨. ಕವಿಶಾಸಂ - ೩, ಸಂಖ್ಯೆ ೧೮೧, ಹಂಪಿ

೮೩. TTDI, VOl, iii, No. 33
ಕವಿಶಾಸಂ - ೫, ಭಾಗ - ೧, ಸಂಖ್ಯೆ ೨೫೫

೮೪. TTDI, VOl, III, No. 62
ಕವಿಶಾಸಂ - ೫, ಭಾಗ - ೧, ಸಂಖ್ಯೆ ೨೬೩

೮೫. TTDI, VOl, III, No. 67

೮೬. ಕವಿಶಾಸಂ - ೫, ಭಾಗ - ೧, ಸಂಖ್ಯೆ ೨೬೬
TTDI, VOl, I, No. 77

೮೭. TTDI, VOl, III, No. ೮೩, ಕ್ರಿ.ಶ. ೧೫೨೧

೮೮. SII, XVI, No. 79

೮೯. ಕವಿಶಾಸಂ - ೩, ಹಂಪಿ, ಸಂಖ್ಯೆ ೭೪

೯೦. ಕವಿಶಾಸಂ - ೨, ಕೊಪ್ಪಳ, ಸಂಖ್ಯೆ ೧೬೧, ಹತೋಟಿ

೯೧. ಕವಿಶಾಸಂ - ೨, ಕೊಪ್ಪಳ, ಸಂಖ್ಯೆ ೧೬೦, ಕ್ರಿ.ಶ. ೧೫೧೩

೯೨. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೯, ಕ್ರಿ.ಶ. ೧೫೨೪

೯೩. ಕವಿಶಾಸಂ - ೨, ಗಂಗಾವತಿ, ಸಂಖ್ಯೆ ೮೦, ಕ್ರಿ.ಶ. ೧೫೧೨

೯೪. SII, XVI, No. 70, ಕ್ರಿ.ಶ. ೧೫೨೧

೯೫. ಎಸ್.ಕೆ.ರಾಮಚಂದ್ರರಾವ್, ತಿರುಪತಿ ತಿಮ್ಮಪ್ಪ, ಪು. ೧೪೫, ಕ್ರಿ.ಶ. ೧೫೧೩

೯೬. ಎಸ್.ಕೆ.ರಾಮಚಂದ್ರರಾವ್, ತಿರುಪತಿ ತಿಮ್ಮಪ್ಪ, ಪು. ೧೪೬

೯೭. ಎಸ್.ಕೆ.ರಾಮಚಂದ್ರರಾವ್, ತಿರುಪತಿ ತಿಮ್ಮಪ್ಪ, ಪು. ೧೪೮

೯೮. ಎಸ್.ಕೆ.ರಾಮಚಂದ್ರರಾವ್, ತಿರುಪತಿ ತಿಮ್ಮಪ್ಪ, ಪು. ೧೪೯

೯೯. ಎಸ್.ಕೆ.ರಾಮಚಂದ್ರರಾವ್, ತಿರುಪತಿ ತಿಮ್ಮಪ್ಪ, ಪು. ೧೪೯

೧೦೦. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩

೧೦೧. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೧

೧೦೨. ಕವಿಶಾಸಂ - ೩, ಹಂಪಿ, ಸಂಖ್ಯೆ ೨೬೫

೧೦೩. ಕವಿಶಾಸಂ - ೨, ಕೊಪ್ಪಳ, ಗಂಗಾವತಿ, ಸಂಖ್ಯೆ ೭೩
SII, XVI, No. 53
SII, XVI, No. 78
TTDI, VOl, III, No. 67

೧೦೪. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೮
SII, XVI, No. 53
SII, XVI, No. 78

೧೦೫. ಎ.ಕ. XIV, ಗುಂಪೇ, ಸಂಖ್ಯೆ ೮೧

೧೦೬. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೯
SII, XV, No. 251

೧೦೭. ಕವಿಶಾಸಂ - ೩, ಸಂಖ್ಯೆ ೭೩

೧೦೮. ಕವಿಶಾಸಂ - ೩, ಸಂಖ್ಯೆ ೨೧೦

೧೦೯. ಕವಿಶಾಸಂ - ೩, ಸಂಖ್ಯೆ ೭೪

೧೧೦. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೩೧

೧೧೧. SII, XVI, No.74, ಕ್ರಿ.ಶ. ೧೫೨೨

೧೧೨. ಕವಿಶಾಸಂ - ೩, ಹಂಪಿ, ಸಂಖ್ಯೆ ೨೦೮, ಕ್ರಿ.ಶ. ೧೫೧೩

೧೧೩. SII, XVI, No.74

೧೧೪. SII, XVII, No.683, ಕ್ರಿ.ಶ. ೧೫೨೩

೧೧೫. ಎ.ಕ.ಸಂ, ೯, ಬೇಲೂರು, ಸಂಖ್ಯೆ ೧೧

೧೧೬. SII, VOl, IX, pt, ii, No. 498

೧೧೭. ನಿಜಗುಣ ಶಿವಯೋಗಿ, ವಿವೇಕ ಚಿಂತಾಮಣಿ, ಪು. ೧೦೭

೧೧೮. SII, IV, No. 273, 278

೧೧೯. SII, IX, ii, No. 616, 653, 668, 670

೧೨೦. SII, IX, ii, No.635, SII, IV, No. 250

೧೨೧. SII, IV, No. 272, IX, ii, No. 653, 678

೧೨೨. SII, IV, No. 273, 278

೧೨೩. ಕವಿಶಾಸಂ - ೩, ಹಂಪಿ, ಸಂಖ್ಯೆ ೧೮೨
SII, IV, No. 273, 278

೧೨೪. TTDI, VOl, iii, No.67

೧೨೫. ಕವಿಶಾಸಂ - ೫, ಭಾಗ - ೧, ಸಂಖ್ಯೆ ೨೫೫
TTDI, VOl, III, No. 33

೧೨೬. SII, IV, No. 277

೧೨೭. ಎಸ್.ಕೆ.ರಾಮಚಂದ್ರರಾವ್, ಪೂರ್ವೋಕ್ತ, ಪು. ೧೪೮

೧೨೮. EC- ೩, ನಂಗೂ, ಸಂಖ್ಯೆ ೧೮೭

೧೨೯. SII, IX, pt, ii, No.494, A.D. 1514

೧೩೦. TTDI, iii, No.91, A.D. 1514

೧೩೧. ಕವಿಶಾಸಂ - ೨, ಕೊಪ್ಪಳ, ಬಂಡಿಸಣ್ಣಪುರ, ಸಂಖ್ಯೆ ೧೬೦, ಕ್ರಿ.ಶ. ೧೫೧೩

೧೩೨. SII, XVI, No.85, A.D. 1529

೧೩೩. ಕವಿಶಾಸಂ - ೩, ಹಂಪಿ, ಸಂಖ್ಯೆ ೭೩

೧೩೪. ಎಸ್.ಕೆ.ರಾಮಚಂದ್ರರಾವ್, ತಿರುಪತಿ ತಿಮ್ಮಪ್ಪ, ಪು. ೧೪೪

೧೩೫. SII, IV, No. 273, 278, ಕ್ರಿ.ಶ. ೧೫೧೩

೧೩೬. SII, IX, ii, No. 653

೧೩೭. SII, IX, II, No. 653

೧೩೮. TDER, PP, 211

೧೩೯. ಆಮುಕ್ತಮಾಲ್ಯದ, ಆಶ್ವಾಸ ೧, ಪದ್ಯ, ೫೮, ೭೨, ೭೪

೧೪೦. ಡಾ.ಚಿಮೂ, ಕಶಾಸಾಂ ಅಧ್ಯಯನ, ಪು. ೧೮೧

೧೪೧. ಕನ್ನಡ ನಿಘಂಟು, ಸಂ, ೮, ಪು. ೭೫೪೧

೧೪೨. ಎ.ಕ. (ಹ.ಅ) ಸೊರಬ, ೪೭೬, ಕ್ರಿ.ಶ. ೯೩೯

೧೪೩. EC, IV, P, 35, 957 A.D.

೧೪೪. ಕೊಪ್ಪ, ಎಸ್.ಕೆ. ತ.ನಾ : ಒಂದು ಅಧ್ಯಯನ, ಅಡಿಟಿಪ್ಪಣಿ ೧೩೦, ಪು. ೩.೨೧

೧೪೫. Altekar A.S, The position of women in Hindu civilization, Page 184

೧೪೬. ಚಿಮೂ, ಪೂರ್ವೋಕ್ತ, ಪು. ೧೮೨, ೧೮೩

೧೪೭. ಎಚ್.ಎಸ್.ಜಿ. ಶಾಹಿಕ ಚಾ ದೇಸಾಂಅಧ್ಯ, ಪು. ೯೮

೧೪೮. Altekar A.S. Ibied, Page 183

೧೪೯. Altekar A.S. Ibied, Page 183

೧೫೦. ಟಾಮ್ ಪಿರೇಸ್, ದಿ ಸಮಾ ಓರಿಯಂಟಲ್, ಲಂಡನ್, ೧೯೪೪, ಪು. ೬೦, ೬೫

೧೫೧. ಆಮುಕ್ತಮಾಲ್ಯದ, ಆಶ್ವಾಸ ೧, ಪದ್ಯ, ೫೯, ೬೩
ಆಮುಕ್ತಮಾಲ್ಯದ, ಆಶ್ವಾಸಂ ೨, ಪದ್ಯ ೩೦, ೩೪, ೩೬

೧೫೨. ಮೋಹನ ತರಂಗಿಣಿ, ಆಶ್ವಾಸ ೩, ಪದ್ಯ ೩೨
೧೫೩. SI, H, IV, No. 254
೧೫೪. Robert Seweel, F .E. P, 276
೧೫೫. H.Heras, Seven days in Vijayanagara, Journal of Indian History, IX, 1930, P, 108
೧೫೬. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೮, ನಾಗೇನಹಳ್ಳಿ
೧೫೭. ಕವಿಶಾಸಂ - ೫, ಭಾಗ - ೨, ಸಂಖ್ಯೆ ೪೭೨, ಕ್ರಿ.ಶ. ೧೫೨೧
೧೫೮. ಕವಿಶಾಸಂ - ೩, ಹಂಪಿ, ಸಂಖ್ಯೆ ೭೪
೧೫೯. ಎ.ಕ. iii, ನಂಗೂ, ಸಂಖ್ಯೆ ೧೯೦, ಕ್ರಿ.ಶ. ೧೫೧೨
೧೬೦. SII, XVI, No. 53
೧೬೧. SII, XVI, No. 45, A.D. 1509
೧೬೨. SII, XVI, No.67, A.D. 1518
೧೬೩. SII, XVI, No. 78, A.D. 1525
೧೬೪. ಕವಿಶಾಸಂ - ೨, ಕೊಪ್ಪಳ, ಸಂಖ್ಯೆ ೩೯, ಕ್ರಿ.ಶ. ೧೫೨೧
೧೬೫. SII, XVI, ಸಂಖ್ಯೆ ೬೮, ಕ್ರಿ.ಶ. ೧೫೧೯
೧೬೬. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೫, ಕ್ರಿ.ಶ. ೧೫೧೨
೧೬೭. ಗುಡಿಜನರ ಜೀವನಾಡಿ, ಎಸ್.ಕೆ.ಆರ್. ದಯಾನಂದ ಪೈ ಇಸಂಕೇಂದ್ರ, ಮೈಸೂರು, ೧೯೯೪, ಪು. ೮
೧೬೮. ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೧, ಪು. ೧೪೫
೧೬೯. ಕೆ.ಎಸ್.ಶಿವಣ್ಣ, ಕರ್ನಾಟಕ ಚರಿತ್ರೆ, ಸಂ, ೩, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೩೫೪
೧೭೦. ಕವಿಶಾಸಂ - ೩, ಸಂಖ್ಯೆ ೭೩
೧೭೧. ಕವಿಶಾಸಂ - ೩, ಸಂಖ್ಯೆ ೧೮೧
೧೭೨. ಕವಿಶಾಸಂ - ೨, ಕೊಪ್ಪಳ, ಹತೋಟಿ, ಸಂಖ್ಯೆ ೧೬೧, ಕ್ರಿ.ಶ. ೧೫೧೫
೧೭೩. ಕವಿಶಾಸಂ - ೩, ಸಂಖ್ಯೆ ೧೮೧, ಕ್ರಿ.ಶ. ೧೫೧೩
೧೭೪. SII, ii, No. 254
SII, IX, pt, ii, No. 490
ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೫, ಕ್ರಿ.ಶ. ೧೫೧೨
ಕವಿಶಾಸಂ - ೩, ಸಂಖ್ಯೆ, ೧೮೧, ಕ್ರಿ.ಶ. ೧೫೧೩
ಕವಿಶಾಸಂ - ೨, ಕೊಪ್ಪಳ, ಸಂಖ್ಯೆ ೧೬೦, ಕ್ರಿ.ಶ. ೧೫೧೩
೧೭೫. ಕವಿಶಾಸಂ - ೩, ಸಂಖ್ಯೆ ೨೫೬
೧೭೬. EC-9, ಬೇಲೂರು, ಸಂಖ್ಯೆ ೧೫೯
೧೭೭. ಕವಿಶಾಸಂ - ೫, ಭಾಗ - ೨, ಸಂಖ್ಯೆ ೪೭೨
೧೭೮. ಕವಿಶಾಸಂ - ೨, ಕೊಪ್ಪಳ, ಸಂಖ್ಯೆ ೩೯, ಕ್ರಿ.ಶ. ೧೫೨೧
೧೭೯. ಆಮುಕ್ತಮಾಲ್ಯದ, ಆಶ್ವಾಸ ೧, ಪದ್ಯ ೫೮, ೭೨, ೭೪
೧೮೦. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೮, ನಾಗೇನಹಳ್ಳಿ
೧೮೧. EC-3, ಗುಂಪೇ, ಸಂಖ್ಯೆ ೧೧೯
ಎ.ಕ. XIV, ಗುಂಪೇ, ಸಂಖ್ಯೆ ೮೧, ಕ್ರಿ.ಶ. ೧೫೨೧
೧೮೨. ಎಚ್.ಎಲ್. ನಾಗೇಗೌಡ, ಪ್ರವಾಸಿ ಕಂಡ ಇಂಡಿಯಾ, ಸಂ, ೫, ಪು. ೧೪೦, ೧೯೬೬, ಮೈಸೂರು ವಿಶ್ವವಿದ್ಯಾಲಯ.
ಸಾಲತೊರೆ ಬಿ.ಎ. Social and Political life in Vijayanagar Empire, ಭಾಗ - ೨, ೧೯೩೪, ಪು. ೩೮೮
೧೮೩. ಎಸ್.ಎಸ್.ಸಜ್ಜನ, ವಿಜಯನಗರ ಕಾಲದ ಜಾತ್ರೆ ಮತ್ತು ಉತ್ಸವಗಳು, ಕೆ.ವಿ.ಡಿ. ೧೯೯೬, (ಎಂ.ಫಿಲ್.ಪ್ರಬಂಧ) ಪು. ೧೨೪
೧೮೪. ಸಾಲತೊರೆ ಬಿ.ಎ. ಪೂರ್ವೋಕ್ತ, ಪು. ೩೯೯
೧೮೫. ಅದೇ, ಪು. ೩೮೮
೧೮೬. ಎಸ್.ಬಸಪ್ಪ, (ಸಂ), ಲಕ್ಕಣ್ಣದಂಡೇಶನ ಶಿವತತ್ತ್ವ ಚಿಂತಾಮಣಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೬೬, ಪು. ೨೫೨
೧೮೭. EC-3, ಗುಂಪೇ, ಸಂಖ್ಯೆ ೧೧೯,. ಕ್ರಿ.ಶ. ೧೫೨೧
೧೮೮. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೮
೧೮೯. SII, ಸಂ, ೪, ಸಂಖ್ಯೆ ೨೫೪

೧೯೦. SII, IV, No. 278
SII, IX, pt, ii, No. 490
ಕವಿಶಾಸಂ - ೩, ಸಂಖ್ಯೆ ೧೮೧
ಕವಿಶಾಸಂ - ೨, ಕೊಪ್ಪಳ, ಸಂಖ್ಯೆ ೧೬೦
ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೫

೧೯೧. ಕವಿಶಾಸಂ - ೧, ಹೊಸಪೇಟೆ, ಸಂಖ್ಯೆ ೨೯, ಕ್ರಿ.ಶ. ೧೫೨೪

೧೯೨. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೧

೧೯೩. ಆಮುಕ್ತಮಾಲ್ಯದ, ಆಶ್ವಾಸ ೨, ಪದ್ಯ ೭೩, ೭೪

೧೯೪. SII, II, No. 254

೧೯೫. ಕವಿಶಾಸಂ - ೩, ಹಂಪಿ, ಸಂಖ್ಯೆ ೨೫೭, ಕ್ರಿ.ಶ. ೧೫೨೧

೧೯೬. EC- ೯, ಬೇಲೂರು, ಸಂಖ್ಯೆ ೧೫೯, ಕ್ರಿ.ಶ. ೧೫೨೪
EC- IX, Rev, BI, No. 182

೧೯೭. ಕವಿಶಾಸಂ - ೩, ಹಂಪಿ, ಸಂಖ್ಯೆ ೧೯೧

೧೯೭. ತಿತಿ, ಪು. ೧೪೮

೧೯೮. EC-9, ಬೇಲೂರು, ಸಂಖ್ಯೆ ೧೫೯

೧೯೯. ಕೊಂದುರಿ ಸರೋಜಿನಿದೇವಿ, ರಿಲಿಜೀಯಸ್ ಇನ್ ವಿಜಯನಗರ ಎಂಫಾಯಿರ್, ನ್ಯೂದೆಹಲಿ, ೧೯೯೦, ಪು. ೨೭೭

೨೦೦. ಸದಾನಂದ ಕನವಳ್ಳಿ, ಮರೆತುಹೋದ ಮಹಾಸಾಮ್ರಾಜ್ಯ, ಮೂಲ ರಾಬರ್ಟ್ ಸಿವೆಲ್, ಪು. ೯೨, ೯೩

೨೦೧. ಸಾಲತೊರೆ ಬಿ.ಎ. ಪೂರ್ವೋಕ್ತ, ಪು. ೩೮೭

೨೦೨. ಕವಿಶಾಸಂ - ೩, ಸಂಖ್ಯೆ ೧೯೧

೨೦೩. ಕೊಂದೂರಿ ಸರೋಜಿನಿದೇವಿ, ಪೂರ್ವೋಕ್ತ, ಪು. ೨೭೮

೨೦೪. ರಾಜಶೇಖರ್ ಎಸ್. ಮಾಸ್ಟರ್ ಪೀಸಸ್ ಆಫ್ ವಿಜಯನಗರ ಆರ್ಟ್, ಪು. ೩೬, ೩೭

೨೦೫. ಡಿ.ಟಿ.ರಂಗಸ್ವಾಮಿ, ಭಾರತದ ಹಬ್ಬಗಳು, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೩, ಪು. ೧೦೩

೨೦೬. ಕವಿಶಾಸಂ - ೩, ಸಂಖ್ಯೆ ೨೫೭

೨೦೭. SII, XVI, No.85, ಕ್ರಿ.ಶ. ೧೫೨೯

೨೦೮. ಎ.ಕ. ಸಂ. ೩, ಗುಂಪೇ, ಸಂಖ್ಯೆ ೧೩೪, ಕ್ರಿ.ಶ. ೧೫೨೧

೨೦೯. SII, XVI, No.85, 1529, A.D.

೨೧೦. ಕವಿಶಾಸಂ - ೩, ಸಂಖ್ಯೆ ೩೨೧

೨೧೧. ಡಿ.ಟಿ. ರಂಗಸ್ವಾಮಿ, ಪೂರ್ವೋಕ್ತ, ಪು. ೯೯

೨೧೨. SII, XVI, No. 252

೨೧೩. ಡಿ.ಟಿ.ರಂಗಸ್ವಾಮಿ, ಪೂರ್ವೋಕ್ತ, ಪು. ೧೦೬

೨೧೪. ಕೊಂದೂರಿ ಸರೋಜಿನಿದೇವಿ, ಪೂರ್ವೋಕ್ತ, ಪು. ೨೭೯

೨೧೫. ಕವಿಶಾಸಂ - ೩, ಸಂಖ್ಯೆ ೨೫೭, SII, ಸಂ, ೪, ಸಂಖ್ಯೆ ೨೫೦

೨೧೬. ಎ.ಕ. ಸಂ, ೫, ನೆಲವೂರು, ಟಿ.ನರಸೀಪುರ, ಸಂಖ್ಯೆ ೨೨೫

೨೧೭. ನ್ಯೂ ಎನ್ ಸೈಕ್ಲೋಪಿಡಿಯಾ ಬ್ರಿಟಾನಿಕ, ಸಂ, ೪, ೧೭೬೮, ಪು. ೨

೨೧೮. ಸಾಲೆತೊರೆ ಬಿ.ಎ. ಪೂರ್ವೋಕ್ತ, ಪು. ೩೯೬

೨೧೯. EC, iii, Sr, No. 7

೨೨೦. ಡಾ.ಎಸ್.ಎನ್.ಬ್ಯಾತನಾಳ್, ಹೋಳಿ ಸಂಪ್ರದಾಯ, ಕಸಾಪಪ, ಸಂ. ೬೬, ಸಂಚಿಕೆ ೧, ಜೂನ್ ೧೯೯೧, ಪು. ೭೩ - ೮೧

೨೨೧. ಕೊಂದೂರಿ ಸರೋಜಿನಿದೇವಿ, ಪೂರ್ವೋಕ್ತ, ಪು. ೨೧೮

೨೨೨. ಅದೇ, ಪೂರ್ವೋಕ್ತ, ಪು. ೨೨೨

೨೨೩. ನಂದಿತಿಮ್ಮಣ್ಣ, ಪಾರಿಜಾತಾಪರಣ ಮಹಾಪ್ರಬಂಧ, ಆಶ್ವಾಸ ೧, ಪದ್ಯ ೧೪೦

೨೨೪. Major India, Vol, IV, P, 28-29

೨೨೫. SII, Vol, IX, pt, ii, P. 503, No. 489

೨೨೬. ಬೆಟಗೇರಿ ಕೃಷ್ಣಶರ್ಮ, ಕರ್ನಾಟಕದ ಜನಜೀವನ, ಧಾರವಾಡ, ೧೯೩೯, ಪು. ೭೭

೨೨೭. ನೋಡಿ, ಮೋಹನತರಂಗಿಣಿ, ಸಂಧಿ ೧೪, ಸಾಂಗತ್ಯ ೩೫ - ೮೫

೨೨೮. EC- 9, ಸಂಖ್ಯೆ ೧೫೯. ಕ್ರಿ.ಶ. ೧೫೨೪

೨೨೯. SII, XVI, No. 85, A.D. 1529

೨೩೦. ಸಾಲತೊರೆ ಬಿ.ಎ. ಪೂರ್ವೋಕ್ತ, ಭಾಗ - ೨, ೧೯೩೪, ಪು. ೩೯೭

೨೩೧. ಜಿ.ಎಸ್. ದೀಕ್ಷಿತ್ ಮತ್ತು ಇತರರು, ಕೃಷ್ಣದೇವರಾಯನ ಜೀವನ ಸಾಧನೆಗಳು, ೧೯೯೭, ಪು. ೮೪

೨೩೨. ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ೧೯೮೩, ಪು. ೨೨೩

೨೩೩. Elliot- History of India, IIV, P. 117-18

೨೩೪. ಶಿವಾನಂದ ವಿರಕ್ತಮಠ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮, ಪು. ೫೮

೨೩೫. ಜಿ.ಎಸ್. ದೀಕ್ಷಿತ್, ಪೂರ್ವೋಕ್ತ, ಪು. ೮೪

೨೩೬. ಕೃಷ್ಣರಾವ್ ಎಂ.ವಿ, ಮತ್ತು ಕೇಶವಭಟ್ಟ, ಕರ್ನಾಟಕ ಇತಿಹಾಸ ದರ್ಶನ, ೧೯೭೦, ಪು. ೯೮೮

೨೩೭. ಕವಿಶಾಸಂ - ೩. ಸಂಖ್ಯೆ ೧೯೧, ಕ್ರಿ.ಶ. ೧೫೫೯

೨೩೮. ಬೋರೆ ಅನಂತ ಕುಲಕರ್ಣಿ ಪ್ರಹ್ಲಾದ, ವಿಜಯನಗರ ಸಾಮ್ರಾಜ್ಯ, ೧೯೩೨, ಪು. ೩೦

೨೩೯. ಕವಿಶಾಸಂ - ೩, ಸಂಖ್ಯೆ ೧೯೧, ಕ್ರಿ.ಶ. ೧೫೫೯

೨೪೦. ಕವಿಶಾಸಂ - ೩, ಸಂಖ್ಯೆ ೧೮೬, ಕ್ರಿ.ಶ. ೧೫೫೪

೨೪೧. ಕೊಂದೂರಿ ಸರೋಜಿನಿದೇವಿ, ಪೂರ್ವೋಕ್ತ, ಪು. ೨೮೦

೨೪೨. EC, ಸಂ, ೩, ಸಂಖ್ಯೆ ೧೧೩, ನಂಜನಗೂಡು

೨೪೩. EC, ಸಂ, ೪, ಸಂಖ್ಯೆ ೩೮೮, ಚಾಮರಾಜನಗರ

❑❑

ಅಧ್ಯಾಯ ೬

ಸಮಾರೋಪ

೬

ಸಮಾರೋಪ

ಸಂಸ್ಕೃತಿ ಎಂಬುದು ವಿರಾಡ್ರೂಪಿಯಾದ ಒಂದು ಶಕ್ತಿ. ಅದರ ಎಲ್ಲಾ ಅಂಶಗಳನ್ನು ಇಂತಹ ಒಂದು ಪರಿಮಿತಿ ಪ್ರಯತ್ನದಲ್ಲಿ ಸಮಗ್ರವಾಗಿ ಹಿಡಿದುನಿಲ್ಲಿಸುವುದು ಒಂದು ಸಾಹಸವೇ ಸರಿ. ಅದರಲ್ಲಿಯೂ ಕೃಷ್ಣದೇವರಾಯನ ಆಳ್ವಿಕೆಯ ಸಾಮ್ರಾಜ್ಯದಾದ್ಯಂತ ಇರುವ ದೇವಾಲಯಗಳು ಮತ್ತು ಅವುಗಳ ಸಾಂಸ್ಕೃತಿಕ ಚಿತ್ರಣವನ್ನು ಸಂಪೂರ್ಣವಾಗಿ ವಿವೇಚಿಸಿ ಕೊನೆಮುಟ್ಟಿಸುವುದು ಅಸಾಧ್ಯ ಕೆಲಸ. ಅದರಲ್ಲಿ ದೇವಾಲಯಗಳ ಪರಂಪರೆಯು ನಿತ್ಯನೂತನ. ಇದುವರೆಗಿನ ಸಮೀಕ್ಷೆ ಈ ಪರಂಪರೆಯನ್ನು ಚಿತ್ರಿಸುವ ಒಂದು ಸಣ್ಣ ಪ್ರಯತ್ನ. ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಸಂಗತಿಗಳ ಹಿನ್ನೆಲೆಯಲ್ಲಿ ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳನ್ನು ಕುರಿತು ಈ ಕೆಳಗಿನಂತೆ ವಿಶ್ಲೇಷಿಸಬಹುದು :

* ಸಂಸ್ಕೃತಿಯು ವ್ಯಕ್ತಗೊಳ್ಳುವ ಪ್ರಧಾನ ಮಾಧ್ಯಮಗಳಾದ ದೇವಾಲಯಗಳು ಭಾರತೀಯ ಮತ್ತು ಕರ್ನಾಟಕ ಸಂಸ್ಕೃತಿಯನ್ನು ಅಖಂಡವಾಗಿ ಬೆಳೆಸಿ ಪೋಷಿಸಿಕೊಂಡು ಬಂದ ರೀತಿ ವೈವಿಧ್ಯಮಯ. ಅಂದಿನ ದೇವಾಲಯಗಳ ವೈಶಿಷ್ಟ್ಯಗಳಿಂದ ಕೂಡಿದ ರಚನೆ ಮತ್ತು ಸಾಂಸ್ಕೃತಿಕ ಚಿತ್ರಣಗಳು ತಮ್ಮದೇ ಆದ ರೂಪವನ್ನಿತ್ತು ನಾಡಿನ ಕಲಾಶ್ರೀಮಂತಿಕೆಗೆ ಕಾರಣವಾದವು.
* ರಾಯನ ಅವಧಿಯಲ್ಲಿದ್ದ ಧರ್ಮಪಂಥವು ನಾಡಿನ ಜನಪದರಲ್ಲಿ ಅದು ರೂಪಿಸಿದ ಕಲಾಭಿವ್ಯಕ್ತಿಗಳು ದಾಸರ ಪದಗಳಲ್ಲಿ ವ್ಯಕ್ತಗೊಂಡಿದ್ದು ಇವುಗಳೆಲ್ಲ ವೈಷ್ಣವ ಧರ್ಮವನ್ನು ಗುರುತಿಸುವಲ್ಲಿ ನೆರವಾಗುತ್ತವೆ.
* ರಾಯನ ಕಾಲದಲ್ಲಿ ಮುಖ್ಯವಾಗಿ ಕಂಡುಬಂದದ್ದು ಧರ್ಮಸಮನ್ವಯ ಮತ್ತು ಸಾಮರಸ್ಯ ದೃಷ್ಟಿ. ಇದು ದೇವಾಲಯಗಳ ಅಧ್ಯಯನದಲ್ಲಿ ವ್ಯಕ್ತಗೊಳ್ಳುವ ಪ್ರಮುಖ ಅಂಶವಾಗಿದೆ.

* ಕರ್ನಾಟಕ ಸಂಸ್ಕೃತಿಯ ರಕ್ಷಣೆಗೆ ಎಲ್ಲ ಅರಸುಮನೆತನಗಳೂ ಶ್ರಮಿಸಿವೆ. ವಿಜಯನಗರದ ಅರಸುಮನೆತನಗಳು ಧರ್ಮಸಮನ್ವಯ ಮತ್ತು ಸಾಮರಸ್ಯ ಭಾವನೆಯನ್ನು ಎಲ್ಲಾ ಅರಸರು ರೂಢಿಸಿಕೊಂಡಿದ್ದರು. ಆದರೆ ಅರಸರ ವೈಯಕ್ತಿಕ ಒಲವನ್ನು ಅವಲಂಬಿಸಿ ಒಂದೊಂದು ಕಾಲಕ್ಕೆ ಒಂದೊಂದು ಧರ್ಮವು ಪ್ರೋತ್ಸಾಹವನ್ನು ಪಡೆದರೆ, ರಾಯನ ಕಾಲದಲ್ಲಿ ವೈಷ್ಣವಧರ್ಮವು ರಾಜಧರ್ಮವಾಗಿ ಬೆಳಕಿಗೆ ಬಂದಿರುವುದು ನೈಜನೀಯ.

* ಒಬ್ಬ ಅರಸರ ರಾಜಕೀಯ ಚರಿತ್ರೆಯೆಂದರೆ ಅದು ಜನಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು. ಜನಪದ ಜೀವನದ ಅಂತರಂಗವನ್ನು ಆವರಿಸಿದ್ದುದು ರಾಜ್ಯಶಕ್ತಿಯಲ್ಲ, ಅದು ಧರ್ಮಶಕ್ತಿ. ಅರಸರು ಇದಕ್ಕೆ ಅಧೀನರಾಗಿ ನಡೆಯುತ್ತಿದ್ದರು. ಆಡಳಿತ ಕ್ರಮವನ್ನು ಆರ್ಥಿಕ ರೀತಿನೀತಿಗಳನ್ನು ರೂಪಿಸುವುದರಲ್ಲಿ ರಾಜನಿಗೆ ಧರ್ಮಶಾಸ್ತ್ರಗಳೇ ಮಾರ್ಗದರ್ಶಕ ಗಳಾಗಿರುತ್ತಿದ್ದವು. ರಾಜ್ಯಶಕ್ತಿ ಧರ್ಮಶಕ್ತಿಗೆ ಅಧೀನವಾಗಿ ನಡೆದಿರುವುದು ರಾಯನ ಕಾಲದ ಶಾಸನಗಳಿಂದ ತಿಳಿದುಬರುತ್ತದೆ.

* ವೈಷ್ಣವ ದೇವಾಲಯಗಳು ನಾಡಿನಲ್ಲೆಲ್ಲಾ ಭೌಗೋಳಿಕ ಪರಿಸರಕ್ಕನುಗುಣವಾಗಿ ನಿರ್ಮಾಣ ಗೊಂಡಿವೆ. ವಿಜಯನಗರ ಕಾಲದ ದೇವಾಲಯಗಳನ್ನು ಕಟ್ಟಲು ಹೆಚ್ಚಾಗಿ ಸ್ಥಳೀಯವಾಗಿ ದೊರೆಯುವ ಕಣಶಿಲೆಯನ್ನೇ ಬಳಸಲಾಗಿದೆ. ದೇವಾಲಯಗಳ ಮುಂಭಾಗದಲ್ಲಿ ವಿಶಾಲವಾದ ಬಜಾರುಗಳು ನಿರ್ಮಾಣವಾಗಿದ್ದವಲ್ಲದೆ ಇವುಗಳು ಊರಿನ ಪ್ರಮುಖ ಕೇಂದ್ರಗಳಾಗಿದ್ದುದೂ ತಿಳಿದುಬಂದಿದೆ.

* ವೈಷ್ಣವ ದೇವಾಲಯಗಳನ್ನು ಪಟ್ಟಣಗಳಲ್ಲಿ ಮಠಗಳಾಗಿ ಪ್ರವರ್ತಿಸಿದುದು ಕಂಡುಬರುತ್ತದೆ. ಅಲ್ಲದೆ, ಧಾರ್ಮಿಕ ಕಟ್ಟಡಗಳಾಗಿ ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದುದು ಗಮನಾರ್ಹ.

* ವೈಷ್ಣವ ದೇವಾಲಯಗಳ ಬಜಾರುಗಳ ಸಾಲುಮಂಟಪಗಳು ಯಾತ್ರಾರ್ಥಿಗಳ ಸೌಲಭ್ಯಕ್ಕಾಗಿ ಉಪಯೋಗಿಸಲ್ಪಡುತ್ತಿದ್ದರೂ ವ್ಯಾಪಾರದ ಉದ್ದೇಶಗಳಿಗಾಗಿಯೇ ಅವುಗಳನ್ನು ನಿರ್ಮಿಸ ಲಾಗಿದ್ದಿತೆಂಬುದು ಸ್ಪಷ್ಟವಾಗುತ್ತದೆ.

* ನಾಡಿನ ವೈಷ್ಣವ ದೇವಾಲಯಗಳು ಧರ್ಮಸಂಸ್ಥೆಗಳಾಗಿದ್ದು, ದೊಡ್ಡ ಜಮೀನ್ದಾರನಂತೆ ಕಾರ್ಯನಿರ್ವಹಿಸುತ್ತಿದ್ದುದಲ್ಲದೇ, ಶ್ರೀಮಂತರು, ಅರಸರು ಮತ್ತಿತರರಿಂದ ಪಡೆದ ದಾನದತ್ತಿಗಳ ರೂಪದ ಕಾಣಿಕೆಯನ್ನು ಸಾಲರೂಪದಲ್ಲಿ ಜನರಿಗೆ ನೀಡಿ ಬಡ್ಡಿಯನ್ನು ವಸೂಲು ಮಾಡುವ ಹಣಕಾಸು ಸಂಸ್ಥೆಗಳಾಗಿದ್ದವು.

* ವಿಜಯನಗರ ಸಾಮ್ರಾಜ್ಯದ ಆದಾಯ ಮೂಲಗಳಲ್ಲಿ ದೇವಾಲಯಗಳು ಪ್ರಮುಖಸ್ಥಾನ ಪಡೆದಿದ್ದವು. ಅದರಲ್ಲಿಯೂ ವೈಷ್ಣವ ದೇವಾಲಯಗಳ ಪಾತ್ರ ಹಿರಿದು. ದೇವಾಲಯಗಳ ಬಜಾರುಗಳಲ್ಲಿಯ ಅಂಗಡಿಗಳು, ವ್ಯಾಪಾರ, ವಾಣಿಜ್ಯ ಹಾಗೂ ವಸ್ತುಗಳ ಮೇಲಿನ ತೆರಿಗೆ ಯಿಂದ ಹೇರಳವಾಗಿ ಆದಾಯವಿದ್ದಿತು.

* ವೈಷ್ಣವ ದೇವಾಲಯಗಳು ರಾಜ್ಯದ ಸಂಪತ್ತನ್ನೆಲ್ಲ ತಮ್ಮಲ್ಲಿ ಕೇಂದ್ರೀಕರಿಸಿಕೊಂಡು ಸಂಪದ್ಭರಿತವಾಗಿದ್ದವು. ಈ ಸಂಪತ್ತನ್ನು ಸಾರ್ವಜನಿಕ ಕೆಲಸಕಾರ್ಯಗಳಿಗೆ ವಿನಿಯೋಗಿಸಿ ಸಾಮ್ರಾಜ್ಯದ ಏಳಿಗೆಗೆ ಕಾರಣವಾಗಿದ್ದವು.

* ರಾಯನು ರಾಜಕೀಯವಾಗಿ ವಿಜಯನಗರವನ್ನು ಉಚ್ಛ್ರಾಯಮಟ್ಟಕ್ಕೆ ಕೊಂಡ್ಯೊಯ್ದು ಯುದ್ಧಗಳಲ್ಲಿ ಜಯಪಡೆದಾಗ ಅದರ ನೆನಪಿಗಾಗಿ ಹಾಗೂ ಭಕ್ತಿಯ ಸಂಕೇತವಾಗಿ ಸಾಮ್ರಾಜ್ಯ ದಲ್ಲೆಲ್ಲಾ ಅನೇಕ ವೈಷ್ಣವ ದೇವಾಲಯಗಳನ್ನು ನಿರ್ಮಿಸಿದನು. ಜೊತೆಗೆ ಹಳೆಯ ವೈಷ್ಣವ ದೇವಾಲಯಗಳಿಗೆ ಹೊಸ ಭಾಗಗಳನ್ನು ಸೇರಿಸುವುದರ ಮೂಲಕ ವಿಸ್ತರಿಸಿರುವುದು ಕಂಡುಬರು ತ್ತದೆ. ರಾಯನು ದಿಗ್ವಿಜಯದ ಸಂದರ್ಭದಲ್ಲಿ ಒಂದೊಂದು ತೀರ್ಥಕ್ಷೇತ್ರಗಳಿಗೆ ಭೇಟಿ ನೀಡಿ ಅನೇಕ ರೀತಿಯ ದಾನದತ್ತಿಗಳನ್ನು ನೀಡಿದ್ದನು.

* ಸಾಮ್ರಾಜ್ಯದಲ್ಲಿ ಅರಸನಿಂದ ಮಾತ್ರವಲ್ಲದೇ ಸಾಮಂತ, ಪುರೋಹಿತ, ಜನಸಾಮಾನ್ಯ ರಿಂದಲೂ ವೈಷ್ಣವ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ದಾನದತ್ತಿಗಳನ್ನು ನೀಡಿ ಪ್ರೋತ್ಸಾಹಿಸಿರುವುದು ಅಧ್ಯಯನದಿಂದ ತಿಳಿದುಬಂದಿದೆ.

* ನಾಡಿನ ವಿವಿಧ ಸ್ಥಳಗಳಲ್ಲಿ ದೊರೆತಿರುವ ದೇವಾಲಯಗಳಲ್ಲಿ ವೈಷ್ಣವ ದೇವಾಲಯಗಳೇ ಅಧಿಕ ಪ್ರಮಾಣದಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣಬಹುದು.

* ಕೃಷ್ಣದೇವರಾಯನ ಕಾಲದಲ್ಲಿ ವೈಷ್ಣವ ಧರ್ಮದ ಆರಾಧಕರು ಹೆಚ್ಚಾಗಿದ್ದು ಮತ್ತು ಅಂದಿನ ಸಂದರ್ಭದಲ್ಲಿ ವೈಷ್ಣವ ಧರ್ಮವು ಇತರೆ ಧರ್ಮಗಳಿಗಿಂತ ಪ್ರಾಬಲ್ಯದಲ್ಲಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ.

* ರಾಯನ ಕಾಲದ ವೈಷ್ಣವ ದೇವಾಲಯಗಳಿಗೆ ನೀಡಿದಷ್ಟು ದಾನದತ್ತಿಗಳು ಇತರ ಧರ್ಮದ ದೇವಾಲಯಗಳಿಗೆ ನೀಡಿಲ್ಲದಿರುವುದು ಈ ಅಧ್ಯಯನದಿಂದ ತಿಳಿಯುತ್ತದೆ.

* ರಾಯನ ಕಾಲದ ರಾಜಕೀಯ ಸಂದರ್ಭ ಮತ್ತು ಧಾರ್ಮಿಕ ನೀತಿಗಳು ಕೂಡಿಯೇ ಕೆಲಸಮಾಡುತ್ತಿದ್ದುದು ಕಂಡುಬರುತ್ತದೆ. ತನ್ನ ಜೈತ್ರಯಾತ್ರೆಯ ಸಂದರ್ಭದಲ್ಲಿ ಹೆಚ್ಚು ವೈಷ್ಣವ ಕ್ಷೇತ್ರಗಳಿಗೆ ಭೇಟಿನೀಡಿರುವುದು ಅಧ್ಯಯನದಿಂದ ತಿಳಿದುಬಂದಿದೆ.

* ಅರಸನು ಸಾಮ್ರಾಜ್ಯದಲ್ಲಿ ಜನರ ಪ್ರೀತಿ, ವಿಶ್ವಾಸಗಳಿಸಲು ದೇವಾಲಯಗಳ ನಿರ್ಮಾಣ

ಮತ್ತು ಜೀರ್ಣೋದ್ಧಾರ, ದಾನದತ್ತಿಗಳನ್ನು ನೀಡುವುದರ ಮೂಲಕ ಪ್ರೋತ್ಸಾಹ ನೀಡುತ್ತಿದ್ದನು. ಇದಕ್ಕೆ ಪೂರಕವೆಂಬಂತೆ ರಾಯನು ಉದಯಗಿರಿ ದಂಡಯಾತ್ರೆಯಲ್ಲಿ ಜಯಿಸಿ ಅಲ್ಲಿಂದ ತನ್ನ ಹೆಸರಿನ ಬಾಲಕೃಷ್ಣ ವಿಗ್ರಹವನ್ನು ತಂದು ರಾಜಧಾನಿಯಲ್ಲಿ ಪ್ರತಿಷ್ಠಾಪಿಸಿದನು. ಇದು ಅರಸನ ರಾಜನೀತಿಯಲ್ಲಿ ಒಂದಾಗಿದ್ದಿತು.

* ರಾಯನು ಸದಾ ಯುದ್ಧದಲ್ಲಿ ನಿರತನಾಗಿದ್ದರೂ ಕಲೆ ಮತ್ತು ಧರ್ಮಾಭಿವೃದ್ಧಿಗಳನ್ನು ತನ್ನ ಎರಡು ಕಣ್ಣುಗಳಂತೆ ಕಾಪಾಡಿದ್ದುದು ಅಧ್ಯಯನದಿಂದ ಗೊತ್ತಾಗುತ್ತದೆ.

* ರಾಯನು ನಾಡಿನ ಎಲ್ಲಾ ಮತಧರ್ಮದ ದೇವಾಲಯಗಳಿಗೆ ದಾನನೀಡಿ ಗೌರವಿಸಿದ್ದು ಅವನ ಧರ್ಮಸಮನ್ವಯ ನೀತಿಯನ್ನು ತೋರಿಸುತ್ತದೆ.

* ವೈಷ್ಣವ ಧರ್ಮವು ಹಿಂದಿನ ಅರಸರ ಆಳ್ವಿಕೆಯಲ್ಲಿ ಅಸ್ತಿತ್ವದಲ್ಲಿದ್ದರೂ ಅರಸರ ಪ್ರೋತ್ಸಾಹ ವಿಲ್ಲದೇ ಹೆಸರಿಗೆ ಮಾತ್ರ ಉಳಿದುಕೊಂಡಿದ್ದುದು ಕಂಡುಬರುತ್ತದೆ. ನಂತರದ ಅರಸರು ವೈಷ್ಣವ ಧರ್ಮಗುರುಗಳ ಪ್ರಭಾವದಿಂದ ಮತಾಂತರ ಹೊಂದಿ ನಾಡಿನಲ್ಲಿ ವೈಷ್ಣವಧರ್ಮದ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದ್ದರು.

* ಸಾಳುವರ ಕಾಲಕ್ಕಾಗಲೇ ಪ್ರಮುಖ ವೈಷ್ಣವ ಕ್ಷೇತ್ರವಾದ ತಿರುಮಲೆಯ ವೆಂಕಟೇಶ್ವರನು ಅರಸರ ಕುಲದೈವನಾಗಿದ್ದು ಗಮನಾರ್ಹ. ಇವರ ಕಾಲಕ್ಕೆ ಅಹೋಬಿಲಂ, ತಿರುಮಲೆ ಮತ್ತು ಶ್ರೀರಂಗಂ ಕ್ಷೇತ್ರಗಳು ಪ್ರಸಿದ್ಧ ವೈಷ್ಣವಧರ್ಮಗಳ ಕೇಂದ್ರಗಳಾಗಿದ್ದವು.

* ಅರಸ ಮತ್ತು ಅಧಿಕಾರಿಗಳಿಂದ ನಿರ್ಮಾಣವಾದ ವೈಷ್ಣವ ದೇವಾಲಯಗಳು ವಾಸ್ತುರಚನೆಯ ಗ್ರಂಥಗಳಿಗನುಸಾರವಾಗಿ ನಿರ್ಮಿತವಾಗಿದ್ದರೆ, ಸಾಮಾನ್ಯರಿಂದ ನಿರ್ಮಿತವಾದ ದೇವಾಲಯ ಗಳಲ್ಲಿ ವಾಸ್ತುಗ್ರಂಥಗಳಿಗೆ ಮಹತ್ವ ನೀಡಿಲ್ಲ.

* ಅರಸನಿಂದ ನಿರ್ಮಾಣವಾದ ವೈಷ್ಣವ ದೇವಾಲಯಗಳಲ್ಲಿ ವಿಜಯನಗರ ಶೈಲಿಯ ಎಲ್ಲಾ ಲಕ್ಷಣಗಳನ್ನು ಅಳವಡಿಸಿರುವುದು ಗಮನಾರ್ಹ. ಇದರಲ್ಲಿ ವಿಶಾಲವಾದ ದೇವಾಲಯ ಸಂಕೀರ್ಣ, ಶಿಲ್ಪಕಲೆ, ಪರಿವಾರ ದೇವಾಲಯಗಳು, ದ್ವಾರಗೋಪುರ, ಇಟ್ಟಿಗೆ ಗಾರೆಕಲೆಯೂ ಹೆಚ್ಚು ಕಂಡುಬರುತ್ತದೆ.

* ರಾಯನ ಕಾಲದ ಕೆಲವು ವೈಷ್ಣವ ದೇವಾಲಯಗಳಲ್ಲಿ ಪೂಜೆ - ಪುನಸ್ಕಾರಗಳು ಇಂದು ನಿಂತುಹೋಗಿದ್ದರೆ, ಇನ್ನೂ ಕೆಲವು ದೇವಾಲಯಗಳು ಕೇಂದ್ರ ಮತ್ತು ರಾಜ್ಯಪುರಾತತ್ವ ಪ್ರಾಚ್ಯ ವಸ್ತು ಇಲಾಖೆಗಳ ಸುಪರ್ದಿಗೆ ಸೇರಿವೆ. ಈ ದೇವಾಲಯಗಳಲ್ಲಿ ಜೀರ್ಣೋದ್ಧಾರ ಕೆಲಸ ಪ್ರಾರಂಭಿಸಿದ್ದು, ಮೂಲ ರಚನೆಗೆ ಧಕ್ಕೆ ಉಂಟಾಗದ ಹಾಗೇ ಕೆಲಸವನ್ನು ಕೈಗೊಳ್ಳಲಾಗಿದೆ.

* ರಾಯನ ಕಾಲದ ವೈಷ್ಣವ ದೇವಾಲಯಗಳ ಕಾರ್ಯಚಟುವಟಿಕೆಗಳಲ್ಲಿ ಸಮಾಜದ ಎಲ್ಲಾ

ಜನರು ಭಾಗವಹಿಸುತ್ತಿದ್ದುದು ಗಮನಾರ್ಹ. ದೇವಾಲಯಗಳ ಕೆಲಸ ಕಾರ್ಯಗಳನ್ನು ಒಟ್ಟಾಗಿ ಕೂಡಿ ಮಾಡುತ್ತಿದ್ದುದು ಅಂದಿನ ಧರ್ಮಸಮನ್ವಯತೆಯನ್ನು ಸೂಚಿಸುತ್ತದೆ.


* ವೈಷ್ಣವ ದೇವಾಲಯಗಳಲ್ಲಿ ಮಂಡಳಿಗಳಿದ್ದು ದೇವಾಲಯಗಳ ಸಂಪೂರ್ಣ ಜವಾಬ್ದಾರಿಯನ್ನು ಇವು ಹೊತ್ತಿದ್ದವು.

* ತಿರುಮಲೆಯ ವೆಂಕಟೇಶ್ವರ ದೇವಾಲಯದಲ್ಲಿ ರಾಯನ ಕಾಲಕ್ಕೆ ನಡೆಯುತ್ತಿದ್ದ ಬ್ರಹ್ಮೋತ್ಸವವು ಇಂದಿಗೂ ಮುಂದುವರಿದುಕೊಂಡು ಬಂದಿರುವುದು ಗಮನಾರ್ಹ.

* ವೈಷ್ಣವ ದೇವಾಲಯಗಳು ನಾಡಿನಲ್ಲಿ ನಡೆಯುವ ಪ್ರತಿಯೊಂದು ಹಬ್ಬ - ಉತ್ಸವಗಳನ್ನು ಆಚರಿಸುತ್ತಿದ್ದು, ಇವು ಅಂದಿನ ಸಾಂಸ್ಕೃತಿಕ ತಾಣಗಳಾಗಿದ್ದವು.

ಒಟ್ಟಿನಲ್ಲಿ ಸಾಮ್ರಾಜ್ಯದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವ್ಯವಸ್ಥೆಗಳನ್ನು ನಿಯಂತ್ರಿಸುವುದರೊಂದಿಗೆ ಸಾಂಸ್ಕೃತಿಕ ಕೇಂದ್ರಗಳಾಗಿ ಪರಿಣಮಿಸಿದ್ದುದು ವಿಜಯನಗರ ಕಾಲದ ವೈಷ್ಣವ ದೇವಾಲಯಗಳ ಅಧ್ಯಯನದಿಂದ ವ್ಯಕ್ತಗೊಳ್ಳುವ ಸತ್ಯಸಂಗತಿಯಾಗಿದೆ.

❑❑



ದೇವಾಲಯ ಭಾಗಗಳ ದೇಹ ರಚನೆ



ಅನುಬಂಧ

ಪಾರಿಭಾಷಿಕ ಪದಗಳು

ಅಂಕಣ	ವಿಂಗಡಣೆಯ ಒಂದು ಭಾಗ
ಅಂಜಲಿಮುದ್ರೆ	ಕೈ ಜೋಡಿಸಿ ಮುಗಿಯುವುದು
ಅಂತರ್ಭಿತ್ತಿ	ಗರ್ಭಗೃಹದ ಸುತ್ತ ಇರುವ ಒಳಭಿತ್ತಿ
ಅಂತರಾಳ	ಗರ್ಭಗುಡಿ ಮತ್ತು ನವರಂಗದ ಮಧ್ಯಭಾಗ
ಅಧಿಷ್ಠಾನ	ದೇವಾಲಯದ ಗೋಡೆಗೆ ಆಧಾರವಾಗಿರುವ ಕೆಳಭಾಗ
ಅಭಯ ಹಸ್ತ	ಸಂರಕ್ಷಣಾ ಸೂಚಿಹಸ್ತ
ಅಭಿಷೇಕ ಜಲ	ದೇವತಾ ಮೂರ್ತಿಗೆ ಎರೆಯುವ ನೀರು
ಅಮ್ಮನವರ ಗುಡಿ	ಪುರುಷ ದೇಗುಲದ ಎಡಬದಿಯ ಸಣ್ಣ ಸ್ತ್ರೀ ದೇಗುಲ
ಅರೆಗಂಬ (ಕಂಬ)	ಗೋಡೆಗಳ ನಡುವಣ ಅರ್ಧಕಂಬ, ಕಂಬದ ಅರ್ಧಭಾಗ ಗೋಡೆಯಲ್ಲಿ ಸೇರಿದ್ದು, ಉಳಿದ ಅರ್ಧಭಾಗ ಮಾತ್ರ ಗೋಚರಿಸುತ್ತದೆ
ಅಕ್ಷಮಾಲಾ	ಮಣಿಗಳ ಸರ (ಜಪಮಾಲೆ)
ಉತ್ತರೀಯ	ಮೇಲು ಹೊದಿಕೆ; ಪಂಚೆ
ಉತ್ಸವ ಮಂಟಪ	ರಥೋತ್ಸವ, ಉತ್ಸವಗಳು, ದೇವಾಲಯದಿಂದ ಹೊರಟು ತಲುಪಬೇಕಾದ ನಿರ್ದಿಷ್ಟ ಸ್ಥಳ
ಉದರಬಂಧ	ಮೂರ್ತಿಯ ಎದೆಯ ಭಾಗದಲ್ಲಿ ಧರಿಸಿರುವ ಆಭರಣ
ಉಪಪೀಠ	ದೇವಾಲಯದ ಅಧಿಷ್ಠಾನದಲ್ಲಿನ ಒಂದು ಭಾಗ
ಉಪಾನ	ದೇಗುಲದ ತಳಭಾಗ
ಏಕಕೂಟ	ಒಂದು ಗರ್ಭಗೃಹವಿರುವ ದೇಗುಲ
ಏರ್ಧ್ವಮುಖಕ್ರಮ	ದೇವಾಲಯದ ಹೊರಭಾಗದಲ್ಲಿ ಕೆಳಗಿನಿಂದ ಮೇಲಕ್ಕೆ ಒಂದಾದ ಮೇಲೊಂದು ಭಾಗವನ್ನು ನಿಶ್ಚಿತ ರೀತಿಯಲ್ಲಿ ರಚಿಸುವುದು
ಕಟಾಂಜನ	ಕಟಕಟೆ, ಕುಳಿತುಕೊಳ್ಳಲು ಅನುವಾಗುವ ಕಟ್ಟೆ
ಕಟ್ಯಾವಲಂಬಿತ	ಕಟಿ (ಸೊಂಟ) ಹಿಡಿದಿರುವ ಕೈ
ಕಕ್ಷಾಸನ	ಕುಳಿತುಕೊಳ್ಳಲು ನಿರ್ಮಿಸಿದ ಕಟ್ಟೆ
ಕಲ್ಯಾಣ ಮಂಟಪ	ಶುಭಕಾರ್ಯಗಳಿಗೆ ಕಟ್ಟಲಾದ ಮಂಟಪ
ಕಪೋತ	ದೇಗುಲದ ಮೇಲ್ಛಾವಣಿಯ ನೀರು ಗೋಡೆಯ ಮೇಲೆ ಬೀಳದಂತೆ ಮಾಡಿದ ಮುಂಚಾಚಿದ ರಚನೆ
ಕಲಶ	ಶಿಖರದ ಮೇಲಿನ ಪಾತ್ರೆಯಂತಹ ಭಾಗ
ಕಳಸ	ದೇವಾಲಯದ ಗೋಪುರಕ್ಕೆ ಹಾಕುವ ಕಂಚು ಅಥವಾ ಹಿತ್ತಾಳೆಯ ಅಲಂಕಾರದ ಶಿಖರ
ಕಿರೀಟ ಮುಕುಟ	ತಲೆಯ ಮೇಲೆ ಕಿರೀಟ ಧರಿಸಿದ ಮೂರ್ತಿ
ಕೀರ್ತಿಮುಖ	ಅಲಂಕಾರದ ಒಂದು ವಿಧ, ವೈಭವ, ಭವ್ಯತೆಯನ್ನು ಸೂಚಿಸುವ ಅಲಂಕಾರ
ಕುಂಡಲ	ಕಿವಿಯ ಆಭರಣ, ಕಿವಿಯೋಲೆ

ಕುಂಭ	ಗಡಿಗೆ, ಕುಂಭದ ಆಕಾರದ ಕಲಶ
ಕುಂಭಲತಾ	ಭಿತ್ತಿಯಲ್ಲಿ ಕುಡ್ಯಸ್ತಂಭಗಳ ನಡುವಿನ ಅಲಂಕಾರಿಕ ಭಾಗ
ಕುಚಬಂಧ	ಸ್ತನಪಟ್ಟಿ
ಕುಮುದ	ಅಧಿಷ್ಠಾನದಲ್ಲಿ ಕಾಣಬರುವ ಅಂಗ
ಕೋಷ್ಠಕ	ಮೂರ್ತಿಗಳನ್ನು ಇಡಲು ಮಾಡಿದ ಚಿಕ್ಕಗೂಡು
ಖಟ್ವಾಂಗ	ಮೊಣಕ್ಕೆ ಮೂಳೆಯಿಂದ ತಯಾರಿಸಿದ ಗದೆಯಾಗಿದ್ದು, ಮೇಲ್ಭಾಗದಲ್ಲಿ ಮನುಷ್ಯನ ತಲೆಬುರುಡೆ ಇರುತ್ತದೆ.
ಗರ್ಭಗೃಹ	ಮೂಲ ದೇವತಾ ಮೂರ್ತಿ ಇರುವ ದೇವಾಲಯದ ಭಾಗ
ಗರುಡಗಂಭ	ದೇವಾಲಯದ ಮುಂದೆ ನಿಲ್ಲಿಸಿರುವ ಗರುಡನ ಚಿತ್ರ ಕೆತ್ತಿದ ದೀಪಸ್ತಂಭ
ಗೃಹಪಿಂಡಿ	ಗರ್ಭಗೃಹದ ಸುತ್ತ ಇರುವ ಭಿತ್ತಿ
ಗ್ರೀವ	ಶಿರೋಭಾಗ, ಶಿಖರದ ಕತ್ತಿನ ಭಾಗ
ಗೋಪುರ	ಪ್ರವೇಶದ್ವಾರದ ಮೇಲಿನ ಮೇಲ್ಕಟ್ಟಡ
ಚಕ್ರಕುಂಡಲ	ದುಂಡಾಕಾರದ ಕಿವಿಯೋಲೆ (ಕಿವಿಯ ಆಭರಣ)
ಚಾಚುಪೀಠ	ಕಂಬದ ಮೇಲ್ಭಾಗದ ಮುಂಚಾಚಿದ ರಚನೆ
ಜಗತಿ	ಅಧಿಷ್ಠಾನದ ತಳಹದಿ
ಜಗಲಿ	ವೇದಿಕೆ, ಕಟ್ಟೆ
ತಳ (ಲ)	ಅಂತಸ್ತು
ತ್ರಿಪಟ್ಟಕುಮುದ	ಮೂರು ಮುಖದ ಕುಮುದ
ದ್ವಾರಪಾಲಕರು	ಬಾಗಿಲನ್ನು ಕಾಯುವ ಸೇವಕರು
ದ್ವಾರಬಂಧ	ಬಾಗಿಲ ಚೌಕಟ್ಟು, ಬಾಗಿಲಿನ ನಿಲವು
ದ್ರಾವಿಡ ಶೈಲಿ	ದಕ್ಷಿಣ ಭಾರತೀಯ ದೇವಾಲಯಗಳ ವಾಸ್ತುಶಿಲ್ಪ ಮಾದರಿ
ದ್ವಿಕೂಟ	ಎರಡು ಗರ್ಭಗುಡಿಗಳಿರುವ ದೇವಾಲಯ
ದ್ವಿತಳ (ಲ)	ಎರಡು ಅಂತಸ್ತಿರುವ ಗೋಪುರ
ದೀಪಸ್ತಂಭ	ವಿಶೇಷ ಸಂದರ್ಭಗಳಲ್ಲಿ ದೀಪ ಹಚ್ಚಲು ನಿಲ್ಲಿಸಿದ ಕಲ್ಲಿನ ಕಂಭ
ಧನಸ್ಸು	ಬಿಲ್ಲು
ನಾಭಿ	ಹೊಕ್ಕಳು
ನಿರಂಧಾರ ದೇವಾಲಯ	ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥ ಇಲ್ಲದಿರುವ ದೇವಾಲಯ
ಪಂಜರ	ಗೂಡು (ಕೂಟ - ಶಾಲಾಗಳ ಮಧ್ಯಭಾಗ)
ಪಟ್ಟಿಕಾ	ಅಧಿಷ್ಠಾನದ ಕೊನೆಯ ಅಂಗ, ವಾಜನದಂತೆಯೇ ಹೊರಚಾಚಿರುವ ಅಗಲವಾದ ಪಟ್ಟಿ
ಪದ್ಮ	ಕಮಲ
ಪದ್ಮಪೀಠ	ಪದ್ಮದಿಂದ ಅಲಂಕರಿಸಿರುವ ಪೀಠ
ಪದ್ಮಾಸನ	ಪದ್ಮದ ಮೇಲೆ ಕುಳಿತಿರುವುದು / ಎರಡು ಕಾಲನ್ನು ಒಳಭಾಗಕ್ಕೆ ಮಡಚಿ ಕುಳಿತಿರುವುದು
ಪರಿವಾರ	ಮುಖ್ಯ ದೇವತೆಯರ ಉಪದೇವತೆಗಳು
ಪುಷ್ಪಬೋದಿಗೆ	ಪದ್ಮಾಲಂಕಾರವುಳ್ಳ ಬೋದಿಗೆ
ಪ್ರಣಾಳ	ಅಭಿಷೇಕ ಮಾಡಿದ ನೀರು ಹೊರ ಹೋಗಲು ಮಾಡಿರುವ ನಾಳ
ಪ್ರದಕ್ಷಿಣಾ ಪಥ	ಭಕ್ತಾದಿಗಳು ಗರ್ಭಗುಡಿಯನ್ನು ಸುತ್ತಿಬರಲು ಇರುವ ದಾರಿ
ಪ್ರಭಾವಳಿ	ಮೂರ್ತಿಗಳ ಬೆನ್ನ ಹಿಂದೆ ಮಾಡಿರುವ ಸುತ್ತಲಿನ ಅಲಂಕಾರಿಕ ಪಟ್ಟಿ
ಪ್ರಾಕಾರ ಗೋಡೆ	ದೇವಾಲಯದ ಸುತ್ತ ಕಟ್ಟಲಾದ ರಕ್ಷಣಾತ್ಮಕ ಗೋಡೆ
ಬಲಿಪೀಠ	ಬಲಿಕೊಡುವ ಸ್ಥಳ
ಬೋದಿಗೆ	ಕಂಬದ ಮೇಲೆ ಮುಂಚಾಚಿದ ಭಾಗ

ಭಜನಾ ಮಂಟಪ	ಭಜನೆ ಇತ್ಯಾದಿ ಕಾರ್ಯಕ್ರಮಗಳಿಗೆಂದು ಕಟ್ಟಿದ ಮಂಟಪ
ಭುಜಬಂಧ	ಮೂರ್ತಿಭುಜಕ್ಕೆ ಧರಿಸಿದ ಆಭರಣ
ಭುವನೇಶ್ವರಿ	ಸೂಕ್ಷ್ಮ ಕೆತ್ತನೆಯ ಕೆಲಸದಿಂದ ಕೂಡಿದ ದೇಗುಲದ ಮೇಲ್ಛಾವಣಿಯ ಒಳಮೈ ಭಾಗ
ಮಕರತೋರಣ	ಮೊಸಳೆಯ ಬಾಯಿಂದ ತೋರಣಗಳು ಹೊರಬಂದ ಹಾಗೆ ಮಾಡಿರುವ ಅಲಂಕಾರ
ಮಹಾದ್ವಾರ	ಮುಖ್ಯ ಪ್ರವೇಶದ್ವಾರ
ಮಹಾಮಂಟಪ	ನವರಂಗ (ಸಭಾಮಂಟಪ)ಕ್ಕೆ ಹೊಂದಿಕೊಂಡಿರುವ ಉದ್ದನೆಯ ಭಾಗ
ಮುಖಮಂಟಪ	ಪ್ರವೇಶಮಂಟಪ
ಮುಖ್ಯವಿಮಾನ	ಐದರಿಂದ ಹನ್ನೆರಡು ತಲಗಳನ್ನು ಹೊಂದಿರುವ ದೇವಾಲಯದ ಗೋಪುರಗಳ ಭಾಗ
ಯಜ್ಞೋಪವೀತ	ದೇಹದಲ್ಲಿ ಧರಿಸಿದ ಪವಿತ್ರ ದಾರ
ಯಾಳಿ	ಸಿಂಹಮುಖ, ಆನೆಯ ಕೋರೆ ಹಾಗೂ ಸೊಂಡಿಲುಗಳಿರುವ ಕಾಲ್ಪನಿಕ ಪ್ರಾಣಿ
ಯೋಗಮುದ್ರೆ	ಧ್ಯಾನದಲ್ಲಿ ಕುಳಿತ ಭಂಗಿ
ರಂಗಮಂಟಪ	ಸಂಗೀತ, ನೃತ್ಯ, ನಾಟಕ, ಮುಂತಾದವುಗಳ ಪ್ರದರ್ಶನ ಸ್ಥಳ
ರೂವಾರಿ	ಶಿಲ್ಪಿ
ಲಲಾಟ ಬಿಂಬ	ದ್ವಾರದ ಮಧ್ಯದಲ್ಲಿ ಧಾರ್ಮಿಕ ಪಂಥವನ್ನು ಸೂಚಿಸುವ ಪ್ರತಿಬಿಂಬಕ ಚಿತ್ರ
ಲಲಿತಾಸನ	ಒಂದು ಕಾಲನ್ನು ಇಳಿಬಿಟ್ಟು ಮತ್ತೊಂದು ಕಾಲನ್ನು ಮಡಚಿ ಕುಳಿತಿರುವ ಭಂಗಿ
ವರದ ಹಸ್ತ	ಭಕ್ತರಿಗೆ ವರ ನೀಡುವ ಹಸ್ತ
ವಲ್ಲೀಬಂಧ	ಬಳ್ಳಿಗಳು ಒಂದಕ್ಕೊಂದು ವೃತ್ತಾಕಾರದಲ್ಲಿ ಹೆಣೆದುಕೊಂಡಂತಿರುವ ಕಿಟಕಿ
ವಾತಾಯನ	ಗಾಳಿ ಬೆಳಕಿಗಾಗಿ ಗೋಡೆಯಲ್ಲಿ ಮಾಡಿರುವ ಕಿಟಕಿ
ವಿಮಾನ	ಗರ್ಭಗೃಹದ ಮೇಲಿನ ಶಿಖರ
ವೇದಿ (ವೇದಿಕಾ)	ಭಿತ್ತಿಯಲ್ಲಿ ಬರುವ ಮೊದಲ ಅಂಗ
ಶಿಖರ	ದೇವಾಲಯದ ಗರ್ಭಗೃಹದ ಮೇಲಿನ ರಚನೆ
ಸಾಂಧಾರ ದೇವಾಲಯ	ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥವಿರುವ ದೇವಾಲಯ
ಸಭಾಮಂಟಪ	ಅಂತರಾಳದ ಮುಂಬದಿಯ ಒಂಭತ್ತು ಅಂಕಣಗಳಿಂದ ಕೂಡಿದ ಭಾಗ
ಸಮಭಂಗಿ	ಎರಡು ಕಾಲಿನ ಮೇಲೆ ಸಮನಾಗಿ ನಿಂತ ಭಂಗಿ
ಸುಕನಾಶಿ	ಗಿಣಿಯ ಕೊಕ್ಕಿನಂತೆ ಶಿಖರದ ಮುಂಭಾಗದಲ್ಲಿ ಮುಂಚಾಚಿದ ರಚನೆ
ಸೂತ್ರಧಾರಿ	ವಾಸ್ತುಶಿಲ್ಪಿ
ಸ್ತೂಪಿ	ಕಲಶದ ಮೇಲಿನ ಮೊನಚಾದ ಕೊನೆಯ ಭಾಗ
ಸೋಪಾನ	ಮೆಟ್ಟಿಲು, ಪಾವಟಿಗೆ

ಗ್ರಂಥಋಣ

ಕನ್ನಡ ಗ್ರಂಥಗಳು

ಅ.ನ.ಕೃ. ಶ್ರೀಕೃಷ್ಣದೇವರಾಯ, ಬೆಂಗಳೂರು, ಐಬಿಎಚ್ ಪ್ರಕಾಶನ, ೧೯೭೧

ಅಪರ್ಣ, ಕೂ.ಸ. ದೇವಾಲಯ ವಾಸ್ತುಶಿಲ್ಪ ಪರಿಚಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಆಚಾರ್ಯ, ವಿ.ಎಸ್.ಎಸ್. (ಸಂ), ಶ್ರೀಕೃಷ್ಣದೇವರಾಯನ ದಿನಚರಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೩

ಆಲೂರು ವೆಂಕಟರಾಯರು, ಕರ್ನಾಟಕದ ಗತವೈಭವ, ಕರ್ನಾಟಕ ಸಾಹಿತ್ಯ ಮಂದಿರ, ಧಾರವಾಡ, ೧೯೪೦

ಕರುಣ ಮಂಗಳವೇಢೆ, ಕರ್ನಾಟಕ ದೇವಾಲಯಗಳಲ್ಲಿ ರಂಗಭೋಗ (ನೃತ್ಯ) (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

ಕರೂರ್, ಎಸ್.ಆರ್. ಶ್ರೀಕೃಷ್ಣದೇವರಾಯ, ಬಳ್ಳಾರಿ, ಕರೂರು ಶೇಷಗಿರಿರಾಯರು ಪ್ರಕಾಶನ

ಕಲಬುರ್ಗಿ, ಎಂ.ಎಂ. ಧಾರವಾಡ ಜಿಲ್ಲೆಯ ಶಾಸನಗಳ ಸೂಚಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫

ಕಲಬುರ್ಗಿ, ಎಂ.ಎಂ. ಕರ್ನಾಟಕದ ಕೃಷಿಯುತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

ಕುಂಬಾಸ, ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ, ಮಾಲತೇಶ ಪ್ರಕಾಶನ, ಕುಂಚೂರು, ೧೯೯೦

ಕುಮಾರಸ್ವಾಮಿ, ಕೆ.ಎಸ್. ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬

ಕುರುಡುಕೇರಿ, ಹಂಪೆ ಅಥವಾ ವಿಜಯನಗರದ ಹಂಪೆ, ವಿಭೂತಿ ಬಸಯ್ಯನವರು (ಪ್ರಕಾಶನ), ಹಂಪಿ, ೧೯೬೧

ಕೃಷ್ಣರಾವ್, ಎಂ.ವಿ. ಕೇಶವ, ಎಂ. (ಸಂ), ಕರ್ನಾಟಕ ಇತಿಹಾಸ ದರ್ಶನ, ಪಿ.ಎಸ್. ಭಟ್, ಕರ್ನಾಟಕ ಸಹಕಾರಿ ಪ್ರಕಾಶನ, ನಿಯಮಿತ, ಬೆಂಗಳೂರು, ೧೯೭೦,

ಕೃಷ್ಣಮೂರ್ತಿ, ಪಿ.ವಿ. ಇತರರು, (ಸಂ), ಸೂರ್ಯಕೀರ್ತಿ - ಸೂರ್ಯನಾಥ ಕಾಮತರ ಅಭಿನಂದನ ಗ್ರಂಥ, ಸೂರ್ಯನಾಥ ಕಾಮತ್ ಅಭಿನಂದನಾ ಸಮಿತಿ, ಬೆಂಗಳೂರು, ೨೦೦೦

ಕೃಷ್ಣಮೂರ್ತಿ ಚೇಕೂರು, ಹಂಪಿಯ ಇತಿಹಾಸದ ಕಥೆಗಳು, ೨೪ನೆಯ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನ, ಬಳ್ಳಾರಿ, ೧೯೭೨

ಕೆಳದಿ ಗುಂಡಾಜೋಯಿಸ್, ಕೆಳದಿ ನೃಪವಿಜಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

ಕೊಪ್ಪ, ಎಸ್.ಕೆ. ತರ್ದವಾಡಿ ನಾಡು - ಒಂದು ಅಧ್ಯಯನ, ಪ್ರತಿಭಾ ಪ್ರಕಾಶನ, ಇಂಡಿ, ೧೯೯೦

ಕೋಡದ, ಎಸ್.ಬಿ. ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಪ್ರಯಾಗ ಪ್ರಕಾಶನ, ಹುಬ್ಬಳ್ಳಿ, ೧೯೬೭

ಕೋಡದ, ಎಸ್.ಬಿ. ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದು ಮುಸ್ಲಿಂ ಬಾಂಧವ್ಯ, ಕೋಡದ ಪ್ರಕಾಶನ, ಧಾರವಾಡ, ೧೯೬೬

ಗುಂಡಪ್ಪ, ಡಿ.ವಿ. ವಿಜಯನಗರ ಸ್ಥಾಪನೆ, ಮೈಸೂರು, ೧೯೪೧

ಗುರುರತ್ನಬಾಬು, ಡಿ. ದಕ್ಷಿಣ ಭಾರತೀಯ ಕಲೆ ಮತ್ತು ವಾಸ್ತುಶಿಲ್ಪ, ಯುವವಾಣಿ ಕ್ರಿಯೇಟಿವ್, ಮಾನಸಗಂಗೋತ್ರಿ, ಮೈಸೂರು, ೧೯೯೭

ಗೋಪಾಲ, ಬಾ.ರಾ. ಕರ್ನಾಟಕದ ಕಲೆಗಳು - ವಾಸ್ತು - ಸಂಪುಟ ೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩

ಗೋಪಾಲ, ಬಾ.ರಾ. ವಿಜಯನಗರ ವಾಸ್ತುಶಿಲ್ಪ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೩

ಗೋಪಾಲ, ಬಾ.ರಾ. ಕರ್ನಾಟಕದಲ್ಲಿ ಶ್ರೀ ರಾಮಾನುಜಚಾರ್ಯರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೪

ಗೋಪಾಲರಾವ್, ಎಚ್.ಎಸ್. ಶಾಸನಗಳ ಹಿನ್ನೆಲೆಯಲ್ಲಿ ಕಲ್ಯಾಣಚಾಲುಕ್ಯರ ದೇವಾಲಯಗಳು - ಒಂದು ಸಾಂಸ್ಕೃತಿಕ ಅಧ್ಯಯನ, (ಪಿಎಚ್.ಡಿ. ಮಹಾಪ್ರಬಂಧ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೯೦

ಚೆನ್ನಬಸಪ್ಪ, ಕೋ. ವಿಜಯನಗರದ ಶ್ರೀಕೃಷ್ಣದೇವರಾಯ, ಮೈಸೂರು, ಶ್ರೀ ಗೌರಿಶಂಕರ್ ಬುಕ್ ಡಿಪೋ, ೧೯೫೫

ಚೆನ್ನಬಸಪ್ಪ ಪಾಟೀಲ, ವಿನೋದಪಾಟೀಲ, ವಿಜಯನಗರದ (ಹಂಪಿ) ಶಾಸನಗಳು, ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೬

ಚಿದಾನಂದಮೂರ್ತಿ, ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು, ೧೯೭೯

ಚಿದಾನಂದಮೂರ್ತಿ, ಎಂ. ಕರ್ನಾಟಕ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧

ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

ಚೆಲುವರಾಜು, ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಜೋಶಿ ದತ್ತಾತ್ರೇಯ ತಿಮ್ಮಣ್ಣಭಟ್ಟ, ಕನ್ನಡ ರಾಜ್ಯ ರಮಾರಮಣ, ಕೃಷ್ಣದೇವರಾಯ, ಕರ್ನಾಟಕ ವಿಶ್ವವಿದ್ಯಾಲಯ, ಉಪನ್ಯಾಸ ಗ್ರಂಥಮಾಲೆ, ೧೬೫, ಧಾರವಾಡ, ೧೯೩೮

ತಿಮ್ಮಣ್ಣ, ಕರ್ನಾಟಕ ಶ್ರೀಕೃಷ್ಣರಾಯಭಾರತ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ತಿಪ್ಪೇರುದ್ರಸ್ವಾಮಿ, ಹೆಚ್. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ೧೯೯೭

ತಿಪ್ಪೇಸ್ವಾಮಿ, ಹೆಚ್. ದಾವಣಗೆರೆ ಜಿಲ್ಲೆಯ ದೇವಾಲಯಗಳು (ಅಪ್ರಕಟಿತ ಪಿಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

ದಯಾನಂದ ಪೈ, ಗುಡಿ ಜನರ ಜೀವನಾಡಿ, ಇತಿಹಾಸ ಸಂಶೋಧನಾಕೇಂದ್ರ, ಮೈಸೂರು, ೧೯೯೪

ದೀಕ್ಷಿತ್, ಜಿ.ಎಸ್. ಇತರರು, ಕೃಷ್ಣದೇವರಾಯನ ಜೀವನ - ಸಾಧನೆಗಳು, ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು, ೧೯೯೭

ದೀಕ್ಷಿತ್, ಜಿ.ಎಸ್. (ಸಂ), ಶ್ರೀಕೃಷ್ಣದೇವರಾಯ ಮತ್ತು ಕನ್ನಡ ಸಂಸ್ಕೃತಿ, ಮೂರು ದತ್ತಿ ಉಪನ್ಯಾಸಗಳು, ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು, ೧೯೮೬

ದೀಕ್ಷಿತ್ ಮತ್ತು ಇತರರು, ಸಂಗಮರ ಕಾಲದ ವಿಜಯನಗರ, ಬೆಂಗಳೂರು, ಬಿ.ಎಂ.ಶ್ರೀ. ಪ್ರತಿಷ್ಠಾನ, ೧೯೭೧

ದೇವರಕೊಂಡಾರೆಡ್ಡಿ ಮತ್ತು ಇತರರು, ಹಂಪಿ ಶಾಸನಗಳು, ಸಂ. ೩, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ದೇವರಕೊಂಡಾರೆಡ್ಡಿ, ತಲಕಾಡಿನ ಗಂಗರ ದೇವಾಲಯಗಳು : ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೪

ದೇಸಾಯಿ, ಪಿ.ಬಿ. ವಿಜಯನಗರ ಸಾಮ್ರಾಜ್ಯ, ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಲ, ಧಾರವಾಡ, ೧೯೩೬

ದೇಸಾಯಿ, ಪಿ.ಬಿ. ಮತ್ತಿತರರು, ಕರ್ನಾಟಕ ಇತಿಹಾಸ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೧

ನಂಜುಂಡಸ್ವಾಮಿ, ಎ.ಎಸ್. ವಿಜಯನಗರ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೧

ನಂದಿಮಠ, ಎಸ್.ಸಿ. ಕರ್ನಾಟಕ ಧರ್ಮಗಳು, ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ ೭೦, ಕರ್ನಾಟಕ ಸರ್ಕಾರ, ೧೯೮೩

ನರಸಿಂಹನ್, ಆ.ಲ. ಮತ್ತು ಮರಿಶಾಮಚಾರ್ (ಸಂ), ವಿಜಯನಗರ ಕಾಲದ ಶಿಲ್ಪಕಲೆ, ಶಿಲ್ಪಕಲಾ ಪ್ರಪಂಚ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪

ನರಸಿಂಹಮೂರ್ತಿ, ಎ.ವಿ. ವಿಜಯನಗರದ ನಾಣ್ಯಸಂಪತ್ತು, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು, ೧೯೯೬

ನಾಗರಾಜಯ್ಯ, ಎಚ್.ಎಂ. ವಿಜಯನಗರ ಮತ್ತು ಮೈಸೂರು ಇತಿಹಾಸ, ದಖನ್ ಪ್ರಕಾಶನ, ಬೆಂಗಳೂರು, ೧೯೭೨

ನಾಯಕ, ಹಾ.ಮಾ. ವೆಂಕಟಾಚಲಶಾಸ್ತ್ರೀ ಟಿ.ವಿ. (ಸಂ), ಕನ್ನಡ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು, ೧೯೮೧

ನಾರಾಯಣಶೆಟ್ಟಿ, ಕೆ. ವಿಜಯನಗರದ ತುಳುವಂಶ, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೭೨

ನಾಗೇಗೌಡ, ಎಚ್.ಎಲ್. ಪ್ರವಾಸಿ ಕಂಡ ಇಂಡಿಯಾ, ಸಂಪುಟಗಳು ೩, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು, ೧೯೬೬

ನಿರುಪಮಾ, ಆಮುಕ್ತಮಾಲ್ಯದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ನಿರುಪಮಾ, ಶ್ರೀಕೃಷ್ಣದೇವರಾಯನ ಆಮುಕ್ತಮಾಲ್ಯದ, ಬೆಂಗಳೂರು, ೧೯೭೯

ಪರಮೇಶ್ವರಪ್ಪ, ಟಿ. (ಸಂ), ಹಂಪಿ ಪರಂಪರೆ, ಶ್ರೀ ವಿದ್ಯಾವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ೧೯೯೬

ಪುಲಮತಿ ಶಾಮರಾವ್, ವಿಜಯನಗರ ಕಲೆ ಮತ್ತು ಸಾಹಿತ್ಯ, ಬೆಂಗಳೂರು, ೧೯೫೬

ಪ್ರಕಾಶ್, ಎಂ.ಪಿ. ಡೊಮಿಂಗೋಸ್ ಪಯಾಸ್ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

ಪ್ರಭಾಕರ್, ಎಂ.ಎಸ್. ದೇವಾಲಯ ವಾಸ್ತುಚಂದ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ೨೦೦೦

ಬಸಪ್ಪ ಎಸ್. ಪಂಡಿತ, (ಸಂ), ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೬೬

ಬಸವರಾಜ ಮಲಶೆಟ್ಟಿ, ವಿಜಯನಗರ ಇತಿಹಾಸದ ಬಗ್ಗೆ ಕೆಲವು ಭ್ರಮೆಗಳು, ತಿರುಳ್ಗನ್ನಡ, ಕೊಪ್ಪಳ ಸಾಹಿತ್ಯ ಸಮ್ಮೇಳನದ ಸವಿಸಂಚಿಕೆ, ೧೯೯೩

ಭೀಮಸೇನರಾವ್, ಡಿ.ಕೆ. ಅವಲೋಕನ - ಸಂಶೋಧನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

ಭೂಸನೂರುಮಠ, ಸಂ.ಶಿ. (ಸಂ), ವಿಜಯಕಲ್ಯಾಣ, ವಿಜಯನಗರ ಸಂಸ್ಕೃತಿಯ ಸಮಗ್ರ ದರ್ಶನ, ಮ.ಹ.ಸ್ಮಾ.ಸಂ.ಕೇಂದ್ರ, ಶ್ರೀ ಜ.ಕೋ.ಮಠ, ಹಂಪಿ, ೧೯೮೮

ಬೆಟಗೇರಿ ಕೃಷ್ಣಶರ್ಮ, ಕರ್ನಾಟಕದ ಜನಜೀವನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧

ಬ್ಯಾತನಾಳ್, ಎಸ್.ಎನ್. ಹೋಳಿ ಸಂಪ್ರದಾಯ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂಪುಟ ೭೬, ಸಂಚಿಕೆ ೧, ಜೂನ್, ೧೯೯೧

ಬೋರೆ ಅನಂತ ಕುಲಕರ್ಣಿ ಪ್ರಹ್ಲಾದ, ವಿಜಯನಗರ ಸಾಮ್ರಾಜ್ಯ, ೧೯೩೨

ಮಂಜುನಾಥ ಬೇವಿನಕಟ್ಟಿ, ವಿಜಯನಗರ ಸಾಂಸ್ಕೃತಿಕ ಆಯಾಮಗಳು, ಶ್ರೀ ವಿದ್ಯಾವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ೧೯೯೭

ಮಹಾದೇವ, ಸಿ. ವಿಜಯನಗರ ದೇವಾಲಯಗಳ ಗಾರೆಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಮುತ್ತುಚಾರ್ಯ, ಟಿ.ವಿ. ಭಾರತೀಯ ಶಿಲ್ಪಶಾಸ್ತ್ರಸಾರ, ಭಾಗ ೧, ಶಿಲ್ಪಕಲಾ ಪರಿಷತ್ತು, ಬೆಂಗಳೂರು, ೧೯೮೭

ರಮಾನಂದ, ವಿಜಯನಗರ ಕಾಲದ ಶಾಸನಗಳ ಸಾಂಸ್ಕೃತಿಕ ಅಧ್ಯಯನ, (ಪಿಎಚ್.ಡಿ. ಪ್ರಬಂಧ, ಅಪ್ರಕಟಿತ) ಬೆಂಗಳೂರು ವಿಶ್ವವಿದ್ಯಾಲಯ, ೧೯೮೯

ರಂಗಸ್ವಾಮಿ, ಡಿ.ಟಿ. ಭಾರತದ ಹಬ್ಬಗಳು, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೩

ರಾಜಶೇಖರ ಸಿಂದಗಿ, ಕರ್ನಾಟಕದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ, ಸುಜಾತ ಪಬ್ಲಿಕೇಷನ್ಸ್, ಧಾರವಾಡ, ೧೯೮೮

ರಾಜಶೇಖರ್, ಎಸ್. ವಿಜಯನಗರದ ಘಟನಾವಳಿಸೂಚಿ, ಸುಜಾತ ಪಬ್ಲಿಕೇಷನ್, ಧಾರವಾಡ

ರಾಬರ್ಟ್ ಸಿವೆಲ್, ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ (ಅನು: ಸದಾನಂದ ಕನವಳ್ಳಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨

ರಾಮಚಂದ್ರರಾವ್, ಎಸ್.ಕೆ. ಭಾರತದ ದೇವಾಲಯ ನೆಲೆ - ಹಿನ್ನೆಲೆ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೭೯

ರಾಮಚಂದ್ರರಾವ್, ಎಸ್.ಕೆ. ತಿರುಪತಿ - ತಿಮ್ಮಪ್ಪ, ಐಬಿಹೆಚ್ ಪ್ರಕಾಶನ, ಬೆಂಗಳೂರು, ೧೯೮೦

ರಾಮಚಂದ್ರರಾವ್, ಎಸ್.ಕೆ. ಮೂರ್ತಿಶಿಲ್ಪ ನೆಲೆ - ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫

ಲಕ್ಷ್ಮೀನಾರಾಯಣರಾವ್, ಎನ್. ಮತ್ತು ಪಂಚಮುಖಿ ಆರ್.ಎಸ್. ಕರ್ನಾಟಕದ ಅರಸು ಮನೆತನಗಳು, ಧಾರವಾಡ, ೧೯೪೬

ವಸುಂಧರ ಫಿಲಿಯೋಜ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೮

ವಸುಂಧರ ಫಿಲಿಯೋಜ, ಅಳಿದುಳಿದ ಹಂಪೆ, ಮಾನಸೋಲ್ಲಾಸ ಪ್ರಕಾಶನ, ಬೆಂಗಳೂರು, ೧೯೮೩

ವಸುಂಧರ ಫಿಲಿಯೋಜ, ಹಂಪೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

ವಿಜಯನಗರ ಅಧ್ಯಯನ - ಐದು ಸಂಪುಟಗಳು, ಹಂಪಿ ಉತ್ಸವ ಸಂಚಿಕೆ, ಪ್ರಾಚ್ಯವಸ್ತು ಸಂಗ್ರಹಾಲಯ, ನಿರ್ದೇಶನಾಲಯ, ಮೈಸೂರು, ೧೯೯೭ - ೨೦೦೦

ವಿಜಯನಗರ ಸ್ಮಾರಕೋತ್ಸವ, ವಿಜಯನಗರ ಸ್ಮಾರಕೋತ್ಸವ ಮಂಡಲಿ, ಧಾರವಾಡ, ೧೯೩೮

ವೆಂಕಟರತ್ನಂ, ಎ.ವಿ. ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪

ವೆಂಕಟರಾಮಪ್ಪ, ಕೆ. ಶ್ರೀಕೃಷ್ಣದೇವರಾಯನ ಕಾಲದ ಕರ್ನಾಟಾಂಧ್ರ ಸಾಹಿತ್ಯ ಸಮೀಕ್ಷೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪

ವೆಂಕೋಬರಾವ್, ಬಿ. ಮೈಸೂರು ದೇಶದ ವಾಸ್ತುಶಿಲ್ಪ, ಬೆಂಗಳೂರು, ೧೯೫೯

ಶರ್ಮಾ, ಆರ್.ಎಸ್. ಪ್ರಾಚೀನ ಭಾರತ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೭

ಶಾಮರಾವ್, ಜೆ.ಎನ್. ವಿದೇಶಿಯರು ಕಂಡ ವಿಜಯನಗರ, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು, ೧೯೮೧

ಶಿವಣ್ಣ, ಕೆ.ಎಸ್. ಕರ್ನಾಟಕ ಚರಿತ್ರೆ ಮಾಲಿಕೆ, ಸಂ. ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

ಶಿವರಾಮ ಕಾರಂತರು ಕೆ. ಭಾರತೀಯ ಶಿಲ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫

ಶಿವರಾಮ ಕಾರಂತರು ಕೆ. ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಮೈಸೂರು ರಾಜ್ಯದ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೭೯

ಶಿವಶಂಕರ್, ಎಂ.ಎಲ್. ಮತ್ತು ಇತರರು (ಸಂ), ವಿಜಯನಗರದ ಅಧ್ಯಯನ, ಸಂ. ೨, ಹಂಪಿ ಉತ್ಸವ ೧೯೯೬ ರಲ್ಲಿ ಮಂಡಿಸಿದ

ಪ್ರಬಂಧಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, ೧೯೯೭

ಶಿವಾನಂದ ವಿರಕ್ತಮಠ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

ಶೀಲಾಕಾಂತ ಪತ್ತಾರ್, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಶ್ರೀಕಂಠಶಾಸ್ತ್ರೀ, ಎಸ್. ಹೊಯ್ಸಳ ವಾಸ್ತುಶಿಲ್ಪ, ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು, ೧೯೬೫

ಶ್ರೀಕಂಠಯ್ಯ, ಬಿ.ಎಂ. ಕನ್ನಡ ನಾಡಿನ ಚರಿತ್ರೆ, ಭಾಗ ೨, ಕರ್ನಾಟಕದ ಧರ್ಮಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೪೪

ಶ್ರೀಕಂಠಯ್ಯ, ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಮೈಸೂರು, ೧೯೮೩

ಶೇಷಶಾಸ್ತ್ರೀ, ಆರ್. ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨

ಷೇಕ್ ಅಲಿ, ಬಿ. (ಪ್ರ.ಸಂ), ಕರ್ನಾಟಕ ಚರಿತ್ರೆ (ಕ್ರಿ.ಶ. ೧೩೩೬ - ೧೭೬೦) ಸಂ, ೩, ಚರಿತ್ರೆ ಮಾಲೆ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

ಸಜ್ಜನ, ಎಸ್.ಎಸ್. ವಿಜಯನಗರ ಕಾಲದ ಜಾತ್ರೆ ಮತ್ತು ಉತ್ಸವಗಳು, ಕರ್ನಾಟಕ ವಿಶ್ವವಿದ್ಯಾಲಯ, (ಎಂ.ಫಿಲ್ ಅಪ್ರಕಟಿತ ಪ್ರಬಂಧ) ಧಾರವಾಡ, ೧೯೯೬

ಸದ್ಯೋಜಾತಸ್ವಾಮೀಜಿ, ವಿಜಯನಗರ ಕಾಲದ ಧಾರ್ಮಿಕ ಜೀವನ, ಧಾರವಾಡ, ೧೯೮೧

ಸಂಪತ್ಕುಮಾರಾಚಾರ್ಯ, ವಿ.ಎಸ್. ಇತರರು, ಕರ್ನಾಟಕ ಸಂಗೀತ ದೀಪಿಕೆ, ಡಿ.ವಿ.ಕೆ. ಮೂರ್ತಿ, ಮೈಸೂರು, ೨೦೦೦

ಸೀತಾರಾಮಯ್ಯ, ಎಂ.ವಿ. ಕೃಷ್ಣದೇವರಾಯನ ದಿನಚರಿ, (ಸಂ), ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೩

ಸುಂದರ, ಅ. (ಸಂ), ಕರ್ನಾಟಕ ಚರಿತ್ರೆ ಮಾಲೆ, ಸಂ. ೧, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ೧೯೯೭

ಸುರೇಶ್, ಕೆ.ಎಂ. ಇತರರು, ಬಳ್ಳಾರಿ ಜಿಲ್ಲೆಯ ದೇವಾಲಯ ಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಸೂರ್ಯನಾಥ ಕಾಮತ್, ವಿಜಯನಗರ ಕಥೆಗಳು, ಹಂಸಧ್ವನಿ ಪ್ರಕಾಶನ, ಬೆಂಗಳೂರು, ೧೯೯೨

ಸೂರ್ಯನಾರಾಯಣರಾವ್, ಬಿ. ಮರೆಯಲಾಗದ ಮಹಾಸಾಮ್ರಾಜ್ಯ, (ಅನು) ಬಾಲಸುಬ್ರಮಣ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಸೋಮಶೇಖರ್, ಎಸ್.ವೈ. ಹಂಪೆಯ ಬಜಾರುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

ಸೋಮಶೇಖರ್, ಎಸ್.ವೈ. ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, (ಅಪ್ರಕಟಿತ: ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಹಿರೇಮಠ, ಆರ್.ಸಿ. (ಸಂ), ಕನಕದಾಸರ ಮೋಹನ ತರಂಗಿಣಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩

ಜ್ಞಾನಾನಂದ, ಜಿ. ವಾಸ್ತು ಪುರುಷ ನೆಲೆ - ಹಿನ್ನೆಲೆ, ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ, ಕೆಜಿಎಫ್, ೧೯೯೨

ಇಂಗ್ಲಿಶ್ ಗ್ರಂಥಗಳು

Acharya, P.K. **Encyclopeadia of Hindu Architecture,** J.K. Publishing House, Bhopal, 1978

Acharya, P.K. **Architecture of Manasara,** Vol. iv, Oriental Books Reprint Corporation, New Delhi, 1934

Adam Hardy, **Indian Temple Architecture,** The Karnataka Dravida tradition 7th to 13th centuries, Abhinava Publishing, New Delhi, 1995

Agarwala, P.K. **Temple Architecture in Gupta Period,** Varanasi, 1968

Altekar, A.S. **The position of women in Hindu civilization,** Motilal Banarsidass Publishers, Delhi, 1991

Anita Vegeese, **Religious Traditions at Vijayanagara,** American InStitute of Indian Studies, New Delhi, 1995

Anne, L. **Dellapiccola and others, The Ramachandra temple at Vijayanagar,** Manohar, American Institute of Indian Studies, New Delhi, 1992

Ayyangar, S.K. **The yet Remembered Ruler of a long forgotten Empire : Krishnadevaraya of Vijayanagara,** Madras, 1917

Ayyangar, S.K. **Sources of Vijayanagara History,** Gian publishing house, Delhi, 1981

Benerjea, J.N. **Development of Hindu Iconography,** University of Calcutta, Calcutta, 1941

Bhajapai, K.D. **Evolution of Stupa,** J O E S I, Vol. xii

Bhargavi Shivaiah, **Krishnadevaraya his life and achivements** (Ph.D. Thesis), Karnataka University, Dharwad, 1972

Brown Percy, **Indian Architecture,** (Buddhist of Hindu Periods) D.B. Tarapore Vale sons & Co private Ltd., Bombay, 1943

Burton Stain, **Vijayanagara,** The new cambridge History of India, Cambridge University Press, 1997

Burton Stein, (Ed), **South Indian temples,** New Delhi, 1978

Devakanjari, D. **Hampi,** New Delhi, A.S.I. 1983

Devaraj, D.V. and others (Ed), **In Vijayanagara Progress of research,** 1983-88, Directorate of Archaeology and museums, Mysore

Dhaki, M.A. **The Indian Temple Forms in Karnataka Inscriptions and Architecture,** Abhinava Publications, New Delhi, 1977

Divakar and others (Ed), **Karnataka through the Ages,** The Govt. of Mysore, Mysore, 1968

Ekambaram, C.N. **Krishnadevaraya : His life and times,** Madras, 1911

Elliot, History of India, Vol, IIV

Gerge Michell, **The Vijayanagar court Style,** New Delhi, 1992

Gopal, B.R. (Ed), **Vijayanagara Inscriptions,** 4 Vols, Directorate of Archaeology and Museums, Mysore, 1985

Gravely and Ramachandran T.N, **Three main Styles temple Art Architecture Recognised by Silpasastra,** Madras, 1977

Gururaja Bhatta, P. **Studies in Tuluva History and Culture,** Kalyanapur, 1975

Haris, **Dictionary of Architecture and construction,** Mysore University, Mysore

Hari Rao, V.N. **The Srirangam Temple : Art and Architecture,** T.S.V.H. Series - 8, Madras, 1967

Heras, H. **South Indian under the Vijayanagara Empire,** Cosmo Publications, New Delhi, 1980

Ismail, K. **Karnataka Temples,** Sundeep Prakashana, Delhi, 1984

Jayanti, V.G. **Hampi : A Cultural Study** (Ph.D. Thesis : Unpublished), Dharwad, Karnataka University, 1993

Kamaleshwera Rao, **Selected Vijayanagara temples of Rayalaseema,** Hyderabad, 1976

Kamble, M.T. **Vijayanagara temples at Hampi** (Ph.D. Thesis : Unpublised), Karnataka University, Dharwar, 1993

Karmarkar, D.P. (Ed), **Vijayanagara Six Centenary Commemoration Volume,** Dharwad, 1936

Konduri Sarojinidevi, **Religious in Vijayanagara Empire,** New Delhi, 1990

Kotershwara Rao, T. **Amuktamalyada of Krishnadevaraya** (Ph.D. Thises), Osmania University, Hyderbad, 1964-66

Kotraiah, C.T.M. **Inscriptions of the Vittala Temple at Hampi,** Indian History and Epigraphy, Dr.G.S.Goy Felicitation Volume, 1990

Krishnaswamy Ayyangar, S. **Sources of Vijayanagara History,** Gion Publishing House, Delhi, 1986

Krishnaswamy Ayyangar, S. (Edi), **Dravidian Architecture,** Asian Educational Servies, New Delhi, 1987

Langharst, A.H. **Hampi ruins,** AES, New Delhi, 1998

Mahalingam, T.V. **Administrative and Social life under Vijayanagar,** Part ii, Madras, 1969 - 76

Mahalingam, T.V. **South Indian temple Complex,** Karnataka Research Institute, Dharwar, 1970

Nagaraja Rao, M.S. (Ed), **The Vijayanagara : Progress of research,** Directorate of Archaeology and museums, Mysore, 1979 - 83

Nilakantasastri, K.A. and Venkataramanayya N. (Ed), **Further Sources of Vijayanagara History,** Volumes 3, Madras, 1946

Patil, C.S. **Temples of Bellary and Raichur District,** Directorate of Archaeology and Museums, Mysore, 1994

Patil, C.S. and Vinoda Patil, **Inscriptions of Bellary District,** Directorate of Archaeology and Museums, Mysore, 1997

Radhakrishna Sharma M. **Temples of Telingana,** Munshiram Manoharlal Publications Pvt. Ltd., 1972

Rajashekara, S. **The Inscriptions of Vijayanagara,** Sujatha Publications, Dharawad, 1984

Rajashckara, S. **Master Pieces of Vijayanagara Art, Dharwar,** 1983. Taraporevala sons & Co., Bombay

Rajasekara, S. **Map approach to Vijayanagara History,** Dharwar, 1983

Rajasekara, S. **Karnataka Architecture, Sujata Publications,** Dharwar, 1985

Rao, S.R. **The Note on the Cronology of early Chalukyan Temples,** Lalithakala, No. 15, New Delhi, 1972

Ramarao, M. **Krishandevaraya,** National Book Trust, New Delhi, 1971.

Ramasharma, M.H. **The History of Vijayanagara Empire,** Vol. I, II, Popular Prakashan, Bombay, 1978.

Ramesan, N. **Tirumala temple,** TTD, 1981

Ramachandraiah, O. **Studies on Krishnadevaraya of Vijayanagara,** A R S I E, 1912, Varangal, 1953

Ramachandra Rao, S.K. **Art and Architecture of Indian Temples,** Vol. III, Bangalore, 1992

Reddeppa, K. **Vijayanagara Temples,** Bharatiya Kala Prakashana, New Delhi, 2001.

Robert sewell, **A Forgatten Empire,** Asian Educational Services, New Delhi, Madras, 1991

Salatore, B.A. **Social and Political life in Vijayanagara Empire,** Part-II, 1934

Salatore, B.A. **Vijayanagara Art,** Sundeep Prakashan, Delhi, 1982

Salatore, R.N. **Some aspects of art during the reign of Krishnaraya the great,** VSC, Vol, Dharwad, 1936

Saraswathi Nanaiah, **N. Position of women during Vijayanagar,** Saraswathi Publications, Mysore, 1992

Sarkar, D.C. **Select Inscriptions,** Calcutta, 1942

Seetapati, P. **Sri Ahobila Narasimhaswami Temple,** Hyderabad, Govt. of A.P. Archaeological Survey - 56, 1982.

Shivaramamurthy, C. **Vijayanagara Paintings,** Publication Division, Ministry of Information and Broadcasting Govt. of India, 1985

Shivarudra Swamy, N. **Vijayanagara temples in Karnataka,** Directorate of Archaeology of Museums, Mysore, 1996.

Smith, D.H. **Festival in Pancharatra Literature,** Manohar Publications, New Delhi, 1982

Soundara Rajan, **Indian Temples Styles,** Munsiram Manoharlal Publications, New Delhi, 1971

Sreenivasa, K.R. **Temples of South India,** NBT, Madras, 1972

Sreerama Murthy, Y. **Studies in the History of the Telugu country during the Vijayanagara period,** (1336-1650) (Ph.D. Thesis), Karnataka University, Dharwad, 1973.

Srinivasan, P.R. **The Indian Temple Art and Architecture,** The Director, Prasaranga, University of Mysore, 1982.

Stellakramriseh, **The Hindu Temple,** Vol-II, University of Calcutta, Culcutta, 1946

Sundara, A. **The Early Kadamba temple Architecture,** Q J M S, LXXV-3

Suresh, K.M. **Sculptural Art of Hampi**, Directorate of Archaeology and Museum, Mysore, 1998

Suryakumari, A. **The Temples in Andhradesh**, Gian Publishing house, Delhi, 1988

Venkataramanayya, N. **Studies in the History of the third dynasty of Vijayanagara**, Madras, 1935

Venkataramanayya, N. **The date of the construction of the temples of Hazara Ramaswami and Vittala at Vijayanagar**, Journal of Orient Research - 15, 1945.

Venkataramanayya, N. **An essay on the South Indian Temples**, Asian Educational Services, New Delhi, 1985

Vijayaraghavacharya, **Vijayanagara Inscriptions of Krishnadevarayas time**, Vol. iii, Sri Sat Guru Publications, India, 1984

ತೆಲುಗು ಗ್ರಂಥಗಳು

ಅಲ್ಲಸಾನಿಪೆದ್ದಣ್ಣ, ಮನುಚರಿತಮು, ರಾಜಮಹೇಂದ್ರಿ, ೧೯೪೯

ರಾಮರಾಜು, ಬಿ. (ಸಂ), ಜಾಂಬವತೀ ಕಲ್ಯಾಣಂ, (ಕೃಷ್ಣದೇವರಾಯ), ಹೈದ್ರಾಬಾದ್, ೧೯೬೯

ರಾಮಚಂದ್ರರಾವ್, ಸಿ.ವಿ. ಮಾರೀಚ ಪರಿಣಯಮು, (ಮೋಹನಾಂಗಿ), ನೆಲ್ಲೂರು, ೧೯೭೩

ರಾಮಚಂದ್ರರಾವ್, ಸಿ.ವಿ. ರಾಯವಾಚಕಂ, ಆಂಧ್ರ ಸಾಹಿತ್ಯ ಆಕಾಡೆಮಿ, ಹೈದ್ರಾಬಾದ್, ೧೯೮೨

ರಾಮಚಂದ್ರರಾವ್, ವಿ. (ಸಂ), ಕೃಷ್ಣರಾಯ ವಿಜಯಮು, ಕುಮಾರ ಧೂರ್ಜಟಿ, (ಸಂ), ಆಂಧ್ರಪ್ರದೇಶ ಸಾಹಿತ್ಯ ಆಕಾಡೆಮಿ, ಹೈದ್ರಾಬಾದ್, ೧೯೮೧

ವೆಂಕಟರಮಣಯ್ಯ, ಎನ್. ಕೃಷ್ಣದೇವರಾಯಲು (ತೆಲುಗು) ಹೈದ್ರಾಬಾದ್, ೧೯೭೨

ಕನ್ನಡ ಲೇಖನಗಳು

ಗೋಪಾಲ, ಬಿ.ಆರ್. ಹಂಪಿಯಲ್ಲಿ ಶ್ರೀವೈಷ್ಣವ ಆಳ್ವಾರರುಗಳು, ಇತಿಹಾಸ ದರ್ಶನ - ೧೦, ಪು. ೧೨೯ - ೩೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೫

ಚನ್ನಪ್ಪ, ಎ. ಪ್ರೌಢದೇವರಾಯನ ಕಾವ್ಯದಲ್ಲಿ ಮತಸಂಘರ್ಷ, ವೀರಶೈವ, ಪು. ೪೭ - ೫೦, ಹೊಸಪೇಟೆ ತಾಲೂಕು ವೀರಶೈವ ನೌಕರರ ಸಂಘ, ೨೦೦೦

ಚಿದಾನಂದಮೂರ್ತಿ, ಎಂ. ಬುಕ್ಕರಾಯನ ಶ್ರವಣಬೆಳಗೊಳದ ಮೇಲೆ ಹೊಸಬೆಳಕು, ಹೊಸತು ಹೊಸತು, ಪು. ೨೩೦ - ೩೮, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

ದೀಕ್ಷಿತ್, ಜಿ.ಎಸ್. ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ನಾಗಾಭಿನಂದನ, ಪು. ೯೪ - ೯೮, ಎಂ.ಜಿ. ನಾಗರಾಜ್ ಅಭಿನಂದನ ಸಮಿತಿ, ಬೆಂಗಳೂರು, ೧೯೯೪

ದೇವರಾಜ್, ಡಿ.ವಿ, ವಿಜಯನಗರದ ಶಾಸನಗಳು, ನಾಗಾಭಿನಂದನ, ಪು. ೯೯ - ೧೦೪, ಎಂ.ಜಿ. ನಾಗರಾಜ್ ಅಭಿನಂದನ ಸಮಿತಿ, ಬೆಂಗಳೂರು, ೧೯೯೯

ನರಸಿಂಹಚಾರ್, ಜಿ.ಎಲ್. ವಿಜಯನಗರ ಕಾಲದ ಸಾಹಿತ್ಯ, ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ನಿರುಪಮಾ, ಶ್ರೀಕೃಷ್ಣದೇವರಾಯನ ದಿನಚರಿ, ಆಮುಕ್ತಮಾಲ್ಯದ, ಸೂರ್ಯಕೀರ್ತಿ, ಪು. ೮೮ - ೯೫, ಸೂ.ಕಾ. ಅ ಸಮಿತಿ, ಬೆಂಗಳೂರು, ೨೦೦೦

ನಿರುಪಮಾ, ವಿಜಯನಗರದ ಇತಿಹಾಸಕ್ಕೆ ತೆಲುಗು ಸಾಹಿತ್ಯದ ಆಕರಗಳು, ಇತಿಹಾಸ ದರ್ಶನ, ಸಂ, ೩, ಸಂಚಿಕೆ ೧, ಪು. ೨೧೪ - ೧೮, ಕ ಇ ಅ, ಬೆಂಗಳೂರು, ೧೯೮೮

ಪರಮಶಿವಮೂರ್ತಿ, ಡಿ.ವಿ. ಅತ್ತಿವಟ್ಟಿಯ ಅಪ್ರಕಟಿತ ಶಾಸನ, ಹಂಪೆಯ ಬಾಲಕೃಷ್ಣ, ಸೂರ್ಯಕೀರ್ತಿ, ಪು. ೩೭ - ೪೧, ಸೂ ಅ ಸಮಿತಿ, ಬೆಂಗಳೂರು, ೨೦೦೦

ಬಸವರಾಜ ಮಲಶೆಟ್ಟಿ, ವಿಜಯನಗರ ಇತಿಹಾಸದ ಬಗ್ಗೆ ಕೆಲವು ಭ್ರಮೆಗಳು, ತಿರುಳ್ಗನ್ನಡ, ಕೊಪ್ಪಳ, ೧೯೯೩

ರಾಜಗೋಪಾಲ್, ಎಸ್. ಹಂಪೆಯ ಕೃಷ್ಣದೇವರಾಯನ ಅಪೂರ್ವ ವಿಗ್ರಹ, ಇತಿಹಾಸ ದರ್ಶನ - ೨, ಪು. ೨೩, ಕ ಇ ಅ, ಬೆಂಗಳೂರು, ೧೯೮೭

ರಾಜಶೇಖರ್, ಎಸ್. ಶ್ರೀಕೃಷ್ಣದೇವರಾಯನ ದಿನಚರಿ ಮತ್ತು ರಾಯವಾಚಕಮು, ಇತಿಹಾಸ ದರ್ಶನ - ೧೧, ಪು. ೨೬೩ - ೨೬೬, ಕ ಇ ಅ, ಬೆಂಗಳೂರು, ೧೯೯೬

ರಾಮಾಂಜನೇಯಲು, ಕೆ. ರಾಮವಾಚಕಂ ಮತ್ತು ಶ್ರೀಕೃಷ್ಣದೇವರಾಯನ ದಿನಚರಿ ಒಂದು ಪರಿಶೀಲನೆ, ಕನ್ನಡ ಸಾಹಿತ್ಯಪತ್ರಿಕೆ, ಸಂ, ೭೦, ಸಂ, ೨, ಡಿಸೆಂಬರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ರಾಳ್ಳಪಲ್ಲಿ ಅನಂತಕೃಷ್ಣಶರ್ಮ, ಶ್ರೀಕೃಷ್ಣದೇವರಾಯನ ಕಾಲದ ತೆಲುಗು ಸಾಹಿತ್ಯ, ಜಯಕರ್ನಾಟಕ - ೧೫

ಲಕ್ಷ್ಮಣ್ ತೆಲಗಾವಿ, ಕೃಷ್ಣದೇವರಾಯನ ಇನ್ನೊಂದು ಹೊಸ ಶಾಸನ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೭೫ - ೨, ಬೆಂಗಳೂರು, ೧೯೯೭

ವಿರೂಪಾಕ್ಷಿ ಪೂಜಾರಹಳ್ಳಿ, ವಿಜಯನಗರ ಕಾಲದ ವಾಸ್ತುಶಿಲ್ಪದಲ್ಲಿ ಬೇಟೆ ಚಿತ್ರಣ, ಇತಿಹಾಸ ದರ್ಶನ - ೧೪, ಪು. ೧೬೬ -೧೬೩, ಕ ಇ ಅ, ಬೆಂಗಳೂರು, ೧೯೯೯

ಪತ್ರಿಕೆಗಳು

ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು

ಕರ್ನಾಟಕ ಭಾರತಿ, ಧಾರವಾಡ

ಪ್ರಜಾವಾಣಿ, ಬೆಂಗಳೂರು

ಮಾನವಿಕ ಕರ್ನಾಟಕ, ಮೈಸೂರು

ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ

ಸಾಧನೆ, ಬೆಂಗಳೂರು

ಇತಿಹಾಸ ದರ್ಶನ, ಬೆಂಗಳೂರು.

Journal of Indian History

Mysore State Gazetter, Vol. 1-5, Bangalore, 1927-30

Mysore Archaeological Reports, 1928-46

Reports and Journals

Annual Report of Indian Epigraphy (ARIE)
Annual Report, Archaeological Survey of India (ARASI)
Annual Report of South Indian Epigraphy (ARSIE)
Epigrapia Indica (EI)
Epigrapia Cornatika (EC)
Indian Antiquary, Bombay
Kannada University Inscriptions Volume 1-5, Vidyaranya
Karnataka Inscriptions (KI), Dharwad
Madras District Gazette, Bellary, 1916 (W. Francies), Madras
Progress Research of Kannada Research Institute (PRKRI), Dharwad
Quarterly journal of Mythic Society, Bangalore
South Indian Inscriptions (SII)
Vijayanagara Progress of Research (VPR), Mysore
Tirupati Tirumala Devastanam Inscriptions Volumes (TTDI)
Tirupati Tirumala Epigraphical Report (TTER)
Imperial Gazetteer of India
Mysore Gazetteer- Volumes 1-5, C.Hayavadan Rao, Bangalore, 1930
J.O, E.S.I, Vol-13
Encyclopeadia of Britanica

Reports

Iswara Dutt, **The Years of Birth and death of Tirumaladeva,** Karnataka Historical Review, V. 1938

Hanumantha Rao, S. **The Influence of the religious school of Srimadhava on the History of Vijayanagara,** Q.J.M.S. Vol-70, p. 284, Bangalore, 1929-30

Heras, H. **Seven days at Vijayanagara,** Journals of Indian History, ix - 1930

Krishna Sastri, H. **The second Vijayangara dynasty : the third Vijayanagara dynasty,** Annual Report of the A.S.I., New Delhi, 1908-09 and 1911-12

Mahalingam, T.V. **Tirumaladeva Maharaja,** Journal of Indian History, xvii, 1938

Oruganti Ramachandraiah, **Krishnadevaraya of Vijayanagara,** Q.J.M.S. LXIX, Jan-June, No. 1-2, Bangalore, 1978

Rangaswamy Saraswati, A. **Political maxims of the Emperor poet Krishnadevaraya,** Journal of Indian History, 4-3, 1926

Sivaramamurthy, C. **Balakrishna from Hampi in the Madras Museum,** Journal of oriental research, x, Madras, 1936

Srikantasastri, S. **The Vittala temple at Hampi,** Q.J.M.S. 1940-41, Bangalore

ನಿಘಂಟು

ಕರ್ನಾಟಕ (ಕನ್ನಡ ವಿಷಯ ವಿಶ್ವಕೋಶ), ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯.

ಇಂಗ್ಲೀಷ್ - ಕನ್ನಡ ನಿಘಂಟು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೯

ಕನ್ನಡ ಕನ್ನಡ - ಕಸ್ತೂರಿಕೋಶ, ಧಾರವಾಡ

ಸಂಕ್ಷಿಪ್ತ ಕನ್ನಡ ನಿಘಂಟು, ಕ.ಸಾ.ಪ. ಬೆಂಗಳೂರು, ೨೦೦೧

ಕನ್ನಡ ವಿಷಯ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ, ಮೈಸೂರು, ೧೯೭೫

ಜ್ಞಾನಗಂಗೋತ್ರಿ, ಕಿರಿಯರ ವಿಶ್ವಕೋಶ, ಸಂ. ೫, ಕಲೆ ಸಾಹಿತ್ಯ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೩